ಕರ್ನಾಟಕ ಸುವರ್ಣ ಮಹೋತ್ಸವ ಗ್ರಂಥಮಾಲೆ - ಪುಷ್ಪ : ೩೫

ನಾ ಕಂಡ ಕರ್ನಾಟಕ

ಲೇಖಕರು

ಡಾ. ಕೃಷ್ಣಾನಂದ ಕಾಮತ

ಕರ್ನಾಟಕ ಇತಿಹಾಸ ಸಂಶೋಧನ ಮಂಡಲ

ಧಾರವಾಡ - ೫೮೦ ೦೦೧

೨೦೦೭-೨೦೦೮

ಕರ್ನಾಟಕ ಸುವರ್ಣ ಮಹೋತ್ಸವ ಗ್ರಂಥಮಾಲೆ – ಪುಷ್ಪ : ೩೫

ನಾ ಕಂಡ ಕರ್ನಾಟಕ

ಲೇಖಕರು

ಡಾ. ಕೃಷ್ಣಾನಂದ ಕಾಮತ

ಕರ್ನಾಟಕ ಇತಿಹಾಸ ಸಂಶೋಧನ ಮಂಡಲ
ಧಾರವಾಡ – ೫೮೦ ೦೦೧

೨೦೦೭–೨೦೦೮

Nā Kaṇḍa Karnāṭaka by Dr. Krishnanand Kamat, Honnavar.

Published by	:	Honourary Secretary Karnataka Historical Research Society, Dharwad-580001
Size	:	1/8 Demy
Paper used	:	60 CGSM Maplitho
Pages	:	296
Price	:	Rs.150/-
Year	:	2008
Copies	:	1000

■■

ನಾ ಕಂಡ ಕರ್ನಾಟಕ

ಲೇಖಕರು	:	ಡಾ. ಕೃಷ್ಣಾನಂದ ಕಾಮತ ಹವ್ಯಾಸಿ ಛಾಯಾಚಿತ್ರಕಾರರು, ಹೊನ್ನಾವರ
ಪ್ರಕಾಶಕರು	:	ಗೌರವ ಕಾರ್ಯದರ್ಶಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಧಾರವಾಡ - ೫೮೦ ೦೦೧ ೦೮೩೬-೨೪೪೧೧೩೧
ಹಕ್ಕುಗಳು	:	ಪ್ರಕಾಶಕರು
ವರ್ಷ	:	೨೦೦೮
ಪುಟಗಳು	:	೨೯೬
ಪ್ರತಿಗಳು	:	೧೦೦೦
ಬೆಲೆ	:	ರೂ. ೧೫೦/-
ಅಕ್ಷರ ಸಂಯೋಜಕರು	:	ವಚನ ಗ್ರಾಫಿಕ್ಸ, ಧಾರವಾಡ
ಮುದ್ರಕರು	:	ಸರಸ್ವತೀ ಆಫ್‌ಸೆಟ್ ಮುದ್ರಣಾಲಯ ಶಿವಾಜಿ ಬೀದಿ, ಧಾರವಾಡ-೧

ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ–೧

ಕರ್ನಾಟಕ ಸುವರ್ಣ ಮಹೋತ್ಸವ ಗ್ರಂಥಮಾಲೆ

ಸಂಪಾದಕ ಮಂಡಲಿ

ಗೌರವಾಧ್ಯಕ್ಷರು

ಸನ್ಮಾನ್ಯ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು
ಅಧ್ಯಕ್ಷರು, ಲೋಕಶಿಕ್ಷಣ ಟ್ರಸ್ಟ್, ಬೆಂಗಳೂರು

ಮತ್ತು

ಡಾ. ವಾ.ರಾ. ಪಂಚಮುಖಿ

ನಿವೃತ್ತ ಆಯ್.ಸಿ.ಎಸ್.ಎಸ್.ಅರ್. ಚೇರಮನ್, ನವದೆಹಲಿ ಮತ್ತು
ಕುಲಾಧಿಪತಿ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ತಿರುಪತಿ.

ಪ್ರಧಾನ ಕಾರ್ಯ ನಿರ್ವಾಹ ಸಂಪಾದಕ

ಶೋಧವಿದ್ಯಾಕೋವಿದ

ಶ್ರೀ ಆ.ರಾ. ಪಂಚಮುಖಿ
ಕಾರ್ಯಾಧ್ಯಕ್ಷ ಕ.ಇ.ಸಂ.ಮಂಡಲ, ಧಾರವಾಡ

❖❖❖

ಸಂಪಾದಕೀಯ ಸಲಹಾ ಮಂಡಲಿಯ ಗೌರವಾನ್ವಿತ ಸದಸ್ಯರು

ಡಾ. ಕೆಳದಿ ಗುಂಡಾ ಜೋಯಿಸ್
ಕೆಳದಿ ವಸ್ತು ಸಂಗ್ರಹಾಲಯ ಮತ್ತು ಸಂಶೋಧನ ಕೇಂದ್ರದ ಸಂಸ್ಥಾಪಕರು
ತಾಡಪತ್ರ ಗ್ರಂಥಾರಾಧಕ, ಕೆಂದ್ರ ಸರಕಾರದ ಹಿರಿಯ ಸಂಶೋಧಕರು
ಕೆಳದಿ

ಡಾ. ಕೆ.ವ್ಹಿ. ರಮೇಶ
ಮೈಸೂರು ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯ ನಿವೃತ್ತ ನಿರ್ದೇಶಕರು,
ಮೈಸೂರು

ಡಾ. ಅ. ಸುಂದರ
ಗೌರವ ಪ್ರಾಧ್ಯಾಪಕರು, ಮೈಸೂರು ವಿ.ವಿ.
ಮೈಸೂರು.

ಡಾ. ಎಚ್.ಎಸ್. ಗೋಪಾಲರಾವ್
ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಇತಿಹಾಸ ಅಕಾದೆಮಿ,
ಬೆಂಗಳೂರು

ಡಾ.ಎ.ಕೆ. ಶಾಸ್ತ್ರಿ
ನಿವೃತ್ತ ಅಧ್ಯಕ್ಷರು, ಇತಿಹಾಸ ವಿಭಾಗ,
ಶಿರಸಿಯ ಎಂ.ಎಂ. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಶಿರಸಿ

ಡಾ. ದೇವರಕೊಂಡಾರೆಡ್ಡಿ
ಪ್ರಾಧ್ಯಾಪಕರು, ಶಾಸನಶಾಸ್ತ್ರ ವಿಭಾಗ, ಕನ್ನಡ ವಿ.ವಿ.
ಹಂಪಿ, ವಿದ್ಯಾರಣ್ಯ

ಡಾ. ಶಾಲಿನಿ ರಘುನಾಥ
ಅಧ್ಯಕ್ಷರು, ಜಾನಪದ ಅಧ್ಯಯನ ವಿಭಾಗ,
ಕರ್ನಾಟಕ.ವಿ.ವಿ.,ಧಾರವಾಡ

ಡಾ.ವೀರಣ್ಣ ರಾಜೂರ
ಅಧ್ಯಕ್ಷರು(ನಿ.), ಕನ್ನಡ ಅಧ್ಯಯನ ಪೀಠ ಮತ್ತು
ಸಂಯೋಜಕರು ಶ್ರೀ ಬಸವೇಶ್ವರ ಪೀಠ
ಕರ್ನಾಟಕ ವಿ.ವಿ., ಧಾರವಾಡ

ಡಾ. ಜೀವಿ.ಕುಲಕರ್ಣಿ
ಸಾಹಿತಿ
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಎಂ.ವಿ.ಕಾಲೇಜು, ಅಂಧೇರಿ, ಮುಂಬಯಿ

ಡಾ. ಪಿ.ಆರ್. ಪಂಚಮುಖಿ
ಸಿ.ಎಂ.ಡಿ.ಆರ್.ದ ನಿವೃತ್ತ ನಿರ್ದೇಶಕರು,
ಧಾರವಾಡ

ಡಾ. ಅರಳುಮಲ್ಲಿಗೆ ಪಾರ್ಥಸಾರಥಿ
ನಿರ್ದೇಶಕರು, ಹರಿದಾಸ ಅಕಾದೆಮಿ, ಬೆಂಗಳೂರು ಮತ್ತು
ಅಧ್ಯಕ್ಷರು, ವಿಷ್ಣುಸಹಸ್ರನಾಮ ಟ್ರಸ್ಟ್, ಬೆಂಗಳೂರು

ಶ್ರೀ ಲಕ್ಷ್ಮೀನಾರಾಯಣ ಎಚ್.ಬಿ.
ನಿರ್ದೇಶಕರು,ರಾಷ್ಟ್ರೀಯ ವೇದವಿಜ್ಞಾನ ಸಂಸ್ಥೆ,
ಬೆಂಗಳೂರು

ಕರ್ನಾಟಕ ಇತಿಹಾಸ ಸಂಶೋಧನ ಮಂಡಳ

ಧಾರವಾಡ

ಮಂಡಲದ ಮುನ್ನುಡಿ

ಧಾರವಾಡದಲ್ಲಿರುವ ಕರ್ನಾಟಕ ಇತಿಹಾಸ ಸಂಶೋಧನ ಮಂಡಲವು ದಕ್ಷಿಣ ಭಾರತದ ಪ್ರಾಚೀನ ಸಂಶೋಧನ ಕೇಂದ್ರಗಳಲ್ಲಿ ಪ್ರಸಿದ್ಧಿ ಪಡೆದ ಒಂದು ಸಂಸ್ಥೆಯಾಗಿದೆ. ಈ ಸಂಸ್ಥೆಯ ಕಿರುಪರಿಚಯವನ್ನು ಮಾಡಿಕೊಳ್ಳಲು ಬಯಸುವವರಿಗೆ ಇದರ ಸ್ಥಾಪನೆಯ ಪೂರ್ವದಲ್ಲಿ ಅಂದರೆ ೧೯೧೪ ರ ಮೊದಲು ಮತ್ತು ಅನಂತರದ ಕೆಲವು ಘಟನೆಗಳನ್ನು ಅರಿತುಕೊಳ್ಳಬೇಕಾಗುತ್ತದೆ. ಈ ಉದ್ದೇಶದಿಂದ ಮತ್ತು ಈ ಘಟನೆಗಳು ಸ್ವಾರಸ್ಯ ಪೂರ್ಣವಾಗಿರುವುದರಿಂದ ಅವುಗಳನ್ನು ಇಲ್ಲಿ ಉಲ್ಲೇಖಿಸಲು ಬಯಸುತ್ತೇನೆ. ಮಂಡಲ ದಿಂದ ಪ್ರಕಟವಾದ ಪಂಚವಾರ್ಷಿಕ ವರದಿ (೧೯೨೦), ವಾರ್ಷಿಕ ವರದಿಗಳು, ಸ್ಮರಣ ಸಂಪುಟಗಳು ಮುಂತಾದವುಗಳು ಇಲ್ಲಿಯ ವಿಷಯಸಂಗ್ರಹಕ್ಕೆ ಆಧಾರವಾಗಿವೆ.

೧೯೧೪ ರ ಮೊದಲು ಬ್ರಿಟೀಷರ ಆಳ್ವಿಕೆಯಲ್ಲಿದ್ದ ಹಿಂದುಸ್ತಾನದ ವಿವಿಧ ಪ್ರಾಂತಗಳ ಜನರು ತಮ್ಮ ತಮ್ಮ ರಾಜರ, ರಾಜಪುರುಷರ, ತಮ್ಮ ಕವಿಗಳ, ಭಾಷೆಯ ಹೆಸರಿನಲ್ಲಿ ಜಯಘೋಷವನ್ನು ಮಾಡುತ್ತ ತಮ್ಮ ತಮ್ಮ ಪ್ರಾಂತದ ಗತವೈಭವವನ್ನು ವ್ಯವಸ್ಥಿತವಾಗಿ ಪ್ರಚಾರ ಮಾಡತೊಡಗಿದ್ದರು. ಇಷ್ಟೇ ಅಲ್ಲ, ಪುಣೆಯ ಶ್ರೀಯುತ ಡಾಕ್ಟರ್ ರಾಮಕೃಷ್ಣ ಗೋಪಾಳ ಭಾಂಡಾರಕರ ಎಂಬ ಪ್ರಸಿದ್ಧ ಇತಿಹಾಸತಜ್ಞರು 'ದಕ್ಷಿಣಾಪಥದ ಪ್ರಾಚೀನ ಇತಿಹಾಸ' ಎಂಬ ಗ್ರಂಥವೊಂದನ್ನು ಬರೆದು ಅದರಲ್ಲಿ ಚಾಲುಕ್ಯರು, ರಾಷ್ಟ್ರಕೂಟರು ಇವರೇ ಮೊದಲಾದ ಅರಸುಮನೆತನದವರು ಮರಾಠಿಗರೆಂದು ವಾದಿಸುವುದಕ್ಕೆ ಪ್ರಯತ್ನಿಸಿದರು. ಕರ್ನಾಟಕಸ್ಥರಿಗೆ ಇತಿಹಾಸವೇ ಇಲ್ಲ ಎಂಬ ಅಪಪ್ರಚಾರವೂ ನಡೆಯಿತು. ಕನ್ನಡಿಗರ ಔದಾರ್ಯ, ಸಹನಶೀಲತೆ, ಕ್ಷಮೆ-ಶಾಂತಿ ಮೊದಲಾದ ಗುಣಗಳನ್ನು ಅವರ ದುರ್ಬಲತೆಯೆಂದು ಭಾವಿಸಿ ಅವರನ್ನು ಹತ್ತಿಕ್ಕುವ, ಅವರ ತೇಜೋಭಂಗ ಮಾಡುವ ಇಂಥ ಅನೇಕ ರೀತಿಯ ಸಂಚುಗಳು ನಡೆಯತೊಡಗಿದವು. ಕನ್ನಡ ಭಾಷೆಯ ಸಾಮಾನ್ಯ ಜನಸಮುದಾಯವು ತಮ್ಮ ಭವ್ಯ ಇತಿಹಾಸ ಹಾಗೂ ಗತವೈಭವದ ಬಗ್ಗೆ ಇನ್ನೂ ಅಜ್ಞಾನಾವಸ್ಥೆಯಲ್ಲಿಯೇ ಇದ್ದುದರಿಂದ ಇದಾವುದನ್ನೂ ಪ್ರತಿಭಟಿಸುವ ಸಂಘಟಿತವಾದ ಕಾರ್ಯವು ನಡೆಯಲಿಲ್ಲ. ಅನ್ಯಜನರಲ್ಲಿ ಭಾಷಾಭಿಮಾನವು ದಿನದಿನಕ್ಕೆ ವೃದ್ಧಿ ಹೊಂದುತ್ತಿರುವಾಗ ಕನ್ನಡಿಗರಲ್ಲಿ ಇತಿಹಾಸ ಜಾಗೃತಿಯಾಗಿರಲಿಲ್ಲ. ಇಂಥ ಸಮಯದಲ್ಲಿ ತಮ್ಮ ಇತಿಹಾಸವನ್ನೂ ಸಂಶೋಧಿಸಿ ತೆಗೆಯಬೇಕೆಂದು ಸ್ವಾಭಿಮಾನಿಗಳಾದ ಕೆಲವು ತರುಣ ಕನ್ನಡಿಗರಲ್ಲಿ ಲವಲವಿಕೆ ಹುಟ್ಟತೊಡಗಿತು. ಆದರೆ ಕನ್ನಡಿಗರ ಇತಿಹಾಸವನ್ನು ತಿಳಿಸುವ ಯಾವ ಪುಸ್ತಕಗಳೂ ಆಗ ಪ್ರಕಾಶಿತವಾಗಿರದಿದ್ದರಿಂದ ತಮಗೆ ಉಜ್ವಲವಾದ ಇತಿಹಾಸವೇ ಇಲ್ಲವೇ? ಎಂದು ಮನಸ್ಸಿನಲ್ಲಿ ಕೊರಗುತ್ತ ಕುಳಿತುಕೊಳ್ಳಬೇಕಾಯಿತು.

ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕ್ರಿ.ಶ. ೧೯೦೭ ರಲ್ಲಿ ಶ್ರೀಮಾನ್ ರಾವಬಹಾದ್ದೂರ ಆರ್. ನರಸಿಂಹಾಚಾರ್ಯ ಮತ್ತು ಶ್ರೀ ಎಸ್. ಜಿ. ನರಸಿಂಹಾಚಾರ್ಯರು

ಸೇರಿ "೧೯ ನೆಯ ಶತಮಾನದ ಕೊನೆಯ ವರೆಗೆ ಆಗಿಹೋದ ಕರ್ನಾಟಕ ಕವಿಗಳ ಚರಿತೆ" ಎಂಬ ಗ್ರಂಥವನ್ನು ಬರೆದು ಪ್ರಸಿದ್ಧಿಸಿದ್ದರು. ಅದೇ ವರ್ಷ ಶ್ರೀಯುತ ವ್ಹಿ.ಬಿ. ಹಾಲಭಾವಿಯವರು ಕನ್ನಡ ಭಾಷೆಯಲ್ಲಿ "ವಿಜಯನಗರ ಸಾಮ್ರಾಜ್ಯದ ಇತಿಹಾಸ" ಎಂಬ ಗ್ರಂಥವನ್ನು ಬರೆದು ಪ್ರಕಾಶಪಡಿಸಿದರು. ಮುಂದೆ ೧೯೦೮ ರಲ್ಲಿ ಶ್ರೀಮಾನ್ ಆಲೂರು ವೆಂಕಟರಾಯರು ಶ್ರೀ ವಿದ್ಯಾರಣ್ಯರ ಚರಿತ್ರೆಯನ್ನು ಬರೆದು ಪ್ರಸಿದ್ಧ ಮಾಡಿದರು. ಕ್ರಿ.ಶ. ೧೯೧೨-೧೩ ರಲ್ಲಿ ಶ್ರೀ ನಾರಾಯಣ ಶ್ರೀನಿವಾಸ ರಾಜಪುರೋಹಿತರು ಪುಣೆಯ ಪಟ್ಟಣದಲ್ಲಿ ಪ್ರಸಿದ್ಧವಾಗುವ "ಕೇಸರಿ" ಎಂಬ ಸುಪ್ರಸಿದ್ಧವಾದ ಮಹಾರಾಷ್ಟ್ರ ವಾರಪತ್ರಿಕೆಯಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕ (महाराष्ट्र व कर्नाटक) ಎಂಬ ಶೀರ್ಷಿಕೆಯ ಅಡಿಯಲ್ಲಿ ೭ ಲೇಖನಗಳನ್ನು ಬರೆದು, ಡಾಕ್ಟರ್ ಭಾಂಡಾರಕರರ ಮತಗಳನ್ನು ಸಪ್ರಮಾಣವಾಗಿ ಖಂಡಿಸಿ, ಚಾಲುಕ್ಯರು, ರಾಷ್ಟ್ರಕೂಟರು, ದೇವಗಿರಿಯ ಯಾದವರು ಇವರೇ ಮೊದಲಾದ ಅರಸು ಮನೆತನದವರೆಲ್ಲ ಕನ್ನಡಿಗರು ಎಂಬುದನ್ನು ಸ್ಪಷ್ಟವಾಗಿ ಸಿದ್ಧಪಡಿಸಿದರು ಹಾಗೂ ಕನ್ನಡ, ಮರಾಠಿ ವಾಙ್ಮಯಗಳ ಆಧಾರದಿಂದ ಪ್ರಾಚೀನ ಕಾಲದಲ್ಲಿ ಪುಣೆ, ನಾಸಿಕ, ಪೈಠಣ ಪಟ್ಟಣಗಳ ವರೆಗೆ ಎಂದರೆ ಗೋದಾವರಿ ನದಿಯ ವರೆಗೆ ಕನ್ನಡ ಭಾಷೆಯು ಪ್ರಚಾರ ದಲ್ಲಿತ್ತೆಂಬುದನ್ನು ಈ ಲೇಖನಮಾಲೆಯಿಂದ ಸ್ಪಷ್ಟಪಡಿಸಿದರು. ಶ್ರೀ ರಾಜಪುರೋಹಿತರ ಈ ಲೇಖನಮಾಲೆಯಿಂದ ಮಹಾರಾಷ್ಟ್ರ ಜನರಲ್ಲಿ ಕನ್ನಡಿಗರ ಇತಿಹಾಸದ ಬಗ್ಗೆ ನೆಲೆಗೊಂಡ ತಪ್ಪು ಕಲ್ಪನೆಗಳು ದೂರಾದವು ಮತ್ತು ಉತ್ತರ ಕರ್ನಾಟಕದ ಕನ್ನಡಿಗರಲ್ಲಿ ಕರ್ನಾಟಕದ ಇತಿಹಾಸದ ಬಗ್ಗೆ ಚೆನ್ನಾಗಿ ಅಭಿಮಾನವುಂಟಾಯಿತು. ತಮ್ಮದು ಅಪಾರ ಕೀರ್ತಿಗಳಿಸಿ ಮೆರೆದ ಭವ್ಯ ನಾಡು ಎಂಬ ಅರಿವು ಉಂಟಾಗಿ ಕರ್ನಾಟಕದ ಎಲ್ಲ ಕನ್ನಡಿಗರಲ್ಲಿ ಚೈತನ್ಯವುಂಟಾಯಿತು. ಈ ರೀತಿ ಗ್ರಂಥಪ್ರಕಾಶನ ಹಾಗೂ ಲೇಖನಗಳ ಮೂಲಕ ನಡೆಸಿದಂತೆ ಕೆಲವು ಹಿರಿಯರು ಕರ್ನಾಟಕ ಪ್ರಾಂತದ ವಿವಿಧ ಕಡೆಗಳಲ್ಲಿ ಹಾಗೂ ಹೊರಗೆ ಪ್ರವಚನ ಮಾಡುವ ಮೂಲಕವೂ ಕನ್ನಡಿಗರಲ್ಲಿಯ ಸ್ವಾಭಿಮಾನವನ್ನು ಬಡಿದೆಬ್ಬಿಸುವ ಕಾರ್ಯವನ್ನು ಮುಂದುವರೆಸಿದರು.

ಕ್ರಿ.ಶ. ೧೯೧೪ ನೆಯ ಅಗಸ್ಟ್ ೩ ನೆಯ ತಾರೀಖಿನ ದಿನ ಶ್ರೀಯುತ ಆಲೂರು ವೆಂಕಟರಾಯರು ಪುಣೆಯ ಡೆಕ್ಕನ್ ಕಾಲೇಜಿನಲ್ಲಿ "ಕರ್ನಾಟಕದ ಗತ ವೈಭವ" ಎಂಬ ವಿಷಯವನ್ನು ಕುರಿತು ಭಾಷಣ ಮಾಡಿದರು. ಇವರ ಭಾಷಣದಿಂದ ಪ್ರಭಾವಿತರಾದ ಮತ್ತು ಸ್ವಾಭಿಮಾನದಿಂದ ಪ್ರೇರಿತರಾದ ಅಲ್ಲಿಯ ಕನ್ನಡ ವಿದ್ಯಾರ್ಥಿಗಳು ತಮ್ಮ ಒಬ್ಬ ಮಿತ್ರನ ಸ್ಮಾರಕಕ್ಕಾಗಿ ಕೂಡಿಸಿಟ್ಟ ಒಂದು ನೂರು ರೂಪಾಯಿಗಳನ್ನು ಶ್ರೀ ಆಲೂರು ವೆಂಕಟರಾಯರ ಕೈಯಲ್ಲಿ ಕೊಟ್ಟು, ಕರ್ನಾಟಕದ ಇತಿಹಾಸ, ಸಂಸ್ಕೃತಿ, ಶಿಲ್ಪ, ಕಲೆ ಮೊದಲಾದವುಗಳನ್ನು ಅಭ್ಯಾಸ ಮಾಡುವುದಕ್ಕಾಗಿ ಕರ್ನಾಟಕ ಇತಿಹಾಸ ಸಂಶೋಧಕ ಮಂಡಲ ಎಂಬ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಧಾರವಾಡದಲ್ಲಿಸ್ಥಾಪಿಸುವಂತೆ ಪ್ರಾರ್ಥಿಸಿದರು. ಶ್ರೀರುಕ್ಮಾಂಗದರಾವ ಗೋ. ದೇಶಪಾಂಡೆ, ಶ್ರೀ ವೆಂಕಟೇಶ ಬೆಳವಿ, ಶ್ರೀ ವೆಂಕಟೇಶ ಆಲಬಾಲ, ಶ್ರೀ ಹಣಮಂತ ಸೂರ್ಯವಂಶಿ, ಶ್ರೀ ಪ್ರಾಣೇಶ ಸಿದ್ಧಾಂತಿ, ಶ್ರೀ ಕೃಷ್ಣ ದೇಶಪಾಂಡೆ, ಶ್ರೀ ತಮಣಾಚಾರ್ಯ ಪುರೋಹಿತ, ಶ್ರೀ ಬಳವಂತರಾವ ದಾತಾರ, ಶ್ರೀ ರಂಗೋಕೃಷ್ಣ ಅಸುಂಡಿ, ಶ್ರೀ ರಾಮರಾವ ಸಾಲಿ, ಶ್ರೀ ವೆಂಕಟೇಶ ಡಂಬಳ ಇವರೇ ಮೊದಲಾದ ಡೆಕ್ಕನ್ ಕಾಲೇಜಿನ ಸ್ವಾಭಿಮಾನಿಗಳಾದ ಆ ಕನ್ನಡ ವಿದ್ಯಾರ್ಥಿಗಳನ್ನು

ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ. ವಿಶೇಷವಾಗಿ ಈ ಸಂದರ್ಭದಲ್ಲಿ ಅವರೆಲ್ಲರನ್ನು ಅತ್ಯಂತ ಗೌರವಪೂರ್ವಕವಾಗಿ ಸ್ಮರಿಸುತ್ತೇವೆ. ಈ ಎಲ್ಲ ತರುಣ ವಿದ್ಯಾರ್ಥಿಗಳ ಆಗ್ರಹದಿಂದ ಮತ್ತು ಶುಭೇಚ್ಛೆಯ ಪ್ರಕಾರ ಅದೇ ವರ್ಷ ಧಾರವಾಡದಲ್ಲಿ ವಿಜಯದಶಮಿಯ ಶುಭ ಮಹೂರ್ತದಲ್ಲಿ (ದಿ. ೨೮-೯-೧೯೧೪) **"ಕರ್ನಾಟಕ ಇತಿಹಾಸ ಸಂಶೋಧಕ ಮಂಡಳ"** ಎಂಬ ಸಂಸ್ಥೆಯನ್ನು "ಶ್ರೀ ವೆಂಕಟರಾವ ಆಲೂರು, ಶ್ರೀರಾಮರಾವ ನರಗುಂದಕರ, ಶ್ರೀ ನಾರಾಯಣ ಶ್ರೀನಿವಾಸ ರಾಜಪುರೋಹಿತ, ಶ್ರೀ ನಾರಾಯಣರಾವ ದೇಶಪಾಂಡೆ, ಶ್ರೀ ನರಸಿಂಹಾಚಾರ್ಯ ಪುಣೇಕರ ಉರ್ಫ ಕಾವ್ಯಾನಂದ, ಶ್ರೀ ಕಡಪಾ ರಾಘವೇಂದ್ರ ರಾವ, ಶ್ರೀ ವಿಠ್ಠಲರಾವ ಜೋಶಿ, ಶ್ರೀ ಮುದವೀಡು ಕೃಷ್ಣರಾವ, ಶ್ರೀ ರಾಮರಾವ ಜವಳಿ, ಶ್ರೀ ಚಿದಂಬರರಾವ ಆಪಟೆ, ಶ್ರೀ ಸುಬ್ಬರಾವ ಕುಲಕರ್ಣಿ, ಶ್ರೀ ಭೀಮರಾವ ಬೆಟಗೇರಿ, ಶ್ರೀ ವೆಂಕಟೇಶ ಹನುಮಂತ ಡಂಬಳ, ಶ್ರೀ ವೆಂಕಟೇಶ ಭೀಮಸೇನಾಚಾರ್ಯ ಡಂಬಳ ಈ ಹದಿನಾಲ್ಕು ಜನ ಖ್ಯಾತಿವೆತ್ತ ಸಂಶೋಧಕರೂ ಕನ್ನಡಾಭಿಮಾನಿಗಳೂ ಸೇರಿ ಸ್ಥಾಪಿಸಿದರು. ಈ ರೀತಿ ದೇಶದ ಮತ್ತು ಕರ್ನಾಟಕದ ಧೀಮಂತ ಸಂಸ್ಕೃತಿಯ ಮಹೋನ್ನತಿಯ ಸಾಕ್ಷಾತ್ಕಾರವನ್ನು ಜನಸಾಮಾನ್ಯರೂ ಪಡೆಯಬೇಕೆಂಬ ಹಂಬಲವುಳ್ಳ ಕರ್ನಾಟಕ ಇತಿಹಾಸ ಸಂಶೋಧನ ಮಂಡಲವು ೧೯೧೪ ರಲ್ಲಿ ಜನ್ಮ ತಾಳಿತು. ನಂತರ ಕರ್ನಾಟಕದ ಗತವೈಭವವನ್ನು ಜನಸಾಮಾನ್ಯರಿಗೂ ತಿಳಿಸಿಕೊಟ್ಟು ಕನ್ನಡಿಗರಲ್ಲಿ ಸ್ವಾಭಿಮಾನವನ್ನು, ಜಾಗೃತಿಯನ್ನು, ದೇಶಾಭಿಮಾನವನ್ನು ಹೆಚ್ಚಿಸುವುದು, ಇದಕ್ಕಾಗಿ ಮೂಲಭೂತ ಆಧಾರಗಳಿಂದ ನಮ್ಮ ಕನ್ನಡ ನಾಡಿನ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಕಲೆಗಳ ಅಭ್ಯಾಸ ಮಾಡಿ ಈಗಿನ ಸಮಾಜಕ್ಕೆ ಉಪಯುಕ್ತವಾಗುವಂತೆ ಪುಸ್ತಕಗಳನ್ನು ಪ್ರಕಟಿಸುವುದು, ಪ್ರಾಚೀನ ಹಸ್ತಪ್ರತಿಗಳನ್ನು ಹಾಗೂ ದಾಖಲೆಗಳನ್ನು ಸಂಗ್ರಹಿಸಿ-ಸಂಶೋಧಿಸಿ ಅವುಗಳನ್ನು ಪ್ರಕಾಶಿಸುವುದು, ಉಪನ್ಯಾಸ-ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು, ಮುಂತಾದ ಧ್ಯೇಯಗಳನ್ನಿಟ್ಟುಕೊಂಡು ಮಂಡಲವು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಕಾರ್ಯಪ್ರವೃತ್ತವಾಯಿತು. ಈ ಮಂಡಲವನ್ನು ೧೯೩೦ ರಲ್ಲಿ ನೋಂದಾಯಿಸಲಾಯಿತು.

ಮಂಡಲದ ಸ್ಥಾಪನೆಯಾದಾಗಿನಿಂದ ಇಲ್ಲಿಯ ವರೆಗೆ ನಡೆದ ಕೆಲವು ಪ್ರಮುಖ ಘಟನೆಗಳನ್ನು ಮತ್ತು ಕಾರ್ಯಸಾಧನೆಗಳನ್ನು ಸಂಕ್ಷೇಪದಲ್ಲಿ ಈಗ ತಮ್ಮ ಮುಂದಿಡಲು ಹೆಮ್ಮೆ ಎನಿಸುತ್ತದೆ.

೧. ಐತಿಹಾಸಿಕ ಸಮ್ಮೇಲನಗಳ ಪ್ರಾರಂಭ

ಉತ್ತರ ಕರ್ನಾಟಕದಲ್ಲಿ ಅಖಿಲ ಕರ್ನಾಟಕ ಐತಿಹಾಸಿಕ ಸಮ್ಮೇಲನಗಳನ್ನು ಮೊಟ್ಟಮೊದಲು ಪ್ರಾರಂಭಿಸಿದ ಖ್ಯಾತಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಲಕ್ಕೆ ಸಲ್ಲುತ್ತದೆ. ೧೯೧೬ ರಲ್ಲಿ ನಡೆದ ಮೊದಲನೆಯ ಸಮ್ಮೇಲನಕ್ಕೆ ಶ್ರೀಯುತ ವೆಂಕಟರಾವ ಆಲೂರು ಇವರು, ೧೯೧೭ ರಲ್ಲಿ ನಡೆದ ಎರಡನೆಯ ಸಮ್ಮೇಲನಕ್ಕೆ ಶ್ರೀಯುತ ರಾಮಚಂದ್ರರಾವ ದೇಶಪಾಂಡೆ ಇವರು ಮತ್ತು ೧೯೧೮ ರಲ್ಲಿ ಜರುಗಿದ ಮೂರನೆಯ ಸಮ್ಮೇಲನಕ್ಕೆ ಮೈಸೂರ ಆರ್ಕಿಯಾಲಾಜಿಕಲ್ ಖಾತೆಯ ನಿರ್ದೇಶಕರಾಗಿದ್ದ ಶ್ರೀಮಾನ್ ರಾವ ಬಹಾದ್ದೂರ್ ಆರ್. ನರಸಿಂಹಾಚಾರ್ಯರು ಅಧ್ಯಕ್ಷರಾಗಿದ್ದರು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ೬೦೦ ನೇ ವರ್ಷದ ಮಹೋತ್ಸವ, ಮಂಡಲದ ರಜತಮಹೋತ್ಸವ, ಸುವರ್ಣಮಹೋತ್ಸವ, ನಂತರ ಕೆಲವು ವಿಶಿಷ್ಟ ಸಂದರ್ಭಗಳಲ್ಲಿಯೂ ಐತಿಹಾಸಿಕ ಸಮ್ಮೇಲನಗಳು ನಡೆದಿವೆ.

೨. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ೬೦೦ ನೆಯ ವರ್ಷದ ಸ್ಮಾರಕೋತ್ಸವ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ೬೦೦ ನೆಯ ವರ್ಷದ ಮಹೋತ್ಸವವನ್ನು ೧೯೩೬ ರಲ್ಲಿ ಹಂಪೆಯಲ್ಲಿ ಅತಿ ವೈಭವದಿಂದ ಆಚರಿಸಲಾಯಿತು. ಆಗ ಲಕ್ಷಾವಧಿ ಜನರು ಸ್ವಯಂಪ್ರೇರಣೆಯಿಂದ ಈ ಉತ್ಸವದಲ್ಲಿಯ ಐತಿಹಾಸಿಕ ಸಮ್ಮೇಲನ– ಪ್ರದರ್ಶನ, ವಿಚಾರಗೋಷ್ಠಿಗಳು ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಆನಂದಿಸಿದರು. ಇದೊಂದು ನ ಭೂತೋ ನ ಭವಿಷ್ಯತಿ ಯಾದ ಉತ್ಸವವಾಗಿತ್ತೆಂದು ಆ ಉತ್ಸವದಲ್ಲಿ ಭಾಗವಹಿಸಿದ್ದ ಹಿರಿಯರು ಹೇಳುತ್ತಿದ್ದುದನ್ನು ಅನೇಕರು ಕೇಳಿರಬಹುದು. ಸಾಂಸ್ಕೃತಿಕ ಸಮಾರಂಭದ ನೆನಪಿಗಾಗಿ "ವಿಜಯನಗರ ಸಿಕ್ಸ ಸೆಂಟೆನರಿ ಕೊಮ್ಮೆಮೋರೇಶನ ಹೊಲ್ಯುಮ್" ಎಂಬ ಹೆಸರಿನಲ್ಲಿ ಪ್ರಕಟವಾದ ಸಂಸ್ಮರಣ ಸಂಚಿಕೆಯುಲ್ಲಿಂಯ ವಿದ್ವತ್ಪೂರ್ಣವಾದ ಇಂಗ್ಲೀಷ ಲೇಖನಗಳನ್ನು ಓದಿ, ಇತಿಹಾಸ ಸಂಶೋಧನೆಯ ಸಾಧನೆಗಳಲ್ಲಿಯೇ ಮುಂದುವರೆದ ಸಂಸ್ಥೆ ಎಂದು ಆಗಿನ ಬ್ರಿಟಿಷ ಸರಕಾರದಿಂದ ಮಂಡಲವು ಮನ್ನಣೆ ಪಡೆದು ದೇಶ–ವಿದೇಶದ ವಿದ್ವಾಂಸರ ಗಮನ ಸೆಳೆಯಿತು. ಪ್ರಧಾನ ಸಂಪಾದಕರಾಗಿ ಬಹು ಶ್ರಮ ವಹಿಸಿ ಈ ಸ್ಮರಣ ಸಂಚಿಕೆಯು ಪ್ರಕಾಶಕ್ಕೆ ಬರಲು ಕಾರಣರಾದವರು ಮಾನ್ಯ ಶ್ರೀ ಡಿ.ಪಿ. ಕರಮರಕರರು. ಇದೇ ಸಂದರ್ಭದಲ್ಲಿ ಇನ್ನೂ ಅನೇಕ ಗ್ರಂಥಗಳು ಪ್ರಕಟವಾದರೂ ಶ್ರೀಯುತ ಪಿ.ಬಿ.ದೇಸಾಯಿಯವರು ಕನ್ನಡದಲ್ಲಿ ಬರೆದ 'ವಿಜಯನಗರ ಸಾಮ್ರಾಜ್ಯ' ಮತ್ತು ಶ್ರೀ ಪೋತದಾರ ಶ್ರೀನಿವಾಸರಾಯರ 'ಸಚಿತ್ರವಿಜಯನಗರ' ಎಂಬ ಕೃತಿಗಳು ಉಲ್ಲೇಖನೀಯವಾಗಿವೆ.

೩. ಮಂಡಲದ ರಜತಮಹೋತ್ಸವ

೧೯೪೦ ರಲ್ಲಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಲದ ರಜತಮಹೋತ್ಸವವನ್ನು ದಿಲ್ಲಿಯಲ್ಲಿರುವ ಭಾರತ ಸರಕಾರದ ಆರ್ಕಿಯಾಲಜಿ ಡಿಪಾರ್ಟಮೆಂಟಿನ ಡೈರೆಕ್ಟರ್ ಜನರಲ್ ಆಗಿದ್ದ ರಾವ ಬಹಾದ್ದೂರ ಕೆ.ಎನ್. ದೀಕ್ಷಿತ ಇವರ ಘನ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಆಚರಿಸಲಾಯಿತು. ಮಾನ್ಯ ದೀಕ್ಷಿತರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮಂಡಲದ ಬಗ್ಗೆ ಹೇಳಿದ ಕೆಳಗಿನ ಮಾತುಗಳು ಉಲ್ಲೇಖನೀಯವಾಗಿವೆ.........................

"It is indeed a great pleasure to me to associate myself with the Silver Jubilee celebrations of the Karnataka Historical Research Society and I am grateful to you for the honour you have rendered me in asking me to preside over this happy function which enables me to express my appreciation of the great importance of the cause for which the Society stands................

Nearly five years ago the Society successfully launched an ambitious project of celebrating the sexcentenary of the function of the Vijayanagara Empire which has immensely raised its prestige in the eyes of the Scientific world.................

The Society has been able to achieve great success in inducing the Provincial and Central Governments in devoting their attention to the unexplored rich field in the Karnataka.......................

Gentlemen, I have great pleasure in wishing the Society a long and useful career in the noble task of unravelling Karnataka's rich cultural past"

ಈ ರಜತಮಹೋತ್ಸವದಲ್ಲಿ ಮಂಡಲದ ಪರವಾಗಿ ನಡೆದ ಐತಿಹಾಸಿಕ ಸಮ್ಮೇಲನ, ಉಪನ್ಯಾಸಗಳು ಹಾಗೂ ಪ್ರದರ್ಶನ ಇವುಗಳು ವ್ಯವಸ್ಥಿತವಾಗಿ ನಡೆಯುವಂತೆ ಏರ್ಪಾಡು ಮಾಡಿದ ಮಂಡಲದ ಅಂದಿನ ಕಾರ್ಯದರ್ಶಿಗಳಾದ **ಶ್ರೀ ಡಿ.ಪಿ. ಕರಮರಕರರು** ಎಲ್ಲರ ಪ್ರಶಂಸೆಗೆ ಪಾತ್ರರಾದರು. ಇದೇ ಸಂದರ್ಭದಲ್ಲಿ ಅವರು ಮುಂಬೈ ಸರಕಾರಕ್ಕೆ ಸಂಸ್ಥೆಯ ಕಟ್ಟಡಕ್ಕಾಗಿ ಬೇಕಾದ ಸ್ಥಳದ ಬಗ್ಗೆ ಮನವಿ ಸಲ್ಲಿಸಿ ಈಗಿರುವ ಸ್ವಂತ ಸ್ಥಳವನ್ನು ಪಡೆದರು. ಅನೇಕ ವರ್ಷಗಳವರೆಗೆ ಬಾಡಿಗೆ ಮನೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಂಡಲಕ್ಕೆ ಕೇಂದ್ರ ರೇಲ್ವೆಮಂತ್ರಿಗಳಾದ ಶ್ರೀ ಲಾಲಬಹಾದ್ದೂರ ಶಾಸ್ತ್ರಿಗಳು ಧಾರವಾಡಕ್ಕೆ ಬಂದು ೧೯೫೬ ರಲ್ಲಿ ಇದೇ ಸ್ವಂತ ಸ್ಥಳದಲ್ಲಿ ಕಟ್ಟಡಕ್ಕಾಗಿ ಶಿಲಾನ್ಯಾಸವನ್ನು ನೆರವೇರಿಸಿದರು. ನಂತರ ಅಲ್ಲಿ ಒಂದು ಚಿಕ್ಕ ಕಾರ್ಯಾಲಯವನ್ನು ಕಟ್ಟಿಸಲಾಯಿತು. ಮಂಡಲದ ಸುವರ್ಣಮಹೋತ್ಸವದ ನಂತರ ೧೯೭೨ ರಲ್ಲಿ ಈಗಿನ ಎರಡು ಮಹಡಿ ಕಟ್ಟಡವು ಸಿದ್ಧವಾಗುವವರೆಗೆ ಮಂಡಲವು ಆ ಚಿಕ್ಕ ಕೊಠಡಿಯಲ್ಲಿಯೇ ಕಾರ್ಯನಿರ್ವಹಿಸುತ್ತಿತ್ತು.

೪. ನಿಃಸ್ವಾರ್ಥಸೇವೆ :-

ಕರ್ನಾಟಕದೊಳಗಿನ ಭವ್ಯವಾದ ಪಟ್ಟಣಗಳನ್ನೂ, ಗುಡಿ-ಗುಂಡಾರಗಳನ್ನೂ, ಹಾಗೂ ಐತಿಹಾಸಿಕ ಸ್ಥಳಗಳನ್ನೂ ಪ್ರತ್ಯಕ್ಷವಾಗಿ ನೋಡುವುದರಿಂದ ಹುಟ್ಟುವ ಸ್ಫೂರ್ತಿಯೂ ಅಭಿಮಾನವೂ ಕೇವಲ ಕಲ್ಪನೆಯಿಂದ ಬರಲಾರವು. ಇದಲ್ಲದೆ ಅವುಗಳನ್ನು ಪ್ರತ್ಯಕ್ಷವಾಗಿ ನೋಡಿದರೆ ಸುತ್ತಮುತ್ತಲಿನ ಪರಿಸ್ಥಿತಿಯು ಗೊತ್ತಾಗಿ ಇತಿಹಾಸದ ಮೇಲೆ ಹೆಚ್ಚಿನ ಬೆಳಕು ಚೆಲ್ಲಲು ಸಾಧ್ಯವಾಗುವದು. ಆದ್ದರಿಂದಲೇ ಹಿಂದಕ್ಕೆ ಮಂಡಲದ ಕೆಲವು ಸದಸ್ಯರು ತಮ್ಮ ಸ್ವಂತ ಖರ್ಚಿನಿಂದ ಸಂಚರಿಸಿ ಐತಿಹಾಸಿಕ ಮಾಹಿತಿಗಳನ್ನು ಸಂಗ್ರಹಿಸತೊಡಗಿದರು. ಮಂಡಲವು ಸ್ಥಾಪನೆಯಾದಾಗಿನಿಂದ ಅನೇಕ ವರ್ಷಗಳ ವರೆಗೆ ಅದರೊಂದಿಗಿದ್ದ ಶ್ರೀಯುತ ನಾ.ಶ್ರೀ. ರಾಜಪುರೋಹಿತರು ಕರ್ನಾಟಕದ ನೂರಾರು ಹಳ್ಳಿಗಳನ್ನು ಹಾಗೂ ಐತಿಹಾಸಿಕ ಸ್ಥಳಗಳನ್ನು ಸಂದರ್ಶಿಸಿ ಅನೇಕ ಮಹತ್ವದ ದಾಖಲೆಗಳನ್ನು ಸಂಗ್ರಹಿಸಿದರು. ಮಂಡಲದ ಇತಿಹಾಸ ಪ್ರಚಾರಕರೆಂದು ಕಾರ್ಯನಿರ್ವಹಿಸಿದ ಶ್ರೀ ರಾಜಪುರೋಹಿತರು ತಾವು ಹೋದಲ್ಲೆಲ್ಲಾ ಐತಿಹಾಸಿಕ ವಿಷಯಗಳ ಮೇಲೆ ವ್ಯಾಖ್ಯಾನಗಳನ್ನು ಕೊಡುವ ಮೂಲಕ ಉತ್ತರ ಕರ್ನಾಟಕದಲ್ಲಿ ಐತಿಹಾಸಿಕ ಜಾಗೃತಿಯುನ್ನುಂಟು ಮಾಡಿದರು, ನೂರಾರು ಲೇಖನಗಳನ್ನು ಬರೆದರು, ಅನೇಕ ಅಪೂರ್ವ ದಾಖಲೆಗಳನ್ನು ಸಂಶೋಧಿಸಿದರು. ತಮ್ಮ ಮನೆ ಮಾರುಗಳನ್ನು ಲೆಕ್ಕಿಸದೇ ಸಂಶೋಧನೆಯೆಂಬ ವ್ರತದಲ್ಲಿ ದೀಕ್ಷಾಬದ್ಧರಾಗಿ ಮಂಡಲದ ಕಾರ್ಯವನ್ನು ನಿರ್ವಹಿಸಿದ ಶ್ರೀ ನಾ. ಶ್ರೀ. ರಾಜಪುರೋಹಿತರಂತಹ ಮಂಡಲದ ಅನೇಕ ಕರ್ಮಯೋಗಿಗಳ ಸಾಧನೆ ಅವರ್ಣನೀಯ.

೫. ಜನ್ಮಶತಮಾನೋತ್ಸವಗಳು

ಕರ್ನಾಟಕ ಕುಲಪುರೋಹಿತ ಶ್ರೀ ಆಲೂರು ವೆಂಕಟರಾಯರ ಜನ್ಮ ಶತಮಾನೋತ್ಸವವನ್ನು ೧೯೮೦ ರಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಕ.ವಿ.ವಿ.ದ

ಕುಲಪತಿಗಳಾದ ಶ್ರೀ ಸದಾಶಿವ ಒಡೆಯರ ಇವರು ಈ ಜನ್ಮಶತಮಾನೋತ್ಸವದ ಉದ್ಘಾಟಕರಾಗಿ ಆಗಮಿಸಿದ್ದರು. ಆಗ ಶೀ ಆಲೂರು ವೆಂಕಟರಾಯರ ಭಾವಚಿತ್ರವನ್ನು ಅನಾವರಣಗೊಳಿಸಲಾಯಿತು. ಅದರಂತೆ ದಿ. ಶ್ರೀ ಸಾ. ಶ್ರೀ. ರಾಜಪುರೋಹಿತರ ಜನ್ಮಶತಮಾನೋತ್ಸವವನ್ನು ೧೯೮೭ ರ ಸಪ್ಟಂಬರನಲ್ಲಿ ಮಂಡಲದಲ್ಲಿ ವೈಭವದಿಂದ ಆಚರಿಸಲಾಯಿತು. ಶ್ರೀ ದ.ಪ. ಕರಮರಕರರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭಕ್ಕೆ ಶ್ರೀ ಪೇಜಾವರ ಸ್ವಾಮಿಗಳು ಉದ್ಘಾಟಕರಾಗಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ರಾಜಪುರೋಹಿತರ ಭಾವಚಿತ್ರವನ್ನು ಅನಾವರಣಗೊಳಿಸಲಾಯಿತು ಮತ್ತು ಆಗ ಅನೇಕ ಇತಿಹಾಸ ಸಂಶೋಧಕರನ್ನು ಹಾಗೂ ಗಣ್ಯರನ್ನು ಸನ್ಮಾನಿಸಲಾಯಿತು.

೬. ಮಂಡಲದ ಸುವರ್ಣ ಮಹೋತ್ಸವ :-

೧೯೫೫ ರಿಂದ ೧೯೮೩ ರವರೆಗೆ ಅಂದರೆ ಸುಮಾರು ೨೭ ವರ್ಷಗಳ ದೀರ್ಘಾವಧಿಯವರೆಗೆ ವಿದ್ಯಾರತ್ನ ರಾ.ಸ್ವಾ. ಪಂಚಮುಖಿಯವರು ಮಂಡಲದ ಕಾರ್ಯಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಕಾರ್ಯಾಧ್ಯಕ್ಷರಾಗುವ ಮೊದಲು ಅವರು ಮುಂಬೈ ಸರಕಾರದ ಕನ್ನಡ ಸಂಶೋಧನ ಸಂಸ್ಥೆಯ (ಇವರ ನಿವೃತ್ತಿಯ ನಂತರ ಕರ್ನಾಟಕ ವಿಶ್ವವಿದ್ಯಾಲಯವು ಈ ಸಂಸ್ಥೆಯನ್ನು ತನ್ನ ಅಧೀನಕ್ಕೆ ಒಳಪಡಿಸಿಕೊಂಡಿದೆ) ಪ್ರಥಮ ನಿರ್ದೇಶಕರಾಗಿ ಹದಿನಾಲ್ಕು ವರ್ಷಗಳ ವರೆಗೆ ಅದನ್ನು ಕಟ್ಟಿ, ಬೆಳೆಸಿ, ಕರ್ನಾಟಕದ ಒಂದು ಪ್ರೇಕ್ಷಣೀಯ ಸ್ಥಳವನ್ನಾಗಿಸಿದ್ದರು. ಆ ಪೂರ್ವದಲ್ಲಿ ನೀಲಗಿರಿ, ಉದಕಮಂಡಲಗಳಲ್ಲಿ ಇತಿಹಾಸ ಸಂಶೋಧಕರಾಗಿ ಕಾರ್ಯ ನಿರ್ವಹಿಸಿದ್ದ ಇಂಥ ಅನುಭವಿಕರು ಮಂಡಲದ ಕಾರ್ಯಾಧ್ಯಕ್ಷರಾದ ನಂತರ ಮಂಡಲದ ಚಟುವಟಿಕೆಗಳು ಚುರುಕುಗೊಂಡು ವಿವಿಧೋನ್ಮುಖವಾಗಿ ಬೆಳೆದವು. ಇವರ ಕಾರ್ಯಾವಧಿಯಲ್ಲಿ ಮಂಡಲದ ಸುವರ್ಣ ಮಹೋತ್ಸವವು ಸಂಪನ್ನವಾಯಿತು.

೧೯೬೦ ರಲ್ಲಿ ಮಂಡಲದ ಸುವರ್ಣ ಮಹೋತ್ಸವವನ್ನು ಅಂದಿನ ಮೈಸೂರು ರಾಜ್ಯದ ರಾಜ್ಯಪಾಲರಾದ ಶ್ರೀಧರ್ಮವೀರರ ಘನ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಅಧ್ಯಕ್ಷೀಯ ಸ್ಥಾನದಿಂದ ಮಾನ್ಯ ಧರ್ಮವೀರರು ಮಂಡಲದ ಕಾರ್ಯಕಲಾಪಗಳನ್ನು ಪ್ರಶಂಸಿಸುತ್ತ " This Society has earned for itself the gratitude of all historians and those interested in history in this country and outside, for its zeal and enthusiasm ever since 1974 in unfolding the ancient glory and greatness of the Karnataka region. ಹಾಗೆಯೇ ಮುಂದುವರೆಯುತ್ತ .... The work of the learned societies such as the Karnataka Historical Research Society in unveiling our history is indeed invaluable. This Society has to its credit during the last five decades and more, achievements which have gone a long way not only in helping writers of history in this ancient land but also in providing guidelines for the proper appreciation of the study of history as such" ಎಂದು ಸಂಸ್ಥೆಯ ಸ್ಥಾಪನೆಯಿಂದ ಇಲ್ಲಿನವರೆಗಿನ ಸಾಧನೆಗಳನ್ನು ಸಂಕ್ಷೇಪಿಸಿ ಉದ್ಗರಿಸಿದ್ದಾರೆ.

ಆ ಸಮಯದಲ್ಲಿ ಪ್ರಾಚ್ಯವಸ್ತು ಸಂಶೋಧನೆಯ ಆಗ್ನೇಯ ವಲಯದ (S.W. Circle) ಮೇಲಾಧಿಕಾರಿಗಳಾದ ಶ್ರೀ ಎಸ್. ಆರ್. ರಾವ್ ಅವರ ಸಹಾಯ-ಸಹಕಾರಗಳಿಂದ

ಐತಿಹಾಸಿಕ ಸಮ್ಮೇಲನ ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಜರುಗಿದ ಸಾಂಸ್ಕೃತಿಕ ಚಟುವಟಿಕೆಗಳನ್ನು ಮಾನ್ಯ ರಾಜ್ಯಪಾಲರು ಶ್ಲಾಘಿಸಿ, ಇಂತಹ ಉತ್ಕೃಷ್ಟ ಯೋಜನೆ-ಸಂಶೋಧನೆಗಳ ಮಹತ್ವಾಕಾಂಕ್ಷೆಯುಳ್ಳ ಮಂಡಲಕ್ಕೆ ಸರಕಾರ ಪುರಸ್ಕಾರ ನೀಡಬೇಕೆಂಬ ಆಶಯುವನ್ನು ವ್ಯಕ್ತಪಡಿಸಿದರು. ಮಂಡಲದ ಆಗಿನ ಕಾರ್ಯಾಧ್ಯಕ್ಷರಾಗಿದ್ದ ವಿದ್ಯಾರತ್ನ ರಾ.ಸ್ವಾ. ಪಂಚಮುಖಿಯವರ ಮಾರ್ಗದರ್ಶನದಲ್ಲಿ ಸಾಧಿಸಿದ ಮಂಡಲದ ವಿವಿಧ ಕಾರ್ಯಚಟುವಟಿಕೆಗಳನ್ನು ಕಂಡು ಮೆಚ್ಚಿದ ರಾಜ್ಯಪಾಲ ಶ್ರೀ ಧರ್ಮವೀರರು ಮಂಡಲದ ಕಟ್ಟಡಕ್ಕಾಗಿ ಸರಕಾರದಿಂದ ಧನಸಹಾಯವನ್ನು ಘೋಷಿಸಿದರು. ಮುಂದೆ ಒಂದು ವರ್ಷದಲ್ಲಿಯೇ ಈಗಿರುವ ಸ್ವಂತ ಕಟ್ಟಡವು ಅಸ್ತಿತ್ವಕ್ಕೆ ಬಂದಿತು.

೭. ಮಂಡಲದ ವಿವಿಧೋನ್ಮುಖ ಚಟುವಟಿಕೆಗಳು :-

"ಇತಿಹಾಸವೆಂದರೆ ಕೇವಲ ರಾಜಾ-ರಾಣಿ- ರಾಜಕುಮಾರ-ರಾಜಕುಟುಂಬದ ಚರಿತ್ರೆ, ರಾಜ-ಮಹಾರಾಜರ-ಸಾಮಂತರ ಹೋರಾಟ, ವೈಭವ- ಅಂತ್ಯಗಳ ಅಂತೆ-ಕಂತೆಗಳ ಕಥೆಯಲ್ಲ. ಇತಿಹಾಸದ ನಿಜವಾದ ಅಧ್ಯಯನವೆಂದರೆ ರಾಜ-ಮಹಾರಾಜರ ಚರಿತ್ರೆಯೊಂದಿಗೆ ಆ ಕಾಲದ ಆರ್ಥಿಕ- ಸಾಮಾಜಿಕ ಪರಿಸ್ಥಿತಿ, ಜನಜೀವನ, ಸಾಹಿತ್ಯ, ಸಂಸ್ಕೃತಿ, ಲಲಿತ ಕಲೆಗಳು, ಆ ಕಾಲದ ಆವಿಷ್ಕಾರಗಳು ಮುಂತಾದವುಗಳ ಪ್ರಾಮಾಣಿಕವಾದ ಅಧ್ಯಯನವಾಗಿದೆ ಮತ್ತು ಈ ಅಧ್ಯಯನದಿಂದ ಈಗಿನ ಸಮಾಜಕ್ಕೆ ಉಪಯುಕ್ತವಾಗುವ ವಿಷಯಗಳನ್ನು ಎತ್ತಿ ತೋರಿಸುವುದಾಗಿದೆ" ಎಂಬುದು ಕಾರ್ಯಾಧ್ಯಕ್ಷರಾದ ಶ್ರೀ ರಾ.ಸ್ವಾ. ಪಂಚಮುಖಿಯವರ ಸಿದ್ಧಾಂತವಾಗಿತ್ತು. ಮಾನ್ಯ ರಾಜ್ಯಪಾಲರಾದ ಶ್ರೀ ಧರ್ಮವೀರರು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ "............History is not merely a chronicle of kings and their battles but is essentially a compilation of human experience in all its varied aspects ಎಂದು ನುಡಿಯುತ್ತ ಇತಿಹಾಸದ ಅಧ್ಯಯನದ ವ್ಯಾಪಕತೆಯ ಇದೇ ಸಿದ್ಧಾಂತವನ್ನು ಒತ್ತಿ ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ದೇಶದ ಹಾಗೂ ಕರ್ನಾಟಕದ ಗತಕಾಲದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ವಿವೇಚಿಸಿ ಈಗಿನ ಸಮಸ್ಯೆಗಳಿಗೆ ಅತ್ಯಾಧುನಿಕ ಪರಿಹಾರ ಮಾರ್ಗಗಳನ್ನು ಕಂಡುಹಿಡಿಯುವ ಉದ್ದೇಶದಿಂದ ಮಂಡಲದಲ್ಲಿ 'ಸಾಮಾಜಿಕ-ಆರ್ಥಿಕ ಸಂಶೋಧನಾ ಕೇಂದ್ರ' (ಸೋಶಿಯೋ ಎಕಾನಾಮಿಕ್ ರೀಸರ್ಚ ಸೆಂಟರ್) ಎಂಬ ವಿಭಾಗವು ಪ್ರಾರಂಭಿಸಲ್ಪಟ್ಟಿತು. ಈ ವಿಭಾಗದ ನಿರ್ವಹಣೆಗಾಗಿ ನಿಯಮಿಸಲ್ಪಟ್ಟ ಸಮಿತಿಗೆ ಭಾರತ ಸರಕಾರದ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದ ಪ್ರೊ. ಡಿ.ಟಿ. ಲಾಕಡಾವಾಲಾ ಇವರು ಪ್ರಮುಖ ನಿಯೋಜಕರಾಗಿಯೂ ಡಾ. ನಂಜುಂಡಪ್ಪ, ಡಾ. ವ್ಹಿ.ಆರ್. ಪಂಚಮುಖಿ, ಡಾ. ಪಿ.ಆರ್. ಪಂಚಮುಖಿ ಮತ್ತು ಮಂಡಲದ ಕಾರ್ಯಾಧ್ಯಕ್ಷರು ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದರು.

ಸಂಶೋಧನಾ ಕಾರ್ಯಗಳ ಜೊತೆಗೆ ಭಾರತೀಯ ಲಿಪಿಶಾಸ್ತ್ರವನ್ನು ಬೋಧಿಸುವ, ವಿಶೇಷವಾಗಿ ಕನ್ನಡ ಲಿಪಿಶಾಸ್ತ್ರದ ಬೆಳವಣಿಗೆಯನ್ನು ಕಲಿಸುವ ಉದ್ದೇಶದಿಂದ ಲಿಪಿಗಳ ಬೋಧನೆ ಪಾಠಣದ ರೀತಿಯನ್ನು ಸ್ನಾತಕೋತ್ತರ ಪದವೀಧರರವರೆಗೂ ಕಲಿಸಲು ಮಂಡಲವು ಮುಂದಾಯಿತು. ಕುತೂಹಲಕಾರಿಯಾದ ಈ ವಿಜ್ಞಾನವನ್ನು ಅರಿಯುವ

ಹಂಬಲದಿಂದ ಮದ್ರಾಸ್ (ಚೆನ್ನೈ), ಮುಂಬೈ, ನಾಸಿಕ ಮುಂತಾದ ಕಡೆಗಳಿಂದ ಜಿಜ್ಞಾಸು ಅಭ್ಯರ್ಥಿಗಳು ಬಂದರು. ವಿದ್ಯಾರತ್ನ ಆರ್.ಎಸ್. ಪಂಚಮುಖಿಯವರ ಮಾರ್ಗದರ್ಶನದಲ್ಲಿ ನಡೆದ ಎರಡು ಶಿಬಿರಗಳನ್ನು ಕಂಡು ಆಗಿನ ಕೇಂದ್ರವಿದ್ಯಾಮಂತ್ರಿಗಳಾಗಿದ್ದ ಡಾ.ವ್ಹಿ.ಕೆ.ಆರ್.ವಿ. ರಾವ್ ಮೊದಲಾದ ಗಣ್ಯರು ಶ್ಲಾಘಿಸಿದರು.

೮. ಮಂಡಲದ ಕೆಲವು ಪ್ರಮುಖ ಯೋಜನೆಗಳು :-

ದಕ್ಷಿಣ ಭಾರತದ ಮಹಾನ್ ಸಂತರೂ, ದಾರ್ಶನಿಕರೂ, ತತ್ವಜ್ಞಾನಿಗಳೂ ಆದ ಶ್ರೀರಾಘವೇಂದ್ರತೀರ್ಥರು ದೇಶ-ವಿದೇಶಗಳಲ್ಲಿ ತಮ್ಮ ಮಹಿಮೆಗಳಿಂದ ಮನೆಮಾತಾಗಿದ್ದಾರೆ. ಕೇವಲ ಪವಾಡಪುರುಷರಾಗಿರದೇ ೪೮ ಉದ್ಗ್ರಂಥಗಳನ್ನು ಬರೆದಿರುವ ಇವರು ತತ್ವಶಾಸ್ತ್ರಕ್ಕೆ ನೀಡಿದ ಕೊಡುಗೆ ಅಪಾರವಾದುದು. ಇವರು ಮೂರು ವೇದಗಳಿಗೆ ಬರೆದ ಭಾಷ್ಯವು 'ವೇದತ್ರಯವಿವೃತಿ' ಎಂದು ಪ್ರಸಿದ್ಧವಾಗಿದ್ದು, ಅದು ಈಗ ಜರ್ಮನಿ ದೇಶದಲ್ಲಿದೆ ಎಂದು ಪ್ರತೀತಿ. ಇವರು ಅನೇಕ ಹರಿದಾಸರಿಗೆ ಆಶ್ರಯ ಕೊಟ್ಟು ಹರಿದಾಸಪರಂಪರೆಯನ್ನು ಮತ್ತು ಸಾಹಿತ್ಯವನ್ನು ಪುನರುಜ್ಜೀವನಗೊಳಿಸಿದರು.

ಇಂಥ ಶ್ರೇಷ್ಠ ಸಂತ, ತತ್ವಜ್ಞಾನಿಗಳ ಎಲ್ಲ ಕೃತಿಗಳನ್ನೂ ಸಂಪಾದಿಸಿ ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸಲು ವಿದ್ಯಾರತ್ನ ರಾ.ಸ್ವಾ. ಪಂಚಮುಖಿಯವರು ಒಂದು ಬೃಹತ್ ಯೋಜನೆಯನ್ನು ಸಿದ್ಧಪಡಿಸಿದ್ದರು. ಈ ಯೋಜನೆಯ ಅಂಗವಾಗಿ ಅವರು ಶ್ರೀ ರಾಘವೇಂದ್ರ ತೀರ್ಥರಿಂದ ವಿರಚಿತವಾದ ೧. ತಂತ್ರದೀಪಿಕಾ, ೨. ಪ್ರಮಾಣಪದ್ಧತಿ ಟಿಪ್ಪಣಿ, ೩. ಬ್ರಹ್ಮಸೂತ್ರ ಭಾಷ್ಯ ಟೀಕಾ ತತ್ವಪ್ರಕಾಶಿಕಾ ಟಿಪ್ಪಣಿ ಭಾವದೀಪ (ನಾಲ್ಕು ಸಂಪುಟಗಳು) ಎಂಬ ಗ್ರಂಥಗಳನ್ನು ಪರಿಷ್ಕರಿಸಿ, ಸಂಪಾದಿಸಿ ಮಂಡಲದಿಂದ ಪ್ರಕಟಿಸಿದರು. ಈ ಯೋಜನೆಯು ಮುಂದುವರೆದಿದೆ.

ಕರ್ನಾಟಕದ ಹಾಗೂ ಭಾರತದ ಸಾಂಸ್ಕೃತಿಕ ಇತಿಹಾಸಗಳನ್ನು ಬರೆಯುವುದು, ಕರ್ನಾಟಕದ ಸಾಂಸ್ಕೃತಿಕ ವಸ್ತುಸಂಗ್ರಹಾಲಯವನ್ನು ಸಿದ್ಧಪಡಿಸುವುದು, ೨೦೧೪ ರಲ್ಲಿ ಮಂಡಲದ ಶತಮಾನೋತ್ಸವವನ್ನು ಆಚರಿಸುವುದು, ಆ ಸಂದರ್ಭದಲ್ಲಿ ಒಂದು ನೂರು ಗ್ರಂಥಗಳನ್ನು ಪ್ರಕಟಿಸುವುದು ಇವು ಮಂಡಲದ ಇತರ ಕೆಲವು ಕಾರ್ಯಯೋಜನೆಗಳು.

೯. ವಿದ್ಯಾರತ್ನ ರಾ.ಸ್ವಾ. ಪಂಚಮುಖಿ ಪ್ರಾಚ್ಯ ವಿದ್ಯಾ ಸಂಶೋಧನ ಕೇಂದ್ರ:-

ಪ್ರಾಚೀನ ಹಸ್ತಪ್ರತಿಗಳನ್ನು ಹಾಗೂ ಅನುಪಲಬ್ಧ ಗ್ರಂಥಗಳನ್ನು ಸಂಶೋಧಿಸಿ, ಸಂಪಾದಿಸಿ, ಪ್ರಕಟಿಸುವುದಕ್ಕಾಗಿ ಮಂಡಲದಲ್ಲಿ 'ವಿದ್ಯಾರತ್ನ ರಾ.ಸ್ವಾ. ಪಂಚಮುಖಿ ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ' ಎಂಬ ವಿಭಾಗವನ್ನು ತೆರೆಯಲಾಗಿದೆ. ಈ ವಿಭಾಗದಿಂದ ಇದುವರೆಗೆ ತಾಂಬೂಲ ಮಂಜರಿ, ಕೃಷಿ ಪಾರಾಶರ, ಪಾಕ ದರ್ಪಣ, ಜ್ಞಾನ ಭೈಷಜ್ಯ ಮಂಜರಿ, ಸುನೀತಿ ಭಾಗವತ, ಸನ್ನೀತಿ ರಾಮಾಯಣ ಎಂಬ ಗ್ರಂಥಗಳನ್ನು ಸಂಶೋಧಿಸಿ ಪ್ರಕಟಿಸಲಾಗಿದೆ. ಕೇಂದ್ರ ಸರಕಾರದ ಧನಸಹಾಯದಿಂದ ಪ್ರಾಚೀನ ಕಾಲದ ಪದಾರ್ಥ ವಿಜ್ಞಾನ (ಫಿಜಿಕ್ಸ್), ರಸಾಯನ ಶಾಸ್ತ್ರ (ಕೆಮೆಸ್ಟ್ರಿ), ಆರೋಗ್ಯ ಶಾಸ್ತ್ರ (ಮೆಡಿಕಲ್ ಸಾಯಿನ್ಸ್), ಕೃಷಿ ವಿಜ್ಞಾನ (ಅಗ್ರಿಕಲ್ಚರಲ್ ಸೈನ್ಸ್) ಮತ್ತು ಸಸ್ಯ ವಿಜ್ಞಾನ (ಬಾಟನಿ) ಗಳ ಮೇಲೆ ಪಾರಿಭಾಷಿಕ ಶಬ್ದಗಳ ಐದು ಕೋಷಗಳನ್ನು ಸಿದ್ಧಪಡಿಸಲಾಗಿದೆ.

೧೦. ಮಂಡಲದ ಪ್ರಕಟಣೆಗಳು :-

ಕರ್ನಾಟಕ ಇತಿಹಾಸ ಸಂಶೋಧನ ಮಂಡಲವು ಇದುವರೆಗೆ ಕನ್ನಡ, ಇಂಗ್ಲೀಷ, ಸಂಸ್ಕೃತ, ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಶ್ರೀ ಆಲೂರು ವೆಂಕಟರಾಯರ ೧) ವಿದ್ಯಾರಣ್ಯ ಚರಿತ್ರೆ, ೨) ಕರ್ನಾಟಕದ ಗತವೈಭವ ೩) ಕರ್ನಾಟಕ ವೀರರತ್ನಗಳು; ಶ್ರೀ ನಾ. ಶ್ರೀ. ರಾಜಪುರೋಹಿತರ ೧) ಶ್ರೀ ಸುರೇಶ್ವರಾಚಾರ್ಯರ ಚರಿತ್ರೆ ೨) ಕರ್ನಾಟಕದ ಇತಿಹಾಸ; ಶ್ರೀ ಶ್ರೀನಿವಾಸರಾವ ಪೋತದಾರರ 'ಸಚಿತ್ರ ವಿಜಯನಗರ' ಎಂಬ ಗ್ರಂಥಗಳು ಉಲ್ಲೇಖನೀಯವಾಗಿವೆ. ಶ್ರೀ ದ. ಪ. ಕರಮರಕರರು ಸಂಪಾದಿಸಿದ 'ವಿಜಯನಗರ ಸಾಮ್ರಾಜ್ಯ ಸ್ಮರಣ ಸಂಪುಟ (ಇಂಗ್ಲೀಷ್)' ಮತ್ತು ಶ್ರೀಪಾಂಡುರಂಗರಾವ ದೇಸಾಯಿಯವರ 'ವಿಜಯ ನಗರ ಸಾಮ್ರಾಜ್ಯ', 'ಶಾಸನಪರಿಚಯ' ಎಂಬ ಗ್ರಂಥಗಳು ಪ್ರಮುಖವಾಗಿವೆ. ವಿದ್ಯಾರತ್ನ ರಾ.ಸ್ವಾ. ಪಂಚಮುಖಿಯವರು ಕನ್ನಡದಲ್ಲಿ ೧) ಕರ್ನಾಟಕದ ಇತಿಹಾಸ (ಸಂಪುಟ-೧) ೨) ಕರ್ನಾಟಕದ ಅರಸು ಮನೆತನಗಳು ೩) ಸಂಸ್ಕೃತಿ ವಿಹಾರ; ಇಂಗ್ಲೀಷಿನಲ್ಲಿ ೧) ಡಿಸ್ಕ್ರಿಪ್ಟಿವ್ ಕೆಟಲಾಗ್ ೨) ಕರ್ನಾಟಕ ಸ್ಕಲ್ಪಚರ್ಸ್ ಮತ್ತು ಸಂಸ್ಕೃತದಲ್ಲಿ ೧) ತಂತ್ರದೀಪಿಕಾ, ೨) ಪ್ರಮಾಣ ಪದ್ಧತಿ ಟಿಪ್ಪಣಿ, ೩) ಬ್ರಹ್ಮಸೂತ್ರಭಾಷ್ಯ - ಟೀಕಾ-ಟಿಪ್ಪಣಿ (ಸಂಪಾದಿತ ಗ್ರಂಥಗಳು) ೪) ಸಪ್ತರಾತ್ರೋತ್ಸವ ಚಂಪೂ ಮತ್ತು ೫) ವೇದಾಪೌರುಷೇಯುತ್ವವಾದ ಎಂಬ ಗ್ರಂಥಗಳನ್ನು ಬರೆದು ಮಂಡಲದಿಂದ ಪ್ರಕಾಶಪಡಿಸಿದರು. ಇವಲ್ಲದೇ ಡಾ. ವರದರಾಜ ಉಮರ್ಜಿಯವರ ೧) ಕರ್ನಾಟಕ ಪ್ರಾಕೃತ ಕವಿ ಚರಿತೆ ೨) ಕನ್ನಡ ಭಾಷೆಯ ಉಗಮ ಮತ್ತು ಬೆಳವಣಿಗೆ (ಇಂಗ್ಲೀಷಿನಲ್ಲಿ); ಪ್ರೊ. ಎಸ್. ಆರ್. ಶರ್ಮಾ ಇವರ 'ಜೈನಿಸಮ್ ಆ್ಯಂಡ್ ಕರ್ನಾಟಕ ಕಲ್ಚರ್' ಎಂಬ ಗ್ರಂಥ, ಪ್ರೊ. ಸಿ.ಎಸ್. ಕುಲಕರ್ಣಿಯವರ 'ಋಗ್ವೇದ ರಹಸ್ಯ' ಮತ್ತು ನಾರಾಯಣ ಶರ್ಮಾ ಇವರ 'ಕನ್ನಡ ನಾಡಿನ ಕಥೆಗಳು' ಇವೆಲ್ಲ ಮಂಡಲದ ಕೆಲವು ಉಲ್ಲೇಖನೀಯ ಪ್ರಕಟಣೆಗಳಾಗಿವೆ.

ಮಂಡಲವು ವಿದ್ವಾಂಸರ ಸಂಶೋಧನಾತ್ಮಕ ಲೇಖನಗಳಿಂದ ಕೂಡಿದ ಪತ್ರಿಕೆ (ಕರ್ನಾಟಕ ಹಿಸ್ಟೋರಿಕಲ್ ರಿವ್ಯೂ) ಯನ್ನೂ ಪ್ರಕಟಿಸುತ್ತಿದೆ.

ಪ್ರಾಚೀನ ಕರ್ನಾಟಕದ ಹಾಗೂ ಭಾರತದ ಗತವೈಭವವನ್ನು ಪ್ರಕಾಶಪಡಿಸಲು ಮಂಡಲದಲ್ಲಿ ಆಗಾಗ ವಿಚಾರ ಸಂಕಿರಣಗಳನ್ನು (ಸೆಮಿನಾರ್) ಮತ್ತು 'ಭಾರತ ವೈಭವದರ್ಶನ ಬೋಧನೆ' ಎಂಬ ಶೀರ್ಷಿಕೆಯ ಅಡಿಯಲ್ಲಿ ವಿದ್ವಾಂಸರಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ಈ ವರ್ಷ ಸುವರ್ಣಕರ್ನಾಟಕ ಮಹೋತ್ಸವ ನಿಮಿತ್ತ ವಿಶೇಷೋಪನ್ಯಾಸಗಳನ್ನು ವ್ಯವಸ್ಥೆ ಮಾಡಲಾಗಿದೆ.

ಮಂಡಲದ ಹುಟ್ಟಿನಿಂದ ಈ ವರೆಗಿನ ಬೆಳವಣಿಗೆಯನ್ನು ಆಲಂಕಾರಿಕವಾಗಿ ಹೀಗೆ ಹೇಳಬಹುದು-

ವಿವಿಧಸಂಶೋಧನಾ ಸಂಸ್ಥೆಗಳೆಂಬ ಬೀಜಗಳ ರಾಶಿಗಳೊಳಗಿಂದ, ಪುಣೆಯಲ್ಲಿದ್ದ ಕನ್ನಡಾಭಿಮಾನಿಗಳಾದ ವಿದ್ಯಾರ್ಥಿಗಳ ಪ್ರೇರಣೆ ಸಹಾಯಗಳೆಂಬ ಶ್ರಮದಾನದೊಂದಿಗೆ, ಶ್ರೀಯುತರಾದ ಆಲೂರು ವೆಂಕಟರಾವ, ನಾ. ಶ್ರೀ ರಾಜಪುರೋಹಿತ, ನಾರಾಯಣರಾವ ದೇಶಪಾಂಡೆ ಮೊದಲಾದ ಹದಿನಾಲ್ಕು ಜನರು, ಆರಿಸಿ ಹೊರತೆಗೆದ ಕರ್ನಾಟಕ ಇತಿಹಾಸ ಸಂಶೋಧನ ಮಂಡಲವೆಂಬ ಬೀಜವನ್ನು ಬಿತ್ತಲು ಶ್ರೀ ದ.ಪ. ಕರಮರಕರರು ಫಲವತ್ತಾದ

ಒಂದು ಕ್ಷೇತ್ರವನ್ನು ಒದಗಿಸಿದರು. ಆ ಕ್ಷೇತ್ರದಲ್ಲಿ ಬಿತ್ತಲ್ಪಟ್ಟ ಬೀಜವು ಪೂಜ್ಯರಾದ - ಶ್ರೀ ಆಲೂರು ವೆಂಕಟರಾವ, ಶ್ರೀ ನಾ. ಶ್ರೀ ರಾಜಪುರೋಹಿತ, ಶ್ರೀ ವ್ಹಿ.ಬಿ. ಹಾಲಭಾವಿ, ಶ್ರೀ ರಂಗನಾಥ ದಿವಾಕರ, ಶ್ರೀ ನಿಟ್ಟೂರು ಶ್ರೀನಿವಾಸರಾವ, ಶ್ರೀ ವ್ಹಿ.ಕೆ.ಆರ್.ವ್ಹಿ ರಾವ್, ಶ್ರೀ ದ. ಪ. ಕರಮಕರ, ಶ್ರೀ ನಾ.ಶ್ರೀ. ಕಮಲಾಪುರ, ಶ್ರೀ ವ್ಹಿ.ಬಿ. ನಾಯಕ ಮುಂತಾದವರಿಂದ ಅಂಕುರಿತವಾಗಿ ಬೆಳೆಯತೊಡಗಿತು. ಮಂಡಲವೆಂಬ ಈ ಸಸಿಯು ಬೆಳೆದು, ಮರವಾಗಿ ವಿದ್ಯಾರತ್ನ ಶ್ರೀ ರಾ. ಸ್ವಾ. ಪಂಚಮುಖಿಯವರ ಕಾಲದಲ್ಲಿ ಶಾಖೋಪಶಾಖೆಗಳಾಗಿ ಹೂ ಬಿಟ್ಟು ಫಲಗಳನ್ನು ಕೊಡುವ ಮಟ್ಟಕ್ಕೆ ಬಂದಿತು ಎಂದು ನಾವು ಈ ನಮ್ಮ ಮಂಡಲದ ಇದುವರೆಗಿನ ಬೆಳವಣಿಗೆ ಹಾಗೂ ಸಾಧನೆಗಳನ್ನು ಅಲಂಕಾರಿಕವಾಗಿ ಸಂಕ್ಷೇಪದಲ್ಲಿ ಚಿತ್ರಿಸಬಹುದು. ಈ ವೃಕ್ಷವು ನಶಿಸದಂತೆ ಪೋಷಿಸಿ, ಸಂಶೋಧನಾ ಪರಂಪರೆಯು ಅವ್ಯಾಹತವಾಗಿ ಮುಂದುವರೆಯುವಂತೆ ನೋಡಿಕೊಳ್ಳುವುದು ನಮ್ಮ-ನಿಮ್ಮೆಲ್ಲರ ಕರ್ತವ್ಯವಾಗಿದೆ.

೧೧. ಕೃತಜ್ಞತಾ ಸಮರ್ಪಣೆ :-

ಕರ್ನಾಟಕ ಇತಿಹಾಸ ಸಂಶೋಧನ ಮಂಡಲದ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗಿನ ವಿವಿಧ ಅವಧಿಯಲ್ಲಿ ಶ್ರೀಯುತರಾದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ, ಡಾ ರಾಘವೇಂದ್ರರಾವ ಶಿರಹಟ್ಟಿ, ರಂಗನಾಥ ದಿವಾಕರ, ವ್ಹಿ.ಕೆ. ಆರ್.ವ್ಹಿ. ರಾವ, ನಿಟ್ಟೂರು ಶ್ರೀನಿವಾಸರಾವ, ರಾ.ಸ್ವಾ. ಪಂಚಮುಖಿ, ದ.ಪ. ಕರಮರಕರ, ರಾಜಾ ಎಸ್. ಜಿ. ಆಚಾರ್ಯ, ಶ್ರೀ ಶ್ರೀ ವಿಜ್ಞಾನನಿಧಿ ತೀರ್ಥರು ಈ ಮಹನೀಯರು ಮಂಡಲದ **ಅಧ್ಯಕ್ಷರಾಗಿಯೂ;** ಶ್ರೀ ಆರ್. ಜಿ. ದೇಶಪಾಂಡೆ, ಶ್ರೀ ಡಿ.ಪಿ.ಪತ್ರಾವಳಿ, ಶ್ರೀ ವ್ಹಿ.ಎಸ್. ಜೋಗ, ಶ್ರೀ ವ್ಹಿ.ಬಿ. ಹಾಲಭಾವಿ, ಶ್ರೀ ರಾ.ಸ್ವಾ. ಪಂಚಮುಖಿ, ಶ್ರೀ ಜಿ.ಎಸ್. ಕೇಶವಾಯಿನ್, ಶ್ರೀ ಕೆ. ಅನಂತಾಚಾರ್ಯ, ಶ್ರೀ ಪಿ.ಆರ್. ಪಂಚಮುಖಿ ಈ ಮಹನೀಯರು ಮಂಡಲದ **ಕಾರ್ಯಾಧ್ಯಕ್ಷರಾಗಿಯೂ;** ಶ್ರೀ ರುಕ್ಮಾಂಗದರಾವ ದೇಶಪಾಂಡೆ, ಶ್ರೀ ರಂಗರಾವ ಕೃಷ್ಣ ಅಸುಂಡಿ, ಶ್ರೀ ಸಾಲಿ ರಾಮಚಂದ್ರರಾವ, ಶ್ರೀ ದತ್ತಾತ್ರೇಯ ಕರಮರಕರ, ಶ್ರೀ ಎ.ಟಿ. ಸಾಸನೂರ, ಶ್ರೀ ನಾ.ಶ್ರೀ ಕಮಲಾಪುರ, ಶ್ರೀ ಪಿ.ಬಿ. ದೇಸಾಯಿ ಶ್ರೀ ಸಿ.ಡಿ. ದೇಶಪಾಂಡೆ, ಶ್ರೀ ವ್ಹಿ.ಆರ್. ಮುಧೋಳಕರ, ಶ್ರೀ ವ್ಹಿ.ಬಿ. ನಾಯಕ, ಶ್ರೀ ಯು.ಬಿ. ಬೀಡಿ, ಶ್ರೀ ಪಿ.ಆರ್. ಪಂಚಮುಖಿ, ಶ್ರೀ ಕೆ.ಎಸ್. ಉಪಾಧ್ಯೆ, ಶ್ರೀ ಜೆ.ಎಸ್. ಹಾವನೂರ, ಶ್ರೀ ಜಿ.ಜಿ. ನಾಡಗೀರ, ಶ್ರೀ ಎ.ಆರ್. ಪಂಚಮುಖಿ, ಶ್ರೀ ವ್ಹಿ. ಬಿ. ಅಣ್ಣಿಗೇರಿ ಇವರು ಮಂಡಲದ **ಕಾರ್ಯದರ್ಶಿಗಳಾಗಿಯೂ;** ಶ್ರೀ ಡಿ.ಪಿ. ಪತ್ರಾವಳಿ, ಶ್ರೀ ಜಿ.ಎಸ್. ಕುಲಕರ್ಣಿ, ಶ್ರೀ ಆರ್. ಬಿ. ಹಾವನೂರ್, ಶ್ರೀ ಎ.ಎಸ್. ರಾಯಚೂರು ಮೊದಲಾದವರು **ಖಜಾಂಚಿಗಳಾಗಿಯೂ,** ಶ್ರೀ ಆಲೂರು ವೆಂಕಟರಾವ, ಡಾ. ಎಸ್. ಸಿ. ನಂದೀಮಠ, ಡಾ. ಬಿ.ಎ. ಸಾಲೇತೊರೆ, ಶ್ರೀ ನಾ.ಶ್ರೀ. ಕಮಲಾಪೂರ, ಶ್ರೀ ರಾ. ಸ್ವಾ. ಪಂಚಮುಖಿ, ಡಾ. ವ್ಹಿ. ಆರ್. ಉಮರ್ಜಿ, ಡಾ. ಪಿ. ಆರ್. ಪಂಚಮುಖಿ, ಡಾ. ಎ. ಕೆ. ಶಾಸ್ತ್ರಿ ಮೊದಲಾದವರು ಕರ್ನಾಟಕ ಹಿಸ್ಟೋರಿಕಲ್ ರಿವ್ಯೂದ **ಸಂಪಾದಕರಾಗಿಯೂ** ಕರ್ನಾಟಕ ಇತಿಹಾಸ ಸಂಶೋಧನ ಮಂಡಲದಲ್ಲಿ ಸೇವೆ ಸಲ್ಲಿಸಿದ್ದಾರೆ.

ಈ ಎಲ್ಲ ಮಹನೀಯರಿಗೆ, ಮಂಡಲದ ಅಂದಿನ ಇಂದಿನ ಎಲ್ಲ ಅಧ್ಯಕ್ಷ-ಉಪಾಧ್ಯಕ್ಷರಿಗೆ, ಕಾರ್ಯಕಾರಿಣೀ ಸಭೆಯ ಸದಸ್ಯರಿಗೆ ಹಾಗೂ ಎಲ್ಲ ಸದಸ್ಯರಿಗೆ ಸುವರ್ಣ ಕರ್ನಾಟಕದ ಸುವರ್ಣ ಮಹೋತ್ಸವದ ಈ ಶುಭಸಂದರ್ಭದಲ್ಲಿ ಅವರು

ಸಲ್ಲಿಸಿರುವ ಹಾಗೂ ಸಲ್ಲಿಸುತ್ತಿರುವ ಸೇವೆಯನ್ನು ಗಮನಿಸಿ ಕೃತಜ್ಞತಾಭಾವ ಪೂರ್ವಕ ನಮನಗಳನ್ನು ಸಲ್ಲಿಸುತ್ತೇವೆ. ಈ ಮಹನೀಯರು ಈ ಸಂಸ್ಥೆಯನ್ನು ಎಂಥ ಅಡೆತಡೆ, ತೊಂದರೆಗಳು ಬಂದರೂ ಸಂರಕ್ಷಿಸಿ ಬೆಳೆಸಿದ್ದಾರೆ. ಸಂಶೋಧನಾ ಪ್ರಪಂಚದಲ್ಲಿ ಇದಕ್ಕೊಂದು ವಿಶಿಷ್ಟ ಸ್ಥಾನವನ್ನು ಕಲ್ಪಿಸುವ ಮೂಲಕ ಅನೇಕರಿಗೆ ಆಶ್ರಯಸ್ಥಾನರಾಗಿದ್ದಾರೆ. ಇದೇ ಸುಅವಸರದಲ್ಲಿ ಮಂಡಲದ ಉತ್ಕರ್ಷವನ್ನು ಬಯಸಿ ಕಾಲಕಾಲಕ್ಕೆ ಪ್ರೋತ್ಸಾಹಿಸಿದ ಹಾಗೂ ಪ್ರೋತ್ಸಾಹಿಸುತ್ತಿರುವ ಎಲ್ಲ ಕನ್ನಡಾಭಿಮಾನಿಗಳಿಗೆ ಮಂಡಲದ ಈಗಿನ ಎಲ್ಲ ಪದಾಧಿಕಾರಿಗಳೂ ಸದಸ್ಯರೂ ಆದ ನಾವೆಲ್ಲ ಮನಃಪೂರ್ವಕ ವಂದನೆಗಳನ್ನು ಸಮರ್ಪಿಸಲು ಬಯಸುತ್ತೇವೆ.

೧೨. ಸುವರ್ಣ ಕರ್ನಾಟಕದ ಸುವರ್ಣ ಮಹೋತ್ಸವ

ಕನ್ನಡಾಭಿಮಾನಿಗಳೇ! ಮಂಡಲದ ಹಿತೈಷಿಗಳೇ! ಕರ್ನಾಟಕ ರಾಜ್ಯವು ಉದಯವಾಗಿ ೫೦ ವರ್ಷಗಳಾದ ಪ್ರಯುಕ್ತ ಕನ್ನಡಿಗರೆಲ್ಲರೂ ಈ ವರ್ಷವನ್ನು ವಿಶೇಷೋತ್ಸಾಹದಿಂದ ಆಚರಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧನ ಮಂಡಲವು ಕರ್ನಾಟಕದ ಸುವರ್ಣ ಮಹೋತ್ಸವವನ್ನು ಒಂದು ವಿಶಿಷ್ಟ ರೀತಿಯಿಂದ ಆಚರಿಸಲು ಮುಂದಾಗಿದೆ. ಮಂಡಲವು ಈ ವರ್ಷದಲ್ಲಿ ನಡೆಸಲು ವಿಶೇಷೋಪನ್ಯಾಸಗಳು, ವಿಸ್ತರಣೋಪನ್ಯಾಸಗಳು, ಗ್ರಂಥಪ್ರಕಾಶನ, ವಿಚಾರಸಂಕಿರಣ, ಡಿಪ್ಲೋಮಾ ಕೋರ್ಸ್‌ಗಳು ಮುಂತಾದ ಹಲವು ಯೋಜನೆಗಳನ್ನು ಹಾಕಿಕೊಂಡು ಕಾರ್ಯಪ್ರವೃತ್ತವಾಗಿದೆ. ಕರ್ನಾಟಕದ ಗತವೈಭವವನ್ನು ಈಗಿನ ಸಮಾಜಕ್ಕೆ ತಿಳಿಸಿ ಜನಜಾಗೃತಿ ಮಾಡುವ ಉದ್ದೇಶದಿಂದ ಹಮ್ಮಿಕೊಂಡಿರುವ ಈ ಯೋಜನೆಗಳ ಅಂಗವಾಗಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ೫೦ ಗ್ರಂಥಗಳನ್ನು ಪ್ರಕಾಶಪಡಿಸಲು ವಿದ್ವಾಂಸರಿಂದ ಕೃತಿಗಳನ್ನು ಆಹ್ವಾನಿಸಲಾಗಿತ್ತು. ನಮ್ಮ ಈ ಆಹ್ವಾನಕ್ಕೆ ಸ್ಪಂದಿಸಿ ವಿದ್ವಾಂಸರು ಕಳಿಸಿಕೊಟ್ಟ ಕೃತಿಗಳಲ್ಲಿ ಈಗ ಕರ್ನಾಟಕದ ಸುವರ್ಣ ಮಹೋತ್ಸವದ ಸವಿನೆನಪಿಗಾಗಿ ೫೦ ಕೃತಿಗಳನ್ನು ಪ್ರಕಾಶಪಡಿಸಲಾಗುತ್ತಿದೆ (ಅವುಗಳ ವಿವರವನ್ನು ಪ್ರತ್ಯೇಕ ಪುಟಗಳಲ್ಲಿ ಕಾಣಿಸಲಾಗಿದೆ).

ಕರ್ನಾಟಕದ ಇತಿಹಾಸ, ಸಂಸ್ಕೃತಿ, ಕಲೆ, ಸಾಹಿತ್ಯ ಇವೇ ಮೊದಲಾದ ವಿಷಯಗಳಲ್ಲಿ ಆಳವಾಗಿ ಅಧ್ಯಯನ ಮಾಡಿದ ಕರ್ನಾಟಕದ ವಿವಿಧ ವಿದ್ವಾಂಸರು ಕನ್ನಡದಲ್ಲಿ ಬರೆದ ಕೃತಿಗಳಿವು. ಈ ಕೃತಿಗಳು ನಮ್ಮ ಕರ್ನಾಟಕದ ಅಪೂರ್ವವಾದ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ, ಕರ್ನಾಟಕದ ಗತ ವೈಭವವನ್ನು ತಿಳಿಸಿ ಕನ್ನಡಿಗರಲ್ಲಿ ಸ್ವಾಭಿಮಾನವನ್ನು ಜಾಗೃತಗೊಳಿಸುತ್ತವೆ, ಭಾರತದೇಶದ ಇತರ ರಾಜ್ಯಗಳ ನಿವಾಸಿಗಳಲ್ಲಿ ಕನ್ನಡಿಗರ ಮೇಲಿನ ಗೌರವವನ್ನು ಹೆಚ್ಚಿಸುತ್ತವೆ. ಇವುಗಳ ಪ್ರಕಾಶನದಿಂದ ಸಂಶೋಧಕ ವಿದ್ವಾಂಸರಿಗೂ, ವಿದ್ಯಾರ್ಥಿಗಳಿಗೂ ಅನೇಕ ಉಪಯುಕ್ತ ಮಾಹಿತಿಗಳನ್ನೊದಗಿಸಿ ಹೆಚ್ಚಿನ ಸಂಶೋಧನೆಗೆ ಅನುವು ಮಾಡಿಕೊಟ್ಟಂತಾಗುತ್ತದೆ. ಈ ಕೃತಿಗಳಲ್ಲದೇ ಕರ್ನಾಟಕದಲ್ಲಿ ಅತ್ಯಮೂಲ್ಯವಾದ ವಿಷಯಗಳನ್ನೊಳಗೊಂಡ ಅನೇಕ ಕೃತಿಗಳು ಇನ್ನೂ ಹಸ್ತಪ್ರತಿ ರೂಪದಲ್ಲಿದ್ದು, ಬೆಳಕು ಕಾಣದಾಗಿವೆ. ಕೆಲವು ಕೃತಿಗಳು ಮುದ್ರಿತವಾಗಿದ್ದರೂ ಈಗ ಅವಲೋಕನೆಗೆ ದೊರೆಯದಂತಾಗಿವೆ. ಇಂಥ ಅಮೂಲ್ಯ ಕೃತಿಗಳು ನಾಶವಾಗುವ ಮೊದಲೇ ಅವುಗಳನ್ನು ಪ್ರಕಾಶಕ್ಕೆ ತರುವುದು ಕನ್ನಡಿಗರಾದ ನಮ್ಮೆಲ್ಲರ

ಕರ್ತವ್ಯವಾಗಿದೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈಗ ಮಂಡಲದಿಂದ ಪ್ರಕಟವಾಗುತ್ತಿರುವ ಈ ೫೦ ಕೃತಿಗಳಲ್ಲದೇ ಈ ಸಂದರ್ಭದಲ್ಲಿ ಪ್ರಸಿದ್ಧ ವಿದ್ವನ್ಮಣಿಗಳಿಂದ ಬರೆಯಲ್ಪಟ್ಟ ಇಂಗ್ಲೀಷ ಹಾಗೂ ಕನ್ನಡ ಲೇಖನಗಳಿಂದ ಕೂಡಿದ ಒಂದು ಬೃಹತ್ ಸ್ಮರಣ ಸಂಪುಟವನ್ನೂ ಪ್ರಕಾಶಪಡಿಸಲಾಗುತ್ತಿದೆ.

ಈ ಕೃತಿಗಳಲ್ಲಿ ಐದಾರು ಕೃತಿಗಳು ಈ ಮೊದಲೇ ಬಹು ವರ್ಷಗಳ ಹಿಂದೆ ಮಂಡಲದಿಂದ ಪ್ರಕಾಶಿತವಾಗಿದ್ದರೂ ಈಗ ಅನುಪಲಬ್ಧವಾಗಿರುವ ಅವುಗಳನ್ನು ಪುನರ್ಮುದ್ರಿಸಬೇಕೆಂದು ಬಹುಜನರ ಬೇಡಿಕೆ ಇದ್ದುದರಿಂದ ಈ ಶುಭಾವಸರದ ಪ್ರಕಟಣೆ ಮಾಲೆಯಲ್ಲಿ ಅವುಗಳನ್ನು ಸೇರಿಸಿಕೊಳ್ಳಲಾಗಿದೆ.

ಈ ಎಲ್ಲ ಕೃತಿಗಳ ಲೇಖಕರು ಹಾಗೂ ಸಂಪಾದಕರು, ಇವುಗಳನ್ನು ಗಣಕ ಯಂತ್ರದ ಸಹಾಯದಿಂದ ಮುದ್ರಣಕ್ಕೆ ಸಿದ್ಧಪಡಿಸಿಕೊಟ್ಟ ಕುಶಲ ಯಾಂತ್ರಿಕರು, ಪ್ರೂಫ ನೋಡುವಲ್ಲಿ ಸಹಕರಿಸಿದ ಕಾರ್ಯಕರ್ತರು ಮತ್ತು ಚೆನ್ನಾಗಿ ಮುದ್ರಿಸಿ ಪುಸ್ತಕ ರೂಪಕ್ಕೆ ತಂದುಕೊಟ್ಟ ಮುದ್ರಣಾಲಯದ ಅಧಿಕಾರಿಗಳು ಹಾಗೂ ಎಲ್ಲ ಕರ್ಮಚಾರಿಗಳು ಇವರೆಲ್ಲರ ಸಹಾಯ ಸಹಕಾರಗಳನ್ನು ಮಂಡಲವು ಕೃತಜ್ಞತೆಯಿಂದ ಸ್ಮರಿಸುತ್ತದೆ. ಕೆಲವು ಗ್ರಂಥಗಳ ಮೊದಲಿನ ಪ್ರೂಫುಗಳನ್ನು ಮಂಡಲದ ಕಾರ್ಯಕರ್ತರು ತಿದ್ದಿದ ನಂತರ ಕೊನೆಯ ಪ್ರೂಫನ್ನು ಆಯಾ ಗ್ರಂಥದ ಲೇಖಕರೇ ತಿದ್ದಿ ಸಹಕರಿಸಿದ್ದಾರೆ. ಈ ಎಲ್ಲ ಲೇಖಕರಿಗೆ / ಸಂಪಾದಕರಿಗೆ ವಿಶೇಷ ಕೃತಜ್ಞತೆಗಳು. ಈ ಗ್ರಂಥಗಳ ಸಂಪಾದನೆಯ ಕಾರ್ಯದಲ್ಲಿ ಅಮೂಲ್ಯ ಸಲಹೆಗಳನ್ನಿತ್ತು ಸಹಕರಿಸಿದ ಸಲಹಾ ಮಂಡಳಿಯ ಖ್ಯಾತನಾಮರಾದ ವಿದ್ವಾಂಸರಿಗೆ ಗೌರವಪೂರ್ವಕ ವಂದನೆಗಳು.

ಈಗ ಪ್ರಕಟಿಸಲಾಗುತ್ತಿರುವ ಗ್ರಂಥಗಳಲ್ಲಿಯ ಎಲ್ಲ ವಿಷಯಗಳು ಆಯಾ ಗ್ರಂಥದ ಲೇಖಕರು / ಸಂಪಾದಕರು ತಮಗೆ ಉಪಲಬ್ಧವಾದ ದಾಖಲೆಗಳೊಂದಿಗೆ ಮಂಡಿಸಿದ ಸ್ವಂತ ವಿಚಾರಗಳಿಂದ ಹೊರಹೊಮ್ಮಿದವುಗಳಾಗಿವೆ. ಏನಾದರೂ ವಿವಾದಾತ್ಮಕ ವಿಷಯಗಳು ಕಂಡುಬಂದರೆ ಅವುಗಳಿಗೆ ಮಂಡಲವು ಹೊಣೆಗಾರವಲ್ಲವೆಂದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬಯಸುತ್ತೇನೆ.

ಕರ್ನಾಟಕ ಇತಿಹಾಸ ಸಂಶೋಧನ ಮಂಡಲವು ಎಲೆಮರೆಯ ಕಾಯಿಯಂತಿದ್ದು ಅವಾಸ್ತವ ಪ್ರಚಾರ- ಖ್ಯಾತಿಗಳನ್ನು ಬಯಸದೇ ತನ್ನ ಅನಿಯಮಿತ ಹಾಗೂ ಮಿತವಾದ ಆದಾಯದಲ್ಲೇ ಉಪನ್ಯಾಸ, ವಿಚಾರ ಸಂಕಿರಣ, ಹಸ್ತ ಪ್ರತಿಗಳ ಸಂಶೋಧನೆ, ಗ್ರಂಥ ಪ್ರಕಾಶನ ಇವೇ ಮೊದಲಾದ ಮಾಧ್ಯಮಗಳ ಮೂಲಕ ಕರ್ನಾಟಕ ಮಾತೆಯ ನಿಷ್ಕಾಮ ಸೇವೆಯನ್ನು ಕರ್ತವ್ಯಭಾವನೆಯಿಂದ ಮಾಡುತ್ತ ಆಗಾಗ ಎದುರಾಗುತ್ತಿರುವ ತೊಂದರೆಗಳನ್ನು ಲೆಕ್ಕಿಸದೇ ಮುನ್ನಡೆದಿದೆ.

"ಸಂಸ್ಕೃತ - ಸಂಸ್ಕೃತಿಸೇವೆ - ಪ್ರಸಾರದಲ್ಲಿ, ಕರ್ನಾಟಕದಲ್ಲಿ ಮುಂಚೂಣಿಯಲ್ಲಿರುವ, ಶತಮಾನದ ಸಂಭ್ರಮದಲ್ಲಿರುವ ಮಾದರಿ ಸಂಸ್ಥೆ" ಎಂದು ಈ ಮಂಡಲವನ್ನು ಶ್ಲಾಘಿಸುತ್ತ ಇದರ ಅದ್ಭುತ ಸಾಧನೆಗಾಗಿ ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿಗಳು ದಿ. ೩೦-೮-೨೦೦೭ ರಂದು ಶ್ರೀರಾಯರ ಆರಾಧನಾ ಶುಭಸಂದರ್ಭದಲ್ಲಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಲಕ್ಕೆ **ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿ** ಹಾಗೂ ೧ ಲಕ್ಷ ರೂ. ಪ್ರೋತ್ಸಾಹದೊಂದಿಗೆ ಫಲಮಂತ್ರಾಕ್ಷತೆಯನ್ನಿತ್ತು ಅನುಗ್ರಹಿಸಿದ್ದಾರೆಂದು ತಿಳಿಸಲು ಹರ್ಷವಾಗುತ್ತದೆ.

ಸುವರ್ಣ ಮಹೋತ್ಸವದ ಪ್ರಕಟಣೆಗಳಿಗೆ ಕರ್ನಾಟಕ ಸರಕಾರವು ಆಂಶಿಕ ಅನುದಾನವನ್ನಿತ್ತ ಕಾರಣಕ್ಕಾಗಿ ಸರಕಾರದ ಸಂಬಂಧಿಸಿದ ಎಲ್ಲ ಅಧಿಕಾರಿಗಳನ್ನು ಮಂಡಲವು ಕೃತಜ್ಞತೆಯಿಂದ ಸ್ಮರಿಸುತ್ತದೆ.

ಸುವರ್ಣ ಕರ್ನಾಟಕದ ಸುವರ್ಣ ಮಹೋತ್ಸವದ ಅವಿಸ್ಮರಣೀಯವಾದ ಈ ಶುಭಾವಸರದಲ್ಲಿ ಕರ್ನಾಟಕದ ವಿದ್ವಾಂಸರು ತಂದು ಕೊಟ್ಟ ಗ್ರಂಥರೂಪದಲ್ಲಿರುವ ೫೦ ಪುಷ್ಪಗಳನ್ನು ಸೇರಿಸಿ ಸಿದ್ಧಪಡಿಸಲಾದ ಗ್ರಂಥಮಾಲೆಯನ್ನು ಕರ್ನಾಟಕ ಮಾತೆಯ ಅಡಿದಾವರೆಗಳಲ್ಲಿ ಸಮರ್ಪಿಸುತ್ತ ಮಂಡಲವು ಕೃತಕೃತ್ಯ ಭಾವವನ್ನು ಹೊಂದುತ್ತಿದೆ. ಜನೋಪಯೋಗಿಯಾದ ಇಂಥ ಸತ್ಕಾರ್ಯಗಳು ಮಂಡಲದಿಂದ ನಿರಂತರ ನಡೆಯುತ್ತಿರುವಂತೆ ಎಲ್ಲ ಹಿರಿಯರ ಆಶೀರ್ವಾದ ಹಾಗೂ ಕನ್ನಡಾಭಿಮಾನಿಗಳಾದ ತಮ್ಮೆಲ್ಲರ ಸದಿಚ್ಛೆ-ಪ್ರೋತ್ಸಾಹಗಳು ನಮ್ಮೊಂದಿಗೆ ಸದಾಕಾಲ ಇರಲಿ ಎಂದು ಪ್ರಾರ್ಥಿಸುತ್ತೇನೆ.

ವಿಜಯದಶಮೀ
ಗುರುವಾರ
೦೯-೧೦-೨೦೦೮

ಆ. ರಾ. ಪಂಚಮುಖಿ,
ಕಾರ್ಯಾಧ್ಯಕ್ಷ ಕ. ಇ. ಸಂ. ಮಂಡಲ,
ಮತ್ತು ಕಾರ್ಯನಿರ್ವಾಹಕ ಸಂಪಾದಕ
ಧಾರವಾಡ

ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ – ೦೧

ಕರ್ನಾಟಕ ಸುವರ್ಣ ಮಹೋತ್ಸವ ಗ್ರಂಥಮಾಲೆಯ ೫೦ ಕೃತಿಗಳು

I. ಇತಿಹಾಸ

ಕ್ರ. ಸಂ.	ಗ್ರಂಥದ ಹೆಸರು	ಲೇಖಕರ ಹೆಸರು
೧.	ಕರ್ನಾಟಕದ ಅರಸು ಮನೆತನಗಳು	ಶ್ರೀ ಎನ್. ಲಕ್ಷ್ಮೀನಾರಾಯಣ ಮತ್ತು ವಿದ್ಯಾರತ್ನ ಶ್ರೀ ಆರ್.ಎಸ್. ಪಂಚಮುಖಿ
೨.	ಕನ್ನಡ ನಾಡಿನ ಕಥೆಗಳು	ಶ್ರೀ ನಾರಾಯಣ ಶರ್ಮ
೩.	ಕನ್ನಡ ನಾಡಿನ ಮಿಂಚಿದ ಮಹಿಳೆಯರು	ಡಾ॥ ಪಾಂಡುರಂಗರಾವ ದೇಸಾಯಿ
೪.	ಕರ್ನಾಟಕದ ಪ್ರಾಕೃತ ಕವಿಚರಿತೆ	ಡಾ॥ ವ್ಹಿ.ಆರ್. ಉಮರ್ಜಿ
೫.	ಕರ್ನಾಟಕದ ಇತಿಹಾಸ	ವಿದ್ಯಾರತ್ನ ಶ್ರೀ ಆರ್.ಎಸ್. ಪಂಚಮುಖಿ
೬.	ಶಿಸುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು	ಡಾ॥ ಗಣಪತಿ ಗೌಡ
೭.	ಬಳ್ಳಾರಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ	ಶ್ರೀ ವಾಯ್. ಹನುಮಂತ ರೆಡ್ಡಿ
೮.	ಗತಕಾಲದ ಧಾರವಾಡ	ಪ್ರೊ. ಎನ್. ಎಚ್. ಕಟಗೇರಿ
೯.	ಯುದ್ಧಮಂಡಲಮಧ್ಯದೊಳಗೆ......	ಶ್ರೀ ಅತ್ತಿಮುರುಡು ವಿಶ್ವೇಶ್ವರ
೧೦.	ವಕೀಲ ರಾಮಪ್ಪನ ಕೈಫಿಯತ್ತು	ಡಾ॥ ಎಚ್.ಎಸ್. ಗೋಪಾಲರಾವ
೧೧.	ಕರ್ನಾಟಕದ ಕೋಟೆ ಕೊತ್ತಲಗಳು ಭಾಗ–೧	ಡಾ॥ ಎಸ್.ಕೆ. ಜೋಶಿ
೧೨.	ವಿಜಯ ನಗರ ಸಾಮ್ರಾಜ್ಯ	ಡಾ॥ ಪಿ.ಬಿ. ದೇಸಾಯಿ

II. ಶಾಸನ

ಕ್ರ. ಸಂ.	ಗ್ರಂಥದ ಹೆಸರು	ಲೇಖಕರ ಹೆಸರು
೧೩	ಶಾಸನ ಸರಸ್ವತಿ	ಡಾ ॥ ಕೆ. ಆರ್. ಗಣೇಶ
೧೪	ಕದಂಬರ ಅರತಲೆಗಡ್ಡೆಯ ಅಪೂರ್ವ ತಾಮ್ರಶಾಸನ ಭಂಡಾರ	ಡಾ॥ ಜಗದೀಶ, ಡಾ. ಸಾಮಗ, ಡಾ॥ ಎಮ್.ವ್ಹಿ. ರಮೇಶ ಜೋಯಿಸ್
೧೫	ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ	ಡಾ॥ ಎಚ್. ಜಯಮ್ಮ
೧೬	ಹಂಪೆಯ ಶಾಸನಗಳು	ಡಾ॥ ಜಿ.ಎಸ್. ಭಗವತಿ
೧೭	ಕರ್ನಾಟಕ ಶಾಸನೋಕ್ತ ಮಹಿಳೆ : ಸಮೀಕ್ಷೆ–ಸಂಸ್ಕೃತಿ	ಡಾ॥ ಚೆನ್ನಕ್ಕ ಪಾವಟೆ
೧೮	ಕರ್ನಾಟಕ ಶಾಸನಗಳಲ್ಲಿ ಶಾಪಾಶಯ	ಡಾ॥ ದೇವರಕೊಂಡಾರೆಡ್ಡಿ

III. ಸಂಸ್ಕೃತಿ, ಧರ್ಮ, ಕಲೆ

೧೯ ಸಂಗಮರ ದೇವಾಲಯಗಳು — ಡಾ॥ ಸಿ. ಎಸ್. ಪಾಟೀಲ

೨೦ ಕರ್ನಾಟಕದ ದೇವಾಲಯಗಳಲ್ಲಿ ರಂಗಭೋಗ (ನೃತ್ಯ) — ಡಾ॥ ಕರುಣಾ ವಿಜಯೇಂದ್ರ

೨೧ ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು — ಡಾ॥ ಡಿ. ಜಿ. ಕುಲಕರ್ಣಿ

೨೨ ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ — ಡಾ॥ ಎಮ್. ಎನ್. ಕಡಪಟ್ಟಿ

೨೩ ಕಿಟೆಲ್ಲ ಕೋಶ – ಸಾಂಸ್ಕೃತಿಕ ಅಧ್ಯಯನ — ಡಾ. ಸುಧಾ ಎಸ್. ಕೌಜಗೇರಿ

೨೪ ಕರ್ನಾಟಕದ ಶೈವ ಶಿಲ್ಪಗಳು — ಡಾ॥ ಕೆ. ವಸಂತಲಕ್ಷ್ಮೀ

IV. ಕಲಾ ಪರಂಪರೆ

೨೫ ಬಾದಾಮಿಯ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ — ಡಾ॥ ಶ್ರೀನಿವಾಸ ವೆಂ. ಪಾಡಿಗಾರ

೨೬ ಪಟ್ಟದಕಲ್ಲು ದರ್ಶನ — ಡಾ॥ ಶೀಲಾಕಾಂತ ಪತ್ತಾರ

೨೭ ಉತ್ತರ ಕರ್ನಾಟಕದ ಪ್ರಾಚೀನ ಚಿತ್ತಾರಗಳು — ಶ್ರೀ ಎಮ್. ಎಮ್. ಜಗತಾಪ

೨೮ ಕರ್ನಾಟಕದ ಯಕ್ಷಗಾನ ಕಲಾಲೋಕ — ಶ್ರೀ ಜಿ. ಆರ್. ಪಾಂಡೇಶ್ವರ

೨೯ ಕನ್ನಡ ಯಕ್ಷಗಾನ ಮತ್ತು ಸಂಸ್ಕೃತದ ಕೂಟಿಯಟ್ಟಂ – ತೌಲನಿಕ ಅಧ್ಯಯನ — ಡಾ॥ ಜಿ. ಎಸ್. ಹೆಗಡೆ

V. ವಿವಿಧ ವಿಷಯಗಳ ಮೇಲಿನ ಕೃತಿಗಳು

೩೦ ಶ್ರೀಧರಾಚಾರ್ಯ ವಿರಚಿತ ತ್ರಿಶತಿಕಾ ಅಥವಾ ಪಾಟೀಗಣಿತಸಾರ — ಡಾ॥ ವೇಣುಗೋಪಾಲ ಹೆರೂರ

೩೧ ಭಾಸ್ಕರಾಚಾರ್ಯ ವಿರಚಿತ ಜ್ಯೋತ್ಪತ್ತಿ — ಡಾ॥ ವೇಣುಗೋಪಾಲ ಹೆರೂರ

೩೨ ಕನ್ನಡದ ಹಳಮೆ ಮತ್ತು ಇತರ ಸಂಪ್ರಬಂಧಗಳು — ಡಾ॥ ಶಾಲಿನಿ ರಘುನಾಥ ಭಟ್ಟ

೩೩ ಕನ್ನಡದಲ್ಲಿ ಮಹಾಭಾರತಗಳು ಮತ್ತು ಕುಮಾರವ್ಯಾಸ ಭಾರತ ನಿಘಂಟು — ಡಾ॥ ಎನ್ಕೆ. ಕುಲಕರ್ಣಿ

೩೪ ಕರ್ನಾಟಕದ ಸ್ಥಳನಾಮಗಳು -ಒಂದು ಅಧ್ಯಯನ — ಶ್ರೀ ಎಸ್.ಎಲ್. ದೇಶಪಾಂಡೆ

೩೫ ನಾ ಕಂಡ ಕರ್ನಾಟಕ	ಡಾ॥ ಕೃಷ್ಣಾನಂದ ಕಾಮತ
೩೬ ಕರುನಾಡಿನ ಜನಜೀವನ	ಡಾ॥ ಜ್ಯೋತ್ಸ್ನಾ ಕಾಮತ
೩೭ ಸುವರ್ಣ ಕರ್ನಾಟಕ	ಡಾ॥ ಅರಳುಮಲ್ಲಿಗೆ ಪಾರ್ಥಸಾರಥಿ
೩೮ i) ನಾಡು ಕಟ್ಟಿದವರು (ರೂಪಕ)	ಶ್ರೀ ಸಂಜೀವ ವ್ಹಿ. ಬೆಟಗೇರಿ
ii) ಹಂಪೆ–ರಾಮಾಯಣದ ಕಿಷ್ಕಿಂಧೆಯೆ?	ಡಾ॥ ಅ. ಸುಂದರ
೩೯ ಕೈಗನ್ನಡಿಯಲ್ಲಿ ಕನ್ನಡಿತಿ	ಡಾ॥ ಜ್ಯೋತ್ಸ್ನಾ ಕಾಮತ
೪೦ ಆಲೂರು ವೆಂಕಟರಾವ : ವ್ಯಕ್ತಿ ಮತ್ತು ಸಾಧನೆ	ಡಾ॥ ವಿ.ಎಸ್. ಆರಾಧ್ಯಮಠ
೪೧ ಕರ್ನಾಟಕದ ಐತಿಹಾಸಿಕ ಮತ್ತು ಪ್ರೇಕ್ಷಣೀಯ ಸ್ಥಳಗಳು	ಪ್ರೊ. ರಾಜೇಶ ಚಿಟಗುಪ್ಪಿ

VI. ಜಾನಪದ ಸಾಹಿತ್ಯ

೪೨ ಕರ್ನಾಟಕದ ಉರುಸುಗಳು	ಡಾ॥ ಇಬ್ರಾಹಿಂ ಎಂ. ಮುಲ್ಲಾ
೪೩ ಉತ್ತರ ಕರ್ನಾಟಕದ ಜನಪದ ಸೋಗುಗಳು	ಡಾ॥ ಎಸ್.ಆರ್. ರಾಮರಥ
೪೪ ಮಹಿಳಾ ಜಾನಪದ	ಡಾ॥ ಶಾಲಿನಿ ಭಟ್ಟ ಮತ್ತು ಡಾ॥ ಇಮ್ರಾಪುರ

VII. ಶಿವಶರಣರು ಮತ್ತು ವಚನ ಸಾಹಿತ್ಯ

೪೫ ಶರಣ ಸಂಚಯ	ಡಾ॥ ವೀರಣ್ಣ ರಾಜೂರ
೪೬ ಶರಣರ ವಿಚಾರಕ್ರಾಂತಿ	ಪ್ರೊ.ಎಸ್.ಉಮಾಪತಿ
೪೭ ನಿಜಗುಣಶಿವಯೋಗಿಗಳು : ಜೀವನ–ಸಾಧನೆ	ಡಾ॥ ಎಸ್. ಎಸ್. ಬಸುಪಟ್ಟದ
೪೮ ವೀರಶೈವ ತಾರಾವಳಿ ಸಾಹಿತ್ಯ	ಡಾ ॥ ವೀರಣ್ಣ ರಾಜೂರ

VIII. ದಾಸ ಸಾಹಿತ್ಯ

೪೯ ಕರ್ನಾಟಕದ ಹರಿದಾಸ ಸಂಚಯ ಮತ್ತು ಸಾಹಿತ್ಯ ಚಿಂತನೆ	ಡಾ॥ ಅರಳುಮಲ್ಲಿಗೆ ಪಾರ್ಥಸಾರಥಿ
೫೦ ಕರ್ನಾಟಕದ ಹರಿದಾಸ ಸಾಹಿತ್ಯ	ವಿದ್ಯಾರತ್ನ ರಾ.ಸ್ವಾ. ಪಂಚಮುಖಿ

******

ಪ್ರಸ್ತಾವನೆ

(ದಿ) ಕೃಷ್ಣಾನಂತ ಕಾಮತರ (೧೯೩೪-೨೦೦೨) ಪ್ರತಿಭೆ ಬಹುಮುಖವಾದದ್ದು. ಮೂಲತಃ ಅವರು ವಿಜ್ಞಾನದ ವಿದ್ಯಾರ್ಥಿ. ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಾಣಿಶಾಸ್ತ್ರದಲ್ಲಿ ಬಿ.ಎಸ್‌ಸಿ, ಕೀಟ ವಿಜ್ಞಾನದಲ್ಲಿ ಎಮ್.ಎಸ್‌ಸಿ ಮುಗಿಸಿ ನ್ಯೂಯಾರ್ಕ ವಿಶ್ವವಿದ್ಯಾಲಯದ ಪರಿಸರ ವಿಜ್ಞಾನದ ಖ್ಯಾತಿಯ ಸಿರೆಕ್ಯೂಸ್ ಕಾಲೇಜಿನಿಂದ ಡಾಕ್ಟರೇಟ್ ಪಡೆದವರು. ಚಿತ್ರಕಲೆ, ಛಾಯಾಚಿತ್ರಗ್ರಹಣವನ್ನು ಹಾಬಿಯಾಗಿ ಬೆಳೆಸಿಕೊಂಡವರು. ಆದರೆ ಹೆಸರು ಗಳಿಸಿದ್ದು ಕನ್ನಡ ಲೇಖಕರಾಗಿ. ಅವರ ಮೊಟ್ಟ ಮೊದಲ ಬರವಣಿಗೆ, ಪ್ರವಾಸಕಥನ 'ನಾನೂ ಅಮೇರಿಕೆಗೆ ಹೋಗಿದ್ದೆ', ಧಾರವಾಡದ ಮನೋಹರ ಗ್ರಂಥಮಾಲೆಯಿಂದ 1967ರಲ್ಲಿ ಪ್ರಕಟವಾಗಿ, ವರ್ಷದೊಳಗೇ ಮರುಮುದ್ರಣ ಕಾಣುವಷ್ಟು ಜನಪ್ರಿಯವಾಯಿತು. ನಂತರ ಏಳು ಮುದ್ರಣಗಳನ್ನು ಕಂಡಿತು. ಆ ಬಳಿಕ ಪರಿಸರ, ಪಶು - ಪ್ರಾಣಿಜೀವನ, ಕಲೆ, ಪ್ರವಾಸ, ವೈಚಾರಿಕ ವಿಷಯಗಳ ಕುರಿತು ೨೨ ಪುಸ್ತಕಗಳನ್ನು ಬರೆದರು. ಕನ್ನಡ, ಇಂಗ್ಲೀಷ್ ಕೊಂಕಣಿ ಭಾಷೆಗಳಲ್ಲಿ ನೂರಾರು ಲೇಖಗಳು ಪ್ರಕಟವಾಗಿವೆ.

ಈಗಿನ ದಿನಗಳಲ್ಲಿ ಅರಣ್ಯನಾಶ ಹಾಗೂ ಕಲುಷಿತ ಪರಿಸರಗಳು ಜ್ವಲಂತ ಸಮಸ್ಯೆಗಳಾಗಿವೆ. ನಲವತ್ತೆರಡು ವರ್ಷಗಳ ಹಿಂದೆ ಜಗತ್ ಪ್ರಸಿದ್ಧವಾದ ಪರಿಸರವಿಜ್ಞಾನಕ್ಕೆ ಮೀಸಲಾದ ಸಂಸ್ಥೆಯಲ್ಲಿ ಪಿ.ಎಚ್.ಡಿ. ಮಾಡಿದ ವ್ಯಕ್ತಿಗೆ ಈ ದೇಶದಲ್ಲಿ ಒಂದು ಸಣ್ಣ ನೌಕರಿ ಸಿಗಲಿಲ್ಲ, ಅರ್ಜಿಗಳನ್ನು ಕರೆದ ಸುಮಾರು ಇಪ್ಪತ್ತು ಸಂಸ್ಥೆಗಳು, ವಿಶ್ವವಿದ್ಯಾಲಯ, ಸಂಶೋಧನಾಲಯಗಳು, ರೇಶ್ಮೆ, ಭತ್ತ, ಕಬ್ಬು ಮೊದಲಾದ ಸಂಶೋಧನಾ ಸಂಸ್ಥೆಗಳು, ಪ್ಲಾಂಟೇಶನ್‌ಗಳು, ಅರಣ್ಯ ಖಾತೆಯ ನೌಕರಿಗಳಿಗೆಲ್ಲ ಅರ್ಜಿ ಸಲ್ಲಿಸಿದರು. ಸಂದರ್ಶನಕ್ಕೆ ಕರೆದ ಸಂಸ್ಥೆಗಳೇ ಕಡಿಮೆ. ಕರೆದವುಗಳಲ್ಲಿ ಪ್ರಾದೇಶಿಕ ರಾಜಕಾರಣ ಜೋರಾಗಿತ್ತು. ಜಾತಿ-ರಾಜಕಾರಣ, ಕರ್ನಾಟಕದಲ್ಲಿ ಮಾತ್ರವಲ್ಲ. ದೇಶದ ಎಲ್ಲಾ ರಾಜ್ಯಗಳಲ್ಲೂ ಇದೆ ! ಎಂಬ ಕಠೋರ ಸತ್ಯವನ್ನು ಮನಗಾಣುವಂತೆ ಆಯಿತು.

ಡಾಕ್ಟರೇಟ್ ಜೊತೆಗೆ ಕಾಮತರು ಅಮೇರಿಕನ್ ಆರಣ್ಯಗಳ ಪರಿವೀಕ್ಷಣೆ ಮತ್ತು ಸಂರಕ್ಷಣಾ ಕ್ರಮಗಳ ಕುರಿತು ವಿಶೇಷ ತರಬೇತಿ ಪಡೆದಿದ್ದರು. ಅಮೇರಿಕನ್ ಸರಕಾರದ ಖರ್ಚಿನಲ್ಲಿ ೧೮ ರಾಜ್ಯಗಳ ಅರಣ್ಯಗಳನ್ನು ಹೆಲಿಕಾಪ್ಟರ್ ಮೂಲಕ ಅಲ್ಲಿಯ ಪರಿಣತರು ಹಾಗೂ ವಿಜ್ಞಾನಿಗಳ ಜೊತೆಗೆ ವೀಕ್ಷಿಸುವ, ಅವರಿಂದ ಸಲಹೆ-ಸೂಚನೆ ಪಡೆಯುವ ಸುಯೋಗ ಅವರದಾಗಿತ್ತು. ಅವರ ಪರಿಶ್ರಮ, ತರಬೇತಿಗಳ ಲಾಭವನ್ನು ಮಾಡಿಕೊಳ್ಳುವ ಅವಕಾಶ ಈ ನಾಡಿಗೆ ದೊರೆಯದೇ ಹೋಯಿತು! ಎಂಬುದರ ಕೊರಗು ಸದಾ ಬಾಧಿಸುತ್ತಿರುತ್ತದೆ.

ಆದರೆ ಕಾಮತರು ಅವರ ತರಬೇತಿಗೆ ಅನುಗುಣವಾದ ನೌಕರಿ ಎಲ್ಲೂ ಸಿಗದೇ ಹೋದದ್ದಕ್ಕೆ ವಿಚಲಿತರಾಗಲಿಲ್ಲ. ಪರಿಣತಿ, ಪರಿಶ್ರಮಗಳನ್ನು ಆದರಿಸಿ, ಕೈಬೀಸಿ ಕರೆಯುವ

ಅಮೇರಿಕೆಗೂ ತಿರುಗಿ ಹೋಗಲಿಲ್ಲ. frustration ಅಥವಾ ಆಶಾಭಂಗ ಎನ್ನುವ ಶಬ್ದ ಅವರ ಕೋಶದಲ್ಲಿ ಇರಲಿಲ್ಲ. ತನಗೇ ಹೊಸದಾಗಿದ್ದ, ವೈಜ್ಞಾನಿಕ ಹಿನ್ನೆಲೆ ಹಾಗೂ ವೈಯಕ್ತಿಕ ಆಸಕ್ತಿಗಳನ್ನು ಮೇಳವಾಗಿಸಿ, ವೈಜ್ಞಾನಿಕ ಛಾಯಾಗ್ರಹಣದ ಲ್ಯಾಬೋರೇಟರಿಯನ್ನು ಬೆಂಗಳೂರಿನ ಮಲ್ಲೇಶ್ವರಂ ದಲ್ಲಿ ತೆರೆದರು. ಸುಮಾರು ಮೂವತ್ತು ವರ್ಷಗಳ ಕಾಲ ಅದನ್ನು ನಡೆಸಿಕೊಂಡು ಬಂದರು. ಮನಸ್ಸು ಮಾಡಿದ್ದರೆ, ವ್ಯಾಪಾರೀ ದೃಷ್ಟಿಯಿಂದ ಅದನ್ನು ಬೆಳೆಸಲು ಸಾಧ್ಯವಿತ್ತು. ಹೋದ ಶತಮಾನದ ಎಪ್ಪತ್ತರ ದಶಕದಲ್ಲಿ, ಅಂಥ ಒಂದೂ ಖಾಸಗಿ ವೈಜ್ಞಾನಿಕ ಛಾಯಾಗ್ರಹಣದ ಪ್ರಯೋಗಾಲಯ, ವೈಜ್ಞಾನಿಕ ಸಂಸ್ಥೆಗಳಿಂದ ತುಂಬಿದ ಬೆಂಗಳೂರಿನಲ್ಲಿ ಆಗ ಅಸ್ತಿತ್ವದಲ್ಲಿ ಇರಲಿಲ್ಲ.

ಆದರೆ ಕಾಮತರು ನೆಚ್ಚಿಕೊಂಡದ್ದು ವೃತ್ತಿ ಸ್ವಾತಂತ್ರ್ಯವನ್ನು. ಧನಸಂಗ್ರಹವನ್ನಲ್ಲ. ಕ್ರಮೇಣ ಬೇರೆ ಬೇರೆ ಕೇಂದ್ರ ಹಾಗೂ ರಾಜ್ಯಗಳ ಬೆಂಗಳೂರು, ಮೈಸೂರು, ಚೆನ್ನೈ, ತಿರುಪತಿ ಮುಂತಾದವುಗಳ ಸಂಸ್ಥೆಗಳಿಂದ ಸಂಶೋಧಕರು, ವಿದ್ಯಾರ್ಥಿಗಳು, ಕಾಮತರ ಲ್ಯಾಬಿಗೆ ಬರಲಾರಂಭಿಸಿದರು. ಹೆಚ್ಚಿನವರಿಗೆ ಅವರ ಸ್ವಂತದ ವ್ಯಾಸಂಗದ ಸಂಸ್ಥೆಗಳಲ್ಲಿಯೇ ಇಂಥ ಸೇವೆ ಕೊಡುವ ಪ್ರಯೋಗಾಲಯಗಳು ಇದ್ದವು, ಎಂಬ ಮಾತನ್ನು ಮರೆಯುವಂತಿಲ್ಲ. ಆದರೆ ಕಾಮತರ ಏಕವ್ಯಕ್ತಿ ಸೇವೆಯ ಪುಟ್ಟ ಲ್ಯಾಬ್, ಸಂಶೋಧಕರಿಗೆ, ಮುಖ್ಯವಾಗಿ ವಿದ್ಯಾರ್ಥಿಗಳಿಗೆ, ಆಶ್ವಾಸನೆಯ, ನಂಬಿಗೆಯ ತಾಣವಾಗಿದ್ದು, ಹಲವಾರು ಬಾರಿ, ಅಮೇರಿಕೆಯಲ್ಲಿ ನೆಲೆಸಿದ್ದವರು ಮನೆಗೇ ಹುಡುಕಿಕೊಂಡು ಬರುತ್ತಿದ್ದುದ್ದು ನಮಗಿಬ್ಬರಿಗೂ ಸ್ವಾರಸ್ಯದ ವಿಷಯವಾಗಿತ್ತು. ವಿಜ್ಞಾನಿ ಬಳಗಕ್ಕೆ ನನ್ನ ಸೇವೆಯಿರಲಿ! ಎಂದು ಅತ್ಯಲ್ಪ ಫೀಯನ್ನು ವೈಜ್ಞಾನಿಕ ಛಾಯಾಗ್ರಹಣಕ್ಕೆ ಪಡೆಯುತ್ತಿದ್ದು, ವಿದ್ಯಾರ್ಥಿಗಳ ಪ್ರೀತಿ-ವಿಶ್ವಾಸಕ್ಕೆ ಪಾತ್ರರಾದರು. ಅಗಾಧ ಸಹನೆ, ಸರಳತೆ, ಸೂಕ್ಷ್ಮಾತಿಸೂಕ್ಷ್ಮ ವಿಚಾರಗಳ ಕುರಿತ ಅಚ್ಚುಕಟ್ಟುತನ, ವ್ಯಾವಹಾರಿಕ ಶಿಸ್ತುಗಳು, ಅವರತ್ತ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದವು.

ವೃತ್ತಿಯೊಂದಿಗೆ ತನಗೆ ಪ್ರಿಯವಾದ ಪ್ರವಾಸ ಹಾಗೂ ಕಲಾಭ್ಯಾಸವನ್ನು ಮುಂದುವರಿಸಿಕೊಂಡು ಬಂದರು. ಸಾಧ್ಯವಿದ್ದ ತಿರುಗಾಟ ಮಾಡಿದರು. ಬೇರೆ ಬೇರೆ ಪತ್ರಿಕೆಗಳು, ಸಂಘ, ಸಂಸ್ಥೆಗಳು ವಿನಂತಿಸಿಕೊಂಡಾಗೆಲ್ಲ ಸಚಿತ್ರ ಲೇಖಗಳನ್ನು ಬರೆದುಕೊಟ್ಟರು. ಮೂರು ದಶಕಗಳ ಅವಧಿಯಲ್ಲಿ ಕಾಮತರು ಬರೆದ ಬಹಳಷ್ಟು ಲೇಖಗಳಲ್ಲಿ ೨೦ ಬಿಡಿಲೇಖಗಳನ್ನು ಇಲ್ಲಿ ಸಂಗ್ರಹಿಸಿಕೊಡಲಾಗಿದೆ. ಅವುಗಳಲ್ಲಿ ಹತ್ತು ಲೇಖಗಳು ಕರ್ನಾಟಕದ ಬೇರೆ ಬೇರೆ ಶೈಲಿಯ ಚಿತ್ರಪ್ರಕಾರಗಳಿಗೆ ಸಂಬಂಧಿಸಿದವು. ಇನ್ನುಳಿದ ಹತ್ತು ಲೇಖಗಳು ಕಾಮತರು ಕಂಡ ಕರ್ನಾಟಕ ಜನಜೀವನದ ವಿಹಂಗಮ ನೋಟಗಳಾಗಿವೆ. ಇವುಗಳ ಕುರಿತು ಎರಡು ಪ್ರಾಸ್ತಾವಿಕ ಮಾತುಗಳನ್ನು ಹೇಳುವುದು ಉಚಿತ.

ಕಾಮತರ ಕಲೆಯ ಪರಿವೀಕ್ಷಣೆಯಲ್ಲಿ ಲೇಪಾಕ್ಷಿಯ ಭಿತ್ತಿ ಚಿತ್ರಗಳು, ಕಾವಿಚಿತ್ರಗಳು, ಸೀಬಿಯ ಭಿತ್ತಿ ಚಿತ್ರಗಳು, ಮೈಸೂರು ಸಾಂಪ್ರದಾಯಿಕ ಶೈಲಿಯ ಪ್ರಕಾರಗಳು, ತಾಳೆಗರಿಯ

ಚಿತ್ರಗಳು ಹಾಗೂ ವ್ಯಂಗ್ಯ ಚಿತ್ರಗಳ ವಿಚಾರಗಳ ಕುರಿತಾದ ಲೇಖಗಳಿವೆ. ಚಿತ್ರಗಳಲ್ಲಿ ಐತಿಹಾಸಿಕವಾಗಿ ಬೇರೆ ಬೇರೆ ಕಾಲಕ್ಕೆ ಸೇರಿದವುಗಳಲ್ಲಿ ಕೆಲವು ಈಗ ಅಳಿದೂ ಹೋಗಿವೆ. ಇನ್ನುಳಿದವು ಬಣ್ಣ ಕಳೆದುಕೊಳ್ಳುತ್ತಲೇ ಇವೆ. ಕರ್ನಾಟಕದ ಕಲಾಪ್ರಕಾರಗಳಲ್ಲಿ ಒಂದೊಂದೂ ಡಾಕ್ಟರೇಟ ಪದವಿಯ ಆಳವಾದ ಅಧ್ಯಯನಕ್ಕೆ ಯೋಗ್ಯವಾಗಿವೆ !ಎಂದು ಅವರು ಆಗಾಗ ಹೇಳುತ್ತಿದ್ದರು. ಇವನ್ನು ಸಂಗ್ರಹಿಸಿ ಅಭ್ಯಸಿಸಿದ ಅವರ ಶ್ರಮ ದೊಡ್ಡದು.

ಈಗಿನ ದಿನಗಳಲ್ಲಿ HRD ಯೋಜನೆಯಡಿಯಲ್ಲೋ, ಸರಕಾರ ಅಥವಾ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಸಹಾಯದಿಂದಲೋ, ಸಂಶೋಧನೆ ನಡೆಸುವ ಹಲವಾರು ಜನರಿದ್ದಾರೆ. ಅಂಥವರನ್ನು ಕಂಡಾಗೆಲ್ಲ ಕಾವಿಕಲಾಕೃತಿಗಳ ಶೋಧದಲ್ಲಿ ಕಾಮತರೊಬ್ಬರೇ ಸುತ್ತಾಡಿ ದಣಿದ ದಿನಗಳ ನೆನಪಾಗುತ್ತದೆ. ಸರಿಯಾದ ಊಟ-ತಿಂಡಿ-ನೀರು ದೊರೆಯದೇ ವಾಹನ ಸೌಲಭ್ಯ ಇಲ್ಲದೇ ಹಳ್ಳಿಯ ಪಾಳು ಬಿದ್ದ ಗುಡಿಗಳಲ್ಲಿ ಛಾಯಾಗ್ರಹಣದ ಸಲಕರಣೆಗಳನ್ನೆಲ್ಲ ಹೊತ್ತೊಯ್ದು ಕ್ಲಿಕ್ಕಿಸುತ್ತಿದ್ದುದು, ನೆನಪಾಗುತ್ತದೆ. ಕೆಲವೇ ವರ್ಷಗಳಲ್ಲಿ ದೇವಾಲಯಗಳ ಪುನರ್ ನಿರ್ಮಾಣದ ನೆಪದಲ್ಲಿ ಹಳೆಯ ಕಟ್ಟಡಗಳೆಲ್ಲ -ಭಿತ್ತಿ ಚಿತ್ರಗಳ ಸಮೇತ ನೆಲಸಮವಾದವು. ಈಗ ಕಾವಿಕಲೆ ಸಂಪೂರ್ಣವಾಗಿ ನಶಿಸಿಹೋಗಿದೆ. ಆದರೆ ಕಾಮತರು ಕ್ಲಿಕ್ಕಿಸಿದ ಚಿತ್ರಗಳು ಉಳಿದುಕೊಂಡವು.ಅವರ 'ಕಾವಿಕಲೆ' ಪುಸ್ತಕವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು 1993ರಲ್ಲಿ ಹೊರತಂದಿತು. ಮೊಟ್ಟಮೊದಲಿಗೆ 'ತರಂಗ' ವಾರಪತ್ರಿಕೆಯಲ್ಲಿ ಪ್ರಕಟವಾದ ಕಾವಿಕಲೆಯ ಲೇಖವನ್ನೆ ಇಲ್ಲಿ ಸೇರಿಸಲಾಗಿದೆ. ಕಲೆಯ ಕುರಿತ ಇತರ ಲೇಖಗಳು, ಕಾಲಕಾಲಕ್ಕೆ ಬೇರೆ ಬೇರೆ ಪತ್ರಿಕೆಗಳ ವಿಶೇಷಾಂಕಗಳಿಗೆ ಬರೆದವುಗಳು. 'ಕರ್ನಾಟಕದ ಚಿಕಣಿ ಚಿತ್ರಗಳು' ಪ್ರಕಟವಾಗಿಲ್ಲ.

ಇನ್ನು, 'ಕಾಮತರು ಕಂಡ ಕರ್ನಾಟಕ'ದ ಬಿಡಿಲೇಖಗಳ ಕುರಿತು ಎರಡು ಮಾತು. ಇವೆಲ್ಲ ಕಾಮತರು ಸುಮಾರು ನಾಲ್ಕು ದಶಕಗಳ ಮಧ್ಯಂತರದಲ್ಲಿ ಬರೆದವುಗಳು. ಈ ಅವಧಿಯಲ್ಲಿ ನಮ್ಮ ಸಾಮಾಜಿಕ ಜೀವನ ಎಷ್ಟು ಭರದಿಂದ ಬದಲಾಗಿದೆ ! ಎನ್ನುವುದಕ್ಕೆ 'ಮಲೆನಾಡಿನ ಜನಜೀವನ' ಲೇಖವು ಸಾಕ್ಷಿಯಾಗಿದೆ. ಇದು ಕರ್ಮವೀರ ವಾರಪತ್ರಿಕೆಯ 1971ರ ದೀಪಾವಳಿ ಸಂಚಿಕೆಗಾಗಿ ವಿನಂತಿಸಿ ಬರೆಸಿದ ಲೇಖವಾಗಿದೆ. ಕಾಮತರು ಮಲೆನಾಡು ಹಾಗೂ ಮಲೆನಾಡಿನ ಸೆರಗು ಎಂದು ಕರೆಯಲ್ಪಡುವ ಪ್ರದೇಶದುದ್ದಕ್ಕೂ ಸಂಚರಿಸಿ ಕಣ್ಣಾರೆ ಕಂಡು, ಕ್ಲಿಕ್ಕಿಸಿ, ಬರವಣಿಗೆಯಲ್ಲೂ ಮೂಡಿಸಿದ ಬಹಳಷ್ಟು ಜೀವನ ವಿಧಾನಗಳು ಈಗ ಉಳಿದಿಲ್ಲ. ಜನಾಂಗಗಳನ್ನು ಸಹಜವಾಗಿ ಗುರುತಿಸಬಹುದಾಗಿದ್ದ ವೇಷ-ಭೂಷಣ, ಊಟ-ಉಣಿಸು, ಆಚಾರ-ವಿಚಾರ ಮಾತುಕತೆ. ಪ್ರಕಾರಗಳೆಲ್ಲ ಮಾಯವಾಗಿವೆ. ನಗರೀಕರಣ ಹೊಂದಿವೆ. ಅವೇ ಊರು -ಗ್ರಾಮಗಳಲ್ಲಿ ಈಗ ಸಂಚರಿಸಿದರೆ, ಕಾಮತರು ವರ್ಣಿಸಿದ ಪರಿಸರದ ಒಂದೂ ನೋಟ ಕಣ್ಣಿಗೆ ಬೀಳದಿರುವ ಸಾಧ್ಯತೆಯಿದೆ. ಯುರೋಪ ಖಂಡದಲ್ಲಿ ಸುತ್ತಾಡಿದ ಕಾಮತರು ತಮ್ಮ ತಾಯ್ನೆಲವಾದ ಮಲೆನಾಡಿನಂಚಿನ ಕರಾವಳಿ ಪ್ರದೇಶವನ್ನು ವೈವಿಧ್ಯದಲ್ಲಿ ಯುರೋಪ ಖಂಡಕ್ಕೆ ಹೋಲಿಸಿದ್ದರು. ಅಂದು ಅವರು ಬರೆದ ಈ ಲೇಖ, ಇಲ್ಲಿಯ

ಜನಜೀವನದ ಸಾರ್ವಕಾಲಿಕ ಐತಿಹಾಸಿಕ ದಾಖಲೆಯಾಗಿ ಉಳಿದಿದೆ. ಈ ದೃಷ್ಟಿಕೋನದಿಂದಲೇ ಲೇಖ ಮಹತ್ವದ್ದಾಗಿದೆ.

'ಐತಿಹಾಸಿಕ ಅಂಜದೀವ್'ದ ಕತೆ ಇತಿಹಾಸಕ್ಕೆ ಸೇರಿಕೊಂಡಿದೆ ! ಸೀಬರ್ಡ್ ನೌಕಾನೆಲೆಯಿಂದಾಗಿ ಆ ದ್ವೀಪ ಶಾಶ್ವತವಾಗಿ ಸಾರ್ವಜನಿಕರಿಗೆ ನಿಷೇಧಿಸಲ್ಪಟ್ಟಿತು. ಅಲ್ಲಿಯ ಚರ್ಚು, ದೇವಾಲಯ ಹಾಗೂ ವನಸಿರಿ, ಕಾಮತರ ಲೇಖದಲ್ಲಿ ಮಾತ್ರ ಕಾಣುವಂತಾಗಿದೆ.

'ಕಣ್ಮರೆಯಾಗುತ್ತಿರುವ ಪ್ರಾಣಿ ಸಂಪತ್ತು', 'ಪಶ್ಚಿಮ ಘಟ್ಟಗಳು' ಮತ್ತು 'ದ್ವೀಪ ರಾಣಿ ಶರಾವತಿ'ಯ ಬರಹಗಳು ಆಯಾ ವಿಷಯದ ಕುರಿತ ಗತ ವೈಭವ ಸಾರುತ್ತಿವೆ. 'ಗೋವಾ-ಕರ್ನಾಟಕದ ನಂಟು' ಹಿಂದೊಮ್ಮೆ ಕರ್ನಾಟಕವು ಈ ಪುಟ್ಟ ರಾಜ್ಯವನ್ನು ಬೆಳೆಸಿದ ಪರಿಯನ್ನು ಪರಿಚಯಿಸುತ್ತದೆ.

"ನಮ್ಮ ಪ್ರವಾಸೋದ್ಯಮ", ಸರಕಾರದ ರಾಜ್ಯಹಿತಾಸಕ್ತ ಪ್ರಜೆಗಳ ಕಣ್ತೆರೆಸುವಂತಹ ಲೇಖವಾಗಿದೆ. ಪ್ರವಾಸೋದ್ಯಮ ಒಂದರಿಂದಲೇ ರಾಷ್ಟ್ರೀಯ ಆದಾಯವನ್ನು ಪಡೆದು ಬದುಕುತ್ತಿರುವ ಇಟಾಲಿ, ಗ್ರೀಸ್, ಫ್ರಾನ್ಸ್ ಈಜಿಪ್ತ್ ದೇಶಗಳನ್ನು ಕಾಮತರು ಕಂಡಿದ್ದರು. ಈ ಹಿನ್ನೆಲೆಯಲ್ಲಿ ಭಾರತ ಹಾಗೂ ಕರ್ನಾಟಕಗಳಿಗೆ ಈ ಉದ್ಯಮದಲ್ಲಿಯ ಅಪಾರ ಸಾಧ್ಯತೆಗಳನ್ನು ಚರ್ಚಿಸಿದ್ದಾರೆ. ಲೇಖ ಬರೆದ ಬಳಿಕದ ಈ 18 ವರ್ಷಗಳಲ್ಲಿ ಯಾವ ಪ್ರಗತಿಯನ್ನೂ ಈ ಕ್ಷೇತ್ರ ಕಂಡಿಲ್ಲವೆಂಬುದು ನಮ್ಮ ಅನಾಸ್ಥೆಗೆ ಕನ್ನಡಿ ಹಿಡಿದಂತಿದೆ.

ತಾಂತ್ರಿತ ಪ್ರಗತಿಯತ್ತ ದಾಪುಗಾಲು ಹಾಕುತ್ತಿರುವ ಭಾರತ, ನಿಜಕ್ಕೂ ಏಳ್ಗೆಯನ್ನು ಸಾಧಿಸುತ್ತಿದೆಯೇ ? ಎಂಬ ವಿಚಾರ 'ಪ್ರಗತಿಯೆಂಬ' ಮಾಯಾಮೃಗ ಲೇಖದಲ್ಲಿದೆ

ಪ್ರವಾಸಪ್ರಿಯರಾಗಿದ್ದ ಕಾಮತರ ಏಳು ಪ್ರವಾಸಕಥನಗಳು ಪ್ರಕಟವಾಗಿವೆ. ಪ್ರವಾಸಕಥನ ಒಂದು ಜನಪ್ರಿಯ ಸಾಹಿತ್ಯ ಪ್ರಕಾರವಾಗಿ ರೂಪಗೊಳ್ಳಲು ಕಾಮತರ ಕೊಡುಗೆ ಹಿರಿದಾಗಿದೆ ಎನ್ನುವವರು ಸಾಕಷ್ಟು ಜನರಿದ್ದಾರೆ. ಅವರು ಕಾಲ್ನಡಿಗೆಯಲ್ಲಿ ಹೋಗಲಿ, ಬಸ್, ಟ್ರೇನ್, ನೌಕೆಯಲ್ಲಿ ಸಂಚರಿಸಲಿ, ಇತರರ ಕಣ್ಣಿಗೆ ಮಿಂಚಿ ಮಾಯವಾಗುತ್ತಿದ್ದ ನೋಟಗಳು ಕಾಮತರ ಕಣ್ಣಲ್ಲಿ ಸ್ಥಿರವಾಗಿ ನಿಲ್ಲುತ್ತಿದ್ದವು. ಪ್ರಸಿದ್ಧ ಸಾಹಿತಿ-ವಿಮರ್ಶಕ, ಕೀರ್ತಿನಾಥ ಕುರ್ತಕೋಟಿ ಅವರು 'ಕಾಮತರ ಕಣ್ಣೇ ಕ್ಯಾಮರಾ ಇದ್ದಂಗ! ಇಮೇಜ್ ಕಾಯಂ ಮೂಡಿರ್‍ತದ!' ಎಂದು ಮೆಚ್ಚುಗೆ ಸೂಚಿಸಿದ್ದರು. ನೋಡಿದ್ದನ್ನು ಕಣ್ಣಿಗೆ ಕಟ್ಟುವಂತೆ ಬರೆಯುವುದೂ ಕಾಮತರಿಗೆ ಸಾಧಿಸಿತ್ತು. ಮಾದರಿಗೆಂದು ಅವರ 'ನಾ, ರಾಜಸ್ಥಾನದಲ್ಲಿ' ಪುಸ್ತಕದ 'ದೂರದ ಪ್ರಯಾಣ' ಎಂಬ ಅಧ್ಯಾಯವನ್ನು ಇಲ್ಲಿ ಸೇರಿಸಲಾಗಿದೆ. ಅಕ್ಷರ ಪ್ರಕಾಶನದ ವತಿಯಿಂದ ಈ ಪುಸ್ತಕ ೧೯೭೩ರಲ್ಲಿ ಪ್ರಕಟವಾಗಿದೆ.

'ನನ್ನ ನಾ ಕಂಡಂತೆ' ಪ್ರಬಂಧ ಕಾಮತರ ಆತ್ಮಚರಿತ್ರೆಯ ಒಂದು ಇಣುಕು ನೋಟವೆನ್ನಬಹುದು. ಈಗ ಇತಿಹಾಸಕ್ಕೆ ಸೇರಿ ಹೋದ ಅವರ ಬಾಲ್ಯದ ಪರಿಸರವನ್ನು ಕಾಮತರು ಪರಿಚಯಿಸುತ್ತಾರೆ . ಜೊತೆಗೆ ತನ್ನ ಜೀವನದ ಗೊತ್ತು-ಗುರಿಗಳನ್ನು ನಿರ್ದಿಷ್ಟಗೊಳಿಸುವ ಪ್ರಯತ್ನಗಳನ್ನು ಹೇಳಿಕೊಂಡಿದ್ದಾರೆ. ಅವು ಕೈಗೂಡಲಾಗದ್ದಕ್ಕೆ ಅವರೆಂದೂ ಬೇಸರಪಟ್ಟಿದ್ದಿಲ್ಲ. ಅವರ ಜೀವನೋಲ್ಲಾಸ ಕುಗ್ಗಿದ್ದನ್ನು ನಾನು ಕಂಡೇ ಇಲ್ಲ.

ಜೀವನದ ಯಾವ ಸಮಸ್ಯೆಗೂ ಅವರ ಬಳಿ ಉತ್ತರ ಸಿಗುತ್ತಿತ್ತು. ಪ್ರಬಲ ಆತ್ಮವಿಶ್ವಾಸವಿದ್ದ ಅವರು, ಹಲವಾರು ತರುಣರಿಗೆ ಪ್ರೋತ್ಸಾಹಿಸಿ ಮನೋಬಲ ಬೆಳೆಸಿದ್ದು ಇದೆ.

ಇಲ್ಲಿ ಅವರು ಅರಣ್ಯ ಸಮೃದ್ಧವಾಗಿದ್ದ ಉತ್ತರ ಕನ್ನಡ ಜಿಲ್ಲೆ ಬರಡು ಬಯಲಾಗುತ್ತ ಹೋದದ್ದರ ಬಗ್ಗೆ ತನ್ನವರನ್ನು ಎಚ್ಚರಿಸಿದ್ದಾರೆ. ಈ ಬರಹ, ಅವರು ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾಡಬೇಕಾಗಿದ್ದ ಭಾಷಣವಾಗಿದೆ. 1997ನೇ ವರ್ಷದಲ್ಲಿ ಸರ್ವಾನುಮತದಿಂದ ಅಧ್ಯಕ್ಷರಾಗಿ ಕಾಮತರು ಆಯ್ಕೆಯಾಗಿದ್ದರು. ಆದರೆ ಆ ದಿನ, ಸಾಹಿತ್ಯ ಸಮ್ಮೇಳನವೆಂಬುದು ಜಿಲ್ಲೆಯ ರಾಜಕಾರಣಿಗಳಿಗೆ ಮನಸ್ವೀ ಮಾತಾಡುವ ವೇದಿಕೆಯಾಗಿ ಪರಿಣಮಿಸಿತು. ಮಧ್ಯಾಹ್ನದ ಮೂರು ಗಂಟೆಯಾಗಲು ಬಂದಿತ್ತು. ೯ ಗಂಟೆಯಿಂದ ಪೆಂಡಾಲ್‌ದಲ್ಲಿ ಜನ ಕುಳಿತಿದ್ದರು. ಹತ್ತುಗಂಟೆಗೆ ಮಾಡಬೇಕಾಗಿದ್ದ ಭಾಷಣಕ್ಕೆ ಕೊನೆಗೊಮ್ಮೆ ಅವಕಾಶ ಸಿಕ್ಕಾಗ ಜನರ ತಾಳ್ಮೆ ಮೀರಿತ್ತು. ಅವರ ಹೊಟ್ಟೆ ತಾಳ ಹಾಕುತ್ತಿತ್ತು. ಸಮ್ಮೇಳನಾಧ್ಯಕ್ಷರು ಚುಟುಕಿನ ೮ ನಿಮಿಷದ ಆಶುಭಾಷಣ ಮಾಡಿ ಮುಗಿಸಿದರು. ಸಿದ್ಧಪಡಿಸಿದ ಭಾಷಣದ ಲಿಖಿತ ರೂಪ ಇಲ್ಲಿದೆ. 'ಮಲೆನಾಡಿನ ಜನಜೀವನ' ಎಂಬ ಲೇಖನವು ಈ ನಾಲ್ಕು ದಶಕಗಳಲ್ಲಿ ನಮ್ಮ ಜೀವನ ಎಷ್ಟು ಭರದಿಂದ ಬದಲಾಗಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ.

ಇಲ್ಲಿ ಸಂಕಲಿತವಾದ ಇಪ್ಪತ್ತು ಪ್ರಬಂಧಗಳು ಕಾಮತರ ಬರವಣಿಗೆಯನ್ನು ಪೂರ್ಣತಃ ಪ್ರತಿನಿಧಿಸುವುದಿಲ್ಲ. ಕರ್ನಾಟಕದ ಖ್ಯಾತಿವೆತ್ತ ಸಂಶೋಧನ ಸಂಸ್ಥೆಯಾದ ಧಾರವಾಡದಲ್ಲಿರುವ ಕರ್ನಾಟಕ ಇತಿಹಾಸ ಸಂಶೋಧನ ಮಂಡಲದವರು, ಕರ್ನಾಟಕದ ಕಲೆ ಮತ್ತು ಸಂಸ್ಕೃತಿ ಕುರಿತ ಲೇಖಗಳನ್ನು ಪ್ರಕಟಿಸಲು ಬಯಸಿದ್ದರು. ಈವರೆಗೆ ಮರುಮುದ್ರಣ ಕಾಣದ ಕಲೆ ಮತ್ತು ಜನಜೀವನ ಕುರಿತಾದ ಲೇಖಗಳನ್ನು ಹುಡುಕಿ ಸೇರಿಸಿದ್ದಾಗಿದೆ. ಇವು ಕಾಮತರ ಬಹುಮುಖವಾಗಿದ್ದ ಸಾಹಿತ್ಯ ಕೃಷಿಯ ಕೆಲವು ಉದಾಹರಣೆಗಳಾಗಿವೆ. ಮೊದಲ ಮುದ್ರಣಕ್ಕಾಗಿ ಕಾಮತರಿಂದ ಈ ಎಲ್ಲ ಲೇಖಗಳನ್ನು ಬರೆಸಿ, ಪ್ರಕಟಿಸಿದ ಪತ್ರಿಕೆಗಳವರಿಗೆ, ಗೌರವ ಗ್ರಂಥ ಸಂಪಾದಕರಿಗೆ ವಂದನೆಗಳು. ಇವನ್ನು ಪ್ರಕಟಿಸಲು ಉತ್ಸಾಹ ತೋರಿಸಿದ ಕರ್ನಾಟಕ ಇತಿಹಾಸ ಸಂಶೋಧನ ಮಂಡಳದ ಕಾರ್ಯಾಧ್ಯಕ್ಷರಾಗಿರುವ ಶ್ರೀ ಆ. ರಾ. ಪಂಚಮುಖಿ ಅವರಿಗೆ ಕೃತಜ್ಞತೆಗಳು.

ಬೆಂಗಳೂರು : 10-7-2007

- ಜ್ಯೋತ್ಸ್ನಾ ಕಾಮತ್

ಅನುಕ್ರಮಣಿಕೆ

ಅಧ್ಯಾಯ	ಹೆಸರು	ಪುಟ
	ಮಂಡಳದ ಮುನ್ನುಡಿ	(೧)
	ಪ್ರಸ್ತಾವನೆ	iii
I	ಕಲಾ ಪ್ರಪಂಚ	
೧.	ಲೇಪಾಕ್ಷಿಯ ಭಿತ್ತಿ ಚಿತ್ರಗಳು	೧
೨.	ಶಿಲ್ಪಗಳಲ್ಲಿ ಪಶು-ಪಕ್ಷಿ ಚಿತ್ರಣ	೧೭
೩.	ತಾಳೆಗರಿಯಲ್ಲಿ ಚಿತ್ರಕಲೆ	೩೧
೪.	ಕರಾವಳಿ ಕಾವಿ ಚಿತ್ರಗಳು	೪೩
೫.	ಕಾವಿ ಭಿತ್ತಿ ಚಿತ್ರಗಳಲ್ಲಿ ಸಾಮಾಜಿಕ ಜೀವನ	೫೫
೬.	ಸೀಬಿಯ ಭಿತ್ತಿ ಚಿತ್ರಗಳು	೬೭
೭.	ಮೈಸೂರು ಅರಸರ ಕಾಲದ ಚಿತ್ರಗಳಲ್ಲಿ ಒಳಾಂಗಣದ ದೃಶ್ಯಗಳು	೯೩
೮.	ಕರ್ನಾಟಕದ ಚಿಕಣಿ ಚಿತ್ರಗಳು	೧೦೬
೯.	ಸೌಗಂಧಿಕಾ ಪರಿಣಯದಲ್ಲಿ ಸಸ್ಯಶಾಸ್ತ್ರ ಹಾಗೂ ಕಲೆ	೧೨೪
೧೦.	ವ್ಯಂಗ್ಯ ಚಿತ್ರಗಳ ಬಗ್ಗೆ ಕೆಲ ವಿಚಾರಗಳು	೧೩೫
II	ಜನಜೀವನ	
೧೧.	ಮಲೆನಾಡಿನ ಜನಜೀವನ	೧೪೦
೧೨.	ಐತಿಹಾಸಿಕ ಅಂಜದೀವ್	೧೬೩
೧೩.	ಕಣ್ಮರೆಯಾಗುತ್ತಿರುವ ಪ್ರಾಣಿಸಂಪತ್ತು	೧೭೧
೧೪.	ಪಶ್ಚಿಮ ಘಟ್ಟಗಳು ಆಗ - ಈಗ	೧೭೭
೧೫.	ದ್ವೀಪಗಳ ರಾಣಿ ಶರಾವತಿ	೧೮೮
೧೬.	ಶತಮಾನಗಳಿಂದ ಗೋವಾ-ಕರ್ನಾಟಕಗಳ ನಂಟು	೧೯೫
೧೭.	ನಮ್ಮ ಪ್ರವಾಸೋದ್ಯಮ	೨೦೨
೧೮.	ಪ್ರಗತಿಯ ಮಾಯಾಮೃಗ	೨೧೯
೧೯.	ದೂರದ ಪ್ರಯಾಣ	೨೨೭
೨೦.	ನನ್ನ ನಾ, ಕಂಡಂತೆ	೨೩೨

೧. ಲೇಪಾಕ್ಷಿಯ ಭಿತ್ತಿಚಿತ್ರಗಳು

ಆಂಧ್ರದವರು ಉತ್ಪಾದಿಸಿದ ಕರಕುಶಲ ಸಾಮಗ್ರಿಗಳನ್ನು ಮಾರಾಟ ಮಾಡುವ ಮಳಿಗೆ ಎಲ್ಲಿ ಇದ್ದರೂ ಅದಕ್ಕೆ 'ಲೇಪಾಕ್ಷಿ' ಎಂಬ ಹೆಸರಿರುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಲೇಪಾಕ್ಷಿಗೆ ಅಂಥ ವಿಶೇಷ ಸ್ಥಾನವೇನೂ ಇಲ್ಲ. ಹೆಚ್ಚೆಂದರೆ ರಾಜಧಾನಿಯಲ್ಲಿ 'ಲೇಪಾಕ್ಷಿ' ಹೆಸರಿನ ಬಾರ್‌ಗಳನ್ನು ಅಲ್ಲಲ್ಲಿ ನೀವು ನೋಡಬಹುದು. ಕನ್ನಡಿಗರು ಅಭಿಮಾನದಿಂದ ಎದೆಯುಬ್ಬಿಸಬೇಕಾದ ಅತ್ಯುನ್ನತ ಮಟ್ಟದ ಶಿಲ್ಪ ಹಾಗೂ ಭಿತ್ತಿಚಿತ್ರಗಳ ಆಗರವೇ ಲೇಪಾಕ್ಷಿಯಾಗಿದೆ, ಎಂಬುದು ನಮಗೆ ಮರೆತೇ ಹೋಗಿದೆ!

ವಿಜಯನಗರದ ಸಾಮ್ರಾಜ್ಯದ ಕಾಲದಲ್ಲಿ 'ಲೇಪಾಕ್ಷಿ ನಗರ'ವೆಂದು ವೈಭವದಿಂದ ಮೆರೆದ ಪಟ್ಟಣ, ಇಂದು ಅಜ್ಞಾತವಾದ ಕಿರಿಯ ಗ್ರಾಮ. ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಹಿಂದುಪುರದ ಪೂರ್ವಕ್ಕೆ ಇಪ್ಪತ್ತು ಕಿಲೋಮೀಟರ್ ದೂರದಲ್ಲಿದೆ. ಅಲ್ಲಿರುವ ಶಿವಾಲಯದಿಂದಾಗಿ ಈ ಸ್ಥಳವನ್ನು 'ಪಾಪನಾಶೇಶ್ವರ' ಕ್ಷೇತ್ರವೆಂದು ಕರೆಯಲಾಗುತ್ತಿತ್ತು. ಅಲ್ಲಿಯ ವೀರಭದ್ರಸ್ವಾಮಿ ದೇವಾಲಯವನ್ನು ಆಮೆಯನ್ನು ನೆನಪಿಗೆ ತರುವ ಕೂರ್ಮ ಶಿಲೆಯನ್ನು ನೆಲೆಗಟ್ಟಾಗಿಸಿ ಕಟ್ಟಲಾಗಿದೆ. ಭವ್ಯವಾದ ಈ ದೇವಾಲಯದಲ್ಲಿ ಮುಖಮಂಟಪ, ನಾಟ್ಯಮಂಟಪ, ಕಲಾ ಮಂಟಪ, ಗರ್ಭಗುಡಿಗಳನ್ನು ಸುಲಭವಾಗಿ ಗುರುತಿಸಬಹುದು. ಅಲ್ಲದೆ ಇನ್ನುಳಿದ ಶ್ರೀರಾಮ, ದುರ್ಗಾದೇವಿಯರ ಕಿರಿಯ ದೇವಾಲಯಗಳನ್ನೂ ವಿಸ್ತೃತವಾದ ಸಭಾ ಮಂಟಪದಿಂದ ಜೋಡಿಸಲಾಗಿದೆ. ಈ ಎಲ್ಲ ದೇವರಿಗೆ ಪೋಲಿಗಳಿಂದ, ಕಳ್ಳಕಾಕರಿಂದ ಸಂರಕ್ಷಣೆ ನೀಡಲು ಹೊರಗಡೆ ನಿಲ್ಲಿಸಿ, ದಕ್ಷಿಣ ದಿಕ್ಕಿನಲ್ಲಿರುವ ಹೆಬ್ಬಾಗಿಲಿಗೆ ಮಂಟಪ ನಿರ್ಮಿಸಿ ಅಲಂಕರಿಸಲಾಗಿದೆ.

ಈ ದೇವಾಲಯದ ಒಳಹೊರಗೆ ವಿಜಯನಗರ ಕಾಲದ ಶಾಸನಗಳಿವೆ. ಅವುಗಳನ್ನು ಅಭ್ಯಸಿಸಿದಾಗ, ಈ ಕಲಾ ಸಿರಿಯ ನಿರ್ಮಿತಿಯ ಹಿನ್ನೆಲೆಯನ್ನು ಅರಿಯಲು ಸಹಾಯವಾಗುತ್ತದೆ. ಲೇಪಾಕ್ಷಿಯ ಲಕುಶೆಟ್ಟಿ ಮತ್ತು ಮುದ್ದಮ್ಮ ಅವರ ಮೂವರು ಪುತ್ರರಲ್ಲಿ ಹಿರಿಯವನಾದ ವಿರೂಪಣ್ಣನು ಆಗಿನ ವಿಜಯನಗರದ ಆಳರಸು ಅಚ್ಯುತದೇವರಾಯನ ಕಾಲದಲ್ಲಿ (ಕ್ರಿ. ಶ. ೧೫೩೦-೪೨) ಪ್ರತೀಹಾರಿಯಾಗಿ ಕೆಲಸಕ್ಕೆ ಸೇರಿ ತನ್ನ ಕಾರ್ಯಕ್ಷಮತೆ ಹಾಗೂ ಸ್ವಾಮಿನಿಷ್ಠೆಯಿಂದ ಪೆನುಗೊಂಡೆ ಮತ್ತು ಚಂದ್ರಗಿರಿ ಪ್ರಾಂತಗಳ ಆಡಳಿತಾಧಿಕಾರಿಯ ಹುದ್ದೆಗೇರಿದ. ಇದರಿಂದಾಗಿ ಆತನಿಗೆ ಈ ಭವ್ಯ ದೇವಾಲಯ ನಿರ್ಮಾಣಕ್ಕೆ ಭಕ್ತರಿಂದ, ಪ್ರಜೆಗಳಿಂದ ಧನ ಸಹಾಯ ಪಡೆಯುವುದು ಸುಲಭವಾಯಿತು. ಈತನು ತನ್ನ ಸೋದರ ವೀರಣ್ಣನಾಯಕನ ನೆರವಿನಿಂದ ಕ್ರಿ.ಶ. ೧೫೩೮ರಲ್ಲಿ ಈ ದೇವಾಲಯವನ್ನು ವಿಸ್ತರಿಸಿ ಕಟ್ಟಿಸಿದನೆಂದು ಶಾಸನವೊಂದು ಸಾರುತ್ತದೆ. ಇಷ್ಟಲ್ಲದೆ ಕಾಲಕಾಲಕ್ಕೆ ಪೂಜೆ, ನೈವೇದ್ಯಗಳಿಗೆ ಉಂಬಳಿ ಕೊಡಮಾಡಿ ಶಾಸನ ಮಾಡಿಸಿದ.

ಕೊನೆಯುಸಿರಿನ ಚಿತ್ರಗಳು

ಅಂದಿನ ಪ್ರಚಲಿತ ಪದ್ಧತಿಯಂತೆ. ಈ ದೇವಾಲಯಗಳ ಮುಚ್ಚಣಿಕೆಗೆ ಚಪ್ಪಡಿ ಕಲ್ಲುಗಳನ್ನು ಹಾಸಿ, ಗಾರೆಯನ್ನು ಬಳಿದು ಒಳ ಮೈಯನ್ನು ಭಿತ್ತಿಚಿತ್ರಗಳಿಗಾಗಿ ಬಳಸಲಾಗಿದೆ. ಕಾಲಾಂತರದಲ್ಲಿ ಜೋಡಣೆಗೆ ಬಳಸಿದ ಗಾರೆಯ ಕವಚ ಬಿದ್ದು ಹೋಗಿ. ಮಳೆ ನೀರು ಒಳಸೇರಿ. ಅಪೂರ್ವವಾದ ಚಿತ್ರಗಳನ್ನು ಆಹುತಿ ತೆಗೆದುಕೊಂಡಿದೆ. ಕಗ್ಗತ್ತಲು ಇರುವಲ್ಲಿ ಬಾವಲಿಗಳು ರಾಜ್ಯವಾಳಿ ಇನ್ನಷ್ಟು ಹಾಳುಗೆಡವಲು ನೆರವಾಗಿವೆ. ಆದ್ದರಿಂದ ಈ ಚಿತ್ರಗಳು ರಚಿತವಾದಾಗಿನ ಕಾಲದ ಅವುಗಳ ಸೌಂದರ್ಯವನ್ನು ಕಲ್ಪಿಸಿಕೊಳ್ಳಲಾರದಷ್ಟು ಶೋಚನೀಯ ಸ್ಥಿತಿಯಲ್ಲಿವೆ. ಪುಣ್ಯವಶಾತ್, ವೀರಭದ್ರ ಮತ್ತು ಶಿವಾಲಯಗಳ ಮಾಡಿನಲ್ಲಿ ಅಲ್ಲೊಂದು ಇಲ್ಲೊಂದು ಚಿತ್ರಗಳು ಇನ್ನೂ ಉಸಿರು ಹಿಡಿದುಕೊಂಡು ಬದುಕಿವೆ. ಹಿಂದಿನ ಕನ್ನಡಿಗರ ಭಿತ್ತಿಚಿತ್ರಗಳ ಸಾಧನೆಯನ್ನು ಮನದಣಿಯ ಸವಿಯಬೇಕು, ಎನ್ನುವವರು ದೂರದರ್ಶಕ ಹಾಗೂ ಕ್ಯಾಮರಾಗಳೊಂದಿಗೆ ಲೇಪಾಕ್ಷಿಯ ಪಾಪನಾಶೇಶ್ವರದ ನಾಟ್ಯ ಮಂಟಪ ಮತ್ತು ಆರಾಧನಾ ಮಂಟಪಗಳ ಸೂರಿನ ಮುಚ್ಚಿಗೆಯನ್ನು ವೀಕ್ಷಿಸಬೇಕು.

ಈ ಚಿತ್ರಕಾರರ ತಂಡದವರು ಮೂಲತಃ ಎಲ್ಲಿಯವರು? ಎಲ್ಲಿಂದ ಇಲ್ಲಿಗೆ ಬಂದರು? ಯಾವ ಗುಂಪಿಗೆ ಸೇರಿದವರು ? ಎಂಬುದಕ್ಕೆ ಯಾವ ದಾಖಲೆಗಳೂ ಲಭ್ಯವಿಲ್ಲ. ಇವರು ಇನ್ನೂ ಹಲವಾರು ದೇವಾಲಯ, ಅರಮನೆ, ಪ್ರತಿಷ್ಠಿತರ ಧಾಮಗಳನ್ನು ತಮ್ಮ ಭಿತ್ತಿ ಚಿತ್ರಗಳಿಂದ ಅಲಂಕರಿಸಿರಬಹುದು. ಆದರೆ ಅವಾವವೂ ಈವರೆಗೆ ಜೀವಹಿಡಿದು ಬಾಳಲೇ ಇಲ್ಲ. ಬಹುಶಃ ಪೆನುಗೊಂಡೆ, ಚಂದ್ರಗಿರಿ ಮುಂತಾದ ಪ್ರಾಂತಂಗಳಿಂದ ಚಿತ್ರಕಾರರು ಬಂದಿರಬಹುದು. ಎಂದು ಅನಿಸುತ್ತದೆ. ದೇವಾಲಯ ಕಟ್ಟುತ್ತಿರುವಂತೆಯೇ ಈ ಚಿತ್ರಗಳ ನಿರ್ಮಾಣವಾಗಿದ್ದರಿಂದ, ಹಸಿಗಾರೆಯ ಮೇಲೆ, ಲೇಪ ಬಳಿದು ಈ ಚಿತ್ರಗಳನ್ನು ಬರೆದಿರುವದು ಸ್ಪಷ್ಟ. ಸ್ಥಳೀಯವಾಗಿ ಸಿಗುವ ಕಲ್ಲು, ಹರಳು, ಸಸ್ಯಗಳಿಂದಲೇ ತಮಗೆ ಬೇಕಾದ ಬಣ್ಣಗಳನ್ನು ತಾವೇ ಸಿದ್ಧಪಡಿಸಿ, ಇಣಚಿ ಕೂದಲಿನ ಬ್ರಶ್‌ಗಳನ್ನು ಬಳಸಿರಲು ಸಾಕು. ಕೆಂಪು, ಹಸಿರು, ನೀಲಿ, ಹಳದಿ, ಕಪ್ಪು ಬಣ್ಣಗಳನ್ನು ಹೆಚ್ಚಾಗಿ ಬಳಸಿದ್ದಾರೆ. ಆದರೆ ದುರ್ದೈವವಶಾತ್, ಕಾಲಾಂತರದಲ್ಲಿ ಹಸಿರು, ಹಳದಿ, ನೀಲಿ ಬಣ್ಣಗಳು ಮಾಯವಾಗಿದ್ದರಿಂದ, ಇಂದು ಕೆಂಪು, ಕಪ್ಪು ವರ್ಣಗಳೇ ಪ್ರಾಧಾನ್ಯ ಕೊಟ್ಟಂತೆ ಕಾಣುತ್ತಿವೆ. ಅಂದು ಎಲ್ಲ ಬಣ್ಣಗಳನ್ನು ಅತ್ಯಂತ ಸಮತೋಲ ಪ್ರಮಾಣದಲ್ಲಿ ಬಳಸಿದಾಗ ಈ ಚಿತ್ರಗಳು ಹೇಗೆ ಕಾಣುತ್ತಿದ್ದಿರಬಹುದು!

ರೇಖೆಗಳು ಮತ್ತೆ ಗೋಚರ

ಸಂಕಲ್ಪಿಸಿಕೊಂಡ ಚಿತ್ರವನ್ನು ಮೊದಲಿಗೆ ಕರಿಯ ರೇಖಾಚಿತ್ರದಲ್ಲಿ ಬರೆದುಕೊಳ್ಳುತ್ತಿದ್ದರು. ಚಿತ್ರ ಬಿಡಿಸಲು ಹೊಸ ಹೊಸ ವಿಚಾರಗಳು ಹೊಳೆದರೆ, ವರ್ಣಸಂಯೋಜನೆಯ ಸಂಪೂರ್ಣ ಸ್ವಾತಂತ್ರ್ಯ, ಚಿತ್ರಗಾರನಿಗಿರುತ್ತಿತ್ತು. ನಂತರ ಬಳಸಿದ ರಬ್ಬಾದ ಬಣ್ಣಗಳಿಂದ ರೇಖಾಚಿತ್ರವು ಮುಚ್ಚಿ ಹೋಗುತ್ತಿದ್ದುದರಿಂದ ಅದು ವೀಕ್ಷಕರಿಗೆ ಗೋಚರಿಸುವ ಸಾಧ್ಯತೆ ಇರಲಿಲ್ಲ. ಆದರೆ ಇಂದು ಹೆಚ್ಚಿನ ವರ್ಣಗಳು ಹಾರಿ ಹೋಗಿವೆ.

ಹೀಗಾಗಿ ಅನೇಕ ಚಿತ್ರಗಳಲ್ಲಿ ಮೂಲಚಿತ್ರಗಳ ರೇಖಾ ವಿನ್ಯಾಸ ಹೇಗಿರುತ್ತಿತ್ತೆಂಬ ಕಲ್ಪನೆ ಬರುವಂತಿದೆ. ಅರ್ಧ ಮಂಟಪದಲ್ಲಿ ಇಂಥ ಒಂದು ಅಪೂರ್ವ ಚಿತ್ರ ಇದೆ. ಇದರಲ್ಲಿ ಉಮೆಯನ್ನು ವರಿಸುವ ಪೂರ್ವದ. ಯೌವನಭರಿತ ಮಹೇಶ್ವರನು ಚಿತ್ರಿತನಾಗಿದ್ದಾನೆ. ಇಲ್ಲಿ ಪ್ರಕಟವಾದ ರೇಖೆಗಳಿಂದ ಅಂದಿನ ಶ್ರಮಿಕ ಕಲಾಕಾರರ ಕುಂಚ ಹಿಡಿದ ಕೈ, ಅದೆಷ್ಟು ಲೀಲಾಜಾಲವಾಗಿ ಭಿತ್ತಿ ತುಂಬ ನಿರ್ದಿಷ್ಟ ಕಲಾಕೃತಿಗಳನ್ನು ನಿರ್ಮಿಸಿರಬಹುದೆಂಬ ಕಲ್ಪನೆ ಮೂಡುತ್ತದೆ. ಸರಳ, ವಕ್ರ, ವರ್ತುಳಾಕೃತಿಗಳು ಎಲ್ಲಿಯೂ ಅಡ್ಡಿ-ಆತಂಕಗಳಿಲ್ಲದೆ ಹರಿದಿವೆ. ವರ್ಣಗಳ ಆಯ್ಕೆ ಹಾಗೂ ಚಿತ್ರ ಸಂಯೋಜನೆಗಳಲ್ಲಿ ಕಲಾಕಾರರ ಉತ್ತಮ ಅಭಿರುಚಿ ವ್ಯಕ್ತವಾಗಿದೆ.

ಮಾನವ, ಮತ್ತಿತರ ಜೀವಿಗಳ ಅಂಗಾಂಗಗಳ ರಚನೆಯನ್ನು ಆಳವಾಗಿ ಅಭ್ಯಸಿಸಿದವರು ಮಾತ್ರ ಅವುಗಳನ್ನು ಇಷ್ಟೊಂದು ನೈಜವಾಗಿ ಚಿತ್ರಿಸಲು ಸಾಧ್ಯ. ಸ್ತ್ರೀ -ಪುರುಷ ಶರೀರಗಳನ್ನು ಸರಳವಾಗಿ ಚಿತ್ರಿಸಿದರೂ ಪಾದಗಳನ್ನು ಮುಂದೆ ವಾಲಿದಂತೆ ಬಿಡಿಸಲಾಗಿದೆ. ಹೀಗೆ ಮಾಡಿದ್ದು, ಸ್ಥಿತ ವ್ಯಕ್ತಿಗಳಿಗೂ ಚಾಲನೆ ಇದ್ದಂತೆ ತೋರಿ ಜೀವಕಳೆ ತುಂಬುವ ಉದ್ದೇಶಕ್ಕಿರಬೇಕು. ಕಲಾವಿದರು, ಚಿತ್ರಕಲೆಯ ಸೂತ್ರಗಳನ್ನು ಚಾಚೂ ತಪ್ಪದೇ ಬಳಸಿದ್ದರಿಂದ ಜನಸಾಮಾನ್ಯರಿಗೆ ಚಿತ್ರಗಳಲ್ಲಿ ವಾಸ್ತವಿಕತೆಯ ಕೊರತೆ ಅನಿಸಿದರೆ ಆಶ್ಚರ್ಯ ಇಲ್ಲ. ದೇವ-ದೇವತೆಗಳನ್ನು ವಿರಾಟ್ ಆಕಾರದಲ್ಲಿ ಚಿತ್ರಿಸಿ, ಭಕ್ತಾದಿಗಳನ್ನು, ಸೇವಕ ವರ್ಗವನ್ನು ಚಿಕ್ಕ ಆಕೃತಿಗಳಲ್ಲಿ ರೂಪಿಸಲಾಗಿದೆ. ಅದರಂತೆ ವಿರೂಪಣ್ಣ, ವೀರಣ್ಣ ಬಂಧುಗಳಿಗೆ ಪ್ರಸಾದ ನೀಡುವ ಪುರೋಹಿತರು, ಎಳೆಯ ವಟುವಿನಂತೆ ಚಿತ್ರಿತರಾಗಿದ್ದಾರೆ. ಭವ್ಯರಥಗಳನ್ನು ಎಳೆಯುವ ಅಶ್ವಗಳು ತೀರ ಅಶಕ್ತವೆಂದು ಅನಿಸದಿರದು. ಇವೆಲ್ಲ ಆಯಾ ವ್ಯಕ್ತಿ, ಪ್ರಾಣಿಗಳ ಸ್ಥಾನಮಾನಗಳನ್ನು ಸೂಚಿಸುತ್ತವಲ್ಲದೇ, ಕೆಲವೊಮ್ಮೆ ಕೇವಲ ಸಾಂಕೇತಿಕವಾಗಿ ಚಿತ್ರಿಸುವುದೂ ರೂಢಿ. ಈ ಚಿತ್ರಗಳೆಲ್ಲ ಛಾಯಾಚಿತ್ರಗಳು ಅಲ್ಲವಲ್ಲ!

ಮೂಡ್ ಮೂಡಿಸುವ ಯತ್ನ

ಗೌರವರ್ಣದವರಿಗೆ ತಿಳಿಬಣ್ಣ ಬಳಸಿದರೆ, ಕೃಷ್ಣ ವರ್ಣಗಳಲ್ಲಿ ಮುಖಭಾವ ಅಥವಾ ಮೂಡ್ ಮೂಡಿಸುವ ಯತ್ನ ಯಶಸ್ವಿಯಾಗಿ ಅವು ಜೀವಕಳೆಯಿಂದ ತುಂಬಿಕೊಂಡಿವೆ. ಶಿವನು ಹೊರಹೊಮ್ಮಿಸುವ ಮುಗುಳ್ನಗೆ, ಉಮೆಯ ಸ್ತ್ರೀ ಸಹಜ ನಾಚಿಕೆ, ಭಕ್ತಾದಿಗಳ ಭಯ, ಭಕ್ತಿಭಾವ, ರಭಸದಿಂದ ಓಡಿ ಬರುತ್ತಿರುವ ಕಾಡುಹಂದಿಗಳನ್ನು ಎದುರಿಸುವವರ ಭಯ-ಭೀತಿಗಳನ್ನೆಲ್ಲ ಸುಲಭವಾಗಿ ಗುರುತಿಸಬಹುದಾಗಿದೆ. ನೆರೆದ ಭಕ್ತಾದಿಗಳಲ್ಲಿ ಹಲಬಗೆಯ ಮುಖಭಾವಗಳನ್ನು ಚಿತ್ರಿಸಲಾಗಿದೆ. ಓರ್ವ ಸಾಧುವಿನ ಕೋಪ ಕಾರುತ್ತಿರುವ ಮುಖಭಾವ ಮರೆಯುವಂತೆಯೇ ಇಲ್ಲ. ಅದರಂತೆ ತನ್ನ ಮೃತ ಕರುವನ್ನು ನೆಕ್ಕುವ ತಾಯಿ ಗೋವನ್ನು ವೀಕ್ಷಿಸಿದಾಗ, ಮನಸ್ಸು ಕರಗದೇ ಇರದು!

ಯಾವುದೇ ಅಂಕಣದ ಹೆಚ್ಚಿನ ಭಾಗ ಹುಸಿ ಹೋಗದಂತೆ ಎಚ್ಚರಿಕೆ ವಹಿಸಿದ್ದಾರೆ. ದೇವ ದೇವತೆಯರ ಚೌಕಟ್ಟಿನಲ್ಲಿ ಗಗನ ವಿಹಾರಿಗಳಾದ ಅಪ್ಸರೆಯರು ಪುಷ್ಪವೃಷ್ಟಿ,

ಮಾಡುತ್ತಿರುವುದನ್ನು ಸೇರಿಸಲಾಗಿದೆ. ಶಿವನ ಗಣಸ್ತೋಮ ಹೊತ್ತಿರುವ ನಿಶಾನೆಗಳು ಎತ್ತರದಲ್ಲಿ ಕಂಗೊಳಿಸಿದರೆ ಮಾಡಿನಿಂದ ಸುಂದರವಾದ ಗುಳೋಪುಗಳನ್ನು ಇಳಿಬಿಟ್ಟಂತೆ, ಮರೆಯದೇ ಸೇರಿಸಲಾಗಿದೆ.

ಧಾರ್ಮಿಕ ಚಿತ್ರಗಳು

ಇಲ್ಲಿಯ ಚಿತ್ರಗಳೆಲ್ಲ ಮಹಾಭಾರತ. ರಾಮಾಯಣ ಹಾಗೂ ಶಿವ ಪುರಾಣಗಳ ಕಥೆಗಳನ್ನು ಆಧರಿಸಿವೆ. ಸಜೀವ ವ್ಯಕ್ತಿಗಳಿಗಿಂತ ಹಿರಿದಾಗಿಸಿದ ಈ ದೇವ -ದೇವತೆಗಳನ್ನು ಸುಲಭವಾಗಿ ಗುರುತಿಸಬಹುದು. ಶಿವ- ಪಾರ್ವತಿ ವಿವಾಹ, ದಕ್ಷಿಣಾಮೂರ್ತಿ, ಶ್ರೀರಾಮ ಪಟ್ಟಾಭಿಷೇಕ ಅಂಕಣಗಳು ತಕ್ಕಮಟ್ಟಿಗೆ ಸುಸ್ಥಿತಿಯಲ್ಲಿವೆ. ಕಿರಾತಾರ್ಜುನೀಯ ಪ್ರಸಂಗವನ್ನು ವಿವಿಧ ಹಂತಗಳಲ್ಲಿ ರೂಪಿಸಲಾಗಿದೆ. ಮಹೇಶ್ವರನ ಮದುವೆಯ ಚಿತ್ರೀಕರಣವನ್ನು ಮದುಮಗಳ ಶೃಂಗಾರದ ಸನ್ನಿವೇಶದಿಂದಲೇ ಪ್ರಾರಂಭಿಸಲಾಗಿದೆ. ಬ್ರಹ್ಮದೇವನ ಮೇಲ್ವಿಚಾರಣೆಯಲ್ಲಿ ನಡೆಯಲಿದ್ದ ಈ ಶುಭಕಾರ್ಯಕ್ಕೆ ವಿಷ್ಣು ಪರಮಾತ್ಮ, ಕುಬೇರ, ಅಗ್ನಿ, ವರುಣ, ವಾಯುದೇವರಂಥ ದೇವಾಧಿದೇವತೆಗಳೆಲ್ಲ ನೆರೆದಿದ್ದಾರೆ. ನಂತರದ ಚಿತ್ರಪಟ್ಟಿಕೆಯಲ್ಲಿ ನವದಂಪತಿಗಳು ಚದುರಂಗದಾಟದಲ್ಲಿ ಮೈಮರೆತದ್ದನ್ನು ಕಾಣಬಹುದಾಗಿದೆ.

ಅರ್ಧ ಮಂಡಪದಲ್ಲಿ ಶಿವಲೀಲಾ ಪ್ರಸಂಗಗಳನ್ನು ಪ್ರತಿನಿಧಿಸುವ ಅನೇಕ ಚಿತ್ರಗಳಿವೆ. ಮೊಟ್ಟ ಮೊದಲಿಗೆ, ಶಿವನು ಲಿಂಗದಿಂದ ಪ್ರತ್ಯಕ್ಷನಾಗಿ ನೆರೆದ ಭಕ್ತಾದಿಗಳನ್ನು ಆಶೀರ್ವದಿಸುತ್ತಾನೆ. ಸನಿಹದಲ್ಲಿ ಭಕ್ತ ಮಾರ್ಕಂಡೇಯನು ಕಿರಿಯ ಬಾಲಕನಾಗಿ ಕಾಣಿಸಿಕೊಂಡಿದ್ದಾನೆ. ಇನ್ನೊಂದರಲ್ಲಿ ದುಷ್ಟಸಂಹಾರಿಯಾಗಿ, ರಾಕ್ಷಸನನ್ನು ಮೆಟ್ಟಿ ನಿಂತು, ಕೈಯಲ್ಲಿದ್ದ ತ್ರಿಶೂಲದಿಂದ ತಿವಿಯುತ್ತಿದ್ದಾನೆ. ಕಿರಿಯ ಬೆಟ್ಟ ಒಂದರ ಮೇಲೆ ಆರೂಢನಾಗಿದ್ದ ದಕ್ಷಿಣಾಮೂರ್ತಿಯನ್ನು ಸಾಧು ಸಂತರು ಸುತ್ತುವರಿದಿದ್ದಾರೆ. ತನ್ನ ಪರಮಭಕ್ತ ಚಂಡಿಕೇಶ್ವರನಿಗೆ ಶಿವನು ಪರಶುವನ್ನು ದಯಪಾಲಿಸುತ್ತಿರುವ ಚಿತ್ರವು ಅಪರೂಪದ್ದಾಗಿದೆ. 'ಭಿಕ್ಷಾಟನ ಶಿವ'ದಲ್ಲಿ ಭಿಕ್ಷೆ ನೀಡಲು ಬಂದ ಋಷಿ ಪತ್ನಿ, ಶಿವನ ಅನುಪಮ ಸೌಂದರ್ಯಕ್ಕೆ ಮನಸೋತಾಗ, ಉಟ್ಟ ಸೀರೆ ಸೊಂಟದಿಂದ ಜಾರಿಕೊಂಡಿದ್ದೂ ಅವಳ ಗಮನಕ್ಕೆ ಬಂದಿಲ್ಲ ! ಭಕ್ತಾದಿಗಳ ಗುಂಪಿನಲ್ಲಿ ಹರಿಹರಮೂರ್ತಿ, ಮೋಹಿನಿಯನ್ನು ಎದುರುಗೊಳ್ಳುತ್ತಿರುವ ಶಿವ-ಉಮಾಮಹೇಶ್ವರ ಚಿತ್ರಗಳನ್ನು ಕಾಣಬಹುದು. ಇನ್ನೊಂದು ಚಿತ್ರದಲ್ಲಿ ಸೂರ್ಯ, ಚಂದ್ರರು, ಚಕ್ರಗಳಾಗಿರುವ ರಥದ ಸಾರಥಿ ಬ್ರಹ್ಮ, ರಥದಲ್ಲಿ ಆರೂಢನಾಗಿರುವ ತ್ರಿಪುರಾಂತಕ ಶಿವನು, ಅಲ್ಲಿಂದಲೇ ತ್ರಿಪುರವನ್ನು ಸಂಹರಿಸುತ್ತಿರುವಂತೆ ಚಿತ್ರಿಸಲಾಗಿದೆ.

ಆರಾಧನಾ ಮಂಟಪದ ಮುಚ್ಚಿಗೆಯಲ್ಲಿ ಶಿವಲೀಲೆಯ ಲಿಂಗೋದ್ಭವ. ಅಂಧಕಾಸುರ ವಧೆ, ಚಂಡಿಕಾನುಗ್ರಹ, ಹರಿಹರ ದಕ್ಷಿಣಾಮೂರ್ತಿ, ಅರ್ಧನಾರೀಶ್ವರ, ಕಲ್ಯಾಣಸುಂದರ, ಗೌರೀಪ್ರಸಾದಿತ, ಅನಂತತಾಂಡವ. ವೃಷಭರುದ್ರ ಮುಂತಾದ ಭಂಗಿಗಳನ್ನು ಗುರುತಿಸಬಹುದು. ರಘುನಾಥ ದೇವಾಲಯದ ಮುಚ್ಚಿಗೆಯಲ್ಲಿ ಬೃಹದಾಕಾರದ ವಿಷ್ಣು ಪರಮಾತ್ಮನನ್ನು ಚಿತ್ರಿಸಿ ಸುತ್ತಲೂ ದಶಾವತಾರಗಳನ್ನು ರೂಪಿಸಲಾಗಿದೆ. ಮುಖಮಂಟಪದಲ್ಲಿ ದ್ರೌಪದಿ ಕಲ್ಯಾಣ,

ಗೌರೀ ಕಲ್ಯಾಣ, ಭೂಕೈಲಾಸ, ಶ್ರೀರಾಮ ಪಟ್ಟಾಭಿಷೇಕ ಮುಂತಾದವುಗಳನ್ನು ಕಾಣಬಹುದು. ಈ ಭಿತ್ತಿ ಚಿತ್ರಗಳಲ್ಲೆಲ್ಲ ಹರಿ-ಹರರಲ್ಲಿ ಸಮತೋಲನ ಕಾಯ್ದುಕೊಳ್ಳಲು ಯತ್ನಿಸಿದರೂ, ಶಿವನಿಗೇ ಸಿಂಹಪಾಲು ಸಂದಾಯವಾಗಿದೆ ಎನ್ನುವದರಲ್ಲಿ ಸಂದೇಹವೇ ಇಲ್ಲ!

ವ್ಯಕ್ತಿ ಚಿತ್ರಣಗಳು

ಈ ಭಿತ್ತಿಚಿತ್ರಗಳ ಐತಿಹಾಸಿಕ ಪ್ರಾಮುಖ್ಯವನ್ನು ಮರೆಯುವಂತಿಲ್ಲ. ಸಮಕಾಲೀನ ವ್ಯಕ್ತಿಗಳ ಚಿತ್ರಣದ ಅತ್ಯಪೂರ್ವ ದಾಖಲೆ ಇಲ್ಲಿದೆ. ದೇವಸ್ಥಾನದ ನಿರ್ಮಾಣ ಹಾಗೂ ವಿಸ್ತರಣೆಗೆ ಕಾರಣೀಭೂತರಾದ ಸೋದರರ ಚಿತ್ರದರ್ಶನ ಇಲ್ಲಿ ಮಾತ್ರ ಲಭ್ಯ. ಮುಖಮಂಟಪದ ಎರಡನೇ ಚೌಕಟ್ಟಿನಲ್ಲಿ ಈ ಬಂಧುಗಳು, ತಮ್ಮ ಇಷ್ಟದೈವತವಾದ ವೀರಭದ್ರಸ್ವಾಮಿಗೆ ಕೈಜೋಡಿಸಿ, ಭಯ ಭಕ್ತಿಯಿಂದ ವಂದಿಸುತ್ತಿದ್ದಾರೆ. ನಲವತ್ತು ವರ್ಷಗಳ ಗಡಿ ದಾಟಿರಬಹುದಾದ ವಿರುಪಣ್ಣ, ದೃಢಕಾಯನಾಗಿ ಗೌರವರ್ಣದವನಾಗಿದ್ದರೆ, ತಮ್ಮನಾದ ವೀರಣ್ಣ ನಾಯಕನು ಸುಮಾರು ಮೂವತ್ತೈದು ವರ್ಷದವನಾಗಿದ್ದು, ಕೃಶಾಂಗನಾಗಿ ಕೃಷ್ಣವರ್ಣದವನು. ಬಂಧುಗಳ ಜೊತೆಯಲ್ಲಿ, ಅನೇಕ ಭಕ್ತಾದಿಗಳಲ್ಲಿ, ಸಮಕಾಲೀನ ಗಣ್ಯರು ಇದ್ದಿರಬಹುದು. ಆರಾಧನಾ ಮಂಟಪದ ಮಾಡಿನ ಮುಚ್ಚಿಗೆಯಲ್ಲಿ, ವೀರಭದ್ರಸ್ವಾಮಿಯ ಬೃಹದಾಕಾರದ ಚಿತ್ರಣವಿದ್ದು ಬಲಬದಿಗೆ ವಿರುಪಣ್ಣನು ಕೈಜೋಡಿಸಿ ನಮ್ರತೆಯಿಂದ ನಿಂತಿದ್ದರೆ, ಎಡಬದಿಯಲ್ಲಿ ಆತನ ಧರ್ಮಪತ್ನಿಯನ್ನು ಚಿತ್ರಿಸಲಾಗಿದೆ.

ಕರಪೂರ ಪಟ್ಟಣದ ಧರ್ಮಚೋಳನ ಪಕ್ಷಪಾತರಹಿತ ನ್ಯಾಯದಾನದ ಕತೆಯನ್ನು ಇಲ್ಲಿ ಚಿತ್ರಿಸಲಾಗಿದೆ. ಆತನ ಮಗ ಭೀಮಚೋಳನು ವಿಹಾರಕ್ಕೆ ಹೋದಾಗ ಅವನ ರಥದ ಅಡಿಯಲ್ಲಿ ಹಸುವಿನ ಕರು ಸಿಕ್ಕಿಹಾಕಿಕೊಂಡು ಸಾಯುತ್ತದೆ. ಶೋಕತಪ್ತ ಗೋಮಾತೆ, ಅರಸನೆಡೆಗೆ ಧಾವಿಸಿ ನ್ಯಾಯದಾನವನ್ನು ಮಾಡಿಸುತ್ತಾಳೆ. ರಾಜನೋ, ಅಪರಾಧ - ಶಿಕ್ಷೆಗಳು ಸಮಪ್ರಮಾಣದಲ್ಲಿ ಇರಬೇಕೆಂದು ನಂಬಿದಂತಿದೆ! ತನ್ನ ಮಗನ ಶಿರಚ್ಛೇದ ಮಾಡಿಸಿದ. ಅಲ್ಲದೇ ಮೃತಪಟ್ಟ ಕರುವಿಗೆ ಜೀವದಾನ ನೀಡುವಂತೆ ಶಿವನನ್ನು ಮೆಚ್ಚಿಸುತ್ತಾನೆ. ಆತನ ಧರ್ಮನಿಷ್ಠೆಗೆ ಮೆಚ್ಚಿದ ಶಿವನು ಗೋಮಾತೆಗೆ ಸಜೀವ ಕರುವನ್ನು ಹಿಂದಿರುಗಿಸುವ ಜೊತೆಗೆ, ಭೀಮ ಚೋಳನಿಗೆ ಪ್ರಾಣದಾನ ಮಾಡಿ ಕೈಲಾಸಕ್ಕೆ ಕರೆದೊಯ್ಯುತ್ತಾನೆ. ಚಿತ್ರಪಟ್ಟಿಯಲ್ಲಿ ಜೋಡಿಕುದುರೆ ಎಳೆದೊಯ್ಯುವ ಆರು ಚಕ್ರಗಳ ರಥದ ಮುಂಭಾಗದಲ್ಲಿ ಭೀಮಚೋಳನು ನಿಂತಿದ್ದಾನೆ. ಕರುವಿನ ಪಾರ್ಶ್ವದೇಹ, ರಥದಲ್ಲಿ ಗೋಚರಿಸುತ್ತದೆ. ಶೋಕಾರ್ತ ಹಸು ಅದನ್ನು ನೆಕ್ಕುತ್ತ ರಥವನ್ನು ಹಿಂಬಾಲಿಸುತ್ತಿದೆ. ರಥದ ಎದುರಿನಲ್ಲಿ ಧರ್ಮಚೋಳನು ಭಯ-ಭಕ್ತಿಯಿಂದ ಕೈ ಜೋಡಿಸಿ ನಂದಿಯನ್ನೇರಿ ತನ್ನೆಡೆಗೆ ಬರುತ್ತಿರುವ ಶಿವ - ಪಾರ್ವತಿಯರನ್ನು ಸ್ವಾಗತಿಸುತ್ತಿದ್ದಾನೆ.

ಚಿತ್ರಕಾರರು, ದೇವ - ದೇವತೆಗಳನ್ನು, ಪೌರಾಣಿಕ ವ್ಯಕ್ತಿಗಳನ್ನು ಚಿತ್ರಿಸುವಾಗ, ಜನಸಾಮಾನ್ಯರನ್ನು ಕಡೆಗಣಿಸಿಲ್ಲ. ಸಾಧ್ಯವಿದ್ದೆಡೆ ಮರೆಯದೇ ಅವರನ್ನು ಸೇರಿಸಿದ್ದಾರೆ. ಶಿವದರ್ಶನಕ್ಕೆ ಹಾತೊರೆದು ಧಾವಿಸಿ ಬರುವವರು, ದೇವಾಧಿದೇವನ ಆಶೀರ್ವಾದ

ನಿರೀಕ್ಷಿಸುತ್ತಿರುವವರು, ಉಮೆಯ ಅಲಂಕಾರಕ್ಕೆ ನೆರವು ನೀಡುವ ಹೆಂಗಳೆಯರು, ಬೇಟೆಗಾರರು, ಇದಕ್ಕೆ ಉತ್ತಮ ಉದಾಹರಣೆ. ಈ ಜನ ಸಾಮಾನ್ಯರ ಅಲ್ಲಲ್ಲಿಯ ಚಿತ್ರಣವನ್ನು ಅಭ್ಯಾಸ ಮಾಡಿದಾಗ, ಸಮಕಾಲೀನ ಸಾಮಾಜಿಕ ಜೀವನ ಅರಿಯಲು ನೆರವಾಗುವುದರಲ್ಲಿ ಸಂದೇಹವೇ ಇಲ್ಲ.

ಹೆಂಗಳೆಯರ ಚಿತ್ರಣ

ಚಿತ್ರಕಾರರು ಮಹಿಳಾ ಪಕ್ಷಪಾತಿಗಳಾಗಿದ್ದರೇ ? ಎಂದು ಶಂಕಿಸುವಷ್ಟು ತಮ್ಮ ಕೃತಿಗಳಲ್ಲಿ ಗಣ್ಯಸ್ಥಾನವನ್ನು ಕೊಟ್ಟಿದ್ದಾರೆ ! ಉಮೆ, ಮೋಹಿನಿ, ಗಣ್ಯರ ಪತ್ನಿಯರು, ಸೇವಕಿಯರು, ಎಂದು ಭೇದ ಭಾವ ಕಲ್ಪಿಸದೆ ಸರ್ವರಿಗೂ ರಂಭೆ-ಊರ್ವಶಿಯರಿಗೆ ಮೀಸಲಿಡಬೇಕಾದ ಉಚ್ಚಸ್ಥಾನವನ್ನು ಕೊಡಲಾಗಿದೆ. ಒಮ್ಮೆ ನೋಡಿದರೆ ಸಾಲದು! ಎನಿಸುವಂಥ ಲಾವಣ್ಯವತಿಯರು ಅವರೆಲ್ಲ !

ಕೇಶಾಲಂಕಾರ : ಶಿವನನ್ನು ವರಿಸಲು ಸಿದ್ಧಳಾಗುತ್ತಿರುವ ಗಿರಿಜೆಯು ತನ್ನ ನೀಳ ಕೇಶರಾಶಿಯನ್ನು ಮಾರುದ್ದ ಜಡೆಯಾಗಿ ಹೆಣೆದುಕೊಂಡಿದ್ದಾಳೆ. ಅವಳ ಸಿಂಗಾರಕ್ಕೆ ನೆರವಾಗಲು ಟೊಂಕಕಟ್ಟಿ ನಿಂತ ಆರು ಸಖಿಯರು ಸ್ವತಃ ವಿವಿಧ ರೀತಿಯಲ್ಲಿ ಕೇಶಾಲಂಕಾರ ಮಾಡಿಕೊಂಡಿದ್ದಾರೆ! ದಟ್ಟವಾದ ಗಿಡ್ಡ ಕೂದಲನ್ನು ಎಡಮುಡಿ, ಬಲಮುಡಿ, ಎತ್ತರದ ಮುಡಿಗಳಲ್ಲಿ ಕಟ್ಟಿಕೊಂಡಿದ್ದಾರೆ. ಉದ್ದವಾದ ಕೂದಲಿನವರು ಜೋಲ್ಮುಡಿಯ ರೂಪದಲ್ಲಿ ಬೆನ್ನ ಹಿಂದೆ ಇಳಿಬಿಟ್ಟಿದ್ದಾರೆ (ಚಿತ್ರ ೩). ಓರ್ವಳು, ಬಹುಶಃ ಚಂದ್ರಾಕೃತಿಯ ತಗಡಿಗೆ ಅಥವಾ ಬೆಂಡಿಗೆ ಕೇಶರಾಶಿಯನ್ನು ಸುತ್ತಿ 'ಸೆಕ್ಕುಂದುರುಬು' ರಚಿಸಿಕೊಂಡಿದ್ದಾಳೆ. ಇನ್ನೊಬ್ಬಳು ತನ್ನ ಕಿರಿಗೂದಲಿಗೆ, ಚೆಂಡಿನಾಕಾರದ ಚವರಿ ಸೇರಿಸಿ ಬೃಹದಾಕಾರದ 'ಧಮಿಲ್ಲ' ಹೊತ್ತಿದ್ದಾಳೆ. ತಲೆ ತುಂಬ ಉದ್ದ ಕೂದಲಿನಾಕೆ, ಅಭಿಮಾನದಿಂದ ಮೊಣಕಾಲನ್ನು ಸ್ಪರ್ಶಿಸುವ ಜಡೆ ಹೆಣೆದುಕೊಂಡರೆ, ಚೋಟುದ್ದ ಕೂದಲಿನಾಕೆ ಕುತ್ತಿಗೆಯ ಹಿಂಭಾಗದಲ್ಲಿ 'ಪಿನ್' ಸಿಗಿಸಿದ್ದಾಳೆ. ಕೇಶರಾಶಿಯನ್ನು ಗಾಳಿಗೆ ತೂರಬಿಟ್ಟವರೂ ಇಲ್ಲದಿಲ್ಲ.

ಎಂದಿನಂತೆ ಅಂದಿನ ಹೆಂಗಳೆಯರಿಗೂ ಹೂವುಗಳೆಂದರೆ ಪಂಚಪ್ರಾಣ ಇದ್ದಿರಬೇಕು. ಸೇವಂತಿಗೆಯಂತಹ ಒಂಟಿ ಹೂವನ್ನು ತುರುಬಿಗೆ ಸೇರಿಸಿದವರಿದ್ದಾರೆ. ದಾಸವಾಳದಂತಹ ಹಿರಿದಾದ ಹೂವನ್ನು ಮುಡಿದವರಿದ್ದಾರೆ. 'ಪೂಮುಡಿ' ಎದ್ದು ತೋರುವಂತೆ ಹತ್ತಾರು ಹೂ ಸಿಗಿಸಿದವರಿದ್ದಾರೆ. ಇಡೀ ಜಡೆಗೆ ಹೂವಿನ ಅಲಂಕಾರ ಮಾಡಿದ್ದಾರೆ. ಮುಡಿಯ ಕೆಳಭಾಗಕ್ಕಷ್ಟೇ ಹೂವನ್ನು ಜೋಡಿಸಿಕೊಂಡು ಮೆರೆದಿದ್ದಾರೆ. ಬಿಳಿ ಮತ್ತು ಹಳದಿ ಹೂಗಳ ಪ್ರಾಧಾನ್ಯ ಚಿತ್ರಗಳಲ್ಲಿ ಎದ್ದು ಕಾಣುತ್ತದೆ.

ಆಭರಣಗಳು

ಲೇಪಾಕ್ಷಿ ಭಿತ್ತಿಚಿತ್ರಗಳ ನಾರಿಯರೆಲ್ಲ ತಮ್ಮ ಸೌಂದರ್ಯ ಹಾಗೂ ವ್ಯಕ್ತಿತ್ವದ ಮೆರುಗು ಹೆಚ್ಚಿಸಲು ಅನೇಕಾನೇಕ ಆಭರಣಗಳನ್ನು ಕಲಾತ್ಮಕವಾಗಿ ಬಳಸಿಕೊಂಡಿದ್ದಾರೆ. ಅವುಗಳಲ್ಲಿ ಹೆಚ್ಚಿನವು, ಮುತ್ತುಗಳಿಂದ ರಚಿತವಾದವುಗಳು. ಕನ್ನಡ ಕಾವ್ಯಗಳಲ್ಲಿ ಬರುವ

ವರ್ಣನೆಯಿಂದ ಕೂಡ ಮುತ್ತುಗಳ ಆಭರಣಗಳು ಅತ್ಯಂತ ಜನಪ್ರಿಯವಾಗಿದ್ದದ್ದು ತಿಳಿದುಬರುತ್ತದೆ. ಬೈತಲೆಯಲ್ಲಿ ಮುತ್ತಿನ ಆಭರಣ (ಬೈತಲ ಮಣಿ) ಹಾಗೂ ಮುತ್ತಿನ ಸರಗಳ ಕೇಶಾಲಂಕಾರ ಸಾಮಾನ್ಯವಾಗಿತ್ತು. 'ಮುತ್ತಿನ ಮುಡಿ' 'ಮುತ್ತಿನ ಬಲೆ'ಗಳ ಉಲ್ಲೇಖ ಸಿಗುತ್ತದೆ. ಮುತ್ತುಗಳೊಂದಿಗೆ ಹವಳ, ಪಚ್ಚೆ, ಕೆಂಪುಗಳನ್ನು ಜೋಡಿಸಿದ ಜಡೆ ಬಂಗಾರ ವಿಶೇಷ ಸಂದರ್ಭಗಳಲ್ಲಿ ಶೋಭಿಸುತ್ತಿತ್ತು. ಶಿರೋಲಂಕಾರಕ್ಕೆ ಒಪ್ಪುವ ಕರ್ಣಭೂಷಣಗಳನ್ನು ಗುರುತಿಸಬಹುದು. ಹೆಚ್ಚಿನವು ವರ್ತುಲಾಕಾರದವಿದ್ದು, ಅರೆಕಿವಿ ಮುಚ್ಚುವಷ್ಟು ದೊಡ್ಡದಿರುತ್ತಿದ್ದವು. ಕೆಲ ಯುವತಿಯರ ಕಿವಿಯ ಮೇಲ್ಗಡೆ ಬುಗುಡಿಗಳಿದ್ದರೆ ಕೆಲವರ ಮೂಗುಬಟ್ಟು ಸ್ಫುಟವಾಗಿ ತೋರುತ್ತದೆ.

ಕೊರಳಿನಲ್ಲಿ ಅನೇಕ ಪ್ರಕಾರದ ಆಭರಣಗಳನ್ನು ಧರಿಸುತ್ತಿದ್ದರು. ಬಿಗಿಯಾದ ಸುವರ್ಣ ಪಟ್ಟಿಕೆಗಳು (ಇಂದಿನ ನೆಕ್‌ಲೇಸ್ ಮಾದರಿಯವು) ; ಚಿಕ್ಕ ದೊಡ್ಡ ಮುತ್ತಿನ ಪದಕಗಳಿದ್ದ ಸರಗಳು; ಸರಿಕೆ, ಕಂಠಿಕೆಗಳು, ಉದ್ದವಾದ ನಾಭಿಯವರೆಗಿನ ಸರಗಳು, ಬಾಹುಪೂರ (ತೋಳ್‌ಬಂದಿ) ಕೇಯೂರಗಳು, ಕೈಬಳೆಗಳ ಪ್ರದರ್ಶನವೇ ಏರ್ಪಟ್ಟಂತೆ, ನಾರಿಯರೆಲ್ಲ ಬೆಳ್ಳಿ, ಬಂಗಾರ ಮತ್ತಿತರ ಧಾತುಗಳ ಮಣಿಖಚಿತ ಬಳೆಗಳನ್ನು ತೊಟ್ಟಿದ್ದಾರೆ. ಗಾಜಿನವು ಇದ್ದವೇ ? ಎಂದು ಬೇರ್ಪಡಿಸಿ ಹೇಳುವುದು ಕಷ್ಟ ! ಉಟ್ಟ ಸೀರೆಗೆ ಒಪ್ಪುವಂಥ ರತ್ನಗಳ ಆಭರಣಗಳನ್ನೇ ತೊಡುತ್ತಿದ್ದರು.

ಹೂಬಳ್ಳಿ, ಹಚ್ಚೆಯ ಲತಾಂಗಿ

ಈ ಚಿತ್ರಗಳನ್ನು ವೀಕ್ಷಿಸುತ್ತಿದ್ದಂತೆ, ಅಂದಿನ ಹೆಂಗಳೆಯರು ತಮ್ಮ ಅಂಗಾಂಗಗಳ ಸೌಂದರ್ಯವನ್ನು ಹೆಚ್ಚಿಸಲು ಅದೆಷ್ಟು ಲಕ್ಷ್ಯ ಪೂರೈಸುತ್ತಿದ್ದರು, ಎಂಬುದರ ಅರಿವಾಗುತ್ತದೆ. ಮೇಲು ಹಣೆಗೆ ಅಡ್ಡಲಾಗಿ ಎಳೆದ ವಿಭೂತಿ ಪಟ್ಟೆಯಿಂದ ಅವರೆಲ್ಲ ಶಿವಭಕ್ತೆಯರೆಂದು ಖಚಿತವಾದರೆ, ಅದರಡಿಯಲ್ಲಿ ಅರ್ಧಚಂದ್ರಾಕೃತಿಯ ಕುಂಕುಮ, ಅವರ ಸುಮಂಗಲತ್ವವನ್ನು ಸಾರಿ ಹೇಳುವಂತಿದೆ. ಅನೇಕ ಮಹಿಳೆಯರು, ಸೀರೆ ಮುಚ್ಚದ ಮೈಭಾಗ, ಅನಾವಶ್ಯಕ ಆಕರ್ಷಣೆಗೆ ಒಳಪಡದಂತೆ, ಶ್ರೀಗಂಧ, ಕುಂಕುಮ, ಕಸ್ತೂರಿ ಲೇಪದಿಂದ ಹೂಬಳ್ಳಿಗಳನ್ನು ಚಿತ್ರಿಸಿಕೊಂಡಿದ್ದಾರೆ. ಕೆಲವಾದರೂ ಶಾಶ್ವತವಾಗಿರಲು ಹಚ್ಚೆಯ ಹೂ ಮತ್ತಿತರ ಆಕೃತಿಗಳನ್ನು ಹಾಕಿಕೊಂಡಿರುವ ಸಂಭವವಿದೆ.

ಬಟ್ಟೆ ಬರೆಗಳು

ಚಿತ್ರಿತಗೊಂಡ ಹೆಂಗಳೆಯರೆಲ್ಲ ಸುಂದರ ಕೃಶಾಂಗಿಯರು ! ಆಹಾರ ಕುರಿತು ತಲೆಕೆಡಿಸಿಕೊಳ್ಳದೇ ಕೇವಲ ದೈಹಿಕ ಶ್ರಮದಿಂದಲೇ ಇದನ್ನು ಸಾಧಿಸಿಕೊಂಡಿರಲು ಸಾಕು, ಯಾರೊಬ್ಬರಿಗೂ ಕೊಬ್ಬು, ಬೊಜ್ಜು ಇಲ್ಲವೇ ಇಲ್ಲ ! ಏಳು ಗಜದ ಸೀರೆಗಳನ್ನು ಮಾಟವಾಗಿ ಉಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಲಂಗ ತೊಡದೇ ಕುಪ್ಪಸ ಧರಿಸದೇ ಕೇವಲ ಒಂದು ಸೀರೆಯಿಂದ ತಮ್ಮ ಹೆಣ್ತನವನ್ನು ಇನ್ನೊಬ್ಬರ ಕಣ್ಣಿಗೆ ಕಾಮುಕ 'ದೃಷ್ಟಿ'ಯಾಗದಂತೆ ಅತ್ಯಂತ ಕಲಾತ್ಮಕವಾಗಿ ಮೈಮುಚ್ಚುವ ಕಲೆ, ಇಂದಿನವರಿಗೆ ಸೀರೆಯುಡುಗೆಯ ಪಾಠದಂತಿದೆ!

ಸೀರೆಯ ನಿರಿಗೆಗಳನ್ನು ಪಾದದವರೆಗೆ ಇಳಿಬಿಟ್ಟು, ನಡುವಿಗೆ ಸೀರೆಯ ನಕ್ಷೆ, ಕಲಾಕೃತಿಗಳು ಎದ್ದು ಕಾಣುವಂತೆ ಸುತ್ತಿರುತ್ತಾರೆ. ಸೆರಗು, ಎಡಭುಜದಿಂದ ಮೇಲೇರಿ ಹೋಗುವಾಗ ವಕ್ಷಸ್ಥಳವನ್ನು ಸರಿಯಾಗಿ ಮುಚ್ಚಿಯೇ ಹಾದಿರುತ್ತದೆ. ಕಂಡೂ ಕಾಣದಂತೆ ಮುಚ್ಚಿದ ಸ್ತ್ರೀತ್ವ! ಸ್ತ್ರೀ ದೇವತೆಗಳೂ ಇದೇ ಮಾದರಿಯನ್ನು ಅನುಸರಿಸಿವೆ (ಚಿತ್ರ 1,2,3).

ಸೀರೆಗಳ ವರ್ಣವೈಖರಿ, ಚಿತ್ತಾರಗಳು ಮುಂತಾದವನ್ನು ಸ್ವಲ್ಪದರಲ್ಲಿ ವಿವರಿಸುವದು ಕಷ್ಟ! ಅಡ್ಡ, ದಪ್ಪ, ಉದ್ದ, ತೆಳು ಸೂಕ್ಷ್ಮಗೀರುಗಳನ್ನೇ ಚಮತ್ಕಾರವಾಗಿ ಬಳಸಿ ಅದೆಷ್ಟೋ ನಕ್ಷೆಗಳನ್ನು ರಚಿಸಲಾಗಿದೆ. ನೇಯ್ಗೆಯ ಕಲೆ ಎದ್ದುಕಾಣುವಂತೆ ಹಾಸುಹೊಕ್ಕಾಗಿದ್ದ ಚೌಕುಡಿಗಳು, ಚಚ್ಚೌಕಗಳು, ಕಾಟಕೋನಗಳು, ಡೈಮಂಡ್‌ಕಟ್ ಮುಂತಾದ ಅದೆಷ್ಟೋ ಆಕಾರಗಳನ್ನು ಗುರುತಿಸಬಹುದು. ಇದರಂತೆ ವರ್ತುಲಾಕೃತಿಯ ಅಸಂಖ್ಯ ಅವತಾರಗಳ ದರ್ಶನ ಇಲ್ಲಿ ಆಗುತ್ತದೆ. ಲಕ್ಷಾಂತರ ಬಿಂದುಗಳು, ಸಾವಿರಾರು ಗೋಲಕಗಳು, ನೂರಾರು ವರ್ತುಣಗಳು, ಹತ್ತಾರು ಚಕ್ರಗಳಿಂದ ಉಟ್ಟ ಬಟ್ಟೆಯನ್ನು ತುಂಬಿ ತುಳುಕಿಸಿದ್ದಾರೆ. ಹೂಬಳ್ಳಿಗಳ ಕಲಾಪತ್ತಿನ ಕೆಲಸ, ಬನಾರಸ್ ಅಥವಾ ಕಾಂಜೀವರಂ ಸೀರೆಗಳನ್ನು ನಾಚಿಸುವಂತೆ ಇವೆ! (ಚಿತ್ರ 4). ಈ ರೀತಿಯ ಸೀರೆಗಳು ಆ ಕಾಲಕ್ಕೆ ಕರ್ನಾಟಕದಲ್ಲಿ ಮೈದಾಳುತ್ತಿದ್ದ ಪ್ರತ್ಯಕ್ಷ ಪುರಾವೆ ಇದ್ದುದರಿಂದ ಇದು ಕೇವಲ ಚಿತ್ರಕಾರರ ಕಲ್ಪನಾ ಸೃಷ್ಟಿ ಎನ್ನುವಂತಿಲ್ಲ. ಅತ್ಯಾಧುನಿಕ ಸೀರೆ ತಯಾರಕರು ಇಲ್ಲಿಯ ಡಿಸೈನ್‌ಗಳಿಂದ ಸ್ಫೂರ್ತಿ ಪಡೆಯುವಷ್ಟು ಅವು ನಿತ್ಯನೂತನವಾಗಿವೆ. ನಾವೀನ್ಯದ ಹಪಾಹಪಿಗೆ ಯುಗದ ಪರಿಮಿತಿ ಇಲ್ಲ ಅಲ್ಲವೇ ?

ಪುರುಷರ ಚಿತ್ರಣ

ಶಿರೋಲಂಕಾರಗಳು

ವಿಜಯನಗರ ಕಾಲದಲ್ಲಿ ಕುಲ್ಲಾಯಿ ಅಥವಾ ಕುಲಾವಿ ಎಂಬ ಎತ್ತರವಾದ ಟೋಪಿಗಳನ್ನು ಧರಿಸುವುದು ಆಗಿನ ಕಾಲದಲ್ಲಿ ವಾಡಿಕೆಯಾಗಿತ್ತೆಂದು ವಿದೇಶೀ ಪ್ರವಾಸಿಗಳಿಂದ ತಿಳಿದುಬರುತ್ತದೆ. ತಿರುಪತಿ ಮತ್ತು ಕಾಳಹಸ್ತಿಗಳಲ್ಲಿರುವ ಕೃಷ್ಣದೇವರಾಯನ ಪ್ರತಿಮೆ ಹಾಗೂ ಕೆಲವು ಶಿಲ್ಪಗಳಿಂದ ಅದರ ಒಟ್ಟಾರೆ ಸ್ವರೂಪ ಅರಿಯಬಹುದಾದರೂ, ಅವುಗಳ ರಚನೆ, ವೈವಿಧ್ಯ, ಕುಸುರಿನ ಕೆಲಸಗಳನ್ನು ಗುರುತಿಸಲು ಲೇಪಾಕ್ಷಿಯ ಭಿತ್ತಿಚಿತ್ರಗಳ ಅಧ್ಯಯನ ಸಹಾಯ ಮಾಡುತ್ತದೆ. ತಲೆಯ ಸುತ್ತಳತೆಗೆ ಅನುಗುಣವಾಗಿ ವೆಲ್ವೆಟ್, ಬಂಬಾಸ್ಕ್, ಸ್ಯಾಟೀನ ಮುಂತಾದ ವಿದೇಶಿ ಬಟ್ಟೆಯ ಪ್ರಕಾರಗಳನ್ನು ಕತ್ತರಿಸಿ, ಹೊಲಿದು ಸಿದ್ಧಮಾಡಿದ ಟೋಪಿಗಳೇ 'ಕುಲಾಯಿ' ಅನಿಸಿಕೊಳ್ಳುತ್ತಿದ್ದವು. ಅವುಗಳಿಗೆ ಜರಿಯ ಹೂ, ಬಳ್ಳಿಗಳ ಕಸೂತಿ ಇರುತ್ತಿದ್ದು, ಅಂತಸ್ತಿಗೆ ತಕ್ಕಂತೆ ಮುತ್ತು, ರತ್ನ, ವಜ್ರಗಳನ್ನು ಸೇರಿಸಿದ ಕಲಾಕೃತಿಗಳನ್ನು ಅಳವಡಿಸುತ್ತಿದ್ದರು (ಚಿತ್ರ 5).

ವಿರುಪಣ್ಣನು ಆರು ಅಂಗುಲ ಎತ್ತರದ ಕುಲಾವಿಯನ್ನು ಧರಿಸಿದ್ದಾನೆ. ಅದರ ಚೂಪಾದ ತುದಿಯಿಂದ ಗೊಂಡೆಗಳನ್ನು ಗಾಳಿಗೆ ಹಾರಿ ಬಿಡಲಾಗಿದೆ. ನೇರಳೇಬಣ್ಣದ, ಚಂಡು ಮಲ್ಲಿಗೆಯಂಥ ಹೂಗಳನ್ನು ಕುಸುರಿ ಕೆಲಸದಲ್ಲಿ ಟೋಪಿಯ ಉದ್ದಕ್ಕೂ ರಚಿಸಲಾಗಿದೆ.

ವೀರಣ್ಣ ನಾಯಕನು ಇಂಥದೇ ಕುಲಾವಿಯನ್ನು ಧರಿಸಿದರೂ ಅದರ ಮೇಲೆ ಹಸಿರುಬಣ್ಣದ ಬಳ್ಳಿಗಳನ್ನು ಒಂದರ ಮೇಲೊಂದು ಹಾಯ್ದು ಹೋದಂತೆ ಕಸೂತಿ ರಚಿಸಿ, ನಡುನಡುವೆ ಹೂಗಳನ್ನು ಬಿಡಿಸಲಾಗಿದೆ. ಇನ್ನಿತರರ ಕುಲಾವಿಗಳಿಗೆ ಮುತ್ತಿನ ಗೊಂಡೆಗಳು ಇಲ್ಲದ್ದರಿಂದ ಅವು ಧರಿಸುವವರ ಅಂತಸ್ತಿಗೆ ಸರಿಯಾಗಿ ಹೊಂದಿಸಿದ್ದಿರಬೇಕು, ಅನಿಸುತ್ತದೆ. ಕೆಲ ಊರ ಪ್ರತಿಷ್ಠಿತರು, ಕುಲಾವಿಯ ಅಡಿ ಒಳಟೋಪಿಗಳನ್ನು ಧರಿಸಿದ್ದಾರೆ. ಬಿಸಿಲು ಕಾಲದ ಬೆವರು. ತಲೆಗೆ ಹಾಕುತ್ತಿದ್ದ ಎಣ್ಣೆ ಇವು ಬೆಲೆ ಬಾಳುವ ಕುಲಾವಿಗಳಿಗೆ ತಟ್ಟದೆ, ತಾಳಿಕೆ ಬರಲು ಈ ಕ್ರಮ ಕೈಗೊಂಡಿರಬೇಕು. ಚಿತ್ರಿತವಾದ ಹಲವಾರು ವ್ಯಕ್ತಿಗಳು ಕುಲಾವಿಗಳನ್ನು ಧರಿಸಿದ್ದಾರೆ.(ಚಿತ್ರ 6). ಇವರೆಲ್ಲ ಕೆಳದರ್ಜೆಯ ಅಧಿಕಾರಿಗಳಿರಲು ಸಾಕು. ಇನ್ನೂ ಕೆಲವರು ಫೆಲ್ಟ್ ಹ್ಯಾಟ್ ಮಾದರಿಯಲ್ಲಿ ರುಮಾಲು ಸುತ್ತಿದ್ದಾರೆ. ಒಂದರಲ್ಲಿ ಕೊಂಬಿನಂತೆ ತುದಿಯನ್ನು ಜೋಡಿಸಲಾಗಿದೆ. ಭಕ್ತಾದಿಗಳಲ್ಲಿ ಓರ್ವನು ತಲೆಬುರುಡೆಗೆ ಅಂಟಿಕೊಳ್ಳುವಂತೆ ಟೋಪಿಯನ್ನು ಧರಿಸಿದ್ದಾನೆ.

ಪುರುಷರಿಗೂ ಸೀರೆ !

ಆಧುನಿಕ ಮಹಿಳಾವೃಂದ, ನಾಗವೇಣಿಯನ್ನು ಕತ್ತರಿಸಿ ಹಾಕಿ, ಬಾಬ್ ಮಾಡಿಸಿ, ಜುಬ್ಬಾ, ಟೀಶರ್ಟ್, ಜೀನ್ಸ್ ಧರಿಸಿ ಪುರುಷರ ಅನುಕರಣೆ ಮಾಡಿದರೆ, ವಿಜಯನಗರ ಕಾಲದ ಪುರುಷರು ತಲೆಗೂದಲನ್ನು ಬೆಳೆಸಿ, ಮುಡಿ ಕಟ್ಟಿಕೊಂಡು, ಹೂ ಮುಡಿದು, ಆಭರಣಗಳನ್ನೆಲ್ಲ ಧರಿಸಿ, ಸೀರೆಯನ್ನುಟ್ಟು ಸ್ತ್ರೀಯರೊಂದಿಗೆ ಫ್ಯಾಶನ್‌ಗಳಲ್ಲಿ ಸ್ಪರ್ಧಿಸುತ್ತಿದ್ದರು ಎಂದರೆ ನಂಬುವುದು ಕಷ್ಟವಾದೀತು ! ಆದರೆ ಲೇಪಾಕ್ಷಿ ಭಿತ್ತಿಚಿತ್ರಗಳೆಲ್ಲ ಇದು ಸತ್ಯವೆಂದು ಸಾಕ್ಷಿ ನೀಡುತ್ತವೆ.

ವಿರುಪಣ್ಣ -ವೀರಣ್ಣ ಬಂಧುಗಳು ಉದ್ದ ತೋಳಿನ ಮೊಣಕಾಲಿವರೆಗೆ ಬರುವ ನಿಲುವಂಗಿ ತೊಟ್ಟರೂ, ಅದರ ಮೇಲೆ ಸೆರಗು ಹಾಕದೇ ಕಲಾಪತ್ತಿನ 'ಸೀರೆ'ಯನ್ನು ಓರಣವಾಗಿ ಸುತ್ತಿಕೊಂಡಿದ್ದಾರೆ. 'ಚೀರ' ಸಂಸ್ಕೃತ ಶಬ್ದದಿಂದ 'ಸೀರೆ' ಬಂದಿದ್ದು. ಗಂಡಸರು-ಹೆಂಗಸರು ಉಡುತ್ತಿದ್ದ ವಿವಿಧ ಉದ್ದಳತೆಯ ಹತ್ತಿ, ರೇಷ್ಮೆ, ನಾರುಗಳ, ಕಲಾಪತ್ತಿನ ಅರಿವೆಗೆ 'ಸೀರೆ'ಯೆಂದೇ ಕರೆಯುತ್ತಿದ್ದರು. ಜನಸಾಮಾನ್ಯರು ಈ ಸೀರೆಗಳನ್ನು ಅಂಗವಸ್ತ್ರದಂತೆ, ಶಾಲಿನಂತೆ, ದಟ್ಟಿಯಂತೆ ಧೋತರದಂತೆ ಉಟ್ಟು ಖುಷಿಪಡುತ್ತಿದ್ದರು. ಸೀರೆಗಳಿಗೆ ಜರತಾರಿ ಅಂಚು, ಜರಿಯ ಬುಟ್ಟಾಗಳು ಮೈತುಂಬ ಇರುತ್ತಿದ್ದವನ್ನು ಅರಸರು, ಮಾಂಡಲಿಕರು, ಪ್ರತಿಷ್ಠಿತರು ಉಡುತ್ತಿದ್ದರು. ಇವು ಬಹುಮಟ್ಟಿಗೆ ಸ್ತ್ರೀಯರು ಉಡುತ್ತಿದ್ದ ಬೆಳ್ಳಿ-ಬಂಗಾರದ ಜರಿಗೆಲಸದ ಸೀರೆಗಳನ್ನೇ ಹೋಲುತ್ತಿದ್ದವು. ವೀರಣ್ಣನ ಕೆಂಪು ಚುಕ್ಕಿಯ ಸೀರೆಗೆ, ನಾಶೀಪುಡಿ ಬಣ್ಣದ ಅಂಚನ್ನು ಸೇರಿಸಲಾಗಿದೆ (ಚಿತ್ರಗಳು ಕಿರಿ ಸೀರೆಗಳು 1-3, ಉದ್ದ ಸೀರೆಗಳು 4-8).

ಸಸ್ಯ-ಪ್ರಾಣಿ ಚಿತ್ರಣ

ಸಾಧ್ಯವಿದ್ದಲ್ಲೆಲ್ಲ ಕಲಾಕಾರರು, ತಮ್ಮ ಪರಿಸರ ಪ್ರೇಮ, ನಿಸರ್ಗ ಪ್ರೀತಿಗಳನ್ನು ಸೂರೆಗೊಂಡಿದ್ದಾರೆ. ಕಾಡಿನಲ್ಲಿ ಅರ್ಜುನನ ತಪಸ್ಸಿನ ಸನ್ನಿವೇಶವನ್ನು ಬಳಸಿ ಹೂ, ಬಳ್ಳಿ,

ಗಿಡ-ಮರಗಳನ್ನು ಚಿತ್ರಿಸಿದ್ದಾರೆ. ಅದರಂತೆ ಪ್ರತಿಯೊಂದು ಅಂಕಣದ ಮೇಲೆ ಕೆಳಗೆ, ವಿವಿಧ ಅಲಂಕೃತ ಪಟ್ಟಿಕೆಗಳನ್ನು ರಚಿಸಿದ್ದಾರೆ. ಶಾಲು, ಸೀರೆ, ಪೀಠ, ರಥಗಳ ಮೇಲೂ ಹೂ-ಬಳ್ಳಿಗಳ ಕಸೂತಿ ಮಾಡಲಾಗಿದೆ. ಅರ್ಜುನನ ತಪೋಭಂಗ ಮಾಡಲು ಧಾವಿಸಿ ಬಂದು ಕಾಡುಹಂದಿ, ನೈಜವಾಗಿ ಒಡಮೂಡಿದೆ. ಅದರ ಆರ್ಭಟಕ್ಕೆ ಕಾಡಿನಲ್ಲುಂಟಾದ ಅಲ್ಲೋಲ -ಕಲ್ಲೋಲದಿಂದ ಪಶು, ಪಕ್ಷಿಗಳೆಲ್ಲ ಗಾಬರಿಗೊಂಡು, ಜೀವರಕ್ಷಣೆಗೆ ಧಾವಿಸುತ್ತಿರುವಂತೆ ಚಿತ್ರಿಸಲಾಗಿದೆ. ಚಿಗರೆಯ ಹಿಂಡು ಹಿಂತಿರುಗಿ ನೋಡುತ್ತ ಮುಂದೆ ಓಡುತ್ತಿದೆ. ಜೀವದಾಸೆಗೆ ಮೊಲವೊಂದು ಚಿಕ್ಕ ಪೊದೆ ಬಿಟ್ಟು ದೊಡ್ಡದರಲ್ಲಿ ಆಶ್ರಯ ಪಡೆಯಲು ನಾಗಾಲೋಟ ಕಿತ್ತಿದೆ. ಹಕ್ಕಿಗಳು ಚಿಲಿಪಿಲಿ ಎನ್ನುತ್ತ ಬರಲಿರುವ ಗಂಡಾಂತರದ ಕುರಿತು ಮರಿಗಳಿಗೆ ಎಚ್ಚರಿಸುತ್ತ ಮರದಿಂದ ಮರಕ್ಕೆ ಹಾರುವಂತೆ ತೋರುತ್ತದೆ. ಕರುವನ್ನು ಕಳೆದುಕೊಂಡ ಗೋಮಾತೆ ತಿಂದುಂಡು ದಷ್ಟಪುಷ್ಟವಾಗಿದ್ದು, ಉಮಾ ಮಹೇಶ್ವರರ ವಾಹನವಾದ ನಂದಿಯಿಂದ ಅವಳನ್ನು ಬೇರ್ಪಡಿಸುವುದು ಭಾರೀ ಕಷ್ಟದ ಪ್ರಸಂಗವೇ ಆಗುತ್ತದೆ

ಶಿವನ ಪರಮಭಕ್ತ, ಕಿನ್ನರ, ಕಿಂಪುರುಷರಂಥ ವ್ಯಕ್ತಿಗಳು ಅಸ್ತಿತ್ವದಲ್ಲಿ ಇಲ್ಲವಾದ್ದರಿಂದ ಅವರನ್ನು ರಚಿಸುವ ಚಿತ್ರಕಾರರು ತಮ್ಮ ಊಹಾ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕಾಗುತ್ತದೆ! ಮಾನವ ಶರೀರಕ್ಕೆ ಕುದುರೆಯ ಮುಖವನ್ನು ಅದೂ ಭಾವಪೂರ್ಣವಾಗಿ ಜೋಡಿಸುವುದು ಸುಲಭವಾದ ಕೆಲಸವಲ್ಲ. ಆದರೆ ಲೇಪಾಕ್ಷಿಯ ಚಿತ್ರಕಾರರು ಇದನ್ನು ಅತ್ಯಂತ ಯಶಸ್ವಿಯಾಗಿ ಮಾಡಿದ್ದಾರೆ. ಇದರಂತೆ ಈಶ್ವರನ ಅನುಯಾಯಿ ಭೃಂಗಿಗೆ ಮೂರು ಕಾಲುಗಳು. ದ್ವಿಪಾದಿಯಾದ ಮಾನವನಿಗೆ ಇನ್ನೊಂದು ಕಾಲನ್ನು ಎಲ್ಲಿ ಹೇಗೆ ಜೋಡಿಸುವದೆಂದು ಸಮಸ್ಯೆ ಎದುರಿಗೆ ನಿಲ್ಲುವುದು ಸಹಜ. ಆದರೆ ಕಲಾತ್ಮಕವಾಗಿ ಇಲ್ಲಿ ಮೂರು ಕಾಲಿನ ಭೃಂಗಿ ಸೃಷ್ಟಿಯಾಗಿದ್ದಾನೆ.

ವಾನರವರ್ಗಕ್ಕೆ ಸೇರಿದ ಮುಚಕುಂದನು ಪರಮ ಶಿವಭಕ್ತ. ತನ್ನ ಪರಿವಾರದೊಂದಿಗೆ ಶಿವನ ದರ್ಶನಕ್ಕೆಂದು ಭಯ ಭಕ್ತಿಯಿಂದ, ಕಾತರತೆಯಿಂದ ಕಾದುಕೊಂಡಿದ್ದಾನೆ. ಅವರಿಗೆ ಕೋತಿಯ ಮುಖ, ಬಾಯಿಗಳು ಇದ್ದರೂ ಉಳಿದ ಅಂಗಾಂಗಗಳೆಲ್ಲ ಮಾನವರವು. ಅವರಿಗೆಲ್ಲ ಕುಲಾವಿಯಂತೆ ಎತ್ತರವಾದ ಕಿರೀಟ, ಕಿವಿ, ಕೊರಳು, ಕೈಕಾಲುಗಳಿಗೆ ಭರ್ಜರಿ ಆಭರಣಗಳು, ಸೊಂಟಕ್ಕೆ ವಿವಿಧ ಬಣ್ಣದ ನಕ್ಷೆಗಳ ಸೀರೆಗಳನ್ನು ಸುತ್ತಲಾಗಿದೆ.

ಶಿವನ ಜಡೆಯಿಂದ ಹರಿಯುವ ಗಂಗೆಯಲ್ಲಿ ಮೀನುಗಳು ಈಜಾಡುತ್ತಿರುವಂತೆ ಚಿತ್ರಿಸಿದರೆ , ವಿಷ್ಣುವಿನ ದಶಾವತಾರಗಳೆಲ್ಲ, ಮತ್ಸ್ಯ, ಕೂರ್ಮ ವರಾಹಗಳೆಲ್ಲ ಸಜೀವವವಾಗಿದೆ.

ಅತಿಮಾನವರು

ನೋಡಲು ಸಿಗದ ಮಾನವರನ್ನು ಚಿತ್ರಿಸುವುದು ಕಷ್ಟದ ಕೆಲಸ! ಇದಕ್ಕಾಗಿ ಶಿಲ್ಪ ಸೂತ್ರಗಳ ಜೊತೆಗೆ ರಾಮಾಯಣ, ಮಹಾಭಾರತ, ಪುರಾಣಗಳನ್ನು ಆಳವಾಗಿ ಅಭ್ಯಸಿಸಿ, ಸರಿಯಾಗಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಶಿಲ್ಪಿಗಳು, ಚಿತ್ರಕಾರರು, ಒಂದೇ ಸೂತ್ರಗಳನ್ನು

ಬಳಸಿಕೊಂಡರೂ ಅದಕ್ಕೆ ಸರಿಯಾದ ಮೂರ್ತಿಸ್ವರೂಪವನ್ನು ಕೊಡುವ ವಿಧಾನ ಮಾತ್ರ, ತುಂಬ ಭಿನ್ನವಾದದ್ದು. ಚಿತ್ರಕಾರರು ಚಪ್ಪಟೆ ಆಕೃತಿಯಲ್ಲಿ ಗಾತ್ರವನ್ನು ಸರಿಯಾಗಿ ಜೋಡಿಸಿ ಜೀವಕಳೆ ತುಂಬುವದು ಅನಿವಾರ್ಯ! ಹೀಗಾಗಿ ಯಕ್ಷಗಾನದ ಕಟ್ಟುವೇಷದಂತೆ, ತಮ್ಮ ಚಿತ್ರ ಪುರುಷರಿಗೆ ಭರ್ಜರಿಯಾದ ಪೋಷಾಕು ಹಾಗೂ ಆಭರಣಗಳ ಅಲಂಕಾರ ಮಾಡಿದಾಗಲೇ ಇವರು ಸಾಮಾನ್ಯ ಮಾನವರಿಗಿಂತ ಉಚ್ಚಸ್ತರದಲ್ಲಿದ್ದವರು ! ಎಂಬ ಭಯಭಕ್ತಿ ನೋಡುವವರಲ್ಲಿ ಉಂಟಾಗಲಿ! ಎಂಬ ಭಾವನೆ ಚಿತ್ರಕಾರರಲ್ಲಿ ಇದ್ದಂತಿದೆ.

ಕುಲಾವಿಯನ್ನು ಹೋಲುವಂಥ ಎತ್ತರದ ಕಿರೀಟಗಳನ್ನು ಅಥವಾ ಜಟಾಜೂಟಗಳನ್ನೆ ಆ ಆಕಾರದಲ್ಲಿ ಎತ್ತಿಕಟ್ಟಿ ಅವಕ್ಕೆ ಆಭರಣಗಳನ್ನು ಕೂಡ್ರಿಸುತ್ತಾರೆ. ಕೆಲವೊಮ್ಮೆ ಹೂಗಳನ್ನೂ ಸೇರಿಸುವುದು ಇದೆ. ಹಣೆಗೆ ನಾಮವನ್ನೋ, ವಿಭೂತಿ ಪಟ್ಟೆಯನ್ನೋ ಎಳೆಯುವುದು ಸಾಮಾನ್ಯ. ಸರ್ವರಿಗೂ ಬೊಗಸೆಗಂಗಳು. ಕಣ್ಣು ಗುಡ್ಡೆಗಳು ಹಿರಿದಾಗಿರುತ್ತವೆ. ಪುರಾಣ -ಪುರುಷರನ್ನು ಅವರ ಶರೀರದ ರಚನೆಯಿಂದಲೇ ಗುರುತಿಸಲು ಬರುವಂತೆ, ಎರಡು, ಮೂರು, ನಾಲ್ಕು ಮುಖಗಳನ್ನು ಹೊಂದಿಸಿರುತ್ತಾರೆ. ಆಭರಣ ತೊಡುವುದರಲ್ಲಿ ಈ ಆಕೃತಿಗಳು ಎಂಥ ಸ್ತ್ರೀಯರನ್ನೂ ಮೀರಿಸಿರುತ್ತಾರೆ. ಇಲ್ಲಿಯ ದೇವಾಧಿದೇವತೆಗಳಿಗೆ ಲೇಪಾಕ್ಷಿ ಕಲಾಕಾರರು ತೊಡಿಸಿದ ಆಭರಣಗಳೆಲ್ಲ ಬೇರೆಲ್ಲೂ ದೊರೆಯಲಾರವು ! ಎಂದರೆ ಅತಿಶಯೋಕ್ತಿಯಾಗಲಾರದು. ಎರಡು ಕೈಗಳು ಸಾಮಾನ್ಯ. ಆದರೆ ಕೆಲವಕ್ಕೆ ನಾಲ್ಕು, ಆರು, ಎಂಟು, ಹತ್ತು ಕೈಗಳನ್ನು ಕಾಣಿಸಿದ್ದಿದೆ. ಕೈಬೆರಳುಗಳು ವಿವಿಧ ಮುದ್ರೆಗಳನ್ನು ಸೂಚಿಸುತ್ತವೆ.; ಇಲ್ಲವೇ ತ್ರಿಶೂಲ, ಅಂಕುಶ, ಪರಶು, ಗದೆಗಳಂಥ ಆಗಿನ ಕಾಲದ ಆಯುಧಗಳನ್ನು ಹಿಡಿದಿರುತ್ತವೆ. ಯಜ್ಞೋಪವೀತ, ಬ್ರಹ್ಮಸೂತ್ರ, ಕಾಂಚೀದಾಮಗಳನ್ನು ಧರಿಸಿರುವದು ತೀರ ಸಾಮಾನ್ಯ. ಅವರು ನಕ್ಷೆಯ 'ಸೀರೆ' ಉಟ್ಟಿರಬಹುದು; ಇಲ್ಲವೆ ಚಿಗರೆಯ, ಹುಲಿಯ ಚರ್ಮಾಂಬರವನ್ನು ಧರಿಸಿರಬಹುದು, ಶಲ್ಯ ಹೊದ್ದಿರುವುದನ್ನು, ಪಾದುಕೆಗಳನ್ನು ಮೆಟ್ಟಿರುವುದನ್ನು ಕಾಣಬಹುದು.

ದೇವದೇವತೆಗಳ ಗಣಗಳೂ, ಅನುಯಾಯಿಗಳೂ ಸ್ವಾರಸ್ಯಕರ ರೀತಿಯಲ್ಲಿ ಚಿತ್ರಿತರಾಗಿದ್ದಾರೆ. ಶಾಮವರ್ಣದ ಗೋಪಾಲಕನ ಶಾರೀರಿಕ ಅಲಂಕಾರಗಳನ್ನು ನೋಡಿದಷ್ಟು ಕಡಿಮೆ ! ಸರ್ಕಸ್ಸಿನ ಕೋಡಂಗಿಯಂತೆ ಟೋಪಿ ಧರಿಸಿದವರಿದ್ದಾರೆ. ತಲೆಕೂದಲು (ಎಣ್ಣೆ ಕಾಣದೆ) ಹುಲ್ಲಿನ ಹೊರೆಯಂತೆ ಸುತ್ತಿಕೊಂಡವರಿದ್ದಾರೆ. ಜಡೆಗಟ್ಟಿದ ಕೇಶರಾಶಿಯವರು, ಗಡ್ಡ, ಮೀಸೆಗಳನ್ನ ಹುಲುಸಾಗಿ ಬೆಳೆಸಿದವರು ಇದ್ದಾರೆ. ಶಿವನಗಣದವರು ತಮ್ಮ ಅಸ್ತಿತ್ವವನ್ನವು ತೋರ್ಪಡಿಸಲು ಏನೆಲ್ಲ ಕಸರತ್ತುಗಳಲ್ಲಿ ತೊಡಗಿದ್ದಾರೆ. ಇವನ್ನೆಲ್ಲ ಕಣ್ಣಲ್ಲಿ ಕಣ್ಣಿಟ್ಟು ನೋಡಿ, ವಿಂಗಡಿಸಲು ಸಮಯ ಇದ್ದಷ್ಟೂ ಸಾಲದು !

ಆಗಬೇಕಾದ ಸಂರಕ್ಷಣಾ ಕೆಲಸ

ಲೇಪಾಕ್ಷಿಯ ಭಿತ್ತಿಚಿತ್ರಗಳನ್ನೆಲ್ಲ ಮಾಡಿನ ಮುಚ್ಚಿಗೆಗೇ ಸೀಮಿತಗೊಳಿಸಿದ್ದರಿಂದ, ಅವನ್ನು ಅಭ್ಯಸಿಸಲು ಹೆಚ್ಚಿನ ಶ್ರಮ ಬೇಕಾಗುತ್ತದೆ. ಅಂತೆಯೇ ಅವನ್ನು ವಿವರವಾಗಿ ವೀಕ್ಷಿಸಿ,

ಕ್ಲಿಕ್ಕಿಸಿ, ಅಭ್ಯಸಿಸಿದ ಕನ್ನಡಿಗರು ಅತಿ ವಿರಳರೆಂದರೆ ತಪ್ಪಿಲ್ಲ. ಲೇಪಾಕ್ಷಿ ಶೈಲಿಯ ವಿಮರ್ಶಕರೋ! ಲಭ್ಯವಿರುವ ಕೆಲವೇ ಛಾಯಾಚಿತ್ರಗಳನ್ನು ಬಳಸಿದ್ದರಿಂದ ಈ ಅಪರೂಪದ ಚಿತ್ರಕಾರರಿಗೆ ಸಿಗಬೇಕಾದ ಗೌರವ ಸಿಕ್ಕಿಲ್ಲ. ಉತ್ತರ ಭಾರತದ ಕಲಾಪ್ರಾಜ್ಞರೋರ್ವರು ಇದು ಅಜಂತಾ - ಎಲ್ಲೋರಾ ಶೈಲಿಯ ಮುಂದರಿಕೆ ಎಂದು ಪಟಾಕ್ಷಿ ಹಾರಿಸಿದರೆ ತಾಳೆಗರಿ ಪರಿಣಿತರು, ಜೈನ ತಾಳವೋಲೆಗಳ ಆಕೃತಿಗಳನ್ನೇ ಇಲ್ಲಿ ಬೃಹತ್ ಆಕಾರದಲ್ಲಿ ಚಿತ್ರಿಸಿದ್ದಾರೆ, ಎಂಬ ತೀರ್ಪನ್ನು ಇತ್ತಿದ್ದಾರೆ! ತಮಿಳುನಾಡಿನ ಕೆಲ ತಜ್ಞರು, ತಂಜಾವೂರಿನ ಬೃಹದೀಶ್ವರ ದೇವಾಲಯದ ಭಿತ್ತಿ ಚಿತ್ರಗಳ ಪಡಿನೆಳಲನ್ನು ಲೇಪಾಕ್ಷಿಯಲ್ಲಿ ಗುರುತಿಸಿದ್ದಾರೆ. ಕರ್ನಾಟಕದವರು ಕೂಡ ವಿಜಯನಗರದ ಆಗಿನ ವೈಭವದ ಕುರುಡು ವ್ಯಾಮೋಹದಿಂದ ಇಲ್ಲಿಯ ಚಿತ್ರಗಳೆಲ್ಲ ಹಂಪಿ ವಿರೂಪಾಕ್ಷ ದೇವಾಲಯದ ಭಿತ್ತಿಚಿತ್ರಗಳದೇ ಇನ್ನೊಂದು ರೂಪವೆಂದು ಸಾರಿದ್ದಾರೆ. ಅಂದಿನ ಲೇಪಾಕ್ಷಿಯ ಅಳಿದುಳಿದ ಭಿತ್ತಿಚಿತ್ರಗಳೆಲ್ಲ ಬೇರೆ ಎಲ್ಲೂ ಕಾಣಸಿಗದೆ ಅಪರೂಪದ ಕಲಾನಿಧಿಯಾಗಿವೆ. ಇವು ಸ್ಥಳೀಯರಾಗಿದ್ದ ಅಂದಿನ ಕಲಾಕಾರರು ಬರೆದ ಅಪ್ಪಟ ಕನ್ನಡಿಗರವೇ ಕಲಾಕೃತಿಗಳಾಗಿವೆ. ಅವರು ತಮಗೆ ಚಿರಪರಿಚಿತವಾದ ಸುತ್ತಮುತ್ತಲಿನ ಜನಜೀವನ, ಪ್ರಾಣಿ -ಪರಿಸರ, ವೇಷ - ಭೂಷಣಗಳನ್ನೇ ಚಿತ್ರಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಇಂದು ಆಂಧ್ರಕ್ಕೆ ಸೇರಿದ ಪ್ರಜೆಗಳು, ಅಂದಿನ ಕನ್ನಡಿಗರೇ ಆಗಿದ್ದರು ! ಎಂಬ ಮಾತನ್ನು ಮರೆಯುವಂತೆ ಇಲ್ಲ. ವಿಜಯವಗರ ಸಾಮ್ರಾಜ್ಯ ದಕ್ಷಿಣದ ತುದಿಯನ್ನು ಮುಟ್ಟಿತ್ತು.

ಶತಕಗಳ ಅಲಕ್ಷ್ಯದಿಂದಾಗಿ ಕನ್ನಡಿಗರ ಈ ಕಲಾಸಿರಿ ಕಣ್ಮರೆಯಾಗುವುದರಲ್ಲಿದೆ. ಕನ್ನಡ ಸಂಸ್ಕೃತಿ, ಕಲೆಗಳು ಎಲ್ಲಿಯೇ ಇದ್ದರೂ ಅವನ್ನು ಭಾವೀ ಪೀಳಿಗೆಗಾಗಿ ರಕ್ಷಿಸಿಡುವುದು ಕರ್ನಾಟಕ ಲಲಿತ ಕಲಾ ಅಕಾಡೆಮಿಯಂಥ ಸಂಸ್ಥೆಗಳ ಹೊಣೆ. ಲೇಪಾಕ್ಷಿಯನ್ನು ಕರ್ನಾಟಕದಲ್ಲಿ ಸೇರಿಸುವುದು ಅಸಾಧ್ಯವಾಗಿರಬಹುದು. ಆದರೆ ಕರ್ನಾಟಕದ ಸಂಸ್ಕೃತಿಯ ಪ್ರತೀಕಗಳಾದ ಚಿತ್ರ-ಸಿರಿಯನ್ನು ಛಾಯಾಚಿತ್ರಗಳಲ್ಲಿ, ವೀಡಿಯೋ ರೂಪದಲ್ಲಿ ಸಚಿತ್ರ ಗ್ರಂಥದಲ್ಲಿ ಕಾಯ್ದಿರಿಸುವ ಕೆಲಸ ತ್ವರಿತವಾಗಿ ಆಗಲೇಬೇಕಾಗಿದೆ.

●●●

ಲೇಪಾಕ್ಷಿ ಲಲನೆಯ ಸೀರೆಗಳ ವೈವಿಧ್ಯ.





ಚಿತ್ರ ೪- ಲೇಪಾಕ್ಷಿ ಲಲನೆಯ ಸೀರೆ, ಹಚ್ಚೆ ಹಾಗೂ ಕೇಶಾಲಂಕಾರದ ವಿನ್ಯಾಸಗಳು





ಚಿತ್ರ ೫- ರತ್ನ ಖಚಿತ ಕುಲಾವಿ

ಚಿತ್ರ ೬- ಗಂಡಸರ ಶಿರೋಭೂಷಣಗಳು : ಕುಲಾವಿ



ಲೇಪಾಕ್ಷಿ ಭಿತ್ತಿ ಚಿತ್ರಗಳು - ಗಂಡಸರಿಗೂ ಸೀರೆ





೨. ಶಿಲ್ಪದಲ್ಲಿ ಪಶು, ಪಕ್ಷಿಗಳ ಚಿತ್ರಣ

ಕರ್ನಾಟಕ, ಶಿಲ್ಪಕಲೆಯ ಬೀಡಾದರೂ ಅವುಗಳನ್ನು ಆಳವಾಗಿ ಅಭ್ಯಸಿಸಿ ಬರೆದ ಗ್ರಂಥಗಳದ್ದೇ ನಮ್ಮಲ್ಲಿ ಕೊರತೆ ಇರುವಾಗ, ಶಿಲ್ಪದಲ್ಲಿರುವ ಪಶು, ಪಕ್ಷಿಗಳ ಕುರಿತು ಒಂದೂ ಗ್ರಂಥ ಇಲ್ಲದಿರುವುದು ಅಚ್ಚರಿಯ ಮಾತೇನಲ್ಲ. ನಮ್ಮ ಶಿಲ್ಪಕಲೆಗೆ ಎರಡು ಸಹಸ್ರ ವರ್ಷಗಳ ಇತಿಹಾಸವಿದ್ದದ್ದರಿಂದ, ಬೌದ್ಧ, ಜೈನ, ಬಾದಾಮಿಯ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಿಯ ಚಾಲುಕ್ಯ, ಹೊಯ್ಸಳ, ವಿಜಯನಗರ, ಕೆಳದಿ ಆಳರಸರ ಕಾಲದ ಹೆಸರುವಾಸಿ ದೇವಾಲಯಗಳಲ್ಲಿಯ ಶಿಲ್ಪಗಳನ್ನು ಅಭ್ಯಸಿಸಲು ಯತ್ನಿಸಲಾಗಿದೆ. ಆದರೆ ಕೆಲವು ದೇವಾಲಯಗಳಲ್ಲಿ ಪಶು, ಪಕ್ಷಿಗಳ ಶಿಲ್ಪಗಳು ಹೇರಳವಾಗಿದ್ದರೆ ಹಲವೆಡೆಗೆ ಒಂದೂ ಇಲ್ಲದ್ದರಿಂದ ತುಲನಾತ್ಮಕವಾಗಿ ಅಭ್ಯಸಿಸುವುದು ಸಾಧ್ಯವಾಗಲೇ ಇಲ್ಲ. ಅಂತೆಯೇ ಅವುಗಳನ್ನು ಕಾಲಮಾನಕ್ಕನುಸಾರವಾಗಿ ವಿಂಗಡಿಸುವ ಬದಲಾಗಿ ವಿಕಾಸದ ಹಂತದ ಪ್ರಕಾರ ಅವನ್ನು ವಿವೇಚಿಸಲಾಗಿದೆ. ಬೇರೆ ಬೇರೆ ಪೌರಾಣಿಕ ಸನ್ನಿವೇಶಗಳನ್ನು ಶಿಲ್ಪಿಗಳು ತಮ್ಮ ಕಲ್ಪನೆಯ ಮೇರೆಗೆ ಹೇಗೆ ಭಿನ್ನವಾಗಿ ಚಿತ್ರಿಸಲು ಯತ್ನಿಸಿದ್ದಾರೆ ಎಂಬುದನ್ನೂ ಎತ್ತಿ ತೋರಿಸಲಾಗಿದೆ. ಕೆಲವು ಶಿಲ್ಪಗಳು ಭವ್ಯವಾಗಿದ್ದು ಎಲ್ಲರ ದೃಷ್ಟಿಯನ್ನೂ ಆಕರ್ಷಿಸುವಂತಿವೆ. ಹಲವು ತೀರ ಕಿರಿದಾಗಿದ್ದು, 'ಕ್ಯಾಮರಾ ಕಣ್ಣು' ಇದ್ದವರಿಗೆ ಮಾತ್ರ ಗೋಚರಿಸುವಂತಹವು. ಅತೀ ಸೂಕ್ಷ್ಮವಾಗಿ ಕೊರೆದವು. ಅಂದರೆ, ಕೇವಲ ರೂಪರೇಷೆಗಳಿಂದ ಮಾತ್ರ ರಚಿತವಾದವೂ ಇವೆ.

ಪಾರಿವಾಳ, ಶಾಂತಿದೂತವೆಂದು ಜಗತ್ತಿನಲ್ಲೆಲ್ಲ ಖ್ಯಾತಿ ಪಡೆದಂತೆ ರಸಿಕತೆಗೂ ಹೆಸರು ಪಡೆದಿದೆ. ಹಸಿವೆ, ವಿರಾಮಗಳನ್ನೂ ಮರೆತು ಒಂದನ್ನೊಂದು ಸ್ಪರ್ಶಿಸುತ್ತ, ಗುಟುರ ಹಾಕುತ್ತ, ಕಾಡುತ್ತ ನರ್ತಿಸುತ್ತ ದಿನವೆಲ್ಲ ನಲಿಯಬಲ್ಲವಾದ್ದರಿಂದ, ಪಾರಿವಾಳದ ಜೋಡಿಯಂತೆ ಬದುಕಬೇಕೆಂದು ಅದೆಷ್ಟೋ ಮಾನವ-ಪ್ರೇಮಿಗಳು ಕನಸುಕಟ್ಟುತ್ತಾರೆ. ಇದೇ ಕಾರಣಕ್ಕಾಗಿಯೋ ಏನೋ ಕಾಮದೇವನಿಗೆ ಪಾರಿವಾಳಗಳೆಂದರೆ ಅಚ್ಚುಮೆಚ್ಚು. ಯಮಧರ್ಮರಾಯನಿಗೂ ಈ ಹಕ್ಕಿಯ ಸಹವಾಸ ಬಲು ಇಷ್ಟವಂತೆ. ಕೋರಮಂಗಲದಲ್ಲಿ ಪಾರಿವಾಳಗಳ ಸಾಲು ಮಾಡು ಹೊತ್ತಂತೆ ಚಿತ್ರಿಸಲಾಗಿದೆ. ಹಂಪೆಯಲ್ಲಿ ಅವು ರಥವನ್ನು ಎಳೆಯುತ್ತಿದ್ದರೆ, ಲೇಪಾಕ್ಷಿಯಲ್ಲಿ ಸ್ತಂಭಗಳ ಮೇಲೆ ಈ ಹಕ್ಕಿಯ ವಿವಿಧ ಹಾವಭಾವಗಳ ಶಿಲ್ಪಗಳಿವೆ.

ಸಾವಿರ ಕಣ್ಣುಗಳುಳ್ಳ, ತನ್ನ ಗರಿಗಳನ್ನು ಬಿಚ್ಚಿ, ಎತ್ತರದ ಧ್ವನಿಯಲ್ಲಿ ಕೇಕೆ ಹಾಕುತ್ತ, ಹೆಜ್ಜೆಯ ಮೇಲೆ ಹೆಜ್ಜೆಯಿಡುತ್ತ ಗಂಡು ನವಿಲನ್ನು ಮೆಚ್ಚದವರಾರು ? ಅಂತೆಯೇ ಅದು ರಾಷ್ಟ್ರೀಯ ಹಕ್ಕಿಯಾಗಿ ಹೆಮ್ಮೆಯ ಸ್ಥಾನವನ್ನು ಪಡೆದಿದೆ. ಗಂಡಿನ ಕರೆಗೆ ಓಗೊಟ್ಟು ಧಾವಿಸಿ ಬರುವ ಹೆಣ್ಣುಗಳು ಮಾತ್ರ ತೀರ ಅನಾಕರ್ಷಕವಾಗಿರುತ್ತವೆ. ನವಿಲು, ಕಾರ್ತಿಕೇಯನ ವಾಹನವಾಗಿದೆ. ತಾರಕಾಸುರನ ವಧೆಗಾಗಿ ಅವತರಿಸಿದ್ದರಿಂದ ಯುದ್ಧ ದೇವತೆಯೆಂದೂ

ಪರಿಗಣಿಸಲಾಗುತ್ತದೆ. ಕಾರ್ತಿಕೇಯ ಮತ್ತು ಗಣೇಶರು ಸಿದ್ಧಿ-ಬುದ್ಧಿಯರಲ್ಲಿ ಅನುರಕ್ತರಾಗಿ ನಡೆಸಿದ ತೀವ್ರ ಸ್ಪರ್ಧೆಯಲ್ಲಿ ವಿನಾಯಕನೇ ಜಯಶಾಲಿಯಾಗುತ್ತಾನೆ. ಅನಂತರ ಅವನ ಅಣ್ಣ ಸ್ತ್ರೀ-ದ್ವೇಷಿಯಾದ್ದರಿಂದ, ಇಂದಿಗೂ ಷಣ್ಮುಖನ ದೇವಾಲಯಗಳಲ್ಲಿ ಹೆಂಗಳೆಯರಿಗೆ ಪ್ರವೇಶ ಇಲ್ಲ. ಹಳೇಬೀಡಿನ ಸಂಗ್ರಹಾಲಯದಲ್ಲಿ ಇಟ್ಟ ಶಿಲ್ಪಗಳಲ್ಲಿ ದೃಢಕಾಯದ ಮಯೂರನು ವಿಶ್ರಾಂತಿ ಪಡೆಯುವ ಭಂಗಿಯಲ್ಲಿದ್ದರೆ ಮುಖ್ಯ ದೇವಾಲಯದಲ್ಲಿ ನಯ ನಾಜೂಕಿನಿಂದ ಓಡುವ ನವಿಲು ಇದೆ. ಬಾದಾಮಿಯಲ್ಲಿ ಇಂತಹದೇ ಶಿಲ್ಪವಿದೆ.

ಬಕಪಕ್ಷಿಗಳು ದಿನವೆಲ್ಲ ನೀರಿನಲ್ಲಿ ಮೀನ-ಶಿಕಾರಿಯಲ್ಲಿ ತೊಡಗಿದರೂ ಸಂಜೆಯಾದೊಡನೆ ತಂಡ ಕಟ್ಟಿಕೊಂಡು ಸೂದರ ಏಕಾಂತದ ವೃಕ್ಷವಾಸಕ್ಕೆ ಹಿಂದಿರುಗುತ್ತವೆ. ಮರುದಿನ ನಸುಕಿನಲ್ಲಿಯೇ ಅದೇ ಸ್ಥಳಕ್ಕೆ ಹಾರಿ ಸೇರಿಕೊಳ್ಳುತ್ತವೆ. ಕೌಶಿಕಮುನಿಯ ಕತೆಯಲ್ಲಿ ಬಕಪಕ್ಷಿಯ ಸಂಸಾರದ ಕುರಿತಾಗಿ ಮಾಹಿತಿ ಸಿಗುತ್ತದೆ. ಭಟಕಳದ ಖೇತಪೈ ದೇವಾಲಯದ ಪೌಳಿಯಲ್ಲಿ, ನಡುವಯಸ್ಸಿನ ಗ್ರಾಮೀಣ ಹೆಂಗಳೆ, ರಸಿಕ ಯುವಕನನ್ನು ಬಕದ ಅಂಕಕ್ಕೆ ಆಮಂತ್ರಿಸುವ ಅಪೂರ್ವವಾದ ಶಿಲ್ಪವಿದೆ. ಲೇಪಾಕ್ಷಿಯ ಕಂಭವೊಂದರ ಮೇಲೆ ಮೀನಿಗಾಗಿ ತಾಳ್ಮೆಯಿಂದ ಕಾಯುವ ಬಕವನ್ನು ಕೆತ್ತಲಾಗಿದೆ. ಅಲ್ಲಿಯ ಅಪೂರ್ಣ ಸಭಾಮಂಟಪದಲ್ಲಿ ಗೋಣು ತಿರುಗಿಸಿ ಕಾತರತೆಯಿಂದ ನೋಡುವ ಬಕದ ಶಿಲ್ಪವಿದೆ.

ಹಂಸಪಕ್ಷಿ, ಗಾಂಭೀರ್ಯ, ಸಭ್ಯತೆ, ಗೌರವ, ಏಕಾಗ್ರತೆಗಳಿಗೆ ಹೆಸರುವಾಸಿಯಾಗಿದೆ. ಬ್ರಹ್ಮನಿಗೆ ಸ್ವಚ್ಛತೆ, ಅಚ್ಚುಕಟ್ಟುತನಗಳೆಂದರೆ ತುಂಬ ಇಷ್ಟವಂತೆ. ಅಂತೆಯೇ ಸುರೂಪಿ, ಶುಭ್ರವಸ್ತ್ರಧರೆಯಾದ ಸರಸ್ವತಿಯನ್ನೇ ಪತ್ನಿಯನ್ನಾಗಿ ಮಾಡಿಕೊಂಡಿದ್ದಾನೆ. ರಾಜಹಂಸವೇ ಇವರಿಬ್ಬರ ವಾಹನ. ಈ ಹಕ್ಕಿ, ನೀರಿನಲ್ಲಿ ಜೀವಿಸುತ್ತಿದ್ದರೂ, ಮೀನಿಗಿಂತ ಪ್ರತ್ಯೇಕವಾಗಿರುವುದರಿಂದ, ಗಗನವಿಹಾರಿಯಾಗುವಂತಿದ್ದರೂ ಅದರತ್ತ ಮನಸ್ಸು ಹಾಕದ್ದರಿಂದ, ಏಕಾಂತದಲ್ಲಿ ತನ್ನ ಪಾಡಿಗೆ ತಾನು ಇರುವಂತಾಗಿದೆ. ಬ್ರಹ್ಮ-ಸರಸ್ವತಿಯರ ಪ್ರತ್ಯೇಕ ದೇವಾಲಯಗಳು ಇದ್ದರೂ ಅಲ್ಲಿಯ ಶಿಲ್ಪಗಳಲ್ಲಿ ಹಂಸಕ್ಕೆ ಹೆಚ್ಚು ಪ್ರಾಧಾನ್ಯ ಕೊಟ್ಟಿಲ್ಲ. ಆದರೆ ಹೊಯ್ಸಳರ ಎಲ್ಲ ದೇವಾಲಯಗಳಲ್ಲೂ ಅಲಂಕೃತ ಹಂಸಗಳ ಚಿತ್ರ-ಪಟ್ಟಿಕೆಗಳನ್ನು ಎಲ್ಲೆಡೆಯಲ್ಲೂ ಕಾಣಬಹುದಾಗಿದೆ.

ಸ್ವರ್ಗಕ್ಕೆ ಹೋಗಬಯಸಿದವರಿಗೆ ಕಾಕರಾಜನ ಸಹಕಾರ ಅತ್ಯವಶ್ಯ. ಸತ್ತವನ ಆತ್ಮ ಸ್ವರ್ಗವನ್ನು ಸೇರಲು ಹತ್ತು ದಿನಗಳು ಬೇಕು ! ಎಂದು ಕಂಪ್ಯೂಟರ ಇಲ್ಲದ ದಿನಗಳಲ್ಲೂ ಪೂರ್ವಜರು ಲೆಕ್ಕಾಚಾರ ಹಾಕಿದ್ದಾರೆ. ಅಷ್ಟು ದಿನಗಳವರೆಗೆ ನಮ್ಮ ಆತ್ಮೀಯರು ಹಸಿದು ಬಳಲುವದು ಮನಸ್ಸಿಗೆ ಬಾರದ್ದರಿಂದ ಪ್ರತಿದಿನ ಕಾಕರಾಜನಿಗೆ ಅನ್ನಸಂತರ್ಪಣೆ ಮಾಡಿ ಸತ್ತವರ ಆತಂಕಕ್ಕೆ ಆಹಾರ ತಲುಪುವಂತೆ ಮಾಡುತ್ತೇವೆ. ಹನ್ನೆರಡನೆಯ ದಿನವಂತೂ ವಿಶೇಷ ಅಡಿಗೆ ಮಾಡಿ ಕಾಕ ವರ್ಗಕ್ಕೆ ಮೊದಲು ಸಿಗುವಂತೆ ಎಚ್ಚರಿಕೆ ವಹಿಸುತ್ತೇವೆ. ಮೃತನ ಆತ್ಮವು ತನ್ನ ಸಕಲ ಇಚ್ಛೆಗಳನ್ನು ಈಡೇರಿಸಿಕೊಳ್ಳುವ ಮುಂಚೆಯೇ ಪರಲೋಕಕ್ಕೆ ತೆರಳುವಂತಾದರೆ, ಅದರ ವಂಶಜರು ಅವುಗಳನ್ನೆಲ್ಲ ಈಡೇರಿಸಲೇಬೇಕು. 'ಕೆಟ್ಟ ಚಾಳಿಯನ್ನು ತ್ಯಜಿಸುತ್ತೇನೆ,

ಮಗನ ಉಪನಯನ, ಮಗಳ ಮದುವೆ ಮುಂತಾದವುಗಳನ್ನು ಮಾಡುತ್ತೇನೆ' ಎಂದೆಲ್ಲ ವಾಗ್ದಾನ ಮಾಡಿದಾಗಲೇ ಕಾಕ ಸಮೂಹ ಪಿಂಡ ಭಕ್ಷಣಕ್ಕೆ ಪ್ರಾರಂಭಿಸುವವು. ಇಂದಿನ ರಾಜಕಾರಣಿಗಳ ಆಸೆ-ಆಕಾಂಕ್ಷೆಗಳಿಗೆ ಕೊನೆಮೊದಲಿಲ್ಲವಾದ್ದರಿಂದ ಅವರ ಪಿಂಡವನ್ನು ಕಾಕವರ್ಗ ಎಂದಾದರೂ ಮುಟ್ಟುವುದೇ ಎಂಬುದನ್ನು ಶೋಧಿಸಿ ನೋಡಬೇಕು ! ಲೇಪಾಕ್ಷಿಯಲ್ಲಿ ಒಂಟಿ ಕಾಗೆಯ ಶಿಲ್ಪ ಒಂದಿದೆ. ಕೋಗಿಲೆ, ಹೊರನೋಟಕ್ಕೆ ಕಾಗೆಯಂತೆ ಕಂಡರೂ ಕಂಠ ತೀರ ಬೇರೆಯಾಗುವುದರಿಂದ ವಸಂತಋತುವಿನ ಪ್ರತಿನಿಧಿಯೆಂದು ಅದಕ್ಕೆ ಅಗ್ರಸ್ಥಾನವಿದೆ. ಕಾಗೆಯು ಕಾಮದೇವನ ಸಂಗಾತಿಯಯೂ ಹೌದು.

ಅದೇಕೋ, ಧಾರ್ಮಿಕರಿಗೆ ಗೂಗೆಯನ್ನು ಕಂಡರೆ ಆಗದು. ಅದರ ಕೂಗು ಕೇಳಿದವರಿಗೆ ಅನಿಷ್ಟ ಇದ್ದದ್ದೇ, ಅದು ಮನೆಯ ಮೇಲೆ ಕುಳಿತರೆ ಮನೆಯನ್ನೇ ತ್ಯಜಿಸಬೇಕು ಇತ್ಯಾದಿಯಾಗಿ ಜನ ನಂಬುತ್ತಾರೆ. ಗೂಗೆ ನಿಶಾಚರವಾಗಿದ್ದು ಅದರ ಕರ್ಣ ಕರ್ಕಶ ಕೂಗುಗಳೇ ಈ ಅಪಚಾರಕ್ಕೆ ಕಾರಣವಿರಬೇಕು ಆದರೆ ನಿಜಸಂಗತಿ ಎಂದರೆ ಪರೋಕ್ಷವಾಗಿ ಗೂಗೆ ಮಾನವನ ಹಿತಚಿಂತಕ. ಕಗ್ಗತ್ತಲಿನಲ್ಲಿಯೂ ಎರಡು ಹೊಳೆಯುವ ಕಣ್ಣುಗಳಿಂದ ಇಲಿ, ಹೆಗ್ಗಣ, ಹಾವುಗಳ ಬೇಟೆಯಾಡುತ್ತದೆ. ಅವುಗಳ ಸಂಖ್ಯೆ ಹೆಚ್ಚಿದಲ್ಲಿ ಇಲಿಗಳ ಉಪಟಳ ಕಡಿಮೆಯಾಗುವುದರಲ್ಲಿ ಸಂದೇಹವೇ ಇಲ್ಲ. ಲೇಪಾಕ್ಷಿಯ ಪೌಳಿಯ ಕಂಭವೊಂದರ ಮೇಲೆ ಗೂಗೆಯನ್ನು ಚಿತ್ರಿಸುವಲ್ಲಿ ಶಿಲ್ಪಿ ತೋರಿಸಿದ ಸಾಹಸ ಮೆಚ್ಚುವಂತಹುದು.

ತಿತ್ತಿರಿಪಕ್ಷಿ ಹೇಗೆ ಅಸ್ತಿತ್ವದಲ್ಲಿ ಬಂದಿತು ಎಂಬುದಕ್ಕೆ ರಂಜಕ ಕಥೆಯೊಂದಿದೆ. ವಿಶ್ವಕರ್ಮನ ಮಗ ವಿಶ್ವರೂಪನಿಗೆ ಮೂರು ಮುಖಗಳಿದ್ದವು. ಒಂದರಿಂದ ಸೋಮರಸ, ಎರಡನೇಯದರಿಂದ ಸುರೆ ಮತ್ತು ಮೂರನೇಯದರಿಂದ ಅಹಾರ ಸೇವಿಸುತ್ತಿದ್ದನಂತೆ. ತೋರಿಕೆಗೆ ಆತನು ದೇವತೆಗಳ ಆಪ್ತನಾಗಿದ್ದರೂ ರಾಕ್ಷಸರ ಗುಪ್ತಚಾರನಾಗಿದ್ದರಿಂದ ಇಂದ್ರನು ಅವನ ಶಿರಚ್ಛೇದ ಮಾಡಿದನಂತೆ. ಮಾಯಾ ವಿದ್ಯೆಯಲ್ಲಿ ಪರಿಣಿತನಾದ ಆತನ ತಂದೆ, ಮೊದಲನೇ ಮುಖವನ್ನು ನಾಸಿಪುಡಿ ಬಣ್ಣದ ಕಂಪಿಂಜಲ, ಎರಡನೇಯದನ್ನು ಕಲವಿಂಶ(ಗುಬ್ಬಚ್ಚಿ) ಮತ್ತು ಮೂರನೆಯದನ್ನು ತಿತ್ತಿರಿ ಹಕ್ಕಿಗಳನ್ನಾಗಿ ಪರಿವರ್ತಿಸಿದನಂತೆ. ಅದರಿಂದ ತಿತ್ತಿರಿ ಸದಾಕಾಲ ಆಹಾರ ಶೋಧನೆಯಲ್ಲಿಯೇ ಮೈಮರೆತಿರುತ್ತದಂತೆ. ಚಕೋರಪಕ್ಷಿ ಕೇವಲ ಚಂದ್ರಕಿರಣಗಳ ಮೇಲೆ ಬದುಕಬಲ್ಲದಂತೆ. ಲೇಪಾಕ್ಷಿಯಲ್ಲಿ ತಿತ್ತಿರಿಯನ್ನು ಮೂಡಿಸಲು ರೂವಾರಿ ಮರೆತಿಲ್ಲ.

ತನ್ನ ಚುಂಚನ್ನು ಕೈಯಂತೆ ಬಳಸಿಕೊಳ್ಳುವದಕ್ಕೆ ಗಿಳಿ ಹೆಸರುವಾಸಿ. ಭಟಕಳದಲ್ಲಿ ಬೇಟೆಗಾತಿಯ ರಥವನ್ನು ಒಂಟಿ ಗಿಳಿ ಎಳೆಯುತ್ತಿದ್ದರೆ, ಹಂಪೆಯಲ್ಲಿಯ ಕಲ್ಲಿನ ರಥದ ಮೇಲೆ ಆಟಿಗೆಯ ರಥವನ್ನು ಎಳೆಯುವುದರಲ್ಲಿ ಮೈಮರೆತಿದೆ. ಲೇಪಾಕ್ಷಿಯ ಕಂಭದ ಮೇಲೆ ಮರವೇರಲು ಕಾಲು ಎತ್ತಿಹಾಕುವಂತೆ ಚಿತ್ರಿತವಾಗಿದ್ದರೆ, ಇನ್ನೊಂದೆಡೆಗೆ ಸಂಗಾತಿಯನ್ನು ಕೂಗಿ ಕರೆಯುಂತಿದೆ. ಇವಲ್ಲದೇ ಇನ್ನೂ ಅನೇಕ ಹಕ್ಕಿಗಳ ಶಿಲ್ಪಗಳಿದ್ದರೂ ಅವುಗಳನ್ನು ಖಚಿತವಾಗಿ ಗುರುತಿಸಲಾಗುವುದಿಲ್ಲ. ಗರಿಗೆದರಿದವು, ಪ್ರೇಮದಲ್ಲಿ ಮೈಮರೆತವುಗಳು, ಮಡಕೆಯಲ್ಲಿ ನೀರು ಕುಡಿಯುವ ಹಕ್ಕಿಗಳೆಲ್ಲ ಕಣ್ಣಿಗೆ ಬೀಳುವುವು. ಹೊಯ್ಸಳರ

ದೇವಾಲಯಗಳಲ್ಲಿ ಹೂವು, ಕಾಯಿ, ಬಳ್ಳಿಗಳಲ್ಲಿ ಅತೀ ಅಲಂಕಾರಿತ ಹಕ್ಕಿಗಳನ್ನು ಕಾಣಬಹುದಾಗಿದೆ.

ಗಂಡಭೇರುಂಡ ತೀರ ಪ್ರಾಚೀನ ಕಾಲದಲ್ಲಿ ಹುಟ್ಟಿಕೊಂಡ ಕಾಲ್ಪನಿಕ ಪಕ್ಷಿ. ವೈಜ್ಞಾನಿಕವಾಗಿ ಇಂತಹದೊಂದು ಹಕ್ಕಿ ಬಾಳಿ ಬದುಕವದು ಸಾಧ್ಯವಿಲ್ಲ. ಈ ಕಲ್ಪನೆ ಹುಟ್ಟಿಕೊಳ್ಳಲು ಪೌರಾಣಿಕ ಹಿನ್ನೆಲೆಯೂ ಇದೆ. ನಾರಸಿಂಹನು ಹಿರಣ್ಯಕಶ್ಯಪನನ್ನು ಕೊಂದರೂ ಅವನ ಕೋಪಾಗ್ನಿ ಶಾಂತವಾಗದೇ ವಿಶ್ವದಲ್ಲೆಲ್ಲ ಹರಡಿಕೊಳ್ಳುವ ಸಾಧ್ಯತೆ ಇದ್ದುದರಿಂದ, ರಕ್ಷಣೆಗಾಗಿ ದೇವ-ದೇವತೆಗಳು ಶಿವನ ಮೊರೆಹೋಗುತ್ತಾರೆ. ಭೋಳಾ-ಶಂಕರನು ಶರಭದ ರೂಪ ತಾಳಿ ನರಸಿಂಹನನ್ನು ಎದುರಿಸಲು ಹೊರಟಾಗ ವಿಷ್ಣು, ಗಂಡಭೇರುಂಡದ ರೂಪ ತಾಳಿ ಶರಭವನ್ನೇ ತರಾಟೆಗೆ ತೆಗೆದುಕೊಂಡು ಬಿಡುತ್ತಾನೆ. ಆದ್ದರಿಂದ ಶರಭವೇ ಈ ಪಕ್ಷಿಯ ಆಹಾರವೆಂದು ನಂಬಲಾಗಿದೆ. ಶಿಲ್ಪಗಳಲ್ಲಿ ಗಂಡಭೇರುಂಡದ ಶಕ್ತಿ, ಸಾಮರ್ಥ್ಯಗಳನ್ನು ಸಾಂಕೇತಿಕವಾಗಿ ಆಹಾರವೆಂದು ರೂಪಿಸಲಾಗಿದೆ. ಭಟಕಳದ ಪಾರ್ಶ್ವನಾಥೇಶ್ವರ ಬಸದಿಯ ಗರುಡ ಸ್ತಂಭದ ಮೇಲೆ ಇರುವ ಈ ಪಕ್ಷಿ, ಒಂದು ಚುಂಚಿನಲ್ಲಿ ಎರಡು, ಇನ್ನೊಂದರಲ್ಲಿಯೂ ಎರಡು ಆನೆಗಳನ್ನು ಎತ್ತಿಕೊಂಡು ಹಾರುವಂತೆ ಚಿತ್ರಿಸಲಾಗಿದೆ. ಮಲ್ಪೆಯ ಬಲರಾಮ ದೇವಾಲಯದಲ್ಲಿ ತನ್ನ ಪಂಜುಗಳಲ್ಲಿ ಒಂದೇ ಜೋಡಿ ಆನೆಯೊಂದಿಗೆ ಹಾರುತ್ತಿರುವ ಉಬ್ಬು ಚಿತ್ರವಿದೆ. ಹಿರಿಯೂರಿನ ತ್ಯಾರಮಲ್ಲೇಶ್ವರ ದೇವಾಲಯದಲ್ಲಿ ದೀಪಸ್ತಂಭದ ಮೇಲೆ ಪಕ್ಷಿ ತನ್ನ ಪಂಜುಗಳನ್ನು ಬೇಟೆಯಾಡಲು ಎತ್ತಿ ಹಿಡಿದಂತಿದ್ದರೆ, ಮಾಡಿನ ಮೇಲೆ, ತನ್ನ ಕೊಕ್ಕು, ಪಂಜುಗಳ ನೆರವಿನಿಂದ ಜೋಡಿ ಆನೆಗಳೊಂದಿಗೆ ಗಗನ ವಿಹಾರಿಯಾಗಿರುವುದನ್ನು ಚಿತ್ರಿಸಲಾಗಿದೆ. ಬಳ್ಳಿಗಾವಿಯ ಭೇರುಂಡೇಶ್ವರ ಸ್ತಂಭದ ಮೇಲಿರುವುದಕ್ಕೆ ಮಾನವ ದೇಹದವಿದ್ದು, ಶಿರ ರೆಕ್ಕೆಗಳು ಮಾತ್ರ ಹಕ್ಕಿಯವು ಇವೆ. ಇಕ್ಕೇರಿಯ ವೀರಭದ್ರ ದೇವಾಲಯದಲ್ಲಿರುವ ಗಂಡ ಭೇರುಂಡ ಆನೆಗಳನ್ನು ಎತ್ತಿದೆ.

ವಿಷ್ಣುವಾಹನವಾದ ಗರುಡನು, ಕಶ್ಯಪ-ವಿನತೆಯರ ಪುತ್ರ. ಹುಟ್ಟಿದಾಗ ಅತೀ ತೇಜಃ ಪುಂಜನಾಗಿದ್ದರಿಂದ ಜನರು ಅವನನ್ನು ಅಗ್ನಿದೇವನೆಂದೇ ಭಾವಿಸಿದ್ದರಂತೆ. ಅವನ ಬಿಳಿ ಮುಖ, ಹಕ್ಕಿಯದಾಗಿದ್ದು ರೆಕ್ಕೆಗಳು ಕೆಂಬಣ್ಣದವಾಗಿದ್ದವು. ಕೈ, ಕಾಲು ಮತ್ತು ಶರೀರ ಮಾನವನದಾಗಿದ್ದು ಸುವರ್ಣ ಬಣ್ಣದ್ದು ಆಗಿತ್ತು. ಮಲತಾಯಿ ಕದ್ರುವಿನ ವೈಮನಸ್ಸಿನಿಂದಾಗಿ ವಿನತೆ ಬಂಧಿಸಲ್ಪಟ್ಟಿದ್ದರಿಂದ ಅವಳ ವಿಮೋಚನೆಗಾಗಿ ಗರುಡನಿಗೆ ಅಮೃತ ತರಲು ಸ್ವರ್ಗಲೋಕಕ್ಕೆ ಹೋಗಬೇಕಾಯಿತು. ಅಮೃತದ ಭರಣಿಯಿಂದ ಹುಲ್ಲಿನ ಮೇಲೆ ಬಿದ್ದ ಒಂದೆರಡು ಹನಿಗಳನ್ನು ನೆಕ್ಕ ಹೋದ ಕದ್ರುವಿನ ಸಂತಾನವಾದ ಹಾವುಗಳೆಲ್ಲ ನಾಲಿಗೆಗಳನ್ನು ಸೀಳಿಕೊಳ್ಳುವಂತಾಯಿತು. ಅಂದಿನಿಂದ ಹಾವುಗಳೇ ಗರುಡನ ಆಹಾರ. ತನ್ನ ತಾಯಿಗೆ ಮಾಡಿದ ಅನ್ಯಾಯದ ಪ್ರತಿಭಟನೆಗೆ ಹಾಗೆ ಮಾಡಿರಬೇಕು. ಆತನ ಹತ್ತಿರದ ಸಂಬಂಧಿಗಳಾದ ಹದ್ದುಗಳೂ ಸರ್ಪಗಳ ಕಡುವೈರಿಗಳಾಗಿ ಉಳಿದುಕೊಂಡಿವೆ. ವೈಷ್ಣವ ದೇವಾಲಯಗಳಲ್ಲೆಲ್ಲ ಗರುಡನ ಶಿಲ್ಪ ಇದೆ. ಬೇಲೂರಿನ ಶಿಲ್ಪ ಅಪೂರ್ವವಾದ ಕಲಾಕೃತಿಯಾದರೂ ಅದನ್ನು ಅನಂತರದಲ್ಲಿ

ಸ್ಥಾಪಿಸಲಾಗಿದೆಯಂತೆ. ಬಾದಾಮಿಯಲ್ಲಿ ರೆಕ್ಕೆ ಹರಡಿಕೊಂಡು ಪದ್ಮಾಸನ ಹಾಕಿಕೊಂಡು ಕುಳಿತ ಶಿಲ್ಪವಿದೆ.

ಗರುಡನಿಗೆ ಜಟಾಯು ಮತ್ತು ಸಂಪತಿ ಎಂಬ ಇಬ್ಬರು ಮಕ್ಕಳು. ಪಕ್ಷಿರಾಜ ಎನಿಸಿಕೊಂಡ ಜಟಾಯು, ಸೀತಾದೇವಿಯನ್ನು ಅಪಹರಿಸಿಕೊಂಡು ಹೋಗುತ್ತಿರುವ ರಾವಣನನ್ನು ತಡೆಗಟ್ಟುವ ಯತ್ನದಲ್ಲಿ ಗಾಯಾಳಾಗಿ ನೆಲಕ್ಕೆ ಉರುಳಿದರೂ, ಶ್ರೀ ರಾಮಚಂದ್ರನಿಗೆ ಈ ಸಮಾಚಾರ ಅರುಹಿದ ನಂತರವೇ ಕೊನೆಯುಸಿರು ಬಿಡುತ್ತಾನೆ. ಸೀತಾಪತಿ ಇಂತಹ ನಂಬಿಗಸ್ತನನ್ನು ಕಳೆದುಕೊಂಡದ್ದಕ್ಕಾಗಿ ದುಃಖಿಸುತ್ತ ಅವನ ಅಂತ್ಯ ಸಂಸ್ಕಾರ ಮಾಡುತ್ತಾನೆ. ಸಂಪತಿ, ಗುಪ್ತಚರನಾಗಿ ರಾವಣನ ರಾಜ್ಯಕ್ಕೆ ಹೋಗಿ ಅಲ್ಲಿಯ ಭೂಗೋಲವನ್ನು ಅಭ್ಯಸಿಸಿ ಬಂದದ್ದರಿಂದಲೇ ಹನುಮಂತನ ಸೀತಾ ದರ್ಶನ, ಲಂಕಾದಹನಗಳು ಸುಗಮವಾಗಿ ಸಾಗಿದವು. ಭಟಕಳದಲ್ಲಿ ಜಟಾಯುವಿನ ಶಿಲ್ಪವಿದ್ದರೆ, ಹಳೇಬೀಡಿನಲ್ಲಿ ರಾವಣನೊಡನೆ ಕಾದಾಟ ಚಿತ್ರಿಸಲಾಗಿದೆ. ನೀಲಗೃಧ್ರವೆಂಬ ನಿಲಿ ಹದ್ದು, ಶನಿದೇವನ ವಾಹನ, ಶನಿದೇವನು ಸೂರ್ಯ ಮತ್ತು ಛಾಯೆಯರ ಕುವರ. ಶನಿಯ ವಕ್ರ ದೃಷ್ಟಿ ತಮ್ಮ ಮೇಲೆ ಬೀಳದಿರಲೆಂದು ಯಾವ ಶಿಲ್ಪಿಯೂ ಅವನ ಶಿಲ್ಪ ಕಟೆಯುವುದರಲ್ಲಿ ಸಾಹಸ ತೋರಿಸಿಲ್ಲ!

ಶಿಲ್ಪಗಳಲ್ಲಿ ಸಸ್ತನೀಯಗಳು ಹೇರಳವಾಗಿ ಕಾಣಸಿಗುತ್ತವೆ. ಚಿಗರೆಗಳ ವಿವಿಧ ಭಂಗಿ ಹಾವಭಾವಗಳನ್ನು ಅಭ್ಯಸಿಸಲು ಲೇಪಾಕ್ಷಿಗೆ ಹೋಗಬೇಕು. ಏನೂ ಮಾಡಲು ಮನಸ್ಸಿಲ್ಲದೇ ಮುದುಡಿಯಾಗಿ ಮಲಗಿದ್ದು, ಮುಖಕ್ಕೆ ನೊಣ ಬಂದು ಕಚ್ಚಿದಾಗ ಮೂರು ಕಾಲ ಮೇಲೆ ನಿಂತು ಎಡ ಹಿಂಗಾಲಿನಿಂದ ಝಾಡಿಸಿಕೊಳ್ಳುವುದು, ಹೊಟ್ಟೆ ತುಂಬಿದಾಗ ಅಡ್ಡಬಿದ್ದು ವಿಶ್ರಾಂತಿಸುವುದು, ಹುಲಿಯು ಹಿಂಬಾಲಿಸುತ್ತಿದೆ, ಎಂದು ಅನಿಸಿದಾಗ ನಾಗಾಲೋಟ ಹಾಕಿ ಓಡುವುದು. ದಾರಿಯಲ್ಲಿ ಗಿಡಗಂಟಿಗಳು ಅಡ್ಡಲಾಗಿ ಬಂದಾಗ ಎತ್ತರದ ಜಿಗಿತದಿಂದ ದಾಟುವುದು, ಸುರಕ್ಷಿತವಾದ ಸ್ಥಳ ತಲುಪಿದಾಗ ಹುಲಿರಾಯನು ಹಿಂಬಾಲಿಸಿ ಬರುತ್ತಿದ್ದಾನೆಯೇ ಎಂದು ಆತಂಕದಿಂದ ಕಾವಲಿಟ್ಟು ವಿಶ್ರಾಂತಿಸುವುದು, ನಿಲುಕದ ಎಲೆಗಾಗಿ ಹಿಂಗಾಲ ಮೇಲೆ ಎತ್ತರಿಸಿ ನಿಲ್ಲುವುದು, ಕಂಠಕ್ಕೆ ಗಂಟೆ ಕಟ್ಟಿಸಿಕೊಂಡ ಆಶ್ರಮದ ಚಿಗರೆ, ಕವರು ಕೋಡಿನ ಗಂಡುಚಿಗರೆ, ನಾಚುತ್ತ ಮಲಗಿದ ಹೆಣ್ಣು ಚಿಗರೆಗಳನ್ನೆಲ್ಲ ಪಾಷಾಣದಲ್ಲಿ ಮೂಡಿಸಿದ್ದಾರೆ. ಸೋಮನಾಥಪುರದಲ್ಲಿ ಒಂದು ಕಡೆ ಬೇಟೆಗಾರರ ಬಿಲ್ಲಿಗೆ ಅಂಜಿದ ಚಿಗರೆ, ಕಲ್ಲು ಬಂಡೆಗಳ ಮೇಲಿಂದ ಜಿಗಿಯುತ್ತಿದ್ದರೆ, ಇನ್ನೊಂದು ಕಡೆ ಮಾನವನ ಅಧಿಪತ್ಯ ಸ್ವೀಕರಿಸಿ ಸಾಕುಪ್ರಾಣಿಯಾಗಿದೆ. ಹಂಪೆಯ ಅರಮನೆಯ ನೆಲಗಟ್ಟಿನ ಮೇಲೆ ಚಿಗರೆಗಳ ಶಿಲ್ಪಕಲಾ ಪಟ್ಟಿಕೆಗಳಿವೆ. ಬೇಲೂರಿನಲ್ಲಿ ಇಬ್ಬರು ಬೇಟೆಗಾರರು ಚಿಗರೆಯೊಂದನ್ನು ಬಿದಿರಿಗೆ ತೂಗಹಾಕಿ ಒಯ್ಯುತ್ತಿರುವ ಶಿಲ್ಪ ನೈಜವಾಗಿದೆ.

ಗೋವುಗಳನ್ನು ಕಾಯುವ ಗೋಪಾಲನ ಹಲವಾರು ರೂಪಗಳಿಂದ ಶಿಲ್ಪಿಗಳು ಸ್ಫೂರ್ತಿ ಪಡೆದಿದ್ದಾರೆ. ಬೇಲೂರು, ಹಳೆಬೀಡು, ನುಗ್ಗೆಹಳ್ಳಿ, ಸೋಮನಾಥಪುರ, ಹಂಪಿ, ದೇವಾಲಯಗಳಲ್ಲಿ, ವೇಣುಗೋಪಾಲ, ಕಾಳಿಯಾ-ಮರ್ದನ, ಗೋವರ್ಧನ-ಗಿರಿಧಾರಿ

ಶಿಲ್ಪಗಳಿವೆ. ಒಂದೆಡೆಗೆ ಗೋವು ವೇಣುನಾದಕ್ಕೆ ಮೈಮರೆತು ನಿಂತರೆ, ಇನ್ನೊಂದರಲ್ಲಿ ಕರುವಿಗೆ ಹಾಲು ಉಣಿಸುತ್ತಿದೆ. ಭಟಕಳದಲ್ಲಿ ಗೃಹಿಣಿ ಕಾಲಮಣೆಯ ಮೇಲೆ ಕುಳಿತು ಹಾಲು ಹಿಂಡುತ್ತಿದ್ದರೆ. ಇನ್ನೊಬ್ಬಳು ಕರುವನ್ನು ನಿಯಂತ್ರಿಸುತ್ತ ಗೋವನ್ನು ಸಂತೈಸುತ್ತಿದ್ದಾಳೆ. ಬಳ್ಳೀಗಾವಿಯಲ್ಲಿ ಶಿವಭಕ್ತ, ಗೋವೊಂದು ಲಿಂಗದ ಮೇಲೆ ಹಾಲೆರೆದು ಅದನ್ನೇ ತೀರ್ಥವೆಂದು ನೆಕ್ಕುವ ಶಿಲ್ಪ, ಸುಂದರವಾಗಿದೆ. ಇಂತಹದೇ ಶಿಲ್ಪ ಲೇಪಾಕ್ಷಿಯಲ್ಲಿಯೂ ಇದೆ. ಲಕ್ಷ್ಮೇಶ್ವರದಲ್ಲಿ ಮೊಲೆಯುಣ್ಣುವ ಕರುವನ್ನು ಪ್ರೀತಿಯಿಂದ ನೆಕ್ಕುವ ಗೋ ತಾಯಿಯ ಶಿಲ್ಪವಿದೆ. ಅಲ್ಲಿಯೇ ಮೂರು ಶಿರಗಳಿರುವ ಗೋವಿನ ಶಿಲ್ಪವೂ ಇದೆ. ಒಂದು ಶಿರ ನಿಂತ ಠೀವಿಯಲ್ಲಿ ಇದ್ದರೆ, ಇನ್ನೊಂದು ಹುಲ್ಲು ಮೇಯುವಂತೆಯೂ, ಮಗದೊಂದು ಹಿಂತಿರುಗಿ ನೋಡುವಂತೆಯೂ ಕೊರೆಯಲಾಗಿದೆ.

ಹೋರಿ, ಗೋವಿಗಿಂತ ಬಲಿಷ್ಠವಾಗಿದ್ದು ಕೊರಳಿಗೆ ಗಂಗೆದೊಗಲು, ಬೆನ್ನ ಮೇಲೆ ಇಣಿ ಇರುತ್ತವೆ. ಶಿವನ ವಾಹನವಾದ ನಂದಿ, ಶುಭ್ರ ಬಿಳಿಯ ವರ್ಣದ್ದು. ಇಂದ್ರನೂ ಒಮ್ಮೆ ನಂದಿಯ ರೂಪ ತಾಳಿದ್ದನಂತೆ. ಎಲ್ಲ ಶಿವಾಲಯಗಳಲ್ಲೂ ನಂದಿಯ ವಿಗ್ರಹಗಳಿರುತ್ತವೆ. ಇಕ್ಕೇರಿ, ಪಟ್ಟದಕಲ್ಲು, ಹಳೆಬೀಡುಗಳಲ್ಲಿ ನಂದಿಗಾಗಿಯೇ ಬೇರೆ ಪುಟ್ಟ ದೇವಾಲಯಗಳಿವೆ. ಬಳ್ಳಿಗಾವಿಯ ನಂದಿಯು ನೈಜವಾಗಿದ್ದು ಅದರ ಅಲಂಕಾರವನ್ನು ವಿವರವಾಗಿ ಕೆತ್ತಲಾಗಿದೆ. ಲೇಪಾಕ್ಷಿಯಲ್ಲಿ ತತ್ತರ ವೆತ್ತರ ಕಾಲು ಹಾಕಿ ಓಡುವ ನಂದಿ ಒಂದೆಡೆಗೆ ಇದ್ದರೆ, ಇನ್ನೊಂದು ಕಡೆಗೆ ಕರುವನ್ನು ಎತ್ತಿ, ಛತ್ರಿಯ ಆಶ್ರಯದಲ್ಲಿ ಕೋಲೆಬಸವನಂತೆ ನರ್ತಿಸುವ ನಂದಿಯೂ ಇದೆ. ಬಾದಾಮಿಯಲ್ಲಿ ನಂದಿಯ ಮೇಲೆ ಆರೂಢನಾದ ಶಿವನ ಸೊಂಟ ಬಳಿಸಿ ಕುಳಿತ ಪಾರ್ವತಿಯ ಕಲ್ಲಿನ ಶಿಲ್ಪವಿದೆ. ಹೋರಿಯ ವೀರ್ಯಾಂಡವನ್ನು ನಾಶಗೊಳಿಸಿ ದುಡಿಮೆಯ ಎತ್ತುಗಳನ್ನಾಗಿ ಮಾಡುತ್ತಾರೆ. ಸೋಮನಾಥಪುರದಲ್ಲಿ ಸಾಮಾನುಗಳನ್ನು ಹೇರಿದ ಚಕ್ಕಡಿಯನ್ನು ಎತ್ತೊಂದು ಎಳೆಯುತ್ತಿದ್ದರೆ, ಜೋಡೆತ್ತಿನ ಗಾಡಿ ನುಗ್ಗೆಹಳ್ಳಿಯಲ್ಲಿದೆ. ಲಕ್ಷ್ಮೇಶ್ವರ ಮತ್ತು ನುಗ್ಗೆಹಳ್ಳಿಗಳಲ್ಲಿ ಎತ್ತು ಮಾನವರ ಕಾದಾಟದ ಶಿಲ್ಪಗಳಿವೆ. ಬಾದಾಮಿಯಲ್ಲಿ ಒಂದು ಕಡೆಯಿಂದ ನೋಡಿದಾಗ ಎತ್ತಿನಂತೆಯೂ, ಇನ್ನೊಂದು ದಿಕ್ಕಿನಿಂದ ನೋಡಿದಾಗ ಆನೆಯಂತೆ ಕಾಣುವ ಸಂಯುಕ್ತ ಶಿಲ್ಪವಿದೆ. ಇಂತಹದೇ ಶಿಲ್ಪಗಳು ಶೃಂಗೇರಿ, ಲೇಪಾಕ್ಷಿಗಳಲ್ಲಿಯೂ ಇವೆ.

'ಸತ್ತವರ ಆತ್ಮಗಳನ್ನು ಪರಲೋಕಕ್ಕೆ ಕೊಂಡೊಯ್ಯಲು ಯಾವ ಆವಸರವೂ ಇಲ್ಲದ ಯಮಧರ್ಮರಾಜನು ಕೋಣವನ್ನೇ ತನ್ನ ಸಾರಿಗೆಯ ವಾಹನವನ್ನಾಗಿ ಆರಿಸಿಕೊಂಡಿದ್ದು ಸಮರ್ಪಕವಾಗಿದೆ ! ಪಟ್ಟದಕಲ್ಲಿನಲ್ಲಿ ಮಾರ್ಕಂಡೇಯನ ಜೀವವನ್ನು ಒಯ್ಯಲು ಯಮನು ಬಂದಾಗ ಶಿವನು ಭಕ್ತನ ನೆರವಿಗೆ ಪ್ರತ್ಯಕ್ಷವಾಗುವದನ್ನು ಮೂಡಿಸಲಾಗಿದೆ. ತನ್ನ ಕಠೋರ ತಪಸ್ಸಿನಿಂದ ಪರಮಾತ್ಮನನ್ನು ಮೆಚ್ಚಿಸಿದ ಅಸುರ ರಾಕ್ಷಸನು, ತನ್ನ ಮಗನಿಗೆ ಹೆಣ್ಣು ಬಿಟ್ಟರೆ ಬೇರೆ ಯಾರಿಂದಲೂ ಸಾವು ಬಾರದಂತೆ ವರವನ್ನು ಪಡೆಯುತ್ತಾನೆ. ಈ ಕಾಲದ ಸುಂದರಿಯರೆಲ್ಲ ಈ ಮಹಾತಪಸ್ವಿ ಅಸುರನನ್ನು ವರಿಸಲು ಸಿದ್ಧರಿದ್ದರೂ ಅವನು ದಪ್ಪ ಎಮ್ಮೆಯೊಂದರ

ಪ್ರೇಮಭಿಕ್ಷೆ ಬೇಡಿ, ವರಿಸಿ ಮಹಿಷಾಸುರನೆಂಬ ಪುತ್ರರತ್ನ ಪಡೆಯುತ್ತಾನೆ. ಅವನು ಭೂಲೋಕವನ್ನು ಗೆದ್ದು, ಇಂದ್ರನಿಗೆ ಶರಣಾಗತನಾಗಲು ಆಜ್ಞೆಯಿತ್ತಾಗ, ಅವನು ಅದಕ್ಕೆ ಒಪ್ಪದ್ದರಿಂದ ದೇವತೆಗಳೊಂದಿಗೆ ಕಾದಾಡಲಾರಂಭಿಸಿದ. ಅಸುರರು ಮಾಯಾ ವಿದ್ಯೆ ಕಲಿಸಿ ಸಹಸ್ರಾರು ಮಹಿಷಾಸುರರನ್ನು ನಿರ್ಮಿಸಿದ್ದರಿಂದ ಇಂದ್ರನ ವಜ್ರಾಯುಧವೂ ಫಲಕಾರಿಯಾಗಲಿಲ್ಲ. ಶ್ರೀ ವಿಷ್ಣುವಿನ ಸುದರ್ಶನ ಚಕ್ರವೂ ವಿಫಲವಾದ್ದರಿಂದ ರಾಕ್ಷಸರು ಗರುಡನಿಗೆ ಗಾಯಗೊಳಿಸಿ ದೇವಗಣವನ್ನು ಸೋಲಿಸಿದರು. ಅಂತೆಯೇ ಬ್ರಹ್ಮ, ವಿಷ್ಣು, ಮಹೇಶ್ವರರು ಒಟ್ಟಾಗಿ, ತಮ್ಮ ದಿವ್ಯ ಶಕ್ತಿಯನ್ನು ದೇವಿಯ ರೂಪದಲ್ಲಿ ಪರಿವರ್ತಿಸಿ, ಸಕಲ ಆಯುಧಗಳೊಂದಿಗೆ ಭೂಲೋಕಕ್ಕೆ ಕಳಿಸುತ್ತಾರೆ. ಅವಳು ಆ ರಾಕ್ಷಸನನ್ನು ವಧೆ ಮಾಡಿ ಮಹಿಷಾಸುರ ಮರ್ದಿನಿಯಾಗುತ್ತಾಳೆ. ಈ ಪ್ರಸಂಗವನ್ನು ಶಿಲ್ಪಿಗಳು ಬಹು ರಮ್ಯವಾಗಿ ಚಿತ್ರಿಸಿದ್ದಾರೆ. ಬಾದಾಮಿಯಲ್ಲಿ ದುರ್ಗೆ, ತ್ರಿಶೂಲದಿಂದ ಅಸುರನ ವಧೆ ಮಾಡುತ್ತಿದ್ದಾಳೆ. ಮಾಲಗಿತ್ತಿ ದೇವಾಲಯದಲ್ಲಿ ಬಾಣ, ಬಿಲ್ಲುಗಳಿಂದ ಆಕ್ರಮಣ ನಡೆಸಿದ್ದಾಳೆ. ಪಟ್ಟದಕಲ್ಲಿನಲ್ಲಿ ಮಹಿಷಾಸುರನಿಗೆ ಮಾನವಶರೀರವಿದ್ದು ಶಿರ ಮಾತ್ರ ಮಹಿಷನದು ತೋರಿಸಲಾಗಿದೆ. ಹಳೆಬೀಡಿನಲ್ಲಿ ನೆಲಕ್ಕೆ ಉರುಳಿಸಿದ ರಾಕ್ಷಸನನ್ನು, ದೇವಿ ಎಡಕಾಲಿನಿಂದ ತುಳಿದು ನಿಂತಿದ್ದಾಳೆ. ಅದೇ ನುಗ್ಗೆಹಳ್ಳಿಯಲ್ಲಿ ಆಕೆ ಮಾನವ ರೂಪಿ ರಾಕ್ಷಸನನ್ನು ತುಳಿಯುತ್ತಿದ್ದಾಳೆ.

ಕುದುರೆ, ಶಿಲ್ಪದಲ್ಲಿ ಬಹುರೂಪಿಯಾಗಿ ಕಾಣಿಸಿಕೊಂಡಿದೆ. ಲೇಪಾಕ್ಷಿಯಲ್ಲಿ ಕಿನ್ನರನ ರೂಪದಲ್ಲಿ ಮೃದಂಗ ನುಡಿಸುತ್ತಿದ್ದರೆ. ಸೋಮನಾಥಪುರದಲ್ಲಿ ಹಯವದನನಾಗಿ ನಲ್ಲೆಯೊಂದಿಗೆ ಸರಸಸಲ್ಲಾಪದಲ್ಲಿ ತೊಡಗಿದೆ. ಮಾಲಗಿತ್ತಿ ದೇವಾಲಯದ ಹೊರ ಗೋಡೆಯ ಮೇಲೆ ಕಾಲ್ಪನಿಕ ಅಶ್ವವಿದೆ. ಲಕ್ಷ್ಮೇಶ್ವರದಲ್ಲಿ ಆನೆ, ಕುದುರೆಗಳ ಸೆಣಸಾಟದ ಚಿತ್ರವಿದೆ. ಕಾಯಕಿಣಿಯಲ್ಲಿ ಅಶ್ವಾರೋಹಿಗಳಿದ್ದಾರೆ. ಹೊಯ್ಸಳರ ದೇವಾಲಯಗಳಲ್ಲೆಲ್ಲ ವಿವಿಧ ಭಂಗಿಗಳ ಅಶ್ವಗಳ ಪಟ್ಟಿಕೆಗಳನ್ನು ಹೊರಗೋಡೆಗಳಿಗೆ ಜೋಡಿಸಲಾಗಿದೆ. ಇಕ್ಕೇರಿಯಲ್ಲಿ ಅಶ್ವಾರೋಹಿ ಸೈನಿಕರು, ಕಹಳೆ ಊದುತ್ತಿರುವ ಸೈನಿಕರನ್ನು ಚಿತ್ರಿಸಿದರೆ, ಹಂಪೆಯಲ್ಲಿ ಸ್ತಂಭಗಳಿಗೇ ಕುದುರೆ ಸವಾರರನ್ನು ಜೋಡಿಸಿದ್ದಾರೆ.

ಶತಮಾನಗಳ ಹಿಂದೆ ಕಾಡಾಗಿದ್ದ ನಾಯಿಯನ್ನು ಮಾನವನು ನಾಡಿಗೆ ತಂದು ತನ್ನ ಸೇವೆಗಾಗಿ ನೇಮಿಸಿಕೊಂಡಿದ್ದಾನೆ. ದತ್ತಾತ್ರೇಯನ ಸುತ್ತಲೂ ನಾಲ್ಕು ನಾಯಿಗಳು ಇದ್ದೇ ಇರುತ್ತವೆ. ಇಂದ್ರನು ಹೆಣ್ಣು-ನಾಯಿಯೊಂದನ್ನು ತನ್ನ ಭವನವನ್ನು ಕಾಯಲು ನೇಮಿಸಿದ್ದಾನಂತೆ. ಯಮಧರ್ಮರಾಯನು ಮೃತರು ಎಲ್ಲಿಯೇ ಇದ್ದರೂ ಕಂಡು ಹಿಡಿಯಲು ನಾಲ್ಕು ಕಣ್ಣಿನ ನಾಯಿಯನ್ನು ಸಾಕಿದ್ದಾನಂತೆ. ಧರ್ಮಿಷ್ಠನಾದ ಯುಧಿಷ್ಠಿರನು ಪ್ರೀತಿಯಿಂದ ಸಾಕಿದ ನಾಯಿ ಅವನನ್ನು ಸ್ವರ್ಗಲೋಕಕ್ಕೂ ಹಿಂಬಾಲಿಸಿತು. ಲೇಪಾಕ್ಷಿಯಲ್ಲಿ ಭೈರವನು ಭಿಕ್ಷಾಟನೆಗೆ ಹೊರಟ ಶಿಲ್ಪದಲ್ಲಿ ಅವನ ನಾಯಿ ಹಿಂಗಾಲ ಮೇಲೆ ನಿಂತದ್ದು ಸುಂದರವಾಗಿ ಚಿತ್ರಿಸಿದ್ದಾರೆ. ಬಳ್ಳಿಗಾವಿಯ ವೀರಗಲ್ಲೊಂದರ ಮೇಲೆ ನಾಲ್ಕು ಬೇಟೆ ನಾಯಿಗಳು ಕಾಡುಹಂದಿಯೊಂದರ ಮೇಲೆ ಆಕ್ರಮಣ ನಡೆಸಿವೆ. ಭಟಕಳದ ಶಿಲ್ಪವೊಂದರಲ್ಲಿ ಸಂಭೋಗದಲ್ಲಿ

ತೊಡಗಿದ ಶ್ವಾನ ದಂಪತಿಗಳನ್ನು ಓರ್ವ ಯುವತಿ ಎವೆಯಿಕ್ಕದೆ ಕುತೂಹಲದಿಂದ ವೀಕ್ಷಿಸುವ ನೈಜ ಚಿತ್ರಣವಿದೆ.

ಸಮುದ್ರ ಮಂಥನದಿಂದ ಬಂದ ಶ್ವೇತವರ್ಣದ ಐರಾವತವನ್ನು ಇಂದ್ರನು ತನ್ನ ಪ್ರತಿಷ್ಠೆಗೆ ಒಪ್ಪುವುದರಿಂದ ವಾಹನವನ್ನಾಗಿ ಮಾಡಿಕೊಂಡ. ಲಕ್ಷ್ಮಿಯ ಜೊತೆಯಲ್ಲಿ ಸದಾಕಾಲ ಜೋಡಿ ಆನೆಗಳಿರುತ್ತವೆ. ಹಳೆಬೀಡಿನಲ್ಲಿ ಇಂತಹ ಶಿಲ್ಪವಿದೆ. ಆನೆಯ ಉದರ ಸೀಳಿ ಗಜಾಸುರನ ಸಂಹಾರ ಮಾಡಿದ ಸುಂದರ ಶಿಲ್ಪವೂ ಇದೇ ಸ್ಥಳದಲ್ಲಿದೆ. ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ, ಡಮರು, ಜೊತೆಯಾಗಿ ನಿಂತ ನಂದಿ, ಹಿನ್ನೆಲೆಯಲ್ಲಿ ವಾದ್ಯಗಾರರು, ಎಲ್ಲ ಸೊಗಸಾಗಿ ರೂಪ ತಾಳಿದ್ದಾರೆ. ಶೃಂಗೇರಿಯಲ್ಲಿ ಇದನ್ನೇ ತೀರ ಒರಟಾದ ಶಿಲೆಯಲ್ಲಿ ಕಟೆಯಲಾಗಿದೆ. ಒಂದನ್ನೊಂದು ಹೋಲುವ ಭಗದತ್ತನ ಶಿಲ್ಪ ಬೇಲೂರು, ಹಳೆಬೀಡು, ನುಗ್ಗೆಹಳ್ಳಿ, ಸೋಮನಾಥಪುರಗಳಲ್ಲಿ ಕಾಣಸಿಗುತ್ತವೆ. ಹೊಯ್ಸಳರ ದೇವಾಲಯಗಳಲ್ಲಿ ಗಜ-ಚಿತ್ರ ಪಟ್ಟಿಕೆಗಳು ಹೇರಳವಾಗಿವೆ. ಕೆಲವುಗಳ ಮೇಲೆ ಥಡಿ, ಅಂಬಾರಿಗಳನ್ನು ಹಾಕಿ ರಾಜ-ಮಹಾರಾಜರುಗಳು ಸವಾರಿ ಮಾಡುತ್ತಿದ್ದರೆ, ಇನ್ನು ಹಲವು ಆನೆಗಳನ್ನು ಮಾವುತರು ಅಂಕುಶದಿಂದ ನಿಯಂತ್ರಿಸುತ್ತಿದ್ದಾರೆ. ಲೇಪಾಕ್ಷಿಯ ಶಿಲ್ಪದಲ್ಲಿ ಸಿಟ್ಟಿಗೆದ್ದ ಆನೆಯನ್ನು ಚಿತ್ರಿಸಿದರೆ, ಲಕ್ಷ್ಮೇಶ್ವರದಲ್ಲಿ ಮಾನವನನ್ನು ರೇಗಿದ ಆನೆ ತುಳಿಯುತ್ತಿರುವ ದೃಶ್ಯ ಕಾಣಬಹುದು. ಹಳೆಬೀಡಿನಲ್ಲಿ ಯುವಕನು ಆನೆಯ ಕೋರೆಯನ್ನು ಹಿಡಿದು ಅದರೊಡನೆ ಸೆಣಸಾಟವನ್ನು ನಡೆಸಿದ್ದಾನೆ. ಇನ್ನೊಂದು ಅಂಕಣದಲ್ಲಿ ಯೋಧನೊಬ್ಬ ಕೋರೆಯನ್ನು ಹಿಡಿದು ಅದರೊಡನೆ ಸೆಣಸಾಟವನ್ನು ನಡೆಸಿದ್ದಾನೆ. ಇನ್ನೊಂದು ಅಂಕಣದಲ್ಲಿ ಯೋಧನೊಬ್ಬ ಮದವೇರಿದ ಆನೆಯ ಸೊಂಡಿಲನ್ನು ಕಂಕುಳಲ್ಲಿ ಬಿಗಿ ಹಿಡಿದು ಅಂಕುಶದಿಂದ ಅದನ್ನು ನಿಯಂತ್ರಿಸುವ ಯತ್ನದಲ್ಲಿದ್ದಾನೆ. ಬೇಲೂರಿನಲ್ಲಿ ಭೀಮ-ಭಗದತ್ತರ ಕಾಳಗವನ್ನು ಚಿತ್ರಿಸುವ ಶಿಲ್ಪದಲ್ಲಿ ರಭಸದಿಂದ ಮುನ್ನುಗ್ಗುತ್ತಿರುವ ಆನೆಯನ್ನು ಯಥಾರ್ಥವಾಗಿ ರೂಪಿಸಲಾಗಿದೆ. ಹಳೆಬೀಡಿನಲ್ಲಿ ಜೋಡಾನೆಗಳು ಸೊಂಡಿಲುಗಳ ಆಲಿಂಗನದಲ್ಲಿದ್ದ ಶಿಲ್ಪವಿದ್ದಂತೆ, ಪ್ರಿಯತಮೆಗಾಗಿ ಕಾದಾಟಕ್ಕಿಳಿದ ಗಂಡಾನೆಗಳನ್ನು ಶಾಂತಗೊಳಿಸುವ ಯತ್ನದಲ್ಲಿದ್ದ ಧಾರ್ಮಿಕನ ಶಿಲ್ಪವೂ ಇದೆ.


ಹೊಯ್ಸಳ ಶಿಲ್ಪಿಗಳು ಸಿಂಹವನ್ನು ಅಲಂಕಾರದ ಪ್ರಾಣಿಯಾಗಿ ಬಳಸಿದ್ದಾರೆ. ಸಿಂಹದ ಬಾಯಿಂದ ಹೂ-ಬಳ್ಳಿಗಳು ಹೊರಹೊರಟಂತೆ ತೋರಿಸುವುದು ನಮ್ಮ ಶಿಲ್ಪಿಗಳ ವೈಶಿಷ್ಟ್ಯ, ದೇವಾಲಯದ ಹೆಬ್ಬಾಗಿಲಿನಲ್ಲಿ ಸಿಂಹ ಜೋಡಿ ನಿಲ್ಲಿಸುವದು ಇನ್ನೊಂದು ಪದ್ಧತಿ. ಹಳೆಬೀಡಿನಲ್ಲಿ ಒಂದನ್ನೊಂದು ಎದುರಿಸಿ ಗರ್ಜಿಸುವ ಸಿಂಹ ಜೋಡಿಯನ್ನು ಕಾಣಬಹುದು. ಲಕ್ಕುಂಡಿಯಲ್ಲಿ ಒಂದು ಬಸದಿಯ ಕಂಬದ ಮೇಲೆ ರಚಿಸಿದ ಅಲಂಕಾರದಲ್ಲಿಯೂ ಇಂತಹದೇ ಚಿತ್ರ ಕಟೆಯಲಾಗಿದೆ. ಬೇಲೂರಿನಲ್ಲಿ ಆನೆಯನ್ನು ಆಕ್ರಮಿಸುವ ಸಿಂಹನನ್ನು ಯೋಧನು ಕಠಾರಿಯಿಂದ ಇರಿಯುವ ಶಿಲ್ಪವಿದೆ. ದುರ್ಗೆ ಅತೀ ಕೋಪಗೊಂಡಾಗ ಸಿಂಹದ ಬದಲಾಗಿ ಹುಲಿರಾಯನನ್ನು ವಾಹನವನ್ನಾಗಿ ಬಳಿಸುತ್ತಾಳಂತೆ. ಶಿವನು ಚಿಗರೆಯ ಚರ್ಮ ಧರಿಸಿ

ಬೇಸರಗೊಂಡಾಗ ಆನೆಯ ಚರ್ಮ ಧರಿಸುತ್ತಾನಂತೆ. ಸಳನು ಹೆಬ್ಬುಲಿಯನ್ನು ಇರಿದು ಕೊಲ್ಲುವ ದೃಶ್ಯವನ್ನೇ ಹೊಯ್ಸಳರು ಲಾಂಛನವಾಗಿ ಮಾಡಿಕೊಂಡರು. ಬಳ್ಳಿಗಾವಿ, ಬೇಲೂರಿನ ದೇವಾಲಯಗಳಲ್ಲಿ ಈ ಲಾಂಛನದ ಭವ್ಯ ಶಿಲ್ಪ ನೋಡಬಹುದು. ಇತರ ಹೊಯ್ಸಳರ ದೇವಾಲಯಗಳಲ್ಲೂ ಈ ಲಾಂಛನದ ವಿವಿಧ ಅಳತೆಯ ಶಿಲ್ಪಗಳಿವೆ. ಭಟಕಳದಲ್ಲಿ ಗಾಯಗೊಂಡ ಹುಲಿಯೊಂದು ಕಠಾರಿಧಾರಿ ಯುವಕನ ಮೇಲೆ ಏರಿ ಬರುವುದನ್ನು ಚಿತ್ರಿಸಲಾಗಿದೆ. ಹಿರಿಯೂರಿನ ಶಿಲ್ಪದಲ್ಲಿ ಏರಿಬರುತ್ತಿರುವ ಹುಲಿಯನ್ನು ನಂದಿಯ ಸವಾರಿ ಮಾಡುತ್ತಿರುವ ಯೋಧನು ಬರ್ಚಿಯಿಂದ ಇರಿಯುತ್ತಿದ್ದಾನೆ. ಬಳ್ಳಿಗಾವಿಯ ವೀರಗಲ್ಲೊಂದರಲ್ಲಿ ಆಕ್ರಮಿಸಲು ಬಂದ ಹುಲಿಯನ್ನು ಕಠಾರಿಧಾರಿ ಎದುರಿಸುತ್ತಿದ್ದಾನೆ. ಎಷ್ಟೋ ಶಿಲ್ಪಗಳಲ್ಲಿ ಸಿಂಹವನ್ನು ಹುಲಿಯಿಂದ ಪ್ರತ್ಯೇಕಿಸುವದೇ ಕಷ್ಟಕ್ಕಿಟ್ಟುಕೊಳ್ಳುತ್ತದೆ.

ರಾಮಾಯಣ ಚಿತ್ರಿತವಾದಲ್ಲೆಲ್ಲ "ಮಂಗ್ಯಾ"ಗಳ ಮಂಗತನಗಳನ್ನು ಕಾಣಬಹುದಾಗಿದೆ. ಬೇಲೂರಿನಲ್ಲಿ ಶಿಲಾಬಾಲಿಕೆಯ ಸೀರೆ ಎಳೆವ ತುಂಟ ಕೋತಿಯ ಶಿಲ್ಪವಿದೆ. ಭಟಕಳದಲ್ಲಿ ಬಂಡೆಗಲ್ಲುಗಳನ್ನು ಹೊತ್ತು ತರುವ ವಾನರರ ಶಿಲ್ಪವಿದೆ. ಪಂಚತಂತ್ರದಲ್ಲಿಯ ಅಧಿಕಪ್ರಸಂಗಿ ಕೋತಿಯನ್ನು ಪಟ್ಟದಕಲ್ಲು ಬಳ್ಳಿಗಾವಿಯಲ್ಲಿ ಚಿತ್ರಿಸಲಾಗಿದೆ. ಲೇಪಾಕ್ಷಿಯಲ್ಲಿ ಮರಿಯನ್ನು ಮುದ್ದಿಸುವ ತಾಯಿ, ಮುಖವನ್ನು ತುರಿಸಿಕೊಳ್ಳುವ ಕೋತಿ, ಬಾಳೆಹಣ್ಣು ಕದ್ದು ತಿನ್ನುತ್ತ ಇರುವ ವಾನರ, ಕೈಕಟ್ಟಿ ವಿಚಾರ ಮಗ್ನವಾಗಿರುವ ಕೋತಿಗಳ ಶಿಲ್ಪಗಳನ್ನು ಕಾಣಬಹುದಾಗಿದೆ. ಇವಲ್ಲದೇ ಗಿಡ, ಮರ, ಆಶ್ರಮ, ಕಾಡುಗಳನ್ನು ಚಿತ್ರಿಸುವಾಗ ಅವುಗಳಲ್ಲಿ ಈ ರಾಮ ಭಕ್ತರನ್ನು ಸೇರಿಸಲು ನಮ್ಮ ಶಿಲ್ಪಿಗಳು ಮರೆತಿಲ್ಲ.

ಇಷ್ಟೊಂದು ಸುಂದರ ಪಶು, ಪಕ್ಷಿಗಳ ಶಿಲ್ಪಗಳನ್ನು ನಮಗಾಗಿ ಬಿಟ್ಟು ಹೋದ ಶಿಲ್ಪಿಗಳ ಜೀವನದ ಬಗ್ಗೆ ನಮಗೆ ಏನೂ ತಿಳಿಯದು. ಬಹುಶಃ ಅವರ ಕಲಾಕೃತಿಗಳೇ ಮುಖ್ಯವಾದ್ದರಿಂದ ಶಿಲ್ಪಿಗಳು ಅಜ್ಞಾತರಾಗಿರಲು ಬಯಸಿರಬೇಕು. ಇನ್ನಿತರ ವಿದ್ಯೆ, ಕಲೆಗಳಂತೆ ಇದೂ ವಂಶಪರಂಪರೆಯಾಗಿ ಇಲ್ಲವೇ ಗುರುವಿನಿಂದ ಶಿಷ್ಯನಿಗೆ ಬಂದಿದೆ ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಉಳಿ, ಚಾಣ, ಚಳಕಗಳೊಂದಿಗೆ ಪ್ರತಿಯೊಂದು ಪಶು, ಪಕ್ಷಿಯ ಅಂಗಾಂಗಗಳ ವಿವರವಾದ ಪರಿಚಯ ಮಾಡಿಕೊಂಡಾಗಲೇ ತನ್ನ ಕಲ್ಪನಾ ಶಿಲ್ಪವನ್ನು ಮೂಡಿಸುವುದು ಸಾಧ್ಯವಾಯಿತು. ಚಾಲುಕ್ಯ, ರಾಷ್ಟ್ರಕೂಟ ಮತ್ತು ಹೊಯ್ಸಳರ ಕೆಲ ಶಿಲ್ಪಗಳ ಮೇಲೆ ಶಿಲ್ಪಿಗಳ ಹೆಸರು ಕೆತ್ತಿದ್ದರಿಂದ, ತಾಮ್ರಪಟ, ಶಿಲಾಶಾಸನಗಳ ಮೇಲೆ ಅವುಗಳ ರೂವಾರಿಗಳ ಕುರಿತು ಅಲ್ಪ ಸ್ವಲ್ಪ ಮಾಹಿತಿ ಸಿಗುವುದುಂಟು. 'ಶಿಲ್ಪಿ ಮಹಾಕಾಳ' ಎಂಬವನು ಶಾಸನದ ಅಕ್ಷರಗಳ ನಡುವೆ ಸಿಂಹ, ಆನೆ, ಗಿಳಿಗಳಂತಹ ಪ್ರಾಣಿಗಳನ್ನು ನಿಪುಣತೆಯಿಂದ ಕೊರೆಯುತ್ತಿದ್ದನೆಂದು ಚಿತ್ರದುರ್ಗದ ಶಾಸನದಿಂದ ತಿಳಿದುಬರುತ್ತಿದೆ. ಕಪಿಯ ಕುಚೇಷ್ಟೆಗೆ ಬಲಿಯಾದ ಅರೆ ನಗ್ನ , ಲಜ್ಜಾಭರಿತ ಬೇಲೂರಿನ ಶಿಲಾಬಾಲಿಕೆಯರನ್ನು ಶಿಲ್ಪಿ ಜಾವಣನು ಕೆತ್ತಿದ್ದಾನೆ. ಮಲ್ಲಿಯಣ್ಣ ಮತ್ತು ನಾಗೋಜರು ತಾವು ನಿರ್ಮಿಸಿದ ಶಿಲಾಬಾಲಿಕೆಯ ಸಂಗಡ

ಶಿಲ್ಪಗಳಲ್ಲಿ ಪಶು ಪಕ್ಷಿ ಚಿತ್ರಣ



೧. ನಾಲ್ಕು ದೇಹ, ಒಂದೇ ಶಿರದ ಚಿಗರೆ

೨. ಒಂದೇ ದೇಹ ಮೂರು ಶಿರದ ಗೋವು

೩. ಗೋಹಸ್ತಿ

೪. ಕನ್ನೆಯರಿಂದ ರೂಪಿತವಾದ ಅಶ್ವ

೫. ನಾಲ್ಕು ಆನೆಗಳನ್ನು ಒಟ್ಟಿಗೇ ಒಯ್ಯುವ ಗಂಡಭೇರುಂಡ

೬. ನವಕನ್ನೆಯರಿಂದ ರೂಪಿತವಾದ ಗಜ


ದೇವ - ವಾಹನಗಳು



೧.ನಂದಿ ೨.ಶೇಷ ೩.ಮೂಷಕ

೪. ಐರಾವತ ೫. ಗರುಡ ೬. ಮಯೂರ

ಪಶು - ಪಕ್ಷಿಗಳ ಶಿಲ್ಪ - ಭಂಗಿಗಳು



೧. ಸಿಟ್ಟಿಗೆದ್ದ ಆನೆ
೨. ಮರಿಯನ್ನು ಮುದ್ದಿಸುವ ಮಂಗ
೩. ಲಿಂಗಕ್ಕೆ ಹಾಲನ್ನೆರೆದು ತೀರ್ಥ ಸ್ವೀಕರಿಸುವ ಹಸು
೪. ವಿಶ್ರಮಿಸುವ ಚಿಗರೆ
೫. ಹಣ್ಣು ತಿನ್ನುವ ಹಕ್ಕಿ.
೬. ಮತ್ಸ್ಯದ ನಿರೀಕ್ಷೆಯಲ್ಲಿ ಹಂಸ

ಹಕ್ಕಿಗಳ ಅಂಕಕ್ಕೆ ಆಮಂತ್ರಣ





ವಿನೋದವೀಯುತ್ತಿದ್ದ ಪಶು ಪ್ರಾಣಿಗಳು



೧. ಕೋಳಿ ಕಾಳಗ
೨. ಟಗರು ಕಾಳಗ
೩. ಹಾವಾಡಿಗ
೪. ಗೂಳಿಯನ್ನು ಮಣಿಸಿದ್ದು
೫. ಹೆಬ್ಬುಲಿಯನ್ನು ಎದುರಿಸಿದ್ದು
೬. ಆನೆಯೊಡನೆ ಸೆಣಸಾಟ

ಪಶು-ಪಕ್ಷಿಗಳನ್ನು ಮೂಡಿಸಿದ್ದಾರೆ. ನುಗ್ಗೆಹಳ್ಳಿಯಲ್ಲಿ ಹೂ ಬಳ್ಳಿಗಳ ನಡುವೆ ಪ್ರಾಣಿಗಳನ್ನು ಕಟೆದ ಶ್ರೇಯಸ್ಸು ಮಲ್ಲಿತಮ್ಮನಿಗೆ ಸಲ್ಲುತ್ತದೆ.

ಅತ್ಯಮೂಲ್ಯವಾದ ಈ ಕಲಾಪರಂಪರೆಯನ್ನು ಸಂರಕ್ಷಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಅದರ ಜೊತೆಗೆ ಅವುಗಳನ್ನು ಆಳವಾಗಿ ಅಭ್ಯಸಿಸಿ, ಚಿತ್ರ ಮತ್ತು ಛಾಯಾಚಿತ್ರಗಳೊಂದಿಗೆ ಈ ಮಾಹಿತಿಯನ್ನು ಗ್ರಂಥ ರೂಪದಲ್ಲೂ ಪ್ರಕಟಿಸಿದರೆ ಮುಂದಿನ ಪೀಳಿಗೆಯವರು ಇದಕ್ಕಾಗಿ ಕೃತಜ್ಞತೆ ಸೂಚಿಸದೇ ಇರಲಾರರು.

●●●

ಕರ್ನಾಟಕ ಲಲಿತಕಲಾ ಅಕಾಡೆಮಿಯ 1994ರಲ್ಲಿ ಹೊರತಂದ 'ಶಿಲ್ಪಕಲಾಪ್ರಪಂಚ'ದಲ್ಲಿ ಪ್ರಕಟಿತ

೩. ತಾಳೆಗರಿಯಲ್ಲಿ ಚಿತ್ರಕಲೆ


ತಾಳೆಗರಿ ಚಿತ್ರಕಲೆ ಕ್ರಿಸ್ತಶಕ ಪೂರ್ವದಿಂದಲೇ ಕರ್ನಾಟಕದಲ್ಲಿ ಬಳಕೆಗೆ ಬಂದಿರಬೇಕು. ತಾಳೆಗರಿಯ ಮೇಲೆ ಕಲಾವಿದರು ತೋರಿರುವ ರೇಖಾಲಾವಣ್ಯ. ಚಮತ್ಕಾರ, ವರ್ಣನೈಪುಣ್ಯಗಳು ರಸಿಕರ ಮನಸ್ಸನ್ನು ಸೂರೆಗೊಳ್ಳುತ್ತವೆ. ತಾಳೆಗರಿಯ ಮೇಲೆ ಮೂಡಿ ಬಂದ ಸುಂದರಿಯರು ಬೇಲೂರು-ಹಳೆಬೀಡುಗಳ ಶಿಲಾಬಾಲಿಕೆಯರ ಜೊತೆ ಸ್ಪರ್ಧೆಗಿಳಿದಂತೆ ತೋರುತ್ತಾರೆ.



ತಾಳೆಗರಿಗಳ ಮೇಲೆ ಚಿತ್ರಗಳನ್ನು ರಚಿಸುವ ವಿಶಿಷ್ಟವಾದ ಕಲೆ, ಕರ್ನಾಟಕದಲ್ಲಿ ಹುಟ್ಟಿ ಬೆಳೆದು ಪ್ರೋತ್ಸಾಹದ ಕೊರತೆಯಿಂದಾಗಿ ಕಣ್ಮರೆಯಾಯಿತು. ತಾಳೆ ಮರ ಬೆಳೆಯುವ ಗುಜರಾತ್, ಮಹಾರಾಷ್ಟ್ರ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಬಂಗಾಳಗಳಲ್ಲಿಯೂ ಈ ಕಲೆ ಉಳಿಯಲಿಲ್ಲ. ಇಂದಿಗೂ ಅದನ್ನು ಉಳಿಸಿಕೊಂಡು ಬಂದ ಶ್ರೇಯಸ್ಸು ಒರಿಸ್ಸಾ ರಾಜ್ಯಕ್ಕೆ ಸೇರುತ್ತದೆ. ಅಲ್ಲಿಯ ಕಲಾವಿದರು ಪಟ ಚಿತ್ರಗಳನ್ನು ರಚಿಸಿ ಉದರ ಪೋಷಣೆ ಮಾಡಿಕೊಳ್ಳುವುದಲ್ಲದೇ ಭುವನೇಶ್ವರದ ವೇಣುಧರ ಮಹಾಪಾತ್ರರು ರಾಷ್ಟ್ರಮಟ್ಟದ ಪ್ರಶಸ್ತಿಯ ಗೌರವಕ್ಕೂ ಪಾತ್ರರಾಗಿದ್ದಾರೆ. ಅವರ ಕಲಾಕೃತಿಗಳನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ಕಿರಿದಾದ ತಾಳೆ ಓಲೆಯ ಮೇಲೆ ರೇಖಾಚಿತ್ರದಂತೆ ಮೂಡಿಬಂದ ಸುಂದರಿಯರು ಬೇಲೂರಿನ ಶಿಲಾಬಾಲಕಿ ಮತ್ತು ಖಜುರಾಹೋದ ಸುರ ಸುಂದರಿಯರೊಡನೆ ಸ್ಪರ್ಧೆಗೆ ಇಳಿದಂತೆ ತೋರುತ್ತಾರೆ. ದೇವಾನುದೇವತೆಯರನ್ನು ಚಿತ್ರಿಸುವುದಕ್ಕಾಗಿ ಐದರಿಂದ ಹತ್ತರವರೆಗೆ ತಾಳೆ ಓಲೆಗಳನ್ನು ರೇಷ್ಮೆದಾರದಿಂದ ಪೋಣಿಸಿ ಸಂಯುಕ್ತ ಪಟ ಚಿತ್ರಗಳನ್ನು ಓರಿಸ್ಸಾದ ಕಲಾವಿದರು ರೂಪಿಸುತ್ತಾರೆ. ಮುರಲಿ ನಾದವನ್ನು ಹೊರಡಿಸುವದರಲ್ಲಿ ತನ್ಮಯನಾದ ಗೋಪಾಲನನ್ನು, ಕೈಲಾಸದಲ್ಲಿ ಪರಸ್ಪರ ಆಲಿಂಗನದಲ್ಲಿ ಮೈಮರೆತ ಶಿವಪಾರ್ವತಿಯರನ್ನು, ನೋಡುತ್ತಿದ್ದಂತೆ ರಸಾನುಭವವಾಗುತ್ತದೆ. ಇಂಥ ಕಲೆ ಕನ್ನಡಿಗರ ಪಾಲಿಗೆ ಇಲ್ಲವಾಯಿತೆ? ಎಂದು ಪರಿತಪಿಸುವಂತಾಗಿದೆ.


ಒರಿಸ್ಸಾದ ಈಗಿನ ಕೃತಿಗಳು, ಗೋಪಿಯರು, ಮುರಳೀಧರ

ನಮ್ಮ ಪೂರ್ವಜರು ಬಿದುರು, ನೀಲಗಿರಿ ಕಾಡುಗಳನ್ನು ಭಕ್ಷಿಸುವ ಬೃಹತ್ ಕಾಗದದ ಕಾರಖಾನೆಗೆ ಮೊರೆ ಹೋಗದೇ ತಮ್ಮ ಕಲಾಸಕ್ತಿಯನ್ನು ವ್ಯಕ್ತಪಡಿಸಲು ತಾಳೆಗರಿಗಳನ್ನು ಬಳಸುತ್ತಿದ್ದುದು, ಅವರ ಪರಿಸರ ಪ್ರಜ್ಞೆಯ ದ್ಯೋತಕವಾಗಿದೆ. ಉತ್ತರ ಭಾರತದವರಂತೆ, ಭೂರ್ಜ ವೃಕ್ಷದ ತೊಗಟೆಯನ್ನು ಇದಕ್ಕಾಗಿ ಬಳಸುವ ಗೋಜಿಗೆ ಹೋಗದೇ ತೆಂಗಿನಂತೆ ವರ್ಷದುದ್ದಕ್ಕೂ ಗರಿಗಳನ್ನು ಹೊರಹಾಕುತ್ತಲೇ ಇರುವ ತಾಳೆ ಓಲೆಗಳ ಲಾಭ ಪಡೆದರು. ಅಲ್ಲದೇ ಕೆಲವೇ ವೃಕ್ಷಗಳು ಅಸಂಖ್ಯಾತ ಓಲೆಗಳನ್ನು ಪೂರೈಸುವದು ಇನ್ನೊಂದು ಆಕರ್ಷಣೆಯಾಗಿದ್ದಿತು. ಕರ್ನಾಟಕದಲ್ಲಿ ಬೆಳೆಯುವ ಹನೆತಾಳದ ಓಲೆಗಳು ಒರಟು, ದಪ್ಪ ಮತ್ತು ಚಿಕ್ಕವಾಗಿದ್ದು ಹಳದಿ ವರ್ಣದ್ದಾಗಿದ್ದರೆ, ಶ್ರೀತಾಳದ ಓಲೆಗಳು ಕಲಾಕಾರರಿಗಾಗಿಯೇ ಮಾಡಿಸಿದಂತಹ ಮಾಧ್ಯಮ. ತಾಳೆ ಓಲೆಗಳನ್ನು ಪೂರೈಸುವದೇ ಒಂದು ಉದ್ದಿಮೆಯಾಗಿ ಬೆಳೆದು ಬಂದಿತು. ಮೂರು ತಿಂಗಳಿಗೊಮ್ಮೆ ಹದವಾಗಿ ಬಲಿತ ಎಲೆಗಳನ್ನು ಕೊಯ್ದು. ನೀರಿನಲ್ಲಿ ಬೇಯಿಸಿ ನೆರಳಿನಲ್ಲಿ ಒಣಗಿಸಲಾಗುತ್ತಿತ್ತು. ನಂತರ ವರ್ಗೀಕರಿಸಿ ಒಂದೇ ಅಳತೆಯಲ್ಲಿ ಕೊಯ್ದು ರೇಶಿಮೆದಾರದಿಂದ ಪೋಣಿಸಲು ಬರುವಂತೆ ಜೋಡಿ ರಂಧ್ರಗಳನ್ನು ಕೊರೆಲಾಗುತ್ತಿತ್ತು. ಅವುಗಳನ್ನು ತಿಕ್ಕಿ, ತೀಡಿ, 'ನುಣುಪುಮಾಡಿ', ಕೆಲವುಗಳಿಗೆ ಹಳದಿಬಣ್ಣ ಲೇಪಿಸಿದರೆ ಉತ್ತಮ ಓಲೆಗಳಿಗೆ ದೀರ್ಘಕಾಲ ತಾಳಿಕೆ ಬರಲು ಎಣ್ಣೆಯ ಲೇಪ ಮಾಡುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಓಲಿಮಠ ಮತ್ತು ಸಾಲಿಮಠಗಳಲ್ಲಿ ಇವುಗಳ ತಯಾರಿಕೆ ಸತತವಾಗಿ ನಡೆದೇ ಇರುತ್ತಿತ್ತು. ಕೇರಿ ಕೇರಿಗಳಲ್ಲಿ ಇವನ್ನು ಮಾರಲಾಗುತ್ತಿತ್ತಲ್ಲದೇ ಸಂತೆ-ಜಾತ್ರೆಗಳಲ್ಲೂ ಹೆಚ್ಚಿನ ಬೇಡಿಕೆ ಇರುತ್ತಿತ್ತು.


ಒಂದರಂತೆ ಇನ್ನೊಂದಿಲ್ಲದ ಜಾಮಿತಿ ಚಿತ್ರಗಳು

ತಾಳಿಕೆ-ಬಾಳಿಕೆಗಳಲ್ಲಿ ತಾಳೆ ಓಲೆಗಳದ್ದೇ ಎತ್ತಿದ ಕೈ ಕಾಗದದ ಚಿತ್ರಗಳು ಸುಮಾರು ಅರ್ಧಶತಕ ಬಾಳಿಕೆ ಬಂದರೆ ತಾಳೆಯವು ಸಹಜವಾಗಿ ಮುನ್ನೂರು ವರ್ಷ ಜಡಿಮಳೆನ್ನು ಧಿಕ್ಕರಿಸಬಲ್ಲವು. ಇಲಿ, ಇರುವೆ, ಜಿರಳೆ, ಹುಳ ಹುಪ್ಪಡಿಗಳಂಥ ಆಜನ್ಮ ವೈರಿಗಳಿಂದ ರಕ್ಷಿಸಿದರೆ. ತಾಳೆ ಚಿತ್ರಗಳು ಒಂದು ಸಹಸ್ರವರ್ಷ ಸುಲಭವಾಗಿ ಜೀವಿಸಬಲ್ಲವು. ನಾರು-ಆರ್ದ್ರತೆಗಳಿಂದ ಸಂರಕ್ಷಿಸಲು ಕಾಲಕಾಲಕ್ಕೆ ಇವುಗಳಿಗೆ ಮೇಲುಕೋಟೆ (ಮಂಡ್ಯ ಜಿಲ್ಲೆ)ಯಲ್ಲಿ ಲಭ್ಯವಿರುವ ಎಣ್ಣೆಯನ್ನು ಲೇಪಿಸಲಾಗುತ್ತದೆ. ಧನಿಕ ಗ್ರಂಥಭಂಡಾರಗಳು ವಾತ ನಿಯಂತ್ರಿತ ಕೊಠಡಿಗಳನ್ನು ಇವನ್ನು ಕಾದಿರಿಸಲು ಬಳಸುತ್ತವೆ. ತೀರ ಮಸುಕಾದ ಚಿತ್ರಗಳನ್ನು ಅಭ್ಯಸಿಸುವುದಕ್ಕಾಗಿ, ಛಾಯಾಗ್ರಹಣ ಮಾಡುವುದಕ್ಕಾಗಿ, ತಾಳೆಗರಿಗಳನ್ನು ಹಸಿ ಮಾಡಿದ ಶುಭ್ರ ಬಟ್ಟೆಯಿಂದ ಒರೆಸಿ, ಅನಂತರ ಒಣಗಿಸಿ ಕಟ್ಟಿಗೆ ಪೆಟ್ಟಿಗೆಯಲ್ಲಿರಿಸಬಹುದು. ಹಿಂದೊಮ್ಮೆ ಹರಿದ, ಹಾಳಾದ ಓಲೆಚಿತ್ರಗಳನ್ನು ತಿರುಗಿ ರಚಿಸುವ ಪರಿಪಾಠವಿತ್ತು. ಆದರೆ ಇಂದು ಈ ಕಲಾ ಪ್ರಕಾರವೇ ಸಂಪೂರ್ಣ ನಾಶವಾಗುವ ಹಾದಿಯಲ್ಲಿರುವಾಗ ಪುನರ್ ಚಿತ್ರಣದ ಮಾತು ದೂರವೇ ಉಳಿಯಿತು.

ಕ್ರಿಸ್ತ ಪೂರ್ವದಲ್ಲಿಯೇ ತಾಳೆ ಚಿತ್ರಗಳು ಕರ್ನಾಟಕದಲ್ಲಿ ಬಳಕೆಗೆ ಬಂದಿರಬೇಕು. ವಿವಿಧ ಶತಮಾನಗಳಲ್ಲಿ ಇಲ್ಲಿ ಬಂದು ಹೋದ ವಿದೇಶೀಯರನೇಕರು ಈ ಕುತೂಹಲಕಾರಿ ಕಲೆಯ ಬಗ್ಗೆ ಬರೆದಿಟ್ಟಿದ್ದಾರೆ. ಚೀನದ ಬೌದ್ಧ ಭಿಕ್ಷು ಹ್ಯುಯೆನ್‌ತ್ಸಾಂಗ್ (ಕ್ರಿ.ಶ. 600-664)ನು ಹಸ್ತ ಪ್ರತಿಗಳ ಸಂಗ್ರಹದ ಏಕಮಾತ್ರ ಉದ್ದೇಶದಿಂದ ಹದಿನಾರು ವರ್ಷಗಳ ದೀರ್ಘಕಾಲ ಭಾರತದ ಉದ್ದಗಲಕ್ಕೆ ಅಲೆದಾಡಿದನು. ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ಕರ್ನಾಟಕದ ಬೌದ್ಧ ಶಿಕ್ಷಣ ಕೇಂದ್ರಗಳಿಗೆ ಭೇಟಿ ಕೊಟ್ಟಿದ್ದನು. ಅವನು ತನ್ನೊಡನೆ ಭಾರತದಿಂದ ಒಯ್ದ 657 ಹಸ್ತ ಪ್ರತಿಗಳಲ್ಲಿ ಕೆಲವಾದರೂ ಕರ್ನಾಟಕದವು ಇದ್ದಿರಲೇಬೇಕು.

ಅವನ್ನು ಇಂದಿಗೂ ಚೀನ ದೇಶದ ಸಾಯನ್ ನಗರದ ಪಗೋಡದಲ್ಲಿ ಕಾದಿರಿಸಲಾಗಿದೆ. ಅವನ್ನು ಆಳವಾಗಿ ಅಭ್ಯಸಿಸಿದಲ್ಲಿ ತಾಳೆಗರಿ ಚಿತ್ರಗಳ ಕುರಿತಾದ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸಹುದೇನೋ! ಇಟಾಲಿಯನ್ ಪ್ರವಾಸಿ ಪೀಟ್ರೊಡೆಲ್ಲಾ ವಾಲ್ಲೆ. ಕ್ರಿ.ಶ. ೧೬೨೩ರಲ್ಲಿ ಇಕ್ಕೇರಿಯ ಅರಸ ವೆಂಕಟಪ್ಪ ನಾಯಕನ ರಾಜ್ಯಕ್ಕೆ ಭೇಟಿ ಕೊಟ್ಟಾಗ ತಾಳೆ ಓಲೆಯ ಮೇಲೆ ಬರೆಯುವ, ಕೊರೆಯುವ ಚಮತ್ಕಾರ ನೋಡಿ ವಿಸ್ಮಯಪಟ್ಟಿದ್ದನು. ಪೋರ್ಚುಗೀಸರೊಂದಿಗೆ ರಾಯಭಾರಿಯ ಕೆಲಸ ನೋಡಿಕೊಳ್ಳುತ್ತಿದ್ದ ವಿಠ್ಠಲ ಶೆಣ್ಯೆ. ಅವನಿಗಾಗಿ ಒಂದು ತಾಳೆಗರಿ ಗ್ರಂಥ ಸಿದ್ಧಪಡಿಸಿಕೊಟ್ಟಾಗ ಅವನ ಆನಂದಕ್ಕೆ ಮೇರೆಯೇ ಇರಲಿಲ್ಲ. ಈ ಭಗವದ್ಗೀತೆ ಇಂದಿಗೂ ರೋಮಿನ ವಾಚನಾಲಯದಲ್ಲಿ ಸುಸ್ಥಿತಿಯಲ್ಲಿದೆ. ಈ ಕೃತಿಯಲ್ಲಿ ಅನೇಕ ಚಿತ್ರಗಳೂ ಇದ್ದಿರಬಹುದು.

ಶಿಲಾಶಾಸನ. ತಾಮ್ರಶಾಸನಗಳನ್ನು ರಚಿಸುವಂತೆ ಓಲೆಗರಿಗಳನ್ನು ಕೊರೆದೇ ಚಿತ್ರಗಳನ್ನು ರಚಿಸಲಾಗುತ್ತಿತ್ತು. ಇದಕ್ಕಾಗಿ ಹರಿತವಾದ ಕಂಠ (ಟಂಕ)ಗಳನ್ನು ವಿವಿಧ ಅಳತೆಗಳಲ್ಲಿ ಕಮ್ಮಾರರಿಂದ ಖರೀದಿಸಿಬಹುದಾಗಿತ್ತು. ರಸಿಕರು ಅವುಗಳನ್ನು ಕಲಾತ್ಮಕವಾಗಿ ಸಿಂಗರಿಸುತ್ತಿದ್ದರಲ್ಲದೇ ಕೊಳವೆಗಳಲ್ಲಿ ಸುರಕ್ಷಿತವಾಗಿ ಇಡುತ್ತಿದ್ದರು. ಕಲಾಕಾರನು ಕಿರಿತಾಳೆ ಓಲೆಯ ಚೂರಿನ ಮೇಲೆ ಇಷ್ಟದೇವತೆಯ ಹೆಸರನ್ನು ಕೊರೆದು ತನ್ನ ಕೆಲಸದಲ್ಲಿ ಯಶವನ್ನು ಪ್ರಾರ್ಥಿಸಿ ನೀರಮೇಲೆ ತೇಲಿಬಿಡುತ್ತಿದ್ದನು. ನಂತರ ಕಾಲುಮಣೆಯ ಮೇಲೆ ಓಲೆಗಳನ್ನು ಇಟ್ಟುಕೊಂಡು ಬೆನ್ನು, ಸೊಂಟ, ಕೊರಳುಗಳನ್ನು ಬಾಗಿಸಿ, ನೋಯಿಸಿಕೊಂಡು ಕಣ್ಣಲ್ಲಿ ಕಣ್ಣಿಟ್ಟು ಅತ್ಯಂತ ಪರಿಶ್ರಮದಿದಂದ ಚಿತ್ರಗಳನ್ನು ರಚಿಸುತ್ತಿದ್ದನು. ಕಂಠವನ್ನು ಅಂಗುಷ್ಟ, ತೋರ ಮತ್ತು ಮಧ್ಯ ಬೆರಳುಗಳ ನಡುವೆ ಗಟ್ಟಿಯಾಗಿ ಹಿಡಿದು ಏಕ ಪ್ರಕಾರದ ಒತ್ತಡದಿಂದ ಓಲೆಯ ಮೇಲೆ ಓಡಿಸಿದಾಗ, ಗೀರು ಚಿತ್ರ ಸಿದ್ಧವಾಗುತ್ತದೆ. ಕಂಠವನ್ನು ತಾಳೆಗರಿಗಳ ನರಗಳ ಮೇಲೆ ಓಡಿಸಿದರೆ. ಅವು ಬಾಳೆಲೆಯಂತೆ ಹರಿದು ಬಿಡುವುದರಿಂದ ಸದಾಕಾಲವೂ ಎಚ್ಚರವಹಿಸುವುದು ಅತ್ಯವಶ್ಯ. ಗೀರುಚಿತ್ರಗಳ ಮೇಲೆ ಮಸಿಪುಡಿಯನ್ನು ಸಿಂಪಡಿಸಿ, ತಿಕ್ಕಿತೀಡಿದಾಗ ಚಿತ್ರಗಳಿಗೆ ಜೀವಕಳೆ ತುಂಬಿದಂತಾಗಿ ನಳನಳಿಸಲಾರಂಭಿಸುತ್ತಿದ್ದವು. ಸಿದ್ಧವಾದ ಚಿತ್ರಗಳು ಮುದುಡಿ ಹೋಗದಂತೆ ಕಟ್ಟಿಗೆಯ ಚೌಕಟ್ಟಿನಲ್ಲಿ ದಾಸ್ತಾನುಮಾಡಿ ಅವುಗಳ ಮೇಲೆ ಭಾರವನ್ನು ಹೇರಿ ಇಡಲಾಗುತ್ತಿತ್ತು. ತಾವು ಕಷ್ಟಪಟ್ಟು ರಚಿಸಿದ ಕಲಾಕೃತಿಗಳನ್ನು ಸದಾಕಾಲವೂ ಸಂರಕ್ಷಿಸಬೇಕೆಂದು ಪುಸ್ತಕದ ಕೊನೆಯಲ್ಲಿ ನಮೂದಿಸುವ ಪರಿಪಾಠವೂ ಇತ್ತು.

ಓಲೆಗರಿ ಲಿಪಿಕಾರರಂತೆ, ಚಿತ್ರಕಾರರಿಗೂ ಅಪಾರ ಬೇಡಿಕೆ ಇದ್ದಿರುತ್ತಿದ್ದರಿಂದ ಬಾಲಕರಿಗೆ ಐದುವರ್ಷ ತುಂಬುವದರೊಳಗೆ ಶುಭಮಹೂರ್ತದಲ್ಲಿ, ಗುರುವಿನಿಂದ ಚಿತ್ರಕಲಾ ಅಭ್ಯಾಸ ಪ್ರಾರಂಭಿಸಲಾಗುತ್ತಿತ್ತು. ಸರಳರೇಖೆ, ವಕ್ರರೇಖೆಗಳನ್ನು ಕರಗತ ಮಾಡಿಕೊಂಡ ನಂತರ ವರ್ತುಲಗಳ ರಚನೆಯನ್ನು ಹೇಳಿಕೊಡಲಾಗುತ್ತಿತ್ತು. ಕೈ-ಕಾಲು ಮುಖಗಳಂತಹ ಮಾನವನ ಅಂಗಾಂಗಗಳನ್ನು ಬೇರೆಯಾಗಿ ಗೀರುವುದನ್ನು ರೂಢಿಮಾಡಿಕೊಂಡ ನಂತರ ಬಾಣ-ಬಿಲ್ಲು-ಗದೆಗಳಂತಹ ಆಯುಧಗಳನ್ನು ಚಿತ್ರಿಸಬೇಕಾಗುತ್ತಿತ್ತು. ಇವುಗಳನ್ನು ಆಧರಿಸಿ ರಚಿಸಿದ

ರಾಮರಾವಣರ ಯುದ್ಧ, ಹನುಮಾನನಿಗೆ ಅಶೋಕವನದಲ್ಲಿ ಸೀತೆಯ ದರ್ಶನ, ಮುಂತಾದವು ಆದಿವಾಸಿಗಳ ಕಲೆ ನೆನಪಿಗೆ ತರುವಂತಹವು. ಇದರಂತೆ ಹೂ-ಹಣ್ಣು, ಗಿಡ, ಬಳ್ಳಿ, ಮರ, ಪಶು-ಪಕ್ಷಿಗಳ ಅಂಗವಿನ್ಯಾಸ ಅರಿತು ಚಿತ್ರಿಸಲು ಕಲಿಸಲಾಗುತ್ತಿತ್ತು. ವಿದ್ಯಾರ್ಥಿಗಳ ಗೀರು ಚಿತ್ರಗಳನ್ನು ಗುರುತಿಸುವದು ಕಷ್ಟಕ್ಕಿಟ್ಟುಕೊಳ್ಳುವುದರಿಂದ ಅವು ಯಾವುವು ? ಎಂದು ಬರೆಯುವ ಪರಿಪಾಠವೂ ಇತ್ತು.

ಶಿಕ್ಷಣ

ಇಂಥ ತಾಳೆ ಓಲೆಗಳು ಅನೇಕರ ಸಂಗ್ರಹದಲ್ಲಿ ಕಾಣಬಹುದಾಗಿದೆ. ಲಿಪಿಕಾರನೇ ಚಿತ್ರಗಳನ್ನು ರಚಿಸುತ್ತಿದ್ದನೆಂಬ ಸಾಮಾನ್ಯ ನಂಬಿಕೆ ಸರಿಯಲ್ಲ. ಈ ಕಲಾಕಾರರ ಬಿಡಿ ತಾಳೆ ಚಿತ್ರಗಳು ನಾಶವಾಗಿ ಹೋಗಿವೆ. ಮಠ, ದೇವಾಲಯಗಳು, ಗ್ರಂಥಾಲಯಗಳು, ಗ್ರಂಥಗಳ ತಾಳೆ ಓಲೆಗಳ ಹಸ್ತಪ್ರತಿಗಳನ್ನು ಸಂರಕ್ಷಿಸಿದ್ದರಿಂದ ಅವುಗಳ ಅಂಗವಾಗಿರುವ ಚಿತ್ರಗಳು ಮಾತ್ರ ಉಳಿದುಕೊಂಡಿವೆ. ಸಾಹಿತ್ಯಕ್ಕೇ ಪ್ರಾಧಾನ್ಯ ಕೊಡುವವರ ಮಲತಾಯಿ ಧೋರಣೆಯಿಂದಾಗಿ ಕೊನೆಯುಸಿರು ಎಳೆಯುವುದರಲ್ಲಿವೆ.

ಓಲೆ ಗ್ರಂಥದ ಪರಿಮಿತಿಯನ್ನು ಅರಿತು ಅದರ ಸರ್ವಾಂಗ ಸೌಂದರ್ಯಕ್ಕಾಗಿ ದುಡಿಯುವುದು ಚಿತ್ರಕಾರನ ಕರ್ತವ್ಯವಾಗಿತ್ತು. ಪಾಶ್ಚಾತ್ಯ ಬರಹಗಾರರು ಅಧ್ಯಾಯದ ಪ್ರಥಮ ಅಕ್ಷರಗಳನ್ನು ನವವಧುವಿನಂತೆ ಸಿಂಗರಿಸಲು ಯತ್ನಿಸುವ ಶತಕಗಳ ಪೂರ್ವದಲ್ಲಿಯೇ ಕನ್ನಡ ಕಲಾಕಾರರು ಅದನ್ನು ತಾಳೆಗ್ರಂಥಗಳಲ್ಲಿ ಆಚರಣೆಯಲ್ಲಿ ತಂದಿದ್ದರು. ಅಕ್ಷರಗಳ ನಡುವೆ ಆನೆ, ಸಿಂಹ, ಹಂಸ, ಗಿಳಿಗಳನ್ನು ರೂಪಿಸುವ ಚಮತ್ಕಾರಗಳನ್ನು ನೋಡಿಯೇ ಅನುಸರಿಸಬೇಕು. ಬರವಣಿಗೆ ಅರ್ಧಓಲೆಗೇ ಸೀಮಿತವಾದರೆ, ಉಳಿದ ಸ್ಥಳಗಳಲ್ಲಿ ಹೂ, ಬಳ್ಳಿ, ಪಶು-ಪಕ್ಷಿಗಳಿಂದ ತುಂಬಿ



ಕಲಾ ವಿದ್ಯಾರ್ಥಿಗಳ ಕೃತಿಗಳು ಖಡ್ಗಮೃಗ, ಕಮಲ, ಸರ್ಪ, ಆನೆ, ಹೆಂಗಳೆಯರು

ತುಳುಕಿಸಲಾಗಿದೆ. ಉಳಿದ ಸ್ಥಳ ಅತ್ಯಲ್ಪವಾಗಿದ್ದರೆ. ಅಲ್ಲಿ ಓಂಕಾರ, ಶ್ರೀಕಾರ, ಸೂರ್ಯ, ಚಂದ್ರ, ಶಂಖ, ಚಕ್ರ, ನಕ್ಷತ್ರ, ಪದ್ಮ ಸ್ವಸ್ತಿಕಗಳಂತಹ ಶುಭ ಚಿಹ್ನೆಗಳನ್ನು ಕೊರೆಯಲಾಗಿದೆ.


ಗ್ರಂಥದ ಆದಿಯಲ್ಲಿ ಅಧ್ಯಾಯ ಮುಕ್ತಾಯಗೊಂಡಾಗ ಕೊನೆಯಲ್ಲಿರುವ ಓಲೆಗಳನ್ನು ಜಾಮಿತಿಯ ಚಿತ್ತಾರಗಳಿಂದ ತುಂಬಿಸುವುದು ಸಾಮಾನ್ಯ. ಇವುಗಳ ರಚನೆಗಾಗಿ ಕಂಠದ ಬದಲಾಗಿ ಕೈವಾರ ಬಳಸಲಾಗುತ್ತಿತ್ತು. ವಿವಿಧ ತ್ರಿಜ್ಯಗಳಿಂದ ಕೊರೆದ ವರ್ತುಲ, ಅರೆ-ಕಾಲು. ವರ್ತುಲಗಳಿಂದ ನಿರ್ಮಿಸಿದ ನಕ್ಷೆಗಳ ಸೌಂದರ್ಯ ಹೇಳತೀರದು. ಹಿರಿದು, ಕಿರಿದು, ಸೂಕ್ಷ್ಮ, ಛೇದಿಸುವ, ವರ್ತುಲಗಳಿಂದ ಹೂ, ಕಾಯಿ, ಗಿಡ, ಮರ. ಕಾಡುಗಳನ್ನು ಜೋಡಿಸಿ ಸಂಯುಕ್ತ ಚಿತ್ರಗಳನ್ನು ನಿರ್ಮಿಸಿದ್ದಾರೆ. ಅವುಗಳನ್ನು ಇನ್ನಷ್ಟು ಸ್ಫುಟಗೊಳಿಸುವುದಕ್ಕಾಗಿ ಹಿನ್ನೆಲೆಯಲ್ಲಿ ಚುಕ್ಕಿಗಳನ್ನು ನಿರ್ಮಿಸಿದ್ದಾರೆ. ಒಂದೇ ಹಸ್ತಪ್ರತಿಯಲ್ಲಿ ನೂರಾರು ವರ್ತುಲ-ಚಿತ್ತಾರಗಳು ಇದ್ದರೂ ಅವುಗಳಲ್ಲಿಯ ಪ್ರತಿ ನಕ್ಷೆಯೂ ಭಿನ್ನವಾಗಿರುವುದು, ಕಲಾಕಾರನ ಕಲ್ಪನಾ ವಿನ್ಯಾಸಕ್ಕೆ ಸಾಕ್ಷಿಯಾಗಿದೆ. ಕರ್ನಾಟಕದ ಕರಾವಳಿಯ ಉದ್ದಕ್ಕೂ ಹರಡಿಕೊಂಡ ದೇವಾಲಯದ ಗೋಡೆಗಳ ಮೇಲೆ ಕಾವಿಚಿತ್ರಗಳ ಮೇಲೆಯೂ ಇಂಥದೇ ಚಿತ್ತಾರಗಳಿದ್ದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.

ಗಣೇಶ ಸರಸ್ವತಿಯರ ಚಿತ್ರ ರಚನೆ ಸಾಮಾನ್ಯ. ಕಲಾಕಾರನು ಎಲ್ಲವನ್ನೂ ವಿವರವಾಗಿ ಚಿತ್ರಿಸಲು ಆಸೆಪಡುವುದರಿಂದ ಇವುಗಳಿಗಾಗಿ ಒಂದಕ್ಕಿಂತ ಹೆಚ್ಚು ಓಲೆಗಳನ್ನು ಬಳಸುವುದೇ ರೂಢಿ. ಇಂಥ ಕೃತಿಗಳನ್ನು ದಾನಿ-ಪೋಷಕರು ಬರೆಯಿಸುವುದರಿಂದ ಅಥ ಉದಾರಿ ದಂಪತಿಗಳನ್ನು ಈ ಚಿತ್ರಗಳಲ್ಲಿ ಸೇರಿಸಲಾಗುತ್ತದೆ. ಅವರ ವೇಷಭೂಷಣಗಳಿಂದ ಅಂದಿನವರ ಆಸಕ್ತಿಗಳನ್ನು ಗುರುತಿಸಬಹುದಾಗಿದೆ. ಹೂ-ಬಳ್ಳಿ, ಪಶು-ಪಕ್ಷಿಗಳನ್ನು ಅರ್ಧ ಓಲೆಗೆ ಸೀಮಿತಗೊಳಿಸಿ ಉಳಿದ ಅರ್ಧದಲ್ಲಿ ಬರವಣಿಗೆ ಮಾಡಲಾಗಿದೆ. ಇಂಥ ಓಲೆಗಳಲ್ಲಿ ಚಿತ್ರ ನಟ್ಟನಡುವೆ ಇಲ್ಲವೆ ಎಡ ಬಲಗಳಲ್ಲಿರಬಹುದು. ಇನ್ನುಳಿದ ಚಿತ್ರಗಳು ಗ್ರಂಥದ ವಿಷಯವನ್ನು ಆಧರಿಸುತ್ತವೆ. ಜೈನ ಕೃತಿಯಲ್ಲಿ ಇಪ್ಪತ್ನಾಲ್ಕು ತೀರ್ಥಂಕರರನ್ನು ರಚಿಸಿರುತ್ತಾರೆ. ಅವರೆಲ್ಲ ಏಕಪ್ರಕಾರವಾಗಿ ಕಾಣುವುದರಿಂದ ಅವರವರ ಲಾಂಛನಗಳನ್ನು ವಿಂಗಡಿಸಬೇಕಾಗುತ್ತದೆ. ಅದಲ್ಲದೇ ಯಕ್ಷ-ಯಕ್ಷಿಣಿಯರು, ಸೇವಕರು, ಭಕ್ತಾದಿಗಳನ್ನು ಗುರುತಿಸಬಹುದಾಗಿದೆ. ವೈಷ್ಣವರ ಕೃತಿಗಳಲ್ಲಿ ದಶಾವತಾರಗಳು, ಶ್ರೀರಾಮ ಪಟ್ಟಾಭಿಷೇಕ. ಕಾಲಿಯಮರ್ದನಗಳಂತಹ ಚಿತ್ರಗಳು ಸಾಮಾನ್ಯ. ಶೈವರ ಗ್ರಂಥಗಳಲ್ಲಿ ಶಿವ-ಪಾರ್ವತಿ, ಅವರ ಓಲಗ, ಮುಂತಾದವನ್ನು ಕಾಣಬಹುದಾಗಿದೆ. ವೀರಶೈವರ ಕೃತಿಗಳಲ್ಲಿ ಲಿಂಗ, ಬಸವ, ಶರಣರ ಚಿತ್ರಗಳು ಸಾಮಾನ್ಯ.

ಅತ್ಯಮೂಲ್ಯ

ಕೆಲಗ್ರಂಥಗಳು ಶಿಲ್ಪ ವಾಸ್ತುಶಿಲ್ಪಗಳ ಕೈಪಿಡಿ ಎಂದೇ ರಚಿತವಾಗಿವೆ. ಪಠ್ಯ ಆಧಾರಿತ ವಿವರಣಾ ಚಿತ್ರಗಳು ಅತ್ಯಮೂಲ್ಯವಾಗಿವೆ. ಮಾನಸ್ತಂಭ, ಧ್ವಜಸ್ತಂಭಗಳ ನಕ್ಷೆಯಲ್ಲಿ ಅವುಗಳ ಪ್ರತಿಯೊಂದು ಭಾಗವನ್ನೂ ವಿವರವಾಗಿ ಚಿತ್ರಿಸಿ ಹೆಸರಿಸಿ ಉದ್ದಗಲಳತೆಗಳನ್ನು

ನಮೂದಿಸಲಾಗಿದೆ. ಜೈನರ ಹಸ್ತಪ್ರತಿ 'ತ್ರಿಲೋಕಸಾರ' ಇಂಥ ಅನೇಕ ನಕ್ಷೆಗಳನ್ನು ಒಳಗೊಂಡಿದೆ. ಇದರಂತೆ ಪೀಠ, ರಥಗಳ ನಕ್ಷೆಗಳೂ ಕಾಣಸಿಗುತ್ತವೆ. ವಿಗ್ರಹ ಕಟೆಯುವವರಿಗೆ ಹಾಕಿಕೊಟ್ಟ ಮಾನವ ರೂಪದ ನಕ್ಷೆ ಕುತೂಹಲಕಾರಿಯಾಗಿದೆ. ನಮ್ಮಲ್ಲಿ ಮನುಷ್ಯನನ್ನು, ಮಹಿಳೆಯನ್ನು ರೂಪದರ್ಶಿಗಳಾಗಿ ನಿಲ್ಲಿಸಿ ಮೂರ್ತಿ ಕಟೆಯುವ ಇಲ್ಲವೇ ಚಿತ್ರಿಸುವ ಪರಿಪಾಠ ಇಲ್ಲದ್ದರಿಂದ ಸೂತ್ರದ ಮೇರೆಗೆ ರಚಿಸಿದ ಇಂಥ ನಕ್ಷೆಗಳೇ ರೂವಾರಿಗಳ ಆಧಾರಸ್ತಂಭಗಳಾಗಿರುತ್ತಿದ್ದವು.



ಜೋಡಿ ಓಲೆಯಲ್ಲಿ ಗಣೇಶನ ವಿಗ್ರಹದೊಂದಿಗೆ ದಾನಿ ಪಂಪತಿಗಳು ಹೂಬಳ್ಳಿ, ಅಲಂಕರಿಸಿದ ಹಂಪ

ಉತ್ತರಕನ್ನಡ ಜಿಲ್ಲೆಯ ಗೇರುಸೊಪ್ಪೆಯ ಆಳರಸರು ಜೈನ ಧರ್ಮದ ಪ್ರಸಾರದಲ್ಲಿ ವಿಶೇಷ ಆಸ್ಥೆವಹಿಸಿದ್ದರು. ಈ ಧೋರಣೆಯ ಅಂಗವಾಗಿ ಗ್ರಂಥರಚನೆಗೆ ಹೆಚ್ಚಿನ ಚಾಲನೆ ದೊರಕಿತು. ಕಂಠದ ಬದಲಾಗಿ ವಿಶಿಷ್ಟವಾದ ಲೇಖನಿ (ಕೂರ್ಚಿಕೆ)ಯಿಂದ ಪಠ್ಯ ಬರೆದರೆ. ಅತ್ಯಂತ ನಾಜೂಕಾದ ಕುಂಚ (ತೂಲಿಕಾಶಲಾಕ) ಚಿತ್ರಗಳನ್ನು ರಚಿಸಿದರು. ಧವಲ ಗ್ರಂಥಗಳು ಈ ಮಾದರಿಯಲ್ಲಿರುವುದರಿಂದ ಅವು ಗೇರುಸೊಪ್ಪೆಯಲ್ಲಿ ರಚಿತವಾಗಿ ಹತ್ತಿರದ ಮೂಡಬಿದುರೆ (ದಕ್ಷಿಣ ಕನ್ನಡ ಜಿಲ್ಲೆ)ಯ ಜೈನ ಮಠಕ್ಕೆ ದಾನವಾಗಿ ಕೊಟ್ಟಿರಬೇಕು. ಇದಕ್ಕಾಗಿ ಬಳಸಿದ ತಾಳೆ ಓಲೆಗಳು ದೊಡ್ಡ ಆಕಾರದವು. ಪಠ್ಯಭಾಷೆ ಪ್ರಾಕೃತದ್ದಾದರೂ ಅಲ್ಲಲ್ಲಿ ಸಂಸ್ಕೃತಕ್ಕೂ ಸ್ಥಳಾವಕಾಶ ಮಾಡಿಕೊಟ್ಟರೂ ಲಿಪಿ ಮಾತ್ರ ಕನ್ನಡ.


ವರ್ಣಚಿತ್ರಗಳು

ವೀರಸೇನ ಬರೆದ ಶ್ರುತಸ್ಕಂದಾಗಮದ ಮೇಲಿನ ಭಾಷ್ಯವೇ ಧವಳ. ವೀರಸೇನನೇ ಜಯಧವಳ, ಮಹಾಧವಳಗಳೆಂಬ ಇನ್ನೆರಡು ಜೈನಾಗಮುಗಳಿಗೆ ಭಾಷ್ಯ ಬರೆದಿದ್ದಾನೆ. ಸುಮಾರು ಕ್ರಿ. ಶ. 1113ರಲ್ಲಿ ದೇವಿಯಕ್ಕ 'ಧವಳ'. 1120ರಲ್ಲಿ ಅಣ್ಣಾ ಶ್ರೇಷ್ಠಿ ಜಯಧವಲ ಮತ್ತು 1143ರಲ್ಲಿ ಶ್ರೀಮತಿ ಎಂಬಾಕೆ, 'ಮಹಾಧವಳ' ಗ್ರಂಥಗಳನ್ನು ಪ್ರತಿಮಾಡಿಸಿ. ಜೈನ ಧರ್ಮ ಪ್ರಚಾರಕ್ಕಾಗಿ ಮೂಡಬಿದಿರೆಯ ಜೈನ ಮಠದ ಸಿದ್ಧಾಂತ ಬಸದಿಗೆ ಕೊಡಮಾಡಿದರು. ಈ ಮೂರೂ ಗ್ರಂಥಗಳಲ್ಲಿಯೂ ಗೇರುಸೊಪ್ಪ ವಿಧಾನದಿಂದ ರಚಿತವಾದ ವರ್ಣಚಿತ್ರಗಳಿವೆ.

ಅಂತೆಯೇ ಅವು ಅತ್ಯಂತ ಅಪೂರ್ವ ಮತ್ತು ಪೂಜ್ಯವೆಂದು ಸಂರಕ್ಷಿಸಿಕೊಂಡು ಬಂದದ್ದರಿಂದ ಬದುಕಿಕೊಂಡಿವೆ. ಈ ಪರಂಪರೆಯಲ್ಲಿ ಇನ್ನೂ ಅನೇಕ ಕೃತಿಗಳ ರಚನೆಯಾಗಿದ್ದಿಬಹುದಾದರೂ ಅವೆಲ್ಲ ಇಂದು ಬದುಕಿ ಉಳಿದಿಲ್ಲ.

ರೇಖಾಲಾವಣ್ಯ

ಧವಳ ಗ್ರಂಥಗಳು ರಚನೆಯಾಗಿ ಎಂಟು ಶತಮಾನಗಳೇ ಜಾರಿಕೊಂಡರೂ ಅವುಗಳಲ್ಲಿ ಬಳಸಿದ ಬಣ್ಣಗಳು ಒಂದಿಷ್ಟೂ ಮಾಸದೇ ಇರುವುದು ಕುತೂಹಲಕಾರಿ. ಸ್ಥಾನೀಯವಾಗಿ ಲಭ್ಯವಿರುವ ವಿವಿಧ ವರ್ಣದ ಕಲ್ಲುಗಳನ್ನು ಪುಡಿಮಾಡಿ. ಅಂಟಿನಲ್ಲಿ ಮಿಶ್ರಣಮಾಡಿ ಬಣ್ಣ ಸಿದ್ಧ ಮಾಡುವುದೇ ಈ ಯಶಸ್ಸಿಗೆ ಕಾರಣವಿರಬಹುದು. ಇಣಚಿ ಮೈಯ ರೋಮವನ್ನು ರೇಶಿಮೆ ನೂಲಿನಿಂದ ಸುತ್ತಿ, ಹಕ್ಕಿಯ ಗರಿಯಲ್ಲಿ ಸಿಕ್ಕಿಸಿ ಕುಂಚವನ್ನು ಸಿದ್ಧಮಾಡಿಕೊಳ್ಳುತ್ತಿದ್ದರು. ಪ್ರಧಾನವಾಗಿ ಕೆಂಬಣ್ಣ ಬಳಸಿದರೂ. ಗಿಡ ಮರಗಳಿಗಾಗಿ ತಿಳಿ ಹಸಿರು, ಹೊರರೇಖೆಗಳಿಗಾಗಿ ಕಪ್ಪು, ಇನ್ನಿತರ ಕಡೆ ಪಾಟಲ, ಗೋಪಿ, ಬಿಳಿಬಣ್ಣಗಳನ್ನು ಲೇಪಿಸಲಾಗಿದೆ. ಅವುಗಳನ್ನು ಯಾವ ಏರಿಳಿತಗಳಿಲ್ಲದೇ ಬಳಸಿದರೂ ರೇಖಾಲಾವಣ್ಯಗಳಿಂದ ಚಿತ್ರಗಳು ಅತ್ಯಂತ ಮನೋಹರವಾಗಿವೆ. ತೀರ್ಥಂಕರರು, ಯಕ್ಷ-ಯಕ್ಷಿಣಿಯರು, ಮುನಿಗಳು, ಸಖಿಯರು, ಸೇವಕರು, ಭಕ್ತವೃಂದವನ್ನು ಚಿತ್ರಿಸುವಲ್ಲಿ ಕಲಾಕಾರನು ವ್ಯಕ್ತಪಡಿಸಿದ ಕೌಶಲ್ಯ ಅತ್ಯಪೂರ್ವವಾದದ್ದು. ಎಲ್ಲದರ ಜೊತೆಗೆ ಬಟ್ಟೆಗಳನ್ನು ತಿರಸ್ಕರಿಸಿ ನಿಂತ ಜೈನ ಮುನಿಗಳನ್ನು ಚಿತ್ರಿಸುವುದು ಸುಲಭ ಸಾಧ್ಯವಲ್ಲ. ಆದರೆ ಸೂಕ್ಷ್ಮವಾಗಿ ಪರೀಕ್ಷಿಸಿದಾಗ. ಅವರ ತ್ಯಾಗದಲ್ಲಿಯೂ ಕಲಾಕಾರನು ಭವ್ಯತೆಯನ್ನು ತಂದಿರುವುದು ಗೋಚರಿಸದೇ ಇರದು. ಚಿತ್ರಕಾರನ ನೈಪುಣ್ಯ ಅರಿಯಲು 'ಜಯಧವಲ'ದ ಮಾತಂಗ ಯಕ್ಷನ ಅಂಕಣವನ್ನು ಪರೀಕ್ಷಿಸಬೇಕು. ಆಚೆ ಈಚೆ ಕಲಾತ್ಮಕವಾಗಿ ಚಿತ್ರಿಸಿದ ಸಾಂಕೇತಿಕ ಮರಗಳ ಆಶ್ರಯದಲ್ಲಿ ಯಕ್ಷನು ಆನೆಯೊಂದಿಗೆ ಆರೂಢನಾಗಿದ್ದಾನೆ. ದುಂಡಗಿನ ನಗು ಮುಖದಲ್ಲಿ ಭಾವ ನಳನಳಿಸುತ್ತಿದೆ. ಭವ್ಯಾಕಾರದ ಕಿವಿ, ಕಂಠ, ಕೈಯ ಆಭರಣಗಳು, ಮಾಂಸಖಂಡಗಳಿಂದ ತುಂಬಿಕೊಂಡ ಅಂಗಾಂಗಗಳು. ಈ ತಾಳೆ ಚಿತ್ರ ನೋಡುತ್ತಿದ್ದಂತೆ ಅಜಂತಾದ ಪ್ರಥಮ ಗುಹೆಯ ಮಾಡಿನಲ್ಲಿ ಚಿತ್ರಿತವಾದ ಕುಬ್ಜರ ರೂಪ ಲಾವಣ್ಯಗಳು ಕಣ್ಣಿಗೆ ಕಟ್ಟಿದಂತಾಗುತ್ತದೆ. ಚತುರ್ಭುಜ ಯಕ್ಷಿಣಿಯರನ್ನು ಚಿತ್ರಿಸುವಾಗಲೂ ಅವರ ಸ್ತ್ರೀತ್ವಕ್ಕೆ ಏನೇನೂ ಕೊರತೆಯಾಗದಂತೆ ಕಲಾಕಾರನು ಎಚ್ಚರಿಕೆ ವಹಿಸಿದ್ದಾನೆ. ಈ ಮಾತಿಗೆ ಮಹಾಮಾನಸದೇವಿ, ಪದ್ಮಾವತಿ, ಕಾಳಿ,ಶ್ರುತದೇವಿ, ಅಂಬಿಕಾದೇವಿಯರ ಚಿತ್ರಗಳೇ ಸಾಕ್ಷಿ. ಕೆಂದುಟಿ, ಉಬ್ಬೆದೆ, ಸಿಂಹಕಟಿ, ವಿಪುಲವಾದ ಆಭರಣಗಳು ಕಲಾಕಾರನ ರಸಿಕತೆಗೆ ದ್ಯೋತಕವಾಗಿ ರೂಪಗೊಂಡಿದೆ. ಅಂಕಣಗಳ ಇಕ್ಕೆಲದಲ್ಲಿ ಸರಳರೇಖೆಯಂತಹ ಇಲ್ಲವೇ ಹೂಬಳ್ಳಿಗಳಿಂದ ಚಿತ್ತಾರಗಳನ್ನು ರೂಪಿಸಲಾಗಿದೆ. ಮಾನಸದೇವಿಯ ಓಲೆಯ ಮೇಲಿರುವ ನಕ್ಷೆಗಳು ತಿರುಗಿ ಅಜಂತ ಗುಹಾಲಯಗಳನ್ನು ನೆನಪಿಗೆ ತರುತ್ತವೆ.




ತಾಳೆ ಓಲೆಗಳ ಮೇಲೆ ಧ್ವಜಸ್ತಂಭ ಮಾನವ ಆಕೃತಿ. ದೇವಾಲಯದ ಕರಡು ರೂಪರೇಷೆಗಳು

ಹಸ್ತಪ್ರತಿ, ಚಿತ್ರಗಳು ಹಾಳಾಗದಂತೆ ಜೋಡಿಫಲಕಗಳಲ್ಲಿ ಕಟ್ಟಿಡುವುದು ರೂಢಿ, ಬಡಿಗರು ಇವನ್ನು ತಾಳಿಕೆ ಬರುವ ಕಟ್ಟಿಗೆಯಿಂದ ಸಿದ್ಧಮಾಡಿದ ನಂತರ. ಹುಳ ಹುಪ್ಪಡಿಗಳ ಬಾಧೆ ತಪ್ಪಿಸುವುದಕ್ಕಾಗಿ ರಾಸಾಯನಿಕ ದ್ರವ್ಯಗಳ ಲೇಪನ ನುಣುಪುಮಾಡಿ, ಇಲ್ಲವೇ ಬಟ್ಟೆಯನ್ನು ಅಂಟಿಸಿ, ಒಳಗೆ ಪಠ್ಯಸೂಚಕವಾಗಿ ಚಿತ್ರಗಳನ್ನು ರಚಿಸಲಾಗುತ್ತಿತ್ತು. ಕೆಲವು ಫಲಕಗಳು ಬೋಳಾಗಿದ್ದರೆ ಅರಗು, ತೈಲವರ್ಣಗಳನ್ನು ಬಳಸಿದವುಗಳು, ಇಂದಿಗೂ ಉಳಿದುಕೊಂಡು ಬಂದಿದೆ. ಜೈನರ ಕೃತಿಗಳ ಮೇಲೆ ತೀರ್ಥಂಕರರನ್ನು ಅರೆವರ್ತುಳಗಳಲ್ಲಿ ಚಿತ್ರಿಸಿ ಆಚೆ-ಈಚೆ ಸೇವಕಿಯನ್ನು ಸೇರಿಸಲಾಗಿದೆ. ಶೈವಕೃತಿಗಳ ಮೇಲೆ ಶಿವ, ಅವನ ಗಣಗಳು, ಷಣ್ಮುಖ, ಶೃಂಗಿ, ಭೃಂಗಿ, ತುಂಬುರು ಮುಂತಾದವರನ್ನು ಗುರುತಿಸಬಹುದು. ವೀರಶೈವ ಕೃತಿಗಳ ಮೇಲೆ ನಟ್ಟನಡುವೆ ಶಿವಲಿಂಗ, ಜೋಡಿನಂದಿ ಇರುವದನ್ನು ಗುರುತಿಸಬಹುದು. ಶ್ರೀ ವೈಷ್ಣವ ಗ್ರಂಥಗಳನ್ನು ಫಲಕಗಳ ಮೇಲಿನ ಶಂಖ, ಚಕ್ರ, ನಾಮಗಳಿಂದ ಸೂಚಿಸಲಾಗುತ್ತದೆ. ಅವರ ಇನ್ನಿತರ ಕೃತಿಗಳಿಗೆ, ರಾಮ ಪಟ್ಟಾಭಿಷೇಕ, ಗಿರಿಜಾಕಲ್ಯಾಣ, ದಶಾವತಾರಗಳನ್ನು ಆಧರಿಸಿದ ಚಿತ್ರಗಳನ್ನು ರಚಿಸಲಾಗುತ್ತದೆ. ಒಂದೆಡೆ ರಾಮನ ಆಗಮನಕ್ಕೆ ಕಾದುನಿಂತ ಕಪಿಸೈನ್ಯ, ನಿಂತಲ್ಲೇ ಕಪಿಚೇಷ್ಟೆಯಲ್ಲಿ ತೊಡಗಿರುವುದು ಆಕರ್ಷಕವಾಗಿ ಚಿತ್ರಿತವಾಗಿದೆ. ಕೆಲಫಲಕಗಳು ಕೇವಲ ಹೂಬಳ್ಳಿ, ಜಾಮಿತಿ ಚಿತ್ತಾರಗಳಿಂದ, ಪಶು-ಪಕ್ಷಿಗಳಿಂದ, ಅಶ್ವಸೇನೆಯ ಚಿತ್ರಗಳಿಂದ ಅಲಂಕೃತವಾಗಿವೆ.

ತಾಳೆಗರಿಯ, ಚಿತ್ರಕಲೆ, ಹದಿನೆಂಟನೆಯ ಶತಮಾನದೊಂದಿಗೆ ಕೊನೆಗೊಂಡಂತೆ ಇದೆ. ಅನಾಮಧೇಯ ಕಲಾವಿದರು ತಮ್ಮ ಅಪೂರ್ವ ಕಲಾಕೃತಿಗಳನ್ನು ಭಾವೀ ಪೀಳಿಗೆಗಾಗಿ ಬಿಟ್ಟು ಹೋಗಿದ್ದಾರೆ. ಹೆಚ್ಚಿನವು ನಾಶವಾಗಿ ಹೋಗಿದ್ದರೂ. ಬದುಕುಳಿದ ಕೆಲವೂ ತೀರ ಶೋಚನೀಯ ಸ್ಥಿತಿಯಲ್ಲಿವೆ. ಪಂಡಿತರೆನಿಸಿಕೊಂಡವರು. ಸಾಹಿತ್ಯಕ್ಕೆ ಪ್ರಾಧಾನ್ಯಕೊಟ್ಟು ತಾಳೆಗ್ರಂಥಗಳಲ್ಲಿಯ ಚಿತ್ರಗಳು, ಪತ್ರಿಕೆಗಳಲ್ಲಿ ಬರುವ ಜಾಹೀರಾತುಗಳೋ! ಎಂಬ ತಾತ್ಸಾರದಿಂದ ಮೂಲೆಗುಂಪಾಗಿಸಿದ್ದಾರೆ. ಧರ್ಮಿಷ್ಟರು ಅವನ್ನು ಪರರಿಗೆ ತೋರಿಸುವುದೇ


ತಾಳೇಗರಿಯಲ್ಲಿ ಚಿತ್ರಕಲೆ - ಜ್ಯಾಮಿತಿ ಚಿತ್ರಗಳು




ತಾಳೇಗರಿಯಲ್ಲಿ ಗಣೇಶ ಮತ್ತು ಕಲಾತ್ಮಕ ರೂಪದಲ್ಲಿ ಹಂಸ



ತಾಳೇಗರಿಯಲ್ಲಿ ಮಾನಸ್ತಂಭದ ನಕ್ಷೆ.



ತಾಳೇಗರಿಯಲ್ಲಿ ಧ್ವಜಸ್ತಂಭದ ನಕ್ಷೆ




ತಾಳೆಗರಿಯಲ್ಲಿ ಗ್ರಂಥದ ಅಂಚುಗಳ ಅಲಂಕರಣ



ಪಾಪ ಎಂಬಂತೆ ಬಚ್ಚಿಡುತ್ತಿದ್ದಾರೆ. ಅಜ್ಞಾನಿಗಳಂತೂ ತಮ್ಮ ಹಸ್ತಪ್ರತಿಗಳ ಸಂಗ್ರಹದಲ್ಲಿ ಏನಿದೆ ? ಎಂದು ನೋಡುವ ಗೋಜಿಗೂ ಹೋಗುತ್ತಿಲ್ಲ, ಸೋಗಿನ ಸಂಶೋಧಕರು ಹೇಗೆ ಹೇಗೋ ಸಂಪಾದಿಸಿದ ತಾಳೆ ಚಿತ್ರಗಳನ್ನು ಇತರರಿಗೆ ತೋರಿಸುವುದೇ ಸರ್ವಸ್ವವನ್ನು ಕಳೆದುಕೊಂಡಂತೆ! ಎಂದು ಭಾವಿಸುವುದರಿಂದ ಅವನ್ನು ಬಚ್ಚಿಟ್ಟು ಸುಖಪಡುತ್ತಾರೆ. ಆದ್ದರಿಂದ ಇವುಗಳನ್ನು ಆಳವಾಗಿ ಅಭ್ಯಸಿಸಿ ಛಾಯಾಗ್ರಹಣ ಮಾಡಲು ಸಾಧ್ಯವಾಗುತ್ತಿಲ್ಲ. ತಾಳೆಗರಿಗಳ ಚಿತ್ರಸಂಗ್ರಹ ಹೊಂದಿದವರೆಲ್ಲ ತಮ್ಮ ಅಜ್ಞಾನ, ಸಂಕುಚಿತ ಮನೋಭಾವಗಳನ್ನು ತೊರೆದು, ಅವನ್ನು, ಧೀಮಂತರಿಗೆ, ಸಂಶೋಧಕರಿಗೆ, ಛಾಯಾಚಿತ್ರಕಾರರಿಗೆ, ದರ್ಶನ ಲಾಭಕ್ಕೆ ದೊರಕಿಸಿಕೊಟ್ಟರೆ, ಭಾವೀಪೀಳಿಗೆಯವರು ಅವುಗಳ ಬಗ್ಗೆ ಅಲ್ಪವಾದರೂ ಅರಿಯಲು ಸಹಾಯವಾದೀತು.

●●●

೪. ಕರಾವಳಿಯ ಕಾವಿ ಚಿತ್ರಗಳು



ಸೀಬಿ, ಸಿರಾ, ಶ್ರವಣಬೆಳ್ಗೊಳ, ಹಿರಿಯೂರು, ಹಂಪೆ, ಲೇಪಾಕ್ಷಿಗಳಲ್ಲಿ ಇದ್ದ ಭಿತ್ತಿ ಚಿತ್ರಗಳು ಪಶ್ಚಿಮ ಕರಾವಳಿಯಲ್ಲಿ ಎಲ್ಲೂ ಕಾಣವು. ಜಡಿಮಳೆ, ಆರ್ದ್ರಹವೆಯಿಂದ ವರ್ಣಮಯ ಚಿತ್ರಗಳು ಅತ್ಯಲ್ಪ ಕಾಲದಲ್ಲಿ ತನ್ನತನವನ್ನು ಕಳೆದುಕೊಳ್ಳುವುದರಿಂದ, ಕರಾವಳಿಯ ಜನ ತಮ್ಮ ಕಲಾಭಿರುಚಿಯನ್ನು ಕಾವಿ ಚಿತ್ರಗಳ ಮೂಲಕ ಸೂರೆ ಮಾಡಿದ್ದಾರೆ. ಗಾರೆಯಲ್ಲಿ, ಕಾವಿ ಸೇರಿಸಿ ರಚನೆ ಮಾಡುವದರಿಂದ ಇವು ಒಂದಿಷ್ಟೂ ಮಾಸದೇ ಕಟ್ಟಡದೊಂದಿಗೇ ಬಾಳುವಂತಹವು.

'ಫ್ರೆಸ್ಕೊ' ಭಿತ್ತಿಚಿತ್ರಗಳಂತೆ, ಗಿಲಾಯಿ ಹಸಿಯಿದ್ದಾಗಲೇ ಚಿತ್ರಗಳ ನಿರ್ಮಾಣ ಕೆಲಸ ಸಂಪೂರ್ಣ ಮಾಡಿಕೊಂಡು ಬಿಡಬೇಕಾಗಿರುವುದರಿಂದ ವಿವರಗಳನ್ನು ಮುಂದಾಗಿಯೇ ಗುರುತು ಹಾಕಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ತಜ್ಞ ಗಾರೆಯವರ ಪಂಗಡ ಬೇರೆಯೇ ಇರುತ್ತಿತ್ತು. ಉತ್ತಮ ಕಲಾಕೃತಿಯ ಚಿತ್ರರಚನೆಗಾಗಿ, ಕಲಾಕಾರನಿಂದ ಬಾಹ್ಯರೇಖೆಗಳನ್ನು ಕಾಗದದ ಮೇಲೆ ಹಾಕಿಸಿಕೊಂಡು ಅವನ್ನು ಗೋಡೆ, ಮಾಡುಗಳ ಮೇಲೆ ಹೇಗೆ ರೂಪಿಸಬಹುದು? ಎಂದು ನಿರ್ಧರಿಸಲಾಗುತ್ತಿತ್ತು. ಗೋಡೆಯ ಗಿಲಾಯಿಗಾಗಿ, ಕಡಲ ಸಿಂಪುಗಳನ್ನು ಸುಟ್ಟು ಬೆಣ್ಣೆಯಂತಹ ಸುಣ್ಣ ತಯಾರಿಸಿ, ಹರಳು, ಬೆಣಚುಕಲ್ಲು, ರೇವೆ, ಬೆಲ್ಲಗಳೊಂದಿಗೆ ಎರಡು ವಾರ ಕೊಳೆ ಹಾಕಲಾಗುತ್ತಿತ್ತು. ಈ ಮಿಶ್ರಣ ಕುಟ್ಟಿ ಹದವಾದ ಗಚ್ಚನ್ನು ಗೋಡೆಗೆ ಲೇಪಿಸಿಕೊಳ್ಳುತ್ತಿದ್ದರು.

ನಂತರ ಕಾವಿಯನ್ನು ಪಾಯಸದಷ್ಟು ದಪ್ಪವಾಗಿ ನೀರಿನಲ್ಲಿ ಕರಗಿಸಿ, ತಾಪಿಯಿಂದ ಚಿತ್ರ ನಿರ್ಮಾಣ ಸ್ಥಳದಲ್ಲಿ ಸಮನಾಗಿ ಲೇಪಿಸಿಕೊಳ್ಳುತ್ತಿದ್ದರು. ಒಂದು ಗಳಿಗೆಯ ನಂತರ ಅನಾವಶ್ಯಕ ಕಾವಿಯನ್ನು ತಾಪಿಯಿಂದಲೇ ಕೀಳುವುದರಿಂದ, ಹಿಂದಿನ ಬಿಳಿ ಬಣ್ಣ



ಗೋಚರಿಸುವಂತೆ ಆಗುತ್ತಿತ್ತು. ನಯ ನಾಜೂಕಿನ ವಿವರಗಳಿದ್ದಲ್ಲಿ ಹರಿತವಾದ ಕಂಠದಂತಹ 'ಕುಂಚ' ಬಳಸುತ್ತಿದ್ದರು. ಆಕಸ್ಮಾತ್ ಕೊಂಚ ಹೆಚ್ಚಾಗಿಯೇ ಕಾವಿ ಕೆಡವಿಬಿಟ್ಟರೆ, ತಿರುಗಿ ಲೇಪಿಸುವುದು ಸುಲಭ. ಒಂದು ದಿನ ಕಳೆದ ನಂತರ, ಒಂದು ವಾರದತನಕ ನೀರು ಸಿಂಪಡಿಸುತ್ತಿದ್ದರೆ, ಬಿರುಕು ಬಿಡುವುದಿಲ್ಲ. ಶುಭ್ರ ಬಿಳಿ ಹಿನ್ನೆಲೆಯಲ್ಲಿ ಕಾವಿ ಬಣ್ಣದಲ್ಲಿ ಸಿದ್ಧವಾದ ಚಿತ್ರಗಳು, ಚಪ್ಪಟೆಯಾಗಿ ಏಕವರ್ಣೀಯವಾಗಿದ್ದರೂ, ತಮ್ಮದೇ ಸರಳ, ಸ್ನಿಗ್ಧ, ಸೌಂದರ್ಯದಿಂದ ತುಂಬಿಕೊಳ್ಳುತ್ತವೆ.

ಉತ್ತರ ಕನ್ನಡ ಗಡಿಯ ಚಿತಾಕುಲಿಯಿಂದ ಮಂಗಳೂರಿನವರೆಗೆ ಹರಡಿಕೊಂಡ ದೇವಾಲಯಗಳಲ್ಲಿ ಇವು ಹೆಚ್ಚಾಗಿ ಉಳಿದುಕೊಂಡರೂ, ಧನಿಕರು, ಪ್ರತಿಷ್ಠಿತರು, ಕಲಾಭಿರುಚಿಯುಳ್ಳವರು ತಮ್ಮ ಮನೆಗಳನ್ನು ಇಂಥ ಚಿತ್ರಗಳಿಂದ ಶೃಂಗರಿಸುತ್ತಿದ್ದರೆಂಬುದನ್ನು ಅಲ್ಲೊಂದು, ಇಲ್ಲೊಂದು ತಲೆ ಎತ್ತಿಕೊಂಡು ನಿಂತ ಪುರಾತನ ಗೃಹಗಳಿಂದ ಅರಿತುಕೊಳ್ಳಬಹುದು. ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳಲ್ಲಿ ಬರುವ ಸನ್ನಿವೇಶಗಳನ್ನೇ ಹೆಚ್ಚಾಗಿ ಬಳಸುವದು ಕಂಡುಬರುತ್ತದೆ. ದೇವಿಯ ದೇವಸ್ಥಾನಗಳಲ್ಲಿ ಕಾಳಿ, ದುರ್ಗೆ, ಮಹಿಷಾಸುರಮರ್ದಿನಿಯರಿಗೆ ಪ್ರಾಶಸ್ತ್ಯ ದೊರಕಿದರೆ, ಶ್ರೀರಾಮ ಮಂದಿರಗಳಲ್ಲಿ ರಾಮರಾವಣ ಕಾಳಗ, ರಾಮಪಟ್ಟಾಭಿಷೇಕಗಳಂತಹ ಪ್ರಸಂಗಗಳು

ವಿರಾಜಿಸುತ್ತವೆ. ದಶಾವತಾರಗಳು, ಭಸ್ಮಾಸುರ ಮೋಹಿನಿ, ಪಂಚಪಾಂಡವರು, ಶ್ರೀಕೃಷ್ಣ ಗಾರುಡಿ ಚಿತ್ರಗಳೂ ಹೇರಳವಾಗಿವೆ.

ಶಿಲ್ಪ, ಉಬ್ಬುಚಿತ್ರ, ಭಿತ್ತಿಚಿತ್ರಗಳಲ್ಲಿಯೂ ಇವೇ ಸನ್ನಿವೇಶಗಳನ್ನು ಬಳಸಿಕೊಂಡಿದ್ದರೂ ಕಾವಿ ಚಿತ್ರಕಾರನು ಅವನ್ನು ಬೇರೆಯೇ ಶೈಲಿಯಲ್ಲಿ ರೂಪಿಸಿದ್ದಾನೆ. ಅವುಗಳಲ್ಲಿ ಸೇರ್ಪಡೆ ಮಾಡಿದ ವಿವರಗಳು, ನಯನಾಜೂಕುಗಳು, ಚಿತ್ರಕಾರನ ಅಭಿರುಚಿಯ ದ್ಯೋತಕವಾಗಿವೆ. ತಜ್ಞ ಕೈಗಳು ಅತ್ಯಂತ ನಿಪುಣತೆಯಿಂದ ಪ್ರತಿಯೊಂದು ರೇಖೆಯನ್ನು ತಾರತಮ್ಯದಿಂದ ಮೂಡಿಸಿದ್ದರಿಂದ ಅವನ್ನು ವೀಕ್ಷಿಸಿದಾಗ ಭಿತ್ತಿಚಿತ್ರಗಳು ಕೊಡುವ ರಸಾನುಭವ ಕೆಲಮಟ್ಟಿಗೆ ನಮ್ಮದಾಗುತ್ತದೆ. ಆದರೆ ಈ ಮಾತು ತೀರ ಕಗ್ಗಾಡಿನಲ್ಲಿರುವ ಚಿತ್ರಗಳಿಗೆ ಅನ್ವಯಿಸುವುದಿಲ್ಲ. ಹೊಟ್ಟೆಪಾಡಿಗೆ ಚಿತ್ರ ಬರೆಯುವ ಚಿತ್ತಾರರು, ಮೂಡಿಸಿದ ವ್ಯಕ್ತಿಗಳನ್ನು ಗುರುತಿಸುವುದೂ ಕಷ್ಟದ ಕೆಲಸ ! ಅವನು ರಾಮನಾಗಿಬಹುದು. ವಿಷ್ಣುವಾಗಿರಬಹುದು. ಸೀತೆ ಎಂದರೂ ಆಶ್ಚರ್ಯವಿಲ್ಲ! ಸಿಂಹ ಬೆಕ್ಕಿನಂತೆ ಕಂಡರೂ ಆಶ್ಚರ್ಯವಿಲ್ಲ!

ಕಲಾವೈವಿಧ್ಯ

ಚಿತ್ರಕ್ಕಾಗಿ ಮೀಸಲಿಟ್ಟ ಸ್ಥಳವನ್ನು ಪೂರ್ಣವಾಗಿ ಸದುಪಯೋಗಿಸುವದು ಕಲಾಕಾರನ ಉದ್ದೇಶ. ಅಂತೆಯೇ ಚೂರೂ ಬಿಡದೇ ಗಿಡ-ಮರಗಳನ್ನು, ಹೂ ಬಳ್ಳಿಗಳನ್ನು, ಗುಳೋಪ್ಪು, ಪತಾಕೆ, ನಕ್ಷೆಗಳನ್ನು ಜೋಡಿಸುತ್ತಾನೆ. ಇವುಗಳಲ್ಲಿ ಛಾಯಾಚಿತ್ರಗಳ ವಿವರ ತುಂಬಿಸುವದಕ್ಕಿಂತ, ಸಾಂಕೇತಿಕವಾಗಿ ರೂಪಿಸುವುದು ವಾಡಿಕೆ. ವರ್ತುಲ, ಅರೆವರ್ತುಲ, ಲಂಬವರ್ತುಲಗಳನ್ನು ಬಳಸಿ ನಿರ್ಮಿಸಿದ ಗೋಲಕ ಒಂದು ಹೂವನ್ನು ಪ್ರತಿನಿಧಿಸಿದರೆ, ಅದಕ್ಕೊಂದು ಬೊಡ್ಡೆ, ಎಲೆ, ಕಾಯಿ, ಹಣ್ಣು ಜೋಡಿಸಿದರೆ ಮರವಾಗಿ ಬಿಡುತ್ತದೆ (ಚಿತ್ರ). ಬೇಕು ಎನಿಸಿದರೆ ಜೋಡಿ ಗಿಳಿಗಳು ಮರವನ್ನು ಆಶ್ರಯಿಸಿದಂತೆ ಇಲ್ಲವೇ ಹಣ್ಣಿನ ಭಕ್ಷಣದಲ್ಲಿ

ಮೈಮರೆತಂತೆ ಚಿತ್ರಿಸಿದರೆ., ಹೆಚ್ಚು ಆಕರ್ಷಕವಾಗಿ ತೋರುತ್ತದೆ. ಕೆಲ ಕಲಾಕಾರರು ಗಿಡಬಳ್ಳಿಗಳಿಗೇ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟದ್ದರಿಂದ ವ್ಯಕ್ತಿಗಳು ಕುಬ್ಜರಾಗಿ ಬಿಟ್ಟಿದ್ದಾರೆ. ಅಶ್ವತ್ಥದ ಎಲೆಗಳನ್ನು ಪೋಣಿಸಿದಂತೆ ತೋರಣ ಬಿಡಿಸುವುದು ತೀರಾ ಸಾಮಾನ್ಯ (ಚಿತ್ರ). ಕಿಂಡಿ, ಕಿಡಕಿ, ಜಾಲಾಂದ್ರ, ಉಬ್ಬುಗಳ ಮೇಲೂ ನಕ್ಷೆ ಬಿಡಿಸುವುದಕ್ಕಾಗಿ ಸರಪಳಿ, ನೀರಿನ ತೆರೆ, ಹೂವಿನ ಪಕಳೆ, ಕಮಲದ ದಂಟು, ಕಮಾನುಗಳನ್ನು ಕಲಾತ್ಮಕವಾಗಿ ಬಳಸಿಕೊಳ್ಳಲಾಗಿದೆ. ಹೆಚ್ಚಿನ ದೇವಾಲಯಗಳ ಆಧಾರಕಂಬಗಳು, ಅರೆವರ್ತುಲ ಆಕಾರದಲ್ಲಿ ಇರುವುದರಿಂದ, ಅವುಗಳನ್ನು ಚಂದ್ರ, ಪಟ್ಟಿ, ಬಾದಾಮ, ಗೋಲಕಗಳಿಂದ ಅಲಂಕರಿಸಿದ್ದಾರೆ. ದೊಡ್ಡ ದೇವಾಲಯಗಳ ಹೊರಗೋಡೆ, ಮಾಡುಗಳನ್ನು ಭೂಮಿತಿ ಆಧಾರಿತ ಗೋಲಕಗಳಿಂದ ರಚಿಸುವದು ತೀರ ಸಾಮಾನ್ಯ(ಚಿತ್ರ). ನೂರಾರು ಇಂಥ ನಕ್ಷೆಗಳಿದ್ದರೂ ಪ್ರತಿಯೊಂದೂ ಬೇರೆ ಬೇರೆಯಾಗಿ ತೋರುವಂತೆ ಕಲಾಕಾರರು ಶ್ರಮ, ಎಚ್ಚರ ವಹಿಸಿದ್ದಾರೆ.

ಸಾಮಾಜಿಕ ಸನ್ನಿವೇಶಗಳನ್ನೂ ಕಲಾಕಾರರು ಅಲಕ್ಷಿಸಿಲ್ಲ. ಹೊರಬಾಗಿಲಿನಲ್ಲಿ ದಂಡ, ಗದೆ ಅಥವಾ ಖಡ್ಗ ಹಿಡಿದ ದ್ವಾರಪಾಲಕರು ಬಹುಸಂಖ್ಯಾತರಾಗಿದ್ದರೂ, ಕೆಲವೆಡೆ ಬಂದೂಕು ಹೊತ್ತವರೂ ಇದ್ದಾರೆ. ಅವರ ವೇಷ-ಭೂಷಣಗಳು ಸಮಕಾಲೀನ ಉಡುಪುಗಳನ್ನು ಪರಿಚಯಿಸುತ್ತವೆ. ಕೆಲವರು ಧೋತರ ಉಟ್ಟು, ಬಗಲ ಗಸಿ, ಅಂಗಿ ತೊಟ್ಟು ರುಮಾಲು ಸುತ್ತಿಕೊಂಡರೆ, ಇನ್ನು ಕೆಲವರು ದೊಗಳೆ ಪಾಯಜಾಮ ಧರಿಸಿ, ಉದ್ದ ಕೋಟು ಹಾಕಿ ತಲೆಗೆ ಪಗಡಿ ಧರಿಸಿದ್ದಾರೆ(ಚಿತ್ರ). ಮನೆಯ ಯಜಮಾನ ನಯವಿನಯಗಳಿಂದ ಕೈಜೋಡಿಸಿ, ಆಗಂತುಕರನ್ನು ಸ್ವಾಗತಿಸುವ ಚಿತ್ರಗಳೂ ಇವೆ. ಕೈಯಲ್ಲಿ ಖಡ್ಗ, ಕಿವಿ, ಕಂಠ, ಕೈಗಳಿಗೆ ಆಭರಣಗಳನ್ನು ಧರಿಸಿದ ಸೈನ್ಯಾಧಿಕಾರಿ ಇದ್ದಂತೆ, ನಿಲುವಂಗಿ ತೊಟ್ಟು ಕಾಲಿಗೆ ಬೂಟು ಧರಿಸಿ, ತಲೆಗೆ ನಕ್ಷೆಯ ರುಮಾಲು ಹಾಕಿ ಕುರ್ಚಿಯಲ್ಲಿ ಆರೂಢನಾದ ವ್ಯಕ್ತಿ ಯಾವನೋ ಗಣ್ಯನಿರಬೇಕೆಂದು ಕೂಡಲೇ ಅನಿಸಿಬಿಡುತ್ತದೆ. ಬೊಕ್ಕತಲೆಯ ಜಟ್ಟಿಗಳು ಕುಸ್ತಿಯಲ್ಲಿ ತೊಡಗಿದ ಚಿತ್ರ ಅಪೂರ್ವ, ಕಿವಿ ಮುಚ್ಚುವ ಕಪಿಟೋಪಿ ಧರಿಸಿದ ಭಟ್ಟರು ದೇವರಿಗೆ ಮಂಗಳಾರತಿ ಬೆಳಗುವದರಲ್ಲಿ ತಲ್ಲೀನರಾಗಿದ್ದರೆ, ಭಕ್ತನೋರ್ವ ವಾದ್ಯ ಬಾರಿಸುತ್ತ ದೇವರನಾಮ ಹಾಡುತ್ತ ಕುಣಿಯುವುದರಲ್ಲಿ ಮೈಮರೆತಿದ್ದಾನೆ. ಸರಸಸಲ್ಲಾಪದಲ್ಲಿ ಮೈಮರೆತ ಪ್ರೇಮಿಗಳನ್ನು ಪ್ರತಿನಿಧಿಸಲಾಗಿದೆ (ಚಿತ್ರ). ಪ್ರಿಯತಮನ ತೋಳತೆಕ್ಕೆಯಲ್ಲಿ ಬಂಧಿತಳಾದ ಯವ್ವನೆ. ಅವನಿಂದ ಕಾಣಿಕೆಯನ್ನು ಗಿಟ್ಟಿಸುವ ಯತ್ನದಲ್ಲಿದ್ದಾಳೆ. ಕಚ್ಚೆಹಾಕಿ ಸೀರೆಯುಟ್ಟು ಮೂಗಿಗೆ ನತ್ತು ಧರಿಸಿದ ಗರತಿಯರೂ ಅಲ್ಲಿ ಇಲ್ಲಿ ಕಾಣಸಿಗುತ್ತಾರೆ. ದೇವ ದೇವತೆಯರ ಫಲಕಗಳಲ್ಲಿ ಮೂಡಿಸಿದ ಕಿರು ವ್ಯಕ್ತಿಗಳನ್ನು ಆ ಕಾಲದ ವೇಷ-ಭೂಷಣಗಳಲ್ಲಿ ಮೂಡಿಸಿದ್ದರಿಂದ ಅವರಲ್ಲಿ ಎಷ್ಟೋ ಜನ ಟೀಪುಸುಲ್ತಾನನನ್ನು ಹೋಲುತ್ತಾರೆ. ಕೆಲವರು ಅಂಥವು ಟೀಪುವಿನ ಚಿತ್ರಗಳೆಂದು ವಾದಿಸುತ್ತಾರೆ ಕೂಡಾ. ಅರ್ಜುನ ಪರಶುರಾಮರ ಜೊತೆ ಟೀಪುವಿನ ಚಿತ್ರ ಸೇರಿಸಲು ಯಾವ ಸಬಲ ಕಾರಣವೂ ಕಾಣದು !

ಎರಡು ಹಂತಗಳ ಒಂದೇ ಚಿತ್ರ

ಅವಕಾಶ ಸಿಕ್ಕಲ್ಲೆಲ್ಲ ಪಶು-ಪಕ್ಷಿಗಳನ್ನು ಸೇರಿಸಲಾಗಿದೆ. ಮುರಲೀನಾದವನ್ನು ಆಲಿಸುತ್ತ ಕೃಷ್ಣನ ಜೊತೆಯಲ್ಲಿದ್ದ ಗೋವು, ಯಕ್ಷನನ್ನು ಹೊತ್ತು ಹೊರಡಲು ಸಿದ್ಧವಾದ ಕುದುರೆ. ಯಥಾವತ್ತಾಗಿ ಚಿತ್ರಿತವಾಗಿದೆ. ಮುತ್ತಿನ ಸರವೊಂದನ್ನು ಚುಂಚಿನಲ್ಲಿ ಎತ್ತಿ ಹಾರಲು ಅಣಿಯಾದ ಹಕ್ಕಿಜೋಡಿ ಅಪೂರ್ವದ್ದೆನಿಸುತ್ತದೆ. ನವಿಲೊಂದು ಎಲ್ಲಿಂದಲೋ ಹಾರಿಬಂದು ಭೂಮಿಗೆ ಇಳಿಯುವುದರಲ್ಲಿದೆ. ಕೋತಿಗಳಿಂದಲೂ ಕಲಾಕಾರನ ಕಲ್ಪನಾಶಕ್ತಿಗೆ ಮಣ್ಣೆರೆಚಲಾಗಲಿಲ್ಲ. ಕೈಗಳಲ್ಲಿ ಅನಾನಸು ಹಣ್ಣು ಹಿಡಿದ ಜೋಡಿ ಕೋತಿಗಳನ್ನು ವಿವಿಧ ಕೋನಗಳಿಂದ ನೋಡಿದರೆ ನಾಲ್ಕು ಕೋತಿಗಳು ಕಾಣುವಂತೆ ಚಿತ್ರಿತವಾಗಿವೆ. ಇಂತಹ ಚಮತ್ಕಾರಿತ ಶೈಲಿಯನ್ನು ಕುಣಿತದ ಆವೇಶ ತೋರಿಸುವಲ್ಲಿಯೂ ಬಳಸಲಾಗಿದೆ. ತಲ್ಲೀನತೆಯಿಂದ ನರ್ತಿಸುವ ಭಕ್ತ ಕಾಲುಗಳನ್ನು ಎರಡು ಹಂತಗಳಲ್ಲಿ ಮೂಡಿಸಿದ್ದರಿಂದ ಅವನು ಕಾಲೆತ್ತಿ ಕುಣಿದಂತೆ ಭಾಸವಾಗುತ್ತದೆ. ಕ್ವಚಿತ್ತಾಗಿ ಆಮೆ, ಚಿಗರೆಗಳು ಕಾಣಸಿಗುತ್ತವೆ. ಗೋವರ್ಧನ ಗಿರಿ ಎತ್ತಿದ ಗೋಪಾಲನ ಚಿತ್ರದಲ್ಲಿ ಭ್ರಮರ, ಜೇನ್ನೊಣಗಳನ್ನು ಸೇರಿಸಲಾಗಿದೆ.

ಈ ಕಲೆ ಸುಮಾರು ನಾಲ್ಕು-ಐದು ಶತಮಾನಗಳಷ್ಟು ಪುರಾತನವಾಗಿದ್ದು, ಪೋರ್ಚುಗೀಸರ ಧರ್ಮಾಂತರದ ಹಾವಳಿ ತಾಳಲಾರದೇ ಗೋವಾದಿಂದ ದಕ್ಷಿಣ, ಉತ್ತರ ಕನ್ನಡ ಜಿಲ್ಲೆಗೆ ವಲಸೆ ಬಂದ ಸಾರಸ್ವತರು ತಮ್ಮೊಂದಿಗೆ ಈ ಕಲೆಯನ್ನು ಕರ್ನಾಟಕಕ್ಕೆ ತಂದಿರಬೇಕೆಂದೆನಿಸುತ್ತದೆ. ಈ ಜಿಲ್ಲೆಯ ಹಲವಾರು ದೇವಾಲಯಗಳು, ಗೋವೆಯ ಮೂಲ ದೇವಸ್ಥಾನಗಳನ್ನು ಬಹಳವಾಗಿ ಹೋಲುತ್ತವೆ. ಕಲಾಕಾರರು, ಮಹಾರಾಷ್ಟ್ರ ಕರಾವಳಿಯ ಕಲೆಯ ವರ್ಚಸ್ಸಿಗೆ ಒಳಗಾಗಿದ್ದಿರಬೇಕು. ಅಂತೆಯೇ ದೇವಾಧಿದೇವತೆಗಳ ಹೆಸರುಗಳನ್ನು ದೇವನಾಗರಿ ಲಿಪಿಯಲ್ಲಿ ಬರೆಯಲಾಗಿದೆ. ಕಚ್ಚೆಹಾಕಿ ಸೀರೆ ಉಡುವುದು ಮತ್ತು ದೊಡ್ಡ ನತ್ತಿನ ಮೂಗುತಿ, ಮರಾಠಿಗರ ಪದ್ಧತಿ ಅಲ್ಲದೇ ಅಲ್ಲಿಯ ಸಾಧುಸಂತರು, ಪುರೋಹಿತರು ಕಿವಿಟೋಪಿ ಧರಿಸುವುದು ಸಾಮಾನ್ಯವಾಗಿತ್ತು. ಬನವಾಸಿ ಮಧುಕೇಶ್ವರ ದೇವಾಲಯದ ಕಂಬಗಳ ಮೇಲಿರುವ ಎರಡು ಕಾವಿ ಚಿತ್ರಗಳು ಈಗ ಅಸ್ತಿತ್ವದಲ್ಲಿರುವ ಈ ಮಾದರಿಯ ಚಿತ್ರಗಳಲ್ಲಿ ಅತ್ಯಂತ ಪುರಾತನವಾದವು. ಇವುಗಳಲ್ಲಿ ಒಂದನ್ನು ಕಾವಿಯ ಹಿನ್ನೆಲೆಯಲ್ಲಿ ಕಂಠದಿಂದ ದ್ವಾರಪಾಲಕನನ್ನು ಚಿತ್ರಿಸಲಾಗಿದೆ. ಕಾವಿ ಚಿತ್ರಗಳಲ್ಲಿ ಮೂಡಿಸಿದಂತಹ ಭೂಮಿತಿ ಆಧಾರಿತ ನಕ್ಷೆಗಳು ಹನ್ನೊಂದನೆಯ ಶತಮಾನದಿಂದೀಚೆಗೆ ರಚಿತವಾದ ತಾಳೆಗರಿ ಗ್ರಂಥಗಳ ಮೇಲೆ ಕಾಣಸಿಗುತ್ತವೆ. ಈ ಕಲೆಗೆ ಬೇಡಿಕೆ ನಾಲ್ಕು ದಶಕಗಳ ಹಿಂದೆಯೇ ನಿಂತು ಹೋದರೂ ಇಂದಿಗೂ ಸ್ಥಾನೀಯ ಗುಡಿಗಾರರು, ಪ್ರತಿವರ್ಷ ರಥೋತ್ಸವದ ಅಂಗವಾಗಿ ತೇರಿನ ಅಕ್ಕಪಕ್ಕ ರಚಿಸುವ ತ್ರಿವರ್ಣ, ಪಂಚವರ್ಣ ಚಿತ್ರಗಳು ಈ ಚಿತ್ರಗಳನ್ನು ಬಹಳವಾಗಿ ಹೋಲುತ್ತವೆ.

ದುರಂತ

ಕರ್ನಾಟಕದ ಕರಾವಳಿಗೆ ಸೀಮಿತವಾದ ಈ ಕಲಾಶೈಲಿ ಇಂದು ಕೊನೆಯುಸಿರು ಬಿಡುವುದರಲ್ಲಿದೆ. ಅದಕ್ಕೆ ಸಲ್ಲಬೇಕಾದ ಆಶ್ರಯ, ಮನ್ನಣೆ, ಪ್ರಶಂಸೆ, ಪ್ರಚಾರಗಳು ಸಿಗಲೇ

ಇಲ್ಲ. ಆಧುನಿಕರು ಸಿಮೆಂಟು, ಪೇಂಟು, ಡಿಸ್‌ಟೆಂಪರ್‌ಗಳಿಗೆ ಮಾರುಹೋಗಿ, ಕಾವಿ ಕಲಾಕಾರರನ್ನು ಜೀರ್ಣೋದ್ಧಾರ ಮಾಡುವ ಅಮಲಿನಲ್ಲಿ ಈ ಚಿತ್ರಗಳ ಮೇಲೆ ಸಿಮೆಂಟ್-ಬಣ್ಣಗಳನ್ನು ಬಳಿದು, ಭಾವೀ ಪೀಳಿಗೆಗೆ ಅದನ್ನು ಪರಿಚಯಿಸುವ, ನೋಡಿ ಆನಂದಿಸುವ, ಭಾಗ್ಯವನ್ನು ಇಲ್ಲದಂತೆ ಮಾಡುವ ಯತ್ನ ಭರದಿಂದ ನಡೆದಿದೆ. ಸಿರ್ಸಿಯ ಮಾರಿಕಾಂಬಾ ದೇವಾಲಯದಲ್ಲಿದ್ದ ಅಸಂಖ್ಯಾತ ಚಿತ್ರಗಳನ್ನು ನವೀಕರಿಸುವ ಯತ್ನದಲ್ಲಿ ಕೆಂಪು ಎನೆಮಲ್ ಪೇಂಟ್ ಬಳಿದು ತೇಜೋಹೀನ ಮಾಡಿಬಿಟ್ಟಿದ್ದಾರೆ. ಗೇರುಸಪ್ಪಾ ಊರಿನ ಮಧ್ಯದ ಕಟ್ಟಡದ ಮಹಡಿಯ ಹೊರಗೋಡೆಯ ಮೇಲೆ ಆಕರ್ಷಕ ಉಡುಪು ಧರಿಸಿದ ದ್ವಾರಪಾಲಕರ ಚಿತ್ರಗಳನ್ನು ನೋಡಿ ಛಾಯಾಚಿತ್ರ ತೆಗೆಯಲೆಂದು ಮರಳಿ ಹೋಗುವಷ್ಟರಲ್ಲಿ ಅವುಗಳ ಮೇಲೆ ಸಿಮೆಂಟು, ಬಣ್ಣ ಬಳಿದು ಬ್ಯಾಂಕೊಂದರ ಶಾಖೆಯನ್ನು ತೆರೆದು ಬಿಟ್ಟಿದ್ದಾರೆ. ಅಘನಾಶಿನಿಯ ದೇವಾಲಯವೊಂದರ ಪೌಳಿಯ ಗೋಡೆಯ ಮೇಲಿದ್ದ ಅತ್ಯಂತ ಕಲಾತ್ಮಕವಾಗಿದ್ದ ಸಾಮಾಜಿಕ ಚಿತ್ರಗಳ ಛಾಯಾ ಚಿತ್ರೀಕರಣಕ್ಕೆ ಬೆಳಕು ಸಾಲದೆಂದು ಊರಿಗೆ ಬಂದು ಫ್ಲಾಶ್ ಲೈಟ್‌ನೊಂದಿಗೆ ಹಿಂದಿರುಗುವುದರೊಳಗಾಗಿ ಚಿತ್ರಸಮೇತ ಗಿಲಾಯಿಯನ್ನು ಕೆಡವಿ ಬಿಟ್ಟಿದ್ದರು. ಈ ವೇಗದಲ್ಲಿ ಒಂದೇ ದಶಕದೊಳಗೆ ಒಂದೂ ಕಾವಿಚಿತ್ರ ಬದುಕಿ ಉಳಿಯಲಾರದು. ಅದಕ್ಕೂ ಪೂರ್ವದಲ್ಲಿಯೇ ಕಲಾಪ್ರೇಮಿಗಳು ಉಳಿದವುಗಳ ಛಾಯಾಚಿತ್ರಗಳನ್ನಾದರೂ ತೆಗೆದು ಸಂಗ್ರಹಿಸಿಡುವ ಹೃದಯವಂತಿಕೆಯನ್ನು ತೋರಿಸಿಯಾರು, ಎಂಬ ಆಸೆ. ಕಾಸು ಕೊಳ್ಳೆ ಹೊಡೆಯುವ ಒಂದೇ ಹಂಬಲವುಳ್ಳ ಜನ, ಸರಕಾರಿ ಖಾತೆಗಳಿಂದಂತೂ ಖಂಡಿತವಾಗಿ ಆಗದ ಕೆಲಸ ಇದು.

●●●

(ಲೇಖಕರ ಕೊನೆಯ ಮಾತುಗಳು ನಿಜವಾಗಿ ಪರಿಣಮಿಸಿದವು. ಈಗ ಅಸ್ತಿತ್ವದಲ್ಲಿರುವ ಕಾವಿಚಿತ್ರಗಳು ಕೃಷ್ಣಾನಂದ ಕಾಮತರ ಲೇಖ ಹಾಗೂ ರಾಜ್ಯಲಲಿತ ಕಲಾ ಅಕಾಡೆಮಿಯು ಪ್ರಕಟಿಸಿದ 'ಕಾವಿ ಕಲೆ' (1993) ಪುಸ್ತಕದಲ್ಲಿ ಮಾತ್ರ ಉಳಿದುಕೊಂಡಿವೆ.)

ಕರಾವಳಿಯ ಕಾವಿಚಿತ್ರಗಳು : ಸಾಂಕೇತಿಕವಾದ ಹೂ, ಗಿಡ, ಮರ




ಕಾವಿ ಚಿತ್ರ : ರಾಕ್ಷಸ ಅಥವಾ ಸಿಂಹಮುಖ



ಕಾವಿ ಚಿತ್ರ : ಶ್ರೀ ರಾಮಚಂದ್ರ



ಕಾವಿ ಚಿತ್ರ : ಟಗರು ಕಾದಾಟ



ಕಾವಿ ಚಿತ್ರ : ಕಾವಿಯ ತೋರಣಾಲಂಕಾರದ ಮಾದರಿಗಳು



ಕಾವಿ ಚಿತ್ರ : ಕೊಂಕಣ ಗೃಹಿಣಿಯನ್ನು ಹೋಲುವ ದ್ರೌಪದಿ



ಕಾವಿ ಚಿತ್ರ : ವರಾಹಾವತಾರ



ಕಾವಿ ಚಿತ್ರ : ಕಿಟಕಿ, ಜಾಲಂಧ್ರಗಳಿಗೆ ಬಳಸುವ ನಕ್ಷೆಗಳು



೫. ಕಾವಿ ಭಿತ್ತಿ - ಚಿತ್ರಗಳಲ್ಲಿ ಸಾಮಾಜಿಕ ಜೀವನ

ತೀರ ಸುಲಭ ಬೆಲೆಗೆ ಲಭ್ಯವಿರುವ ಕಾವಿ (ಹುರಮುಂಜಿ) ಯಿಂದ ಅತ್ಯಾಕರ್ಷಕ ಏಕವರ್ಣೀಯ ಭಿತ್ತಿಚಿತ್ರಗಳ ನಿರ್ಮಾಣ, ಕಲೆ, ಪೋಷಣೆಗಳ ಗೌರವ, ಕರಾವಳಿಯ ಕೊಂಕಣಿಗರಿಗೆ ಸೇರಬೇಕು. ಮಹಮ್ಮದೀಯರ (ಕ್ರಿ.ಶ. 1312 ಮತ್ತು 1472) ನಂತರ ಪೋರ್ಚುಗೀಸರ (ಕ್ರಿ.ಶ. 1510) ಧಾರ್ಮಿಕ ಕೀಟಲೆ ತಡೆಯಲಾರದೇ ಗೋವಾದಿಂದ ಕನ್ನಡನಾಡಿಗೆ ಬಂದ ಧಾರ್ಮಿಕರು ಈ ಕಲೆಯನ್ನು ತಮ್ಮೊಂದಿಗೆ ತಂದರು. ಅಂತೆಯೇ ಹದಿನೈದನೆಯ ಶತಮಾನದಿಂದ ಈ ಶತಮಾನದ ಮಧ್ಯದವರೆಗೆ ರಚಿತವಾದ ದೇವಾಲಯ, ಮನೆ ಮತ್ತು ಅಂಗಡಿಗಳ ಗೋಡೆಗಳು ಕೆಂಪುವರ್ಣದ ಭಿತ್ತಿ ಚಿತ್ರಗಳಿಂದ ಅಲಂಕೃತವಾದವು. ಕುಮಟಾ (ಉತ್ತರಕನ್ನಡ)ದ ಶ್ರೀ ಮಾಳಸಾ ನಾರಾಯಣಿ (ಕ್ರಿ.ಶ.1565) ಮತ್ತು ಶಿರ್ಸಿಯ ಶ್ರೀ ಮಾರಿಕಾಂಬಾ (ಕ್ರಿ.ಶ.1689) ದೇವಾಲಯಗಳಲ್ಲಿ ರಚಿತವಾದ ಚಿತ್ರಗಳು ಇಂದಿಗೂ ಅಚ್ಚಳಿಯದೇ ಉಳಿದುಕೊಂಡಿವೆ. ಆದರೆ ಸಿಮೆಂಟ್, ಪೇಂಟ್ ಮತ್ತು ಡಿಸ್‌ಟೆಂಪರ್‌ಗಳಿಗೆ ಮಾರುಹೋದ ಆಧುನಿಕರು ಅವನ್ನು ವಾಯು ವೇಗದಿಂದ ಧ್ವಂಸ ಮಾಡುತ್ತಿದ್ದಾರೆ.

'ಫ್ರೆಸ್ಕೋ' ಭಿತ್ತಿ ಚಿತ್ರಗಳಂತೆ, ಗಿಲಾಯಿ ಹಸಿ ಇದ್ದಾಗಲೇ ಉಕ್ಕಿನಕಂಠ (ಟಂಕ)ದಿಂದ ಗೀರು ಎಳೆದು ಇವುಗಳನ್ನು ರಚಿಸಲಾಗುತ್ತಿತ್ತು. ರಾಮಾಯಣ, ಮಹಾಭಾರತ, ಭಾಗವತ, ಪುರಾಣಗಳ ಸನ್ನಿವೇಶಗಳೇ ಚಿತ್ರಿತವಾಗಿದ್ದರೂ, ಆಗೊಮ್ಮೆ ಈಗೊಮ್ಮೆ ಮಧ್ವಾಚಾರ್ಯರಂಥ ಐತಿಹಾಸಿಕ ವ್ಯಕ್ತಿಗಳೊಂದಿಗೆ ಅಂದಿನ ಸಾಮಾಜಿಕ ಜೀವನದ ಇಣುಕು ನೋಟಗಳನ್ನು ಕಾಣಬಹುದಾಗಿದೆ. ವ್ಯಕ್ತಿಗಳು ಛಾಯಾಚಿತ್ರಗಳೋ ಎಂದು ಭಾಸವಾಗುವಂತೆ ನೈಜವಾಗಿ ಚಿತ್ರಿತವಾಗಿದ್ದಾರೆ. ಇವನ್ನು ನೋಡುತ್ತಿದ್ದಂತೆ ಇವರು ಊರ ಪ್ರತಿಷ್ಠಿತರು, ದಾನಿಗಳು, ಧರ್ಮಿಷ್ಠರು, ದೇವಸ್ಥಾನದ ಮೊಕ್ತೇಸರರು, ವಂಶಾವಳಿಯ ಹಿರಿಯರು, ಸೇನಾಧಿಪತಿಗಳು, ವೀರರು, ಸೈನಿಕರು, ದ್ವಾರಪಾಲಕರು ಎಂದು ತಕ್ಷಣ ಗುರುತಿಸಬಹುದು. ಅವರ ವೇಷ-ಭೂಷಣಗಳ ಮೇಲೆ ಪಾಶ್ಚಾತ್ಯ ಭಾವವನ್ನು ಕಾಣಬಹುದು. ಆದರೆ ಸ್ತ್ರೀಯರು ಮಾತ್ರ ತಮ್ಮತನವನ್ನು ಬಿಟ್ಟುಕೊಟ್ಟಿಲ್ಲ. ದೇವದೇವತೆಗಳನ್ನು ದೇವನಾಗರಲಿಪಿಯಲ್ಲಿ ಗುರುತಿಸಿದರೆ, ನಿಜವಾಗಿದ್ದ ಯಾವ ವ್ಯಕ್ತಿಯ ಹೆಸರನ್ನೂ ನಮೂದಿಸದೇ ಇದ್ದದ್ದು ಶೋಚನೀಯ. ಹಾಗೆ ಮಾಡಿದ್ದರೆ ಅವರ ವಂಶಾವಳಿಗಳನ್ನು ಗುರುತಿಸುವದು ಸುಲಭವಾಗಿ ಬಿಡುತ್ತಿತ್ತು. ಕೆಲವು ಸಣ್ಣ ಗುಡಿಗಳಿಗೆ, 'ಸಣ್ಣ ಹೊಸಬ', ಘೋಳಿ ಬೀರ ದೇವಾಲಯಗಳು ಎಂದು ಕರೆಯಲಾಗುತ್ತಿರುವುದರಿಂದ ಈ ಹೆಸರುಗಳು ಅಲ್ಲಿ ಚಿತ್ರಿತವಾಗಿರುವ ಗುಡಿ ಕಟ್ಟಿಸಿದ ವ್ಯಕ್ತಿಗಳವು ಇರಬಹುದು! ಎಂದು ಊಹಿಸಬಹುದಾಗಿದೆ.

ಪುರುಷರ ಶಿರೋವಸ್ತ್ರಗಳಲ್ಲಿ ವೈವಿಧ್ಯ ಹೇಳತೀರದು. ಮೈಸೂರ ಪೇಟಾದಂತಹ ಶಿಸ್ತಿನ ರುಮಾಲಿಗೆ ರಸಿಕನೊಬ್ಬ ಹೂವೊಂದನ್ನು ಸಿಕ್ಕಿಸಿಕೊಂಡಿದ್ದಾನೆ. ಇದನ್ನು ಕಷ್ಟಪಟ್ಟು ಪ್ರತಿದಿನ ಸುತ್ತಿಕೊಳ್ಳಬೇಕಾಗಿತ್ತೇ ಇಲ್ಲವೇ ಕ್ಷಣಾರ್ಧದದಲ್ಲಿ ಧರಿಸಲು ಬರುವಂತೆ ಸದಾಕಾಲ ಸುತ್ತಿಟ್ಟು ಸಿದ್ಧವಾಗಿಯೇ ಇಡುತ್ತಿದ್ದರೋ ಎಂದು ಹೇಳುವುದು ಕಷ್ಟ! ರಾಜಸ್ಥಾನಿ ಪಗಡಿಯಂತೆ, ಇದೀಗ ಬಿಚ್ಚಿಕೊಳ್ಳಬಹುದು ಎಂದು ಹೆದರಿಕೆ ಹುಟ್ಟಿಸುವಷ್ಟು ಹಗುರಾಗಿರುವವಾದರೂ ಚಿತ್ತಾರದ ಬಟ್ಟೆ ಬಳಸಿ ಕಲಾತ್ಮಕವಾಗಿ ಮಾಡಲಾಗಿದೆ. ಒಂದು ಅಂಚನ್ನು ಗಂಡು ನವಿಲನ್ನು ನಾಚಿಸುವಂತೆ ತುರಾಯಿಯಾಗಿ ಎತ್ತರಿಸಿ ಬಿಗಿದರೆ, ಇನ್ನೊಂದನ್ನು ಬಲಭುಜದಿಂದ ಎದೆಯ ಮೇಲೆ ಇಳಿಬಿಡಲಾಗಿದೆ. ಸಂತ ತುಕಾರಾಮನ ಮುಂಡಾಸು, ನಾನಾ ಫಡಣವೀಸ್ ಧರಿಸುವಂತಹ ಮರಾಠೀ ಪೇಠಾಗಳಿವೆ, ಕೆಲವು ರುಮಾಲುಗಳಂತೂ ತೀರ ಚಿಕ್ಕವಾಗಿ, ಹಗುರವಾಗಿರುವುದರಿಂದ ಅವು ಗಾಳಿಗೆ ಹಾರಿ ಹೋಗದಂತೆ ಹೇಗೆ ಸಂರಕ್ಷಿಸಿಕೊಳ್ಳುತ್ತಿದ್ದರು, ಎಂದು ವಿಸ್ಮಯಪಡುವಂತೆ ಇವೆ. ಜನಸಾಮಾನ್ಯರಂತೂ ಅಂಗವಸ್ತ್ರವನ್ನೇ ತಲೆಗೆ ಸುತ್ತಿಕೊಂಡಿದ್ದಾರೆ. ಈ ಪರಿಪಾಠ ಇಂದಿಗೂ ಕರಾವಳಿಯಲ್ಲಿ ಇದೆ ಎಂದು ಜ್ಞಾಪಿಸಿಕೊಳ್ಳಬಹುದು.

ಅದಾಗಲೇ ಸಿದ್ಧವಾದ ಟೋಪಿ ಬಳಕೆಯಲ್ಲಿ ಬಂದಿದ್ದವೆಂದು ಈ ಚಿತ್ರಗಳು ಸಾಕ್ಷಿ ಹೇಳುತ್ತವೆ. ಮೊನ್ನೆ ಮೊನ್ನೆಯವರೆಗೂ ಬಳಕೆಯಲ್ಲಿದ್ದ ಮಖಮಲ್ಲಿನ ಜರಿಕೆಲಸದ ಟೋಪಿಗಳನ್ನು ಸುಲಭವಾಗಿ ಗುರುತಿಸಬಹುದು. ಕೆಂಪು, ನೀಲಿ, ಜಾಂಬಳಿ ಬಣ್ಣದ ಲಂಬ-ಗೋಲಾಕಾರದ ಟೋಪಿಗಳ ಸುತ್ತ ಜರಿಯ ಕಸೂತಿಯಿಂದ ಅದರ ಅಂದ ಚೆಂದಗಳನ್ನು ಹೆಚ್ಚಿಸಿರುತ್ತಿದ್ದರು. ಉರಿಬಿಸಿಲಿನಿಂದ ಕಣ್ಣು ಸಂರಕ್ಷಿಸಿಕೊಳ್ಳುವಂತಹ "ಚೆಪ್ಪೆ"ಯನ್ನು, (ಆಟಗಾರರು ಬಳಸುವ ಸೂರ್ಯನಿಂದ ರಕ್ಷಣೆ ಪಡೆಯುವ ಹ್ಯಾಟುಗಳನ್ನು) ಗುರುತಿಸಬಹುದು (ಚಿತ್ರ). ಅಮೇರಿಕನ್ ದನ ಕಾಯುವ (ಕೌಬಾಯ್) ಹುಡುಗರನ್ನು ನೆನಪಿಗೆ ತರಿಸುವಂಥ ವಿಸ್ತಾರವಾದ ಹ್ಯಾಟುಗಳು ನಮ್ಮಲ್ಲಿ ಬಳಕೆಯಲ್ಲಿ ಇದ್ದವೇ ಎಂದು ಅನುಮಾನಪಡುವಷ್ಟು ಭಿನ್ನವಾಗಿವೆ. ಅಪರೂಪಕ್ಕೆ ಶಂಖದಾಕಾರದ ಎತ್ತರದ ಹ್ಯಾಟನ್ನು ಕಾಣಬಹುದಾಗಿದೆ. ಹೆಂಗಳೆಯರಂತೆ ಉದ್ದಕೂದಲು ಬೆಳೆಸುವ ಪರಿಪಾಠವಿದ್ದಂತೆ, ಕೆಲವರು ಬಾಬ್‌ಕಟ್ ತರಹ ಕಿರಿಗೂದಲು ಇಟ್ಟುಕೊಂಡಿದ್ದಾರೆ. ಪಾಶ್ಚಾತ್ಯರಂಥ ಅಲಂಕೃತ ಕ್ರಾಪ್ ಬಿಟ್ಟರೆ, ಕೆಲವರಾದರೂ ಕೆನ್ನೆಯ ಮೇಲಿಂದ ಗಲ್ಲಗಳ ಮೇಲೆ ಹುಲುಸಾಗಿ ಕೇಶರಾಶಿಯನ್ನು ಹಬ್ಬಿಸಿದ್ದಾರೆ. ಬಕ್ಕತಲೆ ಇಂದಿನಂತೆ ಅಂದಿಗೂ ಸಾಕಷ್ಟು ಪ್ರಮಾಣದಲ್ಲಿ ಇದ್ದಿತೆಂದು ಬರಿತಲೆಯವರು ಸಾಕ್ಷಿ ಹೇಳುತ್ತಾರೆ.

ಜಾತಿ ಸಂಕೇತವಾದ ಹಣೆ ಲಾಂಛನ ಧರಿಸುವುದು ಹಿಂದಿನಿಂದಲೂ ನಡೆದುಬಂದ ಪರಿಪಾಠ. ವೈಷ್ಣವರು ಗೋಪಿಚಂದನದ ನಾಮ ಎಳೆದುಕೊಂಡರೆ, ಶೈವರು ವಿಭೂತಿಯ ಪಟ್ಟೆಗಳನ್ನು ಎಳೆದುಕೊಂಡಿದ್ದಾರೆ. ಅಪರೂಪಕ್ಕೆ ಅರ್ಧಚಂದ್ರನೂ ಹಣೆಯನ್ನು ಅಲಂಕರಿಸುವುದುಂಟು, ಮೇಲ್ತುಟಿಯನ್ನು ಬೋಳಾಗಿರಿಸುವವರು ಗಂಡಸರೇ ಅಲ್ಲ ಎಂಬ ಭಾವ ಅಂದಿನ ಹೆಂಗಳೆಯರಲ್ಲಿ ಇದ್ದುದರಿಂದಲೋ ಏನೋ ಯಾರೂ ಮೀಸೆ ಬೋಳಿಸುವ

ಎದೆಗಾರಿಕೆ ತೋರಿಸಿಯೇ ಇಲ್ಲ! ಕುಡಿಮೀಸೆಯ ಯುವಕರಿದ್ದಂತೆ ತಲವಾರ ಮೀಸೆಯ ಯೋಧರೂ ಚಿತ್ರಿತರಾಗಿದ್ದಾರೆ. ಸರದಾರಜಿಗಳಂತೆ ಮೀಸೆಯನ್ನು ಹುಲುಸಾಗಿ ಬೆಳೆಸಿ ಅಂಚುಗಳಿಗೆ ಮೇಣ ಬಳಿದು ತಿಕ್ಕಿ ತೀಡಿ ಚೂಪಾಗಿ ಮಾಡುವ ಪದ್ಧತಿ ನಮ್ಮಲ್ಲಿಯೂ ಇತ್ತೆಂದು ಈ ಚಿತ್ರಗಳಿಂದ ಅರಿಯಬಹುದು. ಹೆಚ್ಚಿನ ಮಧ್ಯವಯಸ್ಕರ ಮುಖಮಂಡಲಗಳು ಇವುಗಳಿಂದ ಶೋಭಿತವಾಗಿವೆ. ಮೂಗಿನ ಅಡಿಯಲ್ಲಿ ಜೊಂಡಿಂಗ ಕುಳಿತಂತೆ ಭಾಸವಾಗುವ ಹಿಟ್ಲರನ ಮೀಸೆ, ಭಗತಸಿಂಗನ ಸೂಜಿ ಮೀಸೆ, ರಾಜಾ ತೋಡರಮಲ್ಲನ ಅಲೆ ಮೀಸೆಗಳಿಗೂ ಕೊರತೆಯಿಲ್ಲ. ಕೆಲವರಂತೂ ಲಿಂಬೆ ಹಣ್ಣಿನ ಗಾತ್ರದ ಅಂಚುಗಳಷ್ಟು ಪೊದೆಯಾಗುವಷ್ಟು ಬೆಳೆಸಿದ್ದಾರೆ.

ಇಂದಿನ ಸ್ತ್ರೀಯರನ್ನು ನಾಚಿಸುವಷ್ಟು ಅಂದಿನ ಪುರುಷರು ಆಭರಣಗಳನ್ನು ತೊಡುತ್ತಿದ್ದರು. ಜನಸಾಮಾನ್ಯರು ಒಂದು ಅಥವಾ ಎರಡು ಲೋಹದ ವಂಟಿಗಳನ್ನು ಕಿವಿಗಳಿಂದ ನೇತು ಹಾಕಿದರೆ ರಸಿಕರು, ಧನಿಕರು ಒಂದರಿಂದ ಮೂರು ಮುತ್ತಿನ ಲೋಲಕ ಧರಿಸುತ್ತಿದ್ದರು. ಶಿರೋವಸ್ತ್ರಕ್ಕೂ ರತ್ನಖಚಿತ ಆಭರಣ ತೊಡಿಸುವವರಿದ್ದರು. ಕಂಠದಿಂದ ಸರ, ಸರಪಳಿ, ಹಾರ, ಕಂಠಿಗಳನ್ನು ಇಳಿಬಿಡುವದು ಸಾಮಾನ್ಯ. ಬರಿಮೈಯಲ್ಲಿರುವವರು, ಸರಗಳ ಜೊತೆಗೆ ಹೂವಿನ ಹಾರಗಳನ್ನು ಬಳಸುತ್ತಿದ್ದರು. ಅಲ್ಲದೇ ತೋಳು, ಮೊಣಕೈಗಳನ್ನು ತೊಡುಗೆಗಳಿಂದ ಅಲಂಕರಿಸಿಕೊಳ್ಳುತ್ತಿದ್ದರು. ಸೊಂಟಪಟ್ಟಿ, ಡಾಬು ಕಾಲಬಂದಿಗಳನ್ನೂ ಗುರುತಿಸಬಹುದಾಗಿದೆ.

ಹಳಬರು ಬಗಲ ಬಂಡಿ, ಕಸೆ ಅಂಗಿಗಳನ್ನು ಧರಿಸುವದು ಸಾಮಾನ್ಯ. ಆದರೆ ಪಾಶ್ಚಾತ್ಯರ ವರ್ಚಸ್ಸಿಗೆ ಒಳಗಾದವರು ಅವರ ಅನುಕರಣೆಯನ್ನು ಮಾಡಲಾರಂಭಿಸಿದರು. ಅವರ ವೇಷ-ಭೂಷಣಗಳನ್ನು ನೋಡುತ್ತಿದ್ದಂತೆ ಮೈಸೂರ ದಸರಾ ಮೆರವಣಿಗೆಯಲ್ಲಿ ಪಾಲುಗೊಳ್ಳುತ್ತಿದ್ದ ಮಹಾರಾಜರ ಪರಿವಾರದವರು ಕಣ್ಣಮುಂದೆ ಸುಳಿದಂತಾಗುತ್ತದೆ. ಮೊಣಕಾಲವರೆಗೆ ಬರುವ ಉದ್ದಕೋಟು ಒಳಗೆ ತೊಟ್ಟ ಅಂಗಿ ಅಥವಾ ಶರ್ಟಿಗೆ ಗೀರು, ವರ್ತುಳಗಳ ನಕ್ಷೆ, ಕೆಲವರು ತೆಳುಬಟ್ಟೆಯ ನಿಲುವಂಗಿ ಧರಿಸಿದ್ದಾರೆ. ಶಾಲು ಹೊದೆಯುವದು, ಇಲ್ಲವೇ ಸೊಂಟಕ್ಕೆ ಬಿಗಿದುಕೊಳ್ಳುವುದು ಸಾಮಾನ್ಯ. ಕೆಲವರು ಓರಣವಾಗಿ ಹೊದೆದು ಮುಂಗೈ ಕೆಳಗೆ ಇಳಿಬಿಟ್ಟಿದ್ದಾರೆ. ಧನಿಕರು ಬಳಸಿದ ಶಾಲುಗಳ ಮೇಲೆ ಹೂಬಳ್ಳಿಗಳ ಸುಂದರವಾದ ಕಸೂತಿಯಿದೆ. ಧೋತರದ ಮೇಲೆ ಕೋಟು ತೊಡುವುದು ಪೂರ್ವ, ಪಶ್ಚಿಮ ಸಂಸ್ಕೃತಿಗಳ ಮಿಶ್ರಣದ ಪ್ರಾತಿನಿಧಿಕವಾಗಿದೆ. ಕೆಲವರು ಚಡ್ಡಿ ಅಥವಾ ಮುಕ್ಕಾಲು ಚೊಣ್ಣ ಧರಿಸಿದರೆ (ಚಿತ್ರ). ಹಲವರು ಪ್ಯಾಂಟಿಗಳನ್ನು ತಮ್ಮವನ್ನಾಗಿ ಮಾಡಿಕೊಂಡಿದ್ದಾರೆ. ಹೆಚ್ಚಿನವರು ಬರಿಗಾಲಿನಿಂದ ಇದ್ದರೂ ಕೆಲವರು ರಾಜಸ್ಥಾನಿಗಳಂತೆ ಮೊನಚಾದ ತುದಿಯ ಶ್ಯೂ ಇಲ್ಲವೇ ಸೈನಿಕರು ಧರಿಸುವ ಭಾರಿ ಬೂಟುಗಳನ್ನು ಮೆಟ್ಟಿದ್ದಾರೆ.

ಸ್ತ್ರೀಯರ ಚಿತ್ರಗಳನ್ನು ನೋಡಿದಾಗ ಮರಾಠಿ ಚಲಚ್ಚಿತ್ರ "ಶಾಮ ಚೀ ಆಯೀ" ಮುಂತಾದವುಗಳ ಮಹಿಳಾ ಪಾತ್ರಗಳನ್ನು ನೆನಪಿಸುತ್ತವೆ. ಇಂದಿಗೂ ಕರಾವಳಿಯ ಹಳಬ ಕೊಂಕಣಿ ಮಹಿಳೆಯರು ಇದೇ ರೀತಿಯ ಉಡುಪು ಧರಿಸುತ್ತಾರೆ (ಚಿತ್ರ). ತುರುಬಾಗಿ ಕಟ್ಟಿಕೊಂಡ

ಕೇಶರಾಶಿಯನ್ನು ಹೂದಂಡೆಗಳಿಂದ ಸಿಂಗರಿಸಿಕೊಳ್ಳುತ್ತಾರೆ. ಕಿವಿಗಳಿಗೆ ಭಾರ ಎನಿಸುವಷ್ಟು ಬೆಂಡೋಲೆ, ಬುಗುಡಿಗಳು, ಮೂಗನ್ನೇ ಮುಚ್ಚುವಂಥ ಭವ್ಯ ನತ್ತು, ಹಣೆಗೆ ಗೋಲಾಕಾರದ ಇಲ್ಲವೇ ಉದ್ದನೆಯ ಕುಂಕುಮ, ಕೊರಳನ್ನು ಮಂಗಳಸೂತ್ರ, ಮುತ್ತಿನ ಹಾರ, ಪವನದ ಸರಗಳು ಅಲಂಕರಿಸಿದರೆ, ತೋಳನ್ನು ವಂಕಿ ಇಲ್ಲವೇ ಬಾಜೂಬಂದ್ ಹೊಂದಿರುವದು ಸಾಮಾನ್ಯ. ಕೈತುಂಬ ಬಳೆಗಳಿದ್ದರೂ ಉಂಗುರಗಳನ್ನು ಗುರುತಿಸಲಾಗುವುದಿಲ್ಲ. ಕುಪ್ಪುಸಗಳು ಕಣದ ಬಟ್ಟೆಯಿಂದ ಹೊಲಿದವುಗಳು. ಮಾಟವಾದ ಅಂಗಾಂಗಗಳಿಗೆ ಅಂಟಿಕೊಳ್ಳುವಂತೆ ಒಂಭತ್ತು ಗಜದ ಸೀರೆಯನ್ನು ಹೊರಕಚ್ಚೆ ಹಾಕಿ ಉಟ್ಟುಕೊಂಡಿದ್ದಾರೆ. ಅಂಚು, ಸೆರಗು, ಮೈ, ಕಲಾಪತ್ತಿನ ವಿವಿಧ ನಕ್ಷೆಗಳಿಂದ ಕೂಡಿವೆ. ಕಾಲ್ಗಡಗ ಸುತ್ತುಂಗುರಗಳ ವೈವಿಧ್ಯತೆಗೆ ಏನೇನೂ ಕೊರತೆಯಿಲ್ಲ. ನವ ಯುವತಿಯೋರ್ವಳು ಕೈಯಲ್ಲಿದ್ದ ಗಿರಿಗಿಟ್ಲೆಯಿಂದ ಆಟವಾಡುತ್ತಿರುವದು ಮನೋಹರವಾಗಿ ಚಿತ್ರಿತವಾಗಿದೆ. ಹತ್ತಿರದಲ್ಲೇ ಪಾರಿವಾಳವೊಂದು ಕಾಳು ಹೆಕ್ಕುವುದರಲ್ಲಿ ಮೈಮರೆತಿದೆ. ಪೌರಾಣಿಕ ಸ್ತ್ರೀ ಪಾತ್ರಗಳನ್ನೂ ಅಂದಿನ ಜನಸಾಮಾನ್ಯ ಮಹಿಳೆಯರಂತೆ ಚಿತ್ರಿಸುವುದು ಈ ಕಲೆಯ ವೈಶಿಷ್ಟ್ಯ. ಅಂತೆಯೇ ದ್ರೌಪದಿಗೂ ಪ್ರತಿಷ್ಠಿತ ಪುರುಷನೊಬ್ಬನ ಪತ್ನಿಗೂ ಯಾವ ವ್ಯತ್ಯಾಸವೂ ಕಾಣದು (ದ್ರೌಪದಿಯ ಚಿತ್ರ). ಭಸ್ಮಾಸುರನನ್ನು ಬಲಿಹಾಕಲು ಅವನೊಡನೆ ನರ್ತಿಸುವ ಮೋಹಿನಿ ಕೂಡ ಓರ್ವ ಜನಸಾಮಾನ್ಯಳೇ! ಲಕ್ಷ್ಮಿ ಪಾರ್ವತಿಯರು ಕೂಡ ಇದೇ ರೀತಿಯಲ್ಲಿ ಚಿತ್ರಿತವಾಗಿದ್ದಾರೆ.

ವಿವಿಧ ವೃತ್ತಿಗಳಲ್ಲಿ ತೊಡಗಿದ ವ್ಯಕ್ತಿಗಳು ನೈಜವಾಗಿ ಚಿತ್ರಿತವಾಗಿದ್ದಾರೆ. ದೇವರ ಪೂಜೆಯನ್ನೇ ಉದರ ನಿಮಿತ್ತವಾಗಿ ಬಳಸುವ ಪೂಜಾರಿ, ಕೋತಿಟೋಪಿ ಧರಿಸಿ, ಯಜ್ಞೋಪವೀತ ಪ್ರದರ್ಶಿಸುತ್ತ, ಬರಿಮೈಯಲ್ಲಿದ್ದು, ಒದ್ದೆ ಪಂಚೆಯುಟ್ಟು ಎಡಗೈಯಲ್ಲಿದ್ದ ಗಂಟೆ ಬಾರಿಸುತ್ತ ಬಲಗೈಯಿಂದ ಆರತಿ ಎತ್ತುವುದರಲ್ಲಿ ಮೈಮರೆತಿದ್ದಾನೆ. ಅಡಿಗೆಭಟ್ಟರು ತಲೆಬೋಳಿಸಿಕೊಂಡು, ಅಂಗವಸ್ತ್ರವನ್ನು ಸೊಂಟಕ್ಕೆ ಸುತ್ತಿಕೊಂಡು, ಎಡಗೈಯಲ್ಲಿ ಪಾತ್ರೆ ಬಲಗೈಯಲ್ಲಿ ಸೌಟು ಹಿಡಿದು ಬಡಿಸುತ್ತಿದ್ದಾರೆ. ಭಾವುಕರಿಗೆ ಧರ್ಮೋಪದೇಶದ ಜೊತೆಗೆ ಮನರಂಜನೆ ನೀಡುತ್ತಿದ್ದ ಕೀರ್ತನಕಾರನು, ರುಮಾಲು, ನಿಲುವಂಗಿ, ಧೋತರ ಧರಿಸಿ, ಬಲಗೈಲಿ ತಂತಿವಾದ್ಯ ಮೀಟುತ್ತ ಎಡಗೈಯಲ್ಲಿ ಚಿಟಿಕೆ ಬಾರಿಸುತ್ತ ದೇವಲೀಲೆ ಹಾಡುವುದರಲ್ಲಿ ಮೈಮರೆತಿದ್ದಾನೆ. ದೊಣ್ಣೆ ಹಿಡಿದ ದ್ವಾರ ಪಾಲಕರು ಮಿಸುಕಾಡದೇ ನಿಂತುಬಿಟ್ಟಿದ್ದಾರೆ. ಅದೇ ಕಠಾರಿಧಾರಿಗಳು ಎದೆಗಾರಿಕೆ ಇದ್ದರೆ, ಮುಂದೆ ಬನ್ನಿ! ಎಂದು ಆಹ್ವಾನಿಸುವ ಠೀವಿಯಲ್ಲಿದ್ದಾರೆ. ಖಡ್ಗಧಾರಿಗಳು ಅದನ್ನು ಕೈಯಲ್ಲಿ ಹಿಡಿದೋ ಇಲ್ಲವೇ ಸೊಂಟ ಪಟ್ಟಿಯಿಂದ ಇಳಿಬಿಟ್ಟೋ ದರ್ಪದಿಂದ ನಿಂತಿದ್ದಾರೆ. ಬಂದೂಕುಧಾರಿಗಳು, ಅದನ್ನು ಸೈನಿಕರಂತೆ ಹೆಗಲಿಗೇರಿಸಿ, ಚೂರಿಯನ್ನು ನಡುವಿನಲ್ಲಿಟ್ಟುಕೊಂಡಿದ್ದಾರೆ. ಓರ್ವನು ಸಮವಸ್ತ್ರದಿಂದಾಗಿ ಬ್ರಿಟಿಶರ ಕಾಲದ ಪೋಲೀಸರನ್ನು ವಿಪುಲವಾಗಿ ಹೋಲುತ್ತಾನೆ(ಚಿತ್ರ).

ಯಾವುದೋ ಸಮಾರಂಭಕ್ಕೆ ಅತಿಥಿಗಳನ್ನು ಕೈ ಜೋಡಿಸಿ ಬರಮಾಡಿಕೊಳ್ಳುವ ಯಜಮಾನನು ತೀರ ನೈಜವಾಗಿ ಚಿತ್ರಿತವಾಗಿದ್ದಾನೆ. ಬೆಲೆಬಾಳುವ ಬಟ್ಟೆಗಳನ್ನು ಧರಿಸಿ

ಬರಿಗೈಲಿ ಶಾಲು, ಖಡ್ಗದೊಂದಿಗೆ ನಿಂತ ಹಿರಿಯನು ಊರ ಶಾನುಭೋಗನಿರಬಹುದು. ಖುರ್ಚಿಯಲ್ಲಿ ಕುಳಿತು ಒಂದು ಕೈಲಿ ಖಡ್ಗ ಇನ್ನೊಂದರಲ್ಲಿ ಢಾಲು ಹಿಡಿದವನು ಕೆಳದಿ ಸೈನ್ಯದ ಸೇನಾಪತಿಯಾಗಿದ್ದಿರಬಹುದು, ಅನಿಸುತ್ತದೆ. ಬರಿಗೈಲಿ ಹುಲಿಯೊಂದಿಗೆ ಸೆಣಸಾಟದಲ್ಲಿ ತೊಡಗಿದವನು ಇನ್ನೊಬ್ಬರ ರಕ್ಷಣೆಗಾಗಿ ಹೋರಾಡಿ ತಾನು ಮಡಿದ ವೀರನಿರಬಹುದು. ಬೆತ್ತ ಹಿಡಿದು ವಾಯುಸೇವನೆಗೆ ಹೊರಟವನ ವೇಷ-ಭೂಷಣಗಳು, ಆಂಗ್ಲರನ್ನೂ ನಾಚಿಸುವಂತಿವೆ. ಪುಷ್ಪ ಪ್ರಿಯನೊಬ್ಬ ಚಕ್ರಾಸನದಲ್ಲಿ ಮಂಡಿಸಿ ಕೈಯಲ್ಲಿದ್ದ ಸೂರ್ಯಕಾಂತಿಯ ಹೂವಿನ ಸೊಬಗಿಗೆ ಮನಸೋತಿದ್ದಾನೆ. ಪರಿಸರದ ಕಾಳಜಿ ಹೊತ್ತವನು ಬೆಳೆಯುತ್ತಿರುವ ವೃಕ್ಷವನ್ನು ಪ್ರೀತಿ-ವಿಶ್ವಾಸಗಳಿಂದ ಪರಿಶೀಲಿಸುತ್ತಿದ್ದಾನೆ. ಕೆಲ ದೇವ-ದೇವತೆಗಳ ಅಂಕಣದಲ್ಲಿ ಟೀಪುಸುಲ್ತಾನ, ಪೂರ್ಣಯ್ಯರನ್ನು ಹೋಲುವ ಚಿತ್ರಗಳಿವೆ. ಆದರೆ ಅವರು ಐತಿಹಾಸಿಕ ವ್ಯಕ್ತಿಗಳಲ್ಲ.

ಕರಾವಳಿಯಲ್ಲಿ ಕುದುರೆಗಳ ಬಳಕೆ ಇರದಿದ್ದರೂ, ಹಲವಾರು ಯೋಧರು, ಸೈನಿಕರು, ಸರದಾರರು ಅಶ್ವಾರೋಹಿಗಳಾಗಿ ಚಿತ್ರಿತವಾಗಿದ್ದಾರೆ (ಚಿತ್ರ). ಬಹುಶಃ ವಿಜಯನಗರದ ಆಳರಸರು ತಮ್ಮ ಸೈನ್ಯಕ್ಕೆ ಬೇಕಾಗುವ ಕುದುರೆಗಳನ್ನು ಅರಬಸ್ತಾನದಿಂದ ಕರಾವಳಿಯ ಈ ಬಂದರುಗಳ ಮೂಲಕವೇ ಆಮದು ಮಾಡಿಕೊಳ್ಳಲಾರಂಭಿಸಿದ ನಂತರ ಈ ಪರಂಪರೆ ಬೆಳೆದು ಬಂದಿರಬೇಕು. ಭಟಕಳದ ಕೊಂಕಣಿ ವರ್ತಕರು ಅಶ್ವಗಳ ವ್ಯಾಪಾರದಲ್ಲಿ ತೊಡಗಿ ಧನಿಕರಾಗಿದ್ದರೆಂದು ಇತಿಹಾಸದ ಪುಟಗಳಿಂದ ತಿಳಿದುಬರುತ್ತದೆ. ಸವಾರನು ಕೈಯಲ್ಲಿ ಚಾವಟಿಗೆ ಹಿಡಿದು, ವಾಯುವೇಗದಿಂದ ಕುದುರೆಯನ್ನು ಓಡಿಸುವಂತೆ ಚಿತ್ರಿಸುವುದು, ತೀರ ಸಾಮಾನ್ಯ. ಕೆಲವು ಅಂಕಣಗಳಲ್ಲಿಯಂತೂ ಅವರು ಅತ್ಯಂತ ಕಲಾತ್ಮಕವಾಗಿ ಮೂಡಿಬಂದಿದ್ದಾರೆ. ಮೊದಲ ನೋಟಕ್ಕೆ ಅಮೇರಿಕನ್ ಅಶ್ವಾರೋಹಿ ಇದ್ದಿರಬಹುದೇ! ಎಂಬ ಭ್ರಮೆ ಹುಟ್ಟಿಸುವ ಅಲಂಕಾರ ಮಾಡಿಕೊಂಡಿದ್ದಾರೆ (ಚಿತ್ರ). ವಿಚಿತ್ರವೆನಿಸುವ ಶಿರೋಲಂಕಾರ, ಹುಲುಸಾಗಿ ಬೆಳೆಸಿದ ಮೀಸೆ, ಮೈಗಂಟುವ ಕೋಟು, ಪ್ಯಾಂಟುಗಳು, ಕಾಲಿಗೆ ಬೂಟ್ಸು, ಕುದುರೆಗಳನ್ನು ಸದಭಿರುಚಿಯಿಂದ ಅಲಂಕರಿಸಲಾಗಿದೆ. ಇನ್ನೊಬ್ಬ ಕುದುರೆ ಸವಾರನು ವೈರಿಯನ್ನು ಎಚ್ಚರಿಸುವಂತೆ, ಎತ್ತಿದ ಬಲಗೈಯಲ್ಲಿ ಬಿಚ್ಚುಗತ್ತಿ ಹಿಡಿದಿದ್ದಾನೆ. ಎಡಗೈಯಿಂದ ಲಗಾಮು ಹಿಡಿದು, ಕುದುರೆಯನ್ನು ನಿಯಂತ್ರಿಸುತ್ತಿದ್ದಾನೆ. ತಲೆಗೆ ತೆರೆತೆರೆಯಂತೆ ಸುತ್ತಿಕೊಂಡ ರುಮಾಲು, ಕಿವಿಗೆ ಕೊಂಚ ದೊಡ್ಡವೇ ಅನಿಸಬಹುದಾದಂತಹ ಉಂಗುರಗಳು, ಬರಿಮೈಯಲ್ಲಿದ್ದರೂ, ಕೊರಳು ಎದೆ, ಭುಜ ಹಿಂಗೈಗಳು ಹೂಮಾಲೆಗಳಿಂದ ಅಲಂಕೃತಗೊಡಿವೆ. ವಿಫುಲವಾದ ನಿರಿಗೆಗಳುಳ್ಳ ಹಿಂದೆ ಕಚ್ಚೆ ಹಾಕಿ ಉಟ್ಟ ಧೋತರ ಅತ್ಯಂತ ಕಲಾತ್ಮಕವಾಗಿವೆ. ಅದರ ಮೇಲೆಲ್ಲ ಚಿತ್ತಾರಗಳಿದ್ದು ಸೊಂಟ ಪಟ್ಟಿಯನ್ನು ಬಿಗಿದುಕೊಳ್ಳಲಾಗಿದೆ. ಕೆಲ ದೇವಾಲಯಗಳ ದ್ವಾರಪಾಲಕರು, ಜಂಬೂಸವಾರಿ ಮಾಡುವಂತೆ ಚಿತ್ರಿಸಲಾಗಿದೆ.

ಅಪರೂಪಕ್ಕೆ ಹೆಂಗಳೆಯರು ವಿವಿಧ ಚಟುವಟಿಕೆಗಳಲ್ಲಿ ತೊಡಗಿದ್ದನ್ನು ಕಾಣಬಹುದಾಗಿದೆ. ಸಂಗೀತಪ್ರಿಯೆಯೊಬ್ಬಳು ಹಾರ್ಮೋನಿಯಂ ನುಡಿಸುತ್ತಿದ್ದಾಳೆ.

ಇನ್ನೊಂದು ಅಂಕಣದಲ್ಲಿ ಶಯ್ಯಾಗೃಹದ ವಿವರಗಳನ್ನು ಮೂಡಿಸಲಾಗಿದೆ. ಅದಕ್ಕಿರುವ ಭವ್ಯಬಾಗಿಲು, ದೊಡ್ಡ ಬೀಗಗಳಿಂದಾಗಿ ನೈಜತೆ ತರಲು ಯತ್ನಿಸಲಾಗಿದೆ. ಮೆತ್ತಗಿನ ಹಾಸಿಗೆ, ಹಲವಾರು ದಿಂಬುಗಳು ನಕ್ಷೆಗಳುಳ್ಳ ಮೇಲ್ಹಾಸು, ಜಮಖಾನೆಗಳು ಅಲಂಕೃತ ದೀಪಗಳು ಉರಿಯುತ್ತಿವೆ. ಒಂದು ಅಂಚಿನಲ್ಲಿ ಹೆದರಿದ ಹುಲ್ಲೆಯಂತೆ ನಿಂತ ತರುಣಿ, ಬಾಗಿಲಿನತ್ತ ಧಾವಿಸಿದ ಪತಿಯನ್ನು ಎವೆಯಿಕ್ಕದೇ ವೀಕ್ಷಿಸುತ್ತಿದ್ದಾಳೆ. ಬಹುಶಃ ಒಳನುಗ್ಗಲು ಬಂದ ಕಾಮುಕನನ್ನು ಎದುರಿಸಲು ಅವನು ಖಡ್ಗದೊಂದಿಗೆ ಧಾವಿಸಿದಂತಿದೆ. ಮಗದೊಂದು ಚಿತ್ರದಲ್ಲಿ ಸರಸಸಲ್ಲಾಪದಲ್ಲಿ ಮೈಮರೆತ ಪ್ರೇಮಿಗಳನ್ನು ನೈಜತೆಯಿಂದ ಚಿತ್ರಿಸಲಾಗಿದೆ. ತೂಗುದೀಪದ ಮಂದ ಬೆಳಕಿನಲ್ಲಿ ತಲೆಯನ್ನು ದಿಂಬಿಗೊರಗಿಸಿ ಗಂಡಸು ಪವಡಿಸಿದ್ದಾನೆ. ಪ್ರಿಯತಮನ ತೋಳತೆಕ್ಕೆಯಲ್ಲಿಬಂಧಿತಳಾದ ಯವ್ವನೆ ಅವನಿಂದ ಕಾಣಿಕೆಯನ್ನು ಗಿಟ್ಟಿಸುವ ಯತ್ನದಲ್ಲಿದ್ದಾಳೆ. ಇನ್ನೊಂದು ಅಂಕಣದಲ್ಲಿ ಸ್ತ್ರೀಯೋರ್ವಳು ತಂತಿವಾದ್ಯ ನುಡಿಸುತ್ತಿದ್ದಾಳೆ. ಇವಳು ಸರಸ್ವತಿಯೇ ಅಥವಾ ಸಾಮಾನ್ಯ ಹೆಂಗಸೇ ಎಂದು ಖಚಿತವಾಗಿ ಹೇಳುವುದು ಕಷ್ಟ!

ಭಾವೀ ಪೀಳಿಗೆಗಾಗಿ ಅಪೂರ್ವ ಕಲಾಸಿರಿಯನ್ನು ನಿರ್ಮಿಸಿದ ಕಲಾಕಾರರು, ಗೋವಾ, ಮಹಾರಾಷ್ಟ್ರದ ವೆಂಗುರ್ಲಾ, ಸಾವಂತವಾಡಿಗಳಿಂದ ದೀಪಾವಳಿಯ ನಂತರ ಕನ್ನಡನಾಡಿಗೆ ಪಾದಾರ್ಪಣೆ ಮಾಡುತ್ತಿದ್ದರು. ಸ್ಥಳೀಯರು ಅವರನ್ನು ಆದರ, ವಿಶ್ವಾಸಗಳಿಂದ ಬರಮಾಡಿಕೊಂಡು ವಾಸಕ್ಕಾಗಿ ಮನೆ, ಖರ್ಚಿಗಾಗಿ ಮುಂಗಡ ಹಣ ಒದಗಿಸುತ್ತಿದ್ದರು. ತಮ್ಮ ಕುಟುಂಬವನ್ನು ಊರಿನಲ್ಲಿಯೇ ಬಿಟ್ಟು ಬರುತ್ತಿದ್ದುದರಿಂದ ಗೃಹಕೃತ್ಯದ ಕೆಲಸಗಳನ್ನೆಲ್ಲ ಈ ಕಲಾಕಾರರು ತಾವೇ ನಿರ್ವಹಿಸಿಕೊಳ್ಳುತ್ತಿದ್ದರು. ದೇವಾಲಯಗಳ ಆಡಳಿತ ವರ್ಗದವರು, ಊರ ಪ್ರತಿಷ್ಠಿತರು, ನವನಿರ್ಮಿತ ಕಟ್ಟಡಗಳ ಗೋಡೆಗಳ ಮೇಲೆ ಈ ಗೀರುಚಿತ್ರಗಳ ರಚನೆಗಾಗಿ ಕರಾರು ಮಾಡಿಕೊಂಡು ಫಲ-ತಾಂಬೂಲಗಳೊಂದಿಗೆ ಸಂಚಕಾರ ಕೊಡುತ್ತಿದ್ದರು. ಹೆಚ್ಚಿನವರು ಕಾಳು-ಕಡಿ, ಬಟ್ಟೆ-ಬರೆಗಳ ರೂಪದಲ್ಲಿಯೇ ಅವರ ವೇತನ ಸಂದಾಯ ಮಾಡುತ್ತಿದ್ದರು. ಕಲಾಕಾರರು ನಸುಕಿನಲ್ಲಿಯೇ ಎದ್ದು ತಣ್ಣೀರ ಸ್ನಾನ ಮಾಡಿ, ಅಲ್ಪೋಪಹಾರ ಸೇವಿಸಿ, ಭಿತ್ತಿ ಚಿತ್ರಗಳ ರಚನೆಯಲ್ಲಿ ತೊಡಗುತ್ತಿದ್ದರು. ಕೃತಿಗಳ ರೂಪರೇಷೆಗಳನ್ನು ಮರಳಿನಲ್ಲಿ ರಚಿಸಿ, ಒಪ್ಪಿಗೆಯಾದ ನಂತರವೇ ಅವನ್ನು ಅಳವಡಿಸಿಕೊಳ್ಳುತ್ತಿದ್ದರು. ಕಠಿಣವಾದ ವಸ್ತುವಿಗಾಗಿ ಸ್ಥಾನೀಯ ಗುಡಿಗಾರರ ಸಲಹೆ ಸೂಚನೆಗಳನ್ನು ಪಡೆಯುತ್ತಿದ್ದರು. ಅವರಿಗೆ ರಾಮಾಯಣ, ಮಹಾಭಾರತ ಕಂಠಪಾಠವಾಗಿರುತ್ತಿದ್ದರಿಂದ ಅವುಗಳಲ್ಲಿಯ ಸನ್ನಿವೇಶಗಳನ್ನು ಲೀಲಾಜಾಲವಾಗಿ ರೂಪಿಸಲು ಸಾಧ್ಯವಾಗುತ್ತಿತ್ತು. ಸಾಮಾಜಿಕ ಸನ್ನಿವೇಶಗಳನ್ನು ಅನುಭವದಿಂದಲೂ ವೀಕ್ಷಣೆಯಿಂದಲೂ ಚಿತ್ರಿಸುತ್ತಿದ್ದರು. ಕತ್ತಲಾದೊಡನೆ ಅಡಿಗೆ-ಊಟ ಮುಗಿಸಿ, ನಿದ್ರಾದೇವಿ ಪ್ರಸನ್ನಳಾಗುವ ತನಕ ನೆರೆಹೊರೆಯ ಮಕ್ಕಳಿಗೆ ಪೌರಾಣಿಕ ಕಥೆಗಳನ್ನು ಮನದಟ್ಟಾಗುವಂತೆ ಹೇಳುತ್ತಿದ್ದರು. ಈ ಕಲಾಕಾರರ ನೆರವಿಗೆ ಸ್ಥಾನೀಯ ಗಾರೆಯವರನ್ನು ನೇಮಿಸಿಕೊಳ್ಳುತ್ತಿದ್ದರು. ಈ ಜನ ಕೇವಲ ಅನುಕರಣೆಯಿಂದಲೇ ತಮ್ಮ ಹಳ್ಳಿಗಳಲ್ಲಿ ಕಾವಿಚಿತ್ರಗಳನ್ನು ರಚಿಸುತ್ತಿದ್ದರು. ಅಂತು ಗಾವಡಿ, ಎಂಬಾತ ತಪ್ಪದೇ ಪ್ರತಿವರ್ಷ ಹೊನ್ನಾವರ (ಉತ್ತರ ಕನ್ನಡ) ಮತ್ತು

ಸುತ್ತಮುತ್ತಲಿನ ಊರುಗಳಲ್ಲಿ ಕಾವಿಚಿತ್ರಗಳನ್ನು ನಿರ್ಮಿಸಿ ಮಳೆಗಾಲದ ಪ್ರಾರಂಭದಲ್ಲಿಯೇ ಗೋವಾಕ್ಕೆ ಹಿಂದಿರುಗುತ್ತಿದ್ದ. ಹೊಸಾಡದ ನರಸಿಂಹ ನಾಯ್ಕರು ಒಂದೂವರೆ ಶತಕದ ಹಿಂದೆಯೇ ಈ ಕಲೆ ಕಲಿತು ಜಾನಪದ ಶೈಲಿಯಲ್ಲಿ ಕಾವಿ ಭಿತ್ತಿ ಚಿತ್ರಗಳನ್ನು ರಚಿಸಿದ್ದಾರೆ.

ಜರ್ಮನಿಯ ಶಿಷ್ಯವೇತನ ಪಡೆದು ಗೋವಾದ ಕಲೆ ಅಭ್ಯಸಿಸಿದ ಸಂಶೋಧಕಿ ಗ್ರಿಟ್ಲಿ. ಯು.ಮಿಟರ್‌ವಾಲನ್‌ಳು ಇದು ಮೂಲತ ಇಟಾಲಿಯ ಗ್ರಾಫಿಟಿ (ಗೀರುಚಿತ್ರ) ಚಿತ್ರಕಲೆಯಾಗಿದ್ದು, ಪೋರ್ಚುಗೀಸರು ಇದನ್ನು ಭಾರತಕ್ಕೆ ತಂದು, ಚರ್ಚುಗಳಿಗೆ ಹಸ್ತಾಂತರಿಸಿದರೆಂದೂ ಅನಂತರ ಹಿಂದೂಗಳು ಅದನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾಳೆ. ಇದೆಂತಹ ಸಂಶೋಧನೆ ! ಪೋರ್ಚುಗೀಸರು ಗೋವಾದ ದೇವಾಲಯಗಳ ಧ್ವಂಸ ಕಾರ್ಯವನ್ನು ಪ್ರಾರಂಭಿಸುವ ಮೊದಲೇ ಅಲ್ಲಿಯ ಸಾರಸ್ವತರ ದೇವಾಲಯಗಳ ಮೇಲೆಲ್ಲ ಈ ಚಿತ್ರಗಳು ನಳನಳಿಸುತ್ತಿದ್ದವು. ಆ ಸಂಶೋಧಕಿ, ದಕ್ಷಿಣ ಕನ್ನಡ ನಾಡಿನ ಕರಾವಳಿಯಲ್ಲೂ ರಾರಾಜಿಸುತ್ತಿದ್ದ ಕಾವಿಚಿತ್ರಗಳನ್ನು ಅಭ್ಯಸಿಸಿದ್ದರೆ , ಇವುಗಳಲ್ಲಿರುವ ಮಣ್ಣಿನ ವಾಸನೆ ಅವಳಿಗೂ ಅರಿವಾಗದೇ ಇರುತ್ತಿರಲಿಲ್ಲ. ಆದರೆ ದುರ್ದೈವದಿಂದ ಅಭಿಮಾನಶೂನ್ಯರಾದ ನಾವು ಅವುಗಳನ್ನು ಭರದಿಂದ ನಾಶ ಮಾಡಹತ್ತಿದ್ದೇವೆ. ಸರ್ವನಾಶವಾಗುವ ಮೊದಲೇ ಪುಣ್ಯಾತ್ಮ ಕಲಾಪ್ರೇಮಿಗಳು ಅವನ್ನು ಅಭ್ಯಸಿಸಿ, ಛಾಯಾಚಿತ್ರಗಳಲ್ಲಿ ಸೆರೆ ಹಿಡಿದು, ಗ್ರಂಥರೂಪದಲ್ಲಿ ಅವನ್ನು ಮುಂದಿನ ಪೀಳಿಗೆಗಾಗಿ ರಕ್ಷಿಸಿಡುವುದರಿಂದ ಈ ಕಲೆಗೆ ಗೌರವ ಸಲ್ಲಿಸಬಹುದಾಗಿದೆ.

●●●

ಸರಸದಲ್ಲಿ ಮೈಮರೆತ ದಂಪತಿ



ಗ್ರಾಮೀಣ ಸದ್ಗೃಹಸ್ಥನ ವ್ಯಕ್ತಿ ಚಿತ್ರ



ಪ್ರತೀಹಾರಿಗಳು ಸಾಮಯಿಕ ಉಡುಗೆಯಲ್ಲಿ



ಕಾವಿ ಕಲೆಯಲ್ಲಿ ಅಶ್ವಾರೋಹಿಗಳು



ಕಾವಿ ಕಲೆಯಲ್ಲಿ ಅಶ್ವಾರೋಹಿಗಳು



೬. ಸೀಬಿಯ ಭಿತ್ತಿ ಚಿತ್ರಗಳು

ತುಮಕೂರಿನಿಂದ ಉತ್ತರಕ್ಕೆ ಇಪ್ಪತ್ತೈದು ಕಿಲೋಮೀಟರ್ ದೂರದಲ್ಲಿ ಚಿತ್ರದುರ್ಗದತ್ತ ಓಡುವ ರಾಷ್ಟ್ರೀಯ ಹೆದ್ದಾರಿಯ ಬಲಕ್ಕಿರುವುದೇ ನಿದ್ರಾವಸ್ಥೆಯಲ್ಲಿರುವ ಚಿಕ್ಕ ಹಳ್ಳಿ ಸೀಬಿ. ಆದರೆ ಅಲ್ಲಿರುವ ಐತಿಹಾಸಿಕ ದಾಖಲೆಗಳನ್ನು ಪರಿಶೀಲಿಸಿದಾಗ, ಹಿಂದೊಮ್ಮೆ ಅದು ರಾಜಕೀಯ ಹಾಗೂ ಧಾರ್ಮಿಕ ಮಹತ್ವ ಪಡೆದ ಊರಾಗಿತ್ತು ಎಂದೆನಿಸದಿರದು. ಆದರೆ ಇಂದು ಅಲ್ಲಿ ಉಳಿದಿರುವುದು ನರಸಿಂಹ ದೇವಾಲಯವೊಂದೆ. ಸ್ಥಳದಲ್ಲಿ ದೊರೆತ ತಾಮ್ರ ಶಾಸನದ ಪ್ರಕಾರ, ಅದರ ಹಿಂದಿನ ಹೆಸರು ಸಿಬೂರು (ಶಿಬಿಯೂರು?) ಎಂದಿತ್ತು ; ಚಂದ್ರವಮೌಳೇಶ್ವರ ದೇವಾಲಯ ಇದ್ದಿತು. ವಿಜಯನಗರದ ಬುಕ್ಕನ ಮಗನಾದ ಹರಿಹರರಾಯನು ಕ್ರಿ. ಶ. ೧೪೦೩ರಲ್ಲಿ ಅದನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ, ಎಂಭತ್ತಕ್ಕೂ ಹೆಚ್ಚು ಕೊಡುಗೆಗಳಾಗಿ ವಿಭಾಗಿಸಿ ಬ್ರಾಹ್ಮಣರಿಗೆ ಹಂಚಿದ್ದರಿಂದ, ಅವನನ್ನು ಮೆಚ್ಚಿಸಲೆಂದು ಪಂಡಿತರು ಅದನ್ನು ಹರಿಹರರಾಯಪುರ ಎಂದು ಕರೆಯಲಾರಂಭಿಸಿದರು. ಆದರೆ ವಿಜಯನಗರದ ಅಳಿಗಾಲದ ನಂತರ ಆ ಹೆಸರು ಹಿಂದಿನಂತೆ ಸಿಬೂರು, ಸೀಬಿಯಾಗಿ ಪರಿವರ್ತನೆಗೊಂಡ ಹಾಗೂ ಅಲ್ಲಿಯ ಆರಾಧ್ಯದೇವತೆಯು ನರಸಿಂಹನಾಗಿ ಮಾರ್ಪಟ್ಟ ವಿಚಾರದ ಬಗೆಗೆ ತಿಳಿದುಬಂದಿಲ್ಲ. ಇಂದಿಗೂ ಪ್ರತಿದಿನ ಅಲ್ಲಿ ಪೂಜೆ-ಪುನಸ್ಕಾರಗಳು ನಡೆಯುತ್ತಿದ್ದು ದೂರದೂರದಿಂದ ಭಕ್ತಾದಿಗಳು ಬರುತ್ತಿರುತ್ತಾರೆ. ವಿಶೇಷ ಉತ್ಸವಗಳಿದ್ದಾಗ ದೊಡ್ಡ ಜನಸ್ತೋಮ ಸೇರುತ್ತದೆ. ಈಗ ಈ ದೇವಾಲಯ, ಟಿಪ್ಪು ಸುಲ್ತಾನನ ಆಳ್ವಿಕೆಯಲ್ಲಿ ಗಣ್ಯವ್ಯಕ್ತಿಯಾಗಿದ್ದ ನಲ್ಲಪ್ಪನ ವಂಶಜರ ಸ್ವಾಮ್ಯಕ್ಕೆ ಒಳಪಟ್ಟಿದೆ.

ಹೊರನೋಟಕ್ಕೆ ದೇವಾಲಯದ ನೆಲೆ, ಕೋಟೆ-ಕೊತ್ತಳಗಳನ್ನು ನೆನಪಿಗೆ ತರುತ್ತದೆ. ಆಳರಸರ ತಿಕ್ಕಾಟಗಳಿಂದ, ಇತರ ಅಪಾಯಗಳಿಂದ ಸಂರಕ್ಷಿಸಲು ಇದೊಂದು ಉಪಾಯವಾಗಿದ್ದಿರಬೇಕು. ವಾಸ್ತುವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಕಟ್ಟಡದ ರಚನೆಯಲ್ಲಿ ಮೂರು ಹಂತಗಳನ್ನು ಗುರುತಿಸಬಹುದು. ಹಾಗೂ ಗರ್ಭಗೃಹ, ಸುಕನಾಸಿ, ನವರಂಗ, ಮಹಾದ್ವಾರಗಳು ಹದಿನಾರನೆಯ ಶತಕದ ವಿಜಯನಗರದ ವಾಸ್ತುವನ್ನು ಹೋಲುತ್ತವೆ. ಗರ್ಭಗೃಹದ ಎಡ-ಬಲಗಳಲ್ಲಿ ಬಿಡಿ ವಿಗ್ರಹಗಳನ್ನು ಪ್ರತಿಷ್ಠಾಪಿಸಿರುವ ಕೊಠಡಿಗಳಿದ್ದು, ಹದಿನೇಳನೆಯ ಶತಕದ ನಾಯಕರ ಆಡಳಿತದಲ್ಲಿ ಈ ಕೊಠಡಿಗಳನ್ನು ಜೋಡಿಸಿರಬೇಕು. ಇದೇ ಕಾಲದಲ್ಲಿಯೇ ಮುಖ್ಯ ದೇವಾಲಯಕ್ಕೆ ಅಧಿಕ ಸಂರಕ್ಷಣೆ ನೀಡುವುದಕ್ಕಾಗಿ, ಬೃಹತ್ ಪ್ರಾಕಾರವನ್ನು ರಚಿಸಿ, ಪರಿಸರದಲ್ಲಿ ಇನ್ನಿತರ ಗುಡಿಗಳನ್ನು ನಿರ್ಮಾಣ ಮಾಡಿರಬೇಕು. ಮುಖಮಂಟಪದ ರಚನೆ ಹದಿನೆಂಟು ಅಥವಾ ಹತ್ತೊಂಬತ್ತನೆಯ ಶತಕದ

ಪೂರ್ವಾರ್ಧದ್ದೆಂದು ತೋರುತ್ತದೆ. ಮಹಾದ್ವಾರ ಮತ್ತು ಮುಖಮಂಟಪಗಳ ಮುಚ್ಚಿಗೆಯ ಕೆಳಗಡೆ ಇರುವ ಭಿತ್ತಿ ಚಿತ್ರಗಳೆಲ್ಲ ಇದೇ ಕಾಲದಲ್ಲಿ ರಚಿತವಾಗಿರಬೇಕು.

ಎಲ್ಲ ಚಿತ್ರಗಳೂ ಎತ್ತರದ ಮುಚ್ಚಿಗೆಯಲ್ಲಿರುವುದರಿಂದ ಅವನ್ನು ನೋಡುವುದು, ಅಭ್ಯಸಿಸುವುದು, ತುಂಬ ಪ್ರಯಾಸದ ಕಾರ್ಯ. ಗೋಣು ಉಳುಕಿ, ಕತ್ತು ನೋವಾಗಬಾರದು ಎಂದುಕೊಂಡರೆ, ಮಲಗಿಯೆ ಅವನ್ನು ವೀಕ್ಷಿಸುವುದು ಕ್ಷೇಮಕರ ! ಜೊತೆಯಲ್ಲಿ ದೂರದರ್ಶಕ ಇದ್ದರಂತೂ ಕಲೆಯ ದರ್ಶನ ಕಣ್ಣಿಗೆ ಕಟ್ಟಿದಂತಾಗುತ್ತದೆ. ಅಷ್ಟೊಂದು ಎತ್ತರದಲ್ಲಿ ಇದ್ದುದರಿಂದಲೇ ಎರಡು ಶತಕಗಳ ಅವಧಿಯಲ್ಲಿ ಚಳಿ, ಮಳೆ, ಆರ್ದ್ರತೆ, ಬಿಸಿಲುಗಳನ್ನು ತಾಳಿಕೊಂಡು, ತಿಳಿಗೇಡಿಗಳ ಕೀಟಲೆಯಿಂದ ಸಂರಕ್ಷಣೆ ಪಡೆಯುವಂತಾಗಿದೆ, ಈ ಚಿತ್ರಗಳಿಗೆ. ಆದರೆ ಕಲೆಯ ಬಗೆಗೆ ಶ್ರದ್ಧೆ ಇಲ್ಲದ ಕಲಾಕಾರರು ಪಡಿಯಚ್ಚು ತೆಗೆಯುವಾಗ ಬಳಸಿದ ಅಂಟುಕಾಗದದ ಕಲೆಗಳನ್ನು ಈ ಚಿತ್ರಗಳ ಮೇಲೆ ಶಾಶ್ವತವಾಗಿ ಉಳಿದುಕೊಳ್ಳುವಂತೆ ಮಾಡಿದ್ದಾರೆ. ಆಧುನಿಕರೆನಿಸಿಕೊಂಡವರು ಅವುಗಳಿಗೆ ಮಾಡಿರುವಷ್ಟು ಹಾನಿಯನ್ನು ಹಿಂದಿನವರು ಮಾಡಿಲ್ಲವೆನಿಸುತ್ತದೆ. ಕೇವಲ ಹದಿನೈದು ತಿಂಗಳುಗಳಲ್ಲಿ ಒದಗಿದ ದುರ್ಗತಿಯೆ ಅವುಗಳ ಅಲ್ಪಾಯುಷ್ಯದ ನಾಂದಿ ಸೂಚಿಸಿದೆ. ಮೊದಲ ಭೇಟಿಯಲ್ಲಿ (೫ ಸೆಪ್ಟೆಂಬರ್ ೧೯೮೨) ಕಂಡು, ಸವಿದ ಎಷ್ಟೋ ಚಿತ್ರಗಳು ಎರಡನೆಯ ಬಾರಿ (೧ ಜನವರಿ ೧೯೮೪) ಹೋದಾಗ ಕಣ್ಮರೆಯಾಗಿ ಬಿಟ್ಟಿದ್ದವು. ದೇವಾಲಯದ ಮುಂಬಾಗಿಲಿನ ನಟ್ಟನಡುವೆ ಇದ್ದ ವಿಷ್ಣುವಿನ ವಿರಾಟ್ ವಿಶ್ವರೂಪ ಚಿತ್ರದ ಮೇಲೆ ಹೆಜ್ಜೇನು ಗೂಡೊಂದನ್ನು ಕಟ್ಟಿದ್ದು, ಅದನ್ನು ತೆಗೆಯುವ ಯತ್ನದಲ್ಲಿ ವಿಶ್ವರೂಪಿಯ ವರ್ಚಸ್ಸು ಕಡಿಮೆಯಾಗಿದೆ ! ಬಹುಶಃ ಇದಕ್ಕಾಗಿ ಬಳಸಿದ ಶಕ್ತಿ-ಸಾಮರ್ಥ್ಯಗಳ ಪರಿಣಾಮವೂ ಏನೊ, ಎಡಗಡೆಯಲ್ಲಿ ದೊಡ್ಡದಾದ ಗಿಲಾಯಿ ಮಾಡಿದ ಭಾಗವು ತನ್ನ ನಾಲ್ಕು ಚಿತ್ರಗಳೊಂದಿಗೆ ನೆಲಕ್ಕೆ ಬಿದ್ದು ತನ್ನ ಅಸ್ತಿತ್ವವನ್ನು ಶಾಶ್ವತವಾಗಿ ಕಳೆದುಕೊಂಡುಬಿಟ್ಟಿದೆ. ದಾನಿಗಳ, ಧರ್ಮಿಷ್ಟರ ಉದಾರ ಸಹಾಯದ ದೆಸೆಯಿಂದಾಗಿ ಆಡಳಿತಗಾರರು ಗೋಡೆಗಳಿಗೆ ಬಳಿಸುವಾಗ, ಕೆಲಸಗಾರರು ತೋರಿದ ನಿರ್ಲಕ್ಷ್ಯದಿಂದಾಗಿ ಸುಣ್ಣವು ಅಧಿಕ ಪ್ರಮಾಣದಲ್ಲಿ ಭಿತ್ತಿ ಚಿತ್ರಗಳಿಗೆ ಸೇಚನವಾಗಿದೆ. ಇಷ್ಟು ಸಾಲದೆಂಬಂತೆ, ತುಮಕೂರಿನ ಓರ್ವ ನಾಗರಿಕರಿಗೆ ಈ ಚಿತ್ರಗಳನ್ನು ತಿದ್ದಿಸಿ ಬರೆಸುವ ವಿಚಾರವಿದೆಯಂತೆ! ಹೆಬ್ಬಾಗಿಲಿನ ಮೇಲೆ ಗೋಪುರ ಕಟ್ಟಿಸುವ ಸಲುವಾಗಿ ಈಗಾಗಲೆ ಇಟ್ಟಿಗೆಗಳನ್ನು ರಾಶಿ ಹಾಕಿದ್ದಾರೆ. ಅಲ್ಲದೆ ಮೂಲತಃ ಮುಚ್ಚಿಗೆಯಲ್ಲಿದ್ದ ಎಷ್ಟೋ ಚಿತ್ರಗಳು ಅನಂತರ ಜೋಡಿಸಿದ ಗೋಡೆಯಿಂದಾಗಿ ಕಾಣದಾಗಿವೆ. ಇನ್ನು ಗೋಪುರ ಕಟ್ಟಿದರೆ ಅವುಗಳ ಅಳಿಗಾಲ ಖಂಡಿತ.

ವರ್ಣ ಚಮತ್ಕಾರದ ನಿರ್ಮಾಣಕ್ಕಾಗಿ ಅವನ್ನು ಮಿಶ್ರಮಾಡದೆ ಮೂಲಬಣ್ಣಗಳನ್ನೆ, ಬಳಸಲಾಗಿದೆ. ಹಿನ್ನೆಲೆಗಾಗಿ ರಬ್ಬಾದ ಕೆಂಬಣ್ಣವನ್ನು, ಕೆಲವೆಡೆಯಲ್ಲಿ ಮಾತ್ರ ಬಿಳಿಬಣ್ಣವನ್ನು ಬಳಸಲಾಗಿದೆ. ವ್ಯಕ್ತಿ-ಘಟನೆಗಳನ್ನು ಚಿತ್ರಿಸುವುದಕ್ಕಾಗಿ ಹಳದಿ, ಹಸಿರು, ನೀಲಿ, ಶ್ವೇತವರ್ಣಗಳನ್ನು ಬಳಸಿದರೂ ಅವುಗಳ ವಿಚಾರಪೂರ್ಣ ಸಂಯೋಜನೆಯಿಂದಾಗಿ ಹಿತವಾದ

ವರ್ಣವಿನ್ಯಾಸ ಮಾಡಲಾಗಿದೆ. ಹಳದಿ, ಕೇಸರಿ, ಕೆಂಪುಬಣ್ಣಗಳನ್ನು ಅಧಿಕ ಪ್ರಮಾಣದಲ್ಲಿ ಬಳಸಲಾಗಿದೆ. ಹೆಚ್ಚಿನ ಚಿತ್ರಗಳು ಚಪ್ಪಟೆಯಾಗಿದ್ದರೂ ಕೆಲವೆಡೆ ಶರೀರದ ಉಬ್ಬು-ತಗ್ಗುಗಳನ್ನೂ ರಚಿಸಲು ಯತ್ನಿಸಲಾಗಿದೆ. ಹಲವು ಚಿತ್ರಗಳಿಗೆ ಬಳಸಿರುವ ಬಣ್ಣಗಳಲ್ಲಿ ಬಿರುಕು ಬಿಟ್ಟಿರುವುದರಿಂದ, ದೂರದಿಂದ ನೋಡಿದಾಗ ನೇಯ್ಗೆಯಿಂದ ಮೂಡಿಸಿದ ಚಿತ್ರ ಎಂಬಂತೆ ಗೋಚರಿಸುವುದು. ಈ 'ನೇಯ್ಗೆ' ಕಲಾಕಾರನ ಕೃತಿಯಾಗಿರದೆ, ಹವಾಮಾನದಿಂದ ನಿರ್ಮಿತವಾದದ್ದೆಂದು ದೂರದರ್ಶಕದಿಂದ ನೋಡಿದಾಗ ಮನವರಿಕೆಯಾಗುತ್ತದೆ.

ಇವುಗಳನ್ನು ರಚಿಸಿದ ಕಲಾವಿದರನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಮೊದಲನೆಯವರು ನಿರ್ಮಿತಿಯಲ್ಲಿ ಶ್ರದ್ಧೆ, ಆಸಕ್ತಿ, ಪರಿಶ್ರಮವುಳ್ಳವರು. ಅಂತೆಯೆ ಕರಡು ಚಿತ್ರಗಳನ್ನು ಹಾಳೆಗಳಲ್ಲಿ ಬಿಡಿಸಿಕೊಂಡು ಅವುಗಳಿಗೆ ಬಣ್ಣ ತುಂಬಿ ತಿದ್ದಿ, ಮೆಚ್ಚಿಗೆಯಾದಾಗ ಮಾತ್ರ ಅವುಗಳನ್ನು ಅಣಿಮಾಡಿಕೊಂಡ ಗೋಡೆಗಳ ಮೇಲೆ ಪ್ರಮಾಣಬದ್ಧವಾಗಿ ಬಿಡಿಸಿ, ಕುಂಚಗಳಿಂದ ವಿವಿಧ ಭಾಗಗಳಿಗೆ ಬಣ್ಣ ತುಂಬಿ, ಕಡಪು ಭಾಗಗಳನ್ನು ಸ್ಫುಟಗೊಳಿಸಿ, ಅನಂತರ ಹೊರರೇಖೆಗಳನ್ನು ಅತ್ಯಂತ ಕಲಾತ್ಮಕವಾಗಿ ಸೇರಿಸಿದ್ದಾರೆ. ಈ ಕಲಾಕಾರರು ಮುಂದಾಲೋಚನೆಯಿಲ್ಲದೆ ಒಂದೇ ಒಂದು ರೇಖೆಯನ್ನೂ ಎಳೆದಿಲ್ಲ; ಬಣ್ಣವನ್ನೂ ಬಳಿದಿಲ್ಲ. ಈ ವರ್ಗದವರ ಧೋರಣೆಗಳಿಗೆ ತದ್ವಿರುದ್ಧವಾಗಿ ಎರಡನೆಯ ವರ್ಗಕ್ಕೆ ಸೇರಿದವರು, ಸೋಮಾರಿಗಳು ಹಾಗೂ ಮರೆಗುಳಿಗಳೆಂದು ಅವರ ಕೃತಿಗಳಿಂದಲೆ ಅರಿತುಕೊಳ್ಳಬಹುದು. ಚಿತ್ರಗಳನ್ನು ರಚಿಸುವಾಗ ಬಣ್ಣ ಹೊತ್ತ ತಮ್ಮ ಕುಂಚಗಳನ್ನು ಮನಸ್ಸು, ಕೈ ಓಡಿದತ್ತ ಎಳೆದಿದ್ದಾರೆ. ಆದರೆ ಇಂತಹವರ ಕೃತಿಗಳು ಅಲ್ಪಸಂಖ್ಯೆಯಲ್ಲಿವೆ.

ಮುಖಮಂಟಪದ ಮತ್ತು ಮಹಾದ್ವಾರಗಳ ವಾಸ್ತುವಿಗೆ ಅನುಗುಣವಾಗಿ ಅವುಗಳನ್ನು ನವವಿಭಾಗಗಳನ್ನಾಗಿ ವಿಂಗಡಿಸಿ, ಅವನ್ನು ಚಿತ್ರಗಳಿಂದ ತುಂಬಿ ತುಳುಕಿಸಿದ್ದಾರೆ. ಇವುಗಳನ್ನು ಧಾರ್ಮಿಕ, ಸಾಮಾಜಿಕ, ನೈಸರ್ಗಿಕ, ವೈಯಕ್ತಿಕ ಹಾಗೂ ಲೈಂಗಿಕಚಿತ್ರಗಳೆಂದು ಐದು ವಿಭಾಗಗಳಲ್ಲಿ ಗುರುತಿಸಬಹುದು.

ಧಾರ್ಮಿಕ

ಮಹಾಭಾರತ, ರಾಮಾಯಣ, ಪುರಾಣ, ಭಾಗವತಗಳನ್ನು ಆಧರಿಸಿ ಅನೇಕಾನೇಕ ದೇವಾಧಿದೇವತೆಗಳು ಮತ್ತು ಅವರಿಗೆ ಸಂಬಂಧಿಸಿದ ಘಟನೆಗಳನ್ನು ರೂಪಿಸಲಾಗಿದೆ. ಕಲಾಕಾರರು ದೈವೀಪ್ರೇರಣೆ ಪಡೆದು ಸೇವಾಭಾವದಿಂದ ರಚಿಸಿರುವುದರಿಂದ ಇಂದು ಇಲ್ಲಿಗೆ ಬರುವ ಭಾವುಕರಿಗೆ ಭಕ್ತಿಯ ವಾತಾವರಣದಲ್ಲಿ ತಲ್ಲೀನರಾಗಲು ಸಹಾಯವಾಗುತ್ತದೆ. ಮುಖಮಂಟಪದ ಮುಚ್ಚಿಗೆಯ ಪ್ರತಿಯೊಂದು ಭಾಗವನ್ನು ಒಂದೊಂದು ಪೌರಾಣಿಕ ಘಟನೆಗೆ ಮೀಸಲು ಇಡಲಾಗಿದೆ. ಆದರೆ ವಿಶೇಷವಾಗಿ ದೈವಾಂಶವಿರುವ ವ್ಯಕ್ತಿಗಳಿಗೆ ನಟ್ಟನಡುವಿನ ಚೌಕಟ್ಟುಗಳನ್ನು ಹಿರಿಯದಕ್ಕೆ ಕಟ್ಟು ಹಾಕಿದಂತೆ ರೂಪಿಸಲಾಗಿದೆ. ಹಿರಿಯ ಚೌಕಟ್ಟಿನಲ್ಲಿ ಗಣ್ಯವ್ಯಕ್ತಿಯ ಘನತೆ ಹೆಚ್ಚಿಸುವ ಸನ್ನಿವೇಶಗಳನ್ನು ಚಿಕ್ಕವುಗಳಲ್ಲಿ ಸೇರಿಸಲಾಗಿದೆ. ಆಳ

ತೋರಿಸುವುದಕ್ಕಾಗಿಯೆ ಹಿನ್ನೆಲೆ ಸೇರಿಸದಿದ್ದರೂ ಗೋಪುರ, ಕಮಾನು ಮತ್ತು ಅವುಗಳಿಂದ ಇಳಿಬಿಟ್ಟ ಗುಳೋಪುಗಳು, ಮನೆಯ ಮಾಡ, ಶಿಖರ, ಧ್ವಜಗಳನ್ನೆಲ್ಲ ಸೇರಿಸಲಾಗಿದೆ. ಇದರಿಂದಾಗಿ ಚಿತ್ರಗಳು ಬರಿದಾಗಿ ಕಾಣುವುದರ ಬದಲಾಗಿ ವಿವಿಧ ಆಕೃತಿಗಳಿಂದ ತುಂಬಿತುಳುಕುತ್ತಲಿವೆ. ಇವನ್ನು ನೋಡುವಾಗ ಹಂಪೆಯ ವಿರೂಪಾಕ್ಷ ದೇವಾಲಯದ ಭಿತ್ತಿ ಚಿತ್ರಗಳು ಹಠಾತ್ತನೆ ಕಣ್ಣ ಮುಂದೆ ಸುಳಿದು ಹೋಗುತ್ತವೆ.

ಭಿತ್ತಿ ಚಿತ್ರಗಳು, ಛಾಯಾಚಿತ್ರಗಳಲ್ಲ. ಅಂತೆಯೇ ಕಲಾಕಾರನು ದೇವತೆಗಳ ಪ್ರತಿಷ್ಠೆ, ಸ್ಥಾನಮಾನಗಳನ್ನು ತೋರಿಸವುದಕ್ಕಾಗಿ ಅವರನ್ನು ಬೃಹತ್‌ಆಕಾರದಲ್ಲಿ ರೂಪಿಸಿ, ಇತರರನ್ನು ತೀರಾ ಚಿಕ್ಕವರನ್ನಾಗಿ ಚಿತ್ರಿಸುವ ಸ್ವಾತಂತ್ರ್ಯವನ್ನು ಸದಾಕಾಲ ಬಳಸುತ್ತಿರುತ್ತಾನೆ. ಭಸ್ಮಾಸುರ-ಮೋಹಿನಿಯರ ಚೌಕಟ್ಟಿನಲ್ಲಿ ರಾಕ್ಷಸನನ್ನು ಸಂಹಾರ ಮಾಡಲು ಹೆಣ್ಣುವೇಷದಲ್ಲಿ ಬಂದ ವಿಷ್ಣುವನ್ನು ಸಾಮಾನ್ಯವ್ಯಕ್ತಿಗಳಿಗಿಂತ ಎರಡುಪಟ್ಟು ದೊಡ್ಡವನನ್ನಾಗಿ ರಚಿಸಿರುವುದರಿಂದ ಕಲಾಕಾರನಿಗೆ ತೋಲ, ಮೇಳಗಳ ಕಲ್ಪನೆ ಇಲ್ಲವೆಂದು ಭಾವಿಸಲಾಗದು. ಇದರಂತೆ ಮಧ್ಯವರ್ತಿಯಾಗಿರುವ ವಿಶ್ವರೂಪಿ ವಿಷ್ಣುವನ್ನು ಬೃಹದಾಕಾರದಲ್ಲಿ ರಚಿಸುವಾಗ, ಪರಿಸರದ ಚೌಕಟ್ಟುಗಳನ್ನು ಆಕ್ರಮಿಸಲಾಗಿದೆ. ರಥಗಳು, ಬಿಲ್ಲು ಬಾಣಗಳು ಮತ್ತು ಖಡ್ಗಗಳನ್ನು ಚೌಕಟ್ಟಿನಿಂದ ಹೊರಗೆ ತೋರಿಸುವುದು ಪದ್ಧತಿ. ಈ ಸಂಪ್ರದಾಯ, ವೀರಗಲ್ಲುಗಳ ರಚನೆಯಲ್ಲೂ ಕಾಣಸಿಗುತ್ತದೆ. ಒಂದು ಹಂತದ ವ್ಯಕ್ತಿಯ ಯುದ್ಧದ ಆಯುಧಗಳು ಇನ್ನೊಂದರಲ್ಲಿ ನುಸುಳಿಕೊಂಡಿರುತ್ತವೆ. ಆದ್ದರಿಂದ ಈ ಕಲಾಕಾರರಿಗೆ ಪ್ರಮಾಣಬದ್ಧತೆ ಇಲ್ಲದ್ದರಿಂದ ಈ ತಂತ್ರ ಬಳಸಬೇಕಾಗುತ್ತದೆಂಬ ವಾದದಲ್ಲಿ ಹುರುಳಿಲ್ಲ ಎನ್ನಬೇಕಾಗುತ್ತದೆ. ರಥಗಳನ್ನು ಬಿಡಿಸುವಾಗಲೂ ಇದೇ ತಂತ್ರ ಬಳಸಲಾಗುತ್ತದೆ. ಅವುಗಳಲ್ಲಿ ಆಸೀನರಾದ ವ್ಯಕ್ತಿಗಳ ಗಾತ್ರಕ್ಕೆ ರಥ ಚಿಕ್ಕದು; ಗಾಲಿಗಳು ಭಾರ ಹೊರಲಾರವು; ಆನೆ ಅಶ್ವಗಳು ಕಪ್ಪೆ-ಕಾಗೆಗಳ ಅಳತೆಯವು ! ಎಂದು ಈ ಬಗೆಯ ತಂತ್ರವನ್ನು ಅರಿಯದವರು ಮಾತ್ರ ಆರೋಪಿಸಬಹುದು. ಆದರೆ ಇವೆಲ್ಲ ಕಲಾಕಾರನು ಬಳಸುವ ಸೂತ್ರಗಳು ! ಎಂಬುದನ್ನು ಪ್ರೌಢರು, ಅದರಲ್ಲೂ ಕಲೆಯಲ್ಲಿ ಅಭಿರುಚಿ ಉಳ್ಳವರು ಅರಿತುಕೊಳ್ಳಬೇಕು. ಸಹಸ್ರಾರು ಚಿತ್ರಗಳಿರುವ ಕಲ್ಲಚ್ಚಿನ 'ಸೌಗಂಧಿಕಾ ಪರಿಣಯ' ಗ್ರಂಥದ ಉದ್ದಕ್ಕೂ ಈ ಮಾದರಿಗಳನ್ನೆ ಧಾರಾಳವಾಗಿ ಬಳಸಲಾಗಿದೆ.

ಚಿತ್ರಗಳಲ್ಲಿರುವ ವ್ಯಕ್ತಿಗಳ ದಷ್ಟಪುಷ್ಟವಾದ ಮಾಂಸಖಂಡಗಳು ಎದ್ದು ಕಾಣುತ್ತವೆ. ಹತ್ತುಮುಖದ ಬರಿಮೈಯ ರಾವಣನ ಬಲವಾದ ಮೈಕಟ್ಟಿಗೆ ಎಂತಹ ಆಧುನಿಕರೂ ಮೈಸೋಲಬೇಕು! ಮಾನವಾಕೃತಿಗಳನ್ನು ಕುಳ್ಳರ, ಕುಬ್ಜರ ವರ್ಗಕ್ಕೆ ಸೇರಿಸಲಾಗದಿದ್ದರೂ ಎತ್ತರ ಕಡಿಮೆಯೆನ್ನಬಹುದು. ಮುಖಗಳೆಲ್ಲ ಹುಣ್ಣಿಮೆಯ ಚಂದ್ರನನ್ನು ನಾಚಿಸುವಂತಿದ್ದು, ಬೊಗಸೆಗಣ್ಣುಗಳು ಮಾಟವಾದ ಹುಬ್ಬುಗಳಿಂದ ಒಳಗೊಂಡಿವೆ. ತಪಸ್ವಿಗಳು ಹೊತ್ತಿರುವ ಗಡ್ಡ ಮೀಸೆಗಳು ನೋಡುವುದಕ್ಕೆ ಆಕರ್ಷಣೀಯವಾಗಿವೆ. ಸಂದರ್ಭಕ್ಕೆ ಅನುಗುಣವಾಗಿ ವಿವಿಧ ಭಾವಗಳನ್ನು ಹೊರಹೊಮ್ಮುವಂತೆ ಮಾಡಿರುವುದು ಕಲಾಕಾರನ ವೈಶಿಷ್ಟ್ಯ, ತೊಡೆಯ

ಮೇಲೆ ಕುಳಿತ ಈರ್ವರು ಮಡದಿಯರನ್ನು ಬಿಗಿದಪ್ಪಿದ ಶ್ರೀಕೃಷ್ಣನ ಮುಖದಲ್ಲಿ ಸಂತೃಪ್ತಿ ಮೂಡಿದೆ. ವ್ಯಕ್ತಿಗಳ ಹಣೆಯಲ್ಲಿ ಮೂಡಿರುವ ನಾಮಗಳು ಶ್ರೀ ವೈಷ್ಣವ ಅಯ್ಯಂಗಾರರವು ಎಂದು ನೋಡಿದ ಕೂಡಲೆ ಊಹಿಸಬಹುದು. ಸಾಂಪ್ರದಾಯಿಕವಾಗಿ ರಚಿತವಾದ ಚಿತ್ರಗಳು ಇವನ್ನು ಬಹಳವಾಗಿ ಹೋಲುತ್ತವೆ, ಎಂಬುದನ್ನು ಸ್ಮರಿಸಿಕೊಳ್ಳಬಹುದು.

ವ್ಯಕ್ತಿಗಳ ಅಲಂಕಾರಕ್ಕಾಗಿ ಬಂಗಾರದ ಹಾಳೆ ಬಳಸದೆ (ಮೈಸೂರು ಕಲಾಕೃತಿಗಳಲ್ಲಿ ವಿಪುಲವಾಗಿ ಕಾಣಸಿಗುವ 'ಜೆಸ್ಸೊ' ಕೆಲಸ ಆಗ ಅಷ್ಟಾಗಿ ಬಳಕೆಯಲ್ಲಿ ಬಾರದೆ ಇದ್ದಿರಬಹುದೆ?) ಕಪ್ಪುಬಣ್ಣವನ್ನೇ ಇದಕ್ಕಾಗಿ ಉಪಯೋಗಿಸಲಾಗಿದೆ. ಚುಕ್ಕೆ, ಬಿಂದು, ವರ್ತುಲಗಳಿಂದ ಸ್ತ್ರೀಪುರುಷರ ಕೈಕಾಲು, ಕಿವಿ, ಕಂಠಗಳ ಆಭರಣಗಳನ್ನು ರಚಿಸಲಾಗಿದೆ. (ಆ ಆಭರಣಗಳನ್ನು ಕುರಿತು ಕೈಗೊಳ್ಳಬಹುದಾದ ಅಧ್ಯಯನದಿಂದ ಒಂದು ಬೃಹತ್ ಗ್ರಂಥವನ್ನು ರಚಿಸಬಹುದು) ಮುನಿಗಳೂ ರುದ್ರಾಕ್ಷಿ ಮಾಲೆಗಳಿಂದ ಅಂತಹದೆ ಅಲಂಕಾರ ಮಾಡಿಕೊಂಡಿದ್ದಾರೆ! ಪುರುಷರು ಕಚ್ಚೆ ಹಾಕಿ, ಧೋತರ ಉಟ್ಟು, ನಕ್ಷೆಗಳಿರುವ ಅಂಗಿಯನ್ನು ತೊಟ್ಟು, ಸೊಂಟಕ್ಕೆ ಪಟ್ಟಿ ಬಿಗಿದಿದ್ದಾರೆ. ಕೋಮಲೆಯರು ಚುಕ್ಕಿ, ನಕ್ಷೆಗಳಿರುವ ಸೀರೆಗಳನ್ನು ಮೈಗಂಟುವಂತೆ ಬಿಗಿಯಾಗಿ ಕಚ್ಚೆ ಹಾಕಿ ಉಟ್ಟು, ಸೆರಗನ್ನು ಎಡಭುಜದಿಂದ ಹಾಯಿಸಿ ಬಲಭುಜದ ಮೇಲ್ಭಾಗದಿಂದ ಎದೆಯ ಮೇಲೆ ಎಳೆದುಕೊಂಡಿದ್ದಾರೆ. ಸೀರೆ ನಿರಿಗೆಗಳ ಪದ್ಧತಿ ತಂಜಾವೂರು ಶೈಲಿಯ ಕೃತಿಗಳಲ್ಲಿ ಎದ್ದು ಕಾಣುವ ವಿಶಿಷ್ಟ ಪ್ರಕಾರದ್ದಾಗಿದೆ. ಕೆಲವು ಹೆಂಗಳೆಯರು ಅರ್ಧ ತೋಳಿನ ಕುಪ್ಪಸಗಳ್ನು ತೊಟ್ಟಿದ್ದಾರೆ. ಅವರುಗಳ ಕೈ-ಕಾಲುಗಳ ಬೆರಳುಗಳನ್ನು ರಚಿಸುವಲ್ಲಿ ಕಲಾವಿದರು ಒಂದಿಷ್ಟೂ ಅಲಕ್ಷ್ಯ ತೋರಿಲ್ಲ.

ಮಹಾದ್ವಾರದ ಮುಚ್ಚಿಗೆಯಲ್ಲಿ ವೇಣುಗೋಪಾಲ ಮತ್ತು ಅವನ ಸಂಗಡಿಗರನ್ನು ಅತ್ಯಂತ ನೈಪುಣ್ಯತೆಯಿಂದ ಚಿತ್ರಿಸಲಾಗಿದೆ. ಅದರ ಪಡಿಯಚ್ಚನ್ನು ರವಿವರ್ಮ ಇಲ್ಲವೆ ಇತರ ಪಂಡಿತರ ಕೃತಿ ಎಂದು ಯಾವೊಬ್ಬ ಕಲಾಕಾರನಿಗೆ ತೋರಿಸಿದರೆ, ಅದನ್ನು ಅಲ್ಲಗಳೆಯುವಷ್ಟು ಎದೆಗಾರಿಕೆಯನ್ನು ಆತ ತೋರಿಸಲಾರ! ಕೇಶರಾಶಿಯನ್ನು ಎತ್ತರಕ್ಕೆ ಮುಡಿಯಾಗಿ ಕಟ್ಟಿ ಅದಕ್ಕೆ ನವಿಲುಗರಿಯೊಂದಿಗೆ ಹೂವೊಂದನ್ನು ಸಿಕ್ಕಿಸಲಾಗಿದೆ. ಹಣೆಯಲ್ಲಿ ಎದ್ದು ಕಾಣುವ ನಾಮ. ಒಂಟಿ ಕಾಲಿನ ಮೇಲೆ ನಿಂತು ಇನ್ನೊಂದು ಕಾಲನ್ನು ಎತ್ತಿರುವುದರಿಂದ ನರ್ತಿಸುವ ಭಾವ ವ್ಯಕ್ತಪಟ್ಟಿದೆ. ಕೊಳಲು ನುಡಿಸುವುದರಲ್ಲಿ ಶ್ರೀಕೃಷ್ಣ ಮೈಮರೆತಿದ್ದಾನೆ. ಇದೇ ಅಲಂಕಾರದಲ್ಲಿ, ಆದರೆ ನೀಲಿಯ ಬದಲಾಗಿ ತಿಳಿಮೈಬಣ್ಣ ಹೊಂದಿರುವ ಬಲರಾಮನು ಹತ್ತಿರದ ಬಂಡೆಯೊಂದರ ಮೇಲೆ ಕುಳಿತು ವೇಣುವಾದನವನ್ನು ಆಲಿಸುವುದರಲ್ಲಿ ಮೈಮರೆತಿದ್ದಾನೆ. ಅವನ ಕೈಯಲ್ಲೊಂದು ಹೂವು. ಇನ್ನಿಬ್ಬರು ಗೋಪಾಲಕರು ತಲೆಯ ಮೇಲಿಂದ ಕಂಬಳಿ ಇಳಿಬಿಟ್ಟುಕೊಂಡು ಸಂಗೀತಕ್ಕೆ ಮನಸೋತಿದ್ದಾರೆ. ಆಚೆ-ಈಚೆ ಇನ್ನೂ ನಾಲ್ವರು ಸಂಗಡಿಗರು ಕುಳಿತಲ್ಲೆ ಮೈಮರೆತಿದ್ದಾರೆ. ಗೋಪಿಕಾವಸ್ತ್ರ ಹರಣ, ರಾಸಕ್ರೀಡೆ, ಕಾಳಿಂಗಮರ್ದನ, ಸಮುದ್ರಮಥನ ಮುಂತಾದ ಚಿತ್ರಗಳು ಇಂದಿಗೂ ತಮ್ಮತನವನ್ನು ಉಳಿಸಿಕೊಂಡಿವೆ.

ಸಾಮಾಜಿಕ

ಅಪ್ಸರೆಯರ ಲೋಕದಲ್ಲಿ ವಿಹರಿಸುವ ಕಲಾಕಾರನು ಅಂದಿನ ಜನಸಾಮಾನ್ಯರನ್ನು ಮರೆತಿಲ್ಲ. ಅವಕಾಶ ಸಿಕ್ಕಲ್ಲಿ ಅವರನ್ನು ಸೇರಿಸಿದ್ದಾನೆ. 'ಕೃಷ್ಣಲೀಲಾ' ಚಿತ್ರದ ಚೌಕಟ್ಟಿನ ಕೆಳಭಾಗದಲ್ಲಿರುವ ವೃಂದಾವನಕ್ಕೆ ಕೈಮುಗಿದು ಸ್ತ್ರೀಪುರುಷರು ನಿಂತಿದ್ದಾರೆ. ನವರಂಗದ ಮಾಡನ್ನು ಎತ್ತಿಹಿಡಿದ ಕಂಬ, ಜಂತೆಗಳನ್ನೆಲ್ಲ ಜನಸಾಮಾನ್ಯರ ಚಿತ್ರಗಳಿಂದ ಕಿಕ್ಕಿರಿಯುವಂತೆ ತುಂಬಿಸಿದ್ದಾರೆ. ದೇವಾಧಿದೇವತೆಗಳು ರಥಗಳಲ್ಲಿ ಹೊರಟಾಗ, ಅವರ ದರ್ಶನ ಪಡೆದು ಕೃತಾರ್ಥರಾಗುವವರೆಲ್ಲ ಜನಸಾಮಾನ್ಯರೆ! ನೈಋತ್ಯಕ್ಕೆ ಇರುವ ಚಿತ್ರಪಟ್ಟಿಕೆಯಲ್ಲಿ ಹೆಂಗಳೆಯರು ದೇವದರ್ಶನಕ್ಕೆ ಕಾದು ನಿಂತಿದ್ದಾರೆ. ಪ್ರತಿಯೊಬ್ಬಾಕೆಯ ಸೀರೆ, ಉದ್ದತೋಳಿನ ರವಿಕೆಗಳ ವರ್ಣ, ನಕ್ಷೆಗಳು ತೀರ ಭಿನ್ನವಾಗಿವೆ. ಮೂವರು ತಾಯಂದಿರು ಮಕ್ಕಳನ್ನು ಕರೆತಂದದ್ದಕ್ಕೆ ಪರಿತಪಿಸಿ, ಸಂತೈಸಿ ರಮಿಸುವ ಯತ್ನದಲ್ಲಿದ್ದಾರೆ. 'ವಿಶ್ವರೂಪಿ'ಯ ಮೇಲೆ ಇರುವ ಜಂತೆಯ ಮೇಲೆ ಪ್ರತಿಷ್ಠಿತ ನಾಗರಿಕನೊಬ್ಬನು ಹೊರಟಾಗ, ಇನ್ನಿತರರು ಕೈಮುಗಿದು ಆದರದ ಸ್ವಾಗತ ನೀಡಿದ್ದಾರೆ. ಗೌರವಾನ್ವಿತನು ಮೊಣಕಾಲುದ್ದದ ನಿಲುವಂಗಿ ತೊಟ್ಟು, ಧೋತರ ಉಟ್ಟು, ನಕ್ಷೆಗಳಿರುವ ಶಾಲನ್ನು ಹೊದ್ದು, ಕೈಯಲ್ಲಿರುವ ಹೂವನ್ನು ಮೂಸುತ್ತಿದ್ದಾನೆ. ಬಲಗಡೆಗೆ ಪತ್ನಿಯಿದ್ದಾಳೆ. ಇನ್ನಿತರರ ನಿಲುವಂಗಿಗಳು ವಿವಿಧ ವರ್ಣಗಳ ನಕ್ಷೆಗಳಿಂದ ಕೂಡಿವೆ. ತಲೆಗೆ ಸುತ್ತಿದ ರುಮಾಲುಗಳ ವೈಶಿಷ್ಟ್ಯ ಪೇಶ್ವೆಯರ ಭಾವಚಿತ್ರಗಳನ್ನು ನೆನಪಿಗೆ ತರುತ್ತವೆ. ಪ್ರತಿಯೊಬ್ಬನ ಪತ್ನಿಯೂ ಮೈತುಂಬ ಆಭರಣಗಳನ್ನು ತೊಟ್ಟು ಉತ್ತಮ ಪೋಷಾಕಿನಲ್ಲಿರುವುದರಿಂದ ಅವರೆಲ್ಲ ಸ್ಥಿತಿವಂತರೆಂಬ ಭಾವನೆ ಮೂಡುತ್ತದೆ.

ದಕ್ಷಿಣಕ್ಕಿರುವ ಚಿತ್ರಪಟ್ಟಿಕೆಯಲ್ಲಿ ಬ್ರಾಹ್ಮಣ ದಂಪತಿಗಳು ಇಷ್ಟದೇವತೆಯನ್ನು ಕೈಮುಗಿದು ಸ್ವಾಗತಿಸುತ್ತಿದ್ದಾರೆ. ಕೆಲವರ ಕೈಯಲ್ಲಿ ಫಲ-ಪುಷ್ಪಗಳ ಪಾತ್ರೆಗಳಿವೆ. ಗಡ್ಡ ಬೆಳೆಯಿಸಿ, ತಲೆ ಬೋಳಿಸಿ, ಜುಟ್ಟುಬಿಟ್ಟುಕೊಂಡಿರುವ ಇವರೆಲ್ಲ ಪುರೋಹಿತ ವರ್ಗದವರಿರಬೇಕು. ಇವರ ಪತ್ನಿಯರು ಎತ್ತರಿಸಿ ಸೀರೆಯುಟ್ಟಿದ್ದರೂ ಕುಪ್ಪಸ ತೊಟ್ಟಿಲ್ಲ. ಕೆಲವರೊಡನೆ ಇಬ್ಬರು ಹೆಂಗಳೆಯರಿರುವುದರಿಂದ ದ್ವಿಪತ್ನಿಕರಿರಬಹುದು. ಇನ್ನೊಂದು ಪಟ್ಟಿಯಲ್ಲಿ ಕನ್ಯಾದಾನದ ದ್ಯೋತಕವಾಗಿ ಧಾರೆಯೆರೆಯುವುದನ್ನು ಚಿತ್ರಿಸಲಾಗಿದೆ. ನಡುವಿನ ಜಂತೆಯೊಂದರ ಮೇಲೆ ಸಹಗಮನಕ್ಕೆ ಹೊರಟ ಗೃಹಿಣಿಯನ್ನು ಹಿಂಬಾಲಿಸಿ ಏಳು ಇತರ ಹೆಂಗಳೆಯರೂ ಹೊರಟಿದ್ದಾರೆ. ಅವರೆಲ್ಲ ವಿಧವೆಯರು ಅಥವಾ ಹೆಚ್ಚು ವಯಸ್ಸಾದವರು ಇರಬಹುದೆಂದು ತೋರುವುದು. ಇದರ ಹಿಂದಿನ ಚಿತ್ರಪಟ್ಟಿಯಲ್ಲಿ ಇದೇ ಉಡುಪಿನಲ್ಲಿರುವ ಮಹಿಳೆಯೋರ್ವಳು ಸ್ವಾಮಿಯೋರ್ವರನ್ನು ಭಕ್ತಿಯಿಂದ ನಮಿಸುತ್ತಿದ್ದಾಳೆ. ಬಹುಶಃ ತನ್ನ ಸಹಗಮನ ನಿರ್ಧಾರವನ್ನು ಅವರೊಂದಿಗೆ ವಿಮರ್ಶಿಸಿ, ಅಪ್ಪಣೆ, ಆಶೀರ್ವಾದಗಳನ್ನು ಕೋರುತ್ತಿರಬಹುದು. ಇವುಗಳು ದ್ವಿತೀಯ ದರ್ಜೆಯ ಕೃತಿಗಳೆನ್ನಲು, ಅವುಗಳಲ್ಲಿ ಯಾವುದೇ ನಯ, ನಾಜೂಕು ವಿವರಗಳಿಲ್ಲದಿರುವುದೆ ಸಾಕ್ಷಿಯಾಗಿದೆ.

ಇಲ್ಲಿಯ ಮಹಾಭಾರತದ ಯುದ್ಧದ ಚಿತ್ರಗಳು ಮತ್ತು ಮೈಸೂರು ಆಳರಸರ ಕಾಲದ ಯುದ್ಧದ ಚಿತ್ರಗಳಲ್ಲಿ ಸಾಮ್ಯತೆಯಿದೆ. ಮೊದಲನೆಯದರಲ್ಲಿ ರಥಗಳು ಹೆಚ್ಚಾಗಿದ್ದು

ತೋಪುಗಳಿಲ್ಲ. ಆದರೆ ವ್ಯಕ್ತಿಗಳು ಮಾತ್ರ ಏಕಪ್ರಕಾರವಾಗಿದ್ದಾರೆ. ಅಶ್ವ, ಆನೆ, ಒಂಟೆಗಳು ಎರಡರಲ್ಲೂ ಇವೆ. ಎರಡನೆಯದರಲ್ಲಿ ಎಲ್ಲಕ್ಕೂ ಮುಂದೆ ಕಾಲಾಳುಗಳು ಹೊರಟಿದ್ದಾರೆ. ಅವರು ನಿಲುವಂಗಿ ತೊಟ್ಟು, ಸೊಂಟಕ್ಕೆ ಅಂಗವಸ್ತ್ರಗಳನ್ನು ಬಿಗಿದುಕೊಂಡಿದ್ದಾರೆ. ತಲೆಗೆ ರುಮಾಲು ಸುತ್ತಿಕೊಂಡು ಕೈಯಲ್ಲಿ ಭರ್ಚಿಗಳನ್ನು ಹಿಡಿದಿದ್ದಾರೆ. ಇವರನ್ನು ಹಿಂಬಾಲಿಸಿ ಅಶ್ವಾರೋಹಿಗಳು ಹೊರಟಿದ್ದಾರೆ. ವಿಜಯನಗರ ಕಾಲದಲ್ಲಿ ಜನಪ್ರಿಯವಾಗಿದ್ದ ಕುಲಾಯಿಗಳನ್ನು ಹೋಲುವಂತಹ ಟೋಪಿಗಳನ್ನು ಧರಿಸಿದ್ದಾರೆ. ಅವರ ಹಿಂದೆ ಪತಾಕೆ ಹಾರಿಸುವವರ ಜೊತೆಯಲ್ಲಿ ನಗಾರಿ, ಕಹಳೆ, ಕೊಂಬು, ತುತೂರಿಗಳಂತಹ ಕದನವಾದ್ಯಗಳನ್ನು ನುಡಿಸುವವರು ಹೊರಟಿದ್ದಾರೆ. ನಾಯಕರು, ಸೇನಾನಾಯಕರು ಆನೆಗಳ ಮೇಲಿನ ಅಂಬಾರಿಗಳಲ್ಲಿ ಹೊರಟಿದ್ದಾರೆ. ಅಂಗರಕ್ಷಕನು ಧ್ವಜವನ್ನು ಹಾರಿಸುತ್ತ, ವೈರಿಗಳನ್ನು ಮುನ್ನೆಚ್ಚರಿಸುತ್ತ ಹೋಗುತ್ತಿದ್ದಾನೆ.

ಮಹಾದ್ವಾರದ ಅಂಗಳದ ಸುತ್ತಲೂ ಜಂತೆಯ ಮೇಲಿರುವ ಯುದ್ಧ ಚಿತ್ರಗಳನ್ನು ನೋಡಿದಾಗ, ಶ್ರೀರಂಗಪಟ್ಟಣದ ಅರಮನೆಯ ವರ್ಣಚಿತ್ರಗಳು ನೆನಪಿಗೆ ಬರುತ್ತವೆ. ಮೊಣಕಾಲುದ್ದದ ಚೊಣ್ಣ ಧರಿಸಿ, ಬಾಯೋನೆಟ್ ಜೋಡಿಸಿದ ಬಂದೂಕಗಳನ್ನು ಹಿಡಿದಿರುವ ಸೈನಿಕರು, ಪಾಶ್ಚಾತ್ಯ ಪ್ರಭಾವಕ್ಕೆ ಒಳಪಟ್ಟಿರುವವರಂತೆ ತೋರುತ್ತಾರೆ. ರುಮಾಲು ಸುತ್ತಿ, ನಿಲುವಂಗಿ ಧರಿಸಿ, ಚಪ್ಪಲಿಗಳನ್ನು ಮೆಟ್ಟಿದ್ದಾರೆ. ಭಾರವಾದ ತುಪಾಕಿಗಳನ್ನು ನಾಲ್ಕು ಚಕ್ರಗಳ ಗಾಡಿಗೆ ಸೇರಿಸಿದ್ದು, ಆರು ಎತ್ತುಗಳಿಂದಲೂ ಅದನ್ನು ಎಳೆಯಲಾಗದಿದ್ದಾಗ ಚಾಲಕನು ಅವನ್ನು ಹೊಡೆದು ಶಿಕ್ಷಿಸುತ್ತಿದ್ದಾನೆ. ಆನೆಯೊಂದು ಹಿಂದಿನಿಂದ ನೂಕಲಾರಂಭಿಸಿದೆ. ಇನ್ನೊಂದು ಇಂತಹದೆ ಸಂದರ್ಭದಲ್ಲಿ ಆನೆಯು, ಇಳಿಜಾರಾದ ಸ್ಥಳದಲ್ಲಿ ಗಾಡಿಯು ಹಿಂದಕ್ಕೆ ಜಾರದಂತೆ ಅಡ್ಡಗಟ್ಟಿ ನಿಂತು ಸೊಂಡಿಲಿನಿಂದ ಮುಂದೂಡುತ್ತಿದೆ. ಇದಕ್ಕೆ ನಾಲ್ಕೇ ಎತ್ತುಗಳನ್ನು ಹೂಡಲಾಗಿದೆ. ಕುದುರೆ, ಆನೆಗಳೊಂದಿಗೆ ಒಂಟೆಸವಾರರೂ ಹೊರಟಿದ್ದಾರೆ. ಇನ್ನೊಂದು ದೃಶ್ಯದಲ್ಲಿ, ಯುದ್ಧದ ಮೈದಾನದಲ್ಲಿ ಡೇರೆಯೊಂದರ ಸುತ್ತಲೂ ಜನ ಬಂದು ಹೋಗುವುದನ್ನು ತೋರಿಸಲಾಗಿದೆ. ಬಹುಶಃ ಅತ್ಯುಚ್ಚ ಅಧಿಕಾರಿಗಳು ಅದರಲ್ಲಿ ಬೀಡುಬಿಟ್ಟಿರಬಹುದು. ಇನ್ನೊಂದೆಡೆ ನಾಲ್ಕು ಕಾಲಾಳುಗಳು ಹೊತ್ತಿರುವ ಮೇಣೆಯಲ್ಲಿ ಸೇನಾಧಿಪತಿ ಹೊರಟಿದ್ದಾನೆ. ಮೇಣೆಯ ಆಶ್ರಯದಲ್ಲಿ ಮೂವರು ಕುಳ್ಳರು ಜೊತೆಯಲ್ಲಿ ಇರುವ ಸನ್ನಿವೇಶವು ವೀರಗಲ್ಲುಗಳಲ್ಲಿ ನಾಯಕನು ಯುದ್ಧಕ್ಕೆ ಹೊರಟ ಸಂದರ್ಭವನ್ನು ನೆನಪಿಗೆ ತರುತ್ತದೆ.

ಮಹಾದ್ವಾರದ ಮುರಳೀಕೃಷ್ಣನ* ಚೌಕಟ್ಟು ಅಂದಿನ ಗ್ರಾಮಜೀವನದ ಪ್ರತಿಬಿಂಬದಂತೆ ಇದೆ. ಈಡಿಗನು ಈಚಲಮರವನ್ನೇರಿ ಹೆಂಡ ಇಳಿಸುತ್ತಿದ್ದಾನೆ. (ಅವನು

---

* Annual Report of the Mysore Aerchaeological Department for the year-1945 ರಲ್ಲಿ ಇದನ್ನು ಗೋವರ್ಧನಗಿರಿ ಎಂದು ಕರೆಯಲಾಗಿದೆ, ತನ್ನ ಜನರನ್ನು, ದನ-ಕರುಗಳನ್ನು ವರುಣನ ಕೋಪದಿಂದ ಸಂರಕ್ಷಿಸಲು ಗೋವರ್ಧನಗಿರಿಯನ್ನು ಕಿರುಬೆರಳಿನಿಂದ ಎತ್ತಿದ ಸನ್ನಿವೇಶವನ್ನು ಸಾಮಾನ್ಯವಾಗಿ ಮೇಲಿನ ಹೆಸರಿನಿಂದ ಗುರುತಿಸಲಾಗುತ್ತದೆ. ಆದರೆ ಇಲ್ಲಿ ಈ ದೃಶ್ಯವನ್ನು ಚಿತ್ರಿಸಿಲ್ಲವಾದ್ದರಿಂದ, ಇದಕ್ಕೆ ಮುರಳೀಕೃಷ್ಣನ ಚೌಕಟ್ಟು ಎಂದರೆ ಹೆಚ್ಚು ಸಮಂಜಸವೆನಿಸುತ್ತದೆ.


ತನ್ನ ನಡು ಮತ್ತು ಮರಗಳ ನಡುವೆ ಒಂದು ಹಗ್ಗವನ್ನು ಹಾಯಿಸಿ, ಇನ್ನೊಂದು ಹುರಿಯನ್ನು ಕಾಲುಗಳಿಂದ ಮರ ಹಿಡಿಯುವುದಕ್ಕಾಗಿ ಬಳಸಿ, ಮರವನ್ನು ಹತ್ತಿ ತಾತ್ಪೂರ್ತಿಕವಾಗಿ ಒಂದೆಡೆ ಊರಿನಿಲ್ಲಲು ಇರುವುದಕ್ಕಾಗಿ ಸಹಾಯ ಪಡೆದಿದ್ದಾನೆ. ಕರಾವಳಿಯಲ್ಲಿ ತೆಂಗಿನಮರ ಹತ್ತುವವರು ಇಂತಹ ಹಗ್ಗದ ಜೋಡನ್ನು ಇಂದಿಗೂ ಬಳಸುತ್ತಾರೆ). ತುಂಡುಸೀರೆಯುಟ್ಟ ಯುವತಿಯೋರ್ವಳು ಮಣ್ಣಿನ ಕೊಡದಲ್ಲಿರುವ ಹೆಂಡವನ್ನು ತಲೆಯ ಮೇಲೆ ಹೊತ್ತು ಹೊರಟಿದ್ದಾಳೆ. ತಲೆಗೆ ರುಮಾಲು, ಕಿರಿದಾದ ಪಂಚೆಯನ್ನು ತೊಟ್ಟ ಪುರುಷನು ಹೆಂಡವನ್ನು ಕತ್ತೆಯ ಬೆನ್ನಮೇಲಿರುವ ಚರ್ಮದ ಚೀಲಕ್ಕೆ ಸುರಿಯುತ್ತಿದ್ದಾನೆ. ಹಳ್ಳಿಗನೊಬ್ಬ ಕೊಡಲಿಯನ್ನು ಹೆಗಲಿಗೇರಿಸಿ ಕಾಡಿಗೆ ಹೊರಟಿದ್ದಾನೆ. ಅವನು ಸುತ್ತಿಕೊಂಡ ರುಮಾಲು ಹಣೆಯ ಮೇಲಿನ ಅಡ್ಡನಾಮ, ಉಟ್ಟಿರುವ ಪಂಚೆಗಳು ಮಹಾರಾಷ್ಟ್ರದ ವೇಷ-ಭೂಷಣಗಳನ್ನು ನೆನಪಿಗೆ ತರುವಂತಹವು. ಪಾದಗಳಿಗೆ ಮೆಟ್ಟನ್ನು ಧರಿಸಿದ್ದಾನೆ. ಇದೇ ವೇಷದ ಇನ್ನೊಬ್ಬ ವ್ಯಕ್ತಿ ಕೊಡಲಿಯಿಂದ ಮರ ಕಡಿಯುತ್ತಿದ್ದಾನೆ. ಮೈಮೇಲೆ ಒಂದು ಗೊಂಗಡಿ ಹೊತ್ತ ಗೋವಳಿಗನು ಹೆಗಲ ಮೇಲಿನ ಕಾವಡಿಯಲ್ಲಿ ಹಾಲು ಮೊಸರಿನ ಗಡಿಗೆಗಳನ್ನು ಸಾಗಿಸುತ್ತಿದ್ದರೆ, ಸಮೀಪದಲ್ಲಿಯೆ ತಲೆಯ ಮೇಲೆ ಗಡಿಗೆ ಹೊತ್ತ ಗವಳಗಿತ್ತಿಯು ಪಾತ್ರೆಯಿಂದ ಊರವನಿಗೆ ಹಾಲು ಮಾರುತ್ತಿದ್ದಾಳೆ. ತಲೆ ಸೊಂಟಗಳ ಮೇಲೆ ಬಿಂದಿಗೆಗಳನ್ನು ಇಟ್ಟುಕೊಂಡು ನೀರು ತರಲು ಹೊರಟ ಮೂವರು ಗೃಹಿಣಿಯರು, ತಮ್ಮ ಕೆಲಸಗಳನ್ನು ಮರೆತು ಹರಟೆಯಲ್ಲಿ ಮೈಮರೆತಿದ್ದಾರೆ. ಒಬ್ಬಳು ತನ್ನ ಜೊತೆಗೆ ಮಗುವನ್ನೂ ಕರೆತಂದಿದ್ದಾಳೆ.

ಭರ್ಚಿ ಹಿಡಿದು ಬೇಟೆ ನಡೆಸಿರುವ ಈರ್ವರ ಪೋಷಾಕುಗಳು ಅಪರೂಪದವು. ಅವರ ಟೋಪಿಗಳು ಅರ್ಧವರ್ತುಲಾಕಾರದಲ್ಲಿದ್ದು, ಅವು ತಲೆಗೆ ಬಿಗಿಯಾಗಿ ಹೊಂದಿಕೊಳ್ಳುವಂತಹವಾಗಿವೆ. (ಇಂದಿಗೂ ಕರಾವಳಿಯ ನವಾಯತ ದಾರ್ಜಿಗಳು ಇಂತಹವನ್ನು ಬಳಸುತ್ತಾರೆ) ಅವರು ಮುಂಡು, ಧೋತರಗಳನ್ನು ಉಡದೆ ತುಂಡು ಪಂಚೆಗಳನ್ನು ಬಿಗಿಯಾಗಿ ಧರಿಸಿದ್ದಾರೆ. ಪೇಟ ಧರಿಸಿದ ಸೈನ್ಯಾಧಿಕಾರಿಯೋರ್ವನು ತನ್ನ ಎಡಗೈಯಲ್ಲಿರುವ ಭರ್ಚಿಯಿಂದ ಕಾಡುಹಂದಿಯ ಮೇಲೆ ಆಕ್ರಮಣ ನಡೆಸಿದರೆ, ಬಲಗೈಯಲ್ಲಿಯ ಖಡ್ಗದಿಂದ ಹುಲಿಯೊಂದಿಗೆ ಹೋರಾಟ ನಡೆಸಿದ್ದಾನೆ. ಇನ್ನೊಂದು ಕಡೆಗೆ ಬಂದೂಕಧಾರಿಯೋರ್ವನು ಹುಲಿಶಿಕಾರಿಗೆಂದು ಸಿದ್ಧನಾಗಿ ಕುಳಿತಿದ್ದಾನೆ. ಆ ಕಾಡಿನ ಬೆಟ್ಟದ ಶಿಖರದಲ್ಲಿ ಮೂವರು ಯೋಗಿಗಳು ಸುತ್ತಮುತ್ತಲು ನಡೆದ ಜೀವಿಗಳ ವ್ಯಾಪಾರದ ಬಗೆಗೆ ತಲೆಕೆಡಿಸಿಕೊಳ್ಳದೆ 'ಮೋಕ್ಷ'ದ ಬಗೆಗೆ ವಿಚಾರವಿನಿಮಯ ನಡೆಸಿದಂತಿದೆ.

ನೈಸರ್ಗಿಕ

ಅವಕಾಶ ಸಿಕ್ಕಲ್ಲೆಲ್ಲ ಕಲಾಕಾರನು ನಿಸರ್ಗದ ಬಗೆಗೆ ತನ್ನ ಆಳವಾದ ತಿಳಿವಳಿಕೆ ಮತ್ತು ಒಲವುಗಳನ್ನು ಭಿತ್ತಿಚಿತ್ರಗಳಲ್ಲಿ ವ್ಯಕ್ತಪಡಿಸಲು ಯತ್ನಿಸಿದ್ದಾನೆ. ಎರಡು ಚೌಕೋನಗಳ ನಡುವಿನ ಸ್ಥಳಗಳನ್ನು ಎಲೆ, ಬಳ್ಳಿ, ಹೂ ಮೊಗ್ಗುಗಳಿಂದ ಚಿತ್ರಗಳಿಗೆ ಚೌಕಟ್ಟು ಹಾಕಿದಂತೆ ಸಿಂಗರಿಸಲಾಗಿದೆ. ಬರಿದಾಗಿ ಕಾಣುವ ಕಮಾನು, ಪೀಠ, ರಥಗಳನ್ನು ಇಂತಹ ನಕ್ಷೆಗಳಿಂದ

ತುಂಬಲಾಗಿದೆ. ಮುಚ್ಚಿಗೆಯ ಜಂತೆಗಳನ್ನು ವಿಸ್ತಾರವಾದ ಹೂ-ಪರ್ಣಗಳ ನಕ್ಷೆಗಳಿಂದ ತುಂಬಿತುಳುಕಿಸಲಾಗಿದೆ. ಇವುಗಳಿಗೆ ಅತ್ಯಂತ ಸಾಮ್ಯವಿರುವ ನಕ್ಷೆಗಳನ್ನು ಮೈಸೂರಿನ ಕೋಟೆಯಲ್ಲಿ ಇರುವ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನದ ಮುಖಮಂಟಪದ ಮಾಡಿನಲ್ಲಿ ಕಾಣಬಹುದು. ಅವುಗಳಿಗಿರುವ ವ್ಯತ್ಯಾಸವೆಂದರೆ, ಸೀಬಿಯಲ್ಲಿ ಯಾವ ಕಾವಲು, ರಕ್ಷಣೆಗಳಿಲ್ಲದೆ ವಾತಾವರಣದ ಪ್ರಕೋಪಕ್ಕೆ ಆಹುತಿಯಾಗಿ ಅವು ಮಾಸಿಹೋಗಿದ್ದರೆ, ಮೈಸೂರಿನವು ಅರಮನೆಯ ಆಶ್ರಯದಲ್ಲಿ ಬಂದೂಕಧಾರಿ ಸಿಪಾಯಿಗಳಿಂದ ಕಾವಲು ಪಡೆದು, ಹಲವಾರು ಬಾಗಿಲುಗಳಿಂದ ಗಾಳಿ-ಬಿಸಿಲಿನ ಸಂರಕ್ಷಣೆ ಪಡೆದು, ವಾರ್ನಿಷ್‌ಲೇಪನದಿಂದ ಮಿನುಗುತ್ತ ಅಚ್ಚಳಿಯದೆ ಉಳಿದುಕೊಂಡಿವೆ.







ಸಿಬಿಯ ಭಿತ್ತಿ ಚಿತ್ರಗಳು (ಲೇಖನ : ೩)







ಸೀಬಿಯ ಭಿತ್ತಿ ಚಿತ್ರಗಳು








ಸೀಬಿಯ ಭಿತ್ತಿ ಚಿತ್ರಗಳು







ಸೀಬಿಯ ಭಿತ್ತಿ ಚಿತ್ರಗಳು



ಸೀಬಿಯ ಭಿತ್ತಿ ಚಿತ್ರಗಳು



ಅಗಲವಾದ ಜಂತೆಗಳಲ್ಲಿರುವ ಚಿತ್ರಗಳನ್ನು ಹತ್ತಾರು ಲಂಬವರ್ತುಲಗಳಲ್ಲಿ ವಿಂಗಡಿಸಿ, ಪ್ರತಿಯೊಂದನ್ನು ಬೇರೊಂದಕ್ಕಿಂತ ಭಿನ್ನವಾಗಿ ಅಲಂಕರಿಸಿದ್ದಾರೆ. ಕೆಳ ಭಾಗದಲ್ಲಿರುವ ಕುಂಡಗಳಿಂದ ಹೂ-ಬಳ್ಳಿಗಳನ್ನು ಹೊರಡಿಸಲಾಗಿದೆ. ಅಲ್ಲಲ್ಲಿ ಅವುಗಳ ಮೊಗ್ಗು-ಹೂಗಳು ಅರಳಿವೆ. ಅಲ್ಲೊಂದು ಇಲ್ಲೊಂದು ಗಿಳಿಗಳು ವಿಶ್ರಮಿಸುತ್ತಿವೆ. ವರ್ತುಲಗಳನ್ನೆಲ್ಲ ಗಿಡ-ಬಳ್ಳಿ, ಪಶು-ಪಕ್ಷಿಗಳಿಂದ ತುಂಬಿಸಿದ್ದರೂ ಉತ್ತಮವಾದ ವರ್ಣಸಂಯೋಜನೆಯಿಂದಾಗಿ ಅವುಗಳ ಅಂದ-ಚೆಂದಗಳಿಗೆ ಒಂದಿಷ್ಟೂ ವ್ಯತ್ಯಯವಾಗಿಲ್ಲ. ಕಾಯಿ-ಹಣ್ಣುಗಳಿಂದಲೇ ಕೆಲವೆಡೆ ನಕ್ಷೆಗಳನ್ನು ಬಿಡಿಸಲಾಗಿದೆ. ಇವನ್ನು ಗಮನಿಸಿದರೆ, ದಿಲ್ಲಿ-ಆಗ್ರಾ ಕೋಟೆಗಳಲ್ಲಿರುವ ಮೊಗಲರ ಕುಸುರಿನ ಕೆಲಸ, ಅಂಬರ್-ಜೈಪುರ ಅರಮನೆಗಳಲ್ಲಿರುವ ರಜಪೂತ ಶೈಲಿಯ ಕಲಾಕೃತಿಗಳು ನೆನಪಿಗೆ ಬರುತ್ತವೆ. ಮಹಾದ್ವಾರದ ಮುಚ್ಚಿಗೆಯಲ್ಲಿಯೂ ಇಂತಹ ಹೂಬಳ್ಳಿಗಳು ಕಾಣಸಿಗುತ್ತವೆ. ಇಲ್ಲಿಯ ಮುರಳೀಕೃಷ್ಣನ ಬೃಹತ್‌ಚಿತ್ರದಲ್ಲಿ ಗೋವರ್ಧನಗಿರಿಯ ಪರಿಸರವನ್ನೆಲ್ಲ ಅನೇಕಾನೇಕ ಗಿಡಮರಗಳಿಂದ ತುಂಬಿಸಲಾಗಿದೆ. ಇವನ್ನು ಪರಿಶೀಲಿಸುವಾಗ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ರಚಿತವಾದ 'ಸೌಗಂಧಿಕಾ ಪರಿಣಯ'ದಲ್ಲಿ ಬರುವ ಇಂತಹ ಚಿತ್ರಗಳ ಹೋಲಿಕೆ ಕಣ್ಣಿಗೆ ಕಟ್ಟಿದಂತಾಗುತ್ತದೆ.

ಪಶು-ಪಕ್ಷಿಗಳ ನಿತ್ಯಬದುಕನ್ನು ಕಲಾಕಾರನು ಸೂಕ್ಷ್ಮವಾಗಿ ಅಭ್ಯಸಿಸಿದ್ದಾನೆಂಬುದಕ್ಕೆ ಕಾಡಿನ ಭಿತ್ತಿಚಿತ್ರವೊಂದೆ ಸಾಕು. ಅದರಲ್ಲಿ ದನಕರುಗಳ ಹಿಂಡು ಮೇಯಲು ಹೊರಟುದೆ. ಹಸಿದ ಗೋವುಗಳು ಹುಲ್ಲನ್ನು ಮೇಯುತ್ತಿದ್ದರೆ, ಗೂಳಿಗಳು ಪ್ರೇಮಿಗಳನ್ನು ಆರಿಸುವಲ್ಲಿ ತೊಡಗಿವೆ. ಗೋ-ಗರತಿಯರು ಮದಭರಿತ ಗಂಡುಗಳತ್ತ ನಿಗಾವಹಿಸಿಯೆ ಆಹಾರ ಸೇವಿಸುತ್ತಿವೆ (ಚಿತ್ರ). ವೃಷಭೇಂದ್ರನೋರ್ವನು ನಲ್ಲೆಯ ಸುವಾಸನೆಯಿಂದ ಅತಿಯಾಗಿ ಆಕರ್ಷಿಸಲ್ಪಟ್ಟು, ಪೃಷ್ಠಭಾಗವನ್ನು ಮೂಸಿ ಮೂಸಿ ಮೆಚ್ಚಿಗೆ ಸೂಸುತ್ತ ನಿಂತಿದ್ದಾನೆ. ಸಂಭೋಗಕ್ರಿಯೆಯಲ್ಲಿ ತೊಡಗಿರುವ ಗೂಳಿ-ಅರಸ ತನ್ನ ಸಾಮರ್ಥ್ಯವನ್ನು ತೋರಿಸುವಲ್ಲಿ ಮಗ್ನವಾಗಿದ್ದರೆ, ಪ್ರೇಯಸಿ ಕಣ್ಣೆವೆಗಳಿಂದಲೆ ನಮ್ರತೆಯನ್ನು ತೋರ್ಪಡಿಸಿದ್ದಾಳೆ. ಎರಡು ಗೂಳಿಗಳು ಒಬ್ಬಳೇ ಗೋ-ಗರತಿಯನ್ನು ಆರಿಸಿಕೊಂಡಿರುವುದರಿಂದ ತಮ್ಮ ಹೋರಾಟದಲ್ಲಿ ವಿಜಯವನ್ನು ಸಾಧಿಸಲು ಪರಸ್ಪರ ತುರುಸಿನ ದ್ವಂದ್ವದಲ್ಲಿ ತೊಡಗಿವೆ. ಕೋಣವೊಂದು ತನ್ನ ಸಹಜಸ್ವಭಾವವಾದ ಜಡತ್ವವನ್ನು ಮರೆತು ಕಾಮನ ಪ್ರಭಾವಕ್ಕೆ ಒಳಗಾಗಿ, ಮಹಿಷಿಯ ಜನನೇಂದ್ರಿಯ ಮೂಸುವದರೊಂದಿಗೆ ತನ್ನ ಪ್ರೇಮವನ್ನು ವ್ಯಕ್ತಪಡಿಸುತ್ತಿದೆ. ಮಹಿಷಿಯು ಒಪ್ಪಿಕೊಳ್ಳಲಾರದೆ, ಒಲ್ಲೆ ಎನ್ನಲಾರದೆ ಮುಂದೇನಾಗುತ್ತದೆಂಬ ಕಾತರತೆಯಿಂದ ಕಾಯುತ್ತಿದೆ. ಕಾಡಿನಲ್ಲಿ ಹುಟ್ಟಿಬೆಳೆದ ಹುಲ್ಲೆಗಳಲ್ಲಿ ಹರಿಣಿಯರನ್ನು ಸುಲಭವಾಗಿ ತಮ್ಮವರನ್ನಾಗಿ ಮಾಡಿಕೊಳ್ಳಲಾಗದೆ ಕಾದಾಟ, ಹೋರಾಟಗಳ ನಂತರವೇ ಪ್ರೇಯಸಿಯನ್ನು ಪಡೆಯಬಹುದೆಂಬ ಕಾಡಿನ ನ್ಯಾಯ, ಇಲ್ಲಿ ನೈಜವಾಗಿ ಚಿತ್ರಿತವಾಗಿದೆ. ಗಂಡು ಚಿಗರೆಯು ಹೆಣ್ಣೊಂದರ ಪ್ರೇಮಯಾಚನೆ ಮಾಡುತ್ತಿರುವಾಗ ಇನ್ನೊಂದು ಅದನ್ನು ತಡೆಯುತ್ತಿವುದರೊಂದಿಗೆ ಕಾದಾಟ ಪ್ರಾರಂಭವಾಗಿದೆ. ಸೋತ ಜಿಂಕೆ ಕಾಲಿಗೆ ಬುದ್ಧಿ ಹೇಳಿದರೆ, ವಿಜಯಶಾಲಿಯು ದರ್ಪದಿಂದ ಹೆಣ್ಣಿನೊಡನೆ ಕಾಮಚೇಷ್ಟೆಯಲ್ಲಿ ತೊಡಗಿದೆ.

ಇಂತಹ ಅವಕಾಶಕ್ಕಾಗಿ ಹೊಂಚುಹಾಕಿ ಕುಳಿತಿರುವ ಹುಲಿರಾಯ, ಒಂಟಿ ಹುಲ್ಲೆಯನ್ನು ಸುಲಭವಾಗಿ ಬೇಟೆಯಾಡಿಬಿಡುತ್ತಾನೆ. ಕಾಡು ಹಂದಿಗೂ ಹುಲಿಯ ಪಂಜಗಳಿಂದ ತಪ್ಪಿಸಿಕೊಳ್ಳುವುದು ಸುಲಭವಲ್ಲ. ಆದರೆ ಸೋಲನ್ನು ಕೂಡಲೆ ಒಪ್ಪಿಕೊಳ್ಳದ್ದರಿಂದ ಬಹಳ ಹೊತ್ತು ಸಾವು-ಬದುಕಿನ ಹೋರಾಟ ನಡೆಯುತ್ತಿದೆ. ಕಲಾಕಾರನು ಈ ಬಗೆಯ ನಿಸರ್ಗದ 'ಆಹಾರ ಸರಪಳಿ' ರೂಪಿಸುವಲ್ಲಿ ಯಶಸ್ವಿಯಾಗಿದ್ದಾನೆ. ಗವಿಯೊಂದರಲ್ಲಿ ಹೆಜ್ಜೇನು ಗೂಡುಕಟ್ಟಿದೆ. ಜೇನು ಕೆಲಸಗಾರ್ತಿಯರು ಹೂವುಗಳಿಂದ ಮಧು ಸಂಗ್ರಹಿಸುವುದಕ್ಕೆಂದು ಹಾರಾಡುತ್ತಲಿದ್ದಾರೆ. ನೆಲಕ್ಕೆ ತುಳುಕಿದ ಜೇನುತುಪ್ಪದ ಆಸೆಯಿಂದ ಕರಡಿಯೊಂದು ಹೊಂಚುಹಾಕಿ ಹತ್ತಿರದಲ್ಲಿಯೇ ಕುಳಿತಿದೆ. ಅನತಿದೂರದಲ್ಲಿ ಆರೂಢವಾಗಿರುವ ಹುಲಿ, ಕರಡಿಯ ಮೇಲೆ ಎರಗಲೋ ಬೇಡವೋ ಎಂದು ನಿರ್ಧರಿಸಲಾಗದೆ ತೊಳಲಾಡುತ್ತಿದೆ. ಬೇರಾವ ಬೇಟೆಯೂ ಕೈಗೆ ಸಿಕ್ಕದಿರುವಾಗ ಹುಲಿಯು ಮರವನ್ನು ಕಡಿಯುವುದರಲ್ಲಿ ಮಗ್ನನಾಗಿರುವ ಮಾನವನನ್ನೇ ಆಹುತಿ ತೆಗೆದುಕೊಳ್ಳುತ್ತಿದೆ. ಮಾನವಭಕ್ಷಕ ಹುಲಿಯನ್ನು ಯಮಸದನಕ್ಕೆ ಕಳಿಸುವುದೊಂದೆ ಮಾರ್ಗವೆಂದು ಬೇಟೆಗಾರನು, ಕೋವಿಯಿಂದ ಗುಂಡಿಕ್ಕಿ ಅದನ್ನು ಕೊಲ್ಲುವುದರಲ್ಲಿ ತೊಡಗಿದ್ದಾನೆ. ಆಡುಗಳನ್ನು ಮೇಯಿಸಲು ನಾಯಿಯೊಂದಿಗೆ ಹೊರಟಿರುವ ಕುರುಬನು ಕಾಡಿನ ಈ ಕ್ರೂರವ್ಯಾಪಾರವನ್ನು ನೋಡುತ್ತ ದಿಙ್ಮೂಢನಾಗಿ ನಿಂತುಬಿಟ್ಟಿದ್ದಾನೆ.

ಬೇಟೆಗಾರರೀರ್ವರು ಕಾಡುಹಂದಿಯೊಂದನ್ನು ಭರ್ಚಿಯಿಂದ ತಿವಿದು ಕೊಲ್ಲುತ್ತಿರುವಾಗಲೆ ಅವರ ನಾಯಿಗಳು ಇನ್ನೊಂದರ ಬೇಟೆಯಲ್ಲಿ ತೊಡಗಿವೆ. ಹಂದಿಯು ತಪ್ಪಿಸಿಕೊಳ್ಳದಂತೆ ಅದರ ಕಾಲನ್ನು ಒಂದು ನಾಯಿಯ ಕಚ್ಚಿ ಹಿಡಿದಿದ್ದರೆ, ಇನ್ನೊಂದು ನಾಯಿಯು ಹಂದಿಯ ಹೋರಾಟದ ಎದೆಗಾರಿಕೆ ಕುಗ್ಗಿಸಲು ಅದರ ವೃಷಣವನ್ನು ತುಂಡರಿಸುವದರಲ್ಲಿ ಮಗ್ನವಾಗಿದೆ. ನಾಯಿಗಾಗಿ ನಿಲ್ಲಿಸಿದ ವೀರಗಲ್ಲುಗಳಲ್ಲಿ (ಕೋಡಿಹಳ್ಳಿ-ಹೊಸಕೋಟೆ) ಇಂತಹದೆ ಸನ್ನಿವೇಶವನ್ನು ಚಿತ್ರಿಸಿರುವ ಪರಿಪಾಠವನ್ನು ಇಲ್ಲಿ ಸ್ಮರಿಸಬಹುದು.

ಕಾಡಿನ ಚಿತ್ರದ ಇನ್ನೊಂದು ಭಾಗದಲ್ಲಿ ಸೈನ್ಯಾಧಿಕಾರಿಯ ಸಾಹಸಕಾರ್ಯ ಸೊಗಸಾಗಿ ಚಿತ್ರಿತವಾಗಿದೆ. ಬಲಗಾಲಿಗೆ ಸುತ್ತಿಕೊಂಡ ನಾಗರಹಾವಿನ ಹೆಡೆಯನ್ನು ಅವನು ಎಡಗಾಲಿನಿಂದ ತುಳಿದು ನಿಂತಿದ್ದಾನೆ. ಕಾಡುಹಂದಿಯ ಶಿಕಾರಿಯಲ್ಲಿ ತೊಡಗಿರುವಾಗಲೆ ಹುಲಿಯು ಹಲ್ಲೆ ನಡೆಸಿರುವುದರಿಂದ, ತನ್ನ ಎಡಗೈಯಲ್ಲಿರುವ ಭರ್ಚಿಯಿಂದ ಹಂದಿಯನ್ನು ತಿವಿಯುತ್ತಿರುವಂತೆಯೇ ಬಲಗೈಯಲ್ಲಿಯ ಖಡ್ಗದಿಂದ ಹುಲಿಯೊಡನೆ ಸೆಣಸಾಟ ನಡೆಸಿದ್ದಾನೆ. ಸಿಂಹಕ್ಕಿಂತಲೂ ಶಕ್ತಿಯುತವಾದದ್ದೆಂದು ಪರಿಗಣಿಸಲಾಗುವ ಶರಭವು, ಆನೆಯೊಂದರ ಮೇಲೆ ಎರಗಿದಾಗ, ಹಿಂಡಿನಲ್ಲಿದ್ದ ಉಳಿದ ಕಾಡಾನೆಗಳು ಘೀಳಿಟ್ಟು ಪಲಾಯನ ಮಾಡುತ್ತಲಿವೆ. ಈ ರುದ್ರದೃಶ್ಯ ಕಂಡ ಹಕ್ಕಿಗಳು, ಚೀರುತ್ತ ಮರಿಗಳನ್ನು ಎಚ್ಚರಿಸುತ್ತ ಹಾರುತ್ತಿವೆ. ಕೋತಿಗಳು ತಮ್ಮ ಕುಟುಂಬದ ಸದಸ್ಯರಿಗೆಲ್ಲ ಮುನ್ನೆಚ್ಚರಿಕೆ ಕೊಡುತ್ತ ಗುಡ್ಡಬೆಟ್ಟಗಳನ್ನು ಏರುತ್ತಲಿವೆ. ಬೆದರಿದ ಇಣಚಿಗಳು ಗಿಡಮರಗಳನ್ನು ತ್ವರೆಯಿಂದ ಏರುತ್ತಿವೆ.

ಕಾಡಿನ ಮೃಗಸಮೂಹದಲ್ಲಿ ಓಡುತ್ತಿರುವ ಕಸ್ತೂರಿಮೃಗವನ್ನೂ ಸೇರಿಸಲಾಗಿದೆ. ನೀರಿನ ಕೊಳದ ಬಳಿಯಲ್ಲಿ ನವಿಲುಗಳ ಸಮೂಹ ವಿಚಾರವಿನಿಮಯಕ್ಕಾಗಿ ಸೇರಿದಂತಿದೆ. ಅನತಿದೂರದಲ್ಲಿ ಉಡದ ಆಕಾರದ ಓತಿಕ್ಯಾತಗಳು ಒಂದಿಷ್ಟೂ ಮಿಸುಕಾಡದೇ ಕುಳಿತಿವೆ. ಗಿಡಗಳ ಮೇಲಿರುವ ಗಿಳಿಗಳು ಹಣ್ಣುಗಳ ಭಕ್ಷಣೆಯಲ್ಲಿ ತೊಡಗಿದ್ದರೆ, ಪಾರಿವಾಳ ದಂಪತಿಗಳು ಪ್ರೇಮಾಲಾಪದಲ್ಲಿ ಮೈಮರೆತಿವೆ. ಊರಿನ ಕೆರೆಯೊಂದರಲ್ಲಿ ಮೀನುಗಳು, ಆಮೆಗಳು ಯಥೇಚ್ಛವಾಗಿ ಈಜಾಡುತ್ತಿವೆ. ಹಾವುಗಳು ಅಲ್ಲಿ ಇಲ್ಲಿ ನುಸುಳಿಕೊಂಡಿವೆ. ಗುಡಿಸಲುಗಳ ಸಮೂಹದಲ್ಲಿ ಇಲಿಗಳು ಓಡಾಡಿಕೊಂಡು ತಮ್ಮ ರಾಜ್ಯದ ಸುರಕ್ಷತೆಯನ್ನು ಕಾಯ್ದಿಟ್ಟುಕೊಳ್ಳುವುದರಲ್ಲಿ ತೊಡಗಿವೆ. ದೊಡ್ಡಿಯಲ್ಲಿ ದನಕರುಗಳು ಮೇಯುತ್ತ ಹಾಯಾಗಿ ನಿಂತಿವೆ.

ಕಲಾಕಾರನು ಪ್ರಾಣಿಸಮೂಹದ ಬಗೆಗಿನ ತನ್ನ ಪ್ರೀತಿಯನ್ನು ಇನ್ನಿತರ ಚಿತ್ರಗಳಲ್ಲಿಯೂ ಸೂರೆ ಮಾಡಿದ್ದಾನೆ. ಸಮುದ್ರಮಥನ ಚಿತ್ರದಲ್ಲಿ ದೇವ ದಾನವರ ಎಳೆದಾಟದಿಂದ ಬಡಕಲಾದ ಘಟಸರ್ಪ, ಪರ್ವತವನ್ನು ಎತ್ತಿಹಿಡಿದ ಆಮೆ (ಕೂರ್ಮಾವತಾರ?) ಹಾಗೂ ಸಮುದ್ರದಲ್ಲಿ ಜೀವಿಸುವ ಅನೇಕ ಪ್ರಾಣಿಗಳನ್ನು ಚಿತ್ರಿಸಲಾಗಿದೆ. ಗಜೇಂದ್ರಮೋಕ್ಷದ ಚಿತ್ರದಲ್ಲಿ ನೀರಿನಲ್ಲಿಯ ಮೊಸಳೆಯು ಆನೆಯ ಕಾಲುಗಳನ್ನು ಹರಿತವಾದ ಹಲ್ಲುಗಳಿಂದ ಕಚ್ಚಿ ಹಿಡಿದಿರುವುದರಿಂದ ನೋವು ತಾಳಲಾರದೆ ಅದು ಘೀಳಿಡುತ್ತಿದೆ. ಅವುಗಳ ಸುತ್ತಮುತ್ತಲಿನ ಪಶು-ಪಕ್ಷಿಗಳನ್ನು ನೈಜವಾಗಿ ಚಿತ್ರಿಸಲಾಗಿದೆ. ಹೆಂಡ ಹೊತ್ತಿರುವ ಕತ್ತೆ, ಹೆಂಡಕ್ಕಾಗಿ ಆಸೆಪಟ್ಟು ಗಿಡವೇರಿರುವ ನರಿ, ಹಸಿದಿರುವ ತೋಳ, ಮಧುವನ್ನು ಹೀರುವ ಪಾತರಗಿತ್ತಿಗಳೂ ಸಹಜವಾಗಿ ಚಿತ್ರಿತವಾಗಿವೆ. ದೇವ-ದೇವತೆಗಳ ರಥಗಳನ್ನು ಎಳೆಯುವ ಕುದುರೆಗಳು, ತೋಪುಗಳನ್ನು ಎಳೆಯುವ ಎತ್ತುಗಳು, ಅಂಬಾರಿಯಲ್ಲಿ ಅಧಿಕಾರಿಗಳನ್ನು ಹೊತ್ತ ಆನೆಗಳು, ಯುದ್ಧಕ್ಕೆ ಹೊರಟ ಒಂಟೆಗಳು, ರಾಕ್ಷಸರ ಸೇವೆಯಲ್ಲಿ ತೊಡಗಿರುವ ಇನ್ನಿತರ ಪ್ರಾಣಿಗಳು, ಯಾವುವೇ ಇರಲಿ, ಕಲಾಕಾರನು ಯಾವ ಭೇದಭಾವವಿಲ್ಲದೆ ಅವುಗಳ ಸ್ಥಾನಮಾನಗಳಿಗೆ ತಕ್ಕಹಾಗೆ ರೂಪಿಸಿದ್ದಾನೆ.

ವ್ಯಕ್ತಿಗತ

ಐತಿಹಾಸಿಕ ವ್ಯಕ್ತಿ ಮತ್ತು ಘಟನೆಗಳನ್ನು ಸೇರಿಸುವುದು ಸೀಬಿ ಭಿತ್ತಿಚಿತ್ರಗಳ ಇನ್ನೊಂದು ವೈಶಿಷ್ಟ್ಯ, ಮಹಾದ್ವಾರದ ಎಡ ಮುಚ್ಚಿಗೆಯಲ್ಲಿ ಅಂತಹ ಅನೇಕರನ್ನು ಗುರುತಿಸಬಹುದಾಗಿದೆ. ತಲೆಗೆ ರುಮಾಲು ಸುತ್ತಿ, ನಿಲುವಂಗಿಯನ್ನು ತೊಟ್ಟು, ಕೈಯಲ್ಲಿಯ ಗುಲಾಬಿ ಹೂವನ್ನು ಮೂಸುತ್ತ, ರಾಜಠೀವಿಯಿಂದ ಆಸನವೊಂದರ ಮೇಲೆ ಆರೂಢನಾದ ವ್ಯಕ್ತಿಗೆ ಪೇದೆಯೋರ್ವನು ಚಾಮರದಿಂದ ಏಕಪ್ರಕಾರವಾಗಿ ಗಾಳಿ ಬೀಸುತ್ತಿದ್ದಾನೆ. ಅವನೊಂದಿಗಿರುವ ಇನ್ನೂ ಮೂವರು ಸೇವಕರು ಪ್ರಭುವಿನ ಅಪ್ಪಣೆಯ ನಿರೀಕ್ಷೆಯಲ್ಲಿ ಕೈಕಟ್ಟಿ ನಿಂತಿದ್ದಾರೆ. ರಾಜನ ಎದುರಿನಲ್ಲಿ ನೆಲದ ಮೇಲೆ ಹಾಸಿರುವ ರತ್ನಗಂಬಳಿಯ ಮೇಲೆ ಮಂಡಿಯೂರಿ ಕುಳಿತ ಭವ್ಯವ್ಯಕ್ತಿಗೆ

ಸೇವಕನೊರ್ವನು ಗರಿಯನ್ನು ಹೋಲುವ ಚಾಮರದಿಂದ ಗಾಳಿ ಬೀಸುತ್ತಿದ್ದಾನೆ. ಪೇಟ, ನಿಲುವಂಗಿ ಧರಿಸಿರುವ ಕಲ್ಲಿಮೀಸೆಯ ಆ ವ್ಯಕ್ತಿ 'ಮೈಸೂರ ಹುಲಿ'ಯೆಂದು ಖ್ಯಾತಿವೆತ್ತ ತರುಣ ಟಿಪ್ಪುಸುಲ್ತಾನನೆಂದು ಸುಲಭವಾಗಿ ಗುರುತಿಸಬಹುದು. ಮೈಸೂರಿನ ಅರಮನೆಯಲ್ಲಿರುವ ಟಿಪ್ಪುವಿನ ಭಾವಚಿತ್ರಕ್ಕೂ ಇದಕ್ಕೂ ಬಹಳಷ್ಟು ಹೋಲಿಕೆ ಇದೆ. ಇದರಿಂದಾಗಿ ಆಸನದಲ್ಲಿ ಕುಳಿತಿರುವ ವ್ಯಕ್ತಿಯು ಅವನ ತಂದೆ ಹೈದರ್‌ಅಲಿ ಇರಬಹುದೆನಿಸುತ್ತದೆ. ಭಿತ್ತಿ ಚಿತ್ರದಲ್ಲಿ ನೂರಾರು ವ್ಯಕ್ತಿಗಳಿದ್ದರೂ ಇವನೊಬ್ಬನೆ ಆಸೀನನಾಗಿರುವುದರಿಂದ ಆತ ಅತ್ಯಂತ ಪ್ರಭಾವಶಾಲಿ ವ್ಯಕ್ತಿಯಾಗಿರಬೇಕೆಂದು ಬೇರೆ ಹೇಳಬೇಕಾಗಿಲ್ಲ. ಆತ ಕುಳಿತಿರುವ ಆಸನಕ್ಕೂ 'ಸೌಗಂಧಿಕಾ ಪರಿಣಯ'ದಲ್ಲಿ ಚಿತ್ರಿತವಾಗಿರುವ ಆಸನಕ್ಕೂ ಬಹಳಷ್ಟು ಸಾಮ್ಯವಿದೆ. ಹಾಗೆಯೆ ಇದೇ ವೇಷದ ನಾಲ್ವರು ಸೇವಕರನ್ನೂ ಆ ಗ್ರಂಥದ ಕಪ್ಪು ಬಿಳುಪಿನ ಚಿತ್ರದಲ್ಲಿ ಗುರುತಿಸಬಹುದು. ಕೈಯಲ್ಲಿ ಹಿಡಿದ ಚಾಮರವೂ ಅದೇ ಬಗೆಯದು. ಸುತ್ತಮುತ್ತ ಚಿತ್ರಿಸಿದ ಕಂಬಗಳು, ಕಮಾನುಗಳು ಅರಮನೆಯ ವಾತಾವರಣವನ್ನು ಕಲ್ಪಿಸಿವೆ. ಈ ಚಿತ್ರದ ಬಲದಿಕ್ಕಿನಲ್ಲಿ ಟಿಪ್ಪುವು, ಹೂ ಹಿಡಿದು ಕುಳಿತಿರುವ ಇನ್ನೊಂದು ಚಿತ್ರವಿದ್ದು, ಈ ಚಿತ್ರದ ಪ್ರತಿಕೃತಿ ಇತಿಹಾಸಗ್ರಂಥದಲ್ಲಿ ಕಾಣಸಿಗುತ್ತದೆ.

ಹೈದರ್-ಟಿಪ್ಪು ಅವರುಗಳ ಚಿತ್ರಪಟ್ಟಿಯ ಕೆಳಗಡೆಯಲ್ಲಿ ಸೀಬಿಯ ಭಿತ್ತಿಚಿತ್ರಗಳಿಗೆ ಕಾರಣೀಭೂತನಾದ ನಲ್ಲಪ್ಪನ ಭಾವಚಿತ್ರವಿದೆ. ಅವನು ಎತ್ತರದ ಜಗುಲಿಯ ಮೇಲೆ ಕುಳಿತುಕೊಂಡಿದ್ದಾನೆ. ಹಿಂಭಾಗದಲ್ಲಿ ಓರ್ವ ಸೇವಕನೂ ಮತ್ತೋರ್ವನೂ ತಲೆಹಾಕಿ ನಿಂತಿದ್ದಾರೆ. ನಲ್ಲಪ್ಪನ ಮೂವರು ಬಂಧುಗಳು, ನೆಲಕ್ಕೆ ಹಾಸಿದ ಆಸನಗಳಲ್ಲಿ ಕುಳಿತು, ಆತನೊಡನೆ ವಿಚಾರವಿನಿಮಯದಲ್ಲಿ ತೊಡಗಿದ್ದಾರೆ. ಎಡಗಡೆ ನಾಲ್ವರು ಸೇವಕರು ಕೈಕಟ್ಟಿಕೊಂಡು ಕುತೂಹಲದಿಂದ ನೋಡುತ್ತ ನಿಂತಿದ್ದಾರೆ. ಇವರ ಪಗಡಿ, ಕಸೆಬಂಡಿ, ಪಾಯಜಾಮಗಳು ಆ ಕಾಲದ ಮರಾಠಿಗರ ಉಡುಪನ್ನು ನೆನಪಿಗೆ ತರುತ್ತವೆ. ವ್ಯಕ್ತಿಯ ಸುತ್ತಮುತ್ತ ಅರಮನೆಗೆ ಶೋಭಿಸುವಂತಹ ಮೆತ್ತೆಗಳು, ದಿಂಬುಗಳು, ಕಂಬ-ಕಮಾನುಗಳು, ಹೂಬಳ್ಳಿ, ನಕ್ಷೆಗಳನ್ನು ಜೋಡಿಸಲಾಗಿದೆ. ಇದರಿಂದ ನಲ್ಲಪ್ಪನು ದರ್ಬಾರಿನ ಕೊಠಡಿಯಲ್ಲಿ ವಿಚಾರ ವಿಮರ್ಶೆ ನಡೆಸಿದ್ದಾನೆ, ಎಂದು ಊಹಿಸಲು ಚಿತ್ರಕಾರನು ಅವಕಾಶ ಕಲ್ಪಿಸಿದ್ದಾನೆ.

ಧೈರ್ಯ-ಶೌರ್ಯಗಳೊಂದಿಗೆ ಕ್ರೌರ್ಯಕ್ಕೂ ಹೆಸರಾದ ಟಿಪ್ಪುವಿಗೆ 'ಮೈಸೂರು ಹುಲಿ' ಎಂಬ ಅನ್ವರ್ಥಕನಾಮ ಪ್ರಾಪ್ತವಾಗಿತ್ತು. ಈ ಹಿನ್ನೆಲೆಯಲ್ಲಿ, ಮಹಾದ್ವಾರದ ಮುಚ್ಚಿಗೆಯಲ್ಲಿ ಬಿಚ್ಚುಖಡ್ಗದಿಂದ ಹೋರಾಡುತ್ತಿರುವ ವ್ಯಕ್ತಿ ಟಿಪ್ಪುವೆ ಇರಬಹುದೆಂದು ಊಹಿಸಲಾಗಿದೆ. ವಿಷಸರ್ಪವನ್ನು ಕಾಲಿನಿಂದ ತುಳಿದು, ಕಾಡುಹಂದಿಯನ್ನು ಭರ್ಚಿಯಿಂದ ತಿವಿದು ಹುಲಿಯನ್ನು ಎದುರಿಸಬಹುದಾಗಿದ್ದ ಏಕಮಾತ್ರ ವ್ಯಕ್ತಿ ಎಂದರೆ 'ಮೈಸೂರು ಹುಲಿ' ಮಾತ್ರ. ಈ ಜಂತೆಯ ಮೇಲಿನ ಸೈನ್ಯ ಟಿಪ್ಪುವಿನದೆ ಆಗಿರಬೇಕು. ಅವನು ಫ್ರೆಂಚರ ಸಹಾಯ ಪಡೆದು ತನ್ನ ಸೈನ್ಯಕ್ಕೆ ಉತ್ತಮ ತರಬೇತಿ ಕೊಡಿಸಿದ್ದು, ಅದನ್ನು ಕಾಲ್ದಳ, ಅಶ್ವದಳ, ಫಿರಂಗಿದಳಗಳನ್ನಾಗಿ ವಿಂಗಡಿಸಿದ್ದನು. ಚಿತ್ರದಲ್ಲಿ ಸೈನಿಕರು ತೊಟ್ಟಿರುವ ಸಮವಸ್ತ್ರ, ಹೊತ್ತ ಯುದ್ಧದ ಆಯುಧಗಳು

ಪಾಶ್ಚಾತ್ಯ ಮಾದರಿಯವಾದರೂ ಸೈನಿಕರು ಮಾತ್ರ ಮೈಸೂರಿನವರೆ. ಸೈನ್ಯದ ಮುಂದಾಳುತನ ವಹಿಸಿ ಎಲ್ಲಕ್ಕೂ ಮುಂದೆ ಹೊರಟಿರುವ ವ್ಯಕ್ತಿ ಟಿಪ್ಪುವೆಂದೇ ತೋರುತ್ತಾನೆ.

ನವರಂಗದ ಜಂತೆಗಳಲ್ಲಿ ಇರುವ ಅನೇಕರನ್ನು ಇಂದಿನ ಅರ್ಚಕರು ಗುರುತಿಸುತ್ತಾರೆ. ಪೀಠದಲ್ಲಿ ಆಸೀನರಾಗಿರುವವರು ಶೃಂಗೇರಿಯ ಅಂದಿನ ಮಠಾಧೀಶರೆಂದಲೂ ಕೈಮುಗಿದು ಆಶೀರ್ವಾದ ಪಡೆಯುತ್ತಿರುವ ಮಹಿಳೆ ನಲ್ಲಪ್ಪನ ತಾಯಿಯೆಂತಲೂ ಅವರ ಹೇಳಿಕೆ. ಇದರ ಮುಂದಿನ ಚಿತ್ರಪಟ್ಟಿಕೆಯಲ್ಲಿ ಹಲವಾರು ಮಹಿಳೆಯರೊಂದಿಗೆ ಸಹಗಮನಕ್ಕೆ ಹೊರಟವಳೂ ಅವಳೇ ಅಂತೆ. ಆದರೆ ಇದನ್ನು ಒಪ್ಪಿಕೊಳ್ಳಲು ಇಲ್ಲವೆ ಅಲ್ಲಗಳೆಯಲು ಬೇರಾವ ಐತಿಹಾಸಿಕ ಆಧಾರಗಳೂ ದೊರೆಯುತ್ತಿಲ್ಲ. ಸಾಮಾಜಿಕ ಚಿತ್ರಗಳಲ್ಲಿ ಕಾಣಸಿಗುವ ಹಲವಾರು ವ್ಯಕ್ತಿಗಳಲ್ಲಿ ಹೈದರ್‌ಅಲಿ, ಟಿಪ್ಪುಸುಲ್ತಾನರ ಕಾಲದಲ್ಲಿ ಮಹತ್ವದ ಅಧಿಕಾರಗಳಿರಲು ಸಾಕು. ಆದರೆ ಇವರ ಬಗೆಗೆ ಯಾವುದೇ ದಾಖಲೆಗಳು ಲಭ್ಯವಿಲ್ಲವಾದ್ದರಿಂದ ಚಿತ್ರಗಳಲ್ಲಿ ಮಾತ್ರ ಉಳಿದುಕೊಂಡಿದ್ದಾರೆ.

ಲೈಂಗಿಕ

ದೇವಾಲಯಕ್ಕೆ ಬರುವ ಭಾವುಕ ಜನರಲ್ಲಿ ಪೂಜ್ಯಭಾವನೆ ಮೂಡಿಸುವುದಕ್ಕಾಗಿಯೆ ಧಾರ್ಮಿಕ ಚಿತ್ರಗಳು ರಚಿತವಾಗಿವೆ. ಅಂದಿನ ವೇಷ ಭೂಷಣ, ಆಚಾರ-ವಿಚಾರ, ನಿತ್ಯಜೀವನವನ್ನು ಸಾಮಾಜಿಕ ಭಿತ್ತಿಚಿತ್ರಗಳು ಪ್ರತಿನಿಧಿಸುತ್ತವೆ. ಸುತ್ತಮುತ್ತಲಿನ ಪ್ರಕೃತಿ-ಪರಿಸರಗಳಲ್ಲಿ ಪ್ರತಿನಿತ್ಯದ ಹಾಗೂ ಪ್ರತಿ ನಿಮಿಷದ ಆಗು ಹೋಗುಗಳು 'ದೈವಲೀಲೆ' ಎಂದು ನಿಸರ್ಗ ಸಾರಿದರೆ, ತ್ಯಾಗ, ಶೌರ್ಯ, ದಾನ, ಅಧಿಕಾರಿಗಳಿಂದ ದೈವತ್ವವನ್ನು ಪಡೆಯಬಹುದೆಂಬ ಉದ್ದೇಶದಿಂದ ವ್ಯಕ್ತಿಗತ ಚಿತ್ರಗಳನ್ನು ಸೇರಿಸಬಹುದು. ಆದರೆ ಇವುಗಳೊಂದಿಗೆ ಲೈಂಗಿಕ ಚಿತ್ರಗಳನ್ನು ಸೇರಿಸುವುದರಲ್ಲಿ ಕಲಾಕಾರನ ಉದ್ದೇಶವೇನಿರಬಹುದು ? ಸದಾಕಾಲ ಸುರಾಪಾನ, ಸೂಳೆಗೇರಿಯ ರಂಜನೆಗಳಲ್ಲಿ ಆಸಕ್ತರಾಗಿ ದೇವಾಲಯದತ್ತ ಎಂದೂ ಕಣ್ಣೆತ್ತಿ ನೋಡದವರಿಗಾಗಿಯೆ ಇವುಗಳ ರಚನೆಯಾಗಿರಬಹುದೆ? ಮೋಕ್ಷಕ್ಕೆ ಕಾಮವೂ ಒಂದು ಸಾಧನ ಎಂದು ಸೂಚಿಸುತ್ತಿಬಹುದೆ? ಕಲಾಕಾರನ ಇಂಗಿತ ಏನೇ ಇರಲಿ, ಇಲ್ಲಿಯ ಚಿತ್ರಗಳ ರಚನೆಯಲ್ಲಿ ವ್ಯಕ್ತಪಟ್ಟಿರುವ ಅವನ ಕಲ್ಪನಾಶಕ್ತಿ, ವರ್ಣವಿನ್ಯಾಸ, ಕುಂಚದ ಮೇಲಿನ ಹಿಡಿತ ಅನುಪಮವಾದುದು.

ಶಿಲ್ಪಸೂತ್ರಕ್ಕೆ ಅನುಸಾರವಾಗಿ ತಮ್ಮ ರಚನೆಗಳನ್ನು ರೂಪಿಸುವ ಶಿಲ್ಪ ಮತ್ತು ಸೂತ್ರಕ್ಕೆ ಬದ್ಧವಾಗಿರುವ ಚಿತ್ರಕಾರರು ತಮ್ಮ ಕಲಾಕೃತಿಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಕೆಲವರಾದರೂ ಲೈಂಗಿಕ ಸನ್ನಿವೇಶಗಳನ್ನು ಸೇರಿಸದೆ ಬಿಡುವುದೆ ಇಲ್ಲ. ಇಂತಹ ಕಲಾಕೃತಿಗಳನ್ನು ನೋಡಲು ಜಾಗತಿಕ ಪ್ರವಾಸಿಗಳೆಲ್ಲ ಖಜುರಾಹೊಕ್ಕೆ ಧಾವಿಸಿದರೂ ತೆರೆದ ಕಣ್ಣುಗಳಿಂದ ವೀಕ್ಷಿಸಿದರೆ ಬೇಲೂರು, ಹಳೆಬೀಡು, ಬಳ್ಳಿಗಾವಿ, ಭಟಕಳ ಮೊದಲಾದ ಊರುಗಳಲ್ಲಿರುವ ದೇವಾಲಯಗಳಲ್ಲಿ ಇಂತಹ ಶಿಲ್ಪಗಳಿಗೆ ಏನೂ ಕೊರತೆಯಿಲ್ಲ. ಆದರೆ ಇಲ್ಲಿಯವುಗಳಲ್ಲಿ ಇರುವ ಮುಖ್ಯ ವ್ಯತ್ಯಾಸವೆಂದರೆ, ಇಂತಹ ಶಿಲ್ಪಗಳು ಕಾಮಶಾಸ್ತ್ರವನ್ನೊ ಅಥವಾ ಬೇರೊಂದು

ಸೂತ್ರಗ್ರಂಥವನ್ನೊ ಆಧರಿಸಿ ರಚಿತವಾದವುಗಳು. ಆದ್ದರಿಂದ ಇವುಗಳಲ್ಲಿ ಚಿತ್ರಿತರಾದ ವ್ಯಕ್ತಿಗಳು ಕೇವಲ ಕೇವಲ ಕಾಲ್ಪನಿಕ; ನಿತ್ಯಜೀವನದಲ್ಲಿ ಕಾಣಬರುವಂತಹವರಲ್ಲ. ಆದರೆ ಸೀಬಿಯಲ್ಲಿ ಚಿತ್ರಿತವಾಗಿರುವವರು ವಸ್ತ್ರಧಾರಿಗಳಾಗಿಯೆ ಸಂಭೋಗಕ್ರಿಯೆಯಲ್ಲಿ ತೊಡಗಿರುವಂತಹವರು. ಈ ಚಿತ್ರಗಳೂ ಅವರ ಸಮಕಾಲೀನ ಪದ್ಧತಿಯವು. ತಲೆಗೆ ಪಗಡಿ, ಮೈಗೆ ನಿಲುವಂಗಿ, ಶಾಲು, ಕಿವಿ-ಕೊರಳುಗಳಿಗೆ ಆಭರಣಗಳು, ಹಣೆಯ ಮೇಲೆ ಅರ್ಧಚಂದ್ರಾಕೃತಿಯ ನಾಮ ಮುಂತಾದವುಗಳನ್ನು ಧರಿಸಿರುವ ಇವರುಗಳು, ಪೇಶ್ವೆಯವರ ಕಾಲದ ವ್ಯಕ್ತಿಗಳನ್ನು ನೆನಪಿಗೆ ತರುತ್ತಾರೆ. ತಂಜಾವೂರು, ಗ್ವಾಲಿಯರ್‌ಗಳಲ್ಲಿ ಹದಿನೆಂಟನೆಯ ಶತಮಾನದ ಕೊನೆಯಲ್ಲಿ ರಚಿತವಾದ ಚಿತ್ರಗಳಲ್ಲಿ ಇಂತಹ ವ್ಯಕ್ತಿಗಳು ಹೇರಳವಾಗಿ ಕಾಣಸಿಗುತ್ತಾರೆ.

ರತಿಕ್ರೀಡೆಯಲ್ಲಿ ಪಾಲುಗೊಂಡ ಹೆಣ್ಣೂ ಸಮಕಾಲೀನ ಪೋಷಾಕುಗಳಲ್ಲಿ ಚಿತ್ರಿತವಾಗಿದ್ದಾಳೆ; ಉದ್ದ ಕೇಶರಾಶಿಯನ್ನು ಜಡೆಯಾಗಿ ಹೆಣೆದುಕೊಂಡಿದ್ದಾಳೆ;ತುರುಬಾಗಿ ಕಟ್ಟಿದ್ದಾಳೆ; ಕೆಲವೆಡೆ ಟೋಪಿಯನ್ನು ಧರಿಸಿದ್ದಾಳೆ (ತುರುಷ್ಕ ನಾರಿಯಿರಬಹುದೆ) ಹೂದಂಡೆಯನ್ನು ಮುಡಿದು ಮುತ್ತಿನ ಆಭರಣಗಳನ್ನು ಧರಿಸಿದ್ದಾಳೆ. ಆಕೆಯ ಮೂಗಿಗೆ ಮಹಾರಾಷ್ಟ್ರದಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ನತ್ತು, ಕಿವಿಗೆ ಬೆಂಡೋಲೆ ಹಾಗೂ ಕೊರಳ ತುಂಬ ಸರಗಳಿವೆ. ಮೈಗಂಟಿಕೊಳ್ಳುವ ಕುಪ್ಪಸ, ಪಾರದರ್ಶಕ ಸೀರೆ; ಕೆಲವು ಚಿತ್ರಗಳಲ್ಲಿ ಲಂಗ ಇಲ್ಲವೆ ಪಾಯಜಾಮಾ ಕೂಡ ತೊಟ್ಟಿದ್ದಾಳೆ. ಕೈಬಳೆ, ಕಾಲಂದುಗೆಗಳಿಗೂ ಕೊರತೆಯಿಲ್ಲ. ಕುಳಿತುಕೊಳ್ಳಲು ಮೆದುವಾಗಿರುವ ಮೆತ್ತೆ, ಒರಗಿಕೊಳ್ಳಲು ಲಂಬವರ್ತುಲಾಕಾರದ ದಿಂಬುಗಳಿವೆ. ಇವುಗಳನ್ನೆಲ್ಲ ಆಕರ್ಷಕ ನಕ್ಷೆ ಮತ್ತು ಕಸೂತಿಗಳಿಗಿರುವ ಬಟ್ಟೆಯಿಂದ ಹೊದ್ದಿಸಲಾಗಿದೆ. ಅವುಗಳ ಸಂಯೋಜನೆ, ನೋಡುತ್ತಿದ್ದರೆ ಕಲಾವಿದನ ರಸಿಕತೆಯ ಬಗೆಗೆ ಮೆಚ್ಚಿಗೆ ಉಂಟಾಗುತ್ತದೆ. ಕೆಲವು ಚಿತ್ರಗಳು ದ್ವಿತೀಯ ದರ್ಜೆಯ ಕಲಾಕಾರರಿಂದ ರಚಿತವಾಗಿರಬೇಕು. ಏಕೆಂದರೆ, ಅಂಗಾಂಗಗಳು ಪ್ರಮಾಣಬದ್ಧವಾಗಿಲ್ಲ; ಹೆಣ್ಣನ್ನು ಬಿಗಿದಪ್ಪಿದ ಕೈಕಾಲುಗಳು ಹಾವು, ಹಗ್ಗಗಳಂತೆ ತೋರುತ್ತವೆ!

ಮಹಾದ್ವಾರದ ಮುಚ್ಚಿಗೆ ಮಾತ್ರ ಈ ರತಿಕ್ರೀಡೆಯ ಚಿತ್ರಗಳಿಗೆ ಸೀಮಿತವಾಗಿದ್ದರೂ ಕಲಾಕಾರನು ಇನ್ನಿತರ ಕಡೆಯಲ್ಲೂ ತನ್ನ ರಸಿಕತೆಯನ್ನು ಹರಿಸಿದ್ದಾನೆ. ನರಸಿಂಹಸ್ವಾಮಿಯು ಚಂಚುಲಕ್ಷ್ಮಿಗೆ ಮನಸೋತು, ಸ್ತ್ರೀವೇಷದಲ್ಲಿ ಅವಳನ್ನು ಕಂಡು, ಅವಳೊಡನೆ ವಿಹರಿಸುವ ದೃಶ್ಯವನ್ನು ಮುಖಮಂಟಪದ ಹಲವಾರು ಚೌಕಟ್ಟುಗಳಲ್ಲಿ ಚಿತ್ರಿಸಿದ್ದಾನೆ. ಗೋಪಿಕಾವಸ್ತ್ರಹರಣ, ರಾಸಲೀಲೆಗಳು ಇದೇ ರೀತಿಯಲ್ಲಿ ಚಿತ್ರಿತವಾಗಿದ್ದು, ಇವುಗಳಲ್ಲಿರುವ ನಗ್ನಸ್ತ್ರೀಯರು ನೈಜವಾಗಿ ಚಿತ್ರಿತರಾಗಿದ್ದಾರೆ. ಹೈದರ್ ಅಲಿಯ ದರಬಾರಿನ ಚಿತ್ರಪಟ್ಟಿಕೆಯ ಮೇಲ್ಭಾಗದಲ್ಲಿ ಒಂದು ಅತ್ಯಾಕರ್ಷಕ ಸನ್ನಿವೇಶ ರೂಪಿತವಾಗಿದೆ. ಆದರೆ ವಿಷಾದದ ಸಂಗತಿಯೆಂದರೆ, ಅದರ ಮೇಲ್ಭಾಗ ಅಡಗುವಂತೆ ಗೋಡೆಯೊಂದನ್ನು ಕಟ್ಟಿರುವುದರಿಂದ ನೋಟಕರಿಗೆ ರಸಭಂಗವಾಗುವುದಂತೂ ದಿಟ. ನಾಲ್ಕು ಕೈಗಳುಳ್ಳ ದೇವತಾಪುರುಷನೋರ್ವನು ತನ್ನ ಎರಡು ಕಾಲುಗಳಲ್ಲಿ ಒಂದು ಕಾಲಿಗೆ ಐವರಂತೆ ಹತ್ತು ರಮಣಿಯರನ್ನು ಪಾದಗಳಿಂದ ಅಪ್ಪಿ ಹಿಡಿದಿದ್ದಾನೆ. ನಾಲ್ಕು ಕೈಗಳನ್ನೂ ರಮಣೀಯರನ್ನು ತೆಕ್ಕೈಸಲು ಬಳಸಿದ್ದಾನೆ. ಕೆಳಗಿನ

ದ್ವಿಹಸ್ತದಿಂದ ಅಷ್ಟಕನ್ಯೆಯರನ್ನು ಹಿಡಿದಿದ್ದರೆ ಮೇಲಿನ ಎರಡರಲ್ಲಿ ಆರು ಕಾಮಿನಿಯರಿದ್ದಾರೆ. ಇಪ್ಪತ್ನಾಲ್ಕು ಕಾಮಿನಿಯರಿಗೆ ಏಕಕಾಲದಲ್ಲಿ ರತಿಸುಖ ಕೊಡಬಲ್ಲನೆಂದರೆ ಶ್ರೀಕೃಷ್ಣನೊಬ್ಬನೆ ಎಂದು ಕಾಣುತ್ತದೆ! ಆದ್ದರಿಂದ ಈ ಚಿತ್ರ ಕೃಷ್ಣ-ಗೋಪಿಕೆಯರದೆಂದು ಊಹಿಸಬಹುದಾಗಿದೆ. ಎಡಗೆಡೆಯಲ್ಲಿ ಬತ್ತಲೆಯಿರುವ ಗೋಪಿಕಾ ಸ್ತ್ರೀಯೋರ್ವಳು ತನ್ನನ್ನು ಕಡೆಗಣಿಸದಿರು ಎಂದು ಕೃಷ್ಣನನ್ನು ಯಾಚಿಸುತ್ತ ಓಡುಬರುವವಳಂತೆ ಚಿತ್ರಿಸಲಾಗಿದೆ. ಇದರ ಎಡಗಡೆಗೆ ಇರುವ ಇನ್ನೊಂದು ಚಿತ್ರದಲ್ಲಿ ದೇವತಾಪುರುಷನೊಬ್ಬ ನಗ್ನನಾಗಿದ್ದು, ಕೇವಲ ಆರು ಕಾಮಿನಿಯರು ಅವನ ತೋಳಬಂಧನದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ.

ಚಾರಿತ್ರಿಕ

ಸೀಬಿ ಊರು ಇರುವುದು ತುಮಕೂರು ಜಿಲ್ಲೆಯ ಸಿರಾ ತಾಲೂಕಿನಲ್ಲಿ. ಈ ತಾಲೂಕಿನ ಬಗೆಗೆ ಸಾಕಷ್ಟು ಐತಿಹಾಸಿಕ ದಾಖಲೆಗಳು ಲಭ್ಯವಿವೆ. ಛತ್ರಪತಿ ಶಿವಾಜಿ ಮತ್ತು ವೆಂಕಾಜಿಯವರ ತಂದೆಯಾದ ಶಹಾಜಿ ಭೋಸಲೆಯು (ಕ್ರಿ. ಶ. ೧೫೯೪-೧೬೬೪) ವಿಜಾಪುರದ ಆದಿಲ್‌ಶಹನ ಸೇವೆಯಲ್ಲಿದ್ದು, ವಿಜಯನಗರಕ್ಕೆ ಸೇರಿದ ದಕ್ಷಿಣದ ಹಲವಾರು ಪ್ರಾಂತಗಳನ್ನು ಗೆದ್ದುಕೊಂಡನು. ಇದಕ್ಕಾಗಿ ಆದಿಲ್‌ಶಹನು ಕೆಲವು ತಾಲ್ಲೂಕುಗಳನ್ನು ಅವನಿಗೆ ಜಹಗೀರಾಗಿ ಕೊಟ್ಟಿದ್ದನು. ಅವುಗಳಲ್ಲಿ ಸಿರಾ ಸಹ ಒಂದಾಗಿದ್ದಿತು. ಕ್ರಿ. ಶ. ೧೬೩೮ರಲ್ಲಿ ಬೆಂಗಳೂರಿನಲ್ಲಿದ್ದು ತನ್ನ ಜಹಗೀರಿನ ಆಡಳಿತ ನಿರ್ವಹಿಸುತ್ತಿದ್ದನು. ಅನಂತರ ಆ ಆಡಳಿತವು ವೆಂಕಾಜಿಯ ಕೈಗೆ ಬಂದಿತು. ಕ್ರಿ.ಶ. ೧೬೭೭ರಲ್ಲಿ ದಕ್ಷಿಣಕ್ಕೆ ದಂಡೆತ್ತಿ ಬಂದ ಶಿವಾಜಿಯು ಸಿರಾ ತಾಲೂಕನ್ನು ಗೆದ್ದುಕೊಂಡು ವೆಂಕಾಜಿಯ ಸತಿ ದೀಪಾಬಾಯಿಗೆ ಉಡುಗೊರೆಯಾಗಿ ಕೊಟ್ಟನು. ಮೊಗಲರ ಸೇನಾಧಿಪತಿ ಕಾಸಿಂಖಾನನು ಕ್ರಿ ಶ. ೧೬೮೭ರಲ್ಲಿ ಸಿರಾವನ್ನು ಗೆದ್ದು ಮೈಸೂರಿನ ಚಿಕ್ಕದೇವರಾಯನಿಗೆ ಮಾರಿಬಿಟ್ಟನು.

ಪಾಣಿಪತ್ ಕಾಳಗದಲ್ಲಿ (ಕ್ರಿ. ಶ. ೧೭೬೧) ಮರಾಠರಿಗೆ ಆದ ದೊಡ್ಡ ಸೋಲಿನಿಂದಾಗಿ ಹೈದರ್‌ಅಲಿಗೆ ಅದೇ ವರುಷ ಸಿರಾ ಗೆದ್ದುಕೊಳ್ಳಲು ಸುಲಭವಾಯಿತು. ಈ ಅವಧಿಯಲ್ಲಿ ತುಮಕೂರಿನ ವೈದಿಕಬ್ರಾಹ್ಮಣ ನಲ್ಲಪ್ಪನು ಹೈದರ್‌ಅಲಿಯ ಸೈನ್ಯಕ್ಕೆ ಅಗತ್ಯವಸ್ತುಗಳು, ಕಾಳು-ಕಡಿಗಳನ್ನು ಪೂರೈಸುವುದರ ಮೂಲಕ ಆತನ ವಿಶ್ವಾಸಕ್ಕೆ ಪಾತ್ರನಾಗಿದ್ದರಿಂದ, ಆತನ ಆಸ್ಥಾನದ ಸಭಾಸದನೂ ಆದನು. ಸಿರಾ ತಾಲೂಕ ಶಾಸನ ಸಂಖ್ಯೆ ೯೬ರ ಪ್ರಕಾರ (ಎ.ಕ.೧೨) ಸಿರಾದ ಸುಬೇದಾರ ಅಬ್ದುಲ್‌ರಹೀಮ್ ಬಾಜೆ ಅಬ್ದುಲ್ಲನು ಸೀಬಿ ಗ್ರಾಮಕ್ಕೆ ಸೇರಿದ ಚಿಕ್ಕಸೀಬಿಯ ಪೂರ್ವ ದಿಕ್ಕಿನಲ್ಲಿ ಬೆಳೆದಿದ್ದ ಕಾಡನ್ನು ನಿರ್ನಾಮಗೊಳಿಸಿ, ಭೂಮಿಯನ್ನು ಸೀಬಿ ದೇವಾಲಯದ ಪಡಿತರ ದೀಪಾರಾಧನೆಗೆ ಕೊಡಿಸಿದನು.

ನಲ್ಲಪ್ಪನು ನವಾಬನ ನಿಕಟವರ್ತಿಯಾಗಿದ್ದುದರಿಂದ 'ಹೈದರ್‌ನಾಮಾ' ಚರಿತ್ರೆಯನ್ನು ನುಡಿಗನ್ನಡದಲ್ಲಿ ಬರೆದಿಟ್ಟಿದ್ದಾನೆ. ಹೈದರ್‌ಅಲಿಯ ನೆರವಿನಿಂದ ನಲ್ಲಪ್ಪ ಮತ್ತು ಅವನ ಮೂವರು ಸಹೋದರರು ನರಸಿಂಹಸ್ವಾಮಿಯ ದೇವಾಲಯದ ಜೀರ್ಣೋದ್ಧಾರ ಮಾಡುವುದರೊಂದಿಗೆ ಅದನ್ನು ವಿಸ್ತರಿಸಿದರು. ನವರಂಗ, ಮಹಾದ್ವಾರ ಮತ್ತು ಅವುಗಳ

ಮುಚ್ಚಿಗೆಯಲ್ಲಿರುವ ಭಿತ್ತಿಚಿತ್ರಗಳು ಈ ಕಾಲದಲ್ಲಿಯೆ ರಚಿತವಾದವುಗಳು. ಹೈದರ್‌ಅಲಿ ಮತ್ತು ನಲ್ಲಪ್ಪರ ಚಿತ್ರಪಟ್ಟಿಯ ಕೆಳಗೆ ಹೊಸಗನ್ನಡದಲ್ಲಿ ಶಾಸನವೊಂದನ್ನು ಬರೆಯಲಾಗಿದೆ. (ಎ. ಕ. ೧೨, ಶಾಸನ ಸಂಖ್ಯೆ ೯೮) ಬಳಸಿರುವ ಲಿಪಿಯು ಮೈಸೂರು ಕೋಟೆಯಲ್ಲಿ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದಲ್ಲಿರುವ ಮುಮ್ಮಡಿ ಕೃಷ್ಣರಾಜರ ಕ್ರಿ.ಶ. ೧೮೨೯ರ ಶಾಸನದ ಲಿಪಿಯನ್ನು ಬಹಳವಾಗಿ ಹೋಲುತ್ತದೆ. ಅನಂತರ ಕಟ್ಟಿಸಿದ ಗೋಡೆ ಹಾಗೂ ಸಿಡಿಸಿದ ಸುಣ್ಣದಿಂದಾಗಿ ಸೀಬಿಯ ಶಾಸನವನ್ನು ಸಂಪೂರ್ಣವಾಗಿ ಓದಲಾಗುತ್ತಿಲ್ಲ. ಅದರಲ್ಲಿ ಮುಖ್ಯವಾಗಿ ಹೈದರ್‌ಅಲಿಯು ಕೆಳದಿ (ಬಿದನೂರು) ಮೊದಲಾದ ರಾಜ್ಯಗಳನ್ನು ಗೆದ್ದುಕೊಂಡುದು, ಪ್ರಜೆಗಳನ್ನು ಮಕ್ಕಳಂತೆ ಪ್ರೀತಿಯಿಂದ ನೋಡಿಕೊಂಡುದು, ನಲ್ಲಪ್ಪನ ಪೂರ್ವಜರ ವಿವರ, ಇತ್ಯಾದಿಗಳು ಉಲ್ಲೇಖಿಸಲ್ಪಟ್ಟಿವೆ. ಒಂದೆಡೆ ಟಿಪ್ಪುಸುಲ್ತಾನನ ಹೆಸರನ್ನು ಪ್ರಸ್ತಾಪಿಸಲಾಗಿದೆ. ಹೈದರ್‌ಅಲಿಯು ಕ್ರಿ. ಶ. ೧೭೮೨ರಲ್ಲಿ ಕಾಲಾಧೀನನಾದನಂತರ, ಟಿಪ್ಪುವು ಕ್ರಿ. ಶ. ೧೭೯೯ರ ವರೆಗೆ ರಾಜ್ಯವನ್ನಾಳಿ ಮೈಸೂರು ಯುದ್ಧದಲ್ಲಿ ಶ್ರೀರಂಗಪಟ್ಟಣದ ಹತ್ತಿರ ಮಡಿದನು.

ಇಂದು ಸೀಬಿ ದೇವಾಲಯವು ನಲ್ಲಪ್ಪನ ಆರನೆಯ ತಲೆಮಾರಿನ ನಲ್ಲಪ್ಪನ ಆಡಳಿತಕ್ಕೆ ಒಳಪಟ್ಟಿದೆ. ನವರಂಗದ ಗೋಡೆಗೆ ಮೂರನೆಯ ತಲೆಮಾರಿನ ನಲ್ಲಪ್ಪ ಅಂದರೆ ಈಗಿನ ಅರ್ಚಕರ ತಾತನವರ ಎರಡು ಭಾವಚಿತ್ರಗಳನ್ನು ತೂಗುಹಾಕಿದ್ದಾರೆ. [ಇಂದಿನವರ ಹತ್ತಿರ ಅವರ ವಂಶಾವಳಿ ಮತ್ತು ದೇವಸ್ಥಾನಕ್ಕೆ ಸಂಬಂಧಿಸಿದ ಹಲವಾರು ದಾಖಲೆಗಳು ಇವೆಯಂತೆ. ಕೆಲವು ದಿವಸಗಳ ಹಿಂದೆ (೧೯೮೮ ಜನವರಿ ೧ ರಂದು) ಈ ದೇವಸ್ಥಾನಕ್ಕೆ ಭೇಟಿ ಕೊಟ್ಟಿದ್ದಾಗ, ಒಂದು ಟ್ರಂಕ್ ತುಂಬ ಇದ್ದ ಹಳೆಯ ಕಾಗದ ಪತ್ರಗಳು ಗೆದ್ದಲಿನ ಆಕ್ರಮಣಕ್ಕೆ ಬಲಿಯಾಗಿದ್ದರಿಂದ ಬಿಸಿಲಿಗೆ ಹರವಿದ್ದರು. ಅವೆಲ್ಲವೂ ಸಂಪೂರ್ಣ ನಾಶ ಹೊಂದುವ ಮೊದಲು ಇತಿಹಾಸಕಾರರು ಅವನ್ನು ಗಮನಿಸಿ, ಅಭ್ಯಸಿಸುವುದು ಒಳಿತು].

ವಿವೇಚನೆ

ಸೀಬಿಯ ಭಿತ್ತಿಚಿತ್ರಗಳು ಅಪ್ಪಟ ಗ್ರಾಮೀಣ : ಕಲಾಕಾರರ ಮೇಲೆ ಸಮಕಾಲೀನ ಬೇರೆ ಯಾವ ಶೈಲಿಯ ವರ್ಚಸ್ಸೂ ಬಿದ್ದಿಲ್ಲ ; ನಾಜೂಕಿನ ಪ್ರಯತ್ನಗಳನ್ನು ಮಾಡಿಲ್ಲ-ಇತ್ಯಾದಿ ಅಭಿಪ್ರಾಯಗಳು ಈ ಚಿತ್ರಗಳ ಬಗೆಗೆ ಪ್ರಕಟವಾಗಿವೆ. ಯಾವಾಗಲೋ ನೋಡಿದ ಇಲ್ಲಿಯ ಚಿತ್ರಗಳನ್ನು, ನೆನಪಿನ ಆಧಾರದ ಮೇಲೆ ವಿಶ್ಲೇಷಿಸುವುದರಿಂದ ಕೆಲವು ಲೇಖಕರು, ಕಲಾವಿದರಿಗೆ ಇಂತಹ ಅಪಕ್ವ ತೀರ್ಮಾನಕ್ಕೆ ಬರಲು ಆಸ್ಪದವಾಗಿರಬೇಕು. ಈ ಶೈಲಿಯ ಕೃತಿಗಳನ್ನೆ ಸಮೀಪದ ಸಿರಾದಲ್ಲಿರುವ ರೇವಣಸಿದ್ದೇಶ್ವರ ದೇವಾಲಯದಲ್ಲಿಯೂ ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಮುಚ್ಚಿಗೆಗಳಲ್ಲಿಯೂ ನೋಡಬಹುದು. ಅಲ್ಲದೆ ಶ್ರವಣಬೆಳಗೊಳದ ಜೈನಮಠದ ಗೋಡೆಗಳ ಮೇಲೆ ಇರುವ ಕೆಲವು ಚಿತ್ರಗಳೊಂದಿಗೆ ಅವುಗಳ ಸಾಮ್ಯವೂ ಇದೆ. ಆ ನಂತರ ಮೈಸೂರಿನ ಮುಮ್ಮಡಿ ಕೃಷ್ಣರಾಜರು ಕ್ರಿ. ಶ. ಸುಮಾರು

೧೮೨೫ರಲ್ಲಿ ಬರೆಯಿಸಿದ 'ಸೌಗಂಧಿಕಾ ಪರಿಣಯ'ಕ್ಕಾಗಿ ಅಸಂಖ್ಯ ಚಿತ್ರಗಳನ್ನು ಪೂರೈಸಿದವರೂ ಇದೇ ಕಲಾಪರಂಪರೆಯವರು.

ಈ ಶೈಲಿಯ ಉಗಮವನ್ನು ವಿಜಯನಗರದ ಆಳರಸರ ಕಾಲದವರೆಗೆ ಗುರುತಿಸಬಹುದು. ಹಿನ್ನೆಲೆಯಲ್ಲಿ ಚಿತ್ರಿಸಲಾಗಿರುವ ಕಮಾನುಗಳು, ಗುಳೋಪುಗಳು ಹಾಗೂ ಹೂ-ಬಳ್ಳಿಯ ಅಲಂಕಾರಗಳು ಹಂಪೆಯ ವಿರೂಪಾಕ್ಷ ದೇವಾಲಯದ ಭಿತ್ತಿಚಿತ್ರಗಳಲ್ಲಿಯೂ ಕಾಣಸಿಗುತ್ತವೆ. ಆ ರಾಜ್ಯದ ಪತನಾನಂತರ (ಕ್ರಿ. ಶ. ೧೫೬೫), ರಾಜಾಶ್ರಯ ಹುಡುಕಿಕೊಂಡು ಕಲಾಕಾರರು ಮೈಸೂರು, ಮದರಾಸು, ಮಧುರೆ, ತಂಜಾವೂರುಗಳಿಗೆ ವಲಸೆ ಹೋದರು. ಇವರೆಲ್ಲ ಆಂಧ್ರದ ರಾಜಮನೆತನಗಳ ಆಶ್ರಯ ಪಡೆದು, ತಮ್ಮ ಪೋಷಕರ ಅಭಿರುಚಿಗೆ ಅನುಗುಣವಾಗಿ ಕಲಾಕೃತಿಗಳನ್ನು ರಚಿಸುವುದರಲ್ಲಿ ಸಾಕಷ್ಟು ಕೀರ್ತಿವಂತರೆನಿಸಿದರು. ಶಹಾಜಿ ಭೋಸಲೆಯು (ಕ್ರಿ.ಶ. ೧೬೩೭) ಬೆಂಗಳೂರಿನಿಂದ ತನ್ನ ಜಹಗೀರಿನ ಮೇಲ್ವಿಚಾರಣೆ ನಡೆಸುವಾಗ ಜಯರಾಮ ಪಿಂಡ್ಯ, ಮಲ್ಹಾರಿಭಟ್, ನಾರೋಪಂತ ಹನುಮಂತೆ ಮುಂತಾದ ಮರಾಠಿ ಕಲಾಕಾರರು ಹಾಗೂ ಪಂಡಿತರಿಗೆ ಆಶ್ರಯ ಕೊಟ್ಟಿದ್ದನು. ಮರಾಠಿಗರು ಕನ್ನಡನಾಡಿನಲ್ಲಿ ಸ್ಥಾಪಿಸಿದ್ದ ಅರೆ ಶತಮಾನದ (ಕ್ರಿ.ಶ. ೧೬೩೭-೮೭) ಆಳ್ವಿಕೆಯಲ್ಲಿ, ವಿಜಯನಗರ ಮತ್ತು ಮರಾಠಾಶೈಲಿಗಳ ಸಮ್ಮಿಶ್ರಣದಿಂದ ಮೈಸೂರು-ಮರಾಠಾ ಎನ್ನಬಹುದಾದಂತಹ ಹೊಸಶೈಲಿಯೊಂದು ಉದಯವಾಯಿತು.

ಶಹಾಜಿ ಭೋಸಲೆಯ ಮಗ ವೆಂಕಾಜಿಯು ಕ್ರಿ.ಶ. ೧೬೭೫ರಲ್ಲಿ ತಂಜಾವೂರನ್ನು ಗೆದ್ದು ಅಲ್ಲಿಯೆ ನೆಲೆಸಿ ಆಡಳಿತವನ್ನು ನೋಡಿಕೊಳ್ಳಲಾರಂಭಿಸಿದನು. ಅವನ ವಂಶಜರು ಮುಂದಿನ ೧೮೦ ವರ್ಷಗಳ ವರೆಗೆ ಏರಿಳಿತಗಳಿಂದ ಕೂಡಿದ ಆಳ್ವಿಕೆ ನಡೆಸಿದರು. ಅಲ್ಲಿಯ ಕಲಾಕಾರರು ರಾಜಾಶ್ರಯ ಪಡೆಯಲು ಮರಾಠಿಗರ ಶೈಲಿಯನ್ನು ಕರಗತಮಾಡಿಕೊಂಡರೆಂದು ಈ ಅವಧಿಯಲ್ಲಿ ರಚಿತವಾದ ಚಿತ್ರಗಳೆ ಸಾಕ್ಷಿ ಹೇಳುತ್ತವೆ. ತಂಜಾವೂರಿನ ಅನೇಕ ಕಲಾಕಾರರು ಆಶ್ರಯ ಬಯಸಿ ಮೈಸೂರಿಗೂ ಬಂದರು. ಈ ಕಾಲದಲ್ಲಿ ಭಾರತದಲ್ಲಿ ಫ್ರೆಂಚರು ಮತ್ತು ಆಂಗ್ಲರಿಂದ ವ್ಯಕ್ತಿಚಿತ್ರ ಕಲೆಯನ್ನೂ (Portraiture) ಕಲಿತುಕೊಂಡರು. ಈ ಕಲಾತಂಡದವರಿದಂಲೇ ನಲ್ಲಪ್ಪನು ಸೀಬಿಯ ಭಿತ್ತಿಚಿತ್ರಗಳ ರಚನೆಯ ಕೆಲಸ ಮಾಡಿಸಿರಬೇಕೆಂದು ತೋರುತ್ತದೆ. ಏಕೆಂದರೆ ಇಲ್ಲಿಯ ಕಲಾಶೈಲಿಯು ವಿಜಯನಗರ, ಮಹಾರಾಷ್ಟ್ರ ಮತ್ತು ಪಾಶ್ಚಾತ್ಯ ಪ್ರಭಾವಗಳಿಂದ ಬೆಳೆದು ಬಂದದ್ದು ಎಂದು ಪ್ರತಿಯೊಂದು ಚಿತ್ರವನ್ನು ಕೂಲಂಕಷವಾಗಿ ಅಭ್ಯಸಿಸಿದಾಗ ಅರಿವಾಗುವುದು. ಬಹುಮಟ್ಟಿಗೆ ಕ್ರಿ.ಶ. ಸುಮಾರು ೧೭೯೦ರ ವೇಳೆಗೆ ಇವುಗಳು ಅಸ್ತಿತ್ವದಲ್ಲಿ ಬಂದವೆಂದು ಹೇಳಬಹುದು.

ಪಾಶ್ಚಾತ್ಯಕಲೆಯ ಪ್ರಭಾವ ಹೆಚ್ಚು ಹೆಚ್ಚು ಆಗಲಾರಂಭಿಸಿದಾಗ ಒಂಟಿ ಚಿತ್ರಗಳಿಗೆ (Portraits) ಬೇಡಿಕೆ ಹೆಚ್ಚಾಗಿ ಭಿತ್ತಿ ಚಿತ್ರಗಳ ಬದಲಾಗಿ ಅವುಗಳ ನಿರ್ಮಾಣ ಪ್ರಾರಂಭವಾಯಿತು. ಅದಾಗಾಗಲೇ ಕಾಗದದ ತಯಾರಿಕೆ ಆರಂಭಗೊಂಡಿದ್ದರಿಂದ ಇದಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕಿತು. ಮುಮ್ಮಡಿ ಕೃಷ್ಣರಾಜರು ಮತ್ತು ಅನಂತರದ ಮೈಸೂರಿನ

ರಾವಣ




ಸಲ್ಲಪ್ಪ ಮತ್ತು ಸೋದರರು



ಸೀಬಿಯ ಭಿತ್ತಿ ಚಿತ್ರಗಳು ರೇಖಾ ಚಿತ್ರಗಳು





೧.ರಾವಣ



೩. ಗೂಳಿ ಹಸುಗಳ ಸಹಜ ಜೀವನ

೨.ಕಿರೀಟದಲ್ಲಿ ಬೆಣ್ಣೆಯುಂಡೆ ಇಟ್ಟ ಕೃಷ್ಣ









ದೊರೆಗಳು ಚಿತ್ರಕಲೆಗೆ ಉದಾರ ರಾಜಾಶ್ರಯ ನೀಡಿದ್ದರಿಂದ, ಚಿತ್ರಗಳಿಂದ ಸುವರ್ಣ ಪತ್ರ (ಜೆಸ್ಸೊ ಕೆಲಸ)ದ ಥಳಕು ಕೊಡುವ ಪರಿಪಾಠ ಬೆಳೆದು ಬಂದಿತು. ಇಂತಹ ಚಿತ್ರಗಳು ಅರಮನೆ, ದೇವಾಲಯ, ಸಂಗ್ರಹಾಲಯ, ಪ್ರತಿಷ್ಠಿತರ ಗೃಹಗಳು ಮುಂತಾದೆಡೆಗಳಲ್ಲಿ ಹೇರಳವಾಗಿವೆ. ಇದನ್ನು 'ಮೈಸೂರು ಚಿತ್ರಕಲೆ'ಎಂದು ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ.

ಸಹಾಯಕ ಗ್ರಂಥಗಳು

1. Epigraphia Carnatica XII, Tumkur District
2. Annual Report of the Mysote Archaeological Department, 1945
3. Jaya Appaswamy : Tanjavur Painting of the Maratha Period, abhinav Publication, 1980
4. ಸೌಗಂಧಿಕಾ ಪರಿಣಯ (ಸಚಿತ್ರ ಕಲ್ಲಚ್ಚಿನ ಪ್ರತಿ ; ಕಾಲ ; ಕ್ರಿ. ಶ. ಸು. ೧೮೩೫)
5. ತಿ. ತಾ. ಶರ್ಮ (ಸಂ.): ಚಾರಿತ್ರಿಕ ದಾಖಲೆಗಳು (ಹೈದರನಾಮಾ), ಕನ್ನಡ ಸಾಹಿತ್ಯ ಪರಿಷತ್ತು, ೧೯೭೧
6. ಡಾ. ಕೆ. ಶಿವರಾಮ ಕಾರಂತ : ಕರ್ನಾಟಕದಲ್ಲಿ ಚಿತ್ರಕಲೆ, ಮೈಸೂರು ವಿಶ್ವವಿದ್ಯಾನಿಲಯ, ೧೮೭೧.

●●●

೭. ಮೈಸೂರು ಅರಸರ ಕಾಲದ ಚಿತ್ರಗಳಲ್ಲಿ ಒಳಾಂಗಣ ದೃಶ್ಯಗಳು

ರಕ್ಕಸ-ತಂಗಡಿ ಕಾಳಗದ (೧೫೬೫) ನಂತರ ವಿಜಯನಗರದ ಆಳರಸರು ಪರಾಭವಗೊಂಡಿದ್ದರಿಂದ ನಾಡಿನ ಸಾಂಸ್ಕೃತಿಕ ಜೀವನಕ್ಕೆ ಬಲವಾದ ಪೆಟ್ಟು ಬಿದ್ದಿತು. ಇತರ ಕಲಾವಿದರಂತೆ ಸಾಮ್ರಾಜ್ಯದ ಚಿತ್ರಕಾರರೆಲ್ಲ ಚದುರಿಹೋದರು. ಕೆಲವರು ದಕ್ಷಿಣಕ್ಕೆ ವಲಸೆ ಬಂದು ಕ್ರಮೇಣ ಮೈಸೂರು ಅರಸರ ಆಶ್ರಯ ಪಡೆದರು. ಸುಮಾರು ನಾಲ್ಕು ಶತಮಾನಗಳ ಕಾಲ ಅವರ ಕಠಿಣ ಶ್ರಮದಿಂದ ದಕ್ಷಿಣ ಕರ್ನಾಟಕದ ಚಿತ್ರಕಲೆ ತನ್ನದೇ ವಿಧದಲ್ಲಿ ಸಮೃದ್ಧಿಯಾಯಿತು. ಮೊದಲೆರಡು ಶತಮಾನಗಳಲ್ಲಿ ರಚಿತವಾದವುಗಳು (ಬಹುಶಃ ಅವು ನಶಿಸಿ ಹೋಗಿದ್ದರಿಂದ) ಕಂಡುಬರುವುದಿಲ್ಲ. ಹದಿನೆಂಟು ಮತ್ತು ಹತ್ತೊಂಭತ್ತನೇ ಶತಮಾನದಲ್ಲಿಯವು ಮಾತ್ರ ಅಲ್ಲೊಂದು ಇಲ್ಲೊಂದು ಕಾಣಸಿಗುತ್ತವೆ. ಈ ಬರವಣಿಗೆಗೆ ಅವುಗಳೇ ಆಧಾರಸ್ತಂಭ. ಇವುಗಳಲ್ಲೂ ಶ್ರೀರಂಗಪಟ್ಟಣದ ದರಿಯಾದೌಲತ್‌ದ ಭಿತ್ತಿಚಿತ್ರಗಳು ಸುವ್ಯವಸ್ಥೆಯಲ್ಲಿರುವುದು ಕನ್ನಡಿಗರಿಗೆಲ್ಲ ಅಭಿಮಾನದ ಸಂಗತಿ.

ಹೈದರಲಿ ದಕ್ಷಿಣದ ಕರಾವಳಿಗಳ ಕಾಳಗಗಳಲ್ಲಿ ವಿಜಯಿಯಾದ ನೆನಪಿಗಾಗಿ ಟಿಪ್ಪುಸುಲ್ತಾನನು ಈ ಅರಮನೆ (೧೭೮೪) ಕಟ್ಟಿಸಿದ್ದರಿಂದ, ದರಿಯಾದೌಲತ್ (ಸಮುದ್ರ ಸಂಪತ್ತು) ಎಂದೇ ನಾಮಕರಣ ಮಾಡಿದ. ಕಟ್ಟಡವಿಡೀ ಭಿತ್ತಿಚಿತ್ರಗಳಿಂದ ತುಂಬಿ ತುಳುಕುತ್ತಿದ್ದರೂ ಸಾಂಪ್ರದಾಯಿಕವಾಗಿ ಬಳಸುವ ಕಲ್ಲು ಮತ್ತು ಕಾಡಿಗೆಗಳಿಂದ ತಯಾರಿಸಿದ ವರ್ಣಗಳ ಬದಲಾಗಿ ರಾಸಾಯನಿಕಗಳಿಂದ ಉತ್ಪಾದಿಸಿದ ಪಾಶ್ಚಾತ್ಯ ಬಣ್ಣಗಳನ್ನು ಬಳಸಿದ್ದರಿಂದ ಅವು ಮಳೆ, ಗಾಳಿ, ಬಿಸಿಲುಗಳಿಗೆ ತಮ್ಮತನ ಕಳೆದುಕೊಳ್ಳಲಾರಂಭಿಸುದವು. ಇದನ್ನು ದಕ್ಷಿಣದ ಪ್ರವಾಸದ ಹೊತ್ತಿಗೆ ಕಂಡುಕೊಂಡ ಗವರ್ನರ ಜನರಲ್ ಡಾಲಹೌಸಿಯು, ಅವುಗಳ ನವೀನೀಕರಣಕ್ಕೆ ಶಿಫಾರಸು ಮಾಡಿದ್ದ. ತಡವಾಗಿಯೇ ಅಂದರೆ ೧೯೩೦ರಲ್ಲಿ ಸ್ಥಾನೀಯ ಕಲಾಕಾರರ ನೆರವಿನಿಂದ ಚಿತ್ರಗಳ ನವೀಕರಣವಾಯಿತು. ನೀಲಿಯನ್ನು ಅಧಿಕ ಪ್ರಮಾಣದಲ್ಲಿ ಬಳಸಿ ದ್ವಿತೀಯ ಸ್ಥಾನವನ್ನು, ನಾಶೀಪುಡಿ ಬಣ್ಣಕ್ಕೆ ಕೊಡಲಾಗಿದೆ. ಬಾಹ್ಯರೇಖೆಗಾಗಿ ಕಪ್ಪು ಮತ್ತು ಹಿನ್ನೆಲೆಗಾಗಿ ಕೆಂಪು ಬಣ್ಣ ಬಳಸಲಾಗಿದೆ. ಎಲ್ಲಿಯೂ ಬಣ್ಣಗಳ ವೈಖರಿ ರಬ್ಬಾಗದಂತೆ ಎಚ್ಚರಿಕೆ ವಹಿಸಿದ್ದರಿಂದ, ವರ್ಣಸಂಯೋಜನೆಯನ್ನು ಪಾಶ್ಚಿಮಾತ್ಯ ಕಲಾಕಾರರ ಮೇಲ್ವಿಚಾರಣೆಯಲ್ಲಿ ಮಾಡಿರಬೇಕು, ಅನಿಸುತ್ತದೆ.

ಈ ಅರಮನೆಯ ಪೂರ್ವದ ಗೋಡೆಯ ಮೇಲೆ ಮೂರು ಸ್ತರಗಳಲ್ಲಿ ಒಳಾಂಗಣದ ಚಿತ್ರಗಳ ಸಮೂಹವೇ ಇದೆ. ಇದೆಲ್ಲ ಪರಿಣತ ಕುಂಚದಿಂದ ನಿರ್ಮಿತವಾದದ್ದು ಎಂದು ಪ್ರಥಮ ದರ್ಶನಕ್ಕೆ ಅನಿಸಿಬಿಡುವುದು. ಇಂದಿನ ಛಾಯಾಚಿತ್ರಕಾರರು ಕಲಾಕಾರರಾಗಲು ಯತ್ನಿಸಿದರೆ, ಅಂದಿನ ಚಿತ್ರಕಾರರು ಛಾಯಾಚಿತ್ರಗಾರರಾಗಲು ಯತ್ನಿಸಿದ್ದಾರೆ ! ಎಂದರೆ

ಅತಿಶಯೋಕ್ತಿಯಾಗಲಾರದು. ಮುಖ್ಯ ದೃಶ್ಯಕ್ಕೆ ಹಿನ್ನೆಲೆಯಾಗಿ ಬಳಸುವಂತಹ ಮಹಲು, ರಾಜವಾಡೆಗಳ ಉಪ್ಪರಿಗೆ, ಪಾವಟಿಗೆ, ಕಮಾನು, ಗುಳೋಪು, ಚಿತ್ತಾರಗಳನ್ನು ಬಳಸಿ ಸಮಕಾಲೀನ ವ್ಯಕ್ತಿಗಳನ್ನು ಚಿತ್ರಿಸಲಾಗಿದೆ. ಇನೆಲ್ಲವೂ ವರ್ಣಛಾಯಾಚಿತ್ರಗಳೆನಿಸುವಷ್ಟು ನೈಜವಾಗಿವೆ. ಈ ಮಾತಿಗೆ ಸಾಕ್ಷಿಯಾಗಿ ಹೆಂಗಳೆಯರ ಚಿತ್ರಣಗಳ ಚೌಕಟ್ಟುಗಳನ್ನು ಪರಾಮರ್ಶಿಸಬಹುದು. ಮಹಮ್ಮದೀಯ ರಾಜಕುಮಾರಿಯೊಬ್ಬಳು ಝುನಾನಾದಲ್ಲಿ ಸಖಿ-ಸೇವಕಿಯರಿಂದ ಒಡಗೂಡಿ ಸುಪ್ಪತ್ತಿಗೆಯ ಮೇಲೆ ಸುಖಾಸೀನವಾದದ್ದನ್ನು ಯಥಾವತ್ತಾಗಿ ಚಿತ್ರಿಸಲಾಗಿದೆ. ನಟ್ಟನಡುವೆ ಪರ್ಶಿಯನ್ ಜಮಖಾನೆ ಹಾಸಲಾಗಿದೆ (ಚಿತ್ರ ೧).ಮೆತ್ತಗಿನ ದಿಂಬಿಗೆ ಆತು ಕಾಲುಚಾಚಿ ಕುಳಿತ ಯೌವನೆ ಸರ್ವಾಂಗ ಸುಂದರಿ ಬಿಗಿಯಾದ ಕುಪ್ಪಸ, ಚಿತ್ತಾರಗಳುಳ್ಳ ಪಾಜಾಮಾ ಮೇಲೆ ಓಢಣಿ (ದುಪಟ್ಟಾ) ತೊಟ್ಟಿದ್ದಾಳೆ. ಕೇಶರಾಶಿ, ಕಿವಿ, ಕೊರಳು, ಕೈಕಾಲುಗಳಿಗೆ ಆಭರಣ ಕೊರತೆಯಾಗದಂತೆ ತೊಟ್ಟಿದ್ದಾಳೆ. ಬಿದರ್ ಕಲಾ ಕುಸುರಿನ ಕೆಲಸವಿದ್ದ ಹುಕ್ಕಾದ ಕೊಳವೆಯನ್ನು ಬಲಗೈಯಲ್ಲಿ ಹಿಡಿದಿದ್ದಾಳೆ. ಪಕ್ಕದಲ್ಲಿ ಪೀಕ್‌ದಾನಿ, ಗುಲಾಬದಾನಿ, ಅತ್ತರ್‌ದಾನಿ, ತಾಂಬೂಲದ ತಟ್ಟೆಯೊಂದಿಗೆ ಪುಸ್ತಕವೂ ಇದೆ. ಇವಳ ಸಖಿಯರು ಪಕ್ಕದಲ್ಲೇ ವಿಚಾರ ವಿಮರ್ಶೆಯಲ್ಲಿ ತೊಡಗಿದ್ದಾರೆ. ಮೂವರು ಸೇವಕಿಯರು ಬೀಸಣಿಗೆಯೊಂದಿಗೆ ನಿಂತಿದ್ದಾರೆ. ಹಣೆಯಲ್ಲಿ ಕುಂಕುಮವಿಟ್ಟಾಕೆ ಕೊಡಲಿಯಾಕಾರದ ಬೀಸಣಿಗೆಯಿಂದ ಗಾಳಿ ಹಾಕುತ್ತಿದ್ದರೆ, ಇನ್ನೀರ್ವರು ಪೊರಕೆಯಾಕಾರದವನ್ನು ಭುಜಗಳ ಮೇಲೆ ಹೊತ್ತು ನಿಂತಿದ್ದಾರೆ. ಅನತಿ ದೂರದಲ್ಲಿ ಮೂವರು ಸ್ತ್ರೀಯರ ಸಂಗೀತ-ಮೇಳ ನಡೆದಿದೆ. ಮಂಡಿಯೂರಿ ಕುಳಿತವಳು, ಹಾಡುವಾಗ ಹಿಮ್ಮೇಳದಲ್ಲಿ ಒಬ್ಬಾಕೆ ಸಿತಾರ್ ನುಡಿಸಿದರೆ ಇನ್ನೊಬ್ಬಳು ಖಂಜೀರಾ ಬಾರಿಸುತ್ತಿದ್ದಾಳೆ. ಪ್ರಥಮ ದರ್ಶನಕ್ಕೆ ಇದೊಂದು ಮೊಗಲರ ಕಲಾಕೃತಿ ಅನಿಸಿದರೆ ಆಶ್ಚರ್ಯವಿಲ್ಲ.

ರಾಜಕುಮಾರಿಯೋರ್ವಳನ್ನು ಬೀಳ್ಕೊಡುವ ಚಿತ್ರ(೨), ಶಕುಂತಲೆಯನ್ನು ಸಖಿಯರು ಬೀಳ್ಕೊಡುವ ದೃಶ್ಯ ಕಣ್ಣಿಗೆ ಕಟ್ಟಿದಂತೆ ಮಾಡುತ್ತದೆ. ಹೆಂಗಳೆಯರೆಲ್ಲ ಸುಖವಾಗಿ ತಿಂದುಂಡು ಅಂಗಾಂಗಗಳನ್ನು ತುಂಬಿಸಿಕೊಂಡವರಂತೆ ಚಿತ್ರಿಸಲಾಗಿದೆ. ಲಂಗ, ಕುಪ್ಪಸ, ಧರಿಸಿ ಜರತಾರಿ ಕಿರಿಸೀರೆಯುಟ್ಟ ರಾಜಕುಮಾರಿಯ ಬಲಗೈಯನ್ನು ಕೈಯಲ್ಲಿಟ್ಟುಕೊಂಡು ಗೆಳತಿಯೊಬ್ಬಳು ಸಂತೈಸಿದರೆ, ಎಡಗೈಯಲ್ಲಿ ಇನ್ನೊಬ್ಬಾಕೆ ಕೊಡಮಾಡಿದ ಹೂ ಹಿಡಿದಿದ್ದಾಳೆ. ಸರ್ವರ ಮುಖಗಳೂ ಕಳೆಗುಂದಿ, ಉದ್ವೇಗದಲ್ಲಿದ್ದವರಂತೆ ಕಾಣಿಸುತ್ತಾರೆ. ಹೂವಿನ ತಟ್ಟೆ ಹಿಡಿದವರು, ಚಾಮರ ಬೀಸುವವರು, ಕೈಮುಗಿದು ನಿಂತವರು, ಹೋಗಿ ಬನ್ನಿಯಮ್ಮ ! ಎಂದು ಹೇಳುವವರನ್ನೆಲ್ಲ ಸೇರಿಸಲಾಗಿದೆ. ಅರಮನೆಯ ಸಭಾಗೃಹದ ರಂಗದ ಮೇಲೆ ನರ್ತಿಸುವ ಯುವತಿಗೆ ಹಿಮ್ಮೇಳವಾಗಿ ಒಬ್ಬಳು ತಾಳ ಹಿಡಿದರೆ, ಇನ್ನೊಬ್ಬಳು ಮೃದಂಗ ನುಡಿಸುತ್ತಿದ್ದಾಳೆ. ತಂಬೂರಿ ಮೀಟುವವಳ ಹಿಂಭಾಗದಲ್ಲಿ ನಿಂತಾಕೆ ಪಿಟೀಲಿನ ಮೇಲೆ ಕಲಾತ್ಮಕವಾಗಿ ಕಮಾನು ಓಡಿಸುತ್ತಿದ್ದಾಳೆ. ಕೊನೆಯವಳು ಗಲ್ಲ ಉಬ್ಬಿಸಿ ಮುಖವೀಣೆಯಿಂದ ನಾದ ಹೊರಡಿಸುವುದರಲ್ಲಿ ಮೈ ಮರೆತಿದ್ದಾಳೆ. ಇಲ್ಲಿ ಎಲ್ಲ ಬಗೆಯ ಕಲಾವಿದೆಯರೂ ನಿಂತಿರುವುದರಿಂದ ಇದೊಂದು

ಬೈಠಕ್ ಆಗಿರದೇ ವಿವಿಧ ವಿನೋದಾವಳಿಯ ಅಂಗವಾಗಿರಬಹುದೆಂದು ಅನಿಸುತ್ತದೆ. ಇಂತಹವೇ ವಾದ್ಯಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ (೧೭೯೪-೧೮೬೮) ರಚಿತವಾದ "ಶ್ರೀ ತತ್ವನಿಧಿ"ಯ ಪ್ರತಿಯಲ್ಲಿ ಗುರುತಿಸಬಹುದಾಗಿದೆ.

ತಂಜಾವೂರಿನ ಮಾರಾಠಾ ಅರಸ ದ್ವಿತೀಯ ಸರಭೋಜಿ (೧೭೯೨-೧೮೩೩) ಯ ಪರಿವಾರವನ್ನು ಮೂರು ಕಮಾನುಗಳುಳ್ಳ ಮಂಟಪದಲ್ಲಿ ಚಿತ್ರಿಸಲಾಗಿದೆ. ಶಿರೋಲಂಕಾರ, ಕಲ್ಲಿಮೀಸೆ, ಕೊರಳಹಾರ, ನಿಲುವಂಗಿಗಳಿಂದಾಗಿ ಅರಸನ ವ್ಯಕ್ತಿತ್ವ ತೋರಿಸುವ ಇನ್ನಿತರ ವರ್ಣಚಿತ್ರಗಳ ನೆನಪಾಗುತ್ತದೆ. ಹೈದರಲಿ ೧೭೮೦ರಲ್ಲಿ ತಂಜಾವೂರನ್ನು ಮುತ್ತಿ ಸೂರೆ ಮಾಡಿದ್ದನ್ನು, ಬ್ರಿಟಿಷರು ೧೭೯೯ರಲ್ಲಿ ಆ ರಾಜ್ಯದ ಹೆಚ್ಚಿನ ಅಧಿಕಾರವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡದ್ದನ್ನು, ಇಲ್ಲಿ ಸ್ಮರಿಸಿಕೊಳ್ಳಬಹುದು. ಇದರಿಂದ ವಾರ್ಷಿಕ ಧನಸಹಾಯ ಪಡೆಯುತ್ತಿದ್ದ ಅರಸು ಸರಭೋಜಿ, ಶಿಕ್ಷಣ ಮತ್ತು ಕಲೆಗಳತ್ತ ಗಮನ ಹರಿಸಿದನು. ಮಿಶನರಿಯೊಬ್ಬನಿಂದ ಇಂಗ್ಲೀಷ್ ಕಲಿತನಲ್ಲದೇ ಪರಿಸರ ಮತ್ತು ವಿಜ್ಞಾನಗಳಲ್ಲಿ ಹೆಚ್ಚಿನ ಆಸಕ್ತಿ ತಳೆದನು. ಹೆಸರಾಂತ ಸರಸ್ವತಿ ಮಹಲ್ ಗ್ರಂಥಾಲಯ, ಈ ಅರಸನ ಕೊಡುಗೆ. ಅಲ್ಲದೇ ಚಿತ್ರಶಾಲೆಯೊಂದನ್ನು ಕಟ್ಟಿಸಿ ಅದನ್ನು ಭಿತ್ತಿಚಿತ್ರಗಳಿಂದ ತುಂಬಿಸಿದನು. ಆದರೆ ಕಾಲಕ್ರಮೇಣ ಅವೆಲ್ಲ ನಾಶವಾಗಿ ಹೋಗಿವೆ. ಈ ಚಿತ್ರದಲ್ಲಿ ಅರಸನ ಜೊತೆಗೆ ಅವನ ಮಗ ಶಿವಾಜಿ (೧೮೩೩- ೧೮೫೫) ಇದ್ದಾನೆ. ಅಲ್ಲದೇ ಅವರನ್ನು ಸ್ವಾಗತಿಸಲು ಒಂದು ದೊಡ್ಡ ಪರಿವಾರವೇ ಸೇರಿ ಚವರಿ-ಚಾಮರ ಬೀಸುತ್ತಿದ್ದಾರೆ. ಇಂತಹದೇ ಇನ್ನೊಂದು ಚಿತ್ರದಲ್ಲಿ ದ್ವಿತೀಯ ಬಾಜಿರಾಯ ಪೇಶ್ವೆಯನ್ನು ಗುರುತಿಸಬಹುದು.

ಆರ್ಕಾಟದ ನವಾಬನನ್ನು ಅವನ ಪರಿವಾರದೊಡನೆ ಅರಮನೆಯ ಚಾವಡಿಯ ಹಿನ್ನೆಲೆಯಲ್ಲಿ ಚಿತ್ರಿಸಲಾಗಿದೆ (ಚಿತ್ರ). ಹಿನ್ನೆಲೆಯಾಗಿ ಬಳಸಿದ ಕಮಾನುಗಳ ಮೇಲೆ ಸುಂದರವಾದ ಹೂಬಳ್ಳಿಗಳಿವೆ. ನಿಲುವಂಗಿಯ ಮೇಲೆ ಕೊರಳ ಮುತ್ತಿನಹಾರ ಇಳಿಬಿಟ್ಟ ನವಾಬನ ಮುಖದ ಮೇಲೆ ಕ್ರೌರ್ಯ ತಾಂಡವವಾಡುತ್ತಿದೆ. ಖಡ್ಗವನ್ನು ಎರಡೂ ಕೈಗಳಲ್ಲಿ ಠೀವಿಯಿಂದ ಹಿಡಿದಿದ್ದಾನೆ. ಹಿಂಗಡೆಯಲ್ಲಿ ನಿಂತ ಇವನ ಸೈನಿಕರು ಚಾಮರದಿಂದ ಗಾಳಿ ಬೀಸುತ್ತಿದ್ದಾರೆ. ಮುಂದಿನಿಂದ ಜೋಡಿ ಸಹಾಯಕರು ಬಾಗಿ, ನವಾಬನಿಗೆ ಮುಜರಾ ಮಾಡುತ್ತಿದ್ದಾರೆ. ರಾಜದಂಡ ಹಿಡಿದ ಭಟ್ಟಂಗಿಗಳೀರ್ವರು, ತಮ್ಮ ದೊರೆ ದಕ್ಷಿಣ ಭಾರತದ ಶಾಹೆನ್ ಷಾ ಆಗುವದರಲ್ಲಿ ಸಂಶಯವೇ ಇಲ್ಲ, ಎಂದು ಸಾರುವಂತಿದೆ. ಈ ನವಾಬನು ಬ್ರಿಟಿಷರ ನೆರವಿನಿಂದ ೧೭೭೧ರಲ್ಲಿ ತಂಜಾವೂರಿನ ಅರಸು ತುಳಜಾಜಿಯ ಮೇಲೆ ಆಕ್ರಮಣ ನಡೆಸಿ ಮೂರು ವರ್ಷ ಸತತವಾಗಿ ಆ ರಾಜ್ಯವನ್ನು ಸೂರೆ ಮಾಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಕಡಪಾ ನವಾಬನನ್ನು ಅವನ ದೊಡ್ಡ ಪರಿವಾರದೊಡನೆ ಅರಮನೆಯ ಸಭಾಂಗಣದಲ್ಲಿ ಮದುವೆಯ ದಿಬ್ಬಣದಂತೆ ಚಿತ್ರಿಸಿದ್ದಾರೆ. ಇನ್ನೊಂದು ಚಿತ್ರದಲ್ಲಿ ನವಾಬನ ಮುನೀಮನು ಫಾರಸೀ ಭಾಷೆಯಲ್ಲಿ ಬರೆದದ್ದನ್ನು ಓದಿ ಹೇಳಿದರೆ, ಇನ್ನೊಬ್ಬನು ಓದಿ ಹೇಳಿದ್ದನ್ನು ಬರೆದುಕೊಳ್ಳುವ ರಾಜ, ಕೊಡಗಿನ ವೀರರಾಜ, ಚಿತ್ರದುರ್ಗದ ಮದಕರಿನಾಯಕ, ಕಿತ್ತೂರಿನ ರಾಣಿ ಚೆನ್ನಮ್ಮ ಮೊದಲಾದ ರಾಜ, ರಾಣಿ, ಸಾಮಂತರನ್ನು ಗುರುತಿಸಬಹುದು.

ತುಮಕೂರಿನಿಂದ ಉತ್ತರಕ್ಕೆ ಇಪ್ಪತ್ತೈದು ಕಿಲೋಮೀಟರ್ ದೂರದಲ್ಲಿರುವ ಸೀಬಿಯಲ್ಲಿ ನರಸಿಂಹ ದೇವಾಲವಿದೆ. 'ಹೈದರನಾಮೆ' ಬರೆದ ಫೌಜದಾರ್ ನಲ್ಲಪ್ಪನು ಈ ದೇವಾಲಯವನ್ನು ವಿಸ್ತರಿಸಿ ಅವುಗಳಲ್ಲಿ ಭಿತ್ತಿಚಿತ್ರಗಳನ್ನು ಸೇರಿಸಿದ. (೧೭೯೦). ಹೆಚ್ಚಿನ ಚಿತ್ರಗಳು ಧಾರ್ಮಿಕವಾಗಿದ್ದರೂ ಮಹಾದ್ವಾರದ ಮುಚ್ಚಿಗೆಯಲ್ಲಿ ಅನೇಕ ಸಾಮಾಜಿಕ ಹಾಗೂ ಸಮಕಾಲೀನ ಚಿತ್ರಗಳಿವೆ. ಮೂಲ ಬಣ್ಣಗಳನ್ನೇ ಬಳಸಿದ್ದರಿಂದ ಚಿತ್ರಗಳೆಲ್ಲ ಚಪ್ಪಟೆಯಾಗಿವೆ. ವ್ಯಕ್ತಿ-ಘಟನೆಗಳನ್ನು ಚಿತ್ರಿಸುವದಕ್ಕಾಗಿ ಅರಿಶಿನ, ಹಸಿರು, ನೀಲಿ ಮತ್ತು ಬಿಳಿ ವರ್ಣಗಳ ಕಲಾತ್ಮಕ ಸಂಯೋಜನೆಯಿಂದಾಗಿ ಆಕರ್ಷಕವಾಗಿವೆ. ಈ ವ್ಯಕ್ತಿಗಳ ವೇಷ-ಭೂಷಣ, ಉಡುಪು-ತೊಡಪುಗಳಲ್ಲಿ ಮರಾಠಿಗರ ಪ್ರಭಾವ ಎದ್ದು ಕಾಣುತ್ತದೆ. ಕೆಲವೆಡೆಯಲ್ಲಿ ಸಮಕಾಲೀನ ಜನಸಾಮಾನ್ಯರು ಮಹಮ್ಮದೀಯ ಉಡುಪಿನಲ್ಲಿ ರುವುನ್ನು ಗುರುತಿಸಬಹುದು. ಇದಕ್ಕೆ ಸೀಬಿಯ ಐತಿಹಾಸಿಕ ಹಿನ್ನೆಲೆಯೇ ಕಾರಣವಾಗಿರಬೇಕು. ಈ ಊರು ತುಮಕೂರು ಜಿಲ್ಲೆಯ ಸಿರಾ ತಾಲೂಕಿಗೆ ಸೇರಿದೆ. ಛತ್ರಪತಿ ಶಿವಾಜಿ ಮತ್ತು ವೆಂಕಾಜಿಯವರ ತಂದೆಯಾದ ಶಹಾಜಿ ಭೋಸಲೆಯು (೧೫೯೪-೧೬೬೪) ಸಿರಾ ತಾಲೂಕನ್ನು ವಿಜಾಪುರದ ಆದಿಲ್ ಶಾಹನಿಂದ ಜಹಗೀರಾಗಿ ಪಡೆದನು. ಶಹಾಜಿಯ ನಂತರ ಅದು ಮಗ ವೆಂಕಾಜಿಯ ಆಡಳಿತಕ್ಕೆ ಒಳಗಾಯಿತು. ೧೬೭೭ರಲ್ಲಿ ದಂಡೆತ್ತಿ ಬಂದ ಶಿವಾಜಿಯು ಸಿರಾ ಗೆದ್ದು ಅದನ್ನು ವೆಂಕಾಜಿಯ ಪತ್ನಿ ದೀಪಾಬಾಯಿಗೆ ಉಡುಗೊರೆಯಾಗಿ ಕೊಟ್ಟನು. ಮೊಗಲರ ಸೇನಾಧಿಪತಿ ಕಾಸಿಂಖಾನನು ೧೬೮೭ರಲ್ಲಿ ಅದನ್ನು ಗೆದ್ದು ಮೈಸೂರಿನ ಚಿಕ್ಕ ದೇವರಾಯನಿಗೆ ಮಾರಿಬಿಟ್ಟನು.

ಮಹಾದ್ವಾರದ ಎಡ ಮುಚ್ಚಿಗೆಯಲ್ಲಿ ಹೈದರಲಿಯ ಗುಣಗಾನ ಮಾಡುವ ಶಾಸನವೊಂದನ್ನು ಹೊಸಗನ್ನಡದಲ್ಲಿ ಬರೆಯಲಾಗಿದೆ. (ಎ. ಕ. ೧೨, ಸಂಖ್ಯೆ ೯೮) ಅದರ ಮೇಲ್ಗಡೆಯಲ್ಲಿ ಹೈದರಲಿ-ಟಿಪ್ಪುರ ಚಿತ್ರಪಟ್ಟಿಕೆ ಇದೆ (೫). ಹೈದರಲಿ ನವಾಬನು ರುಮಾಲನ್ನು ಶಿರೋಲಂಕಾರವಾಗಿ ಧರಿಸಿ, ಜರತಾರಿ ನಿಲುವಂದಿ ತೊಟ್ಟು, ಕೈಯಲ್ಲೊಂದು ಹೂವು ಹಿಡಿದು, ರಾಜಠೀವಿಯಿಂದ ಖುರ್ಚಿಯಲ್ಲಿ ಆರೂಢನಾಗಿದ್ದಾನೆ. ಎದುರಿಗೆ ನೆಲಕ್ಕೆ ಹಾಸಿದ ರತ್ನಗಂಬಳಿಯ ಮೇಲೆ ಟಿಪ್ಪುವು ಮಂಡಿಯೂರಿ ಕುಳಿತಿದ್ದಾನೆ. ತಂದೆಗೆ ಪೇದೆಯೋರ್ವನು ಚಾಮರದಿಂದ ಏಕಪ್ರಕಾರವಾಗಿ ಗಾಳಿ ಬೀಸಿದರೆ, ಮಗನಿಗೆ ಇನ್ನೊಬ್ಬನು ಗರಿಯಂತಹ ಬೀಸಣಿಕೆಯಿಂದ ಮೆಲುಗಾಳಿ ಬೀಸಿ ನೆಮ್ಮದಿಯಾಗಿಡುವ ಪ್ರಯತ್ನದಲ್ಲಿದ್ದಾನೆ. ಮೂವರು ಸೇವಕರು ಪ್ರಭುಗಳು ಅಪ್ಪಣೆ ನಿರ್ವಹಿಸಲು ಸದಾ ಸಿದ್ಧ ಎಂಬಂತೆ ಕೈ ಕಟ್ಟಿಕೊಂಡು ನಿಂತಿದ್ದಾರೆ. ಅವರು ಉದ್ದವಾದ ಪಗಡಿ, ಚಿತ್ತಾರದ ಉದ್ದತೋಳಿನ ನಿಲುವಂಗಿ, ಕಾಲಿಗಂಟುವ ಪಾಜಾಮಾ ಧರಿಸಿದ್ದಾರೆ. ಸನಿಹದಲ್ಲೇ ಇದ್ದ ಇನ್ನೊಂದು ಚಿತ್ರಪಟ್ಟಿಕೆಯಲ್ಲಿ ಮೂವರು ಬಂಧುಗಳೊಡನೆ ವಿಚಾರ ವಿನಿಮಯ ನಡೆಸಿರುವ ನಲ್ಲಪ್ಪನನ್ನು ಕಾಣಬಹುದು. (೬). ಹಿನ್ನೆಲೆಯಾಗಿ ಬಳಸಿದ ಮೆತ್ತೆಗಳು, ದಿಂಬುಗಳು, ಕಂಬ, ಕಮಾನುಗಳು, ಹೂ-ಬಳ್ಳಿಗಳು ಅರಮನೆಯ ವಾತಾವರಣ ನಿರ್ಮಿಸಲು ಸಹಾಯಕಾರಿಯಾಗಿವೆ. ತಲೆಗೆ ರುಮಾಲು ಸುತ್ತಿಕೊಂಡು ಚುಕ್ಕೆ ನಕ್ಷೆಗಳಿರುವ ನಿಲುವಂಗಿ ತೊಟ್ಟು ಕೈಯಲ್ಲಿ ಜಪಮಾಲೆ ಹಿಡಿದ ನಲ್ಲಪ್ಪನು, ಟಿಪ್ಪುವಿನಂತೆಯೇ ಮಂಡಿಯೂರಿ

ವಿಸ್ತಾರವಾದ ಜಗಲಿಯಲ್ಲಿ ಕುಳಿತಿದ್ದಾನೆ. ಬಂಧುಗಳು ನಕ್ಷೆಗಳಿದ್ದ ಪೋಷಾಕು, ಮರಾಟಾ ತಲೆಯುಡುಗೆ ಹೋಲುವ ಟೋಪಿ ಧರಿಸಿ, ಚಿತ್ತಾರದ ಬಟ್ಟೆಯ ನಿಲುವಂಗಿ ತೊಟ್ಟು ಕೈಯಲ್ಲಿ ರುದ್ರಾಕ್ಷಮಾಲೆ ಹಿಡಿದು ಅಣ್ಣನ ಮಾತುಗಳನ್ನು ತದೇಕ ಚಿತ್ತದಿಂದ ಕೇಳುತ್ತಿದ್ದಾರೆ. ಬಲಗಡೆಯ ಸೇವಕನು ನಲ್ಲಪ್ಪನಿಗೆ ಗಾಳಿ ಬೀಸುತ್ತಿದ್ದರೆ, ಎಡಗಡೆಯ ನಾಲ್ವರು ಸೇವಕರು ಕೈಕಟ್ಟಿಕೊಂಡು ಧನಿಗಳ ಆಜ್ಞೆಗಾಗಿ ಕಾದು ನಿಂತಿದ್ದಾರೆ.

ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಕಟ್ಟಲಾದ ಶ್ರವಣಬೆಳಗೊಳದ ಚಾರುಕೀರ್ತಿ ಪಂಡಿತಾಚಾರ್ಯರ ಮಠದ ಚಾವಡಿಗಳ ಗೋಡೆಗಳನ್ನು ಜೈನಪುರಾಣಗಳ ಮೇಲೆ ಚಿತ್ರಗಳಿಂದ ತುಂಬಿಸಲಾಗಿದೆ. ಇವುಗಳಲ್ಲಿ ಕಲಾನೈಪುಣ್ಯತೆಯ ಪ್ರದರ್ಶನಕ್ಕಿಂತ ಭಕ್ತರಲ್ಲಿ ದೈವಭಕ್ತಿ ಮೂಡಿಸುವ ಉದ್ದೇಶ ಉತ್ಕಟವಾಗಿದ್ದರಿಂದ ಜೈನಪುರಾಣಗಳಲ್ಲಿಯ ವಿವಿಧ ಘಟನೆಗಳನ್ನು ನಿರೂಪಿಸುವದರಲ್ಲಿ ಹೆಚ್ಚಿನ ಲಕ್ಷ್ಯ ಪೂರೈಸಲಾಗಿದೆ. ಅಂತೆಯೇ ಬಾಹ್ಯರೇಖೆಗಳನ್ನು ಕಾಡಿಗೆ ಕಪ್ಪಿನಿಂದ ರಚಿಸಿ, ಅರಿಸಿನ, ಕೇಸರಿ, ಕೆಂಪುಗಳಿಂದ ವಿವರಗಳನ್ನು ಸೇರಿಸಲಾಗಿದೆ. ಹಿನ್ನೆಲೆಗಾಗಿ ಹಸಿರು, ನೀಲಿ ವರ್ಣಗಳನ್ನು ಬಳಸಲಾಗಿದೆ. ವಿವಿಧ ಬಣ್ಣಗಳನ್ನು ಮಿಶ್ರ ಮಾಡದೇ ಮೂಲಬಣ್ಣಗಳನ್ನೇ ಬಳಸಿದ್ದರಿಂದ ಎರಡು ಶತಮಾನಗಳ ನಂತರವೂ ಅವು ತಮ್ಮತನ ಉಳಿಸಿಕೊಂಡರೂ ಮಳೆ, ಗಾಳಿ, ಬಿಸಿಲು ಮತ್ತು ಪ್ರವಾಸಿಗರ ಕೀಟಲೆಗೆ ತುತ್ತಾಗಿ ಕಳೆಗುಂದಲಾರಂಭಿಸಿವೆ. ದರಿಯಾದೌಲತ್ತಿನವು ಕಾವಲುಗಾರರ ರಕ್ಷಣೆಯಿಂದ ಮತ್ತು ಸೀಬಿಯವು ಮೇಲಿನ ಮುಚ್ಚಳಿಕೆಯ ಮೇಲೆ ಇದ್ದುದರಿಂದ ವಿಧ್ವಂಸಕರಿಗೆ ಸುಲಭವಾಗಿ ಎಟುಕದೆ ಇದ್ದುದರಿಂದ ಅವುಗಳಿಗಿದ್ದ ಸಂರಕ್ಷಣೆ ಶ್ರವಣಬೆಳಗೊಳದವಕ್ಕೆ ಇಲ್ಲ. ಇಷ್ಟು ವರ್ಷ ಬದುಕಿದ್ದೇ ದೊಡ್ಡದ್ದೆನ್ನಬೇಕು.

ಚಕ್ರವರ್ತಿ ಅರವಿಂದನ ಜೀವನವನ್ನು ಆಧರಿಸಿ ಅನೇಕ ಒಳಾಂಗಣ ದೃಶ್ಯಗಳನ್ನು ಸೃಷ್ಟಿಸಲಾಗಿದೆ. ಅರಮನೆಯ ಅಂತಃಪುರದಲ್ಲಿ ರಾಣಿ ಎಡಗೈಯಲ್ಲಿ ಕನ್ನಡಿ ಹಿಡಿದು ಬಲಗೈಯಲ್ಲಿದ್ದ ಕೆಂಬಣ್ಣದ ಗಟ್ಟಿಯನ್ನು ತುಟಿಗಳಿಗೆ ಸವರಿಕೊಳ್ಳುವದು (೭), ಅಂದೂ ತುಟಿಗಳನ್ನು ರಂಗೇರಿಸಲು ತಾಂಬೂಲದ ಹೊರತಾಗಿ ಕೃತ್ರಿಮ ಬಣ್ಣದ ಪ್ರಯೋಗ ಮಾಡುತ್ತಿದ್ದರೆಂಬುದನ್ನು ಸೂಚಿಸುತ್ತದೆ. ಇನ್ನೊಂದು ಚೌಕಟ್ಟಿನಲ್ಲಿ ಶಾರೀರಿಕವಾಗಿ, ಮಾನಸಿಕವಾಗಿ ಬಳಲಿದ ಅರಸನು ವಿರಮಿಸುತ್ತಿದ್ದಾನೆ. (೮). ವೈದ್ಯನು ಔಷಧೋಪಚಾರದ ವಿವರಗಳನ್ನು ತಿಳಿಹೇಳುತ್ತಿರುವಾಗ, ಹತ್ತಿರದಲ್ಲಿ ಕುಳಿತ ರಾಣಿಯು ಪತಿಗೆ ಎಲ್ಲವನ್ನೂ ಸಹಿಸಿಕೊಳ್ಳಲು ವಿನಂತಿಸಿಕೊಳ್ಳುತ್ತಿದ್ದಾಳೆ. ಅರಸನ ತಲೆಯ ಬಳಿ ನಿಂತ ಸೇವಕಿಯು ಗಾಳಿ ಬೀಸುತ್ತಿದ್ದರೆ, ಕಾಲ ಬಳಿಗೆ ಕುಳಿತವಳು ಬೆರಳಿನ ನೆಟಿಕೆ ತೆಗೆಯುತ್ತಿದ್ದಾಳೆ. ಮೂವರು ಅಧಿಕಾರಿಗಳು ಧಣಿಗಳಿಗೆ ತಾಳ್ಮೆಗೆಡದಿರಲು ಕೈಜೋಡಿಸಿ ವಿನಂತಿಸಿಕೊಳ್ಳುತ್ತಿದ್ದರೆ, ಇನ್ನಿಬ್ಬರು ಹಿರಿಯರಾದ ತಾವೇ ಹೀಗೆ ಮಾಡಿದರೆ ಹೇಗೆ? ಎಂಬರ್ಥದಲ್ಲಿ ಪ್ರಶ್ನಿಸುವಂತೆ ಕೈಮಾಡಿದ್ದಾರೆ. ಇನ್ನೊಂದೆಡೆಗೆ ಅರಸನು ಮಂಚದ ಮೇಲೆ ದಿಂಬಿಗೆ ತಲೆಯಿಟ್ಟು, ಮಲಗಿದ್ದಾನೆ. ಹೂವಿನ ನಕ್ಷೆಯ ಹೊಂದಿಕೆ ಹೊದ್ದಿದ್ದಾನೆ. ಸೇವಕಿಯು ಪಾನೀಯದೊಂದಿಗೆ ನಿಂತಿದ್ದಾಳೆ. ಸಮಕಾಲೀನ

ಕಲ್ಲಚ್ಚಿನ ಗ್ರಂಥವಾದ 'ಸೌಗಂಧಿಕಾ ಪರಿಣಯ'ದಲ್ಲಿ ಚಿತ್ರಿತವಾಗಿರುವ ಅರಸು-ಅರಸಿಯರಿಗೂ ಅರವಿಂದ-ರಾಣಿಯರಿಗೂ ಹೋಲಿಕೆ ಇರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಶ್ರವಣಬೆಳ್ಗೊಳವು ಜೈನ ಶಿಕ್ಷಣ ಮುಖ್ಯ ಕೇಂದ್ರವಾದ್ದರಿಂದ ಅನೇಕ ಚೌಕಟ್ಟುಗಳನ್ನು ಗುರು-ಶಿಷ್ಯರಿಗಾಗಿ ಮೀಸಲು ಇಟ್ಟಿದ್ದಾರೆ. ಅಂದಿನ ಸ್ತ್ರೀ ಶಿಕ್ಷಣ ನಿರೂಪಿಸುವ ಚಿತ್ರ ಬಲು ಮೋಜಿನದಾಗಿದೆ. ಗುರುವು ಕಡತದ ನೆರವಿನಿಂದ ಶಿಷ್ಯೆಯರಿಗೆ ವಿಷಯವೊಂದನ್ನು ವಿವರಿಸುತ್ತಿದ್ದಾಗ ಎದುರಿಗೇ ಆಸನಾರೂಢಳಾಗಿದ್ದವಳು ತನಗೆ ಬಂದ ಸಂದೇಹವನ್ನು ದೂರ ಮಾಡಿಕೊಳ್ಳಲು ಪ್ರಶ್ನೆ ಕೇಳುತ್ತಿದ್ದಾಳೆ (ಚಿತ್ರ). ಅವಳ ಹಿಂದೆ ಕುಳಿತ ಇನ್ನಿಬ್ಬರು ತಮ್ಮ ಸಂದೇಹವನ್ನು ನಿವಾರಿಸಿಕೊಳ್ಳಲು ಕೈ ಎತ್ತಿದ್ದಾರೆ. ನಾಲ್ಕನೆಯವಳು ಪಾಠದತ್ತ ಮನಸ್ಸು ಹಾಕದೇ ಯಾರದೋ (ಪ್ರಿಯತಮನಿದ್ದಿರಬಹುದೇ?) ಪ್ರತೀಕ್ಷೆಯಲ್ಲಿ ಹೊರಗಡೆ ಲಕ್ಷ್ಯ ಹರಿಸಿದ್ದಾಳೆ ! ಕಂತಿಯರ ತರಬೇತಿಯ ಚಿತ್ರಗಳನ್ನೂ ಕಾಣಬಹುದಾಗಿದೆ. ಮೂಡಬಿದಿರೆ (ದಕ್ಷಿಣ ಕನ್ನಡ) ಯ ಜೈನಮಠದಲ್ಲೂ ಇಂಥ ಚಿತ್ರಗಳು ಇದ್ದವೆಂದು ಅಲ್ಲಿರುವ ಕುರುಹುಗಳು ಸಾರಿ ಹೇಳುತ್ತವೆ. ಆದರೆ ಅವುಗಳತ್ತ ಯಾರೂ ಲಕ್ಷ್ಯ ಪೂರೈಸದೇ ಇದ್ದುದರಿಂದ ಅವು ಪೋಲಿಗಳ ಕೈಯಲ್ಲಿ ಸಿಕ್ಕು ಅಂದಗೇಡಿಯಾಗಿವೆ. ಹೆಂಗಳೆಯರಿಗೆ ಮೀಸೆ ಸೇರಿಸಿದರೆ, ಪುರುಷರ ಕಣ್ಣುಗುಡ್ಡೆಗಳನ್ನೇ ನಾಶ ಮಾಡುವ ಸಾಹಸ ತೋರಿಸಿದ್ದಾರೆ. ನಮ್ಮ ರಸಿಕರು !

ಮೈಸೂರಿನ ಪರಕಾಲ ಮಠದ ರಸ್ತೆಯಲ್ಲಿರುವ ವೆಂಕಟರಮಣಸ್ವಾಮಿ ದೇವಾಲಯದ ಮಹಡಿಯ ಮೇಲೆ ಪ್ರತ್ಯೇಕ ಚಿತ್ರಶಾಲೆಯೊಂದನ್ನು ನಿರ್ಮಿಸಿದ್ದಾರೆ. ಎಡಗಡೆಯ ಗೋಡೆಯ ಮೇಲೆ ಮೈಸೂರಿನ ಆಳರಸರ ಓಲಗ ದೃಶ್ಯಗಳನ್ನು ಚಿತ್ರಿಸಲಾಗಿದೆ. ರಾಜರ ಹೆಸರನ್ನು ಪಟ್ಟಿಕ್ಕೇರಿದ ವರ್ಷಗಳೊಂದಿಗೆ ಕನ್ನಡದಲ್ಲಿ ಬರೆದಿರುವುದು ಈ ಚಿತ್ರಗಳ ವೈಶಿಷ್ಟ್ಯ. ಪಾಶ್ಚಿಮಾತ್ಯ ಮೂಲ ಬಣ್ಣಗಳನ್ನು ಮಿಶ್ರಣ ಮಾಡದೇ ಬಳಸಿದ್ದರಿಂದ ರಬ್ಬಾಗಿವೆ. ಅರಮನೆಯ ಆವಾರಕ್ಕೆ ಸರಿಹೋಗುವಂತೆ ವೇಷ-ಭೂಷಣ, ಬಟ್ಟೆ-ಬರೆಗಳಿಗೆ ಕೇಸರಿ, ಹಳದಿ ಬಣ್ಣ ಬಳಸಿದ್ದರಿಂದ ಮಿನುಗು ಹೊಳಪಿನ ಅನಿಸಿಕೆ ಹುಟ್ಟಿಸುತ್ತದೆ. ಸೇವಕರು ರಬ್ಬಾದ ನೀಲಿ, ಕೆಂಪು, ಹಸಿರು ಬಣ್ಣದ ಉಡುಪು ಧರಿಸಿದ್ದಾರೆ. ಹಿನ್ನೆಲೆಯಾಗಿ ಕಂಬ, ಕಮಾನು, ಬಾಗಿಲು, ಮಹಡಿಗಳನ್ನು ಚಿತ್ರಿಸಲಾಗಿದೆ. ಎಲ್ಲವೂಗಳಲ್ಲೂ ಒಂದೇ ಬಗೆಯ ಸಿಂಹಾಸನವಿದ್ದು, ಮೈಸೂರಿನ ಸುವರ್ಣ ಸಿಂಹಾಸನಕ್ಕೆ ಬಹಳವಾಗಿ ಹೋಲುತ್ತದೆ. ರಾಜ ಒಡೆಯನು (೧೫೭೮-೧೬೧೭) ವಿಜಯನಗರ ಮಂಡಲಾಧಿಕಾರಿಯ ಅಲಂಕೃತ ಸಿಂಹಾಸವನ್ನು ವಶಪಡಿಸಿಕೊಂಡು ಬಳಸಲಾರಂಭಿಸಿದನೆಂದು ಇತಿಹಾಸದ ಪುಟಗಳಿಂದ ತಿಳಿಯುತ್ತದೆ. ಚಿತ್ರದಲ್ಲಿಯ ಸಿಂಹಾಸನ ಅದೇ ಇದ್ದರೆ ಆಶ್ಚರ್ಯವಿಲ್ಲ. ಶೌರ್ಯ-ಸಾಹಸಗಳ ದ್ಯೋತಕವಾಗಿ ಎಲ್ಲ ಚಿತ್ರಗಳಲ್ಲಿಯೂ ವಜ್ರಖಚಿತ ಖಡ್ಗ-ಢಾಲುಗಳನ್ನು ಸಿಂಹಾಸನದ ಬಳಿ ತೋರಿಸಲಾಗಿದೆ. ಜಗನ್ಮೋಹನ ಅರಮನೆಯಲ್ಲಿರುವ 'ವಂಶಾವತರಣ ವೈಭವ' ಚಿತ್ರದಲ್ಲಿ ಇದೇ ರಾಜಪೀಠವನ್ನು ಗುರುತಿಸಬಹುದು. ಮೊದಲ ನೋಟಕ್ಕೆ ಎಲ್ಲ ಅರಸರೂ ಏಕ ಪ್ರಕಾರವಾಗಿ ಕಂಡರೂ ಅವರ

ವೇಷ-ಭೂಷಣ, ವ್ಯಕ್ತಿತ್ವ, ಆಕಾರಗಳೆಲ್ಲ ಭಿನ್ನವಾಗಿರುವುದು ಕಣ್ಮಲ್ಲಿ ಕಣ್ಣಿಟ್ಟು ನೋಡಿದಾಗ ಅರಿವಾಗುವುದು. ಈ ಚಿತ್ರಗಳಲ್ಲು ಚಿಕ್ಕದೇವರಾಜ (೧೬೭೩-೧೭೦೪), ದ್ವಿತೀಯ ಕಂಠೀರವ ನರಸರಾಜ (೧೭೦೪-೧೪),ದೊಡ್ಡ ಕೃಷ್ಣರಾಜ (೧೭೧೪-೩೨), ಸಪ್ತ ಚಾಮರಾಜ (೧೭೩೨-೩೪), ಚಿಕ್ಕಕೃಷ್ಣರಾಜ (೧೭೩೪-೬೬), ನಂದರಾಜ (೧೭೬೬-೭೦), ಬೆಟ್ಟದ ಚಾಮರಾಜ (೧೭೭೦-೭೬) ಇವರನ್ನು ಗುರುತಿಸಬಹುದು. ಈ ಭಿತ್ತಿಚಿತ್ರಗಳು ಮುಮ್ಮಡಿ ಕೃಷ್ಣರಾಜರ (೧೭೯೯-೧೮೩೧) ಕಾಲದಲ್ಲಿ ರಚಿಸಲ್ಪಟ್ಟಿರಬೇಕು.

ಮೈಸೂರಿನ ಅರಮನೆಯ ಆವಾರದಲ್ಲಿರುವ ಪ್ರಸನ್ನ ಕೃಷ್ಣಸ್ವಾಮಿ ದೇವಾಲದಲ್ಲಿರುವ ಭಿತ್ತಿಚಿತ್ರಗಳು ಭಾಗವತ ಕಥೆಗಳ ಮೇಲೆ ಆಧಾರಿತವಾಗಿದ್ದರೂ ವೈಶಿಷ್ಟ್ಯಪೂರ್ಣವಾಗಿವೆ. ಸಕಲ ಗೋಪಿಯರನ್ನು ಕೃಷ್ಣನೇ ಲಪಟಾಯಿಸಿದನಲ್ಲ! ಎಂದು ನಾರದಮುನಿಗೆ ಸಂಕಟವಾಗಿ, ಒಬ್ಬಳನ್ನಾದರೂ ತನ್ನವಳನ್ನಾಗಿ ಮಾಡಿಕೊಳ್ಳಲು ಅನುವು ಮಾಡಿಕೊಡುವಂತೆ ವಿನಂತಿಸಿಕೊಳ್ಳುತ್ತಾನಂತೆ. ಈ ಸೂಚನೆಯನ್ನು ಒಪ್ಪಿ ಶ್ರೀ ಕೃಷ್ಣನು, ತನ್ನ ಪ್ರೇಮ-ವಾತ್ಸಲ್ಯಗಳಿಂದ ವಂಚಿತಳಾದವಳನ್ನು ಕರೆದೊಯ್ಯಬಹುದು ! ಎಂದು ಸಂತೋಷದಿಂದಲೇ ಹೇಳುತ್ತಾನೆ. ಹೆಣ್ಣಿನ ಸಹವಾಸ, ಸುಖಗಳಿಂದ ವಂಚಿತನಾದ ನಾರದಮುನಿಯು ತಂಬೂರಿ ಮೀಟುತ್ತ, ಮುರಳೀಧರನನ್ನು ಮೆಚ್ಚುತ್ತ, ಗೋಪಿಯರ ಗೃಹಗಳತ್ತ ಎಡತಾಕುತ್ತಾನೆ. ಆದರೆ ಎಲ್ಲಾ ಮನೆಗಳಲ್ಲೂ ಸರ್ವವ್ಯಾಪಿಯಾದ ಶ್ರೀಕೃಷ್ಣನು, ಪ್ರತಿ ಗೋಪಿಯೊಂದಿಗೂ ರಸನಿಮಿಷಗಳನ್ನು ಕಳೆಯುವುದರಲ್ಲಿ ಮೈಮರೆತದ್ದನ್ನು ಕಂಡು ತಾನು ಮೋಸ ಹೋದದ್ದನ್ನು ಅರಿತುಕೊಳ್ಳುತ್ತಾನೆ. ಈ ಹಿನ್ನೆಲೆಯಲ್ಲಿ ಕಲಾಕಾರನು, ಕಲ್ಪನಾ ಸಾಮ್ರಾಜ್ಯದಲ್ಲಿ ವಿಹರಿಸುತ್ತ ಸುಂದರಚಿತ್ರಗಳನ್ನು ರಚಿಸಿದ್ದಾನೆ. ಒಂದೊಂದಾಗಿ ಇವನ್ನು ಪರೀಕ್ಷಿಸಿದರೆ, ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ (ಕ್ರಿ. ಶ. ಸು. ೧೮೦೫) ರಚಿತವಾದ 'ಶ್ರೀ ತತ್ವನಿಧಿ' ಸಚಿತ್ರ ಗ್ರಂಥ ಕಣ್ಣಿಗೆ ಕಟ್ಟಿದಂತಾಗುತ್ತದೆ. ಎರಡನ್ನೂ ರಚಿಸಿದ ಚಿತ್ರಕಾರರು ಒಂದೇ ಗುಂಪಿನವರು ಎಂದು ತಕ್ಷಣ ಹೊಳೆದು ಬಿಡುವುದು. ನೆಲಕ್ಕೆ ಹಾಸಿದ ರತ್ನಗಂಬಳಿಯ ಮೇಲೆ ಕೃಷ್ಣನು ಗೋಪಿಯರೊಂದಿಗೆ ಆಸೀನನಾಗಿದ್ದಾನೆ. ಒರಗಿಕೊಳ್ಳಲು ಮೆತ್ತೆ ದಿಂಬುಗಳು. ಎಡಬಲದಲ್ಲಿ ನಿಂತ ಸೇವಕಿಯರು ವಿವಿಧ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಹಿನ್ನೆಲೆಯಲ್ಲಿ ಕಮಾನು, ಕಂಬಗಳ ಜೊತೆಗೆ ತೂಗುದೀಪ, ಎತ್ತಿ ಕಟ್ಟಿದ ಪರದೆಗಳು, ಅಲ್ಲಲ್ಲಿ ಜಾಮಿತಿ ನಕ್ಷೆಗಳು ಚಿತ್ರಕ್ಕೆ ಪರಿಪಕ್ವತೆ ತಂದುಕೊಡುತ್ತವೆ. ಗೋಪಿಯೋರ್ವಳು ಓರಣವಾಗಿ ಸೀರೆಯನ್ನು ನೆಲಕ್ಕೆ ಹರವಿ ಕುಳಿತು ಎಡಗೈಯಲ್ಲಿದ್ದ ತಂಬೂರಿಯನ್ನು ಮೀಟುತ್ತ ಹಾಡುವಾಗ, ಮೊಣಕಾಲ ಮೇಲೆ ಕುಳಿತ ಕೃಷ್ಣನು ಎಡಗೈಯಿಂದ ತಾಳ ಹಿಡಿದಿರುವನು. ಬಲಕ್ಕಿದ್ದ ಸೇವಕಿ ಬೀಸಣಿಗೆಯಿಂದ ಗಾಳಿ ಹಾಕುತ್ತಿದ್ದರೆ, ಎಡಕ್ಕಿದ್ದವಳು ಹಣ್ಣು ಹಂಪಲುಗಳ ತಟ್ಟೆಯೊಂದಿಗೆ ನಿಂತಿದ್ದಾಳೆ. ಪಗಡೆಯಾಟದ ಚಿತ್ರದಲ್ಲಿ ಕೃಷ್ಣನು ದಾಳಗಳನ್ನು ತಿರುವಿ ಹಾಕುತ್ತಿದ್ದಾಗ, ಹಿಂದೆ ನಿಂತು ಸಖಿಯರು ಯಾರು ಗೆಲ್ಲಬಹುದು ? ಎಂದು ವಿಸ್ಮಯಪಡುತ್ತಿದ್ದಾರೆ.

ವಿಜಯನಗರದಿಂದ ವಲಸೆ ಬಂದ ಆಂಧ್ರದ ರಾಜ ವಂಶಜರು ಸ್ಥಾನೀಯರೊಂದಿಗೆ ಸಕ್ರಿಯರಾಗಿ ಬೆರೆತು ಹೊಸದೊಂದು ಮೈಸೂರು ಕಲಾ ಸಂಪ್ರದಾಯ ಅಸ್ತಿತ್ವದಲ್ಲಿ ಬರುವಂತೆ ಮಾಡಿದರು. ಅಂತೆಯೇ ದೇವಾಲಯಗಳಿಗೇ ಸೀಮಿತವಾಗಿದ್ದ ಭಿತ್ತಿಚಿತ್ರಗಳ ಬದಲಾಗಿ, ಆಗರ್ಭ ಶ್ರೀಮಂತರ ಜೊತೆಗೆ, ಜನಸಾಮಾನ್ಯರಿಗೂ ತಮ್ಮ ಕಲಾಪ್ರೇಮ ತಣಿಸಿಕೊಳ್ಳುವಂಥ ಬಿಡಿ ಚಿತ್ರಗಳಿಗೆ ಹೆಚ್ಚು ಪ್ರಾಶಸ್ತ್ಯ ಸಿಗುವಂತಾಯಿತು. ಬಹುಸಂಖ್ಯಾತರು ಪೂಜಾಗೃಹದಲ್ಲಿ ಇಡಬಹುದಾದಂತಹ ದೇವ-ದೇವತೆಗಳ ಚಿತ್ರಗಳಿಗೇ ಬೇಡಿಕೆ ಮುಂದೆ ಮಾಡಿದ್ದರಿಂದ ಅವುಗಳಲ್ಲಿ ಭಕ್ತಿ ಮೂಡುವಂತೆ ಆರ್ಭಾಟ್ ಆಗಿ ಅವನ್ನು ರಚಿಸುವುದು ಅನಿವಾರ್ಯವಾಯಿತು. ಅತಿ ರಬ್ಬಾದ ಬಣ್ಣಗಳನ್ನು ಬಳಿಯುವುದಲ್ಲದೇ ಬೆಳ್ಳಿ, ಬಂಗಾರದ ಮುಲಾಮು, ಗಿಲೀಟು ತಗಡುಗಳನ್ನು ಬಳಸಲಾರಂಭಿಸಿತು. ಚಿತ್ರಕಲಾ ಪ್ರೇಮಿ ಮುಮ್ಮಡಿ ಕೃಷ್ಣರಾಜರು ಅನೇಕಾನೇಕ ಒಳಾಗಂಣ ದೃಶ್ಯಗಳ ರಚನೆಗೆ ಕಾರಣರಾದರು. ಅಲ್ಲೊಂದು, ಇಲ್ಲೊಂದು ಕಾಣಸಿಗುವ ಇಂಥ ಚಿತ್ರಗಳು ಅವುಗಳ ರಮ್ಯತೆಯನ್ನು ಸಾರಿ ಹೇಳುತ್ತವೆ. ಯುರೋಪಿಯನ್‌ರೊಂದಿಗೆ ನಡೆಸುವ ದರ್ಬಾರಿನಲ್ಲಿ ಮೈಸೂರು ಪೇಟಾಧಾರಿ ಮುಮ್ಮಡಿಯವರು ಸಾಲಂಕೃತ ಖುರ್ಚಿಯೊಂದರಲ್ಲಿ ಆರೂಢರಾಗಿದ್ದಾರೆ. ಹಿನ್ನೆಲೆಯಾಗಿ ಕಮಾನುಗಳಿಂದ ತೂಗುದೀಪಗಳನ್ನು ಚಿತ್ರಿಸಲಾಗಿದೆ. ಎಡಗಡೆಯಲ್ಲಿ ನೆಪೋಲಿಯನ್ನನ ಕಾಲದ ಬಿಗಿಯಾದ ಬಟ್ಟೆ ಧರಿಸಿದ ಯುರೋಪಿಯನ್ನರು ಖುರ್ಚಿಗಳಲ್ಲಿ ಕುಳಿತಿದ್ದರೆ, ಭಾರತೀಯ ಅಂಗರಕ್ಷಕರು ಪಟ್ಟಾ ಧರಿಸಿ ಅವರ ಸನಿಹದಲ್ಲಿಯೇ ನಿಂತಿದ್ದಾರೆ. ಮಹಾರಾಜರ ಪಗಡೀಧಾರಿ ಅಧಿಕಾರಿಗಳು ಬಲಗಡೆಯಲ್ಲಿ ಕೈಕಟ್ಟಿ ನಿಂತಿದ್ದಾರೆ. ನಾಲ್ವರು ನೆಲದ ಮೇಲೆ ಕುಳಿತಿದ್ದಾರೆ. ಸರ್ವರೂ ಉಸಿರು ಬಿಗಿಹಿಡಿದು ಛಾಯಾಚಿತ್ರಕಾರನಿಗೆ ಸಂಪೂರ್ಣ ಸಹಕಾರ ನೀಡುವ ಭಂಗಿಯಲ್ಲಿದ್ದಾರೆ. ಹೆಂಗಳೆಯರೊಂದಿಗೆ ನಡೆಸುವ ದರ್ಬಾರ್ ದೃಶ್ಯದಲ್ಲಿ ಮುಮ್ಮಡಿಯವರು ಉಪ್ಪರಿಗೆಯ ಮೇಲೆ ಆರೂಢರಾಗಿದ್ದಾರೆ. ಏರಿ ಹೋಗಲು ಪಾವಟಿಗೆಗಳಿವೆ. ಎಡಬಲಗಳಲ್ಲಿರುವ ಪಟ್ಟದ ಕುದುರೆ-ಆನೆಗಳಿಗೆ ಸೇವಕರು ಕೊಡೆ ಹಿಡಿದಿದ್ದಾರೆ. ಅವರ ಹಿಂದೆ ಅಂಗರಕ್ಷಕರು ದೊಣ್ಣೆಗಳೊಂದಿಗೆ ನಿಂತಿದ್ದಾರೆ. ಇಕ್ಕೆಲದಲ್ಲಿ ಸರ್ವಾಂಗ ಭೂಷಿತೆಯರಾದ ಹದಿನೈದು ಹೆಂಗಳೆಯರು ತಂಡವಾಗಿ ಅರಸರ ಕೃಪಾಕಟಾಕ್ಷಕ್ಕಾಗಿ ಕಾತರರಾಗಿದ್ದಾರೆ. ಆಚೆ-ಈಚೆ ಸೇನಾಧಿಪತಿಗಳು, ಅಧಿಕಾರಿಗಳು, ಸೇವಕರು ತಮ್ಮ ಲಾಂಛನ ಮತ್ತು ಧ್ವಜಗಳೊಂದಿಗೆ ನಿಂತಿದ್ದಾರೆ. ಹಿನ್ನೆಲೆಯಲ್ಲಿ ಸಾಲಂಕೃತ ಕಂಬ, ಕಮಾನು, ತೂಗುದೀಪಗಳನ್ನು ಚಿತ್ರಿಸಲಾಗಿದೆ. ಶಿವಪೂಜೆಯಲ್ಲಿರುವ ಮಹಾರಾಣಿಯ ಚಿತ್ರದಲ್ಲಿ ಪೀಠದ ಮೇಲೆ ನಂದಿ ಹೊತ್ತ ಶಿವ-ಪಾರ್ವತಿಯನ್ನು ಸ್ಥಾಪಿಸಲಾಗಿದೆ. ಆಭರಣಗಳ ಭಾರ ಹೊತ್ತ ರಾಣಿಯು ಚಿತ್ತಾರದ ರೇಷ್ಮೆ ಸೀರೆಯಲ್ಲಿ ಕೈ ಮುಗಿದು ಕುಳಿತಿದ್ದಾಳೆ. ಎತ್ತರ ಮಣೆಯ ಮೇಲೆ ಪ್ರತಿಷ್ಠಾಪಿತನಾದ ಪುರೋಹಿತನು ಪೂಜಾವಿಧಾನಗಳನ್ನು ವಿವರಿಸುತ್ತಿದ್ದಾನೆ. ಎದುರಿನಲ್ಲಿ ಹಣ್ಣು-ಹಂಪಲ, ಧೂಪ ನೈವೇದ್ಯಗಳನ್ನು ಕಾಣಬಹುದಾಗಿದೆ.

ಮುಮ್ಮಡಿಯವರು ಅನೇಕ ಸಚಿತ್ರ ಹಸ್ತಪ್ರತಿಗಳನ್ನು ಬರೆಯಿಸಿದರು. 'ಶ್ರೀ ತತ್ವನಿಧಿ' ಮತ್ತು 'ಸೌಗಂಧಿಕಾ ಪರಿಣಯ'ಗಳನ್ನು ಹೆಸರಿಸಬಹುದು. ಪ್ರಥಮ ಗ್ರಂಥದಲ್ಲಿ ೨೨೭೩ ಚಿತ್ರಗಳಿದ್ದು ಪಠ್ಯಕ್ಕೆ ಅನುಗುಣವಾಗಿದ್ದರೂ ಅವುಗಳಲ್ಲಿ ಅನೇಕಾನೇಕ ದೃಶ್ಯಗಳಿವೆ. ಪಾಶ್ಚಾತ್ಯರ ರಾಸಾಯನಿಕ ವರ್ಣಗಳನ್ನು ಬಳಸಿ ಲಲಿತವಾದ ರೇಖೆಗಳಿಂದ ಚಿತ್ರಗಳನ್ನು ಆಕರ್ಷಕವಾಗಿ ಮಾಡುವುದರಲ್ಲಿ ಕಲಾಕಾರರು ಸಂಪೂರ್ಣ ಯಶಸ್ವಿಯಾಗಿದ್ದಾರೆ. ದೀಪಕ ರಾಗಮಾಲಿಕೆಯ ಚಿತ್ರ ರಸಿಕರ ಆಸಕ್ತಿ ಕೆರಳಿಸುವಂತಿದೆ. ಶ್ರೀಕೃಷ್ಣನು ಅಲಂಕೃತ ಮಂಚದ ಮೇಲೆ ಪವಡಿಸಿದ ಪತ್ನಿಯರೊಡನೆ ರತಿ-ಕ್ರೀಡೆಗೆ ಹವಣಿಸುತ್ತಿದ್ದಾಗ ಇಬ್ಬರು ಸೇವಕಿಯರು ಅವರಿಗೆ ಆತಂಕವಾಗಬಾರದೆಂದು ಬೆಳಗುವ ದೀಪಗಳನ್ನು ಹೊತ್ತು ಪಕ್ಕದ ಹೊರಬಾಗಿಲಿನಿತ್ತ ಹೊರಟಿದ್ದಾರೆ. ಹಿಂದೋಳ ರಾಗದ ಚಿತ್ರದಲ್ಲಿ ಕೃಷ್ಣನು ಇಬ್ಬರು ಗೋಪಿಯರೊಂದಿಗೆ ಜೋಕಾಲಿಯಲ್ಲಿ ಆರೂಢನಾಗಿದ್ದಾಗ ಸೇವಕಿಯರು ತೂಗುತ್ತಿದ್ದಾರೆ (ಚಿತ್ರ). ದೇಶಕಾರಿ ರಾಗದ ಚಿತ್ರದಲ್ಲಿ ಮಂಚದ ಮೇಲೆ ಪವಡಿಸಿದ ಕೃಷ್ಣ-ರಾಧೆಯರನ್ನು ಸೇವಕಿಯರು ಕದ್ದು ನೋಡುತ್ತಿದ್ದಾರೆ. ಇಂತಹವೇ ಚಿತ್ರಗಳನ್ನು ಕಥಾಗ್ರಂಥವಾದ 'ಸೌಗಂಧಿಕಾ ಪರಿಣಯ'ದಲ್ಲಿಯೂ ಕಾಣಬಹುದು. ಸುಚರಿತ್ರ ರಾಜನು ರಾಣಿ, ಗುಣವತಿ, ಚಂದ್ರಕಳಾ ಮೊದಲಾದವರೊಡನೆ ಶೃಂಗಾರ ಚೇಷ್ಟೆಯಲ್ಲಿ ತೊಡಗಿದ ಅನೇಕಾನೇಕ ಚಿತ್ರಗಳಿವೆ. ವೇಶ್ಯಾವಾಟಿಕೆಯಲ್ಲಿ ನಡೆಯುವ ಹತ್ತು ಹಲವಾರು ಚಟುವಟಿಕೆಗಳನ್ನು ಚಿತ್ರಿಸಲಾಗಿದೆ. ಪಗಡೆ ಚದುರಂಗದಾಟಗಳಿವೆ. ಹೆರಳು ಹಾಕುವುದು, ಅಲಂಕಾರ ಮಾಡುವುದು, ಬಳೆ ತೊಡಿಸುವುದು. ಹೂವು ಮುಡಿಸುವುದು, ಶಯ್ಯಾ ಶೃಂಗಾರದ ಅನೇಕಾನೇಕ ಚಿತ್ರಗಳಿವೆ. ಈ ಗ್ರಂಥವನ್ನು ಕಲ್ಲಚ್ಚಿನಲ್ಲಿ ಮುದ್ರಿಸಲಾಗಿದೆ.

ಕರ್ನಾಟಕದಲ್ಲಿ ಶತಕಗಳ ಹಿಂದೆ ವಿರಚಿತವಾಗಿ ಆಳಿದುಳಿದ ಚಿತ್ರಗಳನ್ನೇ ಅಭ್ಯಸಿಸಿ ಗ್ರಂಥರೂಪದಲ್ಲಿ ಪ್ರಕಟಿಸದೇ ಇರುವದು ಅತ್ಯಂತ ಶೋಚನೀಯ. ಅವು ಸಂಪೂರ್ಣ ನಶಿಸಿ ಹೋಗುವ ಮೊದಲು ಈ ಕಾರ್ಯವಾಗಲೇಬೇಕು.

ಶ್ರೀರಂಗಪಟ್ಟಣದ ದರಿಯಾದೌಲತ್ತಿನ ಭಿತ್ತಿಚಿತ್ರಗಳು



೧. ಝುನಾನಾದಲ್ಲಿ ಮಹಮ್ಮದೀಯ ರಾಜಕುಮಾರಿ



೨. ರಾಜಕುಮಾರಿಯ ಬೀಳ್ಕೊಡುವಿಕೆ



೩. ತಂಜಾವೂರಿನ ದ್ವಿತೀಯ ಸರಭೋಜಿ

೪. ಅರ್ಕಾಟದ ನವಾಬ



೫. ಹೈದರಲಿ ಮತ್ತು ಟಿಪ್ಪು ಸುಲ್ತಾನರು



ಶ್ರವಣಬೆಳಗೊಳದ ಜೈನ ಮಠದಲ್ಲಿಯ ಭಿತ್ತಿಚಿತ್ರಗಳು



೬. ಅರಸಿ ತುಟಿಗಳ ಅಲಂಕಾರದಲ್ಲಿ



೮. ವಿರಮಿಸುತ್ತಿರುವ ಚಕ್ರವರ್ತಿ ಅರವಿಂದ




೭. ಮೈಸೂರಿನ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದ ಭಿತ್ತಿ ಚಿತ್ರಗಳು

೯. ಕೃಷ್ಣ ಮತ್ತು ತಂಬೂರಿ ಮೀಟುತ್ತಿರುವ ಗೋಪಿ



೧೦. ಪಗಡೆಯಾಟದಲ್ಲಿ ಮೈಮರೆತ ಕೃಷ್ಣ ಗೋಪಿ

ಶ್ರವಣ ಬೆಳ್ಗೊಳದ ಭಿತ್ತಿ ಚಿತ್ರದಲ್ಲಿ ಸ್ತ್ರೀ ಶಿಕ್ಷಣ







ಸಹಾಯಕ ಗ್ರಂಥಗಳು

೧. **ಸೌಗಂಧಿಕಾ ಪರಿಣಯ** (ಸಚಿತ್ರ ಕಲ್ಲಚ್ಚಿನ ಪ್ರಗತಿ), ಕಾಲ ಸು. ೧೮೨೫

೨. ಕೆ. ಶಿವರಾಮ ಕಾರಂತ; ಕರ್ನಾಟಕದಲ್ಲಿ ಚಿತ್ರಕಲೆ, ಮೈಸೂರು ವಿಶ್ವವಿದ್ಯಾನಿಲಯ ೧೮೯೧

೩. S.R. Rao & B. V. Shastri : **Traditional Paintings in Karnataka,** Bangalore 1980.

●●●

೮. ಕರ್ನಾಟಕದ ಚಿಕಣಿ ಚಿತ್ರಗಳು

ಚಿಕಣಿ ಚಿತ್ರಗಳು ಚಿಕ್ಕವು ಇರಲೇಬೇಕೆಂಬ ಕಡ್ಡಾಯವಿಲ್ಲ. ಭಿತ್ತಿ ಚಿತ್ರಗಳು ಹಿನ್ನೆಲೆಗೆ ಅಂಟಿಕೊಂಡು ಒಂದೇ ಸ್ಥಳದಲ್ಲಿ ಇರಬೇಕಾದಂತಹವುಗಳಾದರೆ, ಅವುಗಳು ಸ್ಥಳದಿಂದ ಸ್ಥಳಕ್ಕೆ ಸಾಗಿಸಬಹುದಾಗಿದೆ. ಅಂತೆಯೇ ಅವು ಚಿಕ್ಕವು ಇರುವುದು ಅನಿವಾರ್ಯವಾಗಿ ಬಿಡುತ್ತವೆ. ಅವು ಸರ್ವಸಾಧಾರಣ, ಎರಡರಿಂದ ಇಪ್ಪತ್ತು ಇಂಚ ಉದ್ದಗಲತೆ ಉಳ್ಳವು ಇರಬಹುದು. ತಾಳೆಗರಿಗಳ ಗ್ರಂಥಗಳು ಬಳಕೆಯಲ್ಲಿ ಬಂದಾಗ, ಪಠ್ಯದ ಆಧಾರಿತ ಚಿತ್ರಗಳು ಅವುಗಳಲ್ಲಿ ವಿರಾಜಿಸಹತ್ತಿದವು. ಕೈಕಾಗದದ ಉತ್ಪಾದನೆ ಪ್ರಾರಂಭವಾದಾಗ ಈ ಕಲೆಗೆ ಹೊಸ ಆಯಾಮ ಬಂದು, ಗ್ರಂಥದ ಸಂಪೂರ್ಣ ಪುಟ ಅಲಂಕರಿಸಲಾರಂಭಿಸಿದವು. ರಟ್ಟು, ಹಲಿಗೆಗಳು, ಸಿಗಲಾರಂಭಿಸಿದಾಗ ಅವುಗಳು ಗ್ರಂಥಗಳನ್ನು ತ್ಯಜಿಸಿ ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿದವು. ಕಲ್ಲಚ್ಚಿನ (ಲಿಥೋಗ್ರಾಫಿ) ಮುದ್ರಣ ಪ್ರಾರಂಭವಾದಾಗ ಬಹು ಪ್ರತಿಗಳನ್ನು ಪಡೆಯುವಂತೆ ಆಯಿತು. ವರ್ಣ ಮುದ್ರಣ ಬರುವವರೆಗೆ ಬಣ್ಣಗಳನ್ನು ಕೈಯಿಂದಲೇ ತುಂಬಬೇಕಾಗುತ್ತಿತ್ತು. ಹೆಚ್ಚಾಗಿ ಧಾರ್ಮಿಕ ಸ್ಥಳಗಳಲ್ಲಿಯೇ ಭಿತ್ತಿ ಚಿತ್ರಗಳು ರೂಪಗೊಂಡಿದ್ದರಿಂದ ಅವುಗಳಿಗೆ ಸಕಲರೀತಿಯ ಸಂರಕ್ಷಣೆ ದೊರೆತು ಸುರಕ್ಷಿತವಾಗಿ ಬದುಕಿಕೊಂಡವು. ಅಂತೆಯೇ ಎರಡು ಸಹಸ್ರ ವರ್ಷಗಳಷ್ಟು ಹಿಂದಿನ ಅಜಂತಾ ಚಿತ್ರಗಳನ್ನು ಇಂದಿಗೂ ನೋಡಿ ಆನಂದಿಸಬಹುದಾಗಿದೆ. ಅದೇ ಚಿಕಣಿ ಚಿತ್ರಗಳು ಕೊಂಡವರ ಸೊತ್ತಾಗಿ, ದೇಶ ವಿದೇಶಗಳಲ್ಲಿ ಹರಡಿಕೊಂಡವು. ಅನಾಥವಾದವುಗಳು ಧಾರ್ಮಿಕ ಅಂಧರ ಕೈಯಲ್ಲಿ ಕೊನೆಯುಸಿರು ಬಿಡುವಂತೆ ಆಯಿತು. ಬದುಕಿ ಉಳಿದವುಗಳು ಧನಿಕರ, ಕಲಾ ಪ್ರೇಮಿಗಳ ಖಜಾನೆಗಳಲ್ಲಿ ಭದ್ರವಾಗಿ ನಿದ್ರಾವಸ್ಥೆಯಲ್ಲಿ ಇರುವುದರಿಂದ ಇನ್ನಿತರರಿಗೆ ಅವುಗಳ ದರ್ಶನ ಪಡೆಯುವ ಅದೃಷ್ಟವೂ ಇರುವುದಿಲ್ಲ. ಅಂತೆಯೇ ಸಿಗುವ ಅತ್ಯಲ್ಪ ಮಾಹಿತಿ ಚಿತ್ರಗಳೇ ಈ ಲೇಖನಕ್ಕೆ ತಳಹದಿ.

ಚಿಕಣಿ ಚಿತ್ರಗಳು ಎಂಟನೇ ಶತಮಾನದಷ್ಟು ಹಿಂದೆಯೇ ಇಂಗ್ಲಂಡಿನಲ್ಲಿ ಕಾಣಿಸಿಕೊಂಡು, ಅನಂತರ ಯುರೋಪಿನ ಇತರ ರಾಷ್ಟ್ರಗಳಲ್ಲಿ ಹರಡಿಕೊಂಡವು. ಬ್ರಿಟಿಷ್ ವಸ್ತು ಸಂಗ್ರಹಾಲಯ ಒಂದರಲ್ಲಿಯೇ 1,50,000ಕ್ಕಿಂತ ಹೆಚ್ಚು ಚಿತ್ರಗಳು ಇವೆ ಎಂದರೆ ಅವುಗಳ ಜನ ಪ್ರಿಯತೆಯ ಆಳ ಅರಿವಾಗುವುದು . ಉತ್ತರ ಭಾರತದಲ್ಲಿ ಈ ಚಿತ್ರಕಲೆಯ ಪರಂಪರೆಯನ್ನು ರಜಪೂತರು ಪ್ರಾರಂಭಿಸಿದರು. ಮೊಗಲರ ಕಾಲದಲ್ಲಿ ಅದು ಪರ್ಶಿಯಾದ ಪ್ರಭಾವಕ್ಕೆ ಒಳಗಾಯಿತು. 'ಬಾಬರನಾಮಾ'. 'ಅಕಬರನಾಮಾ', 'ಶಹಾಜಾನನಾಮಾ' ಮೊದಲಾದ ಆಳರಸರ ಆತ್ಮಚರಿತ್ರೆಗಳಲ್ಲಿ ಚಿಕಣಿ ಚಿತ್ರಗಳಿವೆ. ಇವುಗಳನ್ನು ರೂಪಿಸುವ ಅನೇಕಾನೇಕ ಶೈಲಿಗಳು ಅಸ್ತಿತ್ವಕ್ಕೆ ಬಂದರೂ ಅವುಗಳಲ್ಲಿ ಹೆಸರುವಾಸಿಯಾದವುಗಳೆಂದರೆ, ಪಹಾಡಿ, ಬಾಶೋಲಿ, ಕಾಂಗ್ರಾ, ಮೇವಾಡ, ಜೋಧಪುರ, ಜೈಪುರ, ಬುಂದಿ, ಚಂಬಾ,

ಮಾಳವಾ, ಬುಂದೇಲಖಂಡ ಇತ್ಯಾದಿ. ಜಗತ್ತಿನ ಎಲ್ಲ ಕಲಾ ಸಂಗ್ರಹಾಲಯಗಳಲ್ಲಿಯೂ ಭಾರತದ ಚಿಕಣಿ ಚಿತ್ರಗಳು ವಿರಾಜಿಸುತ್ತಿರುವಾಗ ಕರ್ನಾಟಕದ ಇಂತಹ ಚಿತ್ರಗಳ ಬಗ್ಗೆ ಕಲಾ ವಿಮರ್ಶಕರಿಗೇ ಅಜ್ಞಾನವಿರುವುದು ಅತ್ಯಂತ ಶೋಚನೀಯ.

ಮೂಡಬಿದಿರೆಯ ಜೈನ ಮಠದ ಸಂರಕ್ಷಣೆ ಪಡೆಯುತ್ತಿರುವ 'ಧವಲ' (ಕ್ರಿ. ಶ. 1113), 'ಜಯಧವಲ' (ಕ್ರಿ. ಶ. 1120), ಮತ್ತು 'ಮಹಾಧವಲ'(ಕ್ರಿ.ಶ. 1143) ತಾಳೇ ಗ್ರಂಥಗಳಲ್ಲಿ ಇರುವ ಚಿಕಣಿ ಚಿತ್ರಗಳೇ ನಮ್ಮಲ್ಲಿ ಕಾಣಸಿಗುವ ಅತೀ ಪುರಾತನವಾದವುಗಳು. ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಗೇರುಸೊಪ್ಪೆಯ ಆಳರಸರು ಜೈನ ಧರ್ಮದ ಪ್ರಸಾರದಲ್ಲಿ ಹೆಚ್ಚಿನ ಆಸಕ್ತಿವಹಿಸಿದ್ದರು. ಅದರಿಂದಾಗಿ ಗ್ರಂಥ ರಚನೆಗೆ ಪ್ರೋತ್ಸಾಹನೆ ಸಿಗುವಂತಾಯಿತು. ಉಕ್ಕಿನ ಕಂಠದ ಬದಲಾಗಿ ಕೂರ್ಚಿಕೆ (ವಿಶಿಷ್ಟವಾದ ಲೇಖನಿ)ಯಿಂದ ಪಠ್ಯ ಬರೆದರೆ, ತೂಲಿಕಾ ಶಲಾಕ (ಅತ್ಯಂತ ನಾಜೂಕಾದ ಕುಂಚ)ದಿಂದ ವರ್ಣ ಚಿತ್ರಗಳನ್ನು ರಚಿಸಿದ್ದಾರೆ. ಗೇರುಸೊಪ್ಪೆಯಲ್ಲಿ ಸಿದ್ಧವಾದ ಈ ಕೃತಿಗಳನ್ನು ಹತ್ತಿರದ ಜೈನರ ಧರ್ಮ ಕೇಂದ್ರವಾದ ಮೂಡಬಿದಿರೆಯ ಮಠಕ್ಕೆ ದಾನವಾಗಿ ಕೊಟ್ಟಿರಬೇಕು. ಪಠ್ಯ ಭಾಷೆ ಪ್ರಾಕೃತವಾಗಿದ್ದರೂ ಅಲ್ಲಲ್ಲಿ ಸಂಸ್ಕೃತಕ್ಕೂ ಎಡೆಮಾಡಿಕೊಟ್ಟರೂ, ಬಳಸಿದ ಲಿಪಿ ಮಾತ್ರ ಕನ್ನಡ. ಈ ಚಿತ್ರಗಳನ್ನು ರಚಿಸಿ ಎಂಟು ಶತಮಾನಗಳೇ ಜಾರಿಕೊಂಡರೂ ಅವುಗಳಲ್ಲಿ ಬಣ್ಣಗಳು ಒಂದಿಷ್ಟೂ ಮಾಸದೇ ಇರುವುದು ಕುತೂಹಲಕಾರಿ. ಸ್ಥಾನೀಯವಾಗಿ ಲಭ್ಯವಿರುವ ವಿವಿಧ ಬಣ್ಣದ ಕಲ್ಲುಗಳನ್ನು ಪುಡಿಮಾಡಿ, ಅಂಟಿನೊಂದಿಗೆ ಮಿಶ್ರಣ ಮಾಡಿರುವುದೇ ಈ ಯಶಸ್ಸಿಗೆ ಕಾರಣ ಇದ್ದಿರಬಹುದು. ಪ್ರಧಾನವಾಗಿ ಕೆಂಪು ಬಳಿಸಿದರೂ ಗಿಡ, ಮರಗಳಿಗಾಗಿ, ತಿಳಿ ಹಸಿರು, ಹೊರರೇಖೆಗಾಗಿ ಕಪ್ಪು ಇನ್ನಿತರ ಕಡೆ ಪಾಟಲಿ, ಗೋಪಿ, ಬಿಳಿ ವರ್ಣಗಳನ್ನು ಲೇಪಿಸಲಾಗಿದೆ. ರೇಖಾಲಾವಣ್ಯಗಳಿಂದಾಗಿ ಚಿತ್ರಗಳು ಅತ್ಯಂತ ಆಕರ್ಷಕವಾಗಿವೆ. ತೀರ್ಥಂಕರರು, ಯಕ್ಷ-ಯಕ್ಷಿಣಿಯರು, ಮುನಿಗಳು, ಸಖಿಯರು, ಸೇವಕರು, ಭಕ್ತವೃಂದಗಳನ್ನು ಚಿತ್ರಿಸುವಲ್ಲಿ ಕಲಾಕಾರನು ವ್ಯಕ್ತಪಡಿಸಿದ ಕೌಶಲ್ಯ ಅಪೂರ್ವವಾದದ್ದು. ಸಕಲವನ್ನೂ ತ್ಯಜಿಸುವುದರ ಜೊತೆಗೆ ಬಟ್ಟೆಗಳನ್ನೂ ತಿರಸ್ಕರಿಸಿದ ಜೈನ ಮುನಿಗಳನ್ನು ಚಿತ್ರಿಸುವುದು ಸುಲಭ ಸಾಧ್ಯವಲ್ಲ. ಅವರ ಈ ತ್ಯಾಗದಲ್ಲಿಯೂ ಕಲಾಕಾರನು ಭವ್ಯತೆಯನ್ನು ತಂದಿರುವನು. ಚತುರ್ಭುಜ ಯಕ್ಷಿಣಿಯರನ್ನು ಚಿತ್ರಿಸುವಾಗಲೂ ಅವರ ಸ್ತ್ರೀತ್ವಕ್ಕೆ ಏನೇನೂ ಕೊರತೆಯಾಗದಂತೆ ಎಚ್ಚರಿಕೆ ವಹಿಸಲಾಗಿದೆ. ಮಹಾಮಾನಸದೇವಿ, ಪದ್ಮಾವತಿ, ಕಾಳಿ, ಶ್ರುತದೇವಿ, ಅಂಬಿಕಾದೇವಿಯರ ಚಿತ್ರಗಳೇ ಆ ಮಾತಿಗೆ ಸಾಕ್ಷಿ, ಕೆಂದುಟಿ, ಉಬ್ಬೆದೆ, ಸಿಂಹಕಟಿ, ವಿಪುಲವಾದ ಆಭರಣಗಳು ವಿಪುಲವಾದ ಕಲಾಕಾರನ ರಸಿಕತೆಗೆ ದ್ಯೋತಕವಾಗಿವೆ.

ವಿಜಾಪುರದ ಸುಲ್ತಾನರು ಶಿಯಾ ಗುಂಪಿಗೆ ಸೇರಿದವರಾದ್ದರಿಂದ ದಿಲ್ಲಿಯ ಸುನ್ನಿ ಮೊಗಲರೊಂದಿಗೆ ಹೆಚ್ಚಿನ ಸಂಪರ್ಕವಿಟ್ಟುಕೊಳ್ಳಲು ಇಚ್ಛಿಸದೇ ತಮ್ಮ ಬಣಕ್ಕೇ ಸೇರಿದ ಇರಾಣದೊಡನೆ ಸಾಂಸ್ಕೃತಿಕ, ಧಾರ್ಮಿಕ ಹಾಗೂ ಕಲಾ ವಿನಿಮಯ ಇಟ್ಟುಕೊಂಡರು. ಅಂತೆಯೇ ಅವರ ಚಿಕಣಿ ಚಿತ್ರಗಳಲ್ಲಿ ಇರಾನದ ವರ್ಚಸ್ಸನ್ನು ಸ್ಫುಟವಾಗಿ

ಗುರುತಿಸಬಹುದಾಗಿದೆ. ಅವರು ಮೊಗಲರಂತೆ ತಮ್ಮ ಅಧಿಕಾರ, ಧನ, ದೌಲತ್ತು, ಯುದ್ಧ ಯಶಸ್ಸುಗಳ ವೈಭವವನ್ನು ಚಿತ್ರಗಳ ಮೂಲಕ ಸಾರುವ ಬದಲಾಗಿ, ಸರ್ವರಿಗೂ ಸಾಮಾನ್ಯವಾದ ವಿರಾಮ, ವಿಚಾರ, ನಗು, ವಿಹಾರಗಳಿಗೆ ಪ್ರಾಧಾನ್ಯ ಕೊಟ್ಟರು. ಜೊತೆಗೆ ನೆರೆ ರಾಜ್ಯಗಳ ಕಲೆಗಳಿಗೂ ಸ್ವಾಗತ ನೀಡಿದ್ದರಿಂದ ವಿಶಿಷ್ಟವಾದ ವಿಜಾಪುರ ಶೈಲಿ, ಬೆಳೆಯಲು ಅನುಕೂಲವಾಯಿತು. ಅವರ ಚಿತ್ರಗಳಲ್ಲಿ ಆನೆ, ಕುದುರೆ, ಹಕ್ಕಿಗಳಿಗೆ ಸುಲ್ತಾನರಷ್ಟೇ ಆದ್ಯತೆ ಕೊಡಲಾಗಿದೆ. ಈ ದೊರೆಗಳು ನೆರೆಹೊರೆಯ ರಾಜ್ಯಗಳೊಂದಿಗೆ ಸತತದ ಕಾಳಗದಲ್ಲಿ ತೊಡಗಿದ್ದರಿಂದ ಮತ್ತು ದಿಲ್ಲಿಯ ಮೊಗಲರು ಒಂದಿಲ್ಲೊಂದು ನೆಪದ ಮೇಲೆ ಉಪಟಳ ಉಂಟು ಮಾಡುತ್ತ ಕ್ರಿ. ಶ. 1680ರಲ್ಲಿ ವಿಜಾಪುರ ರಾಜ್ಯವನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರಿಂದ ಬಹುಸಂಖ್ಯಾತ ಚಿತ್ರಗಳು ಹೇಳ ಹೆಸರಿಲ್ಲದೆ ಕಣ್ಮರೆಯಾದವು. ಅಳಿದುಳಿದ ಚಿತ್ರಗಳು ವಿವಿಧ ರಾಷ್ಟ್ರಗಳಲ್ಲಿ ಹಂಚಿಹೋಗಿವೆ. ಮೊದಲನೇ ಅಲಿಆದಿಲ್ ಶಹಾ (ಕ್ರಿ.ಶ. 1558-1580)ನಿಂದ ಸಿಕಂದರ ಆದಿಲ ಶಹಾ (ಕ್ರಿ.ಶ. 1672-1686) ವರೆಗೆ ಅಂದರೆ ಐವರು ಸುಲ್ತಾನರ ಆಳ್ವಿಕೆಯಲ್ಲಿ ರಚಿತವಾದ 65 ಚಿತ್ರಗಳನ್ನು ಇಲ್ಲವೇ ಚಿತ್ರ ಸಂಗ್ರಹಗಳನ್ನು ವಿಜಾಪುರ ಶೈಲಿಗೆ ಸೇರಿದವು ಎಂದು ಗುರುತಿಸಬಹುದಾಗಿದೆ, ಪ್ರಥಮ ಅಲಿ ಆದಿಲ್ ಶಹಾ ಪತ್ನಿ, ಚಾಂದಬೀಬಿ ಯಲ್ಲಿ ಶೌರ್ಯವಿದ್ದಂತೆ ಸೌಂದರ್ಯವೂ ತುಂಬಿ ತುಳುಕುತ್ತಿತ್ತು, ಎಂದು ಅವಳ ಭಾವಚಿತ್ರ ನೋಡಿದಾಗ ಅರಿವಾಗುವುದು. ಅವಳ ಸಾಕು ಪುತ್ರ, ಇಮ್ಮಡಿ ಇಬ್ರಾಹಿಮ್ ಅದಿಲ್ ಶಹಾ (ಕ್ರಿ. ಶ. 1580-1627) ನು ಸಂಗೀತ, ಶಿಕ್ಷಣ ಕಲೆಗಳಲ್ಲಿ ಹೆಚ್ಚಿನ ಆಸಕ್ತಿ ಉಳ್ಳವನಾಗಿದ್ದನು. ಆವನ ಆಳ್ವಿಕಯೆಲ್ಲಿ ರಚಿಸಲಾಗಿದ್ದ 37 ಚಿತ್ರಗಳಿದ್ದು ಅವುಗಳಲ್ಲಿ ಹದಿನಾರರಲ್ಲಿ ಈ ಸುಲ್ತಾನನನ್ನು ಗುರುತಿಸಬಹುದಾಗಿದೆ. ವೇಗವಾಗಿ ಓಡುವ ಕುದುರೆಗಳು, ದೊರೆ ಸಾಕಿದ 'ಅಬಾಶಖಾನ' ಎಂಬ ಗಂಡಾನೆ, 'ಚಂಚಲ; ಎಂಬ ಹೆಣ್ಣಾನೆ, ಹಂಸಗಳ ಕಾದಾಟ, ಹಕ್ಕಿಗಳ ಆಲಾಪ, ಪ್ರಕೋಪಗಳು, ಸುಂದರವಾಗಿ ಚಿತ್ರಿತವಾಗಿದೆ. ಮಹಮ್ಮದ ಆದಿಲ್ ಶಹಾ (ಕ್ರಿ. ಶ. 1627-1656) ನ ಭಾವಚಿತ್ರದಲ್ಲಿ ಅವನ ಪರಾಕ್ರಮ ಗುರುತಿಸಬಹುದಾಗಿದೆ. ಪ್ರಾರಂಭದಲ್ಲಿ ವಿಜಾಪುರದ ಚಿತ್ರಕಾರರು ಹಿಂದೂಗಳಂತೆ ಅನಾಮಿಕವಾಗಿಯೇ ಇರುತ್ತಿದ್ದರು. ಆದರೆ ಮೊಗಲರ ಸಂಪರ್ಕ ಬರಲಾರಂಭಿಸಿದಾಗ ತಮ್ಮ ಹೆಸರುಗಳನ್ನು ನಮೂದಿಸಲಾರಂಭಿಸಿದರು. ಈ ಚಿತ್ರಗಳಲ್ಲಿ ಎಂಟು ಮಹಮ್ಮದೀಯರಿಂದ ರಚಿತವಾದವುಗಳು ಎಂದು ತಿಳಿಯುತ್ತದೆ.

ಹೈದರ ಅಲಿ (ಕ್ರಿ. ಶ. 1721- 1782) ಮತ್ತು ಟೀಪುಸುಲ್ತಾನ (ಕ್ರಿ. ಶ. 1782-1799)ರು ಸತತವಾಗಿ ಯುದ್ಧದಲ್ಲಿ ತೊಡಗಿದ್ದರಿಂದ, ದಕ್ಷಿಣ ಕರ್ನಾಟಕದಲ್ಲಿ, ಅಲ್ಲಿಯವರೆಗೆ ರಚಿತವಾದ ಯಾವ ಚಿಕಣಿ ಚಿತ್ರವೂ ಇಂದು ಬದುಕಿಕೊಂಡು ಉಳಿದಿಲ್ಲ. ಮೈಸೂರು ಒಡೆಯರ ಮನೆತನದವರು ರಾಜ್ಯದ ಆಡಳಿತೆ ವಹಿಸಿಕೊಂಡ ನಂತರವೇ ಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹನೆ ಸಿಗಲಾರಂಭಿಸಿತು. ಮುಮ್ಮಡಿ ಕೃಷ್ಣರಾಜ ಒಡೆಯರರು (ಕ್ರಿ. ಶ. 1799-1868) ಕರ್ನಾಟಕದ ಚಿತ್ರಕಲೆಯನ್ನು ವೈಭವ ಶಿಖರಕ್ಕೇರಿಸಿದರು. ಅವರು ಅನೇಕ ಸಚಿತ್ರ ಗ್ರಂಥಗಳನ್ನು

ಬರೆಯಿಸಿದರಲ್ಲದೇ ಭಾವಚಿತ್ರಗಳಿಗೂ ಪ್ರೋತ್ಸಾಹನೆ ನೀಡಿದರು. ಅವುಗಳಲ್ಲಿ "ಶ್ರೀ ತತ್ವನಿಧಿ' ಅಪೂರ್ವವಾದ ಚಿತ್ರಕೋಶವಾಗಿದ್ದು, ಇತಿಹಾಸ ತಂತ್ರ, ಆಗಮ, ಶಿಲ್ಪ , ಜ್ಯೋತಿಷ್ಯ, ಶಾಸ್ತ್ರಗಳ ಆಧಾರಿತ ಪುರಾತನ ಗ್ರಂಥ ಮಾಹಿತಿಗೆ ಇಲ್ಲಿ ಚಿತ್ರ ರೂಪ ಕೊಡಲಾಗಿದೆ. ಅತ್ಯಂತ ಗಡುಸಾದ ಜ್ಞಾನವನ್ನು ಜನಸಾಮಾನ್ಯರಿಗೂ ಅರ್ಥವಾಗುವಂತೆ ಚಿತ್ರಗಳ ಮೂಲಕ ತಿಳಿಹೇಳುವ ಈ ಯತ್ನ ಪ್ರಶಂಸನೀಯ. ಅದರಲ್ಲಿ ಒಂಭತ್ತು ಅಧ್ಯಾಯ (ನಿಧಿ)ಗಳಿದ್ದು ಅವುಗಳು 1146 ಪುಟಗಳುಳ್ಳದ್ದಾಗಿವೆ. ಪಠ್ಯ ಭಾಷೆ ಸಂಸ್ಕೃತವಾಗಿದ್ದರೂ ಮೋಡಿ ಕನ್ನಡ ಲಿಪಿ ಬಳಸಲಾಗಿದೆ. ಚಿಕ್ಕದೊಡ್ಡ 2275 ಚಿತ್ರಗಳಿದ್ದು ಅವುಗಳನ್ನು ತಿಳಿ ವರ್ಣಗಳಿಂದ ಅಲಂಕರಿಸಲಾಗಿದೆ. ಮೊದಲು ರೇಖಾಚಿತ್ರಗಳನ್ನು ರಚಿಸಿ ಅನಂತರ ತ್ರಿವರ್ಣ ಸೇರಿಸಲಾಗಿದೆ. ಮೊದಲು ರೇಖಾಚಿತ್ರ ರಚಿಸುವವರು ಮತ್ತು ಬಣ್ಣ ಬಳಿಯುವ ಕಲಾಕಾರರು ಬೇರೆ ಬೇರೆ ಇರಬೇಕು ಎಂದು ಅನಿಸುತ್ತದೆ.

ಶ್ರೀ ತತ್ವನಿಧಿಯಲ್ಲಿ ಚಿತ್ರಿತವಾದ ವ್ಯಕ್ತಿಗಳೆಲ್ಲ ತಿಂದುಂಡು ಸುಖವಾಗಿದ್ದರೆಂದು ಕಾಣುತ್ತದೆ. ಅಂತೆಯೇ ಅವರ ಅಂಗಾಂಗ ತುಂಬಿಕೊಂಡ ದುಂಡಗಿನ ಮುಖ ಉಳ್ಳವರಾಗಿದ್ದಾರೆ. ಹೆಂಗಳೆಯರು, ಕೆಂಪು, ಹಸಿರು, ನೀಲಿವರ್ಣಗಳ ಸೀರೆಗಳನ್ನು ಉಟ್ಟು, ಅಂತಹದೇ ಕುಪ್ಪಸಗಳನ್ನು ತೊಟ್ಟಿದ್ದಾರೆ. ಉದ್ದವಾದ, ಕೂದಲುಗಳನ್ನು ಮುಡಿ.ಆಗಿ ಕಟ್ಟಿ, ಜಡೆಯಾಗಿ ಹೆಣೆದು, ಅವಕಾಶ ಇದ್ದಲ್ಲೆಲ್ಲ ಹೂ ದಂಡೆ, ಆಭರಣಗಳಿಂದ ಸಿಂಗರಿಸಿ ಕೊಂಡಿದ್ದಾರೆ. ಹಣೆಗೆ ಅರ್ಧ ಚಂದ್ರಾಕೃತಿಯ ಕುಂಕುಮ ಧರಿಸಿದ್ದು ಅವರ ವೈಶಿಷ್ಟ್ಯ. ಅವರೆಲ್ಲ ಚಂದ್ರ ಮುಖಿಯರಾಗಿ ಬೊಗಸೆ ಕಣ್ಣುಗಳುಳ್ಳ ಚಲುವೆಯರು. ಜೆಸ್ಕೋ ಚಿತ್ರಕಲೆಯಲ್ಲಿಯೂ ಇಂತಹ ಹೆಂಗಳೆಯರೇ ಕಾಣಸಿಗುತ್ತಾರೆ. ಪುರುಷರ ಧೋತರಗಳೂ ಸೀರೆಗಳಂತೆಯೇ ಇವೆ. ಹೆಚ್ಚಿನ ಗಂಡಸರು ಮೇಲಂಗಿ ತೊಟ್ಟಿಲ್ಲ. ಪಶು, ಪಕ್ಷಿಗಳನ್ನೂ ಕಲಾತ್ಮಕವಾಗಿ ಭಾವಪೂರ್ಣವಾಗಿ ಚಿತ್ರಿಸಲಾಗಿದೆ. ಇಂತಹವೇ ಚಿತ್ರಗಳನ್ನು ಭಿತ್ತಿಚಿತ್ರ ಮತ್ತು ಬಿಡಿಚಿತ್ರಗಳಲ್ಲಿಯೂ ಗುರುತಿಸಬಹುದಾಗಿದೆ. ಈ ಕಲಾಕಾರರೆಲ್ಲ ಒಂದೇ ಗರಡಿಮನೆಯಲ್ಲಿ ಪಳಗಿದವರಾಗಿದ್ದದ್ದೇ ಇದಕ್ಕೆ ಕಾರಣ ಇದ್ದಿರಬಹುದು. 'ಕೌತುಕ ನಿಧಿ'ಯೆಂಬ ಅಧ್ಯಾಯದಲ್ಲಿ ಅನೇಕಾನೇಕ ಆಟಪಾಟಗಳನ್ನು ವಿವರಿಸಲಾಗಿದೆಯಲ್ಲದೆ ಅವುಗಳಲ್ಲಿ ಹಲವು ಈಗ ಪ್ರಚಾರದಲ್ಲಿ ಇಲ್ಲ. ಗೃಹನಿಧಿಯಲ್ಲಿ ಹಕ್ಕಿಗಳಿಂದ ಹಿಡಿದು ಕೀಟಗಳವರೆಗೆ ಸಕಲ ಪ್ರಾಣಿಗಳನ್ನೂ ಚಿತ್ರಿಸಲಾಗಿದೆ.

ಈ ಚಿತ್ರಕೋಶವೂ ಮೈಸೂರಿನ ಒರಿಯೆಂಟಲ್ ಲೈಬ್ರರಿ ಮತ್ತು ಸಂಶೋಧನಾ ಕೇಂದ್ರದಲ್ಲಿದ್ದು ಅದರ ಪ್ರಕಾಶನಕ್ಕೆ ಧನ ಸಹಾಯದ ಕೊರತೆಯ ಜೊತೆಗೆ ಗ್ರಂಥದ ಸ್ವಾಮಿತ್ವ ಯಾರಿಗೆ ಸೇರಿದ್ದು? ಎಂದು ನಿರ್ಧರಿಸಲಾರದೇ ಕಲಾಪ್ರೇಮಿಗಳಿಗೆ ನಿಲುಕದೇ ಮೂಲೆಗುಂಪಾಗಿದೆ. ಅದನ್ನು ವೀಕ್ಷಿಸಲು ಕಷ್ಟಪಟ್ಟು ಅಪ್ಪಣೆ ಪಡೆದಾಗ ಕೆಲವೇ ಪುಟಗಳ ಮೇಲೆ ಕೆಲನಿಮಿಷ ಕಣ್ಣು ಓಡಿಸಲು ಮಾತ್ರ ಅನುವುಮಾಡಿಕೊಟ್ಟರು. ಇದರ ಇನ್ನೊಂದು ಪ್ರತಿ ಮೈಸೂರಿನ ಯುವರಾಜ, ಶ್ರೀಕಂಠದತ್ತ ಒಡೆಯರ ಒಡೆತನದಲ್ಲಿದೆ ಎಂದು ಅರಿತು, ಅವರಿಂದ ಮುಂಚಿತವಾಗಿ ಅನುಮತಿ ಪಡೆದೇ ಅರಮನೆಗೆ ಹೋದರೆ ಕೀಲಿಕೈಗಳಿಲ್ಲ ಎಂಬ

ಕುಂಟ ನೆಪ ಮುಂದೆ ಮಾಡಿ ನುಣುಚಿಕೊಂಡರು. ಈಗ ಮೊದಲ ಸಂಪುಟ ಮಾತ್ರ ಹಂಪಿ ವಿಶ್ವವಿದ್ಯಾಲಯದಿಂದ 1993 ರಲ್ಲಿ ಪ್ರಕಟವಾಗಿದೆ.

'ಶ್ರೀ ತತ್ವನಿಧಿ'ಯನ್ನು ದೇವನಾಗರಿ ಲಿಪಿಯಲ್ಲಿ ಮುಂಬಯಿಯ, ಶ್ರೀ ವೆಂಕಟೇಶ್ವರ ಮುದ್ರಣಾಲಯದಲ್ಲಿ, ಕಲ್ಲಚ್ಚಿನ ಪ್ರತಿಗಳನ್ನು ಕ್ರಿ. ಶ. 1823ರಲ್ಲಿ ಮುದ್ರಿಸಲಾಯಿತು. ಗ್ರಂಥ ಮುದ್ರಣಕ್ಕಾಗಿ ಕ್ರಿ. ಶ. 1840ರಲ್ಲಿ ಮೈಸೂರಿನ 'ಅಂಬಾ ವಿಲಾಸ' ಅರಮನೆಯಲ್ಲಿ ಛಾಪಖಾನೆ ಸ್ಥಾಪಿಸಲಾಯಿತು. ಅನಂತರ ಬೆಂಗಳೂರಿನಲ್ಲಿ ಇನ್ನೊಂದು ಮುದ್ರಣಾಲಯ ಕ್ರಿ. ಶ. 1842ರಲ್ಲಿ ಪ್ರಾರಂಭಿಸಲಾಯಿತು. ಇದರಿಂದ ಸಚಿತ್ರ ಗ್ರಂಥ ಪ್ರಕಟನೆಗೆ ಪ್ರೋತ್ಸಾಹ ದೊರೆಯಿತು. 'ಭಗವದ್ಗೀತೆ' ಕ್ರಿ. ಶ.1850ರಲ್ಲಿ ಮತ್ತು ಕ್ರಿ.ಶ. 1854ರಲ್ಲಿ ಮುದ್ರಣಗೊಂಡವು. ಈ ಎರಡೂ ಕೃತಿಗಳಿಗೂ ಸಂಸ್ಕೃತ ಭಾಷೆ ಮತ್ತು ಕನ್ನಡ ಲಿಪಿ ಬಳಸಲಾಗಿದೆ. ಇದೇ ಕಾಲದಲ್ಲಿ ಪ್ರಕಟವಾದ 'ಸೌಗಂಧಿಕಾ ಪರಿಣಯ' ಗ್ರಂಥವೂ ಚಿಕಣಿ ಚಿತ್ರಗಳಿಗಾಗಿ ಅಪೂರ್ವದದ್ದು. ಪೌರಾಣಿಕ ವಸ್ತುವನ್ನು ಕಥೆಗೆ ಬಳಸಿದರೂ ಅಂದಿನ ಸಮಕಾಲಿನ ಜನಜೀವನವನ್ನು ಚಿತ್ರಗಳ ಮೂಲಕವೇ ಜನಸಾಮಾನ್ಯರಿಗೂ ಅರಿಯುವಂತೆ ಹೇಳುವ ಯತ್ನ ಅತ್ಯಂತ ಯಶಸ್ವಿಯಾಗಿದೆ. ಇಚ್ಛಿತ ವೃಕ್ಷಗಳನ್ನು ಬೆಳೆಸುವ ವಿಧಾನಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಕಸಿ ಮಾಡುವ ವಿಧಾನಗಳಿಂದ ಬೃಹತ್ ಆಕಾರದ ಹಣ್ಣುಗಳನ್ನು ಪಡೆಯುವುದು, ಹೂವುಗಳಷ್ಟೇ ಬಿಡುವಂತೆ ಮಾಡುವುದು ಇಲ್ಲವೇ ಹೂ-ಹಣ್ಣುಗಳನ್ನು ಸಮ ಪ್ರಮಾಣದಲ್ಲಿಯೂ ಪಡೆಯಬಹುದೆಂದು ತೋರಿಸಲಾಗಿದೆ. ಅರಣ್ಯಗಳಲ್ಲಿ ಪಶುಪಕ್ಷಿಗಳು ಹೇಗೆ ಸಹ ಬಾಳ್ವೆ ಮಾಡುತ್ತವೆ? ಎಂದು ಚಿತ್ರಿಸಿ, ಅವುಗಳ ಸಂಖ್ಯೆ ಮಿತಿ ಮೀರಿ ಬೆಳೆದಾಗ, ಬೇಟೆಯಾಡಿಯೋ, ಇಲ್ಲವೇ ಬಲೆಗಳಲ್ಲಿ ಹಿಡಿದು ನಿಯಂತ್ರಿಸುವುದನ್ನೂ ಸೂಚಿಸಲಾಗಿದೆ. ಶಿಕ್ಷಣ ಕುರಿತಾದಂತಹ ಚಿತ್ರಗಳಂತೂ ಬೇರೆಲ್ಲಿಯೂ ಕಾಣಸಿಗದಂತಹವು. ರಾಜಕುಮಾರ, ಜನಸಾಮಾನ್ಯ ಪ್ರೌಢರು, ಸ್ತ್ರೀಯರ ಶಿಕ್ಷಣದ ಚಿತ್ರಗಳ ಜೊತೆಗೆ ಸಂಗೀತ, ನೃತ್ಯ, ಹಾಡುಗಾರಿಕೆಗಳೆಲ್ಲವೂ ಇವೆ. ಸ್ತ್ರೀ, ಪುರುಷರ ಅಲಂಕಾರದ ಚಿತ್ರಗಳಲ್ಲಿ ಕನ್ನಡಿಗರ ಆಭರಣಗಳ ಪ್ರಕಾರಗಳನ್ನು ಕಾಣಬಹುದಾಗಿದೆ. ಅರಸ, ಅರಸಿಯರ ಅಂತಃಪುರದಲ್ಲಿ ಚಟುವಟಿಕೆಗಳು, ನಗ್ನ ಕುವರಿಯರ ಜಲ ಕ್ರೀಡೆಗಳನ್ನು ಕಲಾಕಾರನು ಕಡೆಗಣಿಸಲಿಲ್ಲ. 'ಸಚಿತ್ರ ರಾಮಾಯಣ 'ದಲ್ಲಿ ಚಿತ್ರಗಳಿಗೇ ಪ್ರಾಧಾನ್ಯತೆ ಕೊಟ್ಟು, ಕನ್ನಡ ಲಿಪಿ ಬಳಸಿ, ಸಂಸ್ಕೃತದಲ್ಲಿ ವಿವರಣೆಗಳನ್ನು ಸಂಕ್ಷಿಪ್ತವಾಗಿ ಕೊಡಲಾಗಿದೆ. ರಬ್ಬಾದ ಬಣ್ಣ ಬಳಿಸಿ ಚಿತ್ರಗಳನ್ನು ಆಕರ್ಷಕವಾಗಿ ಮಾಡಲು ಯತ್ನಿಸಲಾಗಿದೆ. ಆದರೆ ವ್ಯಕ್ತಿಗಳಲ್ಲಿ ಯಾವ ಅಂತರವೂ ಇಲ್ಲದ್ದರಿಂದ ಅವರನ್ನು ಬೇರ್ಪಡಿಸುವುದು ಅಸಾಧ್ಯ. ರಾಮ, ಲಕ್ಷ್ಮಣ, ಭರತರನ್ನು ಅವರ ಸ್ಥಾನಮಾನಗಳಿಂದಲೇ ಗುರುತಿಸಬೇಕು. ವಾಲಿ, ಸುಗ್ರೀವ, ಹನುಮಾನ ಮತ್ತು ಇನ್ನಿತರ ಕಪಿಗಳಲ್ಲಿ ಅಂತರವೇ ಇಲ್ಲ. ಸೀತಾದೇವಿಯ ಚಿತ್ರವನ್ನು ನೋಡಿದಾಗ 'ಸೌಗಂಧಿಕಾ ಪರಿಣಯ'ದಲ್ಲಿಯ ಸ್ತ್ರೀ ಚಿತ್ರಗಳು ಕಣ್ಣಿಗೆ ಕಟ್ಟಿದಂತಾಗುತ್ತವೆ. ಇದೇ ಕಲಾ ಶಾಲೆಯವರು, ಇದೇ ಶೈಲಿ ಬಳಸಿ ಸುವರ್ಣ ಲೇಪನದಿಂದ ಜೆಸ್ಸೊ ಚಿತ್ರಗಳನ್ನು ಕನ್ನಡಿಗರಿಗೆ ನೀಡಿದರೆಂಬುದರಲ್ಲಿ ಯಾವ ಸಂಶಯವೂ

ಇಲ್ಲ. ಇವುಗಳಲ್ಲಿ ಅಂಬೆಗಾಲು ಕೃಷ್ಣ, ಕೋದಂಡ ರಾಮ, ಪಟ್ಟಾಭಿಷೇಕ, ಗಿರಿಜಾಕಲ್ಯಾಣ, ದಶಾವತಾರಗಳು, ಸಮುದ್ರ ಮಂಥನ, ವಿಶ್ವರೂಪ ದರ್ಶನ, ಚಾಮುಂಡೇಶ್ವರಿ, ಸರಸ್ವತಿಯ ಚಿತ್ರಗಳು ಅತ್ಯಂತ ಜನಪ್ರಿಯವಾದವು.

ಕಲ್ಲಚ್ಚಿನ 'ವೃಷಭೇಂದ್ರ ವಿಜಯ'ದಲ್ಲಿ ಅನೇಕಾನೇಕ ಶಿವಶರಣರು, ಶರಣೆಯರನ್ನು ಚಿತ್ರಿಸಲಾಗಿದೆ (ಚಿತ್ರ). ವ್ಯಕ್ತಿಗಳಿಗೆ ತಿಳಿಯಾದ ತ್ರಿವರ್ಣ ಬಳಿಸಿದರೂ ಹಿನ್ನೆಲೆಗೆ ಯಾವ ಬಣ್ಣ ಬಳಿಸದೇ ಇರುವುದೇ ಇವುಗಳ ವೈಶಿಷ್ಟ್ಯ. ಈ ಶಿವಭಕ್ತರಲ್ಲಿ ಗಣ್ಯರಾದವರೆಂದರೆ, ಬಸವಣ್ಣ, ಹಡಪದ, ಅಪ್ಪಣ್ಣ, ಮಡಿವಾಳಪ್ಪನವರು, ಮೊಲ್ಲೆ ಬೊಬ್ಬಣ್ಣ, ಚನ್ನಬಸವಣ್ಣ, ರೇವಣ್ಣ ಬಲ್ಲೇಶ, ಬೊಮ್ಮಣ್ಣ, ಪೆದ್ದಣ್ಣ, ಅಜಗಣ್ಣ , ಆಯ್ದಕ್ಕಿ ಮಾರಯ್ಯ, ನಿಜಗುಣ ಶಿವಯೋಗಿ, ಕುಂಬಾರ ಗುಂಡಯ್ಯ, ಪ್ರಭುದೇವ, ಉರಿಲಿಂಗಿದೇವ, ಅಕ್ಕನಾಗಮ್ಮ, ಕೆಂಪಮ್ಮನವರು, ನಿಜಲಿಂಗ ಚಿಕ್ಕಮ್ಮ; ಈ ವ್ಯಕ್ತಿಗಳೆಲ್ಲ ಏಕಪ್ರಕಾರವಾಗಿ ಚಿತ್ರಿತವಾದ್ದರಿಂದ ಅವರ ವ್ಯಕ್ತಿತ್ವ ಹೀಗೆಯೇ ಇದ್ದಿತ್ತು ಎಂದು ಹೇಳಲಾಗದು. ಪ್ರತಿಯೊಬ್ಬರನ್ನು ಕನ್ನಡದಲ್ಲಿ ಹೆಸರಿಸಿದ್ದಾರೆ. ಕಲ್ಲಚ್ಚಿನ 'ಬಸವ ಪುರಾಣ'ದಲ್ಲಿ ವರ್ಣ ರಹಿತ ಮಹಿಷಾಸುರ ಮರ್ದಿನಿ, ಶಿವ, ಗಣೇಶ, ಬಸವಪೂಜೆಗಳಂತಹ ಚಿತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.

ಶಿಕಾರಿಪುರದ ಚಿತ್ರ ಸುರುಳಿ ಕುತೂಹಲಕಾರಿಯಾಗಿದೆ. ಇದರಲ್ಲಿ ಹನ್ನೆರಡು, ಒಂದು ಅಡಿ ಚಚ್ಚೌಕವಾದ ವರ್ಣಚಿತ್ರಗಳಿವೆ. ಇವುಗಳು ತಂತ್ರ, ಮಂತ್ರಗಳಿಗಾಗಿ ಗ್ರಾಮೀಣ ಕಲಾಕಾರನಿಂದ ರಚಿತವಾದವುಗಳು. ಅಂತೆಯೇ ಮಂಡಲ, ಚೌಕ, ವರ್ತುಲ, ಅಂಕಿ, ಅಕ್ಷರಗಳಿಂದ ತುಂಬಿ ತುಳುಕಿಸಲಾಗಿದೆ. ಶಿವನ ಚಿತ್ರಪಟದಲ್ಲಿ, ಆಕಾರದಲ್ಲಿ ಬಾಲೆಯಂತಿರುವ ಪಾರ್ವತಿ ಶಿವನ ಎಡ ತೊಡೆಯನ್ನೇರಿದ್ದಾಳೆ. ಇನ್ನೊಂದರಲ್ಲಿ ತಲೆ ಕೂದಲು ಹರವಿಕೊಂಡು ಕುಳಿತ ಸಾಧುವಿನ ಮೈ, ಕೈ ಕಾಲುಗಳನ್ನೆಲ್ಲ ಅಕ್ಷರಗಳಿಂದ ತುಂಬಲಾಗಿದೆ. ನಂದಿಯ ಚಿತ್ರದಲ್ಲಿ, ಅದು ತನ್ನ ಮುಂದಿನ ಬಲಗಾಲಿನಿಂದ ಮಾನವನ ರುಂಡವನ್ನು ತುಳಿಯುತ್ತಿರುವುದನ್ನು ತೋರಿಸಲಾಗಿದೆ. ಬೇರೊಂದು ಚಿತ್ರದಲ್ಲಿ ಅಧೋ ಕುಂಡಲ ಶಕ್ತಿ ಮತ್ತು ಊರ್ಧ್ವಕುಂಡಲಿ ಶಕ್ತಿಗಳು ಅಕ್ಕಪಕ್ಕದಲ್ಲಿಯೇ ರೂಪಗೊಂಡಿದ್ದಾರೆ. ದೇಹದ ಹಿಂಭಾಗ ಗೋವಿನಂತಿದ್ದು ಕೆಚ್ಚಲು ಉಳ್ಳದ್ದಾಗಿದೆ. ಬಾಲ ಹಾವಿನಂತಿದೆ. ಶರೀರದ ಮುಂಭಾಗ ವ್ಯಾಘ್ರದಂತಿದ್ದು, ಶಿರಭಾಗ ಟಗರಿನಂತಿದೆ. ಚತುರ್ಭುಜೆಯಾಗಿದ್ದು ಪ್ರತಿಯೊಂದು ಕೈಯಲ್ಲಿ ಆಯುಧ, ಗ್ರಂಥ, ಕರಂಡಿಕೆಗಳನ್ನು ಹಿಡಿದಿದ್ದಾಳೆ. ಕಾಲಕೆಳಗೆ ಸಿಂಹ, ಹರಿಣ ಮೊದಲಾದ ಪಶುಗಳನ್ನು ಚಿತ್ರಿಸಲಾಗಿದೆ. ಹಿಂದೊಮ್ಮೆ ಇಂತಹ ತಂತ್ರ ಚಿತ್ರಗಳ ಸುರುಳಿಗಳು ತುಂಬ ಪ್ರಚಾರದಲ್ಲಿ ಇದ್ದಿರಬೇಕು.

ಹದಿನೆಂಟನೇ ಶತಮಾನದ ಅಂತ್ಯದೊಳಗಾಗಿ ಬ್ರಿಟಿಶ್ ಕಲೆಯ ಪ್ರಭಾವ ಕನ್ನಡ ಕಲಾಕಾರರ ಮೇಲೆ ಬೀಳಲಾರಂಭಿಸಿತ್ತು. ವಿದೇಶಿ ಕಾಗದ, ಕುಂಚ, ವರ್ಣಗಳು ಅವರಿಗೆ ಸಿಗಲಾರಂಭಿಸಿದವು. ಅಂತೆಯೇ ವ್ಯಕ್ತಿ ಚಿತ್ರಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗಲಾರಂಭಿಸಿತು. ಮುಮ್ಮಡಿಯವರ ಒಂದು ಸಹಸ್ರಕ್ಕೂ ಹೆಚ್ಚು ವ್ಯಕ್ತಿ ಚಿತ್ರಗಳನ್ನು ಬರೆಯಿಸಿದರು. ಅವುಗಳಲ್ಲಿ

ಬದುಕಿಕೊಂಡ ಕೆಲವೇ ಚಿತ್ರಗಳಾದರೂ ಅಪೂರ್ವವಾಗಿವೆ. ಅವು ಅಂದಿನ ವೇಷಭೂಷಣ, ಸಾಮಾಜಿಕ ಜೀವನಗಳಿಗೆ ಕೈಗನ್ನಡಿಯಾಗಿವೆ. ಕಲಾಕಾರರು ತಮ್ಮ ಹೆಸರುಗಳನ್ನು ಕೂಡ ನಮೂದಿಸದೇ ನಮ್ಮ ದೇಶದಲ್ಲಿ ಅವರ ಭಾವಚಿತ್ರಗಳು ಸಿಗುವುದು ಅಸಾಧ್ಯವೆಂದು ಅನಿಸಿದರೂ ಮುಮ್ಮಡಿಯವರ ಪ್ರೋತ್ಸಾಹನೆಯಿಂದಾಗಿ ಅನೇಕ ಕಲಾಕಾರರ ಚಿತ್ರಗಳು ಉಳಿದುಕೊಂಡಿವೆ. ಮುಮ್ಮಡಿಯವರ ಸಮಕಾಲೀನ ಜನಪ್ರಿಯನಾದ ಚಿತ್ರಕಾರ ವೆಂಕಟಸುಬ್ಬು ಕುಡಿಮೀಸೆಯ ಯುವಕನಾಗಿ ಚಿತ್ರಿತನಾಗಿದ್ದಾನೆ (ಚಿತ್ರ). ಶಿರವನ್ನು ಅಲಕಂರಿಸಿದ ಕರಿಯ ರುಮಾಲು, ಹಣೆಗೆ ಕಿರಿದಾದ ನಾಮ, ಕೊರಳಿಗೆ ಚಿನ್ನದ ಚೈನುಗಳು ಅವನ ವ್ಯಕ್ತಿತ್ವಕ್ಕೆ ಮೆರುಗು ಕೊಟ್ಟಿವೆ. ಅವಧೂತ ವಾಮನ ಬೈರಾಗಿಯ ವೇಷಭೂಷಣ ತೊಟ್ಟು ಹಣೆಗೆ ದೊಡ್ಡ ಬೊಟ್ಟು ಇಟ್ಟುಕೊಂಡಿದ್ದಾನೆ. ನಡುವಯಸ್ಸಿನ ಮೇಸ್ತ್ರಿ ಲಕ್ಷ್ಮಣಯ್ಯಾ, ವಿಶಿಷ್ಟವಾದ ರೀತಿಯಲ್ಲಿ ರುಮಾಲು ಸುತ್ತಿಕೊಂಡು, ಕಸೆಬಂಡಿ ತೊಟ್ಟಿದ್ದಾನೆ. ಅವಧೂತ ಪಾಪಣ್ಣನು, ಮಾರವಾಡಿ ರುಮಾಲು ಸುತ್ತಿಕೊಂಡು, ತಲವಾರ ಮೀಸೆ ಇಟ್ಟುಕೊಂಡು, ಕೊರಳ ತುಂಬ ಮುತ್ತಿನ ಸರಗಳನ್ನು ಧರಿಸಿದ್ದಾನೆ.

ಧಾರ್ಮಿಕ ವ್ಯಕ್ತಿಗಳು ಚಿತ್ರಗಳಲ್ಲಿ ಕಾಣಿಸಿಕೊಳ್ಳುವುದು ತೀರ ಅಪರೂಪ. ಇವನ್ನು ಉಳಿಸಿಕೊಟ್ಟ ಈ ಗೌರವ ನಮ್ಮ ಚಿಕಣಿ ಚಿತ್ರಕಾರರಿಗೆ ಸಲ್ಲಬೇಕು. ಪರಕಾಲ ಮಠದ ಶ್ರೀನಿವಾಸ ಸ್ವಾಮಿಗಳು ವ್ಯಾಸ ಪೀಠದಲ್ಲಿ ಆರೂಢರಾಗಿ ಎಡಕೈಯಲ್ಲಿದ್ದ ತಾಳೆಗ್ರಂಥ ಆಧಾರವಾಗಿಟ್ಟು ಪ್ರವಚನ ಮಾಡುತ್ತಿದ್ದಾರೆ. ಶೃಂಗೇರಿ ಮಠದ ನರಸಿಂಹ ಭಾರತಿ ಸ್ವಾಮಿಗಳು ತಮ್ಮ ಆಕರ್ಷಕ ಪೋಷಾಕಿನಲ್ಲಿ ರೂಪಿತಗೊಂಡಿದ್ದಾರೆ. ವಜ್ರ-ವೈಢೂರ್ಯ ಖಚಿತ ಭೂಷಣ ಶಿರವನ್ನು ಅಲಂಕರಿಸಿ, ಕಸೂತಿ ಮಾಡಿದ ರೇಶಿಮೆಯ ಶಾಲು ಹೊದ್ದು ಭರ್ಜರಿ ಕಂಠಾಭರಣಗಳನ್ನು ಅದರ ಮೇಲೆ ಇಳಿಯಬಿಟ್ಟಿದ್ದಾರೆ. ಜರಿಯ ಅಂಚುಳ್ಳ ರೇಶಿಮೆಯ ಪೀತಾಂಬರ ಉಟ್ಟಿದ್ದಾರೆ. ಯಾವುದೋ ವಿಶೇಷ ಸಮಾರಂಭದಲ್ಲಿ ಪಾಲುಗೊಳ್ಳುತ್ತಿರುವಂತಿದೆ, ಇಳಿವಯಸ್ಸಿನ ಫೀರಶೈವ ಸ್ವಾಮಿಗಳು, ಕುಲಾವಿಯಂತಹ ಶಿರೋಲಂಕಾರ ಧರಿಸಿ ನೆರೆತ ಗಡ್ಡ, ಮೀಸೆ ಬೆಳೆಸಿದ್ದಾರೆ. ಕೊರಳಲ್ಲಿ ರುದ್ರಾಕ್ಷಮಾಲೆಗಳು ಮತ್ತು ಶಿವದಾರಗಳಿದ್ದು, ವಿಚಾರ ವಿಮರ್ಶೆಯಲ್ಲಿ ತಲ್ಲೀನರಾದವರಂತೆ ಕೈಗಳನ್ನು ಕಟ್ಟಿಕೊಂಡು ಕುಳಿತಿದ್ದಾರೆ, ಇನ್ನೊಬ್ಬ ವೀರಶೈವ, ಕೆಂಪುರುಮಾಲು ಸುತ್ತಿಕೊಂಡಿದ್ದಾನೆ. ವಿಭೂತಿಯನ್ನು ಮೂರು ಸಮಾಂತರ ರೇಖೆಯಲ್ಲಿ ಹಚ್ಚಿಕೊಳ್ಳಲಾಗಿದೆ. ಮಸೆದ ಕತ್ತಿಯಂತಿದ್ದ ಕರಿ ಮೀಸೆ, ಹುಲುಸಾಗಿ ಬೆಳೆದ ಗಡ್ಡಗಳು ವ್ಯಕ್ತಿಯ ಬಗ್ಗೆ ಗೌರವ ಮೂಡಿಸುತ್ತವೆ. ಬರಿ ಮೈಯಲ್ಲಿದ್ದರೂ ಬಿಳಿಯ ವಲ್ಲಿಯನ್ನು ಬೆನ್ನ ಮೇಲೆ ಹಾಯಿಸಲಾಗಿದೆ. ಸರದಾರಜಿ ನೆನಪಿಗೆ ತರುವ ಬಸವಣ್ಣನವರ ಅನುಯಾಯಿಯೊಬ್ಬನು, ಎತ್ತರಿಸಿ ರುಮಾಲು ಸುತ್ತಿಕೊಂಡಿದ್ದಾನೆ. ಕುರುಚಲಾದ ಗಡ್ಡ ಬೆಳೆಸಿದ್ದಾನೆ. ಜುಬ್ಬಾ ತೊಟ್ಟು, ತಿಳಿ ಕೆಂಪು ಶಾಲು ಹೊದೆದಿದ್ದಾನೆ. ಕೊರಳಲ್ಲಿ ರುದ್ರಾಕ್ಷಿ ಸರಗಳೊಂದಿಗೆ ಶಿವದಾರವೂ ಇದೆ. ಯುವ ಶಿವ ಭಕ್ತನು ಜುಟ್ಟಕ್ಕೆ ಗಂಟುಹಾಕಿಕೊಂಡು, ಬೆನ್ನ ಹಿಂದೆ ನೇತುಬಿಟ್ಟಿದ್ದಾನೆ. ಹಣೆ ತುಂಬ ವಿಭೂತಿ ಬಳಿದುಕೊಂಡು, ಕೊರಳಿಂದ

ಎರಡೆಳೆಯ ರುದ್ರಾಕ್ಷಿ ಮಾಲೆ ನೇತುಬಿಟ್ಟಿದ್ದಾನೆ. ಯಜ್ಞೋಪವೀತವೂ ಇದೆ. ಬರಿ ಮೈಯಲ್ಲಿದ್ದು ವಿಭೂತಿ ನಾಮಗಳನ್ನು ಎಳೆದುಕೊಂಡಿದ್ದಾನೆ. ಧೋತರ ಉಟ್ಟು, ಕೈಕಟ್ಟಿಕೊಂಡು ನಿಂತಿದ್ದು ನೋಡಿದಾಗ ಇವನು ಛಾಯಾಗ್ರಹಣಕ್ಕಾಗಿ ಸಿದ್ಧವಾಗಿದ್ದಾನೆಯೇ ಎಂದು ಅನಿಸದೇ ಇರದು. ಇನ್ನೊಂದು ಚಿತ್ರದಲ್ಲಿ ನಡು ವಯಸ್ಸಿನ ವೈಷ್ಣವನು, ತಲೆ ಬೋಳಿಸಿಕೊಂಡರೂ ಜುಟ್ಟ ಇಟ್ಟುಕೊಳ್ಳಲು ಮರೆಯಲಿಲ್ಲ. ಮೈ ಮುಖಗಳ ಮೇಲೆಲ್ಲ ಸಂಧ್ಯಾವಂದನೆಗೆ ಬಳಸಿದ ಗೋಪಿಚಂದನದ ನಾಮ, ಮುದ್ರೆಗಳು ಕಂಗೊಳಿಸುತ್ತಿವೆ. ಧೋತರ ಉಟ್ಟು, ಎಡ ಭುಜದ ಶಾಲೊಂದನ್ನು ಇಳಿಯಬಿಡಲಾಗಿದೆ.

ಮಹಾರಾಜರ ಮತ್ತು ಉಚ್ಚ ಅಧಿಕಾರಿಗಳ ಭಾವಚಿತ್ರಗಳು ಹೇರಳವಾಗಿವೆ. ಮುಮ್ಮಡಿಯವರ ಚಿತ್ರಗಳಂತೂ ಎಷ್ಟು ಇವೆ ಎಂದು ಹೇಳಲಸಾಧ್ಯ! ಕೈಯಲ್ಲೊಂದು ಗುಲಾಬಿ ಹಿಡಿದು, ನಗುಮುಖದಲ್ಲಿ ಖುರ್ಚಿಯೊಂದರಲ್ಲಿ ಆಸೀನರಾಗಿರುವ ಚಿತ್ರ ಎಲ್ಲೆಲ್ಲೂ ನೋಡ ಸಿಗುತ್ತವೆ (ಚಿತ್ರ). ಇದೇ ಚಿತ್ರಕ್ಕೆ ಕುಸುರಿನಿಂದ ಕಟ್ಟುಹಾಕಿದ್ದು ಆಕರ್ಷಕವಾಗಿದೆ. ಅದರಂತೆ ಖಡ್ಗಧಾರಿಯಾಗಿ ಖುರ್ಚಿಯಲ್ಲಿ ಕೂತದ್ದು ಅಪೂರ್ವವಾಗಿದೆ. ಇಂತಹದೇ ನಿಂತ ಚಿತ್ರವೂ ಇದೆ. ದಿವಾನ ಪೂರ್ಣಯ್ಯನವರು, ಲೋಕಮಾನ್ಯ ತಿಲಕರು ಬಳಸಿದಂತಹ ರುಮಾಲು ಧರಿಸಿ, ನಿಲುವಂಗಿ ತೊಟ್ಟು, ಬಲ ಭುಜದ ಮೇಲಿಂದ ಶಾಲೊಂದನ್ನು ಇಳಿಯ ಬಿಟ್ಟು ಖುರ್ಚಿಯಲ್ಲಿ ಆಸೀನರಾಗಿದ್ದಾರೆ. ಇದರಂತೆ, ಹೈದರಅಲಿ, ಟೀಪುಸುಲ್ತಾನ, ಲಾರ್ಡ ಕಾರ್ನವಾಲೀಸರ ಭಾವಚಿತ್ರಗಳೂ ಇವೆ. ಇನ್ನೂ ಅನೇಕ ಅಧಿಕಾರಿಗಳ ಚಿತ್ರಗಳು ಇದ್ದರೂ ಅವರನ್ನು ಹೆಸರಿಸದೇ ಇದ್ದರಿಂದ ಅವರನ್ನು ಗುರುತಿಸಲಾಗುವುದಿಲ್ಲ. ಚಿತ್ರಕಾರರು ಜನಸಾಮಾನ್ಯರನ್ನೂ ಕಡೆಗಣಿಸಲಿಲ್ಲ. ತಲೆತುಂಬ ಮುಂಡಾಸು, ಹಣೆಯಲ್ಲಿ ಬಿಳಿ ತಿಲಕ, ಬಿಳಿ ಗಡ್ಡ, ಹುಲುಸಾದ ಕಪ್ಪು ಮೀಸೆ ಬಿಟ್ಟು, ಬಗಲಬಂಡಿ ಧರಿಸಿದ ನಡುವಯಸ್ಕನನ್ನು ಎಲ್ಲಿಯೋ ನೋಡಿದ್ದೇನೆ! ಎಂದು ಅನಿಸುತ್ತಿರುತ್ತದೆ. ಸೈನಿಕನೋರ್ವನು ಬ್ರಿಟಿಶ್ ಸಮವಸ್ತ್ರ ಧರಿಸಿದರೂ, ತನ್ನ ಧರ್ಮ ಗುರುತಿಸುವ ತಿಲಕ ಇಟ್ಟುಕೊಂಡಿದ್ದರಿಂದ ಅಂದಿನ ಉಡುಗೆಯ ವಿರೋಧಾಭಾಸಗಳ ಅರಿವಾಗುವುದು.

ಶ್ರವಣೇಂದ್ರಿಯಗಳಿಗೆ ಇಂಪು ಕೊಡುವ ಸಂಗೀತವನ್ನು ಕಣ್ಣುಗಳಿಗೆ ಹಬ್ಬವನ್ನುಂಟುಮಾಡುವ ಚಿತ್ರಗಳನ್ನಾಗಿ ಮಾರ್ಪಡಿಸಿದ ಸಕಲ ಗೌರವ. ಭಾರತಿಯರಿಗಷ್ಟೇ ಸೀಮಿತವಾಗಿದೆ. ಶಾಸ್ತ್ರೀಯ ಸಂಗೀತ ಅನಾದಿ ಕಾಲದಿಂದಲೇ ನಡೆದುಬಂದಿದೆ ಎಂದು ತಿಳಿಯಲಾಗುತ್ತದೆ. ವೇದ ಕಾಲದಲ್ಲಿ ವಿವಿಧ ಧಾರ್ಮಿಕ ವಿಧಾನಗಳನ್ನು ಪೂರೈಸುವುದಕ್ಕಾಗಿ ರಾಗಗಳು ಹುಟ್ಟಿಕೊಂಡವಂತೆ. ಮೂಲತಃ ರಾಗಗಳು ಆರೇ ಇದ್ದರೂ, ಅವುಗಳು 'ರಾಗಪತ್ನಿ' ಮತ್ತು 'ರಾಗಪುತ್ರ'ರನ್ನು ಸೇರಿಸಿ 84-108 ರಾಗಗಳನ್ನು ಗುರುತಿಸಲಾಗುತ್ತದೆ. ಪ್ರತಿಯೊಂದು ರಾಗದ ಸ್ವಾದ ಪಡೆಯಲು ದಿನದ ನಿರ್ದಿಷ್ಟ ಸಮಯಕ್ಕಷ್ಟೆ ಅವನ್ನು ಸೀಮಿತಗೊಳಿಸಲಾಗಿದೆ. ಈ ರಾಗಗಳ ರಸಗ್ರಹಣಮಾಡುವಾಗ ಯಾವುದೊ ಕಾಲ್ಪನಿಕ ಜಗತ್ತಿನಲ್ಲಿ ವಿಹರಿಸಿದ ಅನುಭವವಾಗುತ್ತದೆ. ಈ ಅಪೂರ್ವವಾದ ಅನುಭವಗಳೇ ರಾಗಮಾಲಾ ಚಿತ್ರಗಳ ತಳಹದಿ.

ನಾಯಕ, ನಾಯಕಿಯರ ಕಾಮ, ಪ್ರೇಮವಿರಹ ಜೀವನ ಬಳಿಸಿ ರಾಗಮಾಲಾ ಚಿತ್ರಗಳ ಕಂತುಗಳು ರಚಿತವಾದವು. ಧಾರ್ಮಿಕ ಕಲಾಕಾರರು ತಮ್ಮ ನೆಚ್ಚಿನ ಶ್ರೀ ಕೃಷ್ಣರಾಧೆ, ಗೋಪಿಯರ ಜೀವನವನ್ನು ಆಧಾರವಾಗಿ ಇಟ್ಟುಕೊಂಡರು. ಶಿವಭಕ್ತರು, ಉಮಾ, ಮಹೇಶ್ವರರನ್ನು ಆದರ್ಶವಾಗಿ ಇಟ್ಟುಕೊಂಡರು. ಮಹಮ್ಮದೀಯರು ಸುಲ್ತಾನ ಮತ್ತು ಅವರ ಪ್ರೇಮಿಗಳ ಸುತ್ತ ಚಿತ್ರಗಳನ್ನು ರಚಿಸಿದರು. ಕನ್ನಡ ಕಲಾಕಾರರು ತಮ್ಮ ನೆಚ್ಚಿನ ಅರಸ, ಅರಸಿಯರನ್ನೇ ಆದರ್ಶವಾಗಿ ಇಟ್ಟುಕೊಂಡರು. ಇಂತಹ ಚಿಕಣಿ ಚಿತ್ರಗಳು ವಿವಿಧ ದೇಶಗಳಲ್ಲೆಲ್ಲ ಹರಡಿಕೊಂಡಿವೆ.

ಬಿಜಾಪುರದ ಸುಲ್ತಾನ, ಇಬ್ರಾಹಿಂ ಆದಿಲ್ ಶಹಾ (ಕ್ರಿ.ಶ. 1580-1627)ನು ಸಂಗೀತಗಾರನಿದ್ದರಿಂದ 'ಕಿತಾಬ್-ಎ-ನೌರಸ್' ಬರೆದು ಅದರಲ್ಲಿ ರಾಗಮಾಲಾ ಚಿತ್ರಗಳನ್ನು ಸೇರಿಸಿ ಅಲಂಕರಿಸಿದ. ಹದಿನಾರನೇ ಶತಮಾನದ ಅಂತ್ಯದಲ್ಲಿ ರಚಿತವಾದ ಒಂಭತ್ತು ರಾಗ ರಾಗಿಣಿಯರ ಚಿತ್ರಗಳು ರಾಜಸ್ಥಾನದ ಬಿಕಾನೇರಿನ ಖಜಾಂಚಿ ಸಂಗ್ರಹದಲ್ಲಿ ಇದ್ದವು. ಈಗ ಅವುಗಳನ್ನು ಬನಾರಸ ಮತ್ತು ದಿಲ್ಲಿಗೆ ಸಾಗಿಸಲಾಗಿದೆ. ಇಂತಹವೇ ಹದಿನೆಂಟು ಚಿತ್ರಗಳು ಆಕ್ಸ್‌ಫರ್ಡ ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಟ್ಟಿವೆ. ದ್ವಿತೀಯ ಅಲಿ ಆದಿಲ್ ಶಹಾ (ಕ್ರಿ.ಶ. 1565-1672) ನೂ ಸಂಗೀತ ಪ್ರೇಮಿಯಾಗಿದ್ದು ರಾಗಮಾಲಾ ಚಿತ್ರಗಳ ರಚನೆಗೆ ಸರ್ವ ಪ್ರೋತ್ಸಾಹ ನೀಡಿದ್ದ.

ಶ್ರೀ ತತ್ವನಿಧಿಯ ನಾಲ್ಕನೇ ಅಧ್ಯಾಯವಾದ 'ಬ್ರಹ್ಮನಿಧಿ' ರಾಗಮಾಲಾ ಚಿತ್ರಗಳಿಗೇ ಮೀಸಲಾಗಿದೆ. ಅದರಲ್ಲಿ ಮೂವತ್ತಾರು ರಾಗಗಳ ಪರಿಚಯವನ್ನು ಚಿತ್ರ ಮೂಲಕವೇ ಮಾಡಲಾಗಿದೆ. ವಿಜಾಪುರದವುಗಳ ಮೇಲೆ ಉತ್ತರ ಭಾರತದ ಪ್ರಭಾವ ಗುರುತಿಸಬಹುದಾದರೂ ಇವು ಅಪ್ಪಟ ಕನ್ನಡನಾಡಿನವೇ ಆಗಿವೆ. ಕೃಷ್ಣ-ರಾಧೆ, ಗೋಪಿಯರ, ಮೂಲಕ ಶಾಂತ, ಶೃಂಗಾರ, ಶೋಕ, ವಿರಹ, ಭಕ್ತಿ ಭಾವಗಳನ್ನು ಹೊರಗೆಡವಲಾಗಿದೆ. ತೋಡಿ ರಾಗದ ಚಿತ್ರದಲ್ಲಿ ನಾಯಕಿ, ವೀಣೆ ನುಡಿಸುತ್ತಿರುವಾಗ, ಸಖಿಯರು ವಿವಿಧವಾದ್ಯಗಳನ್ನು ನುಡಿಸುತ್ತಿದ್ದಾರೆ. ನಾಲ್ಕಾರು ಕೃಷ್ಣಮೃಗಗಳು ತಮ್ಮ ಹಸಿವು, ಬಾಯಾರಿಕೆಗಳನ್ನು ಮರೆತು ಆಲಿಸುತ್ತ ನಿಂತಿವೆ. ದೀಪಕ ರಾಗದ ಚಿತ್ರದಲ್ಲಿ, ನಾಯಕ-ನಾಯಕಿಯರ ಕಾಮ ಚೇಷ್ಟೆಗೆ ಸೀಮೆಯ ದೀಪಗಳು ಆತಂಕ ತರಕೂಡದೆಂದು ಸೇವಕಿಯರಿಬ್ಬರು ಅವನ್ನು ಒಳ ಸಾಗಹಾಕುವುದು ರಸಿಕತೆಯಿಂದ ತುಂಬಿ ತುಳುಕುತ್ತದೆ. 'ಸ್ವರ ಚೂಡಾಮಣಿ' ಗ್ರಂಥವೂ ಮುಮ್ಮಡಿಯವರ ಕಾಲದಲ್ಲಿಯೇ ರಚಿತವಾಯಿತು. ಸ್ವರಗಳನ್ನು ಗುರುತಿಸುವ 'ಸ್ವರ ಮಾಲಾ' ಮತ್ತು ತಾಳಗಳನ್ನು ವಿಂಗಡಿಸುವ 'ತಾಳ ಮಾಲಾ' ಚಿತ್ರಗಳೂ ಚಿತ್ರಿತವಾದವು. ಅಲ್ಲದೇ ವಿವಿಧ ಋತುಗಳ ಭಾವಗಳನ್ನು ವಿಶದಪಡಿಸುವ ಚಿತ್ರಗಳಿಗೂ ಪ್ರೋತ್ಸಾಹ ದೊರಕಿತು. ಆದರೆ ಇವುಗಳೆಲ್ಲ ಒಂದನ್ನೊಂದು ಬಹಳವಾಗಿ ಹೋಲುವುದೇ ಅವುಗಳ ವೈಶಿಷ್ಟ್ಯ. ಕೆಲವು ಪಾರಾಯಣದ ಪುಸ್ತಕಗಳೂ ಚಿಕಣಿ ಚಿತ್ರಗಳನ್ನು (ಚಿತ್ರಗಳು -ರಾಮಾಯಣ, ಸರಸ್ವತಿ, ವಿಷ್ಣು, ಗಣೇಶ).

ಕರ್ನಾಟಕದ ಚಿಕಣಿ ಚಿತ್ರಗಳು

ಸರಸ್ವತಿ




ಗಣಪತಿ





ಯಶೋದಾಕೃಷ್ಣ



ಚಿತ್ರಕಾರ ನಾರಣಪ್ಪ

ವಿಷ್ಣು



ರಾಗ - ರಾಗಿಣಿಯರು (ಹಿಂದೋಳ ರಾಗ)



ಮುಮ್ಮಡಿ ಕೃಷ್ಣರಾಜ ಒಡೆಯರು




ವೀರಶೈವ ಪುರಾಣದ ಚಿಕಣಿ ಚಿತ್ರ




ಅಗ್ನಿದೇವ



ಅರಮನೆಯ ಚಿತ್ರಕಾರರು ಹಾಗೂ ಉದ್ಯೋಗಿಗಳು



ಅರಮನೆಯ ಚಿತ್ರಕಾರರು ಹಾಗೂ ಉದ್ಯೋಗಿಗಳು



ಪಾರಾಯಣ ಪುಸ್ತಕದಲ್ಲಿ ಚಿತ್ರಿತ ರಾಮಾಯಣ ದೃಶ್ಯಗಳು





ಪಾರಾಯಣ ಪುಸ್ತಕದಲ್ಲಿ ಚಿತ್ರಿತ ರಾಮಾಯಣ ದೃಶ್ಯಗಳು





೯. 'ಸೌಗಂಧಿಕಾ ಪರಿಣಯದಲ್ಲಿ' ಸಸ್ಯಶಾಸ್ತ್ರ ಹಾಗೂ ಕಲೆ

ಎಲ್ಲೆಲ್ಲಿಯೂ ಸಸ್ಯ ಕೋಟಿ ತಲೆಯೆತ್ತಿ ವಿರಾಜಿಸುತ್ತಿದ್ದ ಕಾಲದಲ್ಲಿ ಪೂರ್ವಜರು ಅದರಲ್ಲಿ ದೈವೀರೂಪವನ್ನು ಕಂಡಿದ್ದರು. ನಮ್ಮ ದೈನಂದಿನ ಜೀವನದ ಮೇಲೆ ಸಸ್ಯಗಳು ಬೀರುವ ಪ್ರಭಾವವನ್ನು ಚೆನ್ನಾಗಿ ಗುರುತಿಸಿದ್ದರು. ಅಂತೆಯೇ ಗಿಡಮರಗಳನ್ನು ನೆಡುವುದನ್ನೇ ಒಂದು ವ್ರತವನ್ನಾಗಿಸಿ, ವೃಕ್ಷ ನೋಂಪಿ/ಕ್ಷಿತಿರುಹ ನೋಂಪಿ ಮುಂತಾದವನ್ನು ಆಚರಿಸುವದರಲ್ಲಿ ಸಾರ್ಥಕತೆ ಕಂಡರು. 'ವೃಕ್ಷಾಯುರ್ವೇದ'ವನ್ನು ಶಾಸ್ತ್ರವಾಗಿ ಅಭ್ಯಸಿಸಿದರು. ಗಿಡಮರಗಳ ಸಂರಕ್ಷಣೆ, ಪಂಡಿತರಿಂದ ಪಾಮರರವರೆಗೆ ಎಲ್ಲರಿಗೂ ಸಂಬಂಧಪಟ್ಟ ವಿಷಯವೆಂಬುದನ್ನು ತುಂಬ ಹಿಂದೆಯೇ ಮನಗಂಡು ಅರಸರಾದಿಯಾಗಿ ಎಲ್ಲರೂ ಅಭ್ಯಸಿಸಬೇಕಾದ ವಿಷಯವನ್ನಾಗಿ ವೃಕ್ಷಾಯುರ್ವೇದವನ್ನು ರೂಪಿಸಿಕೊಂಡರು. ಕ್ರಿ.ಶ. ಪೂರ್ವ ಒಂದನೆಯ ಶತಮಾನದಲ್ಲಿ ರಚಿತವಾದದ್ದೆಂದು ಹೇಳಲಾಗುವ ವರಾಹ ಮಿಹಿರನ ಬೃಹತ್ ಸಂಹಿತೆಯಲ್ಲಿ ಸಸ್ಯಶಾಸ್ತ್ರದ ಅವಶ್ಯಕತೆ, ಅಭ್ಯಸನಗಳನ್ನು ಗುರುತಿಸಲಾಗಿದೆ. ಕರ್ನಾಟಕದಲ್ಲಿ ಅರಸರಿಂದ ಸಾಮಾನ್ಯರವರೆಗೆ ಅಧ್ಯಯನ ಯೋಗ್ಯವಾಗಿದ್ದ ಚಾವುಂಡರಾಯನ ಲೋಕೋಪಕಾರಂ (ಕ್ರಿ.ಶ. 1025), ಎಂಬ ವಿವಿಧ ಶಾಸ್ತ್ರಗಳ ಕನ್ನಡ ಕೈಪಿಡಿ, ಸಾರ್ವಕಾಲಿಕ ಜನೋಪಯೋಗಿ ಗ್ರಂಥವಾಗಿದೆ, ಕಲ್ಯಾಣದ ಚಾಲುಕ್ಯ ದೊರೆ, ಮುಮ್ಮಡಿ ಸೋಮೇಶ್ವರನು ಕ್ರಿ. ಶ. 1126-1138) ರಚಿಸಿದ 'ಮಾನಸೋಲ್ಲಾಸ' ಅಥವಾ 'ಅಭಿಲಷಿತಾರ್ಥ ಚಿಂತಾಮಣಿ'ಯು, ಸಂಸ್ಕೃತದಲ್ಲಿ ರಚಿತವಾದ ಅರಸರು ಅಭ್ಯಸಿಸಬೇಕಾದ ಹಲವಾರು ವಿಷಯಗಳ ಕೈಪಿಡಿಯಾಗಿದ್ದರೆ ಕೆಳದಿಯ ಅರಸು ಬಸವಪ್ಪ ನಾಯಕನ (ಕ್ರಿ. ಶ. 1684-1710) 'ಶಿವತತ್ವರತ್ನಾಕರ'ವು ಸಂಸ್ಕೃತ ಭಾಷೆಯಲ್ಲಿದ್ದು ಅಂದಿನ ವಿಶ್ವಕೋಶದಂತಿದೆ. ಈ ಮೂರೂ ಗ್ರಂಥಗಳಲ್ಲಿ ಸಸ್ಯಶಾಸ್ತ್ರದ ವಿವರಗಳಿದ್ದು ಹೆಚ್ಚು ಕಡಿಮೆ ಒಂದೇ ಆಗಿವೆ. ಈ ಲೋಕೋಪಯೋಗಿ ಶಾಸ್ತ್ರದ ಅಧ್ಯಯನ ಪರಂಪರೆಯನ್ನು ಮೈಸೂರರಸರೂ ಮುಂದುವರಿಸಿಕೊಂಡು ಬಂದರು.

ಮೈಸೂರು ಅರಮನೆಯ ಆವಾರದಲ್ಲಿರುವ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದ ಹೊರಜಗಲಿಯಲ್ಲಿ ನಿಲ್ಲಿಸಿದ ಮುಮ್ಮಡಿ ಕೃಷ್ಣರಾಜ ಒಡೆಯರ ಕ್ರಿ.ಶ.1829ರ ಶಾಸನವು ಆವರ ಆಳ್ವಿಕೆಯ ಮಹತ್ತರ ಸಾಧನೆಗಳನ್ನು ಸಾರುತ್ತದೆ, 'ಶ್ರೀ ತತ್ವನಿಧಿ' ಮತ್ತು 'ಸೌಗಂಧಿಕಾ ಪರಿಣಯ' ಎಂಬ ಎರಡು ಅಪೂರ್ವ ಗ್ರಂಥಗಳನ್ನು ಕನ್ನಡದಲ್ಲಿ ಬರೆಯಲಾಗಿದೆ ಎಂದು ಆ ಶಾಸನದಿಂದ ಅರಿತು ಅದೇ ಪಟ್ಟಣದ ಓರಿಯಂಟಲ್ ಗ್ರಂಥಾಲಯದಲ್ಲಿರುವ 'ಶ್ರೀ ತತ್ವನಿಧಿ'ಗ್ರಂಥದ ಮೇಲೆ ಕೆಲ ನಿಮಿಷ ಕಣ್ಣು ಓಡಿಸಲು ಸದವಕಾಶ ಲಭಿಸಿತ್ತು! ಇನ್ನೊಂದು ಕೃತಿಯಲ್ಲಿಯೂ ಇಂಥ ಅಪೂರ್ವ ಚಿತ್ರಗಳಿರಬಹುದೇ? ಎಂಬ ಕುತೂಹಲದಿಂದ ಹಿರಿಯರಲ್ಲಿ ವಿಚಾರಿಸಿದಾಗ ಹಳೇ ಕಲ್ಲಚ್ಚಿನ ಪ್ರತಿ ಕಾಣುವಂತಾದರೂ ಅದರಲ್ಲಿ ಚಿತ್ರಗಳಿರಲಿಲ್ಲ.

ಬೆಂಗಳೂರಿನಲ್ಲಿ ಸಚಿತ್ರ ಪ್ರತಿ ಸಿಗುವ ಸಾಧ್ಯತೆಯಿದೆ, ಎಂದರಿತು ಯತ್ನಿಸಿದಾಗ ಖ್ಯಾತ ಸಂಶೋಧಕ -ಸಾಹಿತಿ ಡಾ. ಎಂ. ಚಿದಾನಂದ ಮೂರ್ತಿಗಳು ತಮ್ಮಲ್ಲಿರುವ ಪ್ರತಿಯನ್ನು ಅಭ್ಯಸಿಸಲು ಅನುವು ಮಾಡಿಕೊಟ್ಟರು. ಲೇಖಕನು ಅವರಿಗೆ ಋಣಿಯಾಗಿರುವ.

ಕೃತಿಸ್ವಾಮ್ಯದ ಜಂಜಾಟವಿಲ್ಲದೆ ಹಿಂದಿನ ಯುಗದಲ್ಲಿ ಗ್ರಂಥಕರ್ತರಿಗೆಲ್ಲ, ಅರಿವು ಜನರಿಗೆ ತಲುಪುವುದೇ ಮುಖ್ಯ ಉದ್ದೇಶವಾಗಿತ್ತು. ಕನ್ನಡ, ಸಂಸ್ಕೃತ ಭಾಷೆಗಳಲ್ಲಿ ಬೇರೆ ಬೇರೆ ಶತಮಾನಗಳಲ್ಲಿ ಬರೆದರೂ ಸಸ್ಯಶಾಸ್ತ್ರ ವಿಷಯವೆಲ್ಲ ಒಂದೇ ತೆರನಾಗಿದೆ. ಸೌಗಂಧಿಕಾ ಪರಿಣಯ 19ನೆಯ ಶತಮಾನದ ಕೃತಿಯಾದರೂ ಅದರಲ್ಲಿ ಈ ಸಂಬಂಧಿತ ವಿಷಯದಲ್ಲಿ 'ಲೋಕೋಪಕಾರಂ' ಮತ್ತು 'ಮಾನಸೋಲ್ಲಾಸ' ಛಾಯೆ ದಟ್ಟವಾಗಿದೆ, ಮತ್ತು 'ಶಿವ ತತ್ವರತ್ನಾಕರ'ಕ್ಕೆ ತೀರ ಹತ್ತಿರವಾಗಿದೆ, ಅನಿಸದಿರದು. ಇದರಲ್ಲಿ ಸಸ್ಯಶಾಸ್ತ್ರದ ಕುರಿತಾದ ಮಾಹಿತಿ 1043ಪರಿಚ್ಛೇದದಿಂದ 1072ರವರೆಗೆ ಹರಡಿಕೊಂಡಿದೆ. ಪ್ರಜೆಗಳ ಆಹಾರ, ಅಲಂಕಾರ, ಫಲಪುಷ್ಪಗಳಿಗಾಗಿ, ಶಾರೀರಿಕ ಮತ್ತು ಮಾನಸಿಕ ಅಭಿವೃದ್ಧಿಗಾಗಿ, ಅರಸನು ಅಲ್ಲಲ್ಲಿ ಹೂದೋಟ ಬೆಳೆಸಬೇಕು ಎನ್ನಲಾಗಿದೆ. ಅವು ಹೇಗೆ ಇರಬೇಕು, ಎಂದರೆ, ಒಂದೆಡೆಯಲ್ಲಿ ಹವಳದಂತೆ ಕೆಂಪಾದ ಲತೆಗಳಿಂದ, ಪರ್ಣಗಳಿಂದ ಕೂಡಿರುವಂತೆ, ಅರಳಿದ ಹೂಗಳಿಂದ ಸುಗಂಧ ಹೊರಹೊಮ್ಮುವಂತೆ, ಅವುಗಳಿಗೆ ಆಕರ್ಷಿತವಾಗಿ ತುಂಬಿಗಳು ಝೇಂಕರಿಸುತ್ತ ಹಾರಾಡುತ್ತಿರುವಂತೆ, ಲತಾಗೃಹಗಳನ್ನು ನಿರ್ಮಿಸಬೇಕು. ಇನ್ನೊಂದೆಡೆಗೆ ವೃಕ್ಷಗಳಿಂದ ಉಯ್ಯಾಲೆಗಳನ್ನು ಇಳಿಬಿಟ್ಟು ಪ್ರೇಮಿಗಳು ಮೈಗಂಟಿ ಕುಳಿತುಕೊಂಡು ತೂಗಿಕೊಳ್ಳುತ್ತ ವಿಶ್ವವನ್ನೇ ಮರೆಯುವಂತಿರಬೇಕು. ಅವರ ಸುತ್ತಮುತ್ತಲ ವಾತಾವರಣ ಚಿಗುರುತ್ತಿರುವ ಗಿಡಮರಗಳಿಂದ ಕೂಡಿರಬೇಕು. ಲತೆಗಳು ಫಲ-ಪುಷ್ಪಗಳು ಭಾರ ತಾಳಲಾರದೇ ಬಾಗುತ್ತ ಬಳುಕುತ್ತಿರಬೇಕು. ಹತ್ತಿರದಲ್ಲಿಯೇ ಮನವಿಹಾರಕ್ಕಾಗಿ ಬರುವವರಿಗೆ ಆಸನಗಳು, ಬಂಡೆಕಲ್ಲುಗಳು ಇರಬೇಕು. ಪಕ್ಕದಲ್ಲಿ ಭೂಗರ್ಭದಿಂದ ಪುಟಿಯುವ ಕಾರಂಜಿಯನ್ನು ರಚಿಸಿ, ಸಂಚಯವಾದ ನೀರಿನಲ್ಲಿ ಆನಂದದಿಂದ ನಲಿಯುವ ಆಮೆಗಳನ್ನು ಸಾಕಬೇಕು. ಗಗನವು ಕಾರ್ಮೋಡಗಳಿಂದ ಆವರಿಸಿದಾಗ ಗರಿಬಿಚ್ಚಿ ನರ್ತಿಸುವ ನವಿಲುಗಳು ಎಲ್ಲೆಡೆ ಕಾಣಸಿಗಬೇಕು. ಅಲ್ಲಲ್ಲಿ ನೀರಿನ ಹೊಂಡಗಳನ್ನು ನಿರ್ಮಿಸಿ ಹಂಸಪಕ್ಷಿಗಳು ಹಾರಿಬಂದು ಈಜುವಂತೆ ಮಾಡಬೇಕು. ನೀರಿನ ಆಳದಲ್ಲಿ ಕೂರ್ಮಸಂಸಾರಗಳು ಸುಖವಾಗಿ ಬದುಕುವಂತೆ ಇರಬೇಕು. ಇಂಥ ಪರಿಸರದಲ್ಲಿ ಪ್ರೇಮಿಗಳು ಜಲವಿಹಾರ ಮಾಡುತ್ತ ನಲಿಯುವಂತೆ ಕಿರುನಾವೆಗಳನ್ನು ಇಟ್ಟಿರಬೇಕು. ಹೀಗೆ ಮಾಡಿದಾಗಲೇ ಪ್ರಜೆಗಳಿಗೆ ತಮ್ಮ ಜೀವನದ ಸಾರ್ಥಕತೆ ಕಾಣಲು ಸಾಧ್ಯ.

ಉತ್ತಮ ಗಿಡಮರಗಳನ್ನು ಬೆಳೆಸುವ ಕ್ರಿಯೆ, ಬೀಜಗಳ ಆಯ್ಕೆಯಿಂದಲೇ ಪ್ರಾರಂಭಿಸಬೇಕು. ವೃಕ್ಷಗಳಲ್ಲಿಯೇ ಹಣ್ಣಾದ ಫಲಗಳ ಬೀಜಗಳು ಸ್ವಾಭಾವಿಕವಾಗಿಯೇ ಉದುರಿಬಿದ್ದಾಗ ಅವುಗಳಿಂದ ಆರಿಸಿದವುಗಳನ್ನು ಹಸುವಿನ ಹಾಲಿನಲ್ಲಿ ನೆನೆಹಾಕಿ, ಗೋಮಯ ಸವರಿ ಒಣಗಿಸಬೇಕು. ಅವು ಕ್ರಿಮಿ-ಕೀಟಗಳಿಗೆ ಆಹುತಿಯಾಗದಂತೆ ಧೂಪದ, ವಾಯುವಿಳಂಗ

-ತುಪ್ಪಗಳ ಹೊಗೆಯ ಚಿಕಿತ್ಸೆ ಮಾಡಬೇಕು. ಇಂಥ ಬೀಜಗಳನ್ನು ಬಿತ್ತುವಾಗ ನಿರ್ಮಲ ಮನಸ್ಸಿನಿಂದ ಮಿಂದು, ಮಡಿಯುಟ್ಟು ಗುರುವಿಗೆ ವಂದಿಸಿ, ಇಷ್ಟದೇವರನ್ನು ಪೂಜಿಸಬೇಕು. ನೇರಳೆ, ಹಲಸು, ಮಾವು, ಕಿತ್ತಳೆಗಳಂತಹ ಜಾತಿಫಲಗಳ ಬೀಜಗಳನ್ನು ಈ ರೀತಿ ನೆಟ್ಟರೆ ಬಹುಬೇಗ ಚಿಗುರಿಕೊಳ್ಳುವವು. ಅಪರೂಪದ ಬೀಜಗಳನ್ನು ಹುಲಿಯ ಹಾಲಿನಲ್ಲಿ ನೆನೆ ಹಾಕುವುದು ಮೇಲು, ಎಂದು ಸೂಚಿಸಿದರೂ ಅದನ್ನು ಪಡೆಯುವ ವಿಧಾನವನ್ನು ಸೂಚಿಸಿಲ್ಲ! ಬೀಜ ಅಂಕುರಿಸಿ ಹುಲುಸಾಗಿ ಬೆಳೆಯುವ ಸಸಿಗಳನ್ನು ಅರೆಧನುಷ್ಯದ ನಿರ್ದಿಷ್ಟ ಅಳತೆಯ ಕುಣಿ ತೆಗೆದು ನೆಡಬೇಕು. ಇದಕ್ಕಾಗಿ ಶ್ರವಣಾದಿ ನಕ್ಷತ್ರಗಳಲ್ಲಿ ನೆಲವನ್ನು ಶೋಧಿಸಿ, ಹದಮಾಡಿ, ಸೂಸುಮಣ್ಣಿನ ಗೊಬ್ಬರವನ್ನು ಸೇರಿಸಬೇಕು. ಬೆಳೆವ ಸಸಿಗಳಿಗೆ ಆಣೆಕಲ್ಲು-ಸಿಡಿಲುಗಳಿಂದ ರಕ್ಷಿಸಲು ಮೊಸರನ್ನ, ಬೂದಿಗಳನ್ನು ಸೇರಿಸಬೇಕು.

ಉತ್ತಮ ಉದ್ಯಾನಕ್ಕಾಗಿ ಸತ್ವಯುತವಾದ ಭೂಮಿಯ ಆಯ್ಕೆ ಅತ್ಯವಶ್ಯವಾದುದು. ವಿಷಕಲ್ಲಿನ ರಾಶಿ, ಹಾವಿನ ಹುತ್ತಗಳು, ಇಲಿ, ಹೆಗ್ಗಣಗಳ ಬಿಲಗಳು, ಬೆಣಚುಕಲ್ಲುಗಳು, ಆರ್ದ್ರತೆಯ ಕೊರತೆ ಇರುವಲ್ಲಿ ಬೀಜಗಳನ್ನು ಬಿತ್ತಲೇಕೂಡದು. ಜವಳು ಭೂಮಿ, ಜಲಕ್ಷಾಮ ಇರುವಲ್ಲಿ ವೃಕ್ಷಗಳನ್ನು ಬೆಳೆಯುವ ಸಾಹಸ ಮಾಡಲೇಕೂಡದು,. ಕರಿಭೂಮಿ, ಹೊಂಬಣ್ಣದ ಭೂಮಿ, ಶಂಖ, ಮಲ್ಲಿಗೆಯ ಹೂವಿನ ಬಣ್ಣದ ಹುಲ್ಲು ಹುಲುಸಾಗಿ ಬೆಳೆಯುವ ಮಣ್ಣಿನಲ್ಲಿ, ಕಶ್ಮಲ ರಹಿತ ಭೂಮಿಯಲ್ಲಿ, ಸಕಲ ಸಸ್ಯಕೋಟಿಗಳು ಆಹ್ಲಾದಕರವಾಗಿ ಬೆಳೆಯುವವು. ಸೀಮಿತ ನೀರು ಇರುವಲ್ಲಿಯೂ ನುಗ್ಗೆ, ಬಿಲ್ವ, ವೀಳ್ಯದೆಲೆ, ಬಾಳೆ, ಕರಿ ಏಲಕ್ಕಿ, ಅಶೋಕ, ಬನ್ನಿ, ದೊಡ್ಡ ಬಿದಿರು, ಯಲಚಿ, ನಾಗಸಂಪಿಗೆ, ಬೇವುಗಳನ್ನು ಬೆಳೆಯಬಹುದು. ಹಿತವಾದ ಜಲಪೂರೈಕೆ ಇರುವಲ್ಲಿ ಹಲಸು, ಕಿತ್ತಳೆ, ಕಿರಿ ಬಿದಿರು, ನಿಂಬೆ, ನೆಲ್ಲಿ, ಆಲ, ಅತ್ತಿ, ಬೇವು, ಈಚಲ, ಕದಂಬ, ಖರ್ಜೂರ, ಅಡಿಕೆ, ಬಾಳೆ ದ್ರಾಕ್ಷಿ, ತೆಂಗುಗಳು ರಭಸದಿಂದ ಬೆಳೆಯುವವು. ಸಾಧಾರಣವಾದ ಭೂಮಿಯಲ್ಲಿ ಬೇಲದ ಮರ, ಮಾವು, ಪ್ರಿಯಂಗು, ದಾಳಿಂಬದಂತಹ ಗಿಡಗಳನ್ನು ಬೆಳೆಯಿಸಬೇಕು.

ಬೆಳೆಯುತ್ತಿರುವ ಗಿಡಮರಗಳಿಗೆ ಸದಾಕಾಲ ನೀರಿನ ಪೂರೈಕೆ ಅತ್ಯವಶ್ಯಕ. ಆದ್ದರಿಂದ ಜಲ ಶೋಧನೆಯ ತತ್ವಗಳನ್ನು ಕೂಲಂಕಷವಾಗಿ ವಿವರಿಸಲಾಗಿದೆ. ಅಷ್ಟದಿಕ್ಕುಗಳಿಂದಲೂ ನೀರಿನ ಝರಿ ಹರಿಯುವ ಶಿಲೆಗಳಿದ್ದರೆ ಅಲ್ಲಿ ತೋಡಿದ ಬಾವಿಗಳಲ್ಲಿ ಮೂರುವರೆ ಆಳು ನೀರು ನಿಲ್ಲುವುದು, ಇಂಥಲ್ಲಿ ಅರ್ಧ ಆಳು (ಪುರುಷ) ಅಗೆದರೆ ಬಿಳಿಕಪ್ಪೆ, ಹೊಂಬಣ್ಣದ ಮಣ್ಣು ಕಂಡುಬರುವುದು. ಆನಂತರ ಇರುವ ಶಿಲೆಗಳ ಅಡಿಯಲ್ಲಿ ನೀರು ಸಂಚಯವಾಗುತ್ತದೆ. ನೇರಳೆ ಮರದ ಪೂರ್ವಕ್ಕೆ ಹುತ್ತವಿದ್ದರೆ, ಅದರ ದಕ್ಷಿಣಕ್ಕೆ ಎರಡು ಆಳು ನೀರು ಇರುತ್ತದೆ. ಹುತ್ತದ ಮೇಲೆ ಲಕ್ಕೀಗಿಡ ಇರುವಲ್ಲಿ ಅಗೆಯುತ್ತ ಹೋದರೆ, ಅರ್ಧ ಪುರುಷ ಆಳದಲ್ಲಿ ಕಪಿಲವರ್ಣದ ಮಣ್ಣು, ಬೆಣಚುಕಲ್ಲುಗಳಲ್ಲಿದ್ದು ಅಲ್ಲಿ ನೀರು ಸಂಚಯವಾಗಿರುತ್ತದೆ. ಯಲಚಿ ವೃಕ್ಷದ ಪೂರ್ವಕ್ಕೆ ಹುತ್ತವಿದ್ದು ಅಲ್ಲಿ ಅಗೆದರೆ ಅರೆ ಆಳದಲ್ಲಿ ಬಿಳಿ ಹಲ್ಲಿ, ನಂತರ ಮೂರು ಆಳ ನೀರು ಕಾಣುವುದು. ಶಿಲೆಯನ್ನು ಭೇದಿಸಲು ಮುತ್ತುಗದ ಸೌದೆ, ತಿಂದು ಕಾಷ್ಠಗಳಿಂದ

ಅವನ್ನು ಸುಟ್ಟು ಸುಣ್ಣದ ನೀರು ಸಿಂಪಡಿಸಲು ಅವು ಸೀಳುವವು. ಓರ್ವ ಪುತ್ರನನ್ನು ಪಡೆದ ಪುಣ್ಯವನ್ನು ಪಡೆಯಲು ಹತ್ತು ಸದಾಕಾಲ ನೀರಿರುವ ಬಾವಿ ಇಲ್ಲವೇ ನೂರು ಇಳಿಯುವ ಬಾವಿ ಅಥವಾ ಸಹಸ್ರ, ಹಗ್ಗದಿಂದ ನೀರು ಎಳೆಯುವ ಬಾವಿಗಳನ್ನು ತೋಡಿಸಬೇಕು ಎನ್ನಲಾಗಿದೆ.

ಸಾರ್ವಜನಿಕರಿಗಾಗಿ ಸಸ್ಯಗಳನ್ನು ಬೆಳೆಸುವುದು, ಸಂರಕ್ಷಿಸುವುದು ಇಷ್ಟದೇವತೆಯನ್ನು ಮೆಚ್ಚಿಸುವಷ್ಟೇ ಮಹತ್ವದ ಕಾರ್ಯ ಎನ್ನಲಾಗಿದೆ. ಪಾಪ-ಪುಣ್ಯಗಳ ಪರಿಕಲ್ಪನೆಯಿಂದ ಇದನ್ನು ಮನದಟ್ಟು ಮಾಡಿಕೊಳ್ಳಲು ಯತ್ನಿಸಲಾಗಿದೆ. ಆಳರಸನು ಸಕಲ ಜೀವಿಗಳಿಗೆ ಮುದ ನೀಡುವ ಉದ್ಯಾನಗಳನ್ನು ನಿರ್ಮಿಸುವದರಿಂದ ಪರಮೇಶ್ವರನನ್ನು ಮೆಚ್ಚಿಸಬಹುದು. ಸಕಲ ಪಾಪಗಳಿಂದ ಮುಕ್ತನಾಗಲು ಒಂದು ಅರಳಿ, ಒಂದು ಬೇವು, ಒಂದು ಆಲ, ಮೂರು ಬಿಲ್ವ, ಮೂರು ನೆಲ್ಲಿ, ಮೂರು ಬ್ಯಾಲ (ಬೇಲ), ಒಂಭತ್ತು ಮಾವು ಮತ್ತು ಹತ್ತು ಹುಣಿಸೆ ಮರಗಳನ್ನು ಬೆಳೆಸಬೇಕಂತೆ. ಧನದೌಲತ್ತುಗಳನ್ನು ದಯಪಾಲಿಸುವ ಲಕ್ಷ್ಮಿಯನ್ನು ಮೆಚ್ಚಿಸಲು ಬಿಲ್ವವೃಕ್ಷಗಳನ್ನು ಹೆಚ್ಚಾಗಿ ನೆಡಬೇಕು. ಪಾರಿಜಾತ, ಎಲ್ಲ ವೃಕ್ಷಗಳಲ್ಲಿ ಶ್ರೇಷ್ಠವಾದದ್ದಂತೆ. ಮನೆಯ ಪೂರ್ವಕ್ಕೆ ಆಲ, ಪಶ್ಚಿಮಕ್ಕೆ ಅರಳಿ, ಉತ್ತರಕ್ಕೆ ಬಸರಿ ಮರಗಳನ್ನು ಬೆಳೆಸಬೇಕು ಎಂದು ಸೂಚಿಸಲಾಗಿದೆ. ಆದರೆ ಎಂತಹದೇ ಮರಗಳನ್ನು ಹೆಬ್ಬಾಗಿಲಿನ ಎದುರು ನೆಡಲೇ ಕೂಡದಂತೆ. ಮನೆ ದಕ್ಷಿಣ ಭಾಗ, ಉದ್ಯಾನಕ್ಕೆ ಪ್ರಶಸ್ಥ ತಾಣವಲ್ಲ. ಬಂಜರುಭೂಮಿಯಲ್ಲಿ ಅತ್ಯಂತ ಪ್ರಯಾಸದಿಂದ ವೃಕ್ಷಗಳನ್ನು ಹುಲುಸಾಗಿ ಬೆಳೆಸಿದರೆ ಅಧಿಕ ಪುಣ್ಯ ಲಭಿಸುವದೆಂದು ಹೇಳಿದೆ.

ವೃಕ್ಷಗಳ ಲಕ್ಷಣಗಳನ್ನು ಆಧರಿಸಿ ಧರಿಸುವ ಸಸ್ಯಗಳು 'ವನಸ್ಪತಿ"ಗಳು. ಹೂ, ಕಾಯಿ ಪುಷ್ಪಗಳನ್ನು ತಳೆಯದೇ ಫಲಗಳನ್ನು ಸಸ್ಯಗಳು "ವನಸ್ಪತಿ'ಗಳು ಹೂ, ಕಾಯಿ ಹಣ್ಣುಗಳಾಗಿ ಪರಿವರ್ತಿತವಾಗುವ ಗಿಡಗಳು ಧರಿಸುವ 'ಧ್ರುವ'ಗುಂಪಿಗೆ ಸೇರಿವೆ. ಅನೇಕ ಬೇರು, ಶಾಖೋಪಶಾಖೆಗಳಿಂದ ಕೂಡಿದವು 'ಗುಲ್ಮ'. ಹುಲುಸಾಗಿ ಕವಲೊಡೆದು, ನೆಲದ ಮೇಲೆ ದಟ್ಟವಾಗಿ ಹಬ್ಬುವ ಸಸ್ಯಗಳು 'ಲತೆ'ಗಳು. ಬೀಜ, ಗಡ್ಡೆ ಕೊಂಬುಗಳಿಂದ ಸಂತಾನೋತ್ಪತ್ತಿ ಮಾಡುವ ಸಸ್ಯಗಳನ್ನು ಗುರುತಿಸಲಾಗಿದೆ. ನೇರಳೆ, ಹಲಸು, ಸುರಹೊನ್ನೆ, ನಾಗಸಂಪಿಗೆ, ಹುಣಿಸೆ, ಬ್ಯಾಲ, ಬಿಲ್ವ, ಯಲಚಿ, ಕುಂಭಕಾರಿ, ಪ್ರಿಯಂಗು, ಸಂಪಿಗೆ, ಹಿಪ್ಪೆ ಮಾವು ಮುಂತಾದವುಗಳು ಬೀಜದಿಂದ ಉತ್ಪನ್ನವಾಗುವವು. ವೀಳ್ಯದೆಲೆಯ ಬಳ್ಳಿ , ಬಂಧುವಾರ, ತಗರ ಜಾತಿಯವನ್ನು ಕೊಂಬು ನೆಟ್ಟು ಬೆಳೆಸಬಹುದು. ಯಾಲಕ್ಕಿ, ತಾವರೆ, ನೈದಿಲೆಗಳು ಸಸ್ಯಗಳಿಂದಲೇ ಬೆಳೆಯುವಂಥವು. ಪಾದರಿ, ದಾಳಿಂಬೆ, ಬಸರಿ, ಕಣಗಿಲೆ, ಆಲ, ಮರಮಲ್ಲಿಗೆ ಮೊದಲಾದವುಗಳನ್ನು ಬೀಜ ಇಲ್ಲವೇ ರೆಂಬೆಗಳನ್ನು ನೆಟ್ಟು ಬೆಳೆಸಬಹುದು.

ಬೆಳೆಯುತ್ತಿರುವ ಸಸ್ಯಗಳಿಗೆ ಮಂಜು, ಬಿರುಗಾಳಿ, ಕೀಟ, ಹೊಗೆ, ಬೆಂಕಿಗಳಿಂದ ಸಂರಕ್ಷಣೆ ನೀಡಬೇಕು. ವಿಳಂಗ, ಅರಿಶಿನಗಳ ಧೂಪಗಳು, ಹಾರಾಡುವ ಕೀಟಗಳನ್ನು ನಿಯಂತ್ರಿಸಿದರೆ, ಇಂಗು, ಬಜೆ, ಮೆಣಸು, ಕೇರಬೀಜ, ಸಾಸಿವೆ, ಗುಬ್ಬಿ ಬಳ್ಳಿಗಳನ್ನು ಗೋಮೂತ್ರದಲ್ಲಿ ಕೊಳೆಯಿಸಿ ಗಿಡಮರಗಳ ಸುತ್ತಲೂ ಹರವಿದರೆ ಕಾಂಡ ಬಾಧೆ, ಕೀಟಗಳನ್ನು

ಹೋಗಲಾಡಿಸಬಹುದು. ಕುಡಿ ಮುರಿಯುವುದು, ಮುಡಿದುಕೊಳ್ಳುವುದು, ನರುಕಿ ಹೋಗುವುದನ್ನು ಕಂಡಾಗ ಆ ಭಾಗವನ್ನು ಕತ್ತರಿಸಿ ಅಲ್ಲಿ ಬಿಸಿತುಪ್ಪ, ವಿಳಂಗ ಮತ್ತು ಕರಿಯ ಮಣ್ಣು ತುಂಬಬೇಕು. ವಿವಿಧ ಜಾತಿಗೆ ಸೇರಿದ ಹುಳಗಳ ಬಾಧೆ ಹೆಚ್ಚಾದಾಗ, ಮೀನು ಗೊಬ್ಬರ, ಸಾಸಿವೆ ತುಪ್ಪದ ಮಿಶ್ರಣ, ಬಾಳೆಯೆಲೆಗಳ ಧೂಪ ಕೊಡಬೇಕು. ಆನಂತರ ಇಂಗು, ಬಜೆ ಮೊದಲಾದ ಪದಾರ್ಥಗಳನ್ನು ಅರೆದು ಗಿಡಗಳಿಗೆ ಬಳಿಯಬೇಕು.

ಕೃತ್ರಿಮವಾಗಿ, ವಿಚಿತ್ರವಾದ ಫಲ-ಪುಷ್ಪಗಳನ್ನು ಪಡೆಯುವ ವಿಧಾನಗಳನ್ನು ವಿವರವಾಗಿ ನಮೂದಿಸಲಾಗಿದೆ. ಒಂದೇ ಗಿಡದಿಂದ ಎರಡು ಬಗೆಯ ಹಣ್ಣುಗಳನ್ನು ಪಡೆಯಲು, ನೆಡುವ ಬೀಜ ಇಲ್ಲವೇ ಕೊಂಬನ್ನು ಸಮನಾಗಿ ಸೀಳಿ ತುಪ್ಪ, ಜೇನುಗಳನ್ನು ಚೆನ್ನಾಗಿ ಬಳಿದು ಎರಡೂ ಭಾಗಗಳನ್ನು ಸೇರಿಸಿ ಕಟ್ಟಿ ನೆಡಬೇಕು. ಒಂದೇ ಬಳ್ಳಿಗೆ ಕಮಲ, ಕುಮುದ, ನಿಲೋತ್ಪಲಗಳು ಬಿಡುವಂತೆ ಮಾಡಲು ಅವುಗಳ ಜಲ-ಗಡ್ಡೆಗಳನ್ನು ದ್ವಿಭಾಗಿಸಿ ಆಜ್ಯ-ಮಧು (ತುಪ್ಪ, ಜೇನುತುಪ್ಪ) ಗಳನ್ನು ತೊಡೆದು ತಿರುಗಿ ಒಂದಾಗಿಸಿ ಕಟ್ಟಿ, ಹರಿಣದ ಮಾಂಸದ ಜಲವನ್ನು ಬೇರುಗಳ ಬುಡಕ್ಕೆ ಸೇರಿಸಬೇಕು. ಹುಳಿ ಮಾವನ್ನು ಉತ್ತಮ ಜಾತಿಯೊಂದಿಗೆ ಕಸಿ ಮಾಡಬಹುದು. ದಪ್ಪವಾದ, ತಿಳಲು, ಬಗೆಬಗೆಯ ಸುವಾಸನೆ, ರುಚಿಗಳುಳ್ಳ ಹಣ್ಣುಗಳನ್ನು ಪಡೆಯಬಹುದು. ಇದರಂತೆ ರಸಭರಿತ ಬಾಳೆ, ದಾಳಿಂಬ, ಹಲಸುಗಳನ್ನು ಬೆಳೆಯಲು, ತೆಂಗು-ಕಿತ್ತಳೆಗಳಿಂದ ಹೇರಳ ಫಲ ಪಡೆಯಲು, ಸಲಹೆಗಳನ್ನು ಕೊಡಲಾಗಿದೆ. ಬೀಜರಹಿತ ಹಣ್ಣು ಪಡೆಯಲು ಮಧುಕ, ಪುಷ್ಪ , ಮಧುಕೋಷ್ಮಗಳನ್ನು ಮರಗಳಡಿ ಹೂಳಬೇಕಂತೆ. ಅಶೋಕ , ಬಕುಳ, ಪುನ್ನಾಗ, ಚಂಪಕ, ವೃಕ್ಷಗಳು ಹೆಚ್ಚು ಫಲ ಕೊಡಲು ಸ್ತ್ರೀಯ ಪಾದ ಪ್ರಹಾರ ಮಾಡಬೇಕು. ಕುಲೀನ ಸ್ತ್ರೀಯರಿಂದ ಮದ್ಯವನ್ನು ಮುಕ್ಕುಳಿಸಿ ವೃಕ್ಷಗಳ ಮೇಲೆ ಉಗುಳುವಂತೆ ಮಾಡುವುದರಿಂದ ಫಲ, ಪುಷ್ಪಗಳಲ್ಲಿ ಅಭಿವೃದ್ಧಿಯಾಗುವದಂತೆ! ಇದರಂತೆ ಕೆಂಪು ದಾಸವಾಳಗಳನ್ನು ಬಿಳಿ ಮಾಡುವುದು; ಮಲ್ಲಿಗೆ, ಜಾಜಿಗಳ ಸುವಾಸನೆಯನ್ನು ಅದಲು-ಬದಲು ಮಾಡಬಹುದು. ವಾಸನೆಯಿಲ್ಲದ ಹೂಗಳಿಗೆ ಸುವಾಸನೆ ಬರಿಸುವುದು, ಕುಂಬಳ ಬಳ್ಳಿಯಲ್ಲಿ ಬದನೆಕಾಯಿ ಬೆಳೆಯುವುದು, ಔಡಲಗಿಡದಲ್ಲಿ ಹಾಗಲಕಾಯಿಗಳನ್ನು ಬಿಡಿಸುವ ಚಮತ್ಕಾರಗಳನ್ನು ಈ ಗ್ರಂಥದಲ್ಲಿ ವಿವರಿಸಲಾಗಿದೆ.

ಹೊಸಗನ್ನಡವೆಂದು ತೋರಿದರೂ 19ನೇ ಶತಮಾನದ ಈ ಕೃತಿಯಲ್ಲಿ ಹಳೆಗನ್ನಡದ ಛಾಯೆ ಸಾಕಷ್ಟು ಉಳಿದುಕೊಂಡಿದೆ. ಮತ್ತು ಜೋಡಿ ಅಕ್ಷರಗಳಾಗಿದ್ದರಿಂದ ಕಷ್ಟಪಟ್ಟು ಓದಬೇಕಾಗುತ್ತದೆ. ಜೊತೆಗೆ ಮೂರು-ನಾಲ್ಕು ಶಬ್ದಗಳನ್ನು ಒಟ್ಟೊಟ್ಟಿಗೇ ಬರೆಯಲಾಗಿದ್ದು 'ಇ'ದ ಬದಲಾಗಿ 'ಯ', 'ದ'ಬದಲಿಗೆ 'ವ' 'ಹ'ದ ಬದಲಿಗೆ 'ಪ' ಅಕ್ಷರಗಳನ್ನು ಬಳಸಲಾಗಿದೆ. ಚಿತ್ರಗಳ ವಿವರಗಳನ್ನು ಬರೆಯುವಾಗ, ಸ್ಥಳವಿದ್ದಲ್ಲೆಲ್ಲ ಒಂದೊಂದು ಶಬ್ದ ಇಲ್ಲವೇ ಅರ್ಧ ಶಬ್ದವನ್ನಷ್ಟೇ ಬರೆಯಲಾಗಿದೆ. ಅವಶ್ಯವಿದ್ದಲ್ಲಿ, ಇಲ್ಲದಿದ್ದಲ್ಲಿ ಸಹ ಚಿತ್ರಗಳನ್ನು ಸೇರಿಸಲಾಗಿದೆ. 'ಶ್ರೀ ತತ್ವನಿಧಿ'ಯ ಕಲಾಕಾರರೇ ಅಥವಾ ಆ ಶೈಲಿಯನ್ನು ಕರಗತ ಮಾಡಿಕೊಂಡವರೇ ಈ ಚಿತ್ರಗಳನ್ನು ರಚಿಸಿದ್ದಾರೆಂದು ನೋಡಿದಾಕ್ಷಣ ಅನಿಸಿಬಿಡುವುದು. 'ವೃಕ್ಷಾಯುರ್ವೇದ' ಭಾಗದಲ್ಲಿ ಅಷ್ಟೇ ಅಲ್ಲದೇ ಉಳಿದ ಅಧ್ಯಾಯಗಳಲ್ಲೂ ಧಾರಾಳವಾಗಿ

ಸಸ್ಯ-ಗಿಡಗಳ ಚಿತ್ರಗಳನ್ನು ಸೇರಿಸಲಾಗಿದೆ. ಅರಮನೆಯ ಆವಾರ, ಬೇಟೆಯ ಅರಣ್ಯ ದೃಶ್ಯಗಳು, ಕ್ರೀಡಾಂಗಣದ ಪರಿಸರಗಳಲ್ಲೆಲ್ಲ ವೃಕ್ಷರಾಜಿಯನ್ನು ಕಾಣಬಹುದಾಗಿದೆ. ಹೂಬಿಡದ ಅಶೋಕ ವೃಕ್ಷ, ಪುಷ್ಪಧರವಾಗುವಂತೆ ಮಾಡಲು 'ಪದ್ಮಿನಿ' ಜಾತಿಯ ಸ್ತ್ರೀ ತನ್ನ ಎಡಗಾಲಿನಿಂದ ಒದೆಯುತ್ತಿದ್ದಾಳೆ. 'ಶೀಲ' ವೃಕ್ಷ ಫಲಬಿಡಲು ಸ್ತ್ರೀಯ ಬೊಗಸೆಗಣ್ಣಿನ ನೋಟವೇ ಸಾಕಾಗುತ್ತದಂತೆ. ಗೋರಂಟಿ ಗಿಡ ಹೂ ತಳೆಯಲು ರೂಪವತಿಯ ಆಲಿಂಗನವನ್ನು ಅಪೇಕ್ಷಿಸುವಂತಿದೆ. ಕರ್ಣಿಕಾರ ವೃಕ್ಷ, ಸ್ತ್ರೀಯ ಮಾತುಗಾರಿಕೆಯಿಂದ ತೃಪ್ತಿ ಪಡೆದು ಫಲಭರಿತವಾಗುವುದು. ಶೀಬಿ ವೃಕ್ಷ (?) ಸ್ತ್ರೀಯು ತಂತಿ ವಾದ್ಯ ನುಡಿಸಿ ಹಾಡುವುದರಿಂದ ತೃಪ್ತಿಗೊಂಡು ಫಲಬಿಡುವುದು. ಒಂದೇ ಮರ ವಿವಿಧ ತರದ ಹೂ ತಳೆದು ನಿಂತಿದ್ದನ್ನು ತೋರಿಸಲಾಗಿದೆ. ಅದರಂತೆ ಒಂದೇ ವೃಕ್ಷಕ್ಕೆ ವಿವಿಧ ಜಾತಿಯ ಹಣ್ಣು ಹಂಪಲು ಬಿಟ್ಟದ್ದನ್ನು ಚಿತ್ರಿಸಲಾಗಿದೆ.(ಚಿತ್ರಗಳು 1-8).

ನಮ್ಮ ಪೂರ್ವಜರು ಸಸ್ಯಗಳನ್ನು ಮಾನವರ ಸರಿಸಮಾನವೆಂದು ಪರಿಗಣಿಸಿದ್ದರಿಂದ ಅವೂ ಪಿತ್ತ, ವಾತ, ಕಫ ಪ್ರಕೃತಿಯ ಉಷ್ಣ ಶೀತಗಳ ವ್ಯಾಧಿಯಿಂದ ಬಳಲುತ್ತವೆಂದು ಭ್ರಮಿಸಿದ್ದರು. ಅದರಂತೆ ಸ್ತ್ರೀಯರ ಸುಖಸ್ಪರ್ಶವನ್ನು ಅವು ಅನುಭವಿಸುತ್ತಿದ್ದಿರಬೇಕು ಎಂಬುದು ಕೇವಲ ಕಲ್ಪನೆಯಿದ್ದಿರಬೇಕು! ಗ್ರಂಥದಲ್ಲಿ ಕಾಣಿಸಿದ ಅನೇಕ ಸೂಚನೆಗಳು ಪ್ರಯೋಗದಿಂದ ಸಿದ್ಧಪಡಿಸಿದವು ಆಗಿರದೇ ಯತ್ನಾಯತ್ನಗಳಿಂದ ಯಶಸ್ಸು ಪಡೆದ, ಪರಂಪರಾಗತವಾಗಿ ನಡೆದುಬಂದ ವಿಧಾನಗಳಾಗಿರಬೇಕು. ಇವುಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದರೆ ಹಲವಾದರೂ ಯಶಸ್ವಿಯಾಗಬಲ್ಲವು ಅನಿಸುತ್ತದೆ. ವೈಜ್ಞಾನಿಕವಾಗಿ ತೋಟಗಾರಿಕೆ ಮಾಡುವವರು, ಹಿಂದಿನವರ ಅನೇಕಾನೇಕ ಸೂಚನೆಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಸ್ಥಳದ ಆಯ್ಕೆ, ನೀರಿನ ಪೂರೈಕೆ, ಬೀಜಗಳ ಪರಿಷ್ಕರಣೆ, ಸಸಿಗಳ ಸಂರಕ್ಷಣೆ, ಅತಿರಿಕ್ತವಾದ ಆಹಾರ, ಗೊಬ್ಬರ ಹಾಕುವುದು ಇತ್ಯಾದಿ. ಕೀಟಗಳಿಗೆ ಹೊಗೆಯಿಂದ ಉಸಿರು ಕಟ್ಟುವುದರಿಂದ ಅವು ಪಲಾಯನ ಮಾಡುತ್ತವೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಗಿಡಬಳ್ಳಿಗಳು ಮತ್ಸ್ಯಾಹಾರ ಸೇವಿಸಿ ಪುಷ್ಟವಾಗುತ್ತವೆ. ಎಂಬುದು ಕರಾವಳಿಯವರು ತೀರ ಹಿಂದಿನಿಂದ ಅರಿತುಕೊಂಡ ಅನುಭವ. ತುಂಬ ಮೀನು ಬಲೆಯಲ್ಲಿ ಬಿದ್ದಾಗ ಅವನ್ನು ಗೊಬ್ಬರವಾಗಿ ತೆಂಗಿನ ತೋಟಕ್ಕೆ, ಇತರ ಗಿಡಮರಬಳ್ಳಿಗಳಿಗೆ ಹಾಕುತ್ತಾರೆ. ಹೆಂಗಳೆಯರು, ಪ್ರತಿದಿನ ತೀರದ ವಾಗ್ಯುದ್ಧದಲ್ಲಿ ತೊಡಗಿರುವುದರಿಂದ ತೆಂಗಿನ ಅಡಕೆಯ ತೋಟಗಳಲ್ಲಿ ಹೆಚ್ಚಿನ ಫಲ ಬಿಡುತ್ತದೆ ಎಂಬ ಸಾಮಾನ್ಯ ನಂಬಿಕೆಯೂ ಅಲ್ಲಿ ಇದೆ! ಕೇರಳದ ಯಶಸ್ವಿ ಕೃಷಿಕರೊಬ್ಬರು ಇತ್ತೀಚೆಗೆ ತಮ್ಮ ಅಡಕೆ ತೋಟದಲ್ಲಿ ಧ್ವನಿವರ್ಧಕಗಳನ್ನು ಹಚ್ಚಿ, ಬೆಳಿಗ್ಗೆ, ಸಂಜೆ ಭಕ್ತಿಗೀತೆಗಳನ್ನು ಬಿತ್ತರಿಸಿ, ಐದು ವರ್ಷಕ್ಕೆ ಫಲ ಬಿಡುವ ಸಸಿಗಳು ಮೂರು ವರ್ಷಕ್ಕೆ 'ಪ್ರಾಯ'ಕ್ಕೆ ಬರುವಂತೆ ಮಾಡಿದರಂತೆ! ಕೆಲವರ್ಷಗಳ ಹಿಂದೆ ಮದ್ರಾಸ ವಿಶ್ವವಿದ್ಯಾಲಯದ ಸಸ್ಯ ವಿಭಾಗದವರು ಪಿಟೀಲು ನುಡಿಸಿ, ಮೃದಂಗ ಬಾರಿಸಿ, ಸಸ್ಯಗಳ ಪ್ರತಿಕ್ರಿಯೆ ಅರಿಯಲು ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸಿದ್ದರು. ಆದರೆ ಕೊನೆಯ ಪರಿಣಾಮ ಇನ್ನೂ ತಿಳಿದು ಬಂದಿಲ್ಲ. ನಿಸರ್ಗ ಚಿಕಿತ್ಸೆಯಲ್ಲಿ ವಿಶ್ವಾಸವಿಟ್ಟವರು ಮಾನವನ ಕಾಯಿಲೆಗಳಿಗೆ ಮೂತ್ರ ಚಿಕಿತ್ಸೆಯನ್ನು ಮಾಡುವಾಗ, ಶತಕಗಳ

ಹಿಂದೆ ಗೋವುಗಳ ಮಲಮೂತ್ರಗಳನ್ನು ಸಸ್ಯ ಸಂರಕ್ಷಣೆ ಪಾಲನೆಗಳಲ್ಲಿ ಬಳಸಿದ್ದರೆ ಆಶ್ಚರ್ಯವಿಲ್ಲ. ಸಸ್ಯತಳಿಗಳನ್ನು ಹೆಚ್ಚು ಫಲವತ್ತಾಗಿಸಲು ಈಗ ಕಸಿ ಮಾಡುವ ಪದ್ಧತಿ ಸರ್ವಸಾಮಾನ್ಯವಿದ್ದರೂ ಅದು ಶತಕಗಳ ಹಿಂದಿನಿಂದ ಕರ್ನಾಟಕದಲ್ಲಿ ರೂಢಿಯಲ್ಲಿದ್ದದ್ದು ವಿಶೇಷ. ಒಂದೇ ಗಿಡದಿಂದ ಮೆಣಸಿನಕಾಯಿ, ಬದನೇಕಾಯಿ, ಟೊಮ್ಯಾಟೊ ಪಡೆದಿದ್ದೇನೆ ಎಂದು ಓರ್ವ 'ವಿಜ್ಞಾನಿ'ಸಾರಿಕೊಂಡಿದ್ದಾನೆ. ಹೂಗಳ ಬಣ್ಣ ಬದಲಾವಣೆ ಮಾನವನಿಗೆ ಹುಚ್ಚು ಹಿಡಿಸಿದೆ. ಕಪ್ಪು ಗುಲಾಬಿ ಬೆಳೆಸಲು ಊಟಿಯಲ್ಲಿ ಪಟ್ಟ ಶ್ರಮಕ್ಕೆ ಎಣೆಯಿಲ್ಲ. ಈಥರ್, ಬೆನ್‌ಝಿನ್ ಆಲ್ಕೊಹಾಲಗಳಂತಹ ರಸಾಯನಗಳು ಬಣ್ಣದ ಕಣಗಳನ್ನು ಕರಗಿಸುತ್ತವೆ. ಮದ್ಯವನ್ನು ಬಳಸಿ ಕೆಂಪು ದಾಸವಾಳವನ್ನು ಬಿಳಿಯದನ್ನಾಗಿ ಮಾಡಿದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ವರ್ಣಮಯ ಹತ್ತಿಯನ್ನು ಬೆಳೆಯಲು ಅನೇಕಾನೇಕ ಪ್ರಯೋಗಗಳು ನಡೆಯುತ್ತಲೇ ಇವೆ. ಹಿಂದೊಮ್ಮೆ ರಶಿಯನ್ನರು ತಾವು ಈ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದೇವೆ. ಎಂದು ಘೋಷಿಸಿದರೂ ಅದು ಈ ತನಕ ಪೇಟೆಯಲ್ಲಿ ಬಂದಿಲ್ಲ, ಮೊನ್ನೆ ಮೊನ್ನೆ ಧಾರವಾಡದ ಕೃಷಿ ಕಾಲೇಜಿನವರು ತಾವು ಈ ದಿಸೆಯಲ್ಲಿ ಯಶಸ್ವಿಯಾಗಿ, ಇನ್ನು ಮುಂದೆ ಬಟ್ಟೆಗೆ ಬೇರೆಯಾಗಿ ಬಣ್ಣ ಹಾಕುವ ಅವಶ್ಯಕತೆ ಇಲ್ಲವೆಂದೂ ಅದಕ್ಕಾಗಿ ಹತ್ತಿಯ ಬೆಲೆ ಶೇಕಡಾ ಐವತ್ತರಷ್ಟು ಕುಸಿಯಬಹುದೆಂದೂ ಭವಿಷ್ಯ ನುಡಿದಿದ್ದಾರೆ.

ಪರಂಪರಾಗತವಾಗಿ ನಡೆದು ಬಂದ ನಮ್ಮ ಗ್ರಂಥಗಳಲ್ಲಿ ಬರೆಯಲಾದ ಸಸ್ಯಶಾಸ್ತ್ರಗಳಲ್ಲಿ ಗಟ್ಟಿ ಅಂಶವೆಷ್ಟು ? ಟೊಳ್ಳೆಷ್ಟು ? ಎಂದು ನಿರ್ಧಾರವಾಗಬೇಕಾಗಿದೆ. ನಮ್ಮಲ್ಲಿ ತಲೆಯೆತ್ತಿಕೊಂಡ, ಅನೇಕಾನೇಕ ಕಾಲೇಜು, ವಿಶ್ವವಿದ್ಯಾಲಯಗಳು, ಕೃಷಿಸಂಸ್ಥೆಗಳು, ಸಂಶೋಧನೆಗಾಗಿಯೇ ಮೀಸಲಾದ ತೋಟಗಾರಿಕಾ ವಿಭಾಗಗಳು ಇಂಥವುಗಳತ್ತ ಲಕ್ಷ ಹಾಕಬಾರದೇಕೆ ?



೧. ಅಶೋಕವೃಕ್ಷಕ್ಕೆ ಸ್ತ್ರೀಯ ಪಾದ ಸ್ಪರ್ಶ



೨. ಸ್ತ್ರೀ ಸುರೆಯನ್ನು ಉಗುಳುವದು



೩. ಮೇರುವೃಕ್ಷದೊಡನೆ ನಗುವ ಸ್ತ್ರೀ



೪. ಗೋರಂಟಿ ವೃಕ್ಷವನ್ನು ಆಲಿಂಗಿಸುವ ಸ್ತ್ರೀ



೫. ಕರ್ಣೀಕಾರವೃಕ್ಷ ದೊಡನೆ ಮಾತುಗಾರಿಕೆ




೬. ಸ್ತ್ರೀಯ ಗಾನ ಆಲಿಸುವ ಶಮೀವೃಕ್ಷ

ನಿರ್ದಯಿ ಮಾನವನ ಕೈಯಿಲ್ಲಿ ಫಲಭರಿತ ವೃಕ್ಷಗಳು



ಹಣ್ಣಿನ ಆಸೆಯಿಂದ ಮರವನ್ನೇ ಕಡಿಯುವವನು ಅಧಮ, ಟೊಂಗೆ ಕಡೆಯುವಾತ ನೀಚ ಎಂದು ಪರಿಗಣಿಸಲಾಗುತ್ತಿತು.


ನಿರ್ದಯಿ ಮಾನವನ ಕೈಯಿಲ್ಲಿ ಫಲಭರಿತ ವೃಕ್ಷಗಳು



ಹಣ್ಣಿನ ಆಸೆಯಿಂದ ಮರವನ್ನೇ ಕಡಿಯುವವನು ಅಧಮ, ಟೊಂಗೆ ಕಡೆಯುವಾತ ನೀಚ ಎಂದು ಪರಿಗಣಿಸಲಾಗುತ್ತಿತ್ತು.



೭. ಮಾವಿನ ಮರಕ್ಕೆ ಕಸಿಮಾಡುವದು



೮. ಒಂದೇ ವೃಕ್ಷದಲ್ಲಿ ವಿವಿಧ ಪುಷ್ಪಗಳು

ಆಧಾರ ಗ್ರಂಥಗಳು

1. ಸೌಗಂಧಿಕಾ ಪರಿಣಯಂ (ಸಚಿತ್ರ ಕಲ್ಲಚ್ಚಿನ ಪ್ರತಿ) ಕ್ರಿ. ಶ. ಸು. 1825
2. ಎಚ್. ಶೇಷಯ್ಯಂಗಾರ್ (ಸಂ)ಲೋಕೋಪಕಾರಂ ಮದ್ರಾಸು 1950 ಅಧ್ಯಾಯ 6
3. ಜಿ. ಕೆ. ಶ್ರೀಗೊಂದೇಕರ್ (ಸಂ) ಮಾನಸೋಲ್ಲಾಸ:ಭಾಗ **3** ಪುಟಗಳು 172-184 ಬಡೋದಾ 1961
4. ಎಚ್. ದೇವೀರಪ್ಪ (ಪ್ರ.ಸಂ.) ಶಿವತತ್ವರತ್ನಾಕರ : ಭಾಗ ೧ ಕಲ್ಲೋಲ 6; ತರಂಗ 10 ಪು. 574-593, ಮೈಸೂರು 1967

೧೦. ವ್ಯಂಗ್ಯ ಚಿತ್ರಗಳ ಬಗ್ಗೆ ಕೆಲ ವಿಚಾರಗಳು

ಚಲಚಿತ್ರ, ಕ್ರಿಕೆಟ ಆಟಗಳಂತೆ ವ್ಯಂಗ್ಯ ಚಿತ್ರಗಳೂ ಅಧಿಕ ಪ್ರಮಾಣದಲ್ಲಿ ಜನಪ್ರಿಯವಾಗುತ್ತಿರುವುದು ಹೆಮ್ಮೆಯ ವಿಷಯ. ದೈನಿಕ ವರ್ತಮಾನ ಪತ್ರಿಕೆಗಳು, ವಾರ, ಮಾಸಿಕ, ವಾರ್ಷಿಕ ಮತ್ತು ವಿಶೇಷ ಪತ್ರಿಕೆಗಳು, ಅಧಿಕ ಪ್ರಮಾಣಗಳಲ್ಲಿ ವ್ಯಂಗ್ಯ ಚಿತ್ರಗಳಿಗೆ ಸ್ವಾಗತ ನೀಡುತ್ತವೆ. ನಗೆಹನಿಯ ಒಂಟಿ ಚಿತ್ರಗಳನ್ನು ಸ್ಥಳ ಇರುವಲ್ಲಿ ಸೇರಿಸಿದರೆ, ಒಂದೇ ವಿಷಯ ಆಧಾರಿತ ಸಂಯುಕ್ತ ಚಿತ್ರಕ್ಕೆ ಇಡೀ ಪುಟ ಮೀಸಲಿಡಲಾಗುತ್ತಿದೆ. ಚಲಚಿತ್ರಗಳ ಬೇಡಿಕೆ ಹೆಚ್ಚಾದಂತೆ, ನಿರ್ಮಾಪಕರು ತಮ್ಮ ಬೊಕ್ಕಸ ತುಂಬಿಕೊಳ್ಳುವ ಏಕಮಾತ್ರ ಧೋರಣೆ ಅವಲಂಬಿಸಿದ್ದರಿಂದ, ಅವುಗಳ ಮಟ್ಟ ಕೆಳಗಾದಂತೆ, ವ್ಯಂಗ್ಯ ಚಿತ್ರಗಳದ್ದೂ ಆಗಿದೆ. ವ್ಯತ್ಯಾಸವಿಷ್ಟೆ, ಈ ಚಿತ್ರಕಾರರು ಪಡೆಯುವ ಗೌರವಧನ ಅತ್ಯಲ್ಪವಾದ್ದರಿಂದ, ತಮ್ಮ ಘನತೆಯನ್ನು ಏರಿಸಿಕೊಳ್ಳುವದಕ್ಕಾಗಿ, ತೀರಕೆಳಮಟ್ಟದ ಚಿತ್ರಗಳನ್ನು ರಚಿಸಿ, ಸಂಪಾದಕರ ಕಸದಬುಟ್ಟಿಗೆಯನ್ನು ತುಂಬಿಸುತ್ತಿದ್ದಾರೆ.

ಹಾಸ್ಯ, ಅಣಕ, ಅತಿಶಯೋಕ್ತಿಗಳು ವ್ಯಂಗ್ಯ ಚಿತ್ರಗಳ ಜೀವಾಳವಾಗಿದ್ದರೂ, ಅವುಗಳನ್ನು ಶೈಕ್ಷಣಿಕ ಮಾಧ್ಯಮವಾಗಿಸಿ ನೀತಿಯ ಮಾರ್ಗದರ್ಶಕವಾಗುವಂತೆ ಮಾಡುವುದು ಸಾಧ್ಯವಿದೆ. ಚಿತ್ರಗಳು ತಿಳಿಯಾಗಿ ಅದರಲ್ಲಿ ಅಡಗಿದ ಅರ್ಥ ಪಾರದರ್ಶಕವಾಗಿ ಓದುಗನಿಗೆ ಕೂಡಲೇ ಅರ್ಥವಾಗಬೇಕೆಂದಿದ್ದರೆ ಚಿತ್ರಕಾರನಿಗೆ ಶ್ರಮಿಸಬೇಕಾಗುತ್ತದೆ. ಉತ್ತಮ ಕಲ್ಪನಾಶಕ್ತಿ, ತಿಳಿಹೃದಯ, ಹಾಸ್ಯಪ್ರವೃತ್ತಿ, ಪರಿಸರದ ಆಗುಹೋಗುಗಳ ನಿಕಟವಾದ ಪರಿಚಯ, ರೇಖೆಗಳ ಮೇಲೆ ಒಳ್ಳೆ ಹಿಡಿತಗಳೇ ಅವನ ಬಂಡವಲು. ರಾಜಕಾರಣಿಗಳ ಸ್ವಾರ್ಥ, ಅವರ ಕಾರ್ಯ ವಿಧಾನ, ಅಧಿಕಾರ ಲಾಲಸೆ, ವಿಧಾನಸಭೆ, ಪಾರ್ಲಿಮೆಂಟುಗಳಲ್ಲಿ ಅವರ ಕುಸ್ತಿಗಳು, ಮುಂತಾದ ವಿಷಯಗಳ ಮೇಲೆ ದಿನಂಪ್ರತಿ ವ್ಯಂಗ್ಯಚಿತ್ರಗಳು ಪ್ರಕಟವಾಗುತ್ತಿರುತ್ತವೆ. ಈ ಚಿತ್ರಗಳನ್ನು ಹೇಗೆ ರಚಿಸಬೇಕು? ಎಂಬುದು ವ್ಯಕ್ತಿಯ ಅಭಿರುಚಿಗೆ ಸೇರಿದ್ದು. ಕೇವಲ ರೇಖೆಗಳನ್ನೇ ಬಳಿಸುವವರಿದ್ದಾರೆ. ವಿವರಗಳಿಗಾಗಿ ಅದರೊಂದಿಗೆ ಬರವಣಿಗೆಯನ್ನು ಸೇರಿಸುವವರಿದ್ದಾರೆ. ಹಿನ್ನೆಲೆಗಾಗಿ ಛಾಯಾಚಿತ್ರವನ್ನು ಬಳಿಸಿ ಸಾಹಸಮಾಡಿದವರಿದ್ದಾರೆ. ನಿರಕ್ಷರಿಗೂ ನೋಡಿದಾಕ್ಷಣ ಚಿತ್ರದಲ್ಲಿ ಅಡಕವಾದ ಹಾಸ್ಯ, ಅಣಕಗಳು ಅರ್ಥವಾಗಿ ಬಹುಕಾಲ ಅದನ್ನು ನೆನಪಿಡುವಂತೆ ಆದರೆ, ಅದು ಉತ್ತಮ ಚಿತ್ರವೆನಿಸಿಕೊಳ್ಳುವುದು. ಚಿತ್ರಕಲೆ ಕರಗತ ಮಾಡಿಕೊಳ್ಳಲಾಗದವರಲ್ಲಿ ಶಬ್ದಗಳಲ್ಲಿಯೇ ವ್ಯಂಗ್ಯ ಚಿತ್ರದ ಸ್ವಾರಸ್ಯವನ್ನು ತರಲು ಯತ್ನಿಸಿದವರೂ ಇದ್ದಾರೆ.

ರಾಜಕಾರಣಿಗಳನ್ನು ಅವರವರ ವೈಯಕ್ತಿಕ ವೈಶಿಷ್ಟ್ಯಗಳಿಂದ ರೂಪಿಸುವುದು ರೂಢಿ, ಉದ್ದಮೂಗು, ಕೆಲವೇ ಬಿಳಿಕೂದಲಿನ ಹೆಂಗಳೆ ಇಂದಿರಾಳನ್ನು ಸೂಚಿಸಿದರೆ, ಲಂಬಕರ್ಣ,

ಮೂಗು ಅಲಂಕರಿಸಿದ ಚಾಳೀಸು ಮುರಾರಜಿಯವರನ್ನು ಪ್ರತಿನಿಧಿಸುತ್ತದೆ. ದಪ್ಪ ತುಟಿ, ದೊಣ್ಣಮೆಣಸಿನ ಮೂಗು, ಜಗಜೀವನರಾಮರನ್ನೂ ಗೂಬೆಯ ಕಣ್ಣು, ತಲೆಗೆ ಕಟ್ಟಿದ ಕರವಸ್ತ್ರ ರಾಜನಾರಾಯಣರನ್ನೂ, ಥಾಳವಾದ ಕುಂಕುಮ ಹೆಣ್ಣನ್ನು ಹೋಲುವ ಗಂಡು, ಕಮಲಾಪತಿ ತ್ರಿಪಾಠಿಯವರನ್ನೂ, ಪೈಪನ್ನೂ ಸೇದುವ ಬೋಳು ತಲೆಯು, ದೇವರಾಜ ಅರಸರನ್ನು ಪ್ರತಿನಿಧಿಸುತ್ತಿವೆ. ಇದರಂತೆ ರಾಷ್ಟ್ರಗಳನ್ನು ಸಾಂಕೇತಿಕವಾಗಿ ರೂಪಿಸುವ ಪರಿಪಾಠ ಬೆಳೆದು ಬಂದಿದೆ. ಉದಾಹರಣಾರ್ಥವಾಗಿ, ಅಮೇರಿಕೆಯನ್ನು ಅಂಕಲ್ ಸ್ಯಾಮನೆಂದೂ, ಇಂಗ್ಲಂಡವನ್ನು ಜಾನ್ ಬುಲ್ ಎಂದೂ ಬಿಡಿಸಲಾಗುತ್ತದೆ. ನಿರತವಾಗಿ, ರಾಜಕೀಯ ವ್ಯಂಗ್ಯಚಿತ್ರಗಳನ್ನು ಬಿಡಿಸುವವರು ಕೆಲವು ವ್ಯಕ್ತಿಗಳನ್ನು ನೋಡಿದಾಕ್ಷಣ ಅದರ ಕಲಾಕಾರರು ಯಾರೆಂದು ತಿಳಿದುಬಿಡುತ್ತದೆ. ಬೊಕ್ಕತಲೆಯ ಅನುಭವಿ ಮುದಿಯನು ಲಕ್ಷ್ಮಣರ ಕೃತಿಯೆಂದು ಸೂಚಿಸಿದರೆ, ಮೈಸೂರು ಪೇಟಾದವನು ಮೂರ್ತಿಯವರದೆಂದೂ, ಲಾರೆಲ್ ಹಾರ್ಡಿಯವರಂತಹ ಲಂಬ-ಗಿಡ್ಡರ ಜೋಡಿ ಅಬೂರದೆಂದೂ ಸಾರಿ ಹೇಳುತ್ತವೆ. ವ್ಯಕ್ತಿಗಳನ್ನು ಚಿತ್ರಿಸುವಲ್ಲಿಯೂ ಇಂತಹದೇ ವೈಶಿಷ್ಟ್ಯ ಕಂಡುಬರುತ್ತದೆ. ಮಿತಿಮೀರಿ ಹಿಗ್ಗಿಸಿದ ಮೂಗು, ಭೂತಾಕಾರದ ಕೈಕಾಲುಗಳ ಬೆರಳುಗಳು ಮಾರಿಯೋರ್ ವೈಶಿಷ್ಟ್ಯವಾದರೆ, ವಿಷ್ಣುವಿನ ಚಿತ್ರಗಳಲ್ಲಿ ವ್ಯಕ್ತಿಗಳು ಹುಲಿಯೊಡನೆ ಸೆಣೆಸಾಟದಲ್ಲಿ ಕಿವಿ ಮತ್ತು ಬೆರಳುಗಳನ್ನು ಕಳೆದುಕೊಂಡವರಂತೆ ತೋರಿಸಲಾಗುತ್ತದೆ. ವ್ಯಂಗ್ಯ ಚಿತ್ರಗಳಲ್ಲಿ ವಿಚಾರವೇ ಪ್ರಾಧಾನ್ಯವಾಗಿದ್ದರೂ ಅದರ ಜೊತೆಗೆ ಆಕರ್ಷಕ ಆಕೃತಿಗಳಿದ್ದರೂ ಯಾರೂ ಆಕ್ಷೇಪಣೆ ಮಾಡಲಾರರು!

ರೇಡಿಯೋ-ಟೆಲಿವಿಜನ್‌ಗಳಂತೆ ವ್ಯಂಗ್ಯಚಿತ್ರಗಳೂ ಜನಸಾಮಾನ್ಯರೊಂದಿಗೆ ಸಂಪರ್ಕಬೆಳಸುವ ಉತ್ತಮಸಾಧನವಾದ್ದರಿಂದ ಅದನ್ನು ಶೈಕ್ಷಣಿಕ ಮಾಧ್ಯಮವಾಗಿಯೂ ಬಳಸಬಹುದು. ಧಾರ್ಮಿಕ ಸಾಮಾಜಿಕ ಕುಂದುಕೊರತೆಗಳನ್ನು ಎತ್ತಿ ತೋರಿಸಿ ಅವುಗಳನ್ನು ಹೋಗಲಾಡಿಸಲು ಈ ಚಿತ್ರಗಳನ್ನು ಬಳಸಬಹುದು. ಜನರಲ್ಲಿ ವೈಜ್ಞಾನಿಕ, ತಾಂತ್ರಿಕ ವಿಚಾರಗಳನ್ನು ತಿಳಿಸುವಂತೆ ಮಾಡಲು ಇವುಗಳನ್ನು ಹೆಚ್ಚೆಚ್ಚಾಗಿ ಬಳಿಸಿಕೊಳ್ಳಬಹುದು. ಜನಸಾಮಾನ್ಯರನ್ನು ಆಕರ್ಷಿಸುವ ಛಾಯಾಗ್ರಹಣ ಇಂತಹ ವಿಜ್ಞಾನ ಆಧಾರಿತ ಕಲೆ. ಚಲಚಿತ್ರಗಳ ಪ್ರಭಾವದಿಂದಾಗಿ ಹೆಚ್ಚೆಚ್ಚು ಜನರು ಈ ಕಲೆಯಲ್ಲಿ ಆಸ್ಥೆ ವಹಿಸುತ್ತಿದ್ದಾರೆ. ಪೂರ್ವಜರು ಜೀವಮಾನದಲ್ಲೇ ಒಂದೆರಡು ಛಾಯಾಚಿತ್ರಗಳನ್ನು ತೆಗೆಸಿಕೊಂಡರೆ, ಇಂದಿನವರು ತಿಂಗಳೊಂದರಲ್ಲಿಯೇ ಹತ್ತಾರು ತೆಗೆಯಬಹುದು, ತೆಗೆಸಿಕೊಳ್ಳಬುಹುದು. ವಿವಿಧ ತರದ ಕ್ಯಾಮರಾ, ಇನ್ನಿತರ ಸಾಧನಗಳು ಸುಲಭವಾಗಿ ನಗರವಾಸಿಗಳಿಗೆ ಲಭ್ಯವಿರುವುದರಿಂದ, ಛಾಯಾಗ್ರಹಣಕ್ಕೆ ಹೆಚ್ಚು ಚಾಲನೆ ಸಿಕ್ಕಿದೆ. ಆದರೆ ಜನಸಾಮಾನ್ಯರು ತೆಗೆಯುವ ಛಾಯಾಚಿತ್ರಗಳು ತೀರ ಕೆಳಮಟ್ಟದ್ದಿದ್ದು ಅದಕ್ಕೆ ಮುಖ್ಯ ಕಾರಣ ಅವರಲ್ಲಿರುವ ಛಾಯಾಗ್ರಹಣದ ಬಗ್ಗೆ ಅಜ್ಞಾನ. ವ್ಯಂಗ್ಯಚಿತ್ರಕಾರರು ಅವರಿಗೆ ಈ ಜ್ಞಾನ ಪೂರೈಸುವ ಹೊಣೆಯನ್ನು ಹೊತ್ತು ಅದಕ್ಕನುಗುಣವಾಗಿ ವ್ಯಂಗ್ಯಚಿತ್ರಗಳನ್ನು ರಚಿಸಬಹುದು. ನಮ್ಮ ದೇವದೇವತೆಗಳಷ್ಟೇ ಪುರಾತನವಾಗಿದ್ದು, ಹಾಸ್ಯ, ಕುಚೇಷ್ಟೆ ವಿನೋದ-ಕಸರತ್ತುಗಳಿಗೆ ಹೆಸರಾದ

ಕುಬ್ಜನು ಅತ್ಯಾಧುನಿಕ ಕ್ಯಾಮರಾ ಬಳಸಲು ಯತ್ನಿಸಿ ಅಸಮರ್ಥ ಹೇಗಾಗುತ್ತಾನೆಂದು ಈ ಚಿತ್ರಗಳಲ್ಲಿ ತೋರಿಸಬಹುದು.[1] ಆಸಕ್ತರು ಈ ಚಿತ್ರಗಳನ್ನು ಅಭ್ಯಸಿಸಿ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲು ಸಾಧ್ಯವಿದೆ.

ರಾಜಕೀಯ ಚಿತ್ರಗಳಿಗೆ ತಾತ್ಕಾಲಿಕ ಮಹತ್ವವಿದ್ದರೆ, ಸಾಮಾಜಿಕ, ಸಾಂಸ್ಕೃತಿಕ, ವೈಜ್ಞಾನಿಕ ಚಿತ್ರಗಳಿಗೆ ಸರ್ವಕಾಲೀನ ಮಹತ್ವವಿರುತ್ತದೆ. ಇವನ್ನು ರಚಿಸಬೇಕಾದರೆ ಕಲಾಕಾರನು ಜನಸಾಮಾನ್ಯರಿಗೆ ಚಿರಪರಿಚಿತವಿರುವ ಸನ್ನಿವೇಶಗಳನ್ನೇ ಬಳಸಿಕೊಳ್ಳುತ್ತಾನೆ. ರಾಮಾಯಣ, ಮಹಾಭಾರತ, ಅಜ್ಜಿಕತೆಗಳು, ಪಂಚತಂತ್ರ ಮುಂತಾದವುಗಳಲ್ಲಿ ಬರುವ ಘಟನೆಗಳನ್ನು ಕಲಾಕಾರನು ತನ್ನದಾಗಿ ಮಾಡಿಕೊಳ್ಳುತ್ತಾನೆ. ದೇವಾಲಯಗಳಲ್ಲಿ ಮೂಡಿಸಿರುವ ಅಸಂಖ್ಯಾತ ಶಿಲ್ಪಗಳು ಕಲಾಕಾರನಿಗೆ ಹೊಸ ಹೊಸ ವಿಚಾರಗಳನ್ನು ಪೂರೈಸಬಲ್ಲವು. ಇವುಗಳೊಂದಿಗೆ ಅತ್ಯಾಧುನಿಕ ಸನ್ನಿವೇಶಗಳನ್ನು ಹೇಗೆ ಹೆಣೆಯಬಹುದು. ವ್ಯಂಗ್ಯ ಚಿತ್ರಕಾರನು ಇಂತಹ ಸಾಮಗ್ರಿಗಳನ್ನು ಹೇಗೆ ಬಳಸುತ್ತಾನೆಂದು ಈ ಕೆಳಗಿನ ಶಬ್ದ-ವ್ಯಂಗ್ಯ ಚಿತ್ರಗಳಿಂದ ತಿಳಿಯುವಂತಿದೆ.

೧) ಹಲ್ಲಿನ ಡಾಕ್ಟರರ ಕುರ್ಚಿಯಲ್ಲಿ ಆರೂಢರಾದ ದೇವರಾಜ ನೋಯುತ್ತಿರುವ ಹಲ್ಲನ್ನು ಕೀಳಲು, ಅದಕ್ಕೊಂದು ಹಗ್ಗಕಟ್ಟಿ, ಇಂದಿರಾಜಿಯವರು ಮಾವುತರಾಗಿ ಆನೆಯೊಂದರಿಂದ ಎಳೆಯಲು ಯತ್ನಿಸಿದಾಗ, ಹಲ್ಲಿನ ಇಂದಿರಾಜಿ ಮುಗ್ಗರಿಸಿ ಬಿದ್ದಂತೆ ತೋರಿಸಬಹುದು. ಇದು ಇತ್ತೀಚಿನ ಅರಸ-ಇಂದಿರಾ ಅವರ ಕಾಳಗ ಪ್ರತಿನಿಧಿಸುತ್ತಿದೆ.

೨) ತಾನೇ ಭಾರತ ಎಂದು ಒಂದು ಕಾಲದಲ್ಲಿ ತಿಳಿದ ಇಂದಿರಾಜಿಯವರು ಬದಲಾದ ರಾಜಕೀಯದಲ್ಲಿ ಹೇಗೆ ಕಂಗಾಲಾಗಿದ್ದಾರೆ ! ಎಂದು ತೋರಿಸಲು, ಅತಿಕ್ರೌರ್ಯಕ್ಕೆ ಹೆಸರಾದ ಹದ್ದಿಗೆ ಇಂದಿರಾಜಿಯವರ ಮುಖ ಜೋಡಿಸಿ, ಸಂಜಯನು ಮರಿಹದ್ದಾಗಿ ತಾಯಿಯನ್ನು ಅವಚಿಕೊಂಡಾಗ, ದೇವರಾಜರು, ತಾರಕೇಶ್ವರಿ ಸಿಂಹ, ಚಂದ್ರಶೇಖರ, ಶಹಾ ಕಮಿಷನ್, ವಿಶಿಷ್ಟ ಕೋರ್ಟಿನ ನ್ಯಾಯಾಧೀಶರು, ಕಾಗೆಯ ರೂಪ ತಳೆದು ಹಲ್ಲೆಮಾಡಿದಾಗ ತನ್ನನ್ನು ಸಂರಕ್ಷಿಸಿಕೊಳ್ಳಲಾರದೆ ಒದ್ದಾಡುತ್ತಿರುವುದನ್ನು ತೋರಿಸಬಹುದು.

೩) ಜನಸಂಘ, ಜನತಾಪಾರ್ಟಿಗಳಿಂದ ಹಿಡಿದು, ಅಮೇರಿಕೆಯ ಹಿಂದಿನ ರಾಯಭಾರಿ ಮೊಯ್ನಿಹಾನ್ನರ ವರೆಗೆ ಎಲ್ಲರ ಚಟುವಟಿಕೆಗಳಲ್ಲಿ ಆರ್.ಎಸ್. ಎಸ್.ದ ಕೈವಾಡವಿರುವುದನ್ನು ಇಂದಿರಾಜಿ ಕಂಡುಕೊಂಡಿದ್ದಾರೆ; ಇದನ್ನು ಮಹಾಭಾರತದ ಒಂದು ಪ್ರಸಂಗಕ್ಕೆ ಚೆನ್ನಾಗಿ ಹೋಲಿಸಬಹುದು. ಇಂದಿರಾಜಿಯವರು ಕಂಸನಂತೆ ಮತ್ತು ಆರ್. ಎಸ್. ಎಸ್. ಸ್ವಯಂಸೇವಕ, ವಾಜಪೇಯವರು, ಮೊಯ್ನಿಹಾನ್, ಸಿ. ಆಯ್, ಏ ಇವರೆಲ್ಲ ಕೃಷ್ಣನ ರೂಪದಲ್ಲಿ ಕಾಣಿಸಬಹುದಾಗಿದೆ.

ನಮ್ಮಲ್ಲಿ ಲಕ್ಷ್ಮಣರಂತಹ ಅಂತರ್ರಾಷ್ಟ್ರೀಯಮಟ್ಟದ ಕೆಲವು ವ್ಯಂಗ್ಯ ಚಿತ್ರಕಾರರಿದ್ದರೆ ಉತ್ತಮ ದರ್ಜೆಯವರು ಹಲವರಿದ್ದಾರೆ. ಆದರೆ, ನಾಯಿಕೊಡೆಗಳಂತೆ ತಲೆ ಎತ್ತಿಕೊಂಡು ಮೆರೆದಾಡುವ ಬಹುಸಂಖ್ಯಾತರು ವ್ಯಂಗ್ಯಚಿತ್ರಕಾರರಿಗೆ ಕೆಟ್ಟ ಹೆಸರನ್ನು ತಂದಿದ್ದಾರೆ. ಇವರು ಪುಟತುಂಬಿಸುವ ಚಿತ್ರಗಳನ್ನು ಪೂರೈಸಿ ಕಡಲೇಕಾಯಿ ಮಾರುವವರಿಗೆ ಹೆಚ್ಚಿನ ಸಹಾಯ

ಮಾಡುತ್ತಿದ್ದಾರೆ. ಇವರಿಂದಾಗಿ, ಜನಸಾಮಾನ್ಯರ ದೃಷ್ಟಿಯಲ್ಲಿ ವ್ಯಂಗ್ಯಚಿತ್ರಕಾರನೆಂದರೆ ಹತ್ತಾರು ಹಳೆಯ ಪತ್ರಿಕೆಗಳ ಸಂಚಿಕೆಗಳನ್ನು ಮುಂದಿಟ್ಟು ತನ್ನದೊಂದು ಚಿತ್ರವನ್ನು ರಚಿಸುವವ ! ಎಂದು ತಿಳಿದರೆ ಆಶ್ಚರ್ಯವಿಲ್ಲ. ಲಕ್ಷ್ಯಗೊಟ್ಟು ಓದುವ, ನೋಡುವ ಓದುಗರು ಆಗಾಗ ಕೃತಿಚೋರರ ಬಗ್ಗೆ ದೂರಿಕೊಂಡಾಗ, ಈ ನಿರ್ಲಜ್ಜರು 'ಮಹಾನುಭಾವರು ಏಕಪ್ರಕಾರವಾಗಿ ವಿಚಾರಿಸುವ ಸಾಧ್ಯತೆ ಸದಾಕಾಲವೂ ಇದ್ದೇ ಇರುತ್ತದೆ' (Great men think a like!)ಎಂದು ತಮ್ಮನ್ನು ದೊಡ್ಡವರ ಗುಂಪಿದೆ ಸೇರಿಸಿಕೊಂಡು ಬೆನ್ನು ಚಪ್ಪರಿಸಿಕೊಳ್ಳುತ್ತಾರೆ. ನಮ್ಮ ಗುಂಪಿಗೆ ವ್ಯಂಗ್ಯ ಚಿತ್ರರಂಗ, ಇನ್ನೂ ಬಾಲ್ಯಾವಸ್ಥೆಯಲ್ಲೇ ಇರುವಾಗ ವ್ಯಂಗ್ಯ ಚಿತ್ರಕಾರರು, ಇದಕ್ಕೆ ಹೊಸ ಹೊಸ ಆಯಾಮ ಕೊಡುವ ಬದಲಾಗಿ "ಭೂಸಾ" ಚಿತ್ರಗಳ ನಿರ್ಮಾಣದಲ್ಲಿ ತೊಡಗಿರುವುದು ಶೋಚನೀಯ. ಉತ್ತಮ ಕಲಾಕಾರನ ಮೂಲವಿಚಾರವನ್ನು ಆಧರಿಸಿ, ಸ್ವಲ್ಪ ಬದಲಾವಣೆಯೊಂದಿಗೆ ತಮ್ಮ ಹೆಸರನ್ನು ಸೇರಿಸಿ ಇವರು ಪ್ರಕಟಿಸುತ್ತಾರೆ.

"ಪಂಚ್" ಅಂತರ್ರಾಷ್ಟ್ರೀಯ ಮನ್ನಣೆ ಪಡೆದ ವ್ಯಂಗ್ಯ ಚಿತ್ರಗಳಿಗೇ ಮೀಸಲಾದ ಪತ್ರಿಕೆಯಾಗಿತ್ತು. ಅಮೇರಿಕೆಯಲ್ಲಿ ವ್ಯಂಗ್ಯಚಿತ್ರಗಳಿಗೆ ಪ್ರಾಧಾನ್ಯಕೊಟ್ಟ ಪತ್ರಿಕೆಗಳು ಹಲವಾರು ಇವೆ. ಭಾರತದಲ್ಲಿ ಸರ್ವರಿಂದಲೂ ತಲೆದೂಗಿಸಿಕೊಂಡ "ಶಂಕರ್ಸ ವೀಕ್ಲಿ" ಆರ್ಥಿಕ ಮುಗ್ಗಟ್ಟಿನಿಂದ ಮುಚ್ಚಲ್ಪಡಬೇಕಾದ ಸಂದರ್ಭ, ಯಾರಿಗೂ ಶ್ರೇಯಸ್ಸು ತರುವಂತಹದಲ್ಲ. "ಚೌ" ರವರ 'ಪಿಕ್ವಿಕ್' ಪತ್ರಿಕೆ ವ್ಯಂಗ್ಯ ಪ್ರಾಧಾನ್ಯವಾಗಿದ್ದರೂ ಅದರ ಪ್ರಚಾರ ದಕ್ಷಿಣ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದೆ. ಬಹಳ ಚಲಾವಣೆಯಲ್ಲಿ ಇದ್ದ ಪತ್ರಿಕೆಗಳು ವ್ಯಂಗ್ಯಚಿತ್ರಕಾರರನ್ನು ನೇಮಿಸಿಕೊಂಡು ಅವರ ಕೃತಿಗಳನ್ನು ಪ್ರಕಟಿಸುತ್ತಿರುತ್ತಾರೆ. ಆರ್. ಕೆ. ಲಕ್ಷ್ಮಣರು ಟೈಮ್ಸ್ ಆಫ್ ಇಂಡಿಯಾದಲ್ಲಿ ದುಡಿಯುತ್ತಿದ್ದು ದಿನಂಪ್ರತಿ 'ಯು ಸೆಡ್ ಇಟ್' ಎಂಬ ಮಾಲಿಕೆಯಲ್ಲಿ ರಾಜಕೀಯ, ಸಾಮಾಜಿಕ ಕುಂದುಕೊರತೆಗಳನ್ನು ಆಧರಿಸಿದ ಚಿತ್ರಗಳನ್ನು ಪ್ರಕಟಿಸುತ್ತಾರೆ. ದಿನಪತ್ರಿಕೆ ಕೈಸೇರಿದಾಗ ಅವರ ವ್ಯಂಗ್ಯವನ್ನು ಪ್ರಥಮತಃ ನೋಡುವ ಚಟ ಬೆಳೆಸಿಕೊಂಡವರಿದ್ದಾರೆ; ಅವನ್ನು ಕತ್ತರಿಸಿ ಸಂಗ್ರಹಿಸುವವರೂ ಇದ್ದಾರೆ. ಈ ಚಿತ್ರಗಳನ್ನು ಪುಸ್ತಕರೂಪದಲ್ಲಿಯೂ ಪ್ರಕಟಿಸಲಾಗಿದೆ. ಲಕ್ಷ್ಮಣರ ವಾರದ ವ್ಯಕ್ತಿ, ಪ್ರದೇಶ ರಾಷ್ಟ್ರಗಳ ಜನಜೀವನದ ವ್ಯಂಗ್ಯಚಿತ್ರಗಳು ಎಲ್ಲರನ್ನು ಆಕರ್ಷಿಸುತ್ತಿವೆ. ಅಧಿಕಾರದಿಂದ ಮತ್ತಳಾದ ಇಂದಿರಾಳನ್ನು ಬ್ರಿಟಿಷ್ ಚಕ್ರವರ್ತಿಗೆ ಹೋಲಿಸಿ ರಚಿಸಿದ ವ್ಯಂಗ್ಯ ಚಿತ್ರ ಯಾರು ತಾನೇ ಮರೆಯುವಂತಿದೆ ?

ಮೂರ್ತಿಯವರು ಪ್ರಜಾವಾಣಿ, ಡೆಕ್ಕನ್ ಹೆರಾಲ್ಡಿಗೆ, ನರೇಂದ್ರರು ಸಂಯುಕ್ತಕರ್ನಾಟಕದ ಪತ್ರಿಕೆ ಗುಂಪಿಗೆ ಸೇವೆ ಸಲ್ಲಿಸುತ್ತಿದ್ದಾರೆ. "ಮಾರಿಯೋ" ಇವರ ಹೆಚ್ಚಿನ ಚಿತ್ರಗಳು "ಇಲ್ಲಸ್ಟ್ರೇಟೆಡ್ ವೀಕ್ಲಿ"ಯಲ್ಲಿ ಪ್ರಕಟವಾದರೆ ಅಬೂರ ಕೃತಿಗಳು "ಇಂಡಿಯನ್ ಎಕ್ಸಪ್ರೆಸ್"ದಲ್ಲಿ ಆಗುತ್ತಿವೆ. "ವಿಷ್ಣು" "ಸ್ವರಾಜ್ಯ"ಕ್ಕಾಗಿ ದುಡಿದರೆ, 'ಚೌ' ಅವರು ತಮ್ಮ ಪತ್ರಿಕೆಗೆ ತಾವೇ ಚಿತ್ರಗಳನ್ನು ಬಿಡಿಸುತ್ತಾರೆ. ಇನ್ನೂ ಕೆಲವು ಪತ್ರಿಕೆಗಳು ವಿವಿಧ ಸಂಚಿಕೆಗಳಲ್ಲಿ ಪ್ರಕಟವಾದ ಉತ್ತಮ ವ್ಯಂಗ್ಯಚಿತ್ರಗಳನ್ನು ತುಲನಾತ್ಮಕವಾಗಿ ಪ್ರಕಟಿಸುತ್ತಿವೆ. ಒಂದೇ

ವರ್ಷದಲ್ಲಿ ಪ್ರಕಟವಾದ ಉತ್ತಮ ಪ್ರತಿಗಳನ್ನು ಪ್ರಕಟಿಸುವ ಪರಿಪಾಠವನ್ನು ಕೆಲವು ಪತ್ರಿಕೆಗಳು ಇಟ್ಟುಕೊಂಡಿವೆ. ತುರ್ತುಪರಿಸ್ಥಿತಿಯಲ್ಲಿ ಪ್ರಕಟಿಸಲಾಗದ ಕೆಲವು ಚಿತ್ರಗಳು ಅನಂತರ ಬೆಳಕು ಕಂಡವು. ಆದರೆ, ದಬ್ಬಾಳಿಕೆಯನ್ನು ಖಂಡಿಸಿ, ಅಂದಿನ ದಿನಗಳಲ್ಲಿ ರಚಿಸಿದ ಚಿತ್ರಗಳು ಬೆರಳಮೇಲೆ ಎಣಿಸುವಷ್ಟು ಇದ್ದವು ಎಂಬುದು ವಿಷಾದದ ಸಂಗತಿ, ವ್ಯಂಗ್ಯ ಚಿತ್ರಕಾರನು ಧೀಮಂತನಾಗಿರಬೇಕಾದಂತೆ ಧೈರ್ಯವಂತನೂ ಆಗಿರಬೇಕಾದದ್ದು ಅತ್ಯವಶ್ಯ. ಅಧಿಕಾರದಲ್ಲಿ ಮೆರೆಯುವ ರಾಜಕಾರಣಿಗಳಿಗೆ, ಜನಾಭಿಪ್ರಾಯ ನಿಯಂತ್ರಿಸುವ ನಾಯಕರಿಗೆ, ಸರಕಾರಿ ಅಧಿಕಾರಿಗಳಿಗೆ, ಧರ್ಮಾಧಿಕಾರಿಗಳಿಗೆ ಮಣಿಯದೇ ತನಗೆ ಸರಿಕಂಡದ್ದನ್ನು ಚಿತ್ರಗಳಲ್ಲಿ ರೂಪಿಸುವ ಕೆಚ್ಚೆದೆ, ಕಲಾಕಾರನಿಗೆ ಅತ್ಯವಶ್ಯ. ಎರಡನೇ ಜಾಗತಿಕ ಮಹಾಯುದ್ಧದ ಜ್ವಾಲೆ, ಎಲ್ಲೆಡೆಗೆ ಹಬ್ಬಿದಾಗ ಹಿಟ್ಲರನಂಥ ಅತ್ಯಂತ ಬಲಿಷ್ಠ ಸರ್ವಾಧಿಕಾರಿಗೆ ಎಲ್ಲ ದೇಶಗಳೂ ಬೆದರುವಾಗ ಡೇವಿಡ್ ಲೋನಂತಹ ವ್ಯಂಗ್ಯ ಚಿತ್ರಕಾರರು ಮಣಿಯದೇ ಎಲ್ಲರಿಂದಲೂ ತಲೆದೂಗಿಸಿಕೊಂಡರು, ಅಂದಿನ ಹಿಟ್ಲರನ ಬಗ್ಗೆ ರಚಿತವಾದ ಅವರ ವ್ಯಂಗ್ಯ ಚಿತ್ರಗಳನ್ನು ಇಂದಿಗೂ ಹಿರಿಯರು ಮೆಚ್ಚುಗೆಯಿಂದ ನೆನಪಿಸಿಕೊಳ್ಳುತ್ತಾರೆ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವ್ಯಂಗ್ಯಚಿತ್ರಕಾರರಿಗೆ ಅಪಾರ ಗೌರವ, ಮನ್ನಣೆ, ಆದಾಯ, ಬೇಡಿಕೆಗಳಿವೆ. ಅವರ ಪ್ರತಿಭೆಯನ್ನು ಜಾಹೀರಾತುಗಾರರು ಅನೇಕ ರೀತಿಯಿಂದ ಬಳಸಿಕೊಳ್ಳುತ್ತಾರೆ. ಬೇಂಟಮ್, ಟಾರ್ಜನ್ ಮುಂತಾದ ಹಾಸ್ಯಚಿತ್ರಮಾಲಿಕೆಗಳು ಹುಟ್ಟಿಕೊಂಡಿದ್ದು ಆ ದೇಶಗಳಲ್ಲಿಯೇ ಹಾಸ್ಯಲಹರಿ (ಕಾಮಿಕ್ಸ) ಪತ್ರಿಕೆಗಳಂತೂ ಯುವಜನರಲ್ಲಿ ಬೇರುಬಿಟ್ಟಿವೆ. ನಮ್ಮ ದೇಶದಲ್ಲಿ ಅವು ಸಾಮಾನ್ಯರಿಗೆ ನಿಲುಕದ್ದರಿಂದ ಶ್ರೀಮಂತರ ಮಕ್ಕಳಿಗಷ್ಟೇ ಸೀಮಿತವಾಗಿವೆ. ವ್ಯಂಗ್ಯಚಿತ್ರಗಳಿಂದ ಅಲಂಕರಿಸಿದ ಕ್ಯಾಲೆಂಡರ್, ಡಾಯರಿಗಳನ್ನು ಕೊಳ್ಳುವ ರಸಿಕರು ಅಮೇರಿಕೆಯಲ್ಲಿದ್ದಾರೆ. ಹಲವಾರು ಸೂಕ್ಷ್ಮ ಸನ್ನಿವೇಶಗಳನ್ನು ರಸನಿಮಿಷಗಳನ್ನಾಗಿ ಪರಿವರ್ತಿಸುವುದಕ್ಕಾಗಿಯೇ ರಚಿತವಾದ ವ್ಯಂಗ್ಯಚಿತ್ರಗಳು ಶುಭಾಶಯ ಪತ್ರಿಕೆಗಳು ಅಲ್ಲಿ ಬಹುದಿನಗಳಿಂದ ದೊರೆಯುತ್ತಿವೆ.

●●●

ಇದು ಸುಮಾರು ಮೂವತ್ತು ವರ್ಷಗಳ ಹಿಂದೆ ಬರೆದ ಲೇಖನ. ಆದರೆ ವ್ಯಂಗ್ಯ ಚಿತ್ರ ಜಗತ್ತಿನಲ್ಲಿ ಹೇಳಿಕೊಳ್ಳುವಂತಹ ಬದಲಾವಣೆ ಕಂಡುಬಂದಿಲ್ಲ. ಸಾಮಯಿಕತೆಯ ಕೆಲ ಅಂಶಗಳಿರುವುದರಿಂದ ಆಯ್ಕೆ ಮಾಡಿ ಸೇರಿಸಲಾಗಿದೆ.

ಭಾಗ ಎರಡು

ಜನಜೀವನ

೧೧. ಮಲೆನಾಡ ಜನ-ಜೀವನ

ನಾವು ಸಾವಿರಾರು ರೂಪಾಯಿ ವೆಚ್ಚಮಾಡಿ ವಿಹಾರಕ್ಕೆಂದು ಯುರೋಪಖಂಡಕ್ಕೊ, ಅಮೇರಿಕೆಗೋ, ಜಪಾನಕ್ಕೋ ಹೋಗಿ ಬರುತ್ತೇವೆ. ಅಲ್ಲಿಯ ನಿಸರ್ಗ ಸೌಂದರ್ಯವನ್ನು, ಜನಜೀವನವನ್ನು ದಿನ, ವಾರ, ಮಾಸಗಳು ಕಳೆದುಹೋದರೂ ಮರೆಯದೇ ಅತಿಥಿಗಳಿಗೆ ವಿವರಿಸುತ್ತೇವೆ. ಆದರೆ ನಮ್ಮ ರಾಜ್ಯವನ್ನೇ ಸರಿಯಾಗಿ ನೋಡಿ ತಕ್ಕ ಮಟ್ಟಿಗೆ ತಿಳಿದುಕೊಂಡಿದ್ದೇನೆ! ಎಂದು ಎದೆ ತಟ್ಟಿ ಹೇಳಬಲ್ಲ ಕನ್ನಡಿಗರೆಷ್ಟು ? ಮಲೆನಾಡಿನ ಸೃಷ್ಟಿಸೌಂದರ್ಯ, ಅಲ್ಲಿಯ ಜನಜೀವನ ಯುರೋಪಖಂಡದಷ್ಟು ವೈವಿಧ್ಯಪೂರ್ಣವಾಗಿದೆ ಎಂದರೆ ಯಾರೂ ಅಪನಂಬಿಕೆ ತೋರಿಸಬಾರದು. ಕೊಡಗು, ಸ್ವಿಟ್ಜರ್ಲಂಡಿನಂತೆ ಸೊಬಗಿನ ಬೀಡಾದರೆ, ಹಾಸನ ಜಿಲ್ಲೆ, ಇಟಲಿಯಂತೆ ಇತಿಹಾಸದ ತೆರೆದ ಅಧ್ಯಾಯದಂತೆ ಇದೆ. ಸಹ್ಯಾದ್ರಿ, ಆಲ್ಪ್ಸ ಪರ್ವತದಂತೆ ರಮಣೀಯವಾಗಿದ್ದರೆ ಶರಾವತಿ ರ್ಹ್ಯೆನ್ ನದಿಯಂತೆ ನಿತ್ಯೋಪಯೋಗಿಯಾಗಿದೆ. ಹೀಗಿದ್ದರೂ ನಮ್ಮ ಒಳನಾಡಿನ ಜನ, ಗುಡ್ಡ, ಬೆಟ್ಟ ನದಿಕೊಳ್ಳ, ಅರಬೀ ಸಮುದ್ರ ನೋಡಿಲ್ಲವೆಂದರೆ ಅತಿಶಯೋಕ್ತಿ ಆಗಲಾರದು. ಇವುಗಳನ್ನು ನೀವು ನೋಡದಿದ್ದರೆ ಮಲೆನಾಡಿಗೆ ಬನ್ನಿ. ಭಾರತದಲ್ಲಿಯ ಈ ಯುರೋಪಿಗೆ.

ವೈವಿಧ್ಯಪೂರ್ಣ

ಮಲೆನಾಡು ಎಂದು ಸರ್ವಸಾಧಾರಣವಾಗಿ ಕರೆದುಕೊಳ್ಳುವ ಕರ್ನಾಟಕ ರಾಜ್ಯದ ಪಶ್ಚಿಮ ಪ್ರದೇಶ ವೈವಿಧ್ಯಪೂರ್ಣವಾಗಿದೆ. ಏರು, ದಿನ್ನೆಗಳು, ಗಿರಿಕಂದರಗಳೊಳಗಿಂದ ಹಾದಿ ಹೋಗುವ ಡೊಂಕು ಡೊಂಕಾದ ರಸ್ತೆಗಳು, ಜುಳು ಜುಳು ಹರಿಯುವ ಹಳ್ಳಗಳು, ಕಾಡಾನೆಯೂ ಕಾಣದಂತೆ ಹಬ್ಬಿದ ದಟ್ಟವಾದ ಅರಣ್ಯಗಳು, ನೀರಿನ ಸೌಕರ್ಯವಿರುವ ಬಯಲಾದ ಪ್ರದೇಶದಲ್ಲಿ ಅಡಿಕೆ, ತೆಂಗು, ಮಾವು, ಹಲಸು, ಮೆಣಸಿನಕಾಳು, ಯಾಲಕ್ಕಿ, ಬಾಳೆ, ವೀಳ್ಯದೆಲೆ, ಹೊತ್ತು ನಿಂತ ತೋಟಗಳು, ಸಾವಿರಾರು ಎಕರೆ ಭೂಮಿಗೆ ನೀರುಣಿಸುವ ತುಂಗಾ-ಭದ್ರಾ ನದಿಗಳು, ಎತ್ತರದಿಂದ ಕೆಳಗೆ ಧುಮುಕಿ ಲಕ್ಷಾಂತರ ಮನೆಗಳನ್ನು ಬೆಳಗಿ, ನೂರಾರು ಕೈಗಾರಿಕೆಗಳನ್ನು ನಡಿಸುವ ಶರಾವತಿ, ನೂರಾರು ಮೈಲುಗಳ ಕಡಲದಂಡೆ, ರುದ್ರ -ಪ್ರಶಾಂತ ಕಡಲು, ಅರಣ್ಯ ಸಂಪತ್ತನ್ನು ಹೆಚ್ಚಿಸಲು ನಾಲ್ಕು ತಿಂಗಳ ಕಾಲ ಸತತ ಸುರಿಯುವ ಮಳೆ, ಪರಶುರಾಮನ ನಾಡಿನಲ್ಲಿ ಎಂದೆಂದಿಗೂ ಪೌಷ್ಠಿಕ ಆಹಾರಕ್ಕೆ ಕೊರತೆಯಾಗದಂತೆ



ರಂಗೇರಿಸುವ ಅಡಿಕೆ

ದೊರೆಯಬಹುದಾದ ಹೇರಳ ಮೀನು, ಇವುಗಳೆಲ್ಲದರ ಜೊತೆ ಒಂದಾಗಿ ಜೀವನ ನಡೆಸುತ್ತಿರುವ ಜನ ಜನಾಂಗಗಳು. ಇವೆಲ್ಲ ಮಲೆನಾಡಿನ ಜೀವಾಳವಾಗಿವೆ. ವಿದ್ಯುತ್ತು, ಖನಿಜ, ಆಹಾರ ಸಂಪತ್ತು ವಿಪುಲವಾಗಿದ್ದರೂ ಇವು ರಾಜ್ಯದ ಮತ್ತು ದೇಶದ ಇತರ ಅಂಗಗಳಿಗೆ ಪೋಷಕವಾಗಿವೆಯೇ ಹೊರತು ಮಲೆನಾಡಿನ ಪ್ರದೇಶಕ್ಕಲ್ಲ. ಇಲ್ಲಿ ವಾಹನ ರಸ್ತೆ, ರೇಲು, ಕಾರಖಾನೆ, ಬಂದರ ಸೌಕರ್ಯ ಮುಂತಾದವುಗಳ ಅಭಾವದಿಂದಾಗಿ ಜನ ಆಗಾಗ ತಮ್ಮ ತಾಯ್ನೆಲ ಬಿಟ್ಟು ಮುಂಬಯಿಗೋ ಬೆಂಗಳೂರಿಗೋ ವಲಸೆ ಹೋಗುವುದುಂಟು. ಮಲೆನಾಡಿನ ಸಂಪತ್ತನ್ನು ಸರಿಯಾಗಿ ಬೆಳೆಸಿಕೊಂಡರೆ ರಾಜ್ಯದಲ್ಲಿ ಈಗಿರುವ ಜನಸಂಖ್ಯೆಯ ಎರಡುಪಟ್ಟು ಜನರಿಗೆ ಉದ್ಯೋಗ, ಬಟ್ಟೆ-ಬರೆ, ಅನ್ನ-ನೀರು, ಸಂಪತ್ತು ಒದಗುವಂತೆ ಇದೆ! ಎಂದರೆ ಅತಿಶಯೋಕ್ತಿಯಾಗಲಾರದು.

ಯಾವ ಪ್ರದೇಶಕ್ಕೆ ಮಲೆನಾಡು ಎಂದು ಕರೆಯಬೇಕು ಎಂಬುದರ ಬಗ್ಗೆ ಒಮ್ಮತವಿಲ್ಲ. ಸಹ್ಯಾದ್ರಿಯ ಆಸರೆಯಲ್ಲಿ ಗುಡ್ಡ-ಬೆಟ್ಟ, ಗಿರಿಕಂದರ, ವಿಪುಲಮಳೆ, ದಟ್ಟ ಅರಣ್ಯವುಳ್ಳಂಥ ಪ್ರದೇಶ, ಮಲೆನಾಡು ಎಂದು ನಾವು ಒಪ್ಪಿಕೊಂಡರೂ, ಉತ್ತರಕನ್ನಡ, ದಕ್ಷಿಣ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳು ಮಲೆನಾಡಿನಲ್ಲಿ ಸಮಾವೇಶಗೊಳ್ಳುತ್ತವೆ. ಇಲ್ಲಿಯ ಉಡಿಗೆ-ತೊಡುಗೆ, ರೀತಿ-ನೀತಿ, ಮದುವೆ-ಮುಂಜಿ, ಆದರ-ಸತ್ಕಾರಗಳಲ್ಲಿ ಬಹಳಷ್ಟು ವೈವಿಧ್ಯ ಇರುವುದರಿಂದ ಈ ಜನಜೀವನವನ್ನು ತಿರುಳಿನ ರೂಪದಲ್ಲಿ ಹೇಳಲು ಯತ್ನಿಸುವುದು ಸುಲಭದ ಮಾತಲ್ಲ ಹೀಗಾಗಿ ಅಪವಾದಗಳೆಷ್ಟೋ ಹೊರಡಬಹುದು.

ಮುಖ್ಯವಾಗಿ ಕನ್ನಡ-ಕೊಂಕಣಿ, ತುಳು, ಹವ್ಯಕ, ಕನ್ನಡ, ಕೊಡಗು, ಭಾಷೆಗಳನ್ನು ಈ ಜನ ಮಾತನಾಡುತ್ತಿದ್ದರೂ ಒಂದು ಭಾಗದವರು, ಒಂದು ಜಾತಿಯವರು, ಇನ್ನೊಬ್ಬರಿಗೆ ಅರ್ಥವಾಗದಷ್ಟು ಭಿನ್ನವಾಗಿ ಒಂದೇ ಭಾಷೆಯನ್ನು ಆಡುವರು. ಉತ್ತರಕನ್ನಡದ ಕೊಂಕಣಿಗರು ಮರಾಠಿ ಶಬ್ದಗಳನ್ನೂ ಸೇರಿಸಿದರೆ ದಕ್ಷಿಣ ಕನ್ನಡದವರು ಕನ್ನಡ ಶಬ್ದಗಳನ್ನೂ ಚಿಕ್ಕಮಗಳೂರಿನ ಜನ ಇಂಗ್ಲೀಷ್ ಶಬ್ದಗಳನ್ನೂ ಸೇರಿಸುವರು. ಕೆಲವರು ವ್ಯಾಕರಣಬದ್ಧವಾದ ಪುಸ್ತಕೀಯ ಕನ್ನಡ ಮಾತನಾಡಿದರೆ, ಕೆಲವರು ಹಳೆಗನ್ನಡ (ಹವೀಕರು) ಇನ್ನು ಕೆಲವರು ಗ್ರಾಮ್ಯಭಾಷೆ

ಮಾತನಾಡುವರು. ಹಲವರಿಗೆ ಮೀನು ಇಲ್ಲದೇ ಒಂದೂ ಊಟ ಹೋಗದಾದರೆ ಮೀನಿನ ಹೆಸರು ತೆಗೆದರೇ ವಾಂತಿಮಾಡುವ ಕುಲೀನ ಬ್ರಾಹ್ಮಣರಿದ್ದಾರೆ. ಹಾಲಕ್ಕಿ ಗೌಡರಂತಹ ಸರಳ, ಮಂದಮತಿಗಳಿದ್ದಾರೆ. ಕೊಂಕಣಿ, ಉಡುಪಿಯ ಬ್ರಾಹ್ಮಣರಂತಹ ಕುಶಾಗ್ರಮತಿಯ ವ್ಯವಹಾರ ಕುಶಲರಿದ್ದಾರೆ. ಹುಲಿಯ ಹಾಲನ್ನೇ ತರುವ ಕೊಡವರಿದ್ದಾರೆ. ಹಲವು ಉತ್ತಮ ಕಲಾಕಾರ, ಸಾಹಿತಿ, ವಿಜ್ಞಾನಿ, ಕವಿ, ರಾಜಕಾರಣಿ, ನೃತ್ಯಕಾರ ಯಕ್ಷಗಾನಕೋವಿದ, ನಾಟಕಕಾರರನ್ನು ರಾಜ್ಯಕ್ಕಷ್ಟೇ ಅಲ್ಲ ದೇಶಕ್ಕೆ ಮಲೆನಾಡು ಒದಗಿಸಿದೆ. ಜನಜೀವನ, ಆಚಾರ-ವಿಚಾರ, ಸಂಸ್ಕೃತಿಗಳ ತಳಹದಿಯ ಮೇಲೆ ಮಲೆನಾಡನ್ನು ಮೂರು ವಿಭಾಗಗಳನ್ನಾಗಿ ಮಾಡಬಹುದು. ಘಟ್ಟದ ಕೆಳಗಿನ ಕರಾವಳಿಯ ಉತ್ತರ, ದಕ್ಷಿಣ ಕನ್ನಡ ಜಿಲ್ಲೆಗಳು ಮೊದಲನೇ ಗುಂಪಿಗೆ ಸೇರಿದರೆ ಎಲ್ಲ ದೃಷ್ಟಿಯಿಂದಲೂ ತನ್ನತನವನ್ನು ಕಾಯ್ದುಕೊಂಡುಬಂದ ಕೊಡಗು ಎರಡನೇ ಗುಂಪಿಗೆ, ಘಟ್ಟದ ಮೇಲಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನಜಿಲ್ಲೆಗಳು ಮೂರನೇ ಗುಂಪಿಗೆ ಸೇರುತ್ತವೆ. ರಾಜ್ಯ ಪುನಾರಚನೆಯ ಪೂರ್ವದಲ್ಲಿ ಹಳೆ ಮೈಸೂರಿಗೆ ಸೇರಿದ ಮೂರನೆಯ ಗುಂಪಿಗಷ್ಟೇ ಮಲೆನಾಡೆಂದು ಕರೆದು ಅಲ್ಲಿಯ ಜನಜೀವನ ಹೆಚ್ಚಾಗಿ ಸಾಹಿತ್ಯದಲ್ಲಿ ನಿರೂಪಿಸಿದೆಯಾದ್ದರಿಂದ ಈ ಲೇಖನದಲ್ಲಿ ಮೊದಲಿನ ಮತ್ತು ಎರಡನೇ ಗುಂಪಿಗೆ ಹೆಚ್ಚು ಪ್ರಾಧಾನ್ಯ ಕೊಡಲಾಗಿದೆ.

ಸಾರಸ್ವತ ಬ್ರಾಹ್ಮಣರು

ಗೋವಾದಿಂದ ಪೋರ್ಚುಗೀಸರ ಧರ್ಮಪರಿವರ್ತನೆಗೆ ಅಂಜಿ ಓಡಿಬಂದ ಕೊಂಕಣಿ ಮಾತನಾಡುವ ಆರ್ಯ ವಂಶಜರ ಮತ್ತು ಪ್ರಾಚೀನಕಾಲದಿಂದಲೂ ನೆಲೆಗೊಂಡ ದ್ರಾವಿಡವಂಶಜರ ಸಹಜೀವನವನ್ನು ಈ ಜಿಲ್ಲೆಗಳಲ್ಲಿ ಕಾಣಬಹುದು. ಕೊಂಕಣಿಗರೆಂದು ಕರೆಯಲ್ಪಡುವ ಸಾರಸ್ವತ ಬ್ರಾಹ್ಮಣರು ಬಂಗಾಲಿ ಬ್ರಾಹ್ಮಣರಂತೆ ಮತ್ಸ್ಯಭಕ್ಷಿಗಳಾಗಿದ್ದರಿಂದ ಇತರ ಮಡಿವಂತರು ಅವರನ್ನು ಬ್ರಾಹ್ಮಣರೆಂದು ಪರಿಗಣಿಸುವುದಿಲ್ಲ. ಮಾರವಾಡಿಗಳಂತೆ ತಮ್ಮ ಹುಟ್ಟುನಾಡು ಬಿಟ್ಟು ಹೆಚ್ಚಿನ ಸೌಕರ್ಯಗಳಿರುವ ಪ್ರದೇಶಗಳಿಗೆ ಹೋಗಿ ನೆಲೆಸಿದ ಈ ಜನರಲ್ಲಿ ವ್ಯವಹಾರ ಕುಶಲತೆ ಕಾಣಬಹುದು. ವ್ಯಾಪಾರ, ನೌಕರಿ, ಕೃಷಿಗಳಲ್ಲಿ ವಿಶಿಷ್ಟ ಸ್ಥಾನವನ್ನು ಈ ಜನರು ಕಾದುಕೊಂಡಿದ್ದಾರೆ. ಹಿಂದಿನ ಕಾಲದ ಗೃಹಿಣಿಯರು ಒಂಭತ್ತು ಗಜದ ಸೀರೆಯನ್ನು ಮಹಾರಾಷ್ಟ್ರಿಗರಂತೆ ಕಚ್ಚೆ ಹಾಕಿ ಉಟ್ಟು, ಕೂದಲಿನ ತುರುಬು ಹಾಕಿಕೊಂಡರೆ ನವಯುವತಿಯರು ಆರು ಗಜಸೀರೆ, ಲಂಗ, ವಿವಿಧ ಕೇಶಾಲಂಕಾರಗಳನ್ನು ಬಳಕೆಯಲ್ಲಿ ತಂದಿದ್ದಾರೆ. ಅದರಂತೆ ಧೋತರವೂ ಕ್ರಮ ಕ್ರಮೇಣ ಮಾಯವಾಗುತ್ತ ಬಂದಿದೆ. ಅವಿಭಕ್ತ ಕುಟುಂಬಗಳು ಸಾಮಾನ್ಯವಾಗಿದ್ದರೂ ಇತ್ತೀಚೆಗೆ ಚಿಕ್ಕ ಸಂಸಾರಗಳೇ ಸಾಮಾನ್ಯ. ವಿದ್ಯೆ-ಬುದ್ಧಿಗಳೇ ಇವರ ಪಿತ್ರಾರ್ಜಿತ ಸಂಪತ್ತಿಯಾದ್ದರಿಂದ ಪ್ರತಿಯೊಬ್ಬನೂ ತನ್ನಿಂದಾದಷ್ಟು ಉಚ್ಚಶಿಕ್ಷಣವನ್ನು ಮಕ್ಕಳಿಗೆ ಕೊಡಲು ಯತ್ನಿಸುತ್ತಾನೆ. ಬಡವಿದ್ಯಾರ್ಥಿಗಳಿಗೆ ಸಹಾಯಕ್ಕೆಂದು ಕೆಲ ಸಹಕಾರಿ ಸಂಸ್ಥೆಗಳೂ ಇವೆ. 'ಗಳಿಸಿದ ಹಣಕ್ಕಿಂತ ಶೇಖರಿಸಿದ ಹಣ ತನ್ನದು', ಎಂಬ



ಊಟಕ್ಕೆ ಅಕ್ಕಿ

ಮಾತಿನಲ್ಲಿ ವಿಶ್ವಾಸವಿಟ್ಟದ್ದರಿಂದ ವಿನಾಕಾರಣ ದುಂದುಮಾಡುವ ಜನವಲ್ಲ. ಸೋಮಾರಿಗಳನ್ನು ತೀರ ನಿಂದ್ಯವಾಗಿ ಈ ಸಮಾಜ ಕಾಣುವುದು. ಕೆಲಸದ ನಿಮಿತ್ತ ಪರ ಊರಿಗೆ ಹೋದಾಗ ಹೋಟೇಲಿಗೆ ಹೋಗುವದಕ್ಕಿಂತ ಆಪ್ತರಲ್ಲಿ ಬೀಡುಬಿಡುವುದು ವಾಡಿಕೆ. ಬಂದ ಅತಿಥಿಗಳಿಗೆ ಮೀನಿನ ವ್ಯಂಜನಗಳು, ಸಿಹಿಪದಾರ್ಥಗಳನ್ನೂ ಮಾಡಿ ಬಡಿಸುವರು. ಅತಿಥಿಗಳು ಮನೆಯ ಮಕ್ಕಳಿಗೆ ಚಿಕ್ಕಪುಟ್ಟ ಕಾಣಿಕೆ ತರುವರು. ಅಪರೂಪಕ್ಕೆ ಬರುವ ಸುಮಂಗಲಿಯರಿಗೆ ಸೀರೆ, ಕಣವಾಗಲಿ ತೆಂಗಿನಕಾಯಿಯಾಗಲಿ ಉಡಿತುಂಬಿ ಕುಂಕುಮ ಹಚ್ಚುವರು.

ಇತ್ತೀಚೆಗೆ ಮುಂಜಿಯ ವೈಭವ ಕೆಲಮಟ್ಟಿಗೆ ಕಡಿಮೆಯಾದರೂ ಮದುವೆಗಳ ಖರ್ಚು ಹೆಚ್ಚುತ್ತಲೆ ನಡೆದಿದೆ. ವರದಕ್ಷಿಣೆಯೂ ಏರುತ್ತಲಿದೆ. ಹೀಗಾಗಿ ಮಧ್ಯಮ ವರ್ಗದ ಕುಮಾರಿಯರು ತಂದೆಯ ಈ ಭಾರವನ್ನು ಕಡಿಮೆ ಮಾಡಲು ತಾವೂ ಕಲಿತು ನೌಕರಿಮಾಡಿ ಧನ ಸಂಪಾದನೆಯ ಜೊತೆಗೆ ಪತಿಯನ್ನೂ ಸಂಪಾದಿಸುವರು. ಹಿಂದೆ ಮದುವೆ 4-5 ದಿನಗಳವರೆಗೆ ನಡೆಯುತ್ತಿದ್ದರೂ ಈಗ ಒಂದೇ ದಿನದಲ್ಲಿ ಮುಗಿಸುವರು ಅದೂ ದೇವಸ್ಥಾನದಲ್ಲಿ ಅಥವಾ ಸಾರ್ವಜನಿಕ ಕಲ್ಯಾಣ ಮಂಟಪಗಳಲ್ಲಿ ಮಾಡುವರು. ಸೋದರನ ಮಗಳನ್ನು ಸೋದರಿಯ ಮಗನಿಗೆ ಕೊಡುವುದು ಹಕ್ಕಿನ ನೆಂಟಸ್ತಿಕೆಯೆನಿಸಿಕೊಳ್ಳುತ್ತದೆ. (ಆದರೆ ಮಾತುಲ ವಿವಾಹ ನಿಷಿದ್ಧವಿದೆ) ಮದುವೆ, ಉದ್ದನ್ನು ಬೀಸುವುದರಿಂದ ಪ್ರಾರಂಭವಾಗಿ

ಮದುಮಗನು ಕಾಶೀಯಾತ್ರೆಗೆ ಹೊರಟಾಗ ಮಾವನು ಅಡ್ಡಗಟ್ಟಿ ಮಗಳನ್ನು ಕೊಡುವೆನೆಂದು ಮನವೊಲಿಸಿ ಕರೆತರುವನು. ಕನ್ಯೆಯ ಸೋದರಮಾವನು ಅವಳನ್ನು ಮಂಟಪಕ್ಕೆ ಕರೆತರುವನು. ಹೆಂಗಳೆಯರು ಕೊಂಕಣಿ ಹಾಡುಗಳು ನಡೆದಾಗ ಅಗ್ನಿ ಸಾಕ್ಷಿಯಾಗಿ ಪತಿ-ಪತ್ನಿಯರಾಗುವರು. ನವದಂಪತಿಗಳ ಹೊಸ ಸಂಸಾರಕ್ಕೆ ಸಹಾಯವಾಗಲೆಂದು ದಿನಬಳಕೆಯ ಅನೇಕ ಸಾಮಾನುಗಳನ್ನು ಆತ್ಮೀಯರು ಉಡುಗೊರೆಯ ರೂಪದಲ್ಲಿ ಕೊಡುವರು. ಪತಿಗೆ ೨೫ವರ್ಷ ಪತ್ನಿಗೆ ೨೦ ವರ್ಷಗಳು ಸಾಮಾನ್ಯವಾಗಿ ಮೀರಿರುವದರಿಂದ ಅವರು ತಮ್ಮದೇ ಸಂಸಾರ ಹೂಡುವರು. ಊಟದಲ್ಲಿ ಚಪಾತಿ-ಭಕ್ರಿಗಳಿಲ್ಲ, ಅನ್ನದೂಟ, ಅಕ್ಕಿಯ ತಿಂಡಿಗಳೇ ಹೆಚ್ಚು. ಗೊಜ್ಜು, ಪಲ್ಯ, ಬೇಳಿ, ಹುಳಿ ಮುಂತಾದವುಗಳಿಗೆಲ್ಲ ವಿಪುಲವಾಗಿ ತೆಂಗಿನಕಾಯಿ ಉಪಯೋಗಿಸುವರು. ಮುಂಜಾನೆ ದೋಸೆ. ಇಡ್ಲಿ, ಉಪ್ಪಿಟ್ಟು ತಿಂದು ಚಹಾ ಕಷಾಯ (ಜೀರಿಗೆ, ಕೋತಂಬರಿ-ಬಡೇಸೋಪಿನ ಕಾಢಾಕ್ಕೆ ಹಾಲು-ಸಕ್ಕರೆ ಬೆರೆಸಿದ್ದು) ಕುಡಿದು ಹತ್ತು ಹನ್ನೊಂದು ಗಂಟೆಗೆ ಬಿಸಿಲಿನ ತಾಪದಿಂದ ಸಂರಕ್ಷಿಸಿಕೊಳ್ಳಲು ಗಂಜಿ ಊಟ ಮಾಡುವರು. ಮಧ್ಯಾಹ್ನ ೧-೨ ಗಂಟೆಗೆ ಊಟ, ೩-೪ ತಾಸುಗಳ ನಂತರ ಮಾಡಿಟ್ಟ ತಿಂಡಿಯೊಂದಿಗೆ ಚಹಾ ಕುಡಿದು ತಿರುಗಿ ರಾತ್ರಿ ಊಟಮಾಡುವರು.

ಕಾರವಾರದಿಂದ ಕೋಚಿನದ ತನಕ ಕರಾವಳಿ ಪ್ರದೇಶದಲ್ಲಿ ಹರಡಿದ ಸಾರಸ್ವತ ಬ್ರಾಹ್ಮಣರು ತಮ್ಮ ಪರಿಸರದ ವ್ಯಾಪಾರವನ್ನು ನಿಯಂತ್ರಿಸುವದರಿಂದ ಸಮಾಜದಲ್ಲಿ ಗಣ್ಯಸ್ಥಾನಗಳಿಸಿರುವರು. ದಕ್ಷಿಣ ಕನ್ನಡದ ಪೈ ಕುಟುಂಬದವರು ಬ್ಯಾಂಕಿಂಗ್ ಕ್ಷೇತ್ರದಲ್ಲೂ ಶಿಕ್ಷಣ ಕ್ಷೇತ್ರದಲ್ಲೂ ಎತ್ತಿದ ಕೈ. ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವದರಲ್ಲಿ ದೇಶದ ಮತ್ತು ಜಗತ್ತಿನ ವಿವಿಧ ಭಾಗಗಳಿಗೆ ಹೋದರೂ ಕೊಂಕಣಿ ಜನ ತಮ್ಮತನವನ್ನು ಬಿಟ್ಟುಕೊಡುವುದಿಲ್ಲ.

ಹವೀಕರು

ಹವೀಕರು ಸ್ಥಾನಿಕ ದ್ರಾವಿಡ ಬ್ರಾಹ್ಮಣರು, ಕೊಂಕಣಿಗರ ತೀವ್ರ ಪ್ರತಿಸ್ಪರ್ಧಿಗಳು, ಒಕ್ಕಲುತನ-ತೋಟಗಾರಿಕೆಗಳು ಮೂಲ ವ್ಯವಸಾಯವಾದರೂ ಕಲಿತವರು ಕೋರ್ಟ ಕಚೇರಿ, ಶಿಕ್ಷಣ ಸಂಸ್ಥೆಗಳಲ್ಲಿ ನೌಕರಿ ಮಾಡುತ್ತಾರೆ. ಸಹ್ಯಾದ್ರಿಯ ಸೆರಗಿನಲ್ಲಿ ಹರಿಯುವ ನೀರಿನ ಅನುಕೂಲವಿದ್ದಲ್ಲಿ ಅವರ ತೋಟಗಳು ಪ್ರಸಿದ್ಧವಿವೆ. ಸೂರ್ಯನೊಂದಿಗೆ ಎದ್ದು, ದಿನವಿಡೀ ಬೆನ್ನು ಮುರಿದು ದುಡಿಯುವರು. ತಮ್ಮ ತೋಟಗಳಲ್ಲಿ ಬಾಳೆ, ವೀಳ್ಯದೆಲೆ ಯಾಲಕ್ಕಿ, ಮೆಣಸಿನಕಾಳು, ಅಡಿಕೆ ಮುಂತಾದವನ್ನು ಬೆಳೆಯುವುದರಿಂದ ಕೈತುಂಬ ಸಂಪಾದನೆ ಮಾಡುವರು. ಇಷ್ಟಾದರೂ ಧನಸಂಚಯದ ರೂಢಿ ಇವರಿಗಿಲ್ಲ. ತಿಂಗಳಿಗೆ ಎರಡು ಸಾವಿರ ಉತ್ಪನ್ನವಿದ್ದರೆ ಇಪ್ಪತ್ತೊಂದನೂರು ಖರ್ಚುಮಾಡುವ ಜನರಿದ್ದಾರೆ. ಉಂಡುಟ್ಟು ಸುಖಪಡೆಯುವುದರಲ್ಲಿ ವಿಶ್ವಾಸವಿಟ್ಟ ಜನ. ಬಟ್ಟೆಬರೆಗಳನ್ನು ಉದ್ದರಿಯಾಗಿ ತರಬೇಕಾಗುವದು. ಅಂತೆಯೇ ಚಕ್ರಬಡ್ಡಿಗಿಂತಲೂ ಹೆಚ್ಚು ಬಡ್ಡಿಯನ್ನು ತೆರಬೇಕಾಗುವುದೆಂದು ತಿಳಿದಿದ್ದರೂ ಹಾಗೆ ಮಾಡದೇ



ಎಣೆ ತೆಂಗು

ಬೇರೆ ದಾರಿ ಇಲ್ಲ ಎಂಬರು. ಕೆಲವರು ಜ್ಯೋತಿಷ್ಯ, ಜಾತಕ, ಪೌರೋಹಿತ್ಯದ ಕೆಲಸಮಾಡಿದರೆ ಕೆಲವರು ಉತ್ತಮ ಸಂಸ್ಕೃತ ಪಂಡಿತರಿದ್ದಾರೆ. ಪ್ರೌಢ ಸ್ತ್ರೀಯರು ಒಳಕಚ್ಚೆಹಾಕಿ ಏಳುವಾರಿನ ಸೀರೆಗಳನ್ನು ಹೊರಕಚ್ಚೆಯಿಲ್ಲದೇ ಪಾದಗಳಿಂದ ಸ್ವಲ್ಪ ಮೇಲ್ಪದಿಗೆ ಉಡುವರು. ಹಿಂದಿನ ಕಾಲದಲ್ಲಿ ಕಣದ ರವಿಕೆಗಳನ್ನು ಸಾಮಾನ್ಯವಾಗಿದ್ದರೂ ಈಗ ಆಧುನಿಕ ಬ್ಲೌಜ್‌ಗಳು ಕಂಡುಬರುತ್ತವೆ. ಗಂಡಸರು ಕೆಲಸದ ವೇಳೆಯಲ್ಲಿ ಮಾರುದ್ದ ಕಚ್ಚೆಯನ್ನು, ಧೋತರವನ್ನು ಧರಿಸಿದರೆ ಹೊರಗೆ ಹೋಗುವಾಗ ಧೋತರ ಶರ್ಟ್, ರುಮಾಲು-ಟೊಪ್ಪಿಗೆಗಳನ್ನು ಧರಿಸುವರು. ಸಿಹಿತಿಂಡಿಗಳೆಂದರೆ ಬಲು ಇಷ್ಟ. ವೀಳ್ಯವನ್ನು ಸದಾಕಾಲ ಮೆಲ್ಲುವರು. ದೋಸೆ, ಅವಲಕ್ಕಿ, ಕಷಾಯ ಅಥವಾ ಚಾದ ನಾಶ್ತಾ. ಅನ್ನದೂಟದಲ್ಲಿ ಮೊಸರು, ಮಜ್ಜಿಗೆ ತೆಂಗಿನಕಾಯಿಗಳ ಉಪಯೋಗ ತುಂಬ. ವ್ಯಂಜನಗಳ ವೈವಿಧ್ಯವೂ ಸಾಕಷ್ಟು. ಗೊಜ್ಜು, ತಂಬಳಿ, ಸಾರು, ಹುಳಿ, ಹಸಿ, ತಾಳ್ಯ (ಪಲ್ಯ) ಇತ್ಯಾದಿಗಳು ಬೇಕೇಬೇಕು. ಪ್ರತಿಯೊಂದನ್ನು ಅನ್ನದೊಡನೆ ಮಿಶ್ರಣಮಾಡಿ ಉಣ್ಣುವರು. ತುಪ್ಪ, ಸಕ್ಕರೆ ಧಾರಾಳವಾದ ಉಂಡಿಗಳು, ತುಪ್ಪ ಬಸಿಯುವ ಕೇಸರಿಭಾತ, ಶಿರಾ, ಜಿಲೇಬಿಗಳು ಅವರ ಪ್ರೀತಿಯ ತಿಂಡಿಗಳು ಮನೆಗೆ ಯಾರೇ ಬರಲಿ ಅವರಿಗೆ ಮಜ್ಜಿಗೆ, "ಬಿಸಿನೀರು"(ಹಾಲು-ನೀರು)ಎಳೆನೀರು, ಶರಬತಗಳನ್ನು ಕೊಟ್ಟು ಎಲೆಯಡಿಕೆ ಇರಸುವರು. ಶೂದ್ರಾದಿಗಳಿಗೆ ಬೆಲ್ಲನೀರು, ವೀಳ್ಯ ದೊರೆಯುವವು. ಆಪ್ತೇಷ್ಟರಿಗೆ ಹಬ್ಬದೂಟದ ಉಪಚಾರವಾಗುವುದು. ಆತಿಥ್ಯಕ್ಕೆ ಹೆಸರಾದ ಜನ.



ಪೌಷ್ಟಿಕ ಮೀನು

ಇವರ ಮನೆಮಾತು ಹಳೆಗನ್ನಡವಾದ್ದರಿಂದ ಅಚ್ಚಗನ್ನಡಿಗನಿಗೂ ಅವರ ಮಾತು ಅರ್ಥವಾಗುವುದು ಕೊಂಚ ಬಿಗಿ. "ಓ ಅಬ್ಬೆ, ಎಂಗೆ ಒರಕೇ ಬತ್ತಿಲ್ಲೆ, ಎಂತಾ ಮಾಡುವ್ವೋ ತಿಳಿತ್ತಿಲ್ಲೆ"(ಅವ್ವಾ ನನಗೆ ನಿದ್ದೆ ಬಾರದು ಏನು ಮಾಡಬೇಕೆಂದೂ ತೋಚದು) ಹೊರಗೆ ದಿನ ಬಳಕೆಯ ಕನ್ನಡ ಮಾತನಾಡುವರು. ಮಗನಿಗೆ ಮಾಣಿ, ಮಗಳಿಗೆ ಕೂಸೆ ಎಂದು ಕರೆಯುವರು. ಹೆಣ್ಣುಮಕ್ಕಳನ್ನೆಲ್ಲ ನಪುಂಸಕಲಿಂಗದಲ್ಲಿ ಸಂಬೋಧಿಸುವದು ವಾಡಿಕೆ. ಹಳ್ಳಿಗಳಲ್ಲಿಯೇ ಇವರ ವಾಸವಿದ್ದುದರಿಂದ ಹೊಳೆಯಾಚೆ ಮಗಳನ್ನು ಕೊಡುವುದೆಂದರೆ ಯಾವುದೋ ವಿದೇಶಕ್ಕೆ ಕಳಿಸಿದಂತೆ ಭಾವಿಸುತ್ತಿದ್ದರು. ಹಿಂದಕ್ಕೆ ಹೆಣ್ಣು ತರಲು 'ತೀರ'(ತೆರ) ಕೊಡಬೇಕಾಗುತ್ತಿತ್ತು. ಈಗ ವರದಕ್ಷಿಣೆಯೂ ಕಾಣಿಸಿಕೊಳ್ಳಹತ್ತಿದೆ. ಘಟ್ಟದ ಮೇಲೆ ವರದಕ್ಷಿಣೆಗೆ ಅಷ್ಟು ಮಹತ್ವಕೊಡುವುದಿಲ್ಲ. ಚಿಕ್ಕವಯಸ್ಸಿನ ಅಂದರೆ ೧೪-೧೫ ವರ್ಷದ ಕನ್ಯೆ, ೧೮-೨೦ ವರ್ಷದ ವರ ತೀರಸಾಮಾನ್ಯವಾಗಿದ್ದಾರೆ. ಮೂವತ್ತು ವರ್ಷದ ವರ ೫ ವರ್ಷದ ಹುಡುಗಿಯನ್ನು ಮದುವೆಯಾದದ್ದು ಇದೆ. ಐವತ್ತು ವರ್ಷದ ವರನಿಗೆ ೧೮ ವರ್ಷದ ಕುಮಾರಿಯನ್ನು ಕೊಟ್ಟು ಮದುವೆಮಾಡಿದವರೂ ಇದ್ದಾರೆ. ಇಂಥ ಪ್ರಸಂಗಗಳಲ್ಲಿ ಸ್ತ್ರೀಯರಿಗಿಂತ ಮುಂಚೆಯೇ ಗಂಡಂದಿರು ಸ್ವರ್ಗಲೋಕಕ್ಕೆ ಆತುರವಾಗಿ ಹೋಗುವುದರಿಂದ 'ಅಮ್ಮದಿಕ್ಕ'ರ (ವಿಧವೆಯರ) ಸಂಖ್ಯೆ ಹೆಚ್ಚಿದೆ. ಮುಂಡನ ಕೆಂಪುಸೀರೆಗಳಿಂದ ಸಮಾಜ ಅವರ ಪರಿಶುದ್ಧತೆಯನ್ನು ಕಾಯಲು ಯತ್ನಿಸುತ್ತಿತ್ತು. ಇಂಥ ಎಳೆಯ ಮಹಿಳೆಯರ ಜೀವನ ದುಃಖಮಯವಾಗದೇ ಇದ್ದೀತೆ ? ಹಿಂದೊಮ್ಮೆ ತಮ್ಮ ಕುಲದ ಉದ್ಧಾರವಾಗಬೇಕೆಂದು ಆಗುತಂಕರಿಗೆ 'ಮದ್ದು" (ಸೌಮ್ಯ ವಿಷ) ಹಾಕುವ ಪದ್ಧತಿ ಹಳ್ಳಿಗಳಲ್ಲಿ ಇತ್ತು ಎಂಬುದು ವದಂತಿ.

ಕೊಂಕಣಿಗರಂತೆಯೇ ಸೋದರ ಮಾವನ ಮಗಳನ್ನು ಮದುವೆಯಾಗುವರು ಜಾತಕದ ಹೊಂದಾಣಿಕೆ ನೋಡಿ ಒಂದು ವಾರದೊಳಗೆ ಮಹೂರ್ತ ಇಟ್ಟು, ಕಾಯಿಬೆಲ್ಲ ತಿನ್ನುವುದು. ಇದೆ. ಮದಮಗನು ಮನೆಯಲ್ಲಿಯೇ ಬಾಸಿಂಗಕಟ್ಟಿಕೊಂಡು ಆಪ್ತೇಷ್ಟರೊಂದಿಗೆ ಮದುಮಗಳ ಮನೆಗೆ ಹೋಗುವನು. ಅತಿಥಿಗಳಿಗೆ ಕಾಲಿಗೆ ನೀರುಕೊಟ್ಟು, ತಿಂಡಿ ಪಾನಕ ಕೊಟ್ಟು, ಅತ್ತರ ಹಚ್ಚಿ, ಪನ್ನೀರು ಸಿಂಪಡಿಸಿ ಗಾಳಿಬೀಸಿ ಸತ್ಕರಿಸುವರು. ಬಂದವರಿಗೆ ತೆಂಗಿನಕಾಯಿ ಜೊತೆಗೆ ಒಂದು ರೂಪಾಯಿ, ಕಿರಿಯರಿಗೆ ಹತ್ತುಪೈಸೆ ದಕ್ಷಿಣೆಕೊಡುವರು. ಮದುವೆಯಲ್ಲಿ ಒಬ್ಬಳು ಹಾಡುವಾಗ ಉಳಿದವರು ಸೋಬಾನ ಎನ್ನುವರು. ವಿವಾಹದ ನಂತರ "ಸಟ್ಟಿಮುಡಿ"(ನೆಂಟರ ಊಟ)ನಡೆಯುವುದು. ಇಂತಹ ಸಮಯದಲ್ಲಿ ಮನೋಹರ (ಕಡಲೆಬೇಳೆ+ತುಪ್ಪ+ಬೆಲ್ಲ), ಪಾಯಸ, ರವೆ, ಲಾಡು, ಪಂಚಕಜ್ಜಾಯ, ಹೋಳಿಗೆ ಮಾಡುವರು. ಘಟ್ಟದ ಮೇಲೆ ಜಿಲೇಬಿಮಾಡುವುದು ರೂಢಿ. ಮದುವೆಯಲ್ಲಿ ತೆಂಗಿನಕಾಯಿಗಳನ್ನು ಹೇರಳವಾಗಿ ಹಂಚುವರು. ಮದುಮಗಳನ್ನು ಮನೆ ತುಂಬಿಸಿ, ಆಕೆ ಹೊಸ್ತಿಲು ದಾಟಿದ ನಂತರ ಬೆಲ್ಲ-ಕಾಯಿ ಹಂಚುವರು. ಆ ಸಮಯದಲ್ಲಿ ಪತಿಯು ಪತ್ನಿಗೆ ತೆಂಗಿನ ಚಿಪ್ಪನ್ನು ಕೊಡುವನು ಮತ್ತು ಇದನ್ನು ಪ್ರಥಮ ಪ್ರಸೂತಿಯಲ್ಲಿ ಬಳಸುವರು. 'ಹೆಗಡೆ, ಭಟ್ಟ, ಶಾಸ್ತ್ರಿ' ಹೆಚ್ಚಾಗಿ ರೂಢಿಯಲ್ಲಿ ಇರುವ ಹೆಸರುಗಳು. ಅಜ್ಜನ ಹೆಸರು ಮೊಮ್ಮಗನಿಗೆ ಇಡುವುದು ಸಾಮಾನ್ಯವಿದ್ದಂತೆ ತಂದೆಯ ಹೆಸರನ್ನೂ ಅತನಿಗೆ ಇಡುವರು. ಆದರೆ ಮಗನನ್ನು 'ಮಾಣಿ'ಯೆಂದು ಕರೆಯುವುದರಿಂದ ಹೆಸರಿನ ಗೊಂದಲ ಏಳುವದಿಲ್ಲ. ಸ್ಮಾರ್ತ, ಶಿವಳ್ಳಿ, ವೈಷ್ಣವರೆಂಬ ಒಳಪಂಗಡಗಳಿದ್ದು ಹೆಬ್ಬಾರರು, ಮತ್ತು 'ಇಪ್ಪತ್ತನಾಲ್ಕ'ರವರೊಂದಿಗೆ ಈ ಪಂಗಡಗಳು ಅಷ್ಟಾಗಿ ಬೆರೆಯುವುದಿಲ್ಲ.

ಸೇರುಗಾರರು

ಉತ್ತರ ಕನ್ನಡದ 'ಸೇರುಗಾರರು' ಹಿಂದೊಮ್ಮೆ ಉತ್ತಮ ಯೋಧರಾಗಿದ್ದರೂ ಇಂದು ಕೃಷಿಯನ್ನು ಕೈಕೊಂಡಿದ್ದಾರೆ. ಒಳ್ಳೆಯ ದೃಢಕಾಯರು. ಶಿಕ್ಷಣದಲ್ಲಿ ಅಷ್ಟೊಂದು ಮುಂದುವರಿದವರಲ್ಲ. ಒತ್ತಕ್ಷರಗಳೇ ಹೆಚ್ಚಾಗಿರುವ ಇವರ ಕೊಂಕಣಿಮಾತಿನ ಪದ್ಧತಿಯೇ ಬೇರೆ. ಕಾಯಿಪಲ್ಲೆ ಬೆಳೆಯುವುದು, ಚಕ್ಕಡಿ ಹೊಡೆಯುವುದು, ಹಾಲು ಹೈನದ ವ್ಯಾಪಾರ, ಹೆಂಗಳೆಯರು ಎಂಟು ಗಜದ ಸೀರೆ ಮತ್ತು ಕುಪ್ಪಸ-ರಬ್ಬಾದ ಬಣ್ಣದವುಗಳನ್ನು ತೊಟ್ಟು ದೊಡ್ಡ ಕುಂಕುಮ ಧರಿಸುವರು. ಪುರುಷರು ಧೋತರ ಉಟ್ಟು, ಜನಿವಾರ ಧರಿಸಿ ಬರಿ ಮೈಯಲ್ಲಿ ಇರುವುದೇ ಹೆಚ್ಚು. ಹಿಂದೊಮ್ಮೆ ತಾವು ಬ್ರಹ್ಮಕ್ಷತ್ರಿಯರೆಂದು ಸಾಧಿಸಿದ್ದರು. ಇತ್ತೀಚೆಗೆ ತಾವು ಮಾಂಸಾಹಾರಿಗಳು, ಮೇಲಿನ ವರ್ಗಕ್ಕೆ ಸೇರಿಲ್ಲ. ಸರಕಾರವು ಹಿಂದುಳಿದ ವರ್ಗಗಳಿಗೆ ಕೊಡುವ ರಿಯಾಯತಿ ತಮಗೂ ದೊರೆಯಬೇಕು ಎಂದು ವಾದಿಸುತ್ತಿದ್ದಾರೆ. ಅವಲಕ್ಕಿ ಚಹಾಗಳ ನಾಶ್ತಾ, ಕುಚ್ಚಲಕ್ಕಿಯ ಅನ್ನ- ಮೀನಿನ ವ್ಯಂಜನದ ಮಧ್ಯಾಹ್ನದೂಟ. ಊಟದಲ್ಲಿ ಹೆಚ್ಚು ವೈವಿಧ್ಯವಿಲ್ಲ. ಅನ್ನದ ಪ್ರಮಾಣ ಮಾತ್ರ ಹೆಚ್ಚು. ಹಬ್ಬಹುಣ್ಣಿಮೆಗಳಲ್ಲೂ ಕುಚ್ಚಿಗಿ ಅಕ್ಕಿಯದೇ ಪ್ರಯೋಗ. ವರನ ಕಡೆಯವರು ವಧು ಶೋಧ ನಡೆಸುವರು,. ಅಕ್ಕಿ ಬೆಲ್ಲಗಳ ಪ್ರಮಾಣದಲ್ಲಿ ವಧುದಕ್ಷಿಣೆ ನಿರ್ಧಾರವಾಗುವದು.

ಮದುಮಗನು ಮದುವೆಗೆ ಭಾವೀಮಾವನ ಮನೆಗೆ ಬಂದಾಗ ಸೀಮಂತ ಪೂಜೆ ಮಾಡಿ ಮೆರವಣಿಗೆ ತೆಗೆದು ಮದ್ದು-ಗುಂಡುಹಾರಿಸಿ ಕರೆದುಕೊಂಡು ಹೋಗುವರು. ಇಂಥ ಸಮಾರಂಭಗಳಲ್ಲಿ ಅನ್ನದ ದೊಡ್ಡರಾಶಿಯೆ ಬೇಕಾಗುವದರಿಂದ ದೊಡ್ಡ ಹೊಂಡತೋಡಿ ಬೆಂಕಿ ಮಾಡಿ ಅದರ ಮೇಲೆ ಅಕ್ಕಿ ಬೇಯಿಸಿ ತೆಂಗಿನಮರಗಳಿಂದ ಸೋಸಿ ಚಾಪೆಗಳ ಮೇಲೆ ಹರವಿ ಅನ್ನಮಾಡುವರು. ಕಡಲೇಬೇಳೆ ಪಾಯಸ, ಹೆಚ್ಚಿನ ಪಕ್ವಾನ್ನವೆನ್ನಿಸುವದು. ಯಾವುದೊಂದು ಕಾರಣದಮೇಲೆ ಜಗಳಪ್ರಾರಂಭವಾಗಿ ಬಾಯಿಂದ ಕೈಗೆ ಹತ್ತಿ ತಾವೊಮ್ಮೆ ಕ್ಷತ್ರಿಯ ಕುಲಕ್ಕೆ ಸೇರಿದವರೆಂದು ತೋರಿಸಿಕೊಂಡಾಗಲೇ ಮದುವೆಗೆ ಮೋಜು ಬರುವದು. ಬಂದ ಅತಿಥಿಗಳೆಲ್ಲ ಸೊಂಟಕ್ಕೊಂದು ಅಂಗವಸ್ತ್ರ ಬಿಗಿದುಕೊಂಡು ಮದುವೆ ಊಟವಾದ ನಂತರ ಪಾತ್ರೆಗಳನ್ನೆಲ್ಲ ಬೆಳಗಿಯೇ ಅತಿಥಿಗಳು ಮನೆಗೆ ಮರಳುವರು. ಉತ್ತರದ "ಸರದಾರಜಿ" ಯರನ್ನು ಇವರು ಸ್ವಭಾದಲ್ಲಿ ಹೋಲುತ್ತಾರೆ. ಹೀಗಾಗಿ ಎಂಥವನಿಗೂ ಅವರ ಹೊಲದಲ್ಲಿ ಸೇಂಗಾ, ಕಬ್ಬು ಕದಿಯಲು ಸಾಹಸ ಸಾಲದು. ಒಮ್ಮೆ ಸಿಕ್ಕು ಬಿದ್ದವರನ್ನು ಚರ್ಮಸುಲಿದು ಹೋಗುವಂತೆ ಬಡಿಯುತ್ತಾರೆ. ನಿತ್ಯಜೀವನದಲ್ಲೂ ಇವರೊಂದಿಗೆ ಇತರರು ಹೆಚ್ಚಿನ ಸಾವಧಾನದಿಂದ ವರ್ತಿಸುತ್ತಾರೆ. ಒಮ್ಮೆ 'ಲಂಕಾದಹನ" ಯಕ್ಷಗಾನ ವನ್ನು ಏರ್ಪಡಿಸಿದ್ದಾಗ ಕೊನೆಯಲ್ಲಿ ರಾವಣನು ರಾಮನೊಂದಿಗೆ ಕಾದಾಡಿ ಸೋಲಬೇಕಲ್ಲವೇ ? ಬಲಿಷ್ಠನಾದರೂ ರಾವಣನು ದೈತ್ಯನಿದ್ದುದರಿಂದ ರಾಮನಿಗೆ ಸೋಲಬೇಕಾಯಿತೆಂದು ರಾಮಾಯಣ ಹೇಳುತ್ತದೆ. ಆದರೆ ಈ ನಾಟಕದ ರಾಮ-ರಾವಣನಿಗೆ ವೈಯಕ್ತಿಕ ದ್ವೇಷವಿದ್ದುದರಿಂದ ಕೊನೆಯ ಸೀನಿನಲ್ಲಿ ಇಬ್ಬರಿಗೂ ಕೈಗೆ ಕೈ ಹತ್ತಿತು. ಬಲಿಷ್ಠನಾದ ರಾವಣ ಪಾತ್ರಧಾರಿ ರಾಮನನ್ನು ಚೆನ್ನಾಗಿ ಥಳಿಸಿದ. ಪರದೆಯ ಹಿಂದೆ ನಿಂತವರು ಕಂಗಾಲಾಗಿ "ಮೇಲು" ಧ್ವನಿಯಲ್ಲಿ ನೀ ಸೋತಂತೆ



ವಿಪುಲವಾದ ನೀರು

ನಟಿಸು ಎಂದು ರಾವಣನಿಗೆ ಬೇಡಿಕೊಂಡರೂ ಅವನ ಸಿಟ್ಟು ನೆತ್ತಿಗೇರಿ ನಾನು ಏಕೆ ಸಾಯಬೇಕು? ಅವನನ್ನು ನಿರ್ನಾಮ ಮಾಡಿದಾಗಲೇ ನನಗೆ ನೆಮ್ಮದಿ! ಎಂದು ಗರ್ಜಿಸಿದ. ನಾಲ್ಕು ಜನ ಬಲಿಷ್ಠರು ಬಂದು ರಾವಣನನ್ನು ಎಳೆದೊಯ್ದಾಗಲೇ ನಾಟಕ ಮುಕ್ತಾಯವಾಯಿತು.

ದಕ್ಷಿಣದಲ್ಲಿಯ 'ಸೇರೆಗಾರ' ಜನಾಂಗ ಇವರಿಗಿಂತ ಭಿನ್ನರಾಗಿದ್ದಾರೆ. ಇವರು ಕನ್ನಡ ಮಾತಾಡುವವರಿದ್ದು ಕ್ಷತ್ರಿಯ ವರ್ಣಕ್ಕೆ ಸೇರಿದವರಲ್ಲ. ಉಪ್ಪುಂದದ ದಕ್ಷಿಣ ಪ್ರದೇಶದಲ್ಲಿ ಹೆಚ್ಚಾಗಿ ಹರಡಿದ್ದಾರೆ. ಗಂಡಸರು ದೀರ್ಘದೇಹಿಗಳಾಗಿ ಕೃಷ್ಣವರ್ಣದವರು. ತಲೆಗೆ ಕೆಂಪು ಎಲವಸ್ತ್ರದ ರುಮಾಲು, ದಪ್ಪ ಅರಿವೆಯ ನಾಲ್ಕು ಜೇಬುಗಳುಳ್ಳ ಶರ್ಟು, ಮೊಣಕಾಲಿಗಿಂತ ಸ್ವಲ್ಪ ಕೆಳಗೆ ಬರುವ ಮುಂಡ, ಕಾಲಿಗೆ ಚಟ್ ಚುರ್ ಸಪ್ಪಳ ಮಾಡುವ ದಪ್ಪವಾದ ಚಪ್ಪಲಿಗಳನ್ನು ಧರಿಸುವರು. ಸದಾ ವೀಳ್ಯದಿಂದ ತುಂಬಿದ ಬಾಯಿ. ಸ್ತ್ರೀಯರು ಎರಡೂ ಬದಿಗೆ ಮೂಗು ಚುಚ್ಚಿಸಿಕೊಂಡು ಆಭರಣ ಧರಿಸಿರುತ್ತಾರೆ. ಹುಲಿಯ ಪಟ್ಟೆಗಳನ್ನು ಹೋಲುವ ಬಟ್ಟೆಯ ಲಂಗಾ, ಅದರ ಮೇಲೆ ಅಚ್ಚಬಣ್ಣದ ಅರ್ಧ ಸೀರೆ ತೊಡುವರು. ಮಣ್ಣಿನ ಗೋಡೆ, ತಾಳೆ ಎಲೆ ಅಥವಾ ತೆಂಗಿನಗರಿಗಳ ಚಪ್ಪರವಿರುವ ಇವರ ಮನೆಗಳು ತೀರ ಚಿಕ್ಕವಿರುವದರಿಂದ ಜೀವನದ ಬಹುಭಾಗವನ್ನು ಸೂರ್ಯಚಂದ್ರರ ನೇರ ಆಶ್ರಯದಲ್ಲಿ ಕಳೆಯುತ್ತಾರೆ. ಗಂಡಸರು ಹೆಂಗಸರು ಕೂಡಿಯೇ ಹೊಲ, ತೋಟಗಳಲ್ಲಿ, ಕಟ್ಟಡ ಕಟ್ಟುವದರಲ್ಲಿ ದುಡಿಯುತ್ತಾರೆ. ಹಡಗದಿಂದ ಮೀನು ಸಾಗಿಸುವುದು, ಒಣಗಿಸಿಡಿಸುವುದು, ಹಣ್ಣುಕಾಯಿ ಮಾರುವುದು ಮುಂತಾದವನ್ನು ಹೆಂಗಸರು ಮಾಡುವರು. ಗಂಡಸರು ಚಕ್ಕಡಿ -ಟ್ರಕ್ಕುಗಳಲ್ಲೂ ಕೆಲಸ ಮಾಡುವರು. ಬಿಸಿಲಿನ ತಾಪದಿಂದ ಸಂರಕ್ಷಣೆ ಪಡೆಯಲು ತಲೆಗೆ ಅಡಿಕೆ ಹಾಳೆಯ ಹ್ಯಾಟನ್ನು ಧರಿಸುವರು.

ವಾಣಿಗಳು, ಬಂಟರು

ವಾಣಿಗಳು ವೈಶ್ಯ ವರ್ಣಕ್ಕೆ ಸೇರಿದವರು. ಕೊಂಕಣಿ, ಕನ್ನಡ ಮಾತೃಭಾಷೆಯುಳ್ಳ ಎರಡು ಉಪಂಪಗಡಗಳು ಅವರಲ್ಲಿವೆ. ಬಂಗಾರದಿಂದ ಎಲೆಅಡಿಕೆ ಮಾರುವ ತನಕ ವ್ಯಾಪಾರದ ಬಹುವಿಧಗಳನ್ನು ಕರಗತಮಾಡಿಕೊಂಡಿದ್ದಾರೆ. ಧನಿಕರಿದ್ದರೂ ಕೈ ಬಿಗು, ಮನೆಯ ಮಹಿವಾಟ ಹೆಣ್ಣು ಮಕ್ಕಳಿಗೆ ಒಪ್ಪಿಸಿ ತಾವು ವ್ಯಾಪಾರದಲ್ಲಿ ತೊಡಗಿರುತ್ತಾರೆ. ಆಳುಗಳನ್ನು ಮನೆಗೆಲಸಕ್ಕೆ ಹಚ್ಚುವ ಪದ್ಧತಿಯಿಲ್ಲ. ಹೀಗಾಗಿ ಮನೆಯೊಡತಿ ಮೈತುಂಬ ಬಂಗಾರವಿಟ್ಟುಕೊಂಡರೂ ಮನೆಗೆಲಸಕ್ಕೆ ಮುಂದು. ಮೀನು ಪ್ರೀತಿಯ ಆಹಾರವಾದರೂ ಮಾಂಸವನ್ನು ಬಳಸುವದು ತೀರ ಕಡಿಮೆ. ಜೀವನದಲ್ಲೆಲ್ಲ ವ್ಯವಹಾರದಷ್ಟೇ ಮುಂದು. ಈಶ್ವರಭಕ್ತರಿದ್ದಂತೆ ವಿಷ್ಣುಭಕ್ತರೂ ಹೌದು. ಬಟ್ಟೆ ಬರೆ ಆಹಾರಗಳು ಬಹಳಮಟ್ಟಿಗೆ ಕೊಂಕಣಿಗರಂತೆ. ಗೋವೆ ಪೋರ್ಚುಗೀಸರ ಕೈಯಲ್ಲಿದ್ದಾಗ ಪಟ್ಟ ಏಳ್ಗೆ ಈಗ ಇವರಿಗಿಲ್ಲ. ಆಗಿನ ಗೋವೆಯಲ್ಲಿ ಸಿಗದ ಸಾಮಾನುಗಳನ್ನು ಭಾರತದಿಂದ ಸಾಗಿಸಿ ಅಲ್ಲಿಂದ ಸೆರೆ, ಬಂಗಾರಗಳನ್ನು ಭಾರತಕ್ಕೆ ತಂದು ತುಂಬ ಸಿರಿವಂತರಾದವರಿದ್ದಾರೆ.



ತಿಂಡಿಗೆ ಇಡ್ಲಿ ದೋಸೆ

ದಕ್ಷಿಣ ಕನ್ನಡದ ಬಂಟರು ಲಿಪಿಯಿಲ್ಲದ ತುಳು ಭಾಷೆಯನ್ನು ಮಾತನಾಡುವ ಜನ. ಅವರದೂ ವ್ಯಾಪಾರದಲ್ಲಿ "ಎತ್ತಿದ ಕೈ." ಉಡುಪಿ ಬ್ರಾಹ್ಮಣರ ಹೋಟೆಲ್" ಎಂದು ಹೋಟಲ ವ್ಯವಸಾಯ ನಡೆಸುವ ಅದೆಷ್ಟೋ ಬಂಟರಿದ್ದಾರೆ. ಚಿಕ್ಕವರಿರುವಾಗಲೇ ವ್ಯಾಪಾರದತ್ತ ಒಲವು ಇರುವುದರಿಂದ ಶಿಕ್ಷಣಕ್ಕೆ ಪ್ರಾಮುಖ್ಯತೆ ಕೊಂಚ ಕಡಿಮೆಯೇ. ಸಿರಿವಂತರು. ಉಡಿಗೆ ತೊಡಿಗೆಗಳಲ್ಲಿ ಅತ್ಯಾಧುನಿಕರನ್ನು ಹಿಂದೆ ಹಾಕುತ್ತಾರೆ. ಅಂತೆಯೇ ಅರೆ ಮೈ ತೋರಿಸುವ ಗಿಡ್ಡ ಕುಪ್ಪಸ ತೊಟ್ಟು ತುಟಿಗೆ ಬಣ್ಣ ಸವರಿ ಬಾಬಕಟ್ ಧರಿಸಿದ ಬಂಟ ಮಹಿಳೆಗೆ ಇಂಗ್ಲೀಷ್ ಬಾರದಿದ್ದರೆ ಅಚ್ಚರಿಯಾಗಬೇಕಾಗಿಲ್ಲ.

ಬಂಟರಲ್ಲಿ ಕೃಷಿಕರಿದ್ದಾರೆ. ಹಂಚಿನ ಕೈಗಾರಿಕೆಯಲ್ಲಿ ತೊಡಗಿದವರಿದ್ದಾರೆ. ಮನೆಗಳಲ್ಲಿ ಕೋಳಿ ಮೀನು ಮಾಂಸಗಳ ಅಡಿಗೆಯೇ ಹೆಚ್ಚು. ಅತಿಥಿಗಳು ಬಂದಾಗ ಇವುಗಳ ಪ್ರಮಾಣ ಹೆಚ್ಚು. ಉಳ್ಳವರು ಮನೆಯಲ್ಲಿ ನೌಕರ-ಚಾಕರರನ್ನು ಇಟ್ಟುಕೊಳ್ಳುತ್ತಾರೆ. ಇವರು ಹೆಚ್ಚು ನಿಸರ್ಗ ಪ್ರೇಮಿಗಳಿದ್ದಿರಬೇಕು. ಅಂತೆಯೇ ನಿಸರ್ಗದ ಮಡಿಲಿನಲ್ಲಿ ಪ್ರಾತಃರ್ವಿಧಿಗಳನ್ನು ಪೂರೈಸುತ್ತಾರೆ. ತುಂಬ ರಸಿಕರು. ಅಂತೆಯೇ ಹಬ್ಬ-ಹುಣ್ಣಿಮೆಗಳಲ್ಲಿ ಹುಚ್ಚೆದ್ದು ಹಾಡುವರು. ಕುಣಿಯುವರು. ಇತ್ತೀಚೆಗೆ ತಮ್ಮ ಭಾಷೆಯಲ್ಲಿ ಚಲಚ್ಚಿತ್ರಗಳನ್ನು ತೆಗೆಯಲು ಪ್ರಾರಂಭಿಸಿದ್ದಾರೆ. ಇವರಲ್ಲಿ ಅಳಿಯ ಸಂತಾನ ಪದ್ಧತಿ ಇದೆ. ತಂದೆಯ ಆಸ್ತಿಯಲ್ಲಿ ಮಗಳಿಗೂ ಮಗಳ ಮಕ್ಕಳಿಗೂ ಸಮನಾದ ಪಾಲು ದೊರೆಯುತ್ತದೆ. ಅಂತೆಯೇ ಗೃಹಕೃತ್ಯದಲ್ಲಿ ಗೃಹಿಣಿಯ ಮಾತೇ ಕೊನೆಯದು. ಪಾಲಕರೇ ವಿವಾಹಗಳನ್ನು ಏರ್ಪಡಿಸುವರು. ವಿವಾಹ ಕಾಲದಲ್ಲಿ ಮದುವೆಗೆ ಆಪ್ತೇಷ್ಟರು ದೂರದೂರದಿಂದ ಬರುವರು.

ಹಾಲಕ್ಕಿ ಗೌಡರು

ಹಾಲಕ್ಕಿ ಗೌಡರು ಉತ್ತರಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಬೀಡುಬಿಟ್ಟ ಜನಾಂಗ, ಅವರಂತಹ ನಿಷ್ಠಾವಂತ, ಸಂಭಾವಿತ, ಅಳ್ಳೆದೆಯ ಸರಳಜೀವಿಗಳು ಮಲೆನಾಡಿನಲ್ಲಿ ಬೇರೊಬ್ಬರಿಲ್ಲ. ಊರ ಹೊರಗೆ, ಜನ ಜಂಗುಳಿಯಿಂದ ದೂರ, ಗಿರಿಕಂದರಗಳಲ್ಲಿ ಸಾಗುವಳಿಯಿದ್ದಲ್ಲೆಲ್ಲ ಇವರ ವಸತಿ ಕಂಡುಬರುತ್ತದೆ. ಮಣ್ಣು ಗೋಡೆಯ ಹುಲ್ಲಿನ ಛಾವಣಿಯ ಮನೆಯ ಮುಂದೆ ಕಿರಿದಾದೊಂದು ಮಾಡು. ಅದೇ ಅವರ ದೇವಸ್ಥಾನ. ಮನೆಯವರ, ಅತಿಥಿಗಳ ಬೈಠಕಶಾಲೆ. ಒಂದು ಕಡೆ ಬತ್ತದ ರಾಶಿ, ಇನ್ನೊಂದೆಡೆ ನಾಯಿ, ಬೆಕ್ಕು, ಕೋಳಿ, ದನಕರುಗಳ ವಾಸಸ್ಥಾನ. ಬಾಗಿಲ ಹೊರಗೆ ಮಸಾಲೆ ಅರೆಯುವ (ರುಬ್ಬುವ) ಕಲ್ಲು, ಕಪ್ಪು ಮಡಕೆ, ಎಲುಮಿನಿಯಮ್ ತಟ್ಟೆ, ತೆಂಗಿನ ಚಿಪ್ಪಿನ ಸೌಟು ಇವರ ಪಾತ್ರೆಪಡಗಗಳು. ಸೂರ್ಯನೊಂದಿಗೆ ಎಚ್ಚತ್ತು. ರಾತ್ರಿ ನೆನೆ ಹಾಕಿದ ಸಮಪ್ರಮಾಣದ ಅಕ್ಕಿ ರಾಗಿಗಳನ್ನು ರುಬ್ಬಿ ಗೃಹಿಣಿ 'ಅಂಬಲಿ'ಕಾಸುತ್ತಾಳೆ. ಹಸಿದಾಗೊಮ್ಮೆ ತಟ್ಟೆಯಲ್ಲಿ ಅಂಬಲಿ ಸುರಿದು ಕುಡಿದು ಕೆಲಸಕ್ಕೆ ಹೊರಡುವರು. ಹೊಲದಲ್ಲಿ ಗಂಡಸರು, ಹೆಂಗಸರು ಮೈಮುರಿದು ದುಡಿಯುವರು. ಜೊತೆಗೆ ಅಡವಿಗೆ ಹೋಗಿ ಕಟ್ಟಿಗೆ, ಕಂಟಿಯ ಹಣ್ಣುಹಂಪಲು ತಂದು ತಾವು ಬೆಳೆಸಿದ ಕಾಯಿಪಲ್ಲೆಯೊಂದಿಗೆ ಮಾರಿ ಬಂದ ಹಣದಿಂದ ಮಕ್ಕಳಿಗೆ ಚುರುಮುರಿಬೆಲ್ಲ, ಮೀನು, ಕಾಳುಕಡಿ ತಂದು ಮನೆಗೆ ಬಂದು ಅಡಿಗೆ ಮಾಡಿ ಊಟ ಮಾಡುವರು. ಪ್ರತಿದಿನದ ದುಡಿಮೆಯಲ್ಲಿ ಕೊಂಚವನ್ನಾದರೂ ಉಳಿಸಿ ಮಡಕೆಯಲ್ಲಿ ಹಾಕಿ ನೆಲದಲ್ಲಿಯೋ ಗೋಡೆಯಲ್ಲಿಯೋ ಹೂಳಿಡುವರು. ಮದುವೆಗೆ, ಮನೆಕಟ್ಟಲಿಕ್ಕೆ, ಇಲ್ಲವೇ ಎತ್ತುಕೊಳ್ಳಲಿಕ್ಕೆ ಈ ಹಣದ ಉಪಯೋಗವಾಗುವದು. ಗಂಡಿಗಿಂತ ಹೆಚ್ಚು ದುಡಿಯಬೇಕಾಗಿದ್ದರಿಂದಲೋ ಏನೋ ಇವರಲ್ಲಿ ಹೆಣ್ಣಿಗೆ ಬರಗಾಲ.



ಜೀವನದಲ್ಲಿ ನಗುಮುಖ

ಅಂತೆಯೇ ವಧುದಕ್ಷಿಣೆಯನ್ನು ಅಕ್ಕಿ, ಬೆಲ್ಲ, ತೆಂಗಿನಕಾಯಿಗಳ ರೂಪದಲ್ಲಿ ಕೊಡಬೇಕಾಗುವುದು, ಮದುವೆ ಕಾಲದಲ್ಲಿ ಹೆಣ್ಣು ಪ್ರಾಯಕ್ಕೆ ಬಂದಿರುವುದಿಲ್ಲ. ಪ್ರೌಢ ಹೆಣ್ಣಿಗೆ ವಧು ದಕ್ಷಿಣೆ ಹೆಚ್ಚು. ಹೀಗಾಗಿ ವಿಷಮ ವಿವಾಹಗಳು ಹೆಚ್ಚು. ನಾಲ್ವತ್ತು ವರ್ಷದ ಗೌಡನಿಗೆ ಹದಿನಾಲ್ಕು ವರ್ಷದ ಹೆಂಡತಿಯಿರುವುದು ಅಚ್ಚರಿಯಲ್ಲ. ಅವಿವಾಹಿತ ಪ್ರೌಢ ("ಬೋಳಮಂಡೆ ಕೂಶಾ") ನು ಅಣ್ಣನ ವಿಧವೆಯನ್ನು ಮದುವೆಯಾಗುವುದುಂಟು. ಮದುವೆಯಾಗುವ ಹುಡುಗಿಯರು ಮೈಮೇಲೆ ಸೆರಗು ಹೊದೆಯದೇ ಟೊಂಕದ ಸುತ್ತಲೂ ಸೀರೆಯ ತುಣುಕನ್ನು ಸುತ್ತಿಕೊಳ್ಳುವರು. ಮದುವೆಯ ನಂತರ

ಸೆರಗನ್ನು ಸುತ್ತಿ 'ಜೇಟಿ' ಕಟ್ಟಲಾರಂಭಿಸುವಳು. ಒಳಗಚ್ಚೆಯುಟ್ಟರೂ ಕುಪ್ಪಸ ಧರಿಸುವುದಿಲ್ಲ. ಕೊರಳ ತುಂಬ ಅರಗಿನ, ಕಾಜಿನ ಮಣಿಗಳ ಸರಗಳನ್ನು ಧರಿಸುವದು ವಾಡಿಕೆ. ತಲೆಯ ಮೇಲೆ ಭಾರವಾದ ಹೊರೆ ಹೊತ್ತಾಗ ಕೊರಳಿಗೆ ಹೆಚ್ಚಿನ ಸಹಾಯ ಸಿಗಲೆಂದು ಧರಿಸುತ್ತಿರಬೇಕು! ಬಿಡುವಿಲ್ಲದ ಜೀವನದಲ್ಲಿ ಸ್ನಾನ ಸ್ವಚ್ಛತೆಗೆ ಅವಕಾಶ ಕಡಿಮೆ. ಸ್ನಾನಮಾಡುವಾಗಲೂ ಸರಗಳ ಭಾರ ಕಡಿಮೆ ಮಾಡುವುದಿಲ್ಲ. ವರ್ಷಕ್ಕೊಮ್ಮೆ ಸ್ನಾನ, ಮಾಡುತ್ತಿದ್ದ ಗೌಡತಿಯ ಸರಗಳಲ್ಲಿ ಚೇಳು ಸಂಸಾರ ಹೂಡಿತ್ತಂತೆ ! ಪುರುಷರು ಹಿಂದಿನ ಕೂದಲು ಬೆಳೆಸಿ 'ಮಂಡೆ'ಬಿಡುವರು. ಕಿವಿಗಳಲ್ಲಿ ಒಂಟಿಗಳು, ಸೊಂಟಕ್ಕೆ ಕಚ್ಚೆ, ತಲೆಯ ಮೇಲೆ ರುಮಾಲೊಂದು ಧರಿಸುವರು. ಅದನ್ನು ಅಂಗಡಿಯಿಂದ ಸಾಮಾನು ತರುವಾಗ, ಚೀಲದಂತೆಯೂ, ಕೈಕಾಲು, ಬೆವರು ಒರೆಸುವಾಗ ಟಾವೆಲ್‌ದಂತೆಯೂ ಮಲಗುವಾಗ ಗಾದಿಯಂತೆಯೂ ಬಳಸುವುದುಂಟು.

ಗೌಡತಿಯರು

ಕನ್ನಡದ ಅಭಿಮಾನಿಗಳಿಗೆ ಈ ಗೌಡರು ಆಡುವ ಭಾಷೆ ಕನ್ನಡವೆ ? ಎಂದು ಅನುಮಾನ ಬರುವಷ್ಟು ಗ್ರಾಮ್ಯ ಕನ್ನಡ ಮಾತಾಡುತ್ತಾರೆ. ಅವರಿಗೆ ಚ, ಶ, ಳ ಗಳ ಸರಿಯಾದ ಉಪಯೋಗ ತಿಳಿಯದು. ಷೇಟ್ ಬ್ಯಾಂಕ್ (ಸ್ಟೇಟ್ ಬ್ಯಾಂಕ್) ಮೊಲಗಾಲ (ಮಳೆಗಾಲ) ಚಟುವಟಿಕೆ (ಪಟವಟಿಕೆ) "ಒಡೆದಿರು ದನಾದು ತಿಂತ್ರು, ನಂಗೆ ಹಾಲು ಕೊಡತ್ರು" (ಒಡೆಯರು [ಧಣಿಗಳು] ಒಳ್ಳೆಯದನ್ನು ತಿನ್ನುತ್ತಾರೆ. ನಮಗೆ ಹಾಳಾದ್ದನ್ನು ನೀಡುತ್ತಾರೆ.) ಇದು ಅವರ ಭಾಷೆಯ ರೀತಿ. "ಸೋಮಿ ಸುಕ್ರಿಬೆಟ್ಟಕ್ಕೆ ಹೋದಾಗ ಅಲ್ಲೊಂದು ಮಂಗ ಕೂಗುತ್ತಿತ್ತು. ಇದನ್ನು ಹಾಲಕ್ಕಿ ಗೌಡರ ಭಾಷೆಯಲ್ಲಿ ಹೇಳುವದಾದರೆ, ಚೋಮಿ, ಚುಕ್ರಿ, ಬೆಟ್ಟಕ್ಕೆ ಹೋಗಿತ್ತ್ಯೋ ಅಲ್ಲೊಂದು ಮಂಗಾ ಕೊಂಯಗುಡಿತ್ತ್ಯೊ"! "ಹಾ" ಎಂದರೆ ಹೌದು ಎಂದಂತೆ. ಇವರಿಗೆ ಲೆಕ್ಕ ತಿಳಿಯದು. ವ್ಯವಹಾರ ಜ್ಞಾನವೂ ಕಡಿಮೆ. ಹೀಗಾಗಿ ಅಪನಂಬಿಕೆ, ಯಾವುದೇ ವ್ಯಾಪಾರ ಮಾಡಲಿ ಹತ್ತು ಸಲ ಲೆಕ್ಕ ಮಾಡಿ, ಇಪ್ಪತ್ತು ಸಲ ಎಣಿಸಿ ಹಣ ತೆಗೆದುಕೊಳ್ಳುವರು. ವ್ಯಾಪಾರ ಮಾಡಿ ಸಂಜೆಗೆ ನಾಲ್ಕಾರು ಗೌಡತಿಯರು ಕೂಡಿಕೊಂಡು ಮನೆಗೆ ಹೋಗುವುದು ರೂಢಿ. ಅಂದಿನ ಎಲ್ಲ ಚಟುವಟಿಕೆಗಳನ್ನು ವಿಮರ್ಶಿಸಿ ಹಣದ ಲೆಕ್ಕಾಚಾರ ಒಪ್ಪಿಸುವಾಗ ಇನ್ನೊಬ್ಬಳು ಅದನ್ನು ಬೇರೀಜು ಮಾಡಿ ಹೇಳಿದಾಗ ಹಣ ಸರಿಯಾಗಿದೆ ಎಂದು ಹೇಳಬೇಕು. ಅವರ ಹಳ್ಳಿಗಳಲ್ಲಿ ಜಗಳ, ವೈಮನಸ್ಸು ಕಳವು, ಕೊಲೆ, ದರೋಡೆ ಯಾವುವು ಇಲ್ಲ. ಆದರೆ ಮುಗ್ಧೆಯರನ್ನು ಬಲಿ ತೆಗೆದುಕೊಳ್ಳುವದುಂಟು. ಇಂಥ ಸಂದರ್ಭಗಳಲ್ಲಿ ಊರ ಹಿರಿಯರು ಸೇರಿ, ಕೊಟ್ಟ ನಿರ್ಣಯವೇ ಕೊನೆಯದೆಂದು ಒಪ್ಪಿಕೊಳ್ಳುವರು. ಇವರ ಬೆಪ್ಪುತನದ ಕತೆಗಳು ಉತ್ತರಕನ್ನಡದಲ್ಲಿ ಜನಜನಿತವಾಗಿವೆ. ಒಮ್ಮೆ ಗೌಡತಿಯರು ಕಾಡಿಗೆ ಹೋದಾಗ ಕಾಡುಕೋಳಿಯ ಮೊಟ್ಟೆಗಳನ್ನು ನೋಡಿ ಅವು ಪ್ರಾಣಿಯದೆಂದು ಊಹಿಸಿ ಚರ್ಚಿಸಿ ನಿರ್ಣಯಕ್ಕೆ ಬಾರದೆ ನರಿ ಮೊಟ್ಟೆ ಇರಬಹುದೆಂದು ಸರ್ವಾನುಮತದಿಂದ ಊಹಿಸಲಾಯಿತು. ಕೊನೆಗೆ ಪೇಟೆಯಲ್ಲಿ ಅದೇ ಹೆಸರಿನಿಂದ ಮಾರಲು ತಂದಾಗ ನಗೆಗೇಡಿಯಾದರು. ಇಂದಿಗೂ ಅವರ



ಇರಲೊಂದು ಮನೆ

ಜನರನ್ನು 'ನರಿಮೊಟ್ಟೆ' ಎಂದು ಕರೆದರೆ ಸಿಟ್ಟಿಗೇಳುವರು. ಇನ್ನೊಮ್ಮೆ ಸೊಪ್ಪಿಗೆಂದು ಇಪ್ಪತ್ತು ಗೌಡತಿಯರು ದಟ್ಟ ಅಡವಿಗೆ ಹೋದಂತೆ ತಿರುಗಿ ಎಣಿಸುವಾಗ ಕೇವಲ ಹತ್ತೊಂಭತ್ತು ಜನ ಇದ್ದದ್ದು. ನೋಡಿ ಎಲ್ಲರೂ ಗೋಳೋ ಎಂದು ಅತ್ತರು. ದಾರಿಹೋಕನೊಬ್ಬ ವಿಷಯ ತಿಳಿದು ಎಣಿಸಿದಾಗ ಇಪ್ಪತ್ತು ಜನ ಸರಿಯಾಗಿದ್ದರು. ಪ್ರತಿಯೊಬ್ಬಳೂ ತನ್ನನ್ನು ಬಿಟ್ಟು ಎಣಿಸುತ್ತಿದ್ದಳು!


ತಾವು ಸಾಗುವಳಿ ಮಾಡುವ ಭೂಮಿ ಒಡೆಯನದೆಂದು ಹೆಚ್ಚಿನ ಭಯಭಕ್ತಿ ಹಲವರಿಗಿದೆ. ತಮ್ಮ ತಾತನ ಕಾಲದಿಂದ ನಡೆದು ಬಂದಷ್ಟೇ ಪ್ರಮಾಣದ ಕಾಳುಕಡಿ ತಲುಪಿಸುವವರಿದ್ದಾರೆ. ಪರರ ಪಾಲಿನದನ್ನು ತಾನು ನುಂಗಿದರೆ ದೇವರು ಕ್ಷಮಿಸಲಿಕ್ಕಿಲ್ಲ ಎಂಬ ಸರಳ ನಂಬಿಕೆ ಅವರದು. ಚೌತಿಹಬ್ಬ, ದೀಪಾವಳಿಗಳಲ್ಲಿ ಒಡೆಯನಿಗೆ ಎಂದು ಹಣ್ಣುಹಂಪಲು ಕಾಳುಕಡಿ ತಲುಪಿಸಿ ಬರುವರು. ಇವರಿಗೆ ಸುಗ್ಗಿ ಹಬ್ಬ, ಬಲು ಸಡಗರದ ಹಬ್ಬ. ಆರು ತಿಂಗಳು ಮೊದಲಿನಿಂದಲೂ ತಯಾರಿ ನಡೆಯುತ್ತದೆ. ರಾತ್ರಿಯೂಟ ಮುಗಿಸಿ ಸಾಮೂಹಿಕವಾಗಿ ಹಾಡುವ ರೂಢಿ ಮಾಡಿಕೊಳ್ಳುವರು. ಹಬ್ಬದ ದಿನ ತಲೆಗೆ ರುಮಾಲು ಕಟ್ಟಿ, ಬಣ್ಣ ಬಣ್ಣದ ಬೆಂಡಿನ ತುರಾಯಿ ಕಟ್ಟಿ ಮೈಗೆ ಬಣ್ಣದ ಅಂಗಿ ಹಾಕಿ, ಧೋತರವುಟ್ಟು, ಗೆಜ್ಜೆಕಟ್ಟಿ, ಒಬ್ಬರು ಹಾಡುತ್ತ ಉಳಿದವರು ಚೋಹೋಯ್ ! ಚೋಹೋಯ್ ಎನ್ನುತ್ತ ಸಾಮೂಹಿಕವಾಗಿ ನೃತ್ಯ ನಡೆಸುವರು. ಹೆಚ್ಚಾಗಿ ತನ್ನ ಒಡೆಯರ ಮನೆಯಲ್ಲಿ ಊರ ಮುಖಂಡರ ಮನೆಯಲ್ಲಿ ನರ್ತಿಸುವರು. ಇವರಲ್ಲಿ ಮದುವೆಗಳು ಮಳೆಗಾಲದ ಪ್ರಾರಂಭದಲ್ಲಿ.

ಮದುಮಗನು ದೇವಸ್ಥಾನದ ಭಟ್ಟರಿಂದ ಮುಹೂರ್ತವನ್ನು ಹುಡುಕಿಸಿ ಎರಡೆರಡು ಬಾಸಿಂಗ ಕಟ್ಟಿಕೊಂಡು ಮದುಮಗಳ ಮನೆಗೆ ಬಂದು, ಮದುವೆಯಾಗಿ ಪಾಯಸದ ಊಟ ಉಂಡು ತಿರುಗಿ ಮನೆಗೆ ಹೋಗುವನು. ತೆಂಗಿನ, ಅಡಿಕೆಯ ಸಸಿಗಳನ್ನು ಬಳುವಳಿಯಾಗಿ ಕೊಡುವ ವಾಡಿಕೆ ಇದೆ. ಚೊಚ್ಚಲ ಬಾಣಂತನ, ತಾಯ ಮನೆಯಲ್ಲಿ ಮುಗಿಸಿ ಮಗುವಿನೊಂದಿಗೆ ತೊಟ್ಟಿಲನ್ನೂ ಪಡೆದು ಹಾಡುತ್ತ ಪತಿಗೃಹಕ್ಕೆ ಹೋಗುವದು ವಾಡಿಕೆ.

ಹಾವು ಹುಲಿಗಳ ಛಾಯಾಚಿತ್ರವನ್ನು ತೆಗೆಯುವದಕ್ಕಿಂತ ಗೌಡತಿಯರ ಚಿತ್ರ ತೆಗೆಯುವದು ಬಿಗುವಿನದೆಂದು ಅದನ್ನು ಯತ್ನಿಸಿದಾಗ ತಿಳಿಯಿತು. ಒಂದು ಅಂಗಳದಲ್ಲಿ ಗೌಡತಿಯೊಬ್ಬಳು ಗಳದ ಬತ್ತವನ್ನು ಸರಿಪಡಿಸುತ್ತಿದ್ದಳು. ಕ್ಯಾಮರಾಧಾರಿಯನ್ನು ಪಿಸ್ತೂಲ ಧಾರಿಯೆಂದು ತಿಳಿದುಕೊಂಡಂತೆ ಓಡಿಬಿಟ್ಟಳು. ಇನ್ನೊಬ್ಬಳು ಭಾವಚಿತ್ರ ತೆಗೆಸಿಕೊಂಡರೆ ಆಯುಷ್ಯ ಕಡಿಮೆಯಾಗುವುದೆಂದು ಬೋಧಿಸಿದಳು. ಇನ್ನೊಬ್ಬ ಗೌಡ, ಫೋಟೋ ತೆಗೆದರೆ ರಕ್ತದಾರಿ ಸಾಯುತ್ತಾರೆಂಬ ತನ್ನ ನಂಬಿಕೆಯನ್ನು ಸಡಿಲಿಸಲು ಒಪ್ಪಲೇ ಇಲ್ಲ.

ನಾಡವರು

'ನಾಡವರು' ಉತ್ತರ ಕನ್ನಡದ ಅಂಕೋಲಾ ತಾಲೂಕಿನಲ್ಲಿ ಹೆಚ್ಚಾಗಿ ಬೀಡುಬಿಟ್ಟವರು. ಒಳ್ಳೆಯ ದೃಢಕಾಯರು. ಕೃಷ್ಣವರ್ಣದವರು. ಪುರುಷರು ಕಚ್ಚೆ ಉಟ್ಟು, ತಲೆಗೆ ರುಮಾಲು ಸುತ್ತಿ, ಧೋತರದಿಂದ ಮೈ ಮುಚ್ಚಿಕೊಂಡರೆ ಸ್ತ್ರೀಯರು ಗಂಟು ಹಾಕಿ ಸೀರೆ ಉಡುವರು. ಕೃಷಿಯೇ ಜೀವನೋಪಾಯವಿದ್ದರಿಂದ ಹಳ್ಳಿಯ ವಾಸ್ತವ್ಯ ಹೆಚ್ಚು. ಮನೆಗಳನ್ನು ಮಣ್ಣಿನಿಂದ ಇಲ್ಲವೇ ಕಲ್ಲಿನಿಂದ ಕಟ್ಟಿ ಓರಣವಾಗಿರುವರು. ಥಳ ಥಳ ಕನ್ನಡಿಯಂತೆ ಹೊಳೆಯುವ ನೆಲವನ್ನು ತಯಾರಿಸುವಲ್ಲಿ ಈ ಜನ ಹೆಸರುವಾಸಿ. ಹಾಲು ಹೈನದ ವೃತ್ತಿಯನ್ನೂ ಕೈಕೊಂಡಿರುತ್ತಾರೆ. ತಿಂಡಿ-ತೀರ್ಥಗಳ ವೈವಿಧ್ಯವಿಲ್ಲ. ಮೀನು ಅನ್ನ ಭರ್ಜರಿಯಾಗಿ ಬೇಕು. ಮನೆಗೆ ಬಂದವರಿಗೆ ಬೆಲ್ಲ ನೀರು ಕೊಟ್ಟು ನಂತರ ತಿನ್ನಲು ಹಸಿಶೇಂಗಾ ಕಾಯಿ - ಬೆಲ್ಲ ಕೊಡುವರು. ಬಂದವರು ಮರುಳುವಾಗ ಮೊಗ್ಗೆಕಾಯಿ ಅಥವಾ ಇನ್ನಾವದಾದರೂ ತರಕಾರಿ ಕೊಟ್ಟು ಕಳಿಸುವರು. ಮದುವೆಗಳಲ್ಲಿ ಹಳ್ಳಿಹಳ್ಳಿಗಳಿಂದ ಆಪ್ತರು ನೆರೆಯುವರು. ಕನ್ಯೆಯ ತಂದೆ ವರನ ಕಡೆಯರಿಗೆ ಹೆಚ್ಚಿನ ಆದರ ಸತ್ಕಾರ ಒದಗಿಸಬೇಕಾಗುತ್ತದೆ. ಹಲವಾರು ಬಾರಿ ಇದಕ್ಕಾಗಿ ಕಲಹಗಳೂ ಆಗುವುದುಂಟು. ತೋಳ್ಬಲದೊಂದಿಗೆ ಸಿಡುಕಿನ ಸ್ವಭಾವವೂ ಸೇರಿದ್ದರಿಂದ ಕೈಗೆ ಕೈ ಹತ್ತಿದರೆ ಬಿಡಿಸುವದು ಕಷ್ಟ. ನಾಡವರು ಕನ್ನಡವನ್ನು ಮಾತನಾಡುವರು. "ನೀ ಯಾವಾಗ ಬಂದಿss ಭಾವಾss ಎಂತಾ ಅಂತ್ಯಾss? (ನೀನು ಯಾವಾಗ ಬಂದೆ ? ಭಾವನು ಏನು ಅನ್ನುತ್ತಾನೆ)" ಇತ್ಯಾದಿ.



ಮುದುಕನಿಗೂ ಬಂಗಾರ

ಗುಡಿಗಾರರು



ಮೀಯಲೊಂದು ಬಚ್ಚಲು

ಗುಡಿಗಾರರು ಮಲೆನಾಡಿನ ಸೃಷ್ಟಿ ಸೌಂದರ್ಯವನ್ನು ಗಂಧದಲ್ಲಿ, ಕಟ್ಟಿಗೆಯಲ್ಲಿ, ಬಣ್ಣದಲ್ಲಿ, ಚಿತ್ರಿಸಿ ನಾಡಿನವರಿಗೂ ಹೊರನಾಡಿನವರೆಗೂ ನಮ್ಮ ಕಲೆಯ ಸಿರಿಯ ಪರಿಚಯ ಮಾಡಿಕೊಟ್ಟಿದ್ದಾರೆ. ಅವರ ಕಲೆ ಬಹುಮುಖವಾದದ್ದು. ಮದುವೆ ಮುಂಜಿಗಳಿರಲಿ, ಹಬ್ಬ- ಜಾತ್ರೆಗಳಿರಲಿ ಗುಡಿಗಾರರ ಕಲೆಯ ದರ್ಶನವಿಲ್ಲದೇ ನಡೆಯಲಾರವು. ಕೊಂಕಣಿ - ಕನ್ನಡ ಎರಡನ್ನೂ ಮಾತನಾಡುವ ಈ ಜನ ಆರ್ಯ ವಂಶದವರೋ ದ್ರಾವಿಡ ವಂಶಜರೋ ಎಂದು ಹೇಳುವುದು ಕಷ್ಟ. ಉತ್ತಮ ಕಲಾಕಾರರಿದ್ದರೂ ಅದರ ಬೆಲೆಯರಿತು ಪ್ರೋತ್ಸಾಹಿಸುವವರು, ಇಲ್ಲವಾದ್ದರಿಂದ ಗುಡಿಗಾರರು ಬಡವರಿದ್ದು ತೀರಸಾಮಾನ್ಯ ಜೀವನ ನಡೆಸುತ್ತಿದ್ದಾರೆ. ಮದುವೆಯ ಮುನ್ನಾದಿನ ಉಪನಯನದ ಪದ್ಧತಿ ಇವರಲ್ಲಿದೆ. ಒಮ್ಮೆ ಹೀಗೆ ಉಪನಯನವಾದ ಮೇಲೆ ಗುಡಿಗಾರ ವರನೊಬ್ಬನ ಮದುವೆಯಲ್ಲಿ ಏನೋ ಜಗಳ ಬಂದಿತು. ಹೆಣ್ಣಿನ ಕಡೆಯವರು ಮದುವೆ ನಿಲ್ಲಿಸಿದರು. ಗೃಹಸ್ಥನಾಗಲು ಬಂದ ವರ ಪ್ರೌಢ ವಟುವಿನ ಕಾಷಾಯ ವೇಷದಲ್ಲಿ ಹೊರಬಿದ್ದಾಗ ನೋಡಿ ನಗದ ಜನರೇ ಇರಲಿಲ್ಲ.

'ಕಲಾವಂತರು' ಎಂಬ ಕುಲ, ಕರಾವಳಿ ಪ್ರದೇಶದಲ್ಲಿ ಬೆಳೆದು ಬಂದಿತ್ತು. ರಸಿಕ ಶ್ರೀಮಂತರ ಆಶ್ರಯದಲ್ಲಿ. ಜೀವನ ಕೈಕೊಂಡ ಕುಲವಾಗಿದ್ದರೂ ಸಮಾಜದಲ್ಲಿ ಒಂದು ಉಚ್ಚ ಪ್ರಕಾರದ ಸ್ಥಾನಮಾನ ಪಡೆದ ವರ್ಗವಾಗಿತ್ತು. ಎಷ್ಟೋ ಕಲಾವಂತ ಸ್ತ್ರೀಯರು ಗರತಿಯರಂತೆ ಒಬ್ಬನನ್ನೇ ನಂಬಿ ಪರಿಶುದ್ಧ ಜೀವನ ನಡೆಸುತ್ತಿದ್ದರು. ಹಾಡುಗಾರಿಕೆ ನೃತ್ಯಗಳಲ್ಲೂ ಪ್ರಾವೀಣ್ಯತೆ ಪಡೆದಿದ್ದ ಇವರು ದೇವಸ್ಥಾನಗಳಲ್ಲಷ್ಟೇ ಅಲ್ಲದೇ ಮದುವೆ-ಮುಂಜಿಗಳಲ್ಲಿಯೂ ಹಾಡು ನೃತ್ಯಗಳಲ್ಲಿ ಭಾಗವಹಿಸುತ್ತಿದ್ದರು. ಕಲಾವಂತ ಸುಂದರಿಯರು ಸಜ್ಜಾಗಿ ಚಾಮರ ಬೀಸಲು ಹೊರಡದಿದ್ದರೆ ದೇವರು ಮೆರವಣಿಗೆಗೆ ಹೊರಡಲು ನಿರಾಕರಿಸಿ ಬಿಡುತ್ತಿದ್ದರು! ಸಮಾಜದ ಕಟ್ಟುನಿಟ್ಟುಗಳಿಂದಾಗಿ ಈ ಕುಲದವರಿಗೆ ಮದುವೆ ಸುಲಭವಾಗಿದ್ದಿಲ್ಲವಾದ್ದರಿಂದ ಎಷ್ಟೋ ಜನ ಮುಂಬೈ ಕಡೆಗೆ ಹೋಗಿ ಬೇರೆ ಜಾತಿಯವರೊಂದಿಗೆ ಮದುವೆ ಮಾಡಿಕೊಂಡು ನೆಲೆಸಿದರು. ಸರಕಾರದ ಭೂಧೋರಣೆಯಿಂದ ಹೊಲದೊಡೆಯರು ಬಡವರಾಗುತ್ತ ನಡೆದುದರಿಂದ ಅವರನ್ನು ನಂಬಿದ ಹಲವು ಕಲಾವಂತ ಸ್ತ್ರೀಯರು ಗಂಟುಮೂಟೆ ಕಟ್ಟಿ ಧನಿಕ ಭಕ್ತರು ಸಿಗುವ ಔದ್ಯೋಗಿಕ ಪಟ್ಟಣಗಳಿಗೆ ವಲಸೆ ಹೋದರು. ಕಲಾವಂತರ ಬಳಗ ಕುಗ್ಗುತ್ತ ನಡೆದಿದೆ.

ಅಂಬಿಗರು

ಅಂಬಿಗರಲ್ಲಿ ಕನ್ನಡ- ಕೊಂಕಣಿ ಮಾತ್ರ ಭಾಷೆ ಇರುವ ಎರಡು ಮುಖ್ಯಭೇದ. ಮೀನು ಹಿಡಿಯುವವರಿಗಿಂತ, ನಾವೆ ನಡೆಸುವವರು ಮೇಲು ಜಾತಿಯವರೆನಿಸಿಕೊಳ್ಳುತ್ತಾರೆ.

ಆದರೆ ಇತ್ತೀಚೆಗೆ ಮುಖ್ಯ ನದಿಗಳಿಗೆಲ್ಲ ಸೇತುವೆಗಳ ನಿರ್ಮಾಣವಾಗಿ ನಾವೆಗಳ ಬೇಡಿಕೆ ಕಡಿಮೆಯಾದ್ದರಿಂದ ಮತ್ತು ಮೀನಿನ ಬೆಲೆ ಏರಿದ್ದರಿಂದ ನಾವಿಕರೂ ಮೀನುಗಾರರ ಕೆಲಸ ಕೈಕೊಳ್ಳುತ್ತಿದ್ದಾರೆ. ಯಾಂತ್ರಿಕ ನಾವೆಗಳು ಬಂದಾಗಿನಿಂದ ಮೀನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ದೊರಕಿದೆ. ಉತ್ತಮ ಮೀನುಗಳ ರಾಶಿಯೇ ಬರ್ಫದಲ್ಲಿ ತುಂಬಿ ಮಲೆಬಂದರಕ್ಕೆ ಬರುವದು. ಅಲ್ಲಿ ಅವನ್ನು ಸರಿಪಡಿಸಿ ಡಬ್ಬಿಗಳಲ್ಲಿ ತುಂಬಿ ಪರದೇಶಗಳಿಗೆ ಕಳಿಸುವರು. "ಖಾರವಿ' ಗಳು ಕೊಂಕಣಿ ಮಾತನಾಡುವವರಾದರೆ 'ಹರಕಂತ್ರರು' ಕನ್ನಡ ಮಾತನಾಡುವವರು. ಆದರೆ ಗಾಬೀತರು ಮರಾಠಿ ಮಿಶ್ರಿತ ಕೊಂಕಣಿ ಮಾತನಾಡುವರು. ಮೀನುಗಾರಿಕೆಯನ್ನೇ ವೃತ್ತಿಯನ್ನಾಗಿ ಅವಲಂಬಿಸಿದ ಜನ ಇನ್ನೂ ಕತ್ತಲಿದ್ದಾಗಲೇ ಎದ್ದು ದೂರ ಸಮುದ್ರದಲ್ಲಿ ಹೋಗಿ ಬಲೆಗಳಲ್ಲಿ ಮೀನು ಹಿಡಿದು, ತಂದು, ಮಾರಿ, ಉದರ ನಿರ್ವಹಣೆ ಮಾಡುವರು. ಗಾಳದಿಂದಲೂ ಮೀನು ಹಿಡಿಯುವರು. ಹಣವಂತರು ನಾಯಲೋನಿನ ಬಲೆಗಳನ್ನು ಉಪಯೋಗಿಸಿದರೆ, ಬಡವರು ತಮ್ಮ ಬಲೆಗಳನ್ನು ತಾವೇ ಹೆಣೆದುಕೊಳ್ಳುವರು. ಲಾಂಚ್ ಇದ್ದವರಿಗೆ ಹೇರಳ ಮೀನಿನ ರಾಶಿ ಸಿಕ್ಕರೂ ಅವುಗಳಲ್ಲಿ ಉತ್ತಮವಾದವನ್ನು ಆರಿಸಿ ವಿದೇಶಕ್ಕೆ ಕಳಿಸಿ, ಮಾರಬೇಕಾದವನ್ನು ಮಾರಿ ಕೆಲವನ್ನು ಒಣಗಿಸುವರು. ತಿನ್ನಲು ನಿರುಪಯೋಗಿಯಾದ ಮೀನುಗಳನ್ನು ಕ್ಷಾರಕ್ಕಾಗಿ ಬಳಸುವರು. ಲಕ್ಷಗಟ್ಟಲೆ ಮೀನುಗಳನ್ನು ದಂಡೆಗೆ ತಂದು ಹಾಕಿದಾಗ ನಾಯಿ, ಕಾಗೆ, ಹದ್ದುಗಳು ಹೊಟ್ಟೆ ಬಿರಿಯುವಷ್ಟು ತಿಂದರೂ ಉಳಿದವು ನಾರುತ್ತ ಬೀಳುವದರಿಂದ ಅಂತಹ ದಂಡೆ ಯ ಮೇಲೆ ವಾಕರಿಕೆ ಬರುವಂತಹ ದುರ್ನಾತ ಇರುವುದು ಸ್ವಾಭಾವಿಕ. ಬಹುಶಃ ಮೀನು ತಿನ್ನದವರು ಇದೇ ಮೀನಿನ ಸುವಾಸನೆ ಎಂದು ತಿಳಿದುಕೊಳ್ಳುವರೋ ಏನೋ ! ಮೀನಿನ ವಿಜವಾದ ರುಚಿ ಸವಿದವರಿಗೆ ಮಾತ್ರ ನಿಜಸ್ಥಿತಿಯ ಅರಿವು ಇರುವುದು.

ಅವರು ಕಡುಬಡವರಾದರೂ ಅತಿಥಿಗಳು ಬಂದಾಗ ಸಾಲಮಾಡಿಯಾದರೂ ಯೋಗ್ಯತೆಗೆ ಮೀರಿ ಸತ್ಕರಿಸುವರು. ಮಳೆಗಾಲ ಪ್ರಾರಂಭವಾದ ನಂತರ ಮೀನುಗಾರಿಕೆ ನಿಂತು ಹೋಗುವುದರಿಂದ ಆ ಕಾಲದಲ್ಲಿ ಮದುವೆ ಇತ್ಯಾದಿಗಳತ್ತ ಗಮನ ಹಾಕುವರು. ಬೇಸಿಗೆಯಲ್ಲಿ ವಿಪುಲ ಮೀನು ದೊರೆತ ವರ್ಷ, ಹೆಚ್ಚಿನ ಸಂಖ್ಯೆಯಲ್ಲಿ ಮದುವೆಗಳು ಜರುಗುವವು. ದೇವರ ಪ್ರಸಾದ ಕೊಟ್ಟು, ಭಟ್ಟರು ಹೇಳಿದ ಮುಹೂರ್ತದಲ್ಲಿ ಮದುವೆಗಳನ್ನು ನೆರವೇರಿಸುವರು.


ದುಡಿಮೆಯ ಹಣು

ನವಾಯತರು

ಉತ್ತರಕನ್ನಡ ಜಿಲ್ಲೆಯ ಭಟಕಳದಲ್ಲಿ ಬೀಡುಬಿಟ್ಟ ನವಾಯತರು (ನವ+ಆಯತ=ಹೊಸದಾಗಿ ಬಂದವರು) ಕೊಂಕಣಿ ಮಾತನಾಡುವವರಿದ್ದು ಉಳಿದ



ಸ್ವಾವಲಂಬನ

ಮುಸಲ್ಮಾನರಿಗಿಂತ ತೀರ ಭಿನ್ನವಾಗಿದ್ದಾರೆ. ಮಧ್ಯಯುಗದಲ್ಲಿ ವ್ಯಾಪಾರಕ್ಕೆ ಬಂದು ಕರ್ನಾಟಕದ ಕರಾವಳಿಯಲ್ಲಿ ತಳವೂರಿದ ಅರಬ ವಂಶದವರು ಇವರು ಎಂದು ಹೇಳಲಾಗುತ್ತಿದೆ. ಗೌರವರ್ಣದ ಸ್ಫುರದ್ರೂಪಿಗಳಿದ್ದು ವ್ಯಾಪಾರದಲ್ಲಿ ಕುಶಲರು. ಇದಕ್ಕಾಗಿ ಕಲಕತ್ತಾದಿಂದ ಕೊಲಂಬೋದ ವರೆಗೆ ಹರಡಿ ಹೋದರೂ ಕುಟುಂಬಗಳನ್ನು ಹುಟ್ಟೂರಿನಲ್ಲಿಯೇ ಬಿಡುವ ವಾಡಿಕೆಯಿದೆ. ಭಟಕಳದಲ್ಲಿರುವ ಇವರ ಅತ್ಯಾಧುನಿಕ ಗೃಹಗಳನ್ನು ನೋಡಬಹುದಾಗಿದೆ. ಗಂಡಸರು ತಲೆಗೊಂದು ಸಿಲ್ಕ ಕರವಸ್ತ್ರ ಸುತ್ತಿ, ಸೊಂಟಕ್ಕೆ ಬಣ್ಣ ಬಣ್ಣದ ಲುಂಗಿ ಬಿಗಿದು, ಕಾಲಲ್ಲಿ ಹಗುರವಾದ ಚಪ್ಪಲಿ ಧರಿಸುವರು. ಹೆಣ್ಣುಮಕ್ಕಳು ಸೀರೆ, ಉದ್ದ ತೋಳಿನ ಕುಪ್ಪಸ ತೊಟ್ಟರೂ ಬುರುಖಾ ಧರಿಸುವರು. ಉರ್ದು ಮಿಶ್ರಿತ ಕೊಂಕಣಿಯನ್ನು ರಾಗವಾಗಿ ಮಾತನಾಡುವರು. ವ್ಯವಹಾರಕ್ಕಾಗಿ ಅಶುದ್ಧ ಕನ್ನಡದ ರೂಢಿಯನ್ನು ಮಾಡಿಕೊಂಡಿದ್ದಾರೆ. "ನಮಗೆ ನಾವು ಹೆಲಿದಾವ ಒಂದು ಹೆನ್ನು ಒಂದು ಗಂಡು ಕೋಲಿ ಕೊಡಬೇಕು." (ನಮಗೆ ಒಂದು ಕೋಳಿ ಹೇಂಟೆ ಕೊಡಬೇಕೆಂದು ಹೇಳಿರಲಿಲ್ಲವೇ) ದಿನಾಲೂ ಊಟದಲ್ಲಿ ಮೀನು - ಮಾಂಸ ಬೇಕೇ ಬೇಕು. ಬಂದ ಅತಿಥಿಗಳೊಡನೆ ಮನೆಯವರೂ ಜೊತೆಯಾಗಿ ದೊಡ್ಡ ತಾಟಿನಲ್ಲಿ ಉಣ್ಣುವರು. ವಿವಾಹದ ರಾತ್ರಿ ಮದುಮಕ್ಕಳಿಗೆ ಒಬ್ಬರ ಮುಖ ಇನ್ನೊಬ್ಬರಿಗೆ ಕಾಣದಂತೆ ಹೂಗಳಿಂದ ಮುಚ್ಚಿ ಬಿಡುವರು. ಅತಿಥಿಗಳಿಗೆ ಬಿರಿಯಾನಿ (ಮಾಂಸದ ಅನ್ನ) ಸೇವಿಗೆ ಪಾಯಸ ಬಡಿಸುವದು ವಾಡಿಕೆ. ದಾರಜಿಗಳೆಂಬ ಮುಸಲ್ಮಾನ ಕೊಂಕಣಿಗರು ಮೀನುಗಾರಿಕೆಯ ವ್ಯವಸಾಯ ಮಾಡುತ್ತಿದ್ದು ತುಂಬ ಬಡ ಜನಾಂಗ, ಇವರಲ್ಲದೆ ಮಾಪಿಳ್ಳೆಗಳು, ದಖ್ಖನಿ ಷಿಯಾ ಮತ್ತು ಸುನ್ನಿಗಳೂ ಈ ಪ್ರದೇಶದಲ್ಲೆಲ್ಲ ನೆಲೆಸಿದ್ದಾರೆ.



ನನಗೂ ಹೆರಳು

ಕ್ರಿಶ್ಚಿಯನ್ನರು

ಪ್ರೊಟೆಸ್ಟೆಂಟರು ದಕ್ಷಿಣದಿಂದ ಮಲೆನಾಡಿಗೆ ಬಂದರೆ ಕೆಥೋಲಿಕ್‌ರು ಗೋವಾದಿಂದ ಬಂದರು. ಬಲಾತ್ಕಾರದಿಂದ ಮತಾಂತರಗೊಳಿಸಿದ ಕ್ರಿಶ್ಚಿಯನ್ನರಿಗೆ ರಕ್ತಗತವಾಗಿ ಬಂದ ಕೆಲ ರೂಢಿಗಳನ್ನು ಅನುಕರಿಸಲೂ ಪೋರ್ಚುಗೀಜರು (೧೫೬೦ ರಲ್ಲಿ) ಪ್ರತಿಬಂಧಿಸಿದ್ದರಿಂದ

ಹಲವರು ಕ್ರಿಶ್ಚಿಯನ್ನರು ಉತ್ತರಕನ್ನಡ ಜಿಲ್ಲೆಗಳಿಗೆ ಹೋಗಿ ನೆಲೆಸಿದರು. ಬಿದನೂರು ಅರಸರು (೧೫೬೫-೧೭೬೦ ಕ್ರಿ. ಶ.) ಅವರಿಗೆ ಆಶ್ರಯವನ್ನಿತ್ತು ಹಲವರಿಗೆ ಭೂಮಿಯನ್ನು ಉಂಬಳಿಯಾಗಿ ಇತ್ತರು. ಇಂದಿಗೂ ಹಲವಾರು ಕೆಥೋಲಿಕ್ ಕುಟುಂಬಗಳು ಪೈ. ಪ್ರಭು, ನಾಯಕ ಎಂಬ ತಮ್ಮ ಪೂರ್ವಜರ ಹಿಂದೂ ಹೆಸರುಗಳನ್ನು ಧರಿಸುತ್ತಾರೆ. ಪ್ರೊಟೆಸ್ಟೆಂಟರು ಶಿಕ್ಷಣ ಆಸ್ಪತ್ರೆಯ ಸೇವೆಗಳನ್ನು ಕೈಕೊಂಡರೆ ಕೆಥೋಲಿಕರು ವಾದ್ಯ ಬಾರಿಸುವದು, ಮೀನಿನ ವ್ಯಾಪಾರ, ಹೊಲಿಗೆ, ಕತ್ತದ ವ್ಯಾಪಾರವನ್ನು, ಕೈಗೊಂಡಿದ್ದಾರೆ. ಹಿಂದೂಗಳಂತೆಯೇ ಸೀರೆ ಕುಪ್ಪಸ ಉಟ್ಟರೂ ಮದುವೆಯ ನಂತರವೇ ಪ್ರೌಢ ಕ್ರಿಶ್ಚಿಯನ್ ಹುಡುಗಿ ಸೆರಗು ಹೊದೆಯಲಾರಂಭಿಸುತ್ತಾಳೆ. ಧೋತರವನ್ನು ಅಚ್ಚುಕಟ್ಟಾಗಿ ಉಡುವುದರಲ್ಲಿ ಮಂಗಳೂರಿನ ಕಿರಿಸ್ತಾನರು ಹಿಂದೂಗಳನ್ನು ಹಿಂದೆ ಹಾಕಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು. ಕೆಥೋಲಿಕರ ಮನೆಮಾತು ಕೊಂಕಣಿ. ಊಟದಲ್ಲಿ ಅಕ್ಕಿ, ಮೀನು, ತೆಂಗಿನಕಾಯಿಗಳ ಉಪಯೋಗ ಹೆಚ್ಚು. ನಾತಾಳ (ಕ್ರಿಸ್‌ಮಸ್) ಹಬ್ಬವನ್ನು ಊರ 'ಫೆಸ್ತ' (ಜಾತ್ರೆ)ಗಳಲ್ಲಿ ಆಚರಿಸುವ ಪದ್ಧತಿಯಿದೆ. ಈ ಫೆಸ್ತಗಳಲ್ಲಿ ಹಿಂದೂಗಳೂ ಭಾಗವಹಿಸುತ್ತಾರೆ. ಸುಗ್ಗಿಹಬ್ಬಕ್ಕೆ ಬೆಳೆಯನ್ನು ಚರ್ಚಿಗೆ ತಂದು ಪೂಜಿಸಿ, ದೇವರಿಗೆ ಅರ್ಪಿಸಿ, ಉಳಿದುದನ್ನು ಬಾಗಿಲಿಗೆ ಕಟ್ಟುವರು. ಪಾಲಕರೇ ನಿರ್ಧರಿಸಿದ ಮದುವೆಗಳು ಚರ್ಚುಗಳಲ್ಲಿ ನಡೆಯುವವು. ಮದುವೆಗಳಲ್ಲಿ ಕುಡಿತ ಕುಣಿತಗಳ ಪದ್ಧತಿಯಿದೆ.

ಕರ್ನಾಟಕದ ಕಾಶ್ಮೀರ

ಕೊಡಗು ಜಿಲ್ಲೆ ಬೇರೇಯೇ ನಾಡು ಎನಿಸುವ ಮಟ್ಟಿಗೆ ಇತರ ಪ್ರದೇಶಕ್ಕಿಂತ ಭಿನ್ನವಾಗಿದೆ. ಉತ್ತರಕ್ಕೆ ಹೇಮಾವತಿ ನದಿ, ದಕ್ಷಿಣಕ್ಕೆ ಬ್ರಹ್ಮಗಿರಿ ಬೆಟ್ಟ, ಪಶ್ಚಿಮಕ್ಕೆ ದಕ್ಷಿಣ ಕನ್ನಡ, ಪೂರ್ವಕ್ಕೆ ಮೈಸೂರು ಜಿಲ್ಲೆಯಿಂದ ಸುತ್ತುವರಿಯಲ್ಪಟ್ಟ ಈ ಪ್ರದೇಶಕ್ಕೆ ಕರ್ನಾಟಕದ ಕಾಶ್ಮೀರ ವೆಂದರೆ ತಪ್ಪಾಗಲಾರದು. ಮೈಸೂರು, ಕೇರಳ, ತಮಿಳುನಾಡುಗಳ ನಡುವಿನ ತಂಟೆಗೆ ಕಾರಣವಾದ ಕಾವೇರಿ ನದಿ, ಬ್ರಹ್ಮಗಿರಿಯಲ್ಲಿ ಜನ್ಮವೆತ್ತಿ ೪೭೦ ಮೈಲು ಹರಿದು ಬಂಗಾಲ ಉಪಸಾಗರಕ್ಕೆ ಕೂಡುತ್ತದೆ. ಕೊಡಗಿನ ಸಂಸ್ಕೃತಿ, ಕಾವೇರಿ ನದಿಯ ದಂಡೆಯಲ್ಲಿಯೇ ಬೆಳೆದು ಬಂದಿದೆ. ಜೋಡು ಕೋಡಿನ ಬೆಟ್ಟ, ಕೋಟೆ ಬೆಟ್ಟ, ತುಂಬೆ ಮಲೆ, ಸೋಮನ ಬೆಟ್ಟಗಳು ತಲೆ ಎತ್ತಿ, ಎತ್ತರವಾಗಿ ಬೆಳೆದು ಪ್ರದೇಶಕ್ಕೆ ಭವ್ಯತೆ ಕೊಟ್ಟಿದೆ. ೧೦೦-೧೫೦ ಇಂಚು ಮಳೆಯಾಗುವ ಪ್ರದೇಶ. ದಟ್ಟವಾದ ಕಾಡು, ಗುಡ್ಡಬೆಟ್ಟಗಳು, ಸಮುದ್ರ ಪಾತಳಿಯಿಂದ ಮೂರು ಸಾವಿರಕ್ಕಿಂತ ಹೆಚ್ಚು ಅಡಿ ಎತ್ತರಗಳು ಜನಜೀವನದ ಮೇಲೆ ಹೆಚ್ಚಿನ ಪ್ರಭಾವ ಬೀರಿವೆ. ಕೊಡವರ ಮೈಬಣ್ಣ, ಅವರು ಆರ್ಯವಂಶಜರು ಇರಬಹುದೆಂದು ಸೂಚನೆಯಿತ್ತರೂ


ಹವೀಕ ತೋಟಗಾರ

ಅವರ ಭಾಷೆ ದ್ರಾವಿಡ ಭಾಷೆಯಾಗಿದೆ.



ಮಗು ಕೃಷಿಗಾರ

ಕೊಡವರು ಸಾಕಷ್ಟು ಎತ್ತರಗಾತ್ರದ ದೃಢಕಾಯರು. ಸುಂದರ, ಗಂಭೀರ ವ್ಯಕ್ತಿತ್ವವುಳ್ಳವರು, ಸಾಹಸಿಗಳು, ಸಮರ ಶೂರರೆಂದು ಖ್ಯಾತಿ ಪಡೆದವರು, ಸಾಂಪ್ರದಾಯಿಕವಾಗಿ ಪುರುಷರು, ಉದ್ದವಾದ ಶ್ವೇತ ನಿಲುವಂಗಿಯನ್ನು ಧರಿಸಿ ನಡುವೆ ಗೇಣಗಲದ ರೇಶ್ಮೆ ಪಟ್ಟಿ ಬಿಗಿದು ಬದಿಗೆ ಹರಿತವಾದ ಕವಚವುಳ್ಳ ಕತ್ತಿಯನ್ನು ಧರಿಸುವರು. ತಲೆಗೆ ಜರಿ ರುಮಾಲು ಕೈಯಲ್ಲಿ ಕೋಲು ಹಿಡಿಯುವದು ರೂಢಿ. ಹೆಂಗಳೆಯರ ಉಡಿಗೆಯೂ ವೈಶಿಷ್ಟ್ಯಪೂರ್ಣವಾಗಿದೆ. ಸೀರೆಯ ನಿರಿಗೆಗಳೆಲ್ಲ ಹಿಂಬದಿಗೆ ಬರುವಂತೆ ಸಿಗಿಸಿ ಸೆರಗನ್ನು ಎಡ ಕಂಕುಳೊಳಗಿಂದ ಒಯ್ದು ಭುಜದ ಮೇಲೆ ಕ್ಲಿಪ್ ಅಥವಾ ಪಿನ್ನಿನಿಂದ ಜೋಡಿಸುವರು. ಸುಂದರ ಮೈಕಟ್ಟು ಉಳ್ಳವರು. ಈ ಉಡಿಗೆಯಲ್ಲಿ ಇನ್ನಷ್ಟು ಆಕರ್ಷಕವಾಗಿ ತೋರುತ್ತಾರೆ. ಉದ್ದ ತೋಳಿನ ಕುಪ್ಪಸಗಳು ರೂಢಿಯಲ್ಲಿವೆ. ಸೆರಗು ಸದಾಕಾಲ ಇದ್ದಲ್ಲಿಯೇ ಇರುವುದರಿಂದ ಎರಡೂ ಕೈಗಳು ಸ್ವತಂತ್ರವಾಗಿ ಬಿಡವುವು. ಚಲನವಲನಕ್ಕೆ ಅನುಕೂಲವಿರುವ ಉಡುಪು. ಕೊಡವರು ಶಿವರಾತ್ರಿ, ಯುಗಾದಿ, ವಿಷ್ಣು ಸಂಕ್ರಮಣ, ಸುಬ್ರಹ್ಮಣ್ಯ ಷಷ್ಠೀ ಹಬ್ಬಗಳ ಜೊತೆಗೆ ತಮ್ಮವೇ ಹಬ್ಬಗಳಾದ ಹುತ್ತರಿ, ತುಲಾಸಂಕ್ರಮಣ, ಆಯುಧ ಪೂಜೆಗಳ ಹಬ್ಬಗಳನ್ನು ಹೆಚ್ಚಿನ ಉತ್ಸಾಹದಿಂದ ಆಚರಿಸುವರು.

ಹುತ್ತರಿ ಹಬ್ಬ

ಡಿಸೆಂಬರ ತಿಂಗಳಿನಲ್ಲಿ ರೋಹಿಣಿ ನಕ್ಷತ್ರದಲ್ಲಿ ಬರುವ ಹತ್ತು ದಿನದ ಹುತ್ತರಿ (ಸುಗ್ಗಿ ಹಬ್ಬ) ಯನ್ನು ಸಂಭ್ರಮದಿಂದ ಆಚರಿಸುವರು. ದೂರ ದೂರದಿಂದ ತಮ್ಮ ಊರಿಗೆ ಬಂದು ಬಾಗಿಲು, ಮನೆ ಬೀದಿಗಳನ್ನು ಹೂವು, ತುರಾಯಿಗಳಿಂದ ಶೃಂಗರಿಸುವರು. ಮುತ್ತೈದೆಯರು ಅಕ್ಕಿ ಹಿಟ್ಟಿನಿಂದ ಮಡಕೆ, ಬಾಗಿಲು, ಗೋಡೆಗಳ ಮೇಲೆ ಸುಂದರ ನಕ್ಷೆಗಳನ್ನು ಬಿಡಿಸುವರು. ಫಲಾಹಾರದ ನಂತರ ಹೊಸಬಟ್ಟೆ ಧರಿಸಿ ದೇವರಿಗೆ ನಮಿಸಿ ವಾದ್ಯದೊಂದಿಗೆ ಹೊಲಕ್ಕೆ ತೆರಳಿ ಹೊಸ ಬೆಳೆಯನ್ನು ಸಾಂಕೇತಿಕವಾಗಿ ಕೊಯ್ದು ಊರವರಿಗೆ ಹಂಚಿ, ಉಳಿದ ಧಾನ್ಯದಿಂದ ಹಬ್ಬಕ್ಕಾಗಿ ಬಂಗಾರ, ನಾಣ್ಯ, ಕಲ್ಲಿನ ಹರುಳುಗಳನ್ನು ಸೇರಿಸಿ ಪಾಯಸ

ಮಾಡುವರು. ಹೊನ್ನು ಸಿಕ್ಕವನನ್ನು ಸಿರಿವಂತನಾಗುವನೆಂದು ಭಾವಿಸಿದರೆ, ನಾಣ್ಯ ಸಿಕ್ಕವನು ಭಾಗ್ಯವಂತನೆಂದೂ ಹರಳು ಸಿಕ್ಕುವವನು ದೃಢಕಾಯನಾಗುವನೆಂದೂ ತಿಳಿಯುವ ಸಂಪ್ರದಾಯವಿದೆ. ನಂತರದ ಒಂದು ವಾರದಲ್ಲಿ ಜಾತಿ-ಲಿಂಗ-ವಯಸ್ಸಿನ ಭೇದ ಮರೆತು ಸಾರ್ವಜನಿಕ ಸ್ಥಳಗಳಲ್ಲಿ ಕೋಲಾಟವಾಡುವರು. ಅಕ್ಟೋಬರ್‌ದಲ್ಲಿ ಬರುವ ತುಲಾಸಂಕ್ರಮಣದಲ್ಲಿ ಕಾವೇರಿ ನದಿಯನ್ನು ಪೂಜಿಸಲು ಉಗಮ ಸ್ಥಾನಕ್ಕೆ ಧಾವಿಸಿ ಅಲ್ಲಿ ಮಿಂದು ಪೂಜಿಸುವರು. ಸೆಪ್ಟೆಂಬರ್‌ದಲ್ಲಿ 'ಕೈಲುಪೊಳ್ದು' (ಆಯುಧ ಪೂಜೆ)ಯ ಸಮಯದಲ್ಲಿ ತಮ್ಮ ದನಕರು, ನೇಗಿಲು ಆಯುಧಗಳನ್ನು ಪೂಜಿಸಿ, ವಿವಿಧ ಶಾರೀರಿಕ ಕ್ರೀಡಾಸ್ಪರ್ಧೆಗಳಲ್ಲಿ ಭಾಗವಹಿಸುವರು. ನಂತರ ನಗಾರಿ, ಬೇಟೆನಾಯಿಗಳ ಸಮೇತವಾಗಿ ಬೇಟೆಗೆ ಹೊರಡುವರು. ಸಾಹಸದಿಂದ ಹುಲಿಯ ಬೇಟೆಯಾಡಿದವರಿಗೆ ಸನ್ಮಾನಿಸುವ ಸಲುವಾಗಿ ಅವರು ಕೊಂದ ಬೇಟೆಯನ್ನೂ, ಕೋವಿಯನ್ನೂ, ಹೂಗಳಿಂದ ಶೃಂಗರಿಸಿ ಹೆಂಗಳೆಯರು ತಿಲಕ ಹಚ್ಚಿ ಆರತಿ ಬೆಳಗಿ ಬೇಟೆಯೊಡನೆ "ವಿವಾಹ" ಮಾಡುವರು. ಇಂತಹವರು ಕಲ್ಲಿಮೀಸೆ ಬೆಳೆಸಿ ತಮ್ಮ ಶೌರ್ಯವನ್ನು ಜಗತ್ತಿಗೆ ಸಾರುವರು. ದಟ್ಟ ಅರಣ್ಯದಲ್ಲಿ ಕಾಡಿನಂತೆ ಬೆಳೆದ ಕಾಫಿ ತೋಟಗಳಲ್ಲಿ ವಾಸಿಸುವ ಜನರು ಆತ್ಮರಕ್ಷಣೆಗಾಗಿ ಕೋವಿಗಳನ್ನು ಸದಾಕಾಲವೂ ತಮ್ಮ ಬಳಿಯಲ್ಲಿಟ್ಟಿರುತ್ತಾರೆ. ತೋಟಗಳು, ಊರಿಂದ ಹತ್ತಾರು ಮೈಲಿ ದೂರವಿರುವದರಿಂದ ಓಡಾಟಕ್ಕೆ ಮೋಟಾರ ಸಾಯಕಲ್, ಜೀಪ್ ಇಲ್ಲವೇ ಕಾರನ್ನು ಇಟ್ಟಿರುತ್ತಾರೆ. ಮನೆಯಲ್ಲಿ ಸಿದ್ಧವಾದ ಅಡಿಗೆಯನ್ನು ಟೇಬಲ್ಲಿನ ಮೇಲೆ ತಂದಿಟ್ಟು ಎಲ್ಲರೂ ಒಟ್ಟಿಗೆ ಕುಳಿತು ತಮಗೆ ಬೇಕಾದಷ್ಟನ್ನು ಬಡಿಸಿ ಪಾಶ್ಚಾತ್ಯರ ಪದ್ಧತಿಯಂತೆ ಉಣ್ಣುವರು. ನೆರೆಹೊರೆಯ ಊರುಗಳ ಜಾತ್ರೆಗಳಲ್ಲಿ ನವಜನಾಂಗದವರು ತಮ್ಮ ಜೀವನದ ಸಂಗಾತಿಯನ್ನು ಆರಿಸಿಕೊಳ್ಳುವ ಪರಿಪಾಠವು ಇವರಲ್ಲಿ ಬೆಳೆದು ಬಂದಿದೆ. ಮದುಮಗಳನ್ನು ರೇಶಿಮೆಸೀರೆಯಿಂದ ಅಲಂಕರಿಸಿ ತಲೆಯ ಮೇಲೆ ಒಂದರ ಮೇಲೊಂದರಂತೆ ಮೂರು ಬಿಂದಿಗೆಗಳನ್ನಿಟ್ಟು ಶಸ್ತ್ರಧಾರಿಯಾದ ಮದುಮಗನ ಮುಂದೆ ನಿಲ್ಲಿಸಲು ಬಂದ ಅತಿಥಿಗಳು ಸುರಾಪಾನ ಮಾಡಿ ಎಡಗೈ ಸೊಂಟದ ಮೇಲಿಟ್ಟು, ಬಲಗೈಯನ್ನು ಹವೆಯಲ್ಲಿ ತೂರುತ್ತ ನರ್ತಿಸುವರು. ಹಲಗೆ-ಕಹಳೆಗಳ ನಾದದಲ್ಲಿ ವಿವಾಹ ನೆರವೇರುವದು. ಪುತ್ರೋದಯವಾದಾಗ ಅವನು ಶೂರನಾಗಲೆಂಬ ಹಾರೈಕೆಯಿಂದ ಬಿಲ್ಲು-ಬಾಣಗಳನ್ನು ಕೊಡುವ ವಾಡಿಕೆಯಿದೆ. ಮನೆಯಲ್ಲಿ ಸಾವು ಸಂಭವಿಸಿದರೆ ಊರವರಿಗೆ ತಿಳಿಯುವಂತೆ ಗುಂಡನ್ನು ಹಾರಿಸುವರು. ಕುಡಿಯರು ಅರಣ್ಯಗಳಲ್ಲಿ ವಾಸಿಸಿ, ಕಾಫಿ ತೋಟಗಳಲ್ಲಿ ಜೀತದಾಳಾಗಿ ದುಡಿಯುವರು. ಮಾಪಿಳ್ಳೆಗಳು ಬಯಲು ಪ್ರದೇಶದಲ್ಲಿ, ವ್ಯಾಪಾರದಲ್ಲಿ ತೊಡಗಿರುವರು. ಇದರಂತೆ ಬಂಟರು, ಕಿರಿಸ್ತಾನರು, ಮುಸಲ್ಮಾನರು, ವ್ಯಾಪಾರ, ಸಾಗಾಟ, ಕೃಷಿಗಳಲ್ಲಿ ತೊಡಗಿರುವರು.

ಲಿಂಗಾಯತರು

ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಲಿಂಗಾಯತ, ಒಕ್ಕಲಿಗ (ಗೌಡ) ಮತ್ತು ವೈಶ್ಯರು ಸಮಾಜದಲ್ಲಿ ಪ್ರಭಾವಶಾಲಿಗಳಾಗಿದ್ದಾರೆ. ಕೃಷಿ, ವ್ಯಾಪಾರಗಳಲ್ಲಿ

ಮುಂದುವರೆದ ಲಿಂಗಾಯತರು ರಾಜಕಾರಣದಲ್ಲಿಯೂ ವರ್ಚಸ್ಸು ಬೀರುತ್ತಿದ್ದಾರೆ. ಜಂಗಮರನ್ನೊಳಗೊಂಡ ಬಣಜಿಗರ ಗುಂಪನ್ನು ಸಾದರ ವೀರಶೈವರು ಸ್ಪರ್ಧಿಸುತ್ತಾರೆ. ಸಿರಿಗೆರೆಯ ಜಗದ್ಗುರುಗಳು ಸಾದರ ಲಿಂಗಾಯತರ ಮುಖಂಡತ್ವ ವಹಿಸಿ ಕಳೆದ ೧೫-೨೦ ವರ್ಷಗಳಿಂದ ಶಿಕ್ಷಣದಿಂದ ತಮ್ಮ ಸಮಾಜವನ್ನು ಮೇಲಕ್ಕೆತ್ತಲು ಯತ್ನಿಸುತ್ತಿದ್ದಾರೆ. ಸಿರಿವಂತರು ಅಕ್ಕಿ, ಗೋಧಿಯನ್ನು ಉಪಯೋಗಿಸಿದರೆ, ಬಡವರು ರಾಗಿಯನ್ನು ಉಪಯೋಗಿಸುವರು. ಉತ್ತರ ಕರ್ನಾಟಕದ ಲಿಂಗಾಯತರಂತೆ ಖಾರ-ಅಡಿಗೆ ರೊಟ್ಟಿ ಹಿಂಡಿಗಳ ಪ್ರಯೋಗ ಕಡಿಮೆ. ಮಾತು, ನಡತೆ, ಇರುವಿಕೆಗಳೆಲ್ಲ ಉತ್ತರದವರಿಗಿಂತ ಶ್ರೇಷ್ಠವೆಂದು ಹೆಮ್ಮೆಪಡುವರು. ಸ್ತ್ರೀಯರು ತಲೆಯ ಮೇಲೆ ಸೆರಗು ಹೊದೆಯುವುದಿಲ್ಲ. ಮದುವೆಯನ್ನು ಕನ್ಯೆಯ ಮನೆಯಲ್ಲಿಯೇ ಮಾಡಿದರೂ ಕೆಲವು ಧನಿಕರು ತಮ್ಮ ಮನೆಯಲ್ಲಿಯೇ ಮದುವೆ ಮಾಡಿಕೊಡಬೇಕೆಂದು ಆಗ್ರಹಪಡಿಸುವರು. ಮದುವೆಯಲ್ಲಿ ಹುಗ್ಗಿ-ಹೋಳಿಗೆಗಳನ್ನು ಮಾಡುವರು. ದೀಪಾವಳಿ, ಯುಗಾದಿ, ಶಿವರಾತ್ರಿ, ನಾಗಪಂಚಮಿ ಹಬ್ಬಗಳನ್ನು ಆಚರಿಸುವರು. ಒಕ್ಕಲಿಗರು ಕೃಷಿಯ ಹೊರತಾಗಿ ರಾಜಕಾರಣ ಕ್ಷೇತ್ರದಲ್ಲೂ ಹೆಚ್ಚೆಚ್ಚು ಭಾಗವಹಿಸುತ್ತಿದ್ದಾರೆ. ಮೀನು, ಮಾಂಸಗಳೆಂದರೆ ಇವರಿಗೆ ತುಂಬ ಇಷ್ಟ. ಅಂತೆಯೇ ಸಾಮೂಹಿಕವಾಗಿ ಬೇಟೆಗೆ ಹೋಗಿ, ಕಾಡುಹಂದಿಯ ಬೇಟೆಯಾಡಿ ಸಾಮೂಹಿಕ ಊಟವನ್ನು ಏರ್ಪಡಿಸುವರು. ಪ್ರತಿಯೊಬ್ಬ ಒಕ್ಕಲಿಗನ ಮನೆಮುಂದೆ ತುಳಸಿ ಕಟ್ಟೆ ಕಂಡುಬರುವುದು. ಅದಕ್ಕೆ ಬೇರೆಯೇ ಭಾವಣೆಯಿದ್ದು ಜಾಗಟೆ ಶಂಖಗಳನ್ನು ಅಲ್ಲಿಯೇ ಇಡುವರು. ಮದುಮಗನ ತಾಯಿ ಮದುವೆಗೆ ಹೋಗದೇ ಮನೆಯಲ್ಲಿರುವಳು. ವೈಶ್ಯರು ಹೆಚ್ಚಾಗಿ ವ್ಯಾಪಾರದಲ್ಲಿ ತೊಡಗಿರುವರು. ಮದುವೆಗಳಲ್ಲಿ ಹೆಚ್ಚಿನ ವರದಕ್ಷಿಣೆಯ ಪರಿಪಾಠವಿದೆ. ತಮ್ಮದೇ ಆದ ಶಾಲೆ-ಕಾಲೇಜು, ವಸತಿಗೃಹ ಬ್ಯಾಂಕುಗಳನ್ನು ಮಾಡಿಕೊಂಡಿದ್ದಾರೆ.


ಗೃಹಮುಖಿ ಗೌಡತಿ

ಒಕ್ಕಲಿಗರು

ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಒಕ್ಕಲಿಗರ ಜನಾಂಗಕ್ಕೆ ಗೌಡರೆಂದು ಕರೆಯುವುದು ವಾಡಿಕೆ. ಆದರೆ ಇವರನ್ನು ಹಾಲಕ್ಕಿ ಗೌಡರೊಡನೆ ಹೋಲಿಸಬಾರದು. ಮೈಸೂರು ರಾಜ್ಯದಲ್ಲಿ ರಾಜಕಾರಣ. ಉದ್ದಿಮೆ, ಇನ್ನಿತರ ಕ್ಷೇತ್ರಗಳಲ್ಲಿ



ಸೆರೆಗಾರ ಸ್ತ್ರೀ


ಒಕ್ಕಲಿಗರು ತಮ್ಮದೇ ವಿಶಿಷ್ಟ ಸ್ಥಾನ ಪಡೆದಿದ್ದಾರೆ. ತಮ್ಮ ಸಮಾಜದ ಏಳ್ಗೆಯಾಗಬೇಕಾದರೆ, ಮುಂದೆ ಬರಬೇಕಾದರೆ, ರಾಜಕಾರಣದಲ್ಲಿ ತಮ್ಮ ಕೈವಾಡ ಇದ್ದಿರಲೇಬೇಕೆಂದು ಮನಗಂಡು ತಮ್ಮ ಪ್ರಭಾವದ ಕ್ಷೇತ್ರಗಳಿಂದ ಚುನಾಯಿತರಾಗಿ ರಾಜ್ಯದ ಮಂತ್ರಿಮಂಡಲದಲ್ಲಿ ತಮ್ಮ ಸ್ಥಾನವನ್ನು ಕಾಯ್ದಿರಿಸಿಕೊಂಡು. ತಮ್ಮ ಜನರಿಗೆ ಸರ್ವ ರೀತಿಯ ಸಹಾಯಮಾಡುತ್ತಾರೆ. ಧನಿಕರಲ್ಲಿಯೂ ಬಾಹ್ಯಾಡಂಬರ ಕಡಿಮೆ. ಗಂಡಸರು ಧೋತರವನ್ನೋ ಮುಂಡವನ್ನೋ ಉಟ್ಟು ಶರ್ಟು ಧರಿಸಿ ತಲೆಗೆ ವಸ್ತ್ರವನ್ನು (ಕಿರಿ ಮುಂಡಾಸ) ಸುತ್ತಿದರೆ ಹೆಂಗಸರು ಕಚ್ಚೆಹಾಕದೇ ಸೀರೆ ಉಟ್ಟು ಕುಪ್ಪುಸ ತೊಡುವರು. ಪ್ರತಿಯೊಂದು ಮನೆಯ ಮುಂದೆ ತುಳಸಿ ಕಟ್ಟೆಯೊಂದು ಇದ್ದೇತೀರಬೇಕು. ಅಲ್ಲಿ ಒಂದು ಶಂಖ, ಘಾಗಟೆ, ಪೂಜಾ ಸಾಹಿತ್ಯಗಳು ಸದಾಕಾಲ ಇರುತ್ತವೆ. ಗಂಡು ಹೆಣ್ಣು ವೀಳ್ಯ ಜಗಿಯುವುದು ಹೆಚ್ಚು. ಇವರಲ್ಲಿ ಸುರಾಪಾನ ಪ್ರಚಲಿತವಿದೆ. ಉಪ್ಪಿಟ್ಟು, ದೋಸೆ, ಇಡ್ಲಿಗಳ ಉಪಹಾರ, ಕಾಫಿಗಳನ್ನು ಸೇವಿಸುವರು. ಅನ್ನ -ಸಾರುಗಳೊಂದಿಗೆ ಮೀನು-ಮಾಂಸಗಳ ವ್ಯಂಜನಗಳು ಇವರಿಗೆ ಬೇಕೇಬೇಕು. 'ತೋಟಾ' ನೀರಿನಲ್ಲಿ ಹಾಕಿ ಅದರಿಂದ ಉಂಟಾದ ಸ್ಫೋಟದಿಂದ ಮೀನುಗಳು ಸತ್ತು ಮೇಲಕ್ಕೆ ಬಂದಾಗ ಹಿಡಿಯುವರು. ಕಾಡುಹಂದಿಯ ಮಾಂಸವೆಂದರೆ ಇವರಿಗೆ ಬಲು ಪ್ರೀತಿ. ಅಂತೆಯೇ ಪರಿಸರದವರೆಲ್ಲ ಒಟ್ಟಾಗಿ ಹಂದಿ ಬೇಟೆಗೆಂದು ಹೋಗುವರು. ಶೌರ್ಯದಿಂದ ಹಂದಿಯ ಬೇಟೆಯಾಡಿದಾಗ ಆದ ಪ್ರಯಾಸವನ್ನು ಮರೆತು ಬೇಟೆಯ ಪಾಲುಮಾಡಿ ಹಂಚಿಕೊಳ್ಳುವರು. ಅಂತಹ ದಿನಗಳಲ್ಲಿ ಕೇರಿ ಕೇರಿಗಳಲ್ಲಿ ಹಬ್ಬದ ಸಡಗರ. ಪಾಲಕರು ಏರ್ಪಡಿಸಿದ ತರುಣ ವಯಸ್ಸಿನ ವಿವಾಹಗಳೇ ಹೆಚ್ಚು. ಜನ್ಮ ತಾರೀಖು ನೋಡಿಸಿ ಆಚಾರ್ಯರಿಂದ ಜಾತಕಗಳನ್ನು ಮಾಡಿಸುವ ರೂಢಿ ಇಲ್ಲದ್ದರಿಂದ ವರನಿಗೆ ಒಪ್ಪಿಗೆಯಿದ್ದರೆ ಪ್ರಸಾದವಾಗಬೇಕೆಂದು ದೇವರ ವಿಗ್ರಹಗಳಿಗೆ ಬೇಡಿಕೊಳ್ಳುವರು. ಒಪ್ಪಿಗೆ ಸಿಕ್ಕರೆ ಒಳ್ಳೆಯ ಮಹೂರ್ತವನ್ನು ಪಂಡಿತರೇ ಹುಡುಕಿಕೊಡಬೇಕು. ಮಗನ ಮದುವೆಗೆ ತಾಯಿ ಹೋಗಕೂಡದೆಂಬ ನಿಷೇಧವಿದೆ. ಉಳಿದ ಮಂಗಳ ವಾದ್ಯಗಳೊಂದಿಗೆ ಮದುಮಗಳ ಮನೆಗೆ ಬಂದು ಮದುವೆ ಮುಗಿಸಿಕೊಂಡು ಅದೇ ದಿನ ಮರುಳುವರು.

●●●

೧೨. ಐತಿಹಾಸಿಕ ಅಂಜದೀವ್ ದ್ವೀಪ

ಉತ್ತರಕನ್ನಡ ಜಿಲ್ಲೆ ಕರಾವಳಿಗುಂಟ ಇರುವ ಹಲವಾರು ದ್ವೀಪಗಳಿಗೆ ಸ್ಥಾನೀಯರು 'ಕುರ್ವೆ'(ಮಾವಿನಕುರ್ವೆ, ಮಲ್ಲಿಕುರ್ವೆ, ಕುರುಕುರ್ವೆ ಪಾವಿನಕುರ್ವೆ)ಗಳೆಂದು ಗುರುತಿಸುವದು ವಾಡಿಕೆ. ಅವುಗಳ ಮೇಲೆ ಕೋಟೆಯಿದ್ದರೆ "ದುರ್ಗ"ವೆಂದು ಕರೆಯುವರು. (ಬಸವರಾಜ ದುರ್ಗ). ಛತ್ರಪತಿ ಶಿವಾಜಿಯ ವರ್ಚಸ್ಸಿಗೆ ಒಳಗಾದ ಕಾರವಾರದ ತೀರದಲ್ಲಿಯ ಜಲದುರ್ಗಗಳಿಗೆ 'ಗಡ' ಎಂಬ ಪ್ರತ್ಯಯ ಜೋಡಿಸುವುದು ಪರಿಪಾಠ, ದೇವಗಡ, ಕೂರ್ಮಗಡ, ಮಧುಲಿಂಗಗಢ ಮುಂತಾದವು ಈ ಗುಂಪಿಗೆ ಸೇರಿದವು. ಇವುಗಳ ಜೊತೆಯಲ್ಲೇ ಇದ್ದ ನಡುಗಡ್ಡೆಗೆ 'ಅಂಜದೀವ್' ಎಂಬ ವಿಶಿಷ್ಟ ಹೆಸರು ಯಾಕೆ ? ಎಂಬ ಕುತೂಹಲ ಕೆರಳಿತು. ಕಾರವಾರದ ಆಗ್ನೇಯಕ್ಕೆ ಎಂಟು ಕಿಲೋಮೀಟರ ದೂರದಲ್ಲಿರುವ ದ್ವೀಪದ ದರ್ಶನಕ್ಕೆಂದು ಬಿಣಗಾ ಹಳ್ಳಿಯಲ್ಲಿ ಇಳಿದಾಗ, ಅಲ್ಲಿಯ ಸೃಷ್ಟಿಸೌಂದರ್ಯ ಮೂಕನನ್ನಾಗಿ ಮಾಡಿತು. ಊರಿಗೆ ತಲೆದಿಂಬಾಗಿ ನಿಂತಿದೆ ಸುಮಾರು ಎರಡು ಸಾವಿರ ಅಡಿ ಎತ್ತರದ ಸಹ್ಯಾದ್ರಿ ಪರ್ವತಶ್ರೇಣಿ. ಅದರ ಮಗ್ಗುಲಲ್ಲಿಯೇ ವಿಸ್ತಾರವಾಗಿ ಹರಡಿದೆ, ನೀಲ ಕಡಲ ನೀರ ರಾಶಿ, ಅಬ್ಬರದ ತೆರೆಗಳು ದಂಡೆಗೆ ಅಪ್ಪಳಿಸಿದಾಗೊಮ್ಮೆ ಮೂಡುತ್ತದೆ, ಬಿಳಿನೊರೆಯ ರಾಶಿ, ಇವಕ್ಕೆ ಕಟ್ಟು ಹಾಕಿದಂತಿದೆ. ತಿಳಿ ಅರಿಶಿನ ಬಣ್ಣದ ಮಳಲ ರಾಶಿ. ಇದಕ್ಕೆಲ್ಲಕ್ಕೂ ಮುಕುಟವಿಟ್ಟಂತೆ ತೆಂಗಿನತೋಪುಗಳು. ಇಷ್ಟೆಲ್ಲ ಸೌಂದರ್ಯ ಹರಡಿದ್ದರೂ ಅದನ್ನು ಸವಿಯುವವರ ಸುಳಿವೇ ಇರಲಿಲ್ಲ.

ಇಕ್ಕಟ್ಟಾದ ರಸ್ತೆ ನಂತರ ಇಳಿಜಾರಾದ ಕಾಲುದಾರಿ ತುಳಿಯುತ್ತ ಒಂದು ಕಿಲೋಮೀಟರ್



ಅಂಜದೀವ್ ದ್ವೀಪ : ಅಮಲೇರಿಸುವ ಸೌಂದರ್ಯ

ನಡೆದಾಗ ಬಿಣಗಾ ಬಂದರು ಬಂದಿತು. ಸಾವಿರಾರು ತೆಂಗಿಮರಗಳ ಆಶ್ರಯದಲ್ಲಿ ತಲೆ ಎತ್ತಿಕೊಂಡು ನಿಂತ ಹತ್ತಾರು ಮನೆಗಳು. ಅಲ್ಲಲ್ಲಿ ಒಣಹಾಕಿದ ಬಲೆಗಳು, ಇದು ಬೆಸ್ತರ ಕೇರಿಯೆಂದು ಸಾರಿದವು. ನಾವೆಗಳನ್ನೆಲ್ಲ ಕಡಲತೀರಕ್ಕೆ ಎಳೆದು, ಬಂಧಿಸಿ ಇಟ್ಟಿದ್ದರಿಂದ ನೀರಿಲ್ಲದ ಮೀನಿನಂತಾಗಿದ್ದವು. ಶುಭ್ರವಾದ ನೀಲಿ ಆಕಾಶ, ತಿಳಿ ನೀಲಿ ನೀರು, ಕಡಲು ಆಳವಿರದಂತೆ ತೆರೆಗಳಿಗೆ ಅಬ್ಬರವೂ ಇರಲಿಲ್ಲ. ಮುಂಜಾವಿನ ಎಳೆಬಿಸಿಲಲ್ಲಿ ಎಲ್ಲವೂ ಅತ್ಯಾಕರ್ಷಕವಾಗಿ ಕಂಡಿತು. ಅನತಿದೂರದಲ್ಲಿ, ಕಡಲ ಮಧ್ಯದಲ್ಲಿ ಅಂಜದೀವ್, ತಾನು ಇಲ್ಲಿ ಇದ್ದೇನೆ! ಎಂದು ಪರಿಚಯದ ನಗೆ ನಕ್ಕು ಕರೆಯಿತು. ಅದರ ಎಡಗಡೆಗೆ ಸಣ್ಣದಾದ ಹುಲ್ಸೆಗೂಡ ದ್ವೀಪ. ಬಲಗಡೆಗೆ ಕೂರ್ಮಗಡ, ದೇವಗಡ ದ್ವೀಪಗಳು. ಅವುಗಳ ರಮ್ಯತೆಯನ್ನು ಮೆಚ್ಚುತ್ತ ನಿಂತಂತೆ. ಮರುಳಲ್ಲಿ ಆಡುವ ಮಕ್ಕಳು ಧಾವಿಸಿ ಬಂದವು. "ಎಲ್ಲಿಗೆ ಹೋಗಬೇಕು ?" ಎಂದು ವಿಚಾರಿಸಿದವು. ಅವುಗಳ ಪ್ರಶ್ನೆಗಳಿಂದಲೇ ಪ್ರವಾಸಿಗಳು ಯಾರೂ ಇತ್ತ ಸುಳಿಯುವುದಿಲ್ಲವೆಂದು ಖಚಿತವಾಯಿತು. ಹಿರಿಯ ಇಬ್ಬರು ನಾವಿಕರಿಗೆ ಅಂಜದೀವಕ್ಕೆ ಕರೆದೊಯ್ಯಲು ಕೇಳಿಕೊಂಡಾಗ, ಅವರು ಏನೇನೋ ಕುಂಟುನೆಪ ಹೇಳಿ ಬರಲಾಗದೆಂದರು. ಕೊಂಕಣಿ ಭಾಷೆಯಲ್ಲಿ ಅವರ ಸುಖದುಃಖ ವಿಚಾರಿಸಿ. ಅವರ ಛಾಯಾಚಿತ್ರ ತೆಗೆದು ನಗಿಸಿ, ಕೊಂಚ ಸಲಿಗೆ ಬೆಳೆದಾಗ ಮೈಚಳಿ ಬಿಟ್ಟು ಮಾತನಾಡಲಾರಂಭಿಸಿದರು. ದೊಡ್ಡ ಮನಸ್ಸು ಮಾಡಿ ಯುವನಾವಿಕರ ತಂಡ ಅಂಜದೀವಕ್ಕೆ ಬರಲು ಒಪ್ಪಿತು.

ನಾವೆ, ಬಿಣಗಾ ಬಿಟ್ಟು, ದೂರ ದೂರ ಹೋಗುತ್ತಿದ್ದಂತೆ ಸಹ್ಯಾದ್ರಿ ಪರ್ವತಾವಳಿಗಳು, ತೆಂಗಿನ ತೋಪು, ಗಾಳಿಗಿಡಗಳ ಕಾಡು, ಮರಳ ರಾಶಿಯ ರಮ್ಯತೆ ಇನ್ನೂ ಹೆಚ್ಚಾಗಿ ಗೋಚರಿಸಿತು. ಅಂಜದೀವ್ ಹತ್ತಿರ ಬಂದಾಗ ಬೆಟ್ಟದ ನೆತ್ತಿಯ ಮೇಲಿದ್ದ ಚರ್ಚೊಂದು ಅಲ್ಲಿಂದಲೇ ಆಗುಂತಕರನ್ನು ಆಶೀರ್ವದಿಸಿತು. ದ್ವೀಪದಲ್ಲಿ ಇದ್ದ ಕೆಲವರು ತಮ್ಮತ್ತ ಬರುತ್ತಿದ್ದ ನಾವೆಯನ್ನು ಸಂಶಯದ ಕಣ್ಣಿನಿಂದ ಪರೀಕ್ಷಿಸಿ ಪಲಾಯನ ಮಾಡುವುದರಲ್ಲಿದ್ದರು. ನಮ್ಮ ನಾವಿಕರು ಏನೋ ಸಂಜ್ಞೆ ಮಾಡಿದ್ದರಿಂದ ಅಲ್ಲಿಯೇ ತಡೆದು ಅತಿಥಿಗಳ ಆಗಮನವನ್ನೇ ಎದುರು ನೋಡುತ್ತಿರುವವರಂತೆ ನಟಿಸಿದರು. ಧಕ್ಕೆ ನಾಶವಾಗಿ ಹೋಗಿದ್ದರಿಂದ ಮೊಳಕಾಲು ನೀರಿನಲ್ಲಿ ಇಳಿದು ಬರಲು ನಾವಿಕರೇ ನೆರವು ನೀಡಿದರು. ಅಸ್ತವ್ಯಸ್ತವಾಗಿ ಮುರಿದುಬಿದ್ದ ಪಾವಟಿಗೆಗಳನ್ನು ತುಳಿಯುತ್ತ ಮೇಲಕ್ಕೆ ಏರಿದಾಗ, ಕೋಟೆಯ ಅಂತರಾಳದಲ್ಲಿ ಹೊಕ್ಕಂತಾಯಿತು. ದೊಡ್ಡ ದೊಡ್ಡ ಗುಂಡುಕಲ್ಲುಗಳ ಮೇಲೆ ಕಟ್ಟಿದ ಜಲದುರ್ಗ ಇನ್ನೂಸುಸ್ಥಿತಿಯಲ್ಲೇ ಇತ್ತು ನಟ್ಟನಡುವೆ ಇದ್ದ ಧ್ವಜಸ್ತಂಭದ ಹತ್ತಿರ ನಿಂತು, ಸುತ್ತಲೂ ಕಾಲು ಮುರಿದುಕೊಂಡು ಬಿದ್ದುಕೊಂಡ ಯುದ್ಧ ಸಾಮಗ್ರಿಗಳನ್ನು ಕಂಡಾಗ ಈ ದ್ವೀಪದ ಗತ ವೈಭವದ ದಿನಗಳೆಲ್ಲ ಕಣ್ಣಿಗೆ ಕಟ್ಟಿದಂತಾದವು.

ವಿಶ್ರಾಂತಿ ತಾಣ

ಪೂರ್ವಕಾಲದಿಂದಲೂ ಈ ದ್ವೀಪದಲ್ಲಿ ಸಿಹಿನೀರಿನ ಝರಿಗಳಿದ್ದದ್ದು ಅರಬ್ ಮತ್ತು ಪಾಶ್ಚಾತ್ಯ ಪ್ರವಾಸಿಗರಿಗೆ ಗೊತ್ತಿತ್ತು. ಹೀಗಾಗಿ ಅವರು ಇಲ್ಲಿ ಒಂದೆರಡು ದಿನ ವಿಶ್ರಾಂತಿ



ಗೋವಾ ಮಾದರಿಯ ಚರ್ಚು

ಪಡೆದೇ ತಮ್ಮ ಪಯಣವನ್ನು ಮುಂದುವರಿಸುತ್ತಿದ್ದರು. ಈಜಿಪ್ತಿನ ಟಾಲಮಿ ತನ್ನ ಗ್ರಂಥ (ಕ್ರಿ. ಶ. 150) ದಲ್ಲಿ ಈ ನಡುಗಡ್ಡೆಯನ್ನು ನಮೂದಿಸಿದ್ದಾನೆ. ಗ್ರೀಕ್ ಚರಿತ್ರಕಾರ ಆರಿಯನ್ ತನ್ನ ಪೆರಿಪ್ಲಸ್ ದಲ್ಲಿ ಅಂಜದೀವ್‌ವನ್ನು ಕೊಂಡಾಡಿದ್ದಾನೆ. ಆಫ್ರಿಕೆಯ ಪ್ರಸಿದ್ಧ ಪ್ರವಾಸಿ ಇಬ್ನೆ ಬತೂತ ಈ ದ್ವೀಪಕ್ಕೆ ಭೇಟಿ ಕೊಟ್ಟಾಗ (ಕ್ರಿ.ಶ.1392) ಕಂಡ ಒಂದು ವಿಸ್ಮಯಕಾರಿ ಘಟನೆಯನ್ನು ಬರೆದು ಇಟ್ಟಿದ್ದಾನೆ. ಅಲ್ಲಿದ್ದ ದೇವಾಲಯದ ಎರಡು ಶಿಲ್ಪಗಳ ನಡುವೆ ನಿಂತ ಸನ್ಯಾಸಿಯೋರ್ವನು ಆಜೀವ ಉಪವಾಸ ಕೈಕೊಂಡಂತೆ ಅನಿಸುತ್ತಿತ್ತು ಈ ವಿದೇಶಿ ಮಾತನಾಡಿಸಿದಾಗ ಅವನು ಯಾವ ಪ್ರತಿಕ್ರಿಯೆಯನ್ನೂ ತೋರ್ಪಡಿಸಲಿಲ್ಲ. ಪರಮಾತ್ಮನಲ್ಲಿ ಲೀನನಾದವನಂತೆ ಅಚಲನಾಗಿದ್ದ. ಅಲ್ಲಿಯ ಕುಂಡದಲ್ಲಿ ಕುಡಿಯುವ ನೀರನ್ನು ಬಿಟ್ಟರೆ ಇನ್ನಾವ ಆಹಾರ ಕಾಣದ್ದರಿಂದ "ಹಸಿವಾದಾಗ ಏನು ಮಾಡುತ್ತೀಯಾ?" ಎಂಬ ಪ್ರಶ್ನೆಗೆ, ಆನೆಯಂತೆ ಹೂಂಕರಿಸಿದ. ಆ ಕೂಡಲೆ ಅದೆಲ್ಲಿಂದಲೋ ತೆಂಗಿನಕಾಯೊಂದು ಪ್ರತ್ಯಕ್ಷವಾಯಿತು. ಅದನ್ನು ತಾನು ಸೇವಿಸುವದರ ಬದಲಿಗೆ ಆಗಂತುಕರಿಗೆ ಕೊಟ್ಟುಬಿಟ್ಟ. ಬದಲಾಗಿ ನೀಡಿದ ಚಿನ್ನ-ಬೆಳ್ಳಿಯ ನಾಣ್ಯವನ್ನು ಅವನು ಸ್ವೀಕರಿಸಲಿಲ್ಲ. ತನ್ನಲ್ಲಿ ಇದ್ದ ಒಂಟಿ ಕೂದಲಿನ ಹೊದಿಕೆಯನ್ನು ದಾನವಾಗಿ ಕೊಟ್ಟ. ಜೀವನದಲ್ಲಿ ನಿರ್ಲಿಪ್ತತೆಯನ್ನು ಸಾಧಿಸಿಕೊಂಡ, ಆತನು ಯಾವ ಧರ್ಮಕ್ಕೆ ಸೇರಿದವನು ಎಂದು ವಿಚಾರಿಸಿದಾಗ ನೀಲಗಗನ ಮತ್ತು ಪಶ್ಚಿಮ ದಿಕ್ಕುಗಳನ್ನು ತೋರಿಸಿದ. ಇದರಿಂದ



ಕೋಟೆಯ ಒಳಭಾಗದಲ್ಲಿರುವ ತೋಪುಗಳು

ಇಬ್ನೆ ಬತೂತನಿಗೆ ತುಂಬ ಸಂತೋಷವಾಯಿತು. ಮೇಲಿದ್ದ ಅಲ್ಲಾನಿಗೂ ಮಕ್ಕಾದ ಮಸೀದೆಗೂ ತೋರಿಸಿ ಇನ್ನಿತರ ಹಿಂದೂಗಳಿಗೆ ತಿಳಿಯದಂತೆ ಮುಹಮ್ಮದೀಯ ಧರ್ಮ ಆಚರಿಸುತ್ತಿದ್ದಾನೆಂದು ಆತ ಅರ್ಥಮಾಡಿಕೊಂಡ. ಆದರೆ ಸನ್ಯಾಸಿ ತಾನು ಸೂರ್ಯದೇವ ಮತ್ತು ಸಮುದ್ರರಾಜನನ್ನು ಆರಾಧಿಸುತ್ತೇನೆಂದು ಹೇಳಿರಲೂ ಸಾಕು! ಯೋಗಿ ಆಗಂತುಕನಿಗೆ ಹತ್ತು ಚಿನ್ನದ ದೀನಾರ್ ನಾಣ್ಯ ಕೊಟ್ಟಾಗ ಪರಮಾನಂದದಿಂದ ಕೈಗೆ ಮುತ್ತಿಟ್ಟ. ಆದರೆ ಸ್ವಲ್ಪ ದೂರ ಹೋಗಿ ಹಿಂದಿರುಗಿ ನೋಡಿದಾಗ ಆತ ನಿಂತಲ್ಲಿ ಅದೃಷ್ಯನಾಗಿಬಿಟ್ಟ.

ಕಾರವಾರ- ಗೋವಾಗಳನ್ನು ಆಳುತ್ತಿದ್ದ ಅರಸು ಮನೆತನದವರೆಲ್ಲರ ಅಧೀನಕ್ಕೆ ಅಂಜದೀವ್ ಸೇರಿತ್ತು. ವಿಜಯನಗರ ಸಾಮ್ರಾಜ್ಯ, ಪ್ರಬಲವಾದ ನಂತರ ಈ ದ್ವೀಪ ಅವರ ವಶವಾಯಿತು. ಆದರೆ ಅರಬ್ ವ್ಯಾಪಾರಿಗಳು ಆಗಾಗ ಈ ನಡುಗಡ್ಡೆಗಳಲ್ಲಿ ಇಳಿದು ನಿವಾಸಿಗಳನ್ನು ಪೀಡಿಸಲಾರಂಭಿಸಿದ್ದರಿಂದ, ಅವರು ಪಲಾಯನ ಮಾಡಿದಾಗ ದ್ವೀಪ ಹಾಳುಬಿತ್ತು. ಈ ಅವಕಾಶಗಳನ್ನು ಬಳಸಿ ಬಹುಶಃ ಕೇರಳದ ಮಾಪಿಳ್ಳೆಗಳು ಇಲ್ಲಿ ಬಂದು ಸ್ಥಾಪಿತರಾದರು. ಮುಂದೆ ಪೋರ್ಚುಗೀಸ್ ಪ್ರವಾಸಿ ವಾಸ್ಕೋ-ಡಿ-ಗಾಮಾ ಕಾಲಿಕತ್ತದಿಂದ ಯುರೋಪಿಗೆ ಹಿಂದುರುಗಬೇಕಾದರೆ ಅವನ ಹಡಗು ಪಡೆ ಕ್ರಿ.ಶ.10-9-1498ರಂದು ಅಂಜದೀವ್ ಹತ್ತಿರವೇ ಲಂಗರು ಹಾಕಿತು. ಅಪರೂಪದ ಪ್ರವಾಸಿಗಳನ್ನು ಕಂಡು ಸ್ಥಾನೀಯ ವ್ಯಾಪಾರಿಗಳು ಚಿಕ್ಕ ಚಿಕ್ಕ ನಾವೆಗಳಲ್ಲಿ ಬಂದು ಮೀನು ಸೋರೆಕಾಯಿ, ಸೌತೆಕಾಯಿ, ಗೋವು, ಹಂದಿ, ಕೋಳಿಗಳನ್ನು ಮಾರಲಾರಂಭಿಸಿದರು. ಗಾಮಾನಿಗೆ ಕಾಲಿಕತ್‌ದಿಂದ ಹಿಂಬಾಲಿಸಿ ಬಂದ ವೈರಿ ಹಡಗುಗಳಿಂದಲೂ, ತಮ್ಮವರ ಒಳಸಂಚಿನಿಂದಲೂ ಸಂರಕ್ಷಿಸಿಕೊಳ್ಳಬೇಕಾದ್ದರಿಂದ ಈ ದ್ವೀಪದಲ್ಲಿ ಹನ್ನೆರಡು ದಿನಗಳ ದೀರ್ಘಕಾಲ ಠಾಣ್ಯಹೂಡಬೇಕಾಯಿತು. ಆಗ ಅಲ್ಲಿ ದಾಲಚಿನ್ನಿ ಮರಗಳು ವಿಪುಲವಾಗಿ ಬೆಳೆಯುತ್ತಿದ್ದರಿಂದ ನೆರೆಹೊರೆಯವರು ಕಡಿಕಡಿದು ನಾವೆಗಳಲ್ಲಿ ಹೇರಿಕೊಂಡು ಹೋಗುತ್ತಿದ್ದರು. ವಾಸ್ಕೋ-ಡಿ-ಗಾಮಾನು ತನ್ನ ಪಯಣಕ್ಕೆ ಬೇಕಾದ ಸಿಹಿನೀರು, ಸೌದೆಗಳನ್ನು ಶೇಖರಿಸಿ ಯುರೋಪಿನತ್ತ ಹೊರಟನು.

ವಿವಿಧ ಹೆಸರು

ಶತಮಾನಗಳಲ್ಲಿ ಈ ಕುರ್ವೆಯನ್ನು (ದ್ವೀಪವನ್ನು) ವಿವಿಧ ಹೆಸರುಗಳಿಂದ ಗುರುತಿಸಲಾಗುತ್ತಿದೆ. ಆರ್ಯದೇವಿಯ ಸ್ಮರಣಾರ್ಥವಾಗಿ "ಆರ್ಯ ದ್ವೀಪ" ಎಂದು ಕರೆದರೂ ನಾಲಿಗೆ ಹೊರಳದ ರೋಮ, ಗ್ರೀಸ್‌ಗಳು ನಾವಿಕರ ಬಾಯಲ್ಲಿ ಅಪಭ್ರಂಶಗೊಂಡಿರಬೇಕು. ಕೆಲವರು "ಅಂಜನಿ ದ್ವೀಪ" ವೆಂದರೆ ಇನ್ನು ಕೆಲವರು "ಆಜ್ಯದ್ವೀಪ"ವೆಂದರು. ಮಾಪಿಳ್ಳೆಗಳು ಇಲ್ಲಿ ವಾಸಮಾಡಲಾರಂಭಿಸಿದಾಗ ಅವರು ಮಲೆಯಾಳಿ ಭಾಷೆಯಲ್ಲಿ ಐದು (ಅಂಜಿ) ದ್ವೀಪ (ದೀವಾ) ಎಂದು ಕರೆಯಲಾರಂಭಿಸಿದರು ಅನಂತರ ಗೋವಾದ ಪೋರ್ಚುಗೀಸರು ಇದನ್ನು ವಶಪಡಿಸಿಕೊಂಡು ಅದರ ಹೆಸರನ್ನು 'ಅಂಜದೀವ್" ಎಂದು ಮಾರ್ಪಡಿಸಿದರು. ಕ್ರಿ. ಶ. 1503ರಲ್ಲಿ ಇಟಲಿಯ ಪ್ರವಾಸಿ ಲುಡೊವಿಗೊಡಿ ವಾರ್ತೆಮಾ ಇಲ್ಲಿ ಒಂದು ದಿನ ವಿಶ್ರಮಿಸಿ ಅಂಕೋಲಾ (ಉತ್ತರಕನ್ನಡ) ಕ್ಕೆ ಪ್ರಯಾಣ ಬೆಳೆಸಿದ. ಗಾಸ್ಪೆರೊ ಬಾಲ್ಬಿ (11-4-1582)



ಪೂಜಾ ಸ್ಥಳ



ಪೋರ್ಚುಗೀಸರ ಕಲಾಮಾದರು

ಯೂ ಅಂಜುದೀವವನ್ನು ಸಂದರ್ಶಿಸಿದ್ದ. ಇಟಾಲಿಯನ್ ಪ್ರವಾಸಿ, ಪೀಟ್ರೋಡೆಲ್ಲಾವಾಲೆಯು ತನ್ನ ನಾವೆಗೆ ಅನುಕೂಲವಿದ್ದ ಜೋರಾದ ಗಾಳಿಯ ಅಭಾವವಿದ್ದುದರಿಂದ ಒಂದು ದಿನ (16-10-1623)ವನ್ನು ಇಲ್ಲಿ ಕಳೆಯಬೇಕಾಯಿತು.

ಪೋರ್ಚುಗೀಸರು ಮಾಪಿಳ್ಳೆಯರನ್ನು ಹೊಡೆದೋಡಿಸಿ ಅಲ್ಲೊಂದು ಕೋಟೆ ಕಟ್ಟಿದರು. ಒಂದು ಮೈಲಿ ಉದ್ದ ಮತ್ತು 900 ಅಡಿ ಅಗಲದ ದ್ವೀಪದ ಪೂರ್ವದಿಕ್ಕಿನಲ್ಲಿ ತೆಂಗು, ಹಲಸು ಮೊದಲಾದ ಫಲವೃಕ್ಷಗಳನ್ನು ಬೆಳೆಸಲಾರಂಭಿಸಿದರು. ಪಶ್ಚಿಮದಂಡೆಯಲ್ಲಿ ಗರಸಿನ ಭೂಮಿ ಇದೆ. ಗೋವಾ, ದೀವ, ದಮನಗಳ ಅಪರಾಧಿಗಳನ್ನು ಶಿಕ್ಷಿಸಲು ಈ ದ್ವೀಪಕ್ಕೆ ಕಳಿಸಲು ಪ್ರಾರಂಭಿಸಿದರು. ಇಲ್ಲಿಯ ಸ್ಥಳೀಯರನ್ನು ಪೋರ್ಚುಗೀಸರಿಗಿಂತ ಕೀಳೆಂದು ಪರಿಗಣಿಸಲಾಗಿದ್ದರಿಂದ ಎರಡು ಗುಂಪುಗಳಿಗೆ ಪ್ರತ್ಯೇಕ ಚರ್ಚುಗಳನ್ನು ಕಟ್ಟಿದರು. ಕ್ರಿ. ಶ. 1872ರಲ್ಲಿ ಅಲ್ಲಿ 572 ಕ್ರಿಶ್ಚಿಯನ್ ನಿವಾಸಿಗಳಿದ್ದರು. ಇವರೆಲ್ಲ ಮೀನುಗಾರಿಕೆ ಮಾಡಿ ಜೀವಿಸುತ್ತಿದ್ದರು. 1947ರಲ್ಲಿ ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡಿದ ನಂತರ ಪೋರ್ಚುಗೀಸರು ತಮ್ಮ ವಸಾಹತುಗಳಿಗೆ ಸಂಚಕಾರ ಬಂದೀತೆಂದು ಅಂಜದೀವದಲ್ಲಿ ಹೆಚ್ಚಿನ ಸೈನ್ಯವಿಟ್ಟು ಭದ್ರಪಡಿಸಿದರು. ಆಗ ಭಾರತದಲ್ಲಿ ಮದ್ಯಪಾನ ನಿರೋಧವಿದ್ದುದರಿಂದ ಲಾಭ ಪಡೆಯುವದಕ್ಕಾಗಿ ಅಲ್ಲಿ ನಾಲ್ವರು ಸೇವಕರನ್ನಿಟ್ಟು ಮದ್ಯದ ಅಂಗಡಿ ತೆಗೆದರು. ಇದರಿಂದ ಗೋವಾದ ಹೆಸರುವಾಸಿ 'ಫೆನ್ನಿ'ಯನ್ನು ಭಾರತಕ್ಕೆ ಕಳ್ಳ ಸಾಗಾಣಿಕೆ ಮಾಡಲು ತುಂಬ ಅನುಕೂಲವಾಯಿತು. ಈ ವ್ಯವಹಾರದಿಂದ ಪೋರ್ಚುಗೀಸರ ಮಾಸಿಕ ಉತ್ಪನ್ನವೇ ಒಂದೂವರೆ ಲಕ್ಷ ರೂಪಾಯಿಗಳಷ್ಟಾಗಿ ಬೊಕ್ಕಸ ಸೇರುವಂತಾಯಿತು.!

ಫ್ರೆಂಚರು ತಮ್ಮ ವಸಾಹತುಗಳನ್ನು ಗೌರವದಿಂದ ಭಾರತ ಸರ್ಕಾರಕ್ಕೆ ಒಪ್ಪಿಸಿದರು. ಪೋರ್ಚುಗೀಸರು ಮಾತ್ರ ತಮ್ಮ ವಸಾಹತುಗಳೆಲ್ಲ ಪೋರ್ತುಗಾಲದ ವಿದೇಶೀ ಅಂಗಗಳೆಂದು ಸಾರಿದರು. ಗೋವಾದಿಂದ ಅವರಿಗೆ ಲಾಭವಿಲ್ಲದಿದ್ದರೂ ಕೇವಲ ಪ್ರತಿಷ್ಠೆಗಾಗಿ ತಮ್ಮ ವಸಾಹತುಗಳನ್ನು ಬಿಟ್ಟುಕೊಡಲು ಒಪ್ಪಲಿಲ್ಲ. ಸರ್ವತಂತ್ರ ಸ್ವತಂತ್ರವಾಗಿದ್ದ ಭಾರತಕ್ಕೆ ಇದೊಂದು ಅವಮಾನಕರ ಘಟನೆಯಾಗಿ ಪರಿಣಮಿಸಿತು. ಹೀಗಾಗಿ ಕ್ರಿ. ಶ. 1961ರಲ್ಲಿ ಅಂಜದೀವದಿಂದ ಪೋರ್ಚುಗೀಸ ಸೈನಿಕರು ಭಾರತೀಯ ಮೀನುಗಾರರ ಮೇಲೆ ಗುಂಡು ಹಾರಿಸಿದ ನೆಪ ಮುಂದೆ ಮಾಡಿ ನಮ್ಮ ನೌಕಾಪಡೆ ಆಕ್ರಮಣ ನಡೆಯಿಸಿತು. ಮದ್ದುಗುಂಡು ಆಹಾರಧಾನ್ಯಗಳ ಪೂರೈಕೆ ಇಲ್ಲದ್ದರಿಂದ ಪೋರ್ಚುಗೀಜರು ಸೋಲನ್ನು ಒಪ್ಪಿಕೊಳ್ಳಲೇಬೇಕಾಯಿತು. ಗೋವಾದ ವಿಮೋಚನೆಯ ನಂತರ ದೀವ, ದಮನಗಳೊಡನೆ ಅಂಜದೀವ, ಹೊಸ ಆಡಳಿತಕ್ಕೆ ಸೇರಿತು. ಕರ್ನಾಟಕದ ಕರಾವಳಿಯಿಂದ ಕೇವಲ ಒಂದು ಕಿಲೋಮೀಟರ್ ದೂರವಿದ್ದ ಈ ದ್ವೀಪ, ದೂರವಿದ್ದ ಗೋವಾ ಸರಕಾರಕ್ಕೆ ಸೇರಿದ್ದರಿಂದ, ಅದು ಯಾರ ಸೊತ್ತೂ ಆಗದೇ ದುರ್ಗತಿಗೀಡಾಯಿತು.

ಇತಿಹಾಸ ಪ್ರಜ್ಞೆ

ಎರಡು ಸಾವಿರ ವರ್ಷಗಳವರೆಗೆ ವಿಚಾರಲಹರಿ ಹರಿಬಿಟ್ಟಿದ್ದರಿಂದ ಕರೆತಂದ ಬಿಣಗಾ ನಾವಿಕರು ಶಪಿಸುತ್ತಿರಬೇಕೆಂದು ಅವರಿಗಾಗಿ ಅತ್ತ ಹುಡುಕಾಡಿದಾಗ ಕಡಲತೀರದ ಏಕಾಂತದಲ್ಲಿ ರಹಸ್ಯವಾಗಿ ಪಿಸುಮಾತಿನ ವಿಚಾರವಿನಿಮಯ ನಡೆಸಿದ್ದು ಕಂಡಿತು ಎಂದೂ ಮದ್ದುಗುಂಡುಗಳನ್ನು ಹಾರಿಸದ ಹತ್ತಾರು ತೋಪುಗಳು ಕೋಟೆಯ ಗೋಡೆಯೊಳಗಿಂದ ತಲೆ ಹೊರಚಾಚಿ ಬಾರದ ಶತ್ರುಗಳಿಗಾಗಿ ಕಾದು ಕಾದು ಬೇಸರಿಸಿ ಜಂಗುತರಿಸಿಕೊಂಡಿದ್ದವು. ಕೋಟೆಯ ಮೈದಾನಿನಲ್ಲಿ ಇನ್ನಷ್ಟು ತೋಪುಗಳು ಅರೆ ಹೂತುಹೋಗಿದ್ದವು. ಹತ್ತಿರದಲ್ಲೇ ಮದ್ದುಗುಂಡು ಇಡುವುದಕ್ಕಾಗಿ ನಿರ್ಮಿಸಿದ ಬೊಕ್ಕತಲೆಯ ಕಟ್ಟಡ ಒಂದು ಬಿಕೋ! ಎಂದು ನಿಂತಿತ್ತು. ಇದೆಲ್ಲ ನೋಡುತ್ತಿದ್ದಂತೆ ನಮಗೆ ಇತಿಹಾಸ ಪ್ರಜ್ಞೆ ಇಲ್ಲವೆ? ಎಂಬ ಮೂಲಭೂತ ಪ್ರಶ್ನೆ ಕಾಡಹತ್ತಿತು. ಗ್ರೀಸ್ ಮತ್ತು ಇಟಲಿ ದೇಶಗಳು ತಮ್ಮ ಪ್ರತಿಯೊಂದು ಐತಿಹಾಸಿಕ ಸ್ಥಳವನ್ನು ಕಾದಿಟ್ಟು ಪ್ರವಾಸಿಗಳಿಗೆ ದರ್ಶನ ಮಾಡಿಸಿ ದೇಶದ ಆದಾಯವನ್ನು ಹೆಚ್ಚಿಸುತ್ತಿವೆ. ಎರಡನೆಯ ಮಹಾಯುದ್ಧದಲ್ಲಿ ಜರ್ಮನಿಯ ಬರ್ಲಿನ್ ನಗರ ಸಂಪೂರ್ಣ ನಾಶವಾಗಿಹೋಗಿದ್ದರೂ ಆ ಐತಿಹಾಸಿಕ ಘಟನೆ ಪ್ರತಿದಿನವೂ ನೆನಪಾಗುವಂತೆ ಬಾಂಬ ಸುರಿಮಳೆಯಿಂದ ಶಿರೋಭಾಗ ನಾಶವಾದ ಗೋಥಿಕ್ ಚರ್ಚ ಕಟ್ಟಡವನ್ನು ಸಂರಕ್ಷಿಸಿ ಇಟ್ಟಿದ್ದಾರೆ. ಹೆಚ್ಚಿನ ಇತಿಹಾಸವೇ ಇಲ್ಲದ ಅಮೇರಿಕದಲ್ಲಿಯೂ ಸಣ್ಣಪುಟ್ಟ ಸ್ಥಳಗಳನ್ನು ಪ್ರೇಕ್ಷಣೀಯವಾಗಿ ಕಾದಿರಿಸಿದ್ದಾರೆ. ಆದರೆ ಎರಡು ಸಹಸ್ರ ವರ್ಷಗಳ ಇತಿಹಾಸವಿರುವ ಅಂಜದೀವದ ಅಸ್ತಿತ್ವದ ಬಗ್ಗೆ ಎಷ್ಟು ಜನರಿಗೆ ತಿಳಿದಿದೆ?

ಅನತಿ ದೂರದಲ್ಲಿ ಲೇಡಿ ಬ್ರೋಥಾಸ್ ಚರ್ಚು ಬಿಕೋ ಎಂದು ನಿಂತಿತ್ತು. ಅದರ ರಚನೆ ನೋಡುತ್ತಿದ್ದಂತೆ ವೆಲ್ಲೆ (ಹಳೇ) ಗೋವಾದ ಸಿಸೆಕೆಥೆಡ್ರಲ್ (ಕ್ರಿ.ಶ. 1562) ನೆನಪಿಗೆ

ಬಂದಿತು. ಎರಡು ಮಹಡಿಗಳ ಕಟ್ಟಡಕ್ಕೆ ಮಂಗಳೂರು ಹಂಚುಗಳನ್ನು ಹೊದೆಸಲಾಗಿದೆ. ಬಾಗಿಲು, ಕಿಟಕಿಗಳು ಸ್ವಸ್ಥಾನದಲ್ಲಿ ಇಲ್ಲ. ಅಲ್ಲಲ್ಲಿ ಗಿಡಬಳ್ಳಿಗಳು ತಲೆ ಎತ್ತಿ ನಿಂತಿವೆ. ಒಳಗೆ ಕಾಲಿಡುತ್ತಿದ್ದಂತೆ ದನಕರುಗಳ ಸೆಗಣಿ ದುರ್ನಾತ ತಡೆಹಿಡಿಯಿತು. ಪೋರ್ಚುಗೀಸರು ಒಮ್ಮಿಂದೊಮ್ಮೆ ಈ ದ್ವೀಪದಿಂದ ಪಲಾಯನ ಮಾಡಬೇಕಾಗಿ ಬಂದದ್ದರಿಂದ ದನಕರುಗಳೆಲ್ಲ ಅಲ್ಲಿಯೇ ಉಳಿದವು. ಅವು ದಿನವೆಲ್ಲ ದ್ವೀಪದಲ್ಲಿ ಅಲೆದು ರಾತ್ರಿಯನ್ನು ಕಳೆಯುವುದುಕ್ಕಾಗಿ ಚರ್ಚಿನ ಆಶ್ರಯ ಪಡೆಯುತ್ತವೆ. ದೇವ-ದೇವತೆಗಳು ತೈಲಚಿತ್ರ ಉಬ್ಬುಚಿತ್ರಗಳಿಂದ ಅಲಂಕರಿಸಬೇಕಾದ ಗೋಡೆಗಳನ್ನೆಲ್ಲ ವಾತ್ಸ್ಯಾಯನನನ್ನೂ ಬೆಚ್ಚಿ ಬೀಳಿಸುವಂತಹ ಕಾಮಸೂತ್ರಗಳನ್ನು ಸಚಿತ್ರವಾಗಿ ಅಲಂಕರಿಸಿದೆ ! ಇನ್ನು ಅಲ್ಪಸ್ವಲ್ಪ ಉಳಿದ ಪ್ರಾರ್ಥನಾ ಸ್ಥಾನದ ಅಲಂಕರಣ ಪೋರ್ಚುಗೀಸ ಮಾದರಿಯದಾಗಿದೆ. ಇಂಥದೇ ವಿನ್ಯಾಸವನ್ನು ಹಳೇ ಗೋವಾದ ಬೆಸಿಲಿಕಾ ಆಫ್ ಬೋನ್ ಜೀಸಸ್ ಚರ್ಚದಲ್ಲಿ ಕಾಣಬಹುದಾಗಿದೆ. ಅತ್ಯಂತ ದಕ್ಷತೆಯಿಂದ ಚಿತ್ರಿಸಿದ ಕೊರಡು ಪ್ರತಿಮೆಗಳು ಮಾತ್ರ ಉಳಿದುಕೊಂಡಿವೆ. ತೈಲಚಿತ್ರಗಳು ಹಸ್ತಿದಂತ, ಉಬ್ಬುಚಿತ್ರಗಳು ಮತ್ತು ಇನ್ನಿತರ ಬೆಲೆಬಾಳುವ ವಸ್ತುಗಳು ಮಾಯವಾಗಿ ಅದೆಷ್ಟು ಕಾಲವಾಯಿತೊ! ಪೋಲಿಗಳು ಇಂತಹವುಗಳ ಮೇಲೆಲ್ಲ ತಮ್ಮ ಶಾಸನವನ್ನು ಬರೆದುಕೊಂಡಿದ್ದಾರೆ. ದಂಡೆಗುಂಟ ಇದ್ದ ಇನ್ನೊಂದು ಚರ್ಚಿನ ಸ್ಥಿತಿ ಇನ್ನೂ ಚಿಂತಾಜನಕ.

ಕಳವಳ

ಹಿಂದೊಮ್ಮೆ ರಾಜಮಾರ್ಗಗಳಿದ್ದ ದ್ವೀಪದಲ್ಲಿ ಇಂದು ಕಾಲು ದಾರಿಗಳೂ ಇಲ್ಲದ್ದರಿಂದ ಎತ್ತ ಹೋಗಬೇಕೆಂದು ತಿಳಿಯದಾಗುತ್ತದೆ. ಕಾಡು ಗಿಡ-ಗಂಟೆಗಳು ಯಥೇಚ್ಛವಾಗಿ ಬೆಳೆದುನಿಂತಿವೆ. ಕೀಟಸಂಗ್ರಹಕಾರನಿಗೆ ಒಂದಿಷ್ಟೂ ಕೊರತೆಯೆನಿಸದಷ್ಟು ಬಗೆಬಗೆಯ ಕೀಟಗಳಿವೆ. ಅಂದಿನ ತೆಂಗಿನ ತೋಪು ಇಂದೂ ತಲೆಯೆತ್ತಿ ನಿಂತಿದೆ. ಆದರೆ ಅಲ್ಲಿ ಹೂ, ಕಾಯಿ, ಒಂದೂ ಇಲ್ಲ! ಶತಶತಮಾನಗಳ ಕಾಲ ವಿಶ್ವಸಂಚಾರಿಗಳಿಗೆ ನೀರಿನ ಸರಬರಾಜು ಮಾಡಿದ ಕೊಳದಿಂದ ಒಂದು ಬೊಗಸೆ ನೀರೂ ಕುಡಿಯಲಿಕ್ಕಾಗದಷ್ಟು ಕೊಳಚೆಯಾಗಿದೆ. ಅಲ್ಲಿ ಹೆಚ್ಚೆಚ್ಚು ಅಲೆದಾಡಿದಂತೆ ಇನ್ನಷ್ಟು ಕಳವಳಪಡುವಂತೆ ಆಯಿತು. ಪ್ರವಾಸಿಗಳಿಗೆ ಬೇಕಾಗುವ ಸವಲತ್ತುಗಳನ್ನು ಕಲ್ಪಿಸಲಾಗದಿದ್ದರೆ ಹೋಗಲಿ, ದ್ವೀಪವನ್ನೇ ಕಳ್ಳಕಾಕರಿಗೆ ಒಪ್ಪಿಸಬೇಕೆ? ನಾವೆಯಲ್ಲಿ ಬಂದ ನಮ್ಮನ್ನು ಕಂಡು ಯಾರೋ ಸರಕಾರಿ ಅಧಿಕಾರಿಗಳಿರಬೇಕು, ಎಂದು ಅಲ್ಲಿದ್ದವರು ಆತಂಕಪಟ್ಟಿದ್ದರು. ಕರೆತಂದ ನಾವಿಕರೂ ಅಲ್ಲಿಯವರ ಲಾಭದಾಯಕ ವ್ಯಾಪಾರದಲ್ಲಿ ಪಾಲುದಾರರೆಂದು ಅರಿಯಲು ಹೆಚ್ಚು ಶ್ರಮಿಸಬೇಕಾಗಲಿಲ್ಲ. ಅವರೆಲ್ಲ ಗೋವಾದಿಂದ ನ್ಯಾಯಬದ್ಧವಾಗಿ ಫೆನ್ನಿಯನ್ನು ಅಂಜದೀವಕ್ಕೆ ಸಾಗಿಸುತ್ತಾರೆ. ನಂತರ ಯಂತ್ರಚಾಲಿತ ಮೀನುನಾವೆಗಳಲ್ಲಿ ಕಾರವಾರ, ಅಂಕೋಲಾ, ಕುಮಟಾ, ಭಟಕಳ, ಮಲ್ಪೆ, ತನಕ ಅಕ್ರಮವಾಗಿ ಪೂರೈಸುತ್ತಾರೆ. ಅಲ್ಲದೇ ಹೊರದೇಶಗಳಿಂದ ಬರುವ ಕಳ್ಳಸರಕುಗಳನ್ನು ಇಲ್ಲಿಂದಲೇ ವಿತರಣೆ ಮಾಡಲಾಗುತ್ತದೆ. ಗೋವಾದ ಪೋಲೀಸರು ಅಲ್ಲಿ

ಬರುವುದಿಲ್ಲ. ಕರ್ನಾಟಕ ಪೋಲೀಸರು ಅಲ್ಲಿ ಹೋಗುವಂತಿಲ್ಲ. ಕಳ್ಳಕಾಕರಿಗೆ ಇದಕ್ಕಿಂತ ಬೇರೊಂದು ಸ್ವರ್ಗ ಇದ್ದೀತೆ ?

ಈ ದ್ವೀಪವನ್ನು ಕರ್ನಾಟಕ ಸರಕಾರ ಪಡೆದು ಪ್ರವಾಸಿ ಆಕರ್ಷಣ ಕೇಂದ್ರವನ್ನಾಗಿ ಏಕೆ ಮಾರ್ಪಡಿಸಬಾರದು ? ರಾಷ್ಟ್ರೀಯ ಹೆದ್ದಾರಿಯಿಂದ ಅಂಜದೀವ್ ಕೇವಲ 2ಕಿಲೋಮೀಟರ್ ದೂರದಲ್ಲಿದೆ. ಬೇಕಾದಲ್ಲಿ ಕೂರ್ಮಗಡ. ದೇವಗಡಗಳನ್ನು ಇದರೊಂದಿಗೆ ಸೇರಿಸಿಕೊಳ್ಳಬಹುದು. ಜಲಕ್ರೀಡೆ ನೌಕಾವಿಹಾರ, ಈಜುಗಾರಿಕೆ, ಮತ್ಸ್ಯ ಕ್ರೀಡೆಯ ಸವಲತ್ತುಗಳನ್ನು ಕಲ್ಪಿಸಿಕೊಡಬಹುದು. ಇದಕ್ಕೆಲ್ಲ ವಿಪರೀತ ಖರ್ಚು ಬರುತ್ತದೆ.ಎಂದೆನಿಸಿದರೆ ಜನರಿಗೆ ಅಲ್ಲಿ ವಾಸಿಸಲು ಅನುಮತಿಯನ್ನಾದರೂ ಕೊಡಬಹುದು. ನೂರು ಕುಟುಂಬಗಳು ಅಲ್ಲಿ ಲಭ್ಯವಿರುವ ಸವಲತ್ತುಗಳಿಂದ ಉಪಜೀವನ ನಡೆಸಬಹುದು. ಏನೂ ಮಾಡದೇ ಕೈಕಟ್ಟಿ ಕೂಡ್ರುವುದೇ ನಮ್ಮವರ ವೈಶಿಷ್ಟ್ಯವೆಂದು ತೋರುತ್ತದೆ!

• • •

(ಕಾಮತರ ಈ ಲೇಖ ಪ್ರಕಟವಾದದ್ದು 'ಸುಧಾ' ವಾರಪತ್ರಿಕೆಯ 1985ರ ಜೂನ 22ನೇ ದಿನಾಂಕದ ಸಂಚಿಕೆಯಲ್ಲಿ 1987ರಲ್ಲಿ, ಕಾರವಾರದ ಸೀಬರ್ಡ, ನೌಕಾಪಡೆ ಯೋಜನೆಯಡಿ ಬಿಣಗಾದಿಂದ ಅಂಕೋಲಾವರೆಗಿನ ಕರಾವಳಿ ಭೂಮಿಯನ್ನು ಕೇಂದ್ರಸರಕಾರ ಸ್ವಾಧೀನಪಡಿಸಿಕೊಂಡಿತು. ಬಳಿಕ ಅಲ್ಲಿಂದ 15 ವರ್ಷಗಳ ಕಾಲ ಅಂಜದೀವ್‌ದ ಚರ್ಚಿನಲ್ಲಿ ಭಾನುವಾರದಂದು ಪ್ರಾರ್ಥನೆಗೆ ಅವಕಾಶ ಮಾಡಿಕೊಡಲಾಗಿತ್ತು. 2002ರಿಂದ ಅಂಜದೀವ್ ದ್ವೀಪ, ಸಂಪೂರ್ಣ ಸುರಕ್ಷಿತ ತಾಣವಾಗಿ ಮಾರ್ಪಟ್ಟಿದೆ. ಕರಾವಳಿಯ ಆ ಪ್ರದೇಶದಲ್ಲಿ ಪ್ರವೇಶ ಪೂರ್ಣತಃ ನಿಷೇಧಿಸಲ್ಪಟ್ಟಿದೆ.

ಐತಿಹಾಸಿಕವಾಗಿದ್ದ ಅಂಜದೀವ್ ಕಾಯಂ ಇತಿಹಾಸಕ್ಕೆ ಸೇರಿಹೋಯಿತು !

೧೩. ಕಣ್ಮರೆಯಾಗುತ್ತಿರುವ ಪ್ರಾಣಿಸಂಪತ್ತು

ನಮ್ಮದು ಜಗತ್ತಿಗೇ ಪ್ರಾಣಿದಯೆ, ಅಹಿಂಸೆ ಬೋಧಿಸಿದ ದೇಶ. ನಾವು ಧಾರ್ಮಿಕವಾಗಿ ಮಾಂಸಾಹಾರ ತ್ಯಜಿಸಿ ಶಾಕಾಹಾರವನ್ನು ಕೈಕೊಂಡವರು. ಗೋಮಾತೆಗೆ ಕೈಮುಗಿದು, ಕಪಿಗಳಿಗೆ ಹಣ್ಣು, ಇರುವೆಗೆ ಸಕ್ಕರೆ ತಿನಿಸುವಷ್ಟು ಪ್ರಾಣಿ ದಯೆಯುಳ್ಳವರು. ಸಾಕುಪ್ರಾಣಿಗಳಾಗಲಿ ಇತರ ಪ್ರಾಣಿಗಳಾಗಲಿ ಸತ್ತರೆ ನಾವು ಬಹಳ ದುಃಖಪಡುತ್ತಿರಬಹುದು.

ಆದರೆ ಪ್ರಾಣಿದಯೆ ಇಷ್ಟಕ್ಕೇ ಮುಕ್ತಾಯವಾಗಲಿಲ್ಲ. ವನ್ಯ ಪಶು -ಪಕ್ಷಿಗಳೂ ಮನುಷ್ಯನ ತಿಳಿವಳಿಕೆಯಿಂದ ಕೂಡಿದ ರಕ್ಷಣೆಗೆ ಅಷ್ಟೇ ಅರ್ಹವಾಗಿವೆ. ನಮ್ಮ ಜನಸಾಮಾನ್ಯರಿಗಾದರೋ ಕಾಡು ಪ್ರಾಣಿಗಳ ಬಗ್ಗೆ ಸೋಜಿಗ, ಆದರಗಳ ಬದಲಾಗಿ ಭಯ -ಅಜ್ಞಾನಗಳಿರುವದರಿಂದ ಅವನ್ನು ಕೊಂದರೆ ಪುಣ್ಯದ ಕೆಲಸವೆಂದು ಅವರ ಕಲ್ಪನೆ. ಹುಲಿ, ಸಿಂಹ, ಚಿರತೆ, ನರಿ, ತೋಳ, ಸರ್ಪ, ಹೆಬ್ಬಾವು ಮೊದಲಾದ ಪ್ರಾಣಿವರ್ಗವನ್ನು ಸಂಪೂರ್ಣ ನಾಶ ಮಾಡಿದರೆ ನೊಂದುಕೊಳ್ಳುವ ಎಷ್ಟು ಜನ ಭಾರತೀಯರು ನಮ್ಮಲ್ಲಿದ್ದಾರೆ? ನಿಸರ್ಗದ ಪಕ್ಷಿವರ್ಗ, ಪ್ರಾಣಿವರ್ಗಗಳಲ್ಲಿ ಪರಸ್ಪರ ಅವಲಂಬನವಿದೆ, ನಿಯಮಬದ್ಧವಾದ ಆಗು-ಹೋಗುಗಳಿವೆ. ಈ ತಿಳಿವಳಿಕೆ ಇರುವವರು ವಿರಳ. ಜನ ಸಂಖ್ಯೆ ಹೆಚ್ಚುತ್ತ, ಹೆಚ್ಚು ಧಾನ್ಯ ಬೆಳೆದಾಗ ಕೀಟಗಳೂ ಹೆಚ್ಚಾಗಿ ಬೆಳೆಯುತ್ತವೆ. ಕೀಟವರ್ಗ, ಬೆಳೆಗಳನ್ನು ನಿಯಂತ್ರಣದಲ್ಲಿ ಇಟ್ಟಂತೆ ಕೀಟಗಳನ್ನು ಕಪ್ಪೆಗಳು ನಿಯಂತ್ರಣದಲ್ಲಿಡುತ್ತವೆ. ಹೊಲದಲ್ಲಿ ಇಲಿಗಳು ಹೆಚ್ಚಾದಾಗ ಹಾವುಗಳು ಅವನ್ನು ನಿಯಂತ್ರಣದಲ್ಲಿ ಇಡುವಂತೆ ಉರಗವರ್ಗ ಹೆಚ್ಚಾದಾಗ, ಮುಂಗುಲಿಗಳು ಅವನ್ನು ನಿಯಂತ್ರಿಸುತ್ತವೆ. ವಿದೇಶೀ ವಿನಿಮಯಗಳಿಸಲೆಂದು ದೊಡ್ಡ ಪ್ರಮಾಣದಲ್ಲಿ ಕಪ್ಪೆಗಳನ್ನು ಹಿಡಿದರೆ ಅಥವಾ ಭಯಗ್ರಸ್ತರಾಗಿ ಹಾವುಗಳನ್ನು ಕೊಂದರೆ ಬೆಳಗಳು ಕೀಟ-ಇಲಿಗಳಿಗೆ ತುತ್ತಾಗಿ ವಿಪರೀತ ಹಾನಿಗೊಳಗಾಗಬೇಕಾಗುವದು. ಅರಣ್ಯದಲ್ಲಿ ಇದಕ್ಕೂ ತೊಡಕಾದ ನಿಸರ್ಗದ ನಿರಂತರ ವ್ಯವಹಾರ ನಡೆದಿರುತ್ತದೆ. ಇದನ್ನು ಅಧಿಕಾರಿವರ್ಗವಾಗಲಿ ಅರಣ್ಯ ವಿಜ್ಞಾನಿಗಳಾಗಲಿ ಸರಿಯಾಗಿ ಅರ್ಥಮಾಡಿ ಕೊಳ್ಳದ್ದರಿಂದ ನಮ್ಮ ಪ್ರಾಣಿಸಂಪತ್ತು, ಹೇಗೆ ನಾಶವಾಗುತ್ತದೆ ? ಎಂದು ಸಾಮಾನ್ಯರಿಗೆ ತಿಳಿಸಿಹೇಳಲು ಅಸಮರ್ಥರಿದ್ದಾರೆ.

ಕಾಡು, ಕೇವಲ ದಟ್ಟವಾದ ವನರಾಜಿಯ ಸಮುದಾಯವಲ್ಲ. ಅಲ್ಲಿಯ ಪ್ರತಿಯೊಂದು ಚಟುವಟಿಕೆಯೂ ಕಾಡಿನ ಜೀವನದ ಅಂಗವಾಗಿರುತ್ತದೆ. ನಮ್ಮ ಕಾಲ್ಪನಿಕ ಅರಣ್ಯದಲ್ಲಿ ವಿವಿಧ ಜಾತಿಯ ಕೆಲವು ಮರಗಳಿವೆ. ಸಣ್ಣದೊಂದು ಮಡುವು ಇದೆ ಎಂದು ಇಟ್ಟುಕೊಳ್ಳೋಣ. ಮರಗಳು ವಿವಿಧ ಜಾತಿಯ ಕೀಟ, ಪಶು, ಪಕ್ಷಿಗಳಿಗೆ ಆಶ್ರಯ ಕೊಡುತ್ತವೆ. ಉದುರಿದ ಪರ್ಣಗಳು, ಸತ್ತ ಪಾಣಿಗಳು ಮುಂತಾದವನ್ನು ಕ್ರಿಮಿಗಳು ಆಕ್ರಮಿಸಿ ಮಣ್ಣು, ಮಡುವಿನ ಕೆಳಗೆ ಗೊಬ್ಬರ ಸಿಗುವಂತೆ ಮಾಡುತ್ತವೆ. ಈ ಕ್ಷಾರಗಳ ಪ್ರಮಾಣ ಅವಲಂಬಿಸಿ ಸಸ್ಯಗಳು



ಮೂರು ದಶಕಗಳ ಹಿಂದಿನ ಹುಲಿ ಬೇಟೆಯ ಚಿತ್ರವೊಂದು

ಬೆಳೆಯುತ್ತವೆ. ಸಸ್ಯಾಹಾರಿಗಳಾದ ಮೀನು. ಕೀಟ, ಇನ್ನಿತರ ಪ್ರಾಣಿಗಳು ಇವನ್ನು ತಿಂದು ಬೆಳೆದರೆ ದೊಡ್ಡ ಮೀನುಗಳಿಗೆ ಅವು ಆಹಾರವಾಗುತ್ತವೆ. ಬಕ ಮುಂತಾದ ಪಕ್ಷಿಗಳು ಈ ಮೀನುಗಳನ್ನು ಭಕ್ಷಿಸಿದರೆ ಬಕಗಳನ್ನೆ ಆಹಾರವಾಗಿ ಸ್ವೀಕರಿಸುವ ಪ್ರಾಣಿವರ್ಗವಿದೆ. ಅದರಂತೆ ನೆಲದ ಮೇಲೆ ಮೊಲ, ಜಿಂಕೆಗಳು ಹುಲ್ಲು - ನಾರು, ಮಣ್ಣಿನಲ್ಲಿ ಅಸಂಖ್ಯಾತ ಕ್ರಿಮಿ-ಕೀಟಗಳು, ಇರುವದು ಅತಿ ಅವಶ್ಯ ಎಂದಂತಾಯಿತು. ಹೀಗೆ ಪರೋಕ್ಷ ಪರಾವಲಂಬನದಿಂದ ಆಹಾರದ ಸರಪಳಿ ನಿರ್ಮಿತವಾಗುವದು. ಈ ಸರಪಳಿಯ ಒಂದು ಕೊಂಡಿ ಕಳಚಿದರೆ ಎಲ್ಲವೂ ಅಸ್ತವ್ಯಸ್ತವಾಗುವದೆಂದು ಬೇರೆ ಹೇಳಬೇಕಾಗಿಲ್ಲ.

ಪ್ರಾಣಿವರ್ಗದ ಬಗ್ಗೆ ನಮಗಿರುವ ಅಕ್ಕರೆಯನ್ನು ಪಾಶ್ಚಾತ್ಯರೊಂದಿಗೆ ಹೋಲಿಸಿಕೊಂಡಾಗ ಇದ್ದ ಮಹದಂತರದ ಅರಿವಾಗುವದು. ಅವರು ನಿಸರ್ಗಪ್ರಿಯರಿದ್ದಂತೆ ಪ್ರಾಣಿಪ್ರಿಯರು. ತಮ್ಮ ಬಿಡುವಿನ ಸಮಯವನ್ನು, ವಿನೋದಾವಳಿಗಳಿಗೆ ಮೀಸಲಿಟ್ಟ ಹಣದ ಅಂಶವನ್ನು ಪಶು ಪ್ರಾಣಿಗಳನ್ನು ನೋಡಲಿಕ್ಕೆ, ಸಾಕಲಿಕ್ಕೆ ಮತ್ತು ಬೇಟೆಗಾಗಿ ಎಂದು ಉಪಯೋಗಿಸುತ್ತಾರೆ. ಮಕ್ಕಳು ಮೀನು, ಆಮೆ, ಮೊಸಳೆಮರಿ, ವಿಷರಹಿತ ಹಾವು ಮುಂತಾದವನ್ನು ಸಾಕಿ ಆನಂದಿಸುತ್ತಾರೆ. ಪ್ರಾಣಿ ಪ್ರೀತಿ ಹೆಚ್ಚಿಸಲು, ಸಾಕುಪ್ರಾಣಿಗಳನ್ನು ಮಾರುವ ಅಂಗಡಿಗಳನ್ನು ಇಡುತ್ತಾರೆ. ಪ್ರಾಣಿಸಂಗ್ರಹಾಲಯಗಳೂ ಮನೆಗೆ ಒಯ್ಯಲು ಪ್ರಾಣಿಗಳನ್ನು ಪೂರೈಸುವವಲ್ಲದೇ ಅವಕ್ಕೆ ಒಂದುವಾರಕ್ಕೆ ಬೇಕಾಗುವ ಆಹಾರ ಅದರ ಯೋಗಕ್ಷೇಮದ ಬಗೆಗಿನ ವಿವರಗಳ ಟಿಪ್ಪಣಿಯನ್ನೂ ಕೊಡುತ್ತಾರೆ. ವಸಂತಕಾಲದಲ್ಲಿ ಪಕ್ಷಿವೀಕ್ಷಕರು ದೂರ ದೂರದಿಂದ ನೆರೆಯುತ್ತಾರೆ. ದೂರ ದರ್ಶಕ, ಆಹಾರ, ಬಟ್ಟೆಬರೆಗಳನ್ನು

ಕಾರಿನಲ್ಲಿ ತುಂಬಿಕೊಂಡು, ಹಕ್ಕಿಗಳು ಹಾರುವ ಜಾಡನ್ನು ಹಿಡಿದ ಲಾಭ ಪಡೆಯುತ್ತಾರೆ. ಎಲ್ಲಿ - ಯಾವತ್ತು ಪಕ್ಷಿಗಳು ಹಾರಿದವು? ಅವುಗಳ ಸಂಖ್ಯೆ ಎಷ್ಟಿತ್ತು? ಎಂದೆಲ್ಲ ವಿವರಗಳನ್ನು ಪತ್ರಿಕೆಗಳು ಪ್ರಕಟಿಸುತ್ತವೆ. ಪಕ್ಷಿ ಪ್ರಾಣಿಗಳ ಕುರಿತಾದ ಪತ್ರಿಕೆಗಳೇ ಎಷ್ಟೋ ಹೊರಡುತ್ತಿವೆ. ಅಮೇರಿಕದ ಅರಣ್ಯಖಾತೆಯ ಉಚ್ಚ ಅಧಿಕಾರಿಯೊಬ್ಬರು ಭಾರತಕ್ಕೆ ಬಂದಾಗ ಸಿಮ್ಲಾದ ಪರಿಸರದಲ್ಲಿ ಕಾಣಸಿಗುತ್ತಿದ್ದ ಪಾತರಗಿತ್ತಿಗಳ ವೈವಿಧ್ಯಕ್ಕೆ ಬೆರಗಾಗಿ ಎಂದಾದರೊಂದು ದಿನ ತಮಗೆ ನಿವೃತ್ತಿಯಾಗಿ, ಧನಸಿಗುವಂತಾದಾಗ ಸಿಮ್ಲಾಕ್ಕೆ ಬಂದು ಪಾತರಗಿತ್ತಿಗಳ ನಿರೀಕ್ಷಣೆ ಮತ್ತು ಸಂಗ್ರಹಗಳಲ್ಲಿ ತಮ್ಮ ಶೇಷಾಯುಷ್ಯ ಕಳೆಯುವದಾಗಿ ಉದ್ಗರಿಸಿದ್ದರು.

ಬೇಟೆಯೆಂದರೆ ಅಷ್ಟೇ ಪ್ರೀತಿ ಅವರಿಗೆ. ಆದರೆ ಈ ಪ್ರಾಣಿಗಳ ಸಂಖ್ಯೆ, ಆಹಾರ ಪೂರೈಕೆಯ ಪರಿಮಿತಿಗಳನ್ನು ಅಭ್ಯಸಿಸಿ, ಅವುಗಳ ಸಂಖ್ಯೆ ಹೆಚ್ಚಾದಂತೆ ಮಾತ್ರ ಬೇಟೆಗೆ ಅವಕಾಶ ಕೊಡಲಾಗುತ್ತದೆ. ನಿಯಮಗಳನ್ನು ಮೀರಿದವರಿಗೆ ಶಿಕ್ಷೆಯಿದೆ. ಅತಿ ಶೀತವಾದಾಗ ಆಹಾರದ ಕೊರತೆಯಾಗದಂತೆ, ಪ್ರಾಣಿಗಳಿಗೆ ದೊರೆಯುವಂತೆ ಎತ್ತರ ಗಿಡಗಳ ಟೊಂಗೆಗಳನ್ನು ಕಡಿದು ಅರಣ್ಯದಲ್ಲಿ ಹರಡಿರುತ್ತಾರೆ. ಕಾಡು ಕಡಿದಾಗ ಪ್ರಾಣಿ-ಜೀವಿಗಳು ಚದರುತ್ತವೆ, ಇಲ್ಲವೇ ನಾಶವಾಗುತ್ತವೆ, ಎಂಬುದು ಸರ್ವವಿದಿತ. ಆದ್ದರಿಂದ ಕಡಿದ ಅರಣ್ಯದಲ್ಲಿ ಮತ್ತೆ ಗಿಡ ಮರ ನಟ್ಟು ಪ್ರಾಣಿಗಳಿಗೆ ಆತಂಕವಾಗದಂತೆ ನೋಡಿ ಕೊಳ್ಳುತ್ತಾರೆ. ಪರ್ಣಗಳಿಲ್ಲದ ಕಾಡಿಗೆ, ಕಾಡುಕಿಚ್ಚಿನ ಭಯ ತುಂಬ. ಆದ್ದರಿಂದ ಎತ್ತರದ ಗೋಪುರಗಳನ್ನು ನಿರ್ಮಿಸಿ ನಿರೀಕ್ಷಕರನ್ನು ಇಟ್ಟಿರುತ್ತಾರೆ. ಕಾಡುಕಿಚ್ಚು ಕಾಣಿಸಿಕೊಂಡಾಕ್ಷಣ ಅಗ್ನಿಶಾಮಕ ದಳದವರು ವಿಮಾನಾರೂಢವಾಗಿ, ಪ್ಯಾರಾಚೂಟ್‌ನಿಂದ ಇಳಿದು, ಹತ್ತಿರದ ಮರಗಳನ್ನು ಕಡಿದು, ನೊರೆಯಿಂದ ಅಗ್ನಿಶಮನ ಮಾಡುತ್ತಾರೆ. ಈ ಮುಂಜಾಗ್ರತೆಯಿಂದಾಗಿ ಬೆಲೆಯುಳ್ಳ ಅರಣ್ಯದ ಜೊತೆಗೆ ಪಶು ಪ್ರಾಣಿಗಳ ಸಂರಕ್ಷಣೆಯಾಗುವದು. ಕಾಡು ಕಿಚ್ಚಿಗೆ ಆಹುತಿಯಾದ ಭೂಮಿ, ಮಳೆ-ಗಾಳಿ ಬಿಸಿಲಿಗೆ ಸತ್ವಹೀನವಾಗುವದರಿಂದ ಕೂಡಲೇ ನೀರು ಹನಿಸಿ, ಗೊಬ್ಬರ ಹರಿವಿ ಸಸಿಗಳನ್ನು ನೆಟ್ಟುಬಿಡುತ್ತಾರೆ.

ಈ ಹಿನ್ನಲೆಯಲ್ಲಿ, ನಮ್ಮ ದೇಶದ ಪ್ರಾಣಿ ರಕ್ಷಣಾಕಾರ್ಯ ಎಷ್ಟು ಅತ್ಯಲ್ಪವೆಂದು ಅರಿವಾಗುವದು. ಪ್ರಾಣಿ ಸಂಪತ್ತು ರಕ್ಷಿಸಿ! ಎಂಬ ಕೂಗು ಎಲ್ಲೆಡೆ ಕೇಳಬರುತ್ತಿದ್ದರೂ, ರಾಜ್ಯ-ಕೇಂದ್ರ ಸರಕಾರಗಳು ಕಾನೂನುಗಳನ್ನು ಜಾರಿಯಲ್ಲಿ ತರುತ್ತಿದ್ದರೂ, ಹಣದ ಹೊಳೆ ಹರಿಯುತ್ತಿದ್ದರೂ, ಅದರ ಪ್ರಯೋಜನವಾಗುತ್ತಿಲ್ಲ. ಹುಲಿರಾಯನ ಬಳಗವೊಂದನ್ನು ರಕ್ಷಿಸಲಿಕ್ಕೇ ಆರು ಕೋಟಿ ರೂಪಾಯಿಗಳನ್ನು ಸರಕಾರ ಖರ್ಚು (ಬಳಸುವದಲ್ಲ!) ಮಾಡಲಿದೆಯಂತೆ. ಇಷ್ಟು ಸಾಲದ್ದಕ್ಕೆ ಸಂಯುಕ್ತ ರಾಷ್ಟ್ರ ಸಂಘದ ನೆರವನ್ನೂ ಕೋರಲಾಗಿದೆ. ವನ್ಯಮೃಗ ಸಪ್ತಾಹವನ್ನು ತಪ್ಪದೇ ಆಚರಿಸಲಾಗುತ್ತದೆ. ಆದರೆ ಯಾವ ವಿಧದಲ್ಲಿ ಅದನ್ನು ಉಪಯೋಗಿಸಲಾಗುತ್ತದೆ ? ಎಂದು ವಿವರಿಸುವ ಗೋಜಿಗೆ ಯಾರೂ ಹೋಗುವದಿಲ್ಲ. ಈ ಹಣದ ಹೆಚ್ಚಿನ ಭಾಗ ಬೇರೆ ಬೇರೆ ವಿಭಾಗದ ಅಧಿಕಾರಿಗಳನ್ನು ನೇಮಿಸಿಕೊಳ್ಳುವುದರಲ್ಲಿ ವ್ಯಯವಾಗುವದೆಂದು ಸರಕಾರಿ ಆಗು - ಹೋಗುಗಳನ್ನು ಬಲ್ಲವರಿಗೆ ತಟ್ಟನೆ ತಿಳಿಯುತ್ತದೆ. ಬೇಟೆಗಾರರಿಗೆ, ಕಳ್ಳಸಾಗಾಟಗಾರರಿಗೆ ಹಲವೊಂದು ಮೃಗಗಳು ಆಹುತಿಯಾಗುತ್ತಿರಬಹುದು.

ಆದರೆ ಅಧಿಕಾರಿಗಳ ಅಲಕ್ಷ್ಯಕ್ಕೆ, ಅಜ್ಞಾನಕ್ಕೆ ಬಹು ಸಂಖ್ಯಾತ ಪ್ರಾಣಿಗಳು ತುತ್ತಾಗುತ್ತಿವೆ, ಎಂಬುದೂ ಅಷ್ಟೇ ನಿಜ.

ನಮ್ಮ ದೇಶದಲ್ಲಿ ಶೇಕಡಾ ೪೬ ರಷ್ಟು ಭೂಮಿ ಕೃಷಿಗೆ ಬಳಸುತ್ತಿದ್ದರೂ ವೈಜ್ಞಾನಿಕ ರೀತಿಯಲ್ಲಿ ಕೃಷಿಯಾಗದ್ದರಿಂದ ಬೆಳೆಯುತ್ತಿರುವ ಜನತೆಗೆ ಆಹಾರ ಸಾಲುತ್ತಿಲ್ಲ. "ಬಡವರು" ಆರಣ್ಯ ಪ್ರದೇಶ ಕಡಿದು ಹೊಲಗಳನ್ನು ಮಾಡಿದರೆ ಅದು (ಮತಗಳ ದೃಷ್ಟಿಯಿಂದ) ಉಗ್ರಕ್ರಮಕ್ಕೆ ಒಳಗಾಗುತ್ತಿಲ್ಲ. ಅರಣ್ಯ ಕಡಿಮೆಯಾದಂತೆ ಅರಣ್ಯ ಪ್ರಾಣಿಗಳು ಕಡಿಮೆಯಾಗುವದೂ ಸ್ವಾಭಾವಿಕ. ನಮ್ಮ ಜೀವಮಾನದಲ್ಲಿಯೇ ಕಾಡಿಗೆ ಹೆಸರಾದ ಪ್ರದೇಶಗಳಲ್ಲಿ ಇಂದು ಕಾಡಿಲ್ಲ! ಭರದಿಂದ ಬೆಳೆಯುತ್ತಿರುವ ಜನಸಂಖ್ಯೆ, ನಗರಗಳು, ಉದ್ದಿಮೆಗಳು, ಕಾಡನ್ನು ಹಿಂದಕ್ಕೆ ಅಟ್ಟಿವೆ. ಕಾಡು ಕಡಿದಾಗ ಅದರ ಪರಿಣಾಮ ಸುತ್ತಲ ಭೂಮಿಯಲ್ಲಿ ಸಹಜವಾಗಿಯೇ ಆಗುವದು. ಮಳೆ ಕಡಿಮೆಯಾದ ವರ್ಷ ಬರಗಾಲದಿಂದ ನರಳುವ ಮಾನವರ ಅಂಕಿ ಸಂಖ್ಯೆಗಳೇ ಗೊತ್ತಾಗದಿರುವಾಗ ಪಶು-ಪ್ರಾಣಿಗಳದ್ದು ಹೇಗೆ ತಿಳಿಯಬೇಕು? ಆಸಾಮ, ಬಂಗಾಲ, ಮಧ್ಯಪ್ರದೇಶ, ಮೈಸೂರು, ಕೇರಳಗಳಲ್ಲಿ ನದಿಗಳಿಗೆ ಮಹಾಪೂರ ಬಂದಾಗ, ಅವು ಕಾಡಿನಲ್ಲಿ ನುಗ್ಗಿ ಎಷ್ಟು ಪ್ರಾಣಿಗಳನ್ನು ಆಹುತಿ ತೆಗೆದುಕೊಳ್ಳುವವೆಂಬುದರ ಬಗ್ಗೆ ಯಾರು ತಲೆ ಕೆಡಿಸಿಕೊಂಡಿದ್ದಾರೆ? ನಿರುದ್ಯೋಗಿಗಳಿಂದ ತುಂಬಿ ತುಳುಕುವ ನಮ್ಮ ದೇಶದಲ್ಲಿ ಕಾಡುಕಿಚ್ಚನ್ನು ತಡೆಗಟ್ಟಲು ಕಲಿಸುವ ಒಂದಾದರೂ ಸಂಸ್ಥೆಯಿಲ್ಲ. ಕಾಡುಕಿಚ್ಚಿಗೆ ಪ್ರತಿ ವರ್ಷ ಎಷ್ಟು ಪಶು -ಪ್ರಾಣಿಗಳು ಬಲಿ ಬೀಳುತ್ತವೆ, ಎಂಬುದರ ಲೆಕ್ಕ ದೊರೆಯುತ್ತಿಲ್ಲ. ಸುಮಾರು ಇಂತಿಷ್ಟು ಹಾನಿಯಾಯಿತು! ಎಂಬ ವಿವರಗಳು ಮಾತ್ರ ಸಂಬಂಧಿಸಿದ ಅಧಿಕಾರಿಗಳಿಂದ ಲಭ್ಯ.

ನಮ್ಮಲ್ಲಿ ಮಾನವನಿರ್ಮಿತ ಕಾಡುಗಳು ತೀರ ಕಡಿಮೆ. ನಿಸರ್ಗದತ್ತವಾಗಿ ಬಂದ ಕಾಡುಗಳನ್ನು ಬಳಸುವ ಪದ್ಧತಿಯೂ ಆಧುನಿಕವಲ್ಲ. ಎಲ್ಲ ಅರಣ್ಯವೂ ಸರಕಾರದ ಸೊತ್ತಾಗಿ ಅತಿ ಹೆಚ್ಚು ಹಣ ಕೊಡಲು ಮುಂದೆ ಬಂದವನಿಗೆ ಕಾಡು ಕಡಿಯುವ ಗುತ್ತಿಗೆ ದೊರೆಯುತ್ತದೆ. ಕಾಡು ಅಧೀನದಲ್ಲಿದ್ದಾಗಲೆ ಅದರ ಪೂರ್ಣ ಲಾಭ ಪಡೆಯಲು ಯತ್ನಿಸಿದ ಗುತ್ತಿಗೆದಾರ ಮುದಿಮರಗಳ ಜೊತೆಗೆ ಮರಿ, ಮೊಮ್ಮರಿ ಮರಗಳನ್ನೂ ಕೊಯ್ದು ಬಿಡುತ್ತಾನೆ. ಕಾಡಿನಲ್ಲಿ ಆಶ್ರಯಪಡೆದ ಪ್ರಾಣಿವರ್ಗ ಕೊಲೆಗೆ ತುತ್ತಾಗುತ್ತದೆ, ಇಲ್ಲವೇ ಪಲಾಯನ ಮಾಡುತ್ತದೆ. ಕಡಿದ ಕಾಡನ್ನು ಸುಟ್ಟು ಕೊಡಬೇಕೆಂಬ ನಿಯಮವಿದ್ದದ್ದರಿಂದ ಗಿಡ ಗಂಟಿಗಳಲ್ಲಿ ಮರದ ಬಿಲಗಳಲ್ಲಿ ಬದುಕಿಕೊಂಡ ಪುಟ್ಟ ಪ್ರಾಣಿಗಳೂ ಅವುಗಳ ಮೊಟ್ಟೆ ಮರಿಗಳೂ ನಾಶವಾಗುತ್ತವೆ.

ಸಮ್ಮಿಶ್ರ ಕಾಡಿನಲ್ಲಿ ವಿವಿಧ ಪ್ರಕಾರದ ಪ್ರಾಣಿಗಳಿಗೆ ಆಹಾರ, ಅಚ್ಛಾದನ ಸಿಗುವದರಿಂದ ಅದೊಂದು ನೈಸರ್ಗಿಕ ಪ್ರಾಣಿಸಂಗ್ರಹಾಲಯದಂತಿರುತ್ತದೆ. ಆದರೆ ಕಡಿಸಿದ ಕಾಡಿನಲ್ಲಿ ಒಂದೇ ಜಾತಿಯ ಗಿಡಗಳನ್ನು ನೆಡುವುದರಿಂದ ಅವಕ್ಕೆ ಹೊಂದಿಕೊಂಡ ಪ್ರಾಣಿಗಳು ಮಾತ್ರ ಅಲ್ಲಿ ವಾಸಿಸಬಲ್ಲವು. ಮೊಲ, ಚಿಗರೆ, ಸಾರಂಗ, ಹಂದಿಗಳಿಗೆ ಅವಕಾಶವಿಲ್ಲದ ಕಾಡಿನಲ್ಲಿ ಹುಲಿರಾಯನಾದರೂ ಹೇಗೆ ಬದುಕಿಯಾನು? ಬೇಟೆಯಾಡದೇ, ವಿದೇಶಗಳಿಗೂ ಕಳಿಸದೇ, ನಮ್ಮ ವಿಪುಲ ಪ್ರಾಣಿ-ಸಂಪತ್ತು ಹೇಗೆ ಕಡಿಮೆಯಾಗುತ್ತಿದೆ, ಎಂಬುದಕ್ಕೆ ಅರಣ್ಯ

ಖಾತೆಯವರು ಬೆಳೆಸುವ ನೀಲಗಿರಿ ಕಾಡು, ಉತ್ತಮ ಉದಾಹರಣೆಯಾಗಿದೆ. ಮಲೆನಾಡು, ವಿಶೇಷತಃ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಸರಾಸರಿ ೧೦೦"- ೧೫೦" ಮಳೆ ಬೀಳುವದರಿಂದ, ದಟ್ಟ ಕಾಡು ಇದೆ. ಒಂದು ಕಾಲದಲ್ಲಿ ಈ ಕಾಡುಪ್ರದೇಶ, ಹುಲಿ, ಚಿರತೆ, ಆನೆ, ಕಾಡುಕೋಣ, ಹೆಬ್ಬಾವುಗಳಂತಹ ಪಶು-ಉರಗ ವರ್ಗಕ್ಕೆ ಹೆಸರುವಾಸಿಯಾಗಿತ್ತು. ಅಂತಹ ಅರಣ್ಯ ಕಡಿಯುತ್ತ, ಇಮಾರತಿ ಕಟ್ಟಿಗೆಯ ಮರಗಳನ್ನು ಬೆಳೆಸುವ ಬದಲಾಗಿ ನೀಲಗಿರಿ ಗಿಡಗಳನ್ನು ಹಚ್ಚಲಾಗಿದೆ. ಈ ನಿರ್ಣಯಕ್ಕೆ ವೈಜ್ಞಾನಿಕ ಕಾರಣಗಳನ್ನು ಯಾರೂ ಕೊಟ್ಟಿಲ್ಲ. ಕಾಗದದ ಉತ್ಪಾದಕರಿಗೆ, ಮಿದುಕಟ್ಟಿಗೆ ತಯಾರಿಕೆಗೆ ಸಹಾಯಕವಾಗಲೆಂದೂ ಅಥವಾ ಅರಣ್ಯ ಬೆಳೆಸಿದ ಭಾಸವಾಗಲೆಂದೂ ಈ ನಿರ್ಣಯ ಕೈಕೊಂಡಿರಬೇಕು. ಒಣ ಪ್ರದೇಶದ ನೀಲಗಿರಿಯನ್ನು ಇಮಾರತಿ ಕಟ್ಟಿಗೆ ಬೆಳೆಯಬಹುದಾದ ಪ್ರದೇಶದಲ್ಲಿ ಬೆಳೆಯುವದು, ಅವಿವೇಕವಾಗಿರುವಂತೆ ಕಾಡು ಪ್ರಾಣಿಗಳ ದೃಷ್ಟಿಯಿಂದಲೂ ತೀರ ಘಾತಕವಾಗಿದೆ. ನೀಲಗಿರಿಯ ಕಾಡು ಎಂದೂ ದಟ್ಟ ಬೆಳೆಯಲಾರದು. ಆದ್ದರಿಂದ ಜಿಂಕೆ, ಸಾರಂಗ, ಆನೆಗಳು ಎಂದೂ ಅಲ್ಲಿ ವಾಸಿಸಲಾರವು. ವಿಪುಲ ಪರ್ಣಗಳು ಈ ಗಿಡಗಳಿಗೆ ಇರದ್ದರಿಂದ ಅವನ್ನು ಆಹಾರ ಮಾಡಿಕೊಂಡ ಮೃಗವರ್ಗವೂ ಅಲ್ಲಿರಲಾರದು. ಹೂ, ಕಾಯಿ, ಹಣ್ಣುಗಳು ಸಿಗದ್ದರಿಂದ ಪಕ್ಷಿಗಳೂ ಇರಲಾರವು. ಈ ಪಕ್ಷಿವರ್ಗವನ್ನು ಆಹಾರ ಮಾಡಿಕೊಂಡ ಪಶುವರ್ಗವಾದರೂ ಅಲ್ಲಿರದ್ದು ಸ್ವಾಭಾವಿಕ. ಸ್ವಾತಂತ್ರ್ಯದ ನಂತರ ಪಶು -ಪ್ರಾಣಿವರ್ಗದ ಇಂಥ ಅಪರೋಕ್ಷ ಕೊಲೆ ಹೆಚ್ಚೆಚ್ಚಾಗಿ ನಡೆದಿದೆ.

ಪುರಾತನ ಗುಡಿ ಗೋಪುರಗಳನ್ನು ಕಾದಿಡುವಂತೆ, ಕಾಡುಗಳನ್ನು ಕಾದಿಡುವದೂ ಸರಕಾರದ ಧೋರಣವಾಗಿದೆ. ಕಾದಿಟ್ಟ ಹಣಕ್ಕಿಂತ ಉತ್ಪಾದನೆಗೆ ಹಾಕುವ ಹಣ ಅಭಿವೃದ್ಧಿಯಾಗುವಂತೆ, ಕಾಡು ವೈಜ್ಞಾನಿಕವಾಗಿ ಬೆಳೆಸಿದಾಗ ಮಾತ್ರ ತುಂಬ ಪ್ರಯೋಜನಕಾರಿಯಾಗುತ್ತದೆ. ನಮ್ಮಲ್ಲಿ ಕೃಷಿ, ಶೇಕಡಾ ೪೬ ರಷ್ಟು ಕೊಡುತ್ತದೆ. ಕೃಷಿ ೭೦% ಭಾರತೀಯರಿಗೆ ಉದ್ಯೋಗ ಕಲ್ಪಿಸಿಕೊಟ್ಟರೆ ಅರಣ್ಯ ೦.೨% ರಷ್ಟು ಕೊಟ್ಟಿದೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೇವಲ ೦.೪% ರಷ್ಟು ಹಣ ಅರಣ್ಯದ ಅಭಿವೃದ್ಧಿಗೆ ಮೀಸಲಿಟ್ಟಿರುವುದರಿಂದ ಸರಕಾರ ಅರಣ್ಯಕ್ಕೆ ಎಷ್ಟು ಮಹತ್ವ ಕೊಟ್ಟಿದೆ ಎಂಬುದರ ಕಲ್ಪನೆ ಬರುತ್ತದೆ. ಕೃಷಿಗೆ ಒಂದು ವರ್ಷ ಮೊದಲೇ ಮುಂದಾಲೋಚನೆ ಮಾಡಿದರೆ ಅರಣ್ಯಕೃಷಿಗೆ ಒಂದು ಶತಮಾನ ಮೊದಲು ಯೋಚಿಸಿ ಕೆಲಸ ಕೈಕೊಳ್ಳಬೇಕಾಗುತ್ತದೆ.

ನಮ್ಮ ರಾಜ್ಯದಲ್ಲಿಯೇ ದಾಂಡೇಲಿ, ಬಂಡಿಪುರಗಳಂತಹ ಕಾದಿಟ್ಟ ಅರಣ್ಯಗಳಿವೆ. ಶ್ರೀರಂಗಪಟ್ಟಣದ ಹತ್ತಿರದ ರಂಗನತಿಟ್ಟು ಪಕ್ಷಿಗಳ ಬೀಡು. ಇವುಗಳ ಬಗ್ಗೆ ಸಾಕಷ್ಟು ಪ್ರಚಾರವಾದರೂ ಅಲ್ಲಿಗೆ ಹೋದರೆ ವಾಹನ, ಊಟ-ವಸತಿಗಳ ಸೌಕರ್ಯವಿಲ್ಲದೇ ನೂರಾರು ಅಡೆತಡೆಗಳಿದ್ದು ಕೊನೆಗೂ ಸಾಕಷ್ಟು ಖರ್ಚುಮಾಡಿ ಹೋದರೆ ಒಂದು ಕಾಡುಕೋಣ, ಮೊಲ ಅಥಾವಾ ನರಿಯನ್ನು ನೋಡಿ ಅತೃಪ್ತಿಯಿಂದ ಮರಳಬೇಕಾದ ಸಂದರ್ಭಗಳೇ ಹೆಚ್ಚು. ಅದೇ ಆಫ್ರಿಕದ ಕಾಡುಗಳಲ್ಲಿ ವೈಜ್ಞಾನಿಕ ರೀತ್ಯಾ ಅಭ್ಯಾಸ ಮಾಡಿ ಕಾದಿಟ್ಟ ಕಾಡುಗಳಲ್ಲಿ ಹುಲಿ, ಸಿಂಹ, ಕಾಡಾನೆ, ಜಿರಾಫೆಗಳಂತಹ ಪ್ರಾಣಿಗಳು ಯಾವ ಭೀತಿಯಿಲ್ಲದೇ ತಿರುಗುವುದರಿಂದ

ಕಾರು-ಮೋಟಾರುಗಳಲ್ಲಿ ಕುಳಿತು ಕಾಡಿಗೆ ಹೋಗಿ, ತೀರ ಹತ್ತಿರದಿಂದ ಇವನ್ನು ನೋಡಬಹುದಾಗಿದೆ. ಈ ಕಾಡುಗಳು ಜಗತ್ಪಸಿದ್ಧವಾದರೆ ನಮ್ಮ ಕಾಡುಗಳ ಬಗೆಗೆ ನಮಗೇ ಗೊತ್ತಿಲ್ಲ.

ನಮ್ಮಲ್ಲಿ ಒಂದಾದರೂ, ಕಾಡು ಪ್ರಾಣಿಯ ಕುರಿತು ವಿವರವಾದ ವೈಜ್ಞಾನಿಕ ಸಂಶೋಧನೆ ಕೈಕೊಳ್ಳಲಾಗಿದೆಯೇ? ನಮ್ಮ ರಾಷ್ಟ್ರೀಯ ಪ್ರಾಣಿಯಾದ ಹುಲಿಯ ಬಗ್ಗೆ ನಮಗೇನು ಗೊತ್ತಿದೆ? ಅವುಗಳ ಚಲನವಲನ, ಗಂಡು-ಹೆಣ್ಣುಗಳ ಸಂತತಿ ನಿರ್ಮಾಣ, ಅವಕ್ಕೆ ಬೇಕಾಗುವ ಆಹಾರ ಪ್ರಮಾಣ, ಜನನ-ಮರಣಗಳ ವಿವರಗಳಾವವೂ ಗೊತ್ತಿಲ್ಲ. ಆರು ಕೋಟಿ ರೂಪಾಯಿ ತಲೆಯ ಮೇಲೆ ಹೊತ್ತು ತಿರುಗುವ ಹುಲಿರಾಯನದೇ ಈ ಸ್ಥಿತಿಯಾದರೆ ಉಳಿದ ಪ್ರಾಣಿಗಳ ಗತಿಯೇನು? ನಾವು ಕಾನೂನುಗಳನ್ನು ಪಾಲಿಸುವದಕ್ಕಿಂತ ಮುರಿಯುವದರಲ್ಲಿ ಹೆಚ್ಚು ಅಭಿಮಾನಪಡುತ್ತೇವೆ. ಕಳವು ಮಾಡಬಾರದು. ಕೊಲ್ಲಬಾರದು ಎಂದು ದಿಲ್ಲಿಯ ಅಧಿಕಾರಿಗಳು ಕಳವಳದಿಂದ ಪ್ರಾಣಿಸಂಪತ್ತು ರಕ್ಷಿಸಲು ಕಾನೂನು ಮಾಡಿದರೆ ಹಳ್ಳಿಗಳಲ್ಲಿ ಅದರ ಪರಿಣಾಮ ಏನೂ ಆಗುವದಿಲ್ಲ. ಈಚೆಗೆ ಮಾರಿಕಣಿವೆಗೆ ಹೋಗಿದ್ದೆ. ಅಂಗಡಿಯಲ್ಲಿ ಕಾಫಿಕುಡಿಯುತ್ತ ಕುಳಿತಾಗ ಹಳ್ಳಿಗರ ಹರಟೆರಭಸದಿಂದ ಸಾಗಿತ್ತು ಅವರ ಮಾತಿನ ಸಾರಾಂಶ ಹೀಗಿತ್ತು. ಸೇಂಗಾ ತಿನ್ನಲು ಕತ್ತಲಾದ ಕ್ಷಣ ಕರಡಿಗಳು ಹೊಲಕ್ಕೆ ಇಳಿಯುತ್ತವೆ. ರಾತ್ರಿ ೧೦ ಗಂಟೆಯ ತನಕ ಹೊಲಗಳನ್ನು ಅವುಗಳ ಕಾಟದಿಂದ ರಕ್ಷಿಸಿದರೆ ನಂತರ ಅವು ಬರುವದಿಲ್ಲ. ಆದರೆ ರಾತ್ರಿ ಹತ್ತರ ತನಕ ಎಚ್ಚರಿರಲು ಮೊಲದ ಶಿಕಾರಿ ಕೈಕೊಳ್ಳಬೇಕಾಗುತ್ತದೆ. ಮೊಸಳೆ ಶಿಕಾರಿಯೊಬ್ಬನ ಬಗ್ಗೆ ಮಾತು ನಡೆದಿತ್ತು ಹತ್ತಿರದ ವಾಣಿವಿಲಾಸ ಸಾಗರದಲ್ಲಿಯ ಮೊಸಳೆಗಳೆಲ್ಲ ನಾಮ ಶೇಷವಾದವಂತೆ, ಅವನ ಕೋವಿಯ ಪ್ರಭಾವಕ್ಕೆ ತಿಮಿಂಗಿಲಗಳಂತೆ ಮೊಸಳೆಗಳ ಬೇಟೆಯೂ ದೂಡ್ಡ ಪ್ರಮಾಣದಲ್ಲಿ ನಡೆಯಿತಂತೆ ಅವನ್ನು ರಕ್ಷಿಸಲು ವಿಶ್ವಸಂಸ್ಥೆ, ದೊಡ್ಡ ಯೋಜನೆಯೊಂದನ್ನು ತಯಾರಿಸಿದೆ. ಮೊಸಳೆಗಳ ರಕ್ಷಣೆಗೆ ನಿಯಮಗಳ ತಯಾರಿ ಅಗುತ್ತಿದ್ದಾಗ ದೂರದ ಮಡುವುಗಳಲ್ಲಿ ಮೊಸಳೆಗಳು ಕೊಲೆಯಾಗುತ್ತಿರುತ್ತವೆ. ಪಶ್ಚಿಮ ಬಂಗಾಲದಲ್ಲಿ ಗಂಗೆಯ ದಡದಲ್ಲಿ ಮೊಸಳೆಗಳ ಮೊಟ್ಟೆಗಳನ್ನು ಮರಿಗಳನ್ನು ಹಿಡಿದು ತಂದು ತೀರ ಕಡಿಮೆ ಬೆಲೆಗೆ ಮಾರುತ್ತಾರೆ.

ಯುರೋಪಿಯನ್ನರು ಹೊಸದಾಗಿ ಬಂದು ಅಮೇರಿಕದಲ್ಲಿ ನೆಲೆಸಿದಾಗ ದೊಡ್ಡ ಪ್ರಮಾಣದಲ್ಲಿ ಕಾಡುಕೋಣ ಮುಂತಾದವುಗಳ ಬೇಟೆಗೆ ತೊಡಗಿದ್ದರು. ಆದರೆ ನಿಸರ್ಗಪ್ರೇಮಿಗಳು, ಪ್ರಾಣಿದಯೆ ಉಳ್ಳವರು, ತಮ್ಮ ಧ್ವನಿಯೇರಿಸಿ, ಜನತೆಗೆ ಶಿಕ್ಷಣ ಕೊಟ್ಟು, ಸರಕಾರಕ್ಕೆ ಸಲಹೆ ನೀಡಿ ಅಳಿದುಳಿದ ಪ್ರಾಣಿಗಳಗೆ ಸಂರಕ್ಷಣೆ ನೀಡಿದ್ದಲ್ಲದೇ ಅವುಗಳ ಸಂಖ್ಯೆಯನ್ನು ಬೆಳೆಸಿದ್ದಾರೆ. ಸರಕಾರ, ನಿರುದ್ಯೋಗ ಹೋಗಲಾಡಿಸುವ ಸಲುವಾಗಿ ಒಂದೇ ವರ್ಷದಲ್ಲಿ ನೂರು ಕೋಟಿ ರೂಪಾಯಿ ಖರ್ಚು ಮಾಡಲಿದೆಯಂತೆ. ಈ ಧನಬಲ ಉಪಯೋಗಿಸಿ ವನ್ಯ ಪ್ರಾಣಿಗಳ ಬಗ್ಗೆ ವೈಜ್ಞಾನಿಕ ಅಭ್ಯಾಸ ಪ್ರಾರಂಭಿಸಿ, ಅವುಗಳ ಅಭಿವೃದ್ಧಿಗೂ ಅನುಕೂಲ ಮಾಡಿಕೊಟ್ಟರೆ ನಮ್ಮೊಡನೆ ಅವೂ ಬಾಳಿ ಬದುಕಿಯಾವು.

●

೧೪. ಪಶ್ಚಿಮ ಘಟ್ಟಗಳು ; ಆಗ - ಈಗ

ಸಹ್ಯಾದ್ರಿ ಪರ್ವತಾವಳಿಗಳು ದಕ್ಷಿಣದ ಕನ್ಯಾಕುಮಾರಿಯಿಂದ ಉತ್ತರದ ತಾಪಿ ನದಿಯವರೆಗೆ ಅರಬೀ ಸಮುದ್ರದ ಕರಾವಳಿಗೆ ಸಮಾನಂತರವಾಗಿ ತಲೆ ಎತ್ತರಿಸಿಕೊಂಡು ಹಬ್ಬಿವೆ. ಇವುಗಳಿಗೆ 'ಪಶ್ಚಿಮ ಘಟ್ಟಗಳು' ಎಂಬ ಅನ್ವರ್ಥಕ ನಾಮವೂ ಬಂದಿದೆ. ಸುಮಾರು 1300 ಕಿ.ಮೀಟರ್‌ಗಳಷ್ಟು ಉದ್ದದ ಪರ್ವತಾವಳಿಗಳಲ್ಲಿ ಕರ್ನಾಟಕದ ಪಾಲಿಗೆ ಬಂದದ್ದು 320 ಕಿ. ಮೀಟರ್‌ಗಳಷ್ಟು ಮಾತ್ರ. ಸರಾಸರಿ 1,100 ಮೀಟರ್ ಎತ್ತರವಿದ್ದರೂ ಕೆಲ ಶಿಖರಗಳು 2,500 ಮೀಟರ್ ಎತ್ತರಕ್ಕೆ ಏರಿವೆ. ಕರಾವಳಿಯಿಂದ 10 ರಿಂದ 70 ಕಿಲೋಮೀಟರ್ ದೂರವಿರುವ ಸಹ್ಯಾದ್ರಿ ಅಭೇದ್ಯವಾಗಿದ್ದರೂ, ಅಲ್ಲಲ್ಲಿರುವ ಕಣಿವೆ ಮಾರ್ಗಗಳನ್ನು ಬಳಸಿ ವಾಹನ ಸಂಚಾರ ಏರ್ಪಡಿಲಾಗಿದೆ. ಇವುಗಳಲ್ಲಿ ಅರಬೈಲ್, ದೇವಿಮನೆ, ಕೊಲ್ಲೂರು, ಹೊಸಂಗಡಿ, ಆಗುಂಬೆಗಳ ಕಣಿವೆಗಳು ಕರಾವಳಿಯನ್ನು ಘಟ್ಟದ ಮೇಲಿನ ಪ್ರದೇಶದೊಂದಿಗೆ ಜೋಡಿಸುತ್ತವೆ. ಇಲ್ಲಿ ಹುಟ್ಟಿದ ಕಾಳಿ, ಅಘನಾಶಿನಿ, ಗಂಗಾವಳಿ, ಶರಾವತಿ, ನೇತ್ರಾವತಿ ಮುಂತಾದ ನದಿಗಳು, ಕಡಲ ರಾಜನಿಗೆ ಸೇರುವ ತವಕದಲ್ಲಿ ರಭಸದಿಂದ ಹರಿಯುತ್ತ ಕೆಲವೆಡೆಯಲ್ಲಿ ತಡಸಲಾಗಿ ಧುಮುಕುತ್ತ ಚಿತ್ತಾಕರ್ಷಕವಾಗಿವೆ. ಉತ್ತರ ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗೆ ಜಿಲ್ಲೆಗಳಲ್ಲಿಯ ಜನಜೀವನ ಸಹ್ಯಾದ್ರಿಯ ಸುತ್ತಲೂ



ಸಸ್ಯ ಶಾಮಲೆಯಾಗಿದ್ದ ಸಹ್ಯಾದ್ರಿ ಚಿತ್ರಗಳು ಕೃಷ್ಣಾನಂದ ರಾಮತ್

ಹೆಣೆದುಕೊಂಡಿದೆ. ಪಶ್ಚಿಮ ಘಟ್ಟಗಳ ಆಸರೆಯಲ್ಲಿ ಹುಟ್ಟಿ, ಬೆಳೆದು ಕಳೆದ ನಾಲ್ಕು ದಶಕಗಳಲ್ಲಿ ವಿದ್ಯಾರ್ಥಿ, ಶಿಕ್ಷಕ, ಸಂಶೋಧಕ ಛಾಯಾಚಿತ್ರಗಾರನಾಗಿ ಈ ಪರ್ವತಾವಳಿಯೊಂದಿಗೆ ಬೆಳೆದುಕೊಂಡು ಬಂದ ನನ್ನ ಗೆಳೆತನ ಅತ್ಯಂತ ಆತ್ಮೀಯ. ಈ ಬರವಣಿಗೆಗೆ ಸ್ವಾನುಭವವೇ ಅಡಿಪಾಯ.

ಸಹ ಜೀವನ

ನಮ್ಮೂರು ಹೊನ್ನಾವರ. ಹೆಸರಿನಷ್ಟೇ ಸುಂದರವಾದ ಊರು. ಪಶ್ಚಿಮಕ್ಕೆ ಭೋರ್ಗರೆಯುವ ಅರಬೀ ಸಮುದ್ರ. ದಕ್ಷಿಣಕ್ಕೆ ಪಂಪಾ ಸರೋವರವನ್ನು ನಾಚಿಸುವ ಶರಾವತಿ ನದಿ. ಉತ್ತರಕ್ಕೆ ಗಗನವನ್ನೆ ಅಳೆಯಲು ಹೊರಟ ಸಹ್ಯಾದ್ರಿ ಪರ್ವತ ಶ್ರೇಣಿಗಳು. ಬಾವಿ ತೋಡಿದಲ್ಲಿ ನೀರು. ಕಣ್ಣು ಹಾಯಿಸಿದಲ್ಲೆಲ್ಲ ತೆಂಗು; ಪ್ರತಿ ಊಟಕ್ಕೂ ತಿಂದು ತೇಗುವಷ್ಟು ಮತ್ಸ್ಯಾಹಾರ. ಇಂದು ಆಗರ್ಭ ಶ್ರೀಮಂತರಿಗಷ್ಟೆ ಲಭ್ಯವಿರುವ ಗೋಡಂಬಿ, ಶೆಟ್ಲಿ (ಪ್ರಾನ್) ಕಡುಬಡವರೂ ಯಥೇಚ್ಛವಾಗಿ ಸೇವಿಸಬಹುದಾಗಿತ್ತು. ಸಾಗರಗಾಮಿ ಮಚ್ವೆಗಳು (ವಾಯುಚಾಲಿತ ಬೃಹತ್ ನೌಕೆ) ನಿರಾತಂಕವಾಗಿ ನದಿಯಿಂದ ಸಮುದ್ರ ಸೇರಿ ಕೇರಳ. ಮಹಾರಾಷ್ಟ್ರ ಗುಜರಾತದ ತನಕ ತೇಲುತ್ತಿದ್ದವು. ಅವು ಹೊತ್ತು ತಂದ ಭಾರವಾದ ಸಾಮಗ್ರಿಗಳನ್ನು ಇಳಿಸುವ ಒಂದು ಕ್ರೇನ್ ಕೂಡಾ ಸ್ಥಾಪಿಸಲಾಗಿತ್ತು. ಊರಿನ ಹಿಂಭಾಗಕ್ಕೆ ಸಾಕಷ್ಟು ಕಾಡು ಇದ್ದುದರಿಂದ ಕಾಡು ಪ್ರಾಣಿಗಳೊಡನೆ ಸಹಜೀವನ ಸಹಜವಾಗಿಯೇ ಪ್ರಾಪ್ತವಾಗಿತ್ತು. ಹಣ್ಣು ಹಂಪಲುಗಳಿಗಾಗಿ ಕಾಡು ಸೇರಿದಾಗ ಆಗೊಮ್ಮೆ ಈಗೊಮ್ಮೆ ಪಟ್ಟೆ ಹುಲಿ, ದರ್ಶನವೀಯುತ್ತಿತ್ತು. ನಮ್ಮ ಪಾಡಿಗೆ ನಾವು ಇರುತ್ತಿದ್ದುದರಿಂದ ಎಂದೂ ಹುಲಿಯ ಆಕ್ರೋಶ ನೋಡಬೇಕಾಗಿ ಬರಲಿಲ್ಲ. ಗೃಹಮುಖಿಯಾದಾಗ ಕತ್ತಲಲ್ಲಿ ಮೊಲಗಳು ಈ ಪೊದೆಯಿಂದ ಆ ಪೊದೆಯತ್ತ ನಾಗಾಲೋಟ ಹಾಕುತ್ತಿದ್ದವು. ಅದೃಷ್ಟ ಚೆನ್ನಾಗಿದ್ದರೆ ನರಿಮುಖ ನೋಡುವ ಭಾಗ್ಯವೂ ನಮ್ಮದಾಗುತ್ತಿತ್ತು. ಬೆಳಕಿಗಾಗಿ ಹೊನ್ನೆಣ್ಣೆಯ ದೀಪ ಬಳಸುತ್ತಿದ್ದರಿಂದ ದಿನದ ಚಟುವಟಿಕೆ ಬೇಗ ಮುಗಿಸುವ ಪರಿಪಾಠ ಬೆಳೆದು ಬಂದಿತ್ತು. ಹೊಲ ಗದ್ದೆಗಳಿಗೆ ಇಳಿದ ನರಿ ಹಿಂಡುಗಳು 'ಹುಕ್ಕೂ ಹುಕ್ಕೂ'ಎಂದು ಜೋಗುಳ ಹಾಡುತ್ತಿದ್ದವು. ಎಂದಾದರೊಮ್ಮೆ ಕತ್ತೆಕಿರುಬನ ತಂಡ ನಡುರಾತ್ರಿ ಯಲ್ಲಿ ಊರಿಗೆ ಇಳಿದು ಬೀದಿ ನಾಯಿಗಳ ಮೇಲೆ ಭೋಜನಕೂಟ ನಡೆಸಿ, ಪರಾರಿಯಾಗುತ್ತಿದ್ದವು. ಅಂದು ನೆಮ್ಮದಿಯ ಜೀವನಕ್ಕಾಗಿ ವಿದ್ಯುತ್ ಕ್ರಾಂಕ್ರೀಟ ಗೃಹ, ಕಾರು, ಟಿ.ವಿ., ಮಧುಪಾನಗಳಾದಿ ಬೇಕೆಂದು ಯಾರಿಗೂ ಅನಿಸುತ್ತಿರಲಿಲ್ಲ.

•

ಅದೆಷ್ಟು ನೀರು!

ಶಾಲಾ ವಿದ್ಯಾರ್ಥಿ ಇದ್ದಾಗಲೇ (1953) ಗೇರಸಪ್ಪಾ ಧಬೆಧಬೆ - ಜೋಗ್‌ಫಾಲ್ಸ್ - ದರ್ಶನ ಪಡೆಯಬೇಕೆಂಬ ಹಂಬಲವಾಯಿತು. ನಮ್ಮೂರಿನಿಂದ ಅದು ಕೇವಲ 58 ಕಿಲೋಮೀಟರ್ ದೂರವಿದ್ದರೂ ಅಲ್ಲಿಗೆ ಹೋಗಲು ವಾಹನವಾಗಲಿ. ರಸ್ತೆಯಾಗಲೀ ಇರಲಿಲ್ಲ.



ಬೋಳಾಗುತಿರುವ ಬೆಟ್ಟಗಳು

ಅರ್ಧ ದೂರ ಗಾಳಿಯೊಂದಿಗೆ ಓಡುವ ನಾವೆಯಲ್ಲಿ ಹೋಗಿ, ಮುಂದೆ ದಟ್ಟ ಕಾಡಿನಲ್ಲಿ ಕಾಲು ನಡಿಗೆಯಿಂದ ಹೋಗಬೇಕಾಯಿತು. ದಾರಿಯಲ್ಲಿಯ ವೃಕ್ಷ ಕೋಟಿಗಳನ್ನು ನೋಡುವದೇ ಒಂದು ಹೊಸ ಅನುಭವ. ಹೆಚ್ಚಿನವು ಅಪರಿಚಿತವಾಗಿದ್ದರೂ ಅವುಗಳ ಅಂದ-ಚಂದ ಸವಿಯಲು ಏನೇನೂ ಕೊರತೆಯಾಗಲಿಲ್ಲ. ಕಂಡರಿಯದ ಅದೆಷ್ಟೋ ಪಶು, ಪಕ್ಷಿಗಳು ಕಾಲಿಗೆ ಬುದ್ಧಿ ಹೇಳಿದವು. ಕಂಗಾಲಾದ ಕೋತಿಗಳು "ಅದ್ಯಾರೋ ತಮ್ಮ ರಾಜ್ಯದಲ್ಲಿ ಪ್ರವೇಶಿಸಿದ್ದಾರೆಂದು" ಉಳಿದ ತಂಡಕ್ಕೆ ಎಚ್ಚರಿಕೆ ನೀಡಿದವು. ಪೊರೆಗಳು ಹಾವುಗಳು ಇದ್ದಾವೆ ಎಂದು ಎಚ್ಚರಿಸಿದರೆ, ಮುಳ್ಳು ಹಂದಿಗಳು ತಮ್ಮ ಆಯುಧಗಳನ್ನು ಅಲ್ಲಲ್ಲಿ ತ್ಯಜಿಸಿದ್ದವು. ಒಣ ಲದ್ದಿಗಳು ಕಾಡಾನೆಗಳ ಹಿಂಡು ಪಯಣ ಬೆಳೆಸಿದ ದಾರಿ ಸೂಚಿಸುತ್ತಿದ್ದವು. ಅನೇಕಾನೇಕ ಝರಿಗಳಿದ್ದರಿಂದ ದಣಿವಾದಾಗ ಕೈಕಾಲು ತೊಳೆದು, ನೀರು ಕುಡಿದು, ವಿಶ್ರಾಂತಿ ಪಡೆಯಲು ಅನುಕೂಲವಾಯುತು. ಕಾಡಿನ ಹಣ್ಣು, ಕಾಯಿಗಳು, ಹಸಿವನ್ನು ನೀಗಿಸಿದವು.

ಉತ್ತರ ಕನ್ನಡ ಜಿಲ್ಲೆಯ ಬ್ರಿಟಿಷ್ ಬಂಗಲೆ (ಪ್ರವಾಸಿ ಮಂದಿರ) ಮುಟ್ಟುವುದರಲ್ಲಿ ಸೂರ್ಯನು ತನ್ನ ಪ್ರಖರತೆ ಕಳೆದುಕೊಡಿದ್ದ. ಬಂಡೆಯ ಮೇಲೆ ಮಲಗಿ ಪಾತಾಳಕ್ಕೆ ಧುಮುಕುವ ಶರಾವತಿ ನದಿ ಕಂಡಾಗ ಕಣ್ಣಿಗೆ ಹಬ್ಬವಾಯಿತು.



ಕೊಡಲಿಗೆ ಆಹುತಿಯಾಗಲಿರುವ ಮರಗಳು

ಅಬ್ಬಾ! ಆ ನಡು ಬೇಸಿಗೆಯಲ್ಲಿಯೂ ಅದೆಷ್ಟು ನೀರು. ಅಬ್ಬರ, ಆರ್ಭಟ; ಶಿವಮೊಗ್ಗ ಜಿಲ್ಲೆಯಲ್ಲಿರುವ ಮೈಸೂರು ಬಂಗಲೆಗೆ' ತಲುಪಲು ನದಿ ದಾಟಬೇಕಾಗಿತ್ತು, ಜನ, ವಾಹನಗಳನ್ನು ಸಾಗಿಸಲು ಎರಡು ನಾವೆ ಜೋಡಿಸಿ ಸಿದ್ಧ ಮಾಡಿದ ಜಂಗಲಿನಲ್ಲಿ ಆಚೆ ದಡ ಸೇರಿ, ಕತ್ತಲೆಯೊಡನೆ ಸ್ಪರ್ಧಿಸಿ ಜೋಗ ಜಲಪಾತಕ್ಕೆ ತಲುಪಿದ್ದಾಯಿತು. ಪ್ರಖರವಾದ ಕೆಂಪು, ಹಳದಿ, ನೀಲಿ ದೀಪಗಳಲ್ಲಿ ನಾಲ್ಕು ಧಾರೆಗಳು, ಥಕಥೈ ಕುಣಿಯುವಂತೆ ಭಾಸವಾಯಿತು. ಮರುದಿನ ನಸುಕಿನಲ್ಲಿಯೇ ಕಣಿವೆ ಇಳಿದು, ಕಣ್ಣೆತ್ತಿ ಮೇಲೆ ನೋಡಿದಾಗ ಶರಾವತಿ, ಶ್ವೇತಾಂಬರಿಯಾಗಿ ಕಂಡಳು. ಗಾಳಿ ಬೀಸಿದಾಗೊಮ್ಮೆ ನೀರ ಹನಿಗಳು ತುಂತುರುವಾಗಿ ಮೋಡದಂತೆ ಮೇಲಕ್ಕೇಳುತ್ತಿದ್ದವು. ಸೂರ್ಯ ಕಿರಣಗಳಿಂದಾಗಿ ಅವುಗಳಲ್ಲಿ ಸಪ್ತವರ್ಣೀಯ ಕಾಮನ ಬಿಲ್ಲುಗಳು ರಚಿತವಾಗುತ್ತಿದ್ದವು. ಜಾರುವ ಬಂಡೆಗಳ ಮೇಲೆ ಇನ್ನಷ್ಟು ಜಾರುತ್ತ ಸಿಡಿಯುವ ನೀರಿಗೆ ಮೈಯೊಡ್ಡಿ ಕುಳಿತಾಗ ದೇವಲೋಕದಲ್ಲಿಯೂ ಇಂತಹ ಸುಖ ಇದ್ದಿರಲಿಕ್ಕಿವೆಂದು ಎನಿಸಿತು ಮಹಾತ್ಮಾ ಗಾಂಧಿ ವಿದ್ಯುತ್ ಕೇಂದ್ರ ತನ್ನ ಕಾರ್ಯ ಪ್ರಾರಂಭಿಸಿತ್ತು (1947-48).

ಮತ್ತೆ 1959 ರಲ್ಲಿ ಆ ಪ್ರದೇಶಕ್ಕೆ ಹೋದಾಗ ದೃಶ್ಯಗಳೆಲ್ಲ ಬದಲಾಗಿದ್ದವು. ಶಿವಮೊಗ್ಗ ಜಿಲ್ಲೆಯ ಲಿಂಗನಕ್ಕಿಯಲ್ಲಿ ಮಿದ್ಯುತ್ ಉತ್ಪಾದನೆಗಾಗಿ 24 ಕಿ. ಮೀಟರ್ ಉದ್ದ ಅಣೆಕಟ್ಟು ಕಟ್ಟಲಾಗುತ್ತಿತ್ತು. ನೀರಿನಲ್ಲಿ ಮುಳುಗುವ 326 ಚದರ ಕಿ.ಮೀ. ಕಾಡಿನ ಮೇಲೆ ಕೊಡಲಿಯ ಪ್ರಹಾರ ಏಕಪ್ರಕಾರವಾಗಿ ನಡೆದಿತ್ತು. ಅಂಬೆಗಾಲಿಡುವ ಮಗುವಿನಿಂದ ಮುತ್ತಜ್ಜನ ವಯಸ್ಸಿನ ಎಲ್ಲ ವೃಕ್ಷಗಳನ್ನು ಲಾರಿಗಳಲ್ಲಿ ತುಂಬಿ ವಿಕ್ರಯಕ್ಕಾಗಿ ಒಯ್ಯುತ್ತಿದ್ದರು. ಈ ವೃಕ್ಷಗಳೇ ಅಲ್ಲವೇ ಕರಿ ಮೋಡಗಳಿಂದ ಮಳೆ ಬರುವಂತೆ ಮಾಡಿ ನದಿಗೆ ನೀರು ಪೂರೈಸುವುದು? ಬಂಗಾರದ ಮೊಟ್ಟೆಗಳನ್ನಿಡುವ ಕುಕ್ಕುಟವನ್ನೆ ಕೊಲ್ಲುವ ಮಾನವನ ಆಸೆಬುರುಕುತನಕ್ಕೆ ಜಿಗುಪ್ಸೆಯಾಯಿತು. ಒಂದು ಪ್ರಬುದ್ಧವಾದ ಮರ ಬೆಳೆಯಲು ನೂರರಿಂದ ನೂರಾ ಐವತ್ತು ವರ್ಷಗಳು ಬೇಕೆಂದು ಈ ತಿಳಿಗೇಡಿಗಳಿಗೆ ಅರಿವು ಬೇಡವೆ? ಒಮ್ಮೆ ಕಾಡು ನಾಶ ಮಾಡಿದರೆ ನಂತರ ಎಂತಹ ಯತ್ನ ಮಾಡಿದರೂ ತಿರುಗಿ ಅದು ಬರಲಾರದು! ಎಂದು ಇತಿಹಾಸ ಪುಟಗಳಿಂದ ಕಲಿಯಬೇಕಾದ ಪಾಠ. ಹಿಂದೊಮ್ಮೆ ಇಟಲಿ ಗ್ರೀಸ್‌ಗಳಲ್ಲಿ ಸಿಂಹಗಳು ಬಾಳಿ ಬದುಕುವಂತಹ ಕಾಡುಗಳಿದ್ದವು. ಅವಿವೇಕದಿಂದ ಅವನ್ನೆಲ್ಲ ಕಡಿದಿದ್ದರಿಂದ ಇಂದು ಅವು ಬರಡು ಭೂಮಿಯಾಗಿವೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಹದಿನೆಂಟನೇ ಶತಮಾನದವರೆಗೆ ದಟ್ಟವಾದ ಕಾಡು ಇತ್ತೆಂದು ಅಲ್ಲಿಯ ಅವಶೇಷಗಳಿಂದ ತಿಳಿದುಬಂದಿದೆ. ಈ ಸ್ಥಳವಾದರೂ ಯುಗ ಯುಗಾಂತರಗಳಲ್ಲಿ ಒಂದು ಜಲ ಮರುಭೂಮಿಯಾಗುತ್ತದಲ್ಲ ? ಎಂದು ಕಳವಳವಾಯಿತು. ಆದರೆ ಆಧುನಿಕ ಯಂತ್ರಗಳ ಗರ್ಜನೆಯಲ್ಲಿ ಈ ಒಂಟಿ ದನಿ ಯಾರು ಆಲಿಸಬೇಕು?

ಶರಾವತಿಯ (ಮೊದಲನೆ ಹಂತ)ಯೋಜನೆ, ಪೂರ್ತಿಗೊಂಡಾಗ ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರ ಪ್ರದೇಶಗಳ ಜೊತೆಗೆ ಮಹಾರಾಷ್ಟ್ರ, ಗುಜರಾತ್‌ಗಳಿಗೆ ವಿದ್ಯುತ್ ಪೂರೈಕೆ ಮಾಡಬಹುದೆಂದು ಆಗಿನ ಮುಖ್ಯಮಂತ್ರಿಗಳು ಬಡಾಯಿ ಕೊಚ್ಚಿದ್ದರು. ಈ ಟೊಳ್ಳು

ಆಶ್ವಾಸನೆ ಸಿದ್ಧಮಾಡುವ ಸಲುವಾಗಿ ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಿದ ಕಾರ್ಖಾನೆಗಳಿಗೆ ಅತ್ಯಂತ ಅಲ್ಪ ಬೆಲೆಯಲ್ಲಿ ವಿದ್ಯುತ್ ಸರಬರಾಜು ಮಾಡಲಾರಂಭಿಸಿದರು. ಜೊತೆಗೆ ಸರ್ವ ವಿದ್ಯುತ್ ಗೃಹ (all electric home) ನಿರ್ಮಾಣಕ್ಕಾಗಿ ಪ್ರೋತ್ಸಾಹಿಸಿದರು. ಆದರೆ ಇದಕ್ಕಾಗಿ ರಾಜ್ಯ ಎದುರಿಸಬೇಕಾದ ಸಂಕಟಗಳ ಬಗ್ಗೆ ಅವರು ಸಂಪೂರ್ಣ ಕುರುಡಾಗಿದ್ದರು. ವಿಶ್ವದಲ್ಲಿಯೇ ಅತೀ ಎತ್ತರ (220 ಮೀಟರ್)ವಾದ ಜೋಗ್ ಜಲಪಾತ ,ಕೇವಲ ನಾಲೆಯ ನೀರಿನಷ್ಟು ಕಿರಿದಾಯಿತು. ಕಣಿವೆಯಲ್ಲಿ ತಂತುರು ಝರಿಗೆ ಬೆಳೆಯುವ ಅಪೂರ್ವ ಸಸ್ಯಗಳು ಕೊನೆಯುಸಿರು ಎಳೆದವು. ನದಿಯಲ್ಲಿ ಪ್ರವಾಹ ವೇಗವಾಗಿ ಹರಿಯುವ ಕಾಲದಲ್ಲಿ ಬೆಟ್ಟಗಳಿಂದ ಹಿರಿದು ಬಂದ ರೇವೆ ಕಡಲಿಗೆ ನೂಕಲ್ಪಡುತ್ತಿತ್ತು. ನದಿಗೆ ನೀರೇ ಸಾಲದ್ದರಿಂದ ರೇವೆ ಸಂಚಯವಾಗಿ ಅಲ್ಲಲ್ಲಿ ಚಿಕ್ಕ ದೊಡ್ಡ ನಡುಗಡ್ಡೆಗಳು ಏಳಲಾರಂಭಿಸಿದವು. ಭೂಗಳ್ಳರು ಅವನ್ನು ತಮ್ಮದನ್ನಾಗಿ ಮಾಡಿಕೊಂಡು ಅಲ್ಲಿ ತೆಂಗು ನೆಡಲಾರಂಭಿಸಿದರು. ಕರಾವಳಿಯ ಕೃಷಿಕಾರರು ತಮ್ಮ ಹಿತ್ತಲು, ತೋಟ, ಗದ್ದೆಗಳನ್ನು ನದಿಯಲ್ಲಿ ವಿಸ್ತರಿಸಿಕೊಳ್ಳಲಾರಂಭಿಸಿದರು. ಜಡಿಮಳೆ ಸುರಿದಾಗ ಇಲ್ಲವೇ ಅಣೆಕಟ್ಟಿನ ನೀರು ಬಿಟ್ಟಾಗ ಇದೆಲ್ಲ ಕೊಚ್ಚಿಕೊಂಡು ಹೋಗುವುದರಲ್ಲಿ ಸಂದೇಹವೇ ಇಲ್ಲ. ಕೆಲ ವರ್ಷಗಳ ಹಿಂದೆ ಇಂತಹ ಸ್ಥಿತಿ ಉತ್ಪನ್ನವಾದಾಗ ಜನತೆ, ಸರಕಾರ ಅದರಿಂದ ಪಾಠ ಕಲಿಯವ ಬದಲಾಗಿ ಕೋಟ್ಯಾನುಗಟ್ಟಲೆ ರೂಪಾಯಿಗಳ ಖರ್ಚು ಹಾಕಿ ಕೆಲ ಭಾಗವನ್ನು ವರ್ಚಸ್ಸಿರುವ ಜನತೆಗೆ ಹಂಚಿದರು. ಇನ್ನೊಮ್ಮೆ ಗಂಡಾಂತರ ಬರುವವರೆಗೆ ಎಲ್ಲರೂ ಎಲ್ಲವನ್ನೂ ಮರೆತಂತೆ ಇದೆ.

ಇಕ್ಕಟ್ಟಿನ ದಾರಿ

ಹೆಚ್ಚಿನ ಮಳಲು ನದಿಯು ಕಡಲನ್ನು ಕೂಡುವ ಎಡ, ಬಲದಲ್ಲಿ ಸಂಚಯವಾಗಿ ದಿಬ್ಬಗಳಾಗಿವೆ. ಇದರಿಂದ ನಾವೆಗಳ ಓಡಾಟಕ್ಕೆ ಕೇವಲ 400 ಮೀಟರ್ ಅಗಲದ ಇಕ್ಕಟ್ಟಿನ ಕಡಲ ದಾರಿ ಉಳಿದುಕೊಂಡಿದೆ. ಇದರಿಂದಾಗಿ ತಜ್ಞರ ಮೇಲ್ವಿಚಾರಣೆಯಲ್ಲಿ ಯಂತ್ರಚಾಲಿತ ಮತ್ಸ್ಯ ನೌಕೆಗಳು ಮಾತ್ರ ಓಡಾಡುವಂತಾಗಿದೆ. ಸುಲಭ ಬೆಲೆಗೆ ಸಾಮಗ್ರಿ ಸಾಗಾಟ ಮಾಡುವ ಮಚ್ವೆಗಳು ಹೇಳಹೆಸರಿಲ್ಲದಾದವು. ರಸ್ತೆ ಸಾರಿಗೆಗೆ ಪ್ರಾಮುಖ್ಯತೆ ಕೊಟ್ಟು ಶರಾವತಿಗೆ ಬೃಹತ್ ಸೇತುವೆ ಕಟ್ಟಲಾಯಿತು. ಬೆಂಗಳೂರು- ಹೊನ್ನಾವರ ರಾಜ್ಯ ಹೆದ್ದಾರಿಯ ಅಂಗವಾಗಿ ನಿರ್ಮಿಸಿದ ರಸ್ತೆಯಿಂದಾಗಿ ಹೊನ್ನಾವರದಿಂದ ಮಾವಿನಗುಂಡಿಯವರೆಗೆ ಹರಡಿಕೊಂಡಿದ್ದ ದಟ್ಟ ಕಾಡಿಗೆ. ಕೊಡಲಿ ಏಟು ಹಾಕಲು ಗುತ್ತಿಗೆದಾರರಿಗೆ ಸುಲಭ ಮಾಡಿಕೊಟ್ಟಂತಾಯಿತು. ಅಂದು ಕಾಡಿದ್ದಲ್ಲೆಲ್ಲ ಇಂದು ಕೇವಲ ಹೆಣ ಸುಡಲಿಕ್ಕೂ ಕಟ್ಟಿಗೆ ಅಭಾವವೆಂದರೆ ನಾವೆಂತಹ ಸ್ಥಿತಿ ತಂದುಕೊಂಡಿದ್ದೇವೆ. ಎಂದು ವಿಚಾರ ಮಾಡಬೇಕಾಗಿದೆ. ಪೌಷ್ಟಿಕ ಮತ್ಸ್ಯಾಹಾರ, ಬಡ ಜನರಿಗೆ ಇಲ್ಲದಾಗಿದೆ. ಅದೆಲ್ಲ ಜಪಾನ್, ಅಮೇರಿಕೆಗೆ ಹೋಗಿ ವಿದೇಶಿ ವಿನಿಮಯಗಳನ್ನು ಗಳಿಸಲಾರಂಭಿಸಿದೆ. ಅಲ್ಲಿ ಸದಾ ಕಂಡುಬರುತ್ತಿದ್ದ ಪಶು ಪಕ್ಷಿಗಳನ್ನು ಕಾಣಬೇಕಾದರೆ ಮೈಸೂರು ಮೃಗಾಲಯಕ್ಕೇ ಬರಬೇಕು. ಇವೆಲ್ಲ ನಾವು ಪ್ರಗತಿಯ ಹೆಸರಿನಲ್ಲಿ ಮಾಡಿದ ಸಾಧನೆಗಳು !

ಸಸ್ಯ ಅಧ್ಯಯನಕ್ಕಾಗಿ 1956 ರಲ್ಲಿ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಗೆ ಹೋಗುವಂತಾಯಿತು. ಅಲ್ಲಿಂದ ಕಾಡಿನಲ್ಲಿ ಲಭ್ಯವಿರುವ ಅಪೂರ್ವ ಸಸ್ಯಕೋಟಿ ನೋಡಿ ವಿಸ್ಮಯವಾಯಿತು. "ಸೈಕ್ ಪ್ಯಾಂಟಿ" ಹೋಗಲು ಯಾವ ವಾಹನ ಸೌಕರ್ಯಗಳೂ ಇಲ್ಲದ್ದರಿಂದ ಅದಿರು ಸಾಗಾಣಿಕೆಗೆ ಬಳಸುವ, ಧೂಳು ತುಂಬಿದ ಲಾರಿಯನ್ನೇ ಏರಬೇಕಾಯಿತು. ಕಿರಿದಾದ ಬಿದಿರು ಕಾಡಿನ ದಾರಿಯನ್ನೇ ಹೆದ್ದಾರಿ ಮಾಡಿಕೊಂಡು ಹೊರಟ ವಾಹನದ ವಿರುದ್ಧ ರೊಚ್ಚಿಗೆದ್ದ ಬಿದಿರುಗಳು ಪ್ರವಾಸಿಗರಿಗೆ ರಕ್ತ ಬರುವಂತೆ ಪರಚಿದವು. ಆದರೆ ಆನೆ ಎತ್ತರದ ದಿನ್ನೆಯ ಮೇಲೆ ನಿಂತು ಕಣಿವೆಯಲ್ಲಿ ಸಸ್ಯ ಸಾಗರದ ಅಡಿಯಿಂದ ನುಸುಳಿಕೊಂಡು ಹೋಗುವ ಕಾಳಿ ನದಿಯ ದರ್ಶನ ಲಾಭದಿಂದಲೇ ಧನ್ಯತೆ ಬಂದಿತು. ಸೂರ್ಯನು ಮುಳುಗುತ್ತಿರುವಾಗ ಕಣಿವೆಯ ಆಕರ್ಷಣೆ ಒಂದು ಬಗೆಯದಾದರೆ, ನಂತರ ಬಂದ ಹುಣ್ಣಿಮೆಯ ಬೆಳದಿಂಗಳಲ್ಲಿ ಅದೊಂದು ಅಪ್ಸರೆಯರ ಲೋಕ ಎಂದು ಭ್ರಮಿಸುವಂತಾಯಿತು. ಯಾರಿಗೋ ಹುಲಿರಾಯನು ನದಿ ನೀರು ಕುಡಿಯುವಂತೆ ಕಾಣಿಸಿತಂತೆ. ಆದರೆ ಎಲ್ಲರೂ ಅಷ್ಟೊಂದು ಅದೃಷ್ಟಶಾಲಿಗಳಾಗಿರಲಿಲ್ಲ, ಸಕಲರೂ ಸೌಂದರ್ಯ ಸವಿಯುವದರಲ್ಲಿ ಮೈ ಮರೆತಾಗ ವಾಹನ ಚಾಲಕನು "ಬೇಗ ದಾಂಡೇಲಿಗೆ ಹಿಂತಿರುಗದಿದ್ದರೆ ಕಾಡು ಪ್ರಾಣಿಗಳನ್ನು ಎದುರಿಸುವದು ಕಷ್ಟ" ಎಂದು ಎಚ್ಚರಿಸಿದನು. ಹಿಂದಿನ ವರ್ಷ ಕಾಲೇಜು ವಿದ್ಯಾರ್ಥಿಗಳ ತಂಡದಲ್ಲಿಯ ಒಬ್ಬನು ನಾಪತ್ತೆಯಾದ. ಆನಂತರ ಎಷ್ಟೊಂದು ಹುಡುಕಾಡಿದರೂ ಅವನ ಶವ ಕೂಡ ಸಿಗಲಿಲ್ಲವೆಂದು ಚಾಲಕ ವಿವರಿಸಿದಾಗ ಜನಗಣತಿ ಮಾಡಿ ವಾಹನವೇರಲೇ ಬೇಕಾಯಿತು.

ಇಂದು ಆ ಸ್ಥಳ ನೋಡಿದಾಗ ಮೂರು ದಶಕಗಳ ಹಿಂದೆ ನಾವು ಇಲ್ಲಿಯೇ ಬಂದಿದ್ದು ಎಂದು ನಂಬುವುದೂ ಕೂಡ ಕಷ್ಟ! ಬಿದಿರಿನ ಕಾಡು ಇದ್ದುದ್ದೆಲ್ಲ ಕಡಿದು ಅಲ್ಲಿ ಕಾಳಿ ನದಿಯ




ಪರಿಸರ ನಾಶ

ವಿದ್ಯುತ್ ಯೋಜನೆಗೆ ಬೇಕಾಗುವ ನೀರು ಸಂಗ್ರಹ, ಸಾಗಾಣಿಕೆಗಾಗಿ ದೊಡ್ಡ ಕೆರೆ - ಕೊಳವೆಗಳನ್ನು ರಚಿಸಿದ್ದಾರೆ. ಕಣಿವೆಯಲ್ಲಿ ಬೃಹತ್ ನಾಗರಝರಿ ಜಲವಿದ್ಯುತ್ ಕೇಂದ್ರ ಸ್ಥಾಪಿಸಲಾಗಿದೆ (1979). ಈಗ ಅದೇ "ಸೈಕ್ ಪಾಯಿಂಟ್"ನಿಂದ ಹುಲಿ ಕಾಣುವುದಿರಲಿ. ಇಲಿಯೂ ಕಾಣಸಿಗದು. ಪ್ರವಾಸಿಗರನ್ನು ಆಕರ್ಷಿಸುವುದಕ್ಕಾಗಿ ಅಲ್ಲಿ ಕೊರಡಿನ ಮಂಚಾನ ಒಂದು ಕಟ್ಟಲಾಗಿದೆ. ಪ್ರವಾಸಿಗರು ಅಲ್ಲೊಂದು ಹೋಟಲಿನ ಕೊರತೆ ಬಗ್ಗೆ ದೂರಿದ್ದು ಕೇಳಿ ಅತೀವ ದುಃಖವಾಯಿತು. ಈ ನಿಸರ್ಗ ಪ್ರೇಮಿಗಳಿಗೆ ಹೋದಲ್ಲೆಲ್ಲ ಮಸಾಲೆ ದೋಸೆ, ಕಾಫಿಗಳೇ ಬೇಕು.

ದಾಂಡೇಲಿಯ ಪರಿಸರದ ಸ್ಥಿತಿಗತಿಗಳಂತೂ ತೀರಾ ಶೋಚನೀಯ. ತಿರುಳ ಮತ್ತು ಕಾಗದ ಉತ್ಪಾದನೆಗೆ ಹೇಳಿ ಮಾಡಿಸಿದಂತೆ ಬಿದಿರು, ರಾಜ್ಯ ಮತ್ತು ರಾಷ್ಟ್ರಕ್ಕೆ ನಿಸರ್ಗಮಾತೆಯ ವಿಶೇಷ ಕೊಡುಗೆ. ಪಾಶ್ಚಿಮಾತ್ಯ ರಾಷ್ಟ್ರಗಳು ಇದನ್ನು ಬೆಳಸಲು ಮಾಡಿದ ಸಕಲ ಯತ್ನಗಳು ವಿಫಲಗೊಂಡಿವೆ. ಬಿದಿರು ಅತೀವೇಗದಿಂದ ಬೆಳೆಯುವದರಿಂದ ಮುಂದಾಲೋಚನೆಯಿಂದ ಬಳಸಿದರೆ ನಿರಾತಂಕವಾಗಿ ಅದರ ಪೂರೈಕೆ ಪಡೆಯಬಹುದಾಗಿದೆ. ಬಿದಿರಿನ ಬೇರುಗಳು ಸೂಸು ಮಣ್ಣನ್ನು ಬಿಗಿದಪ್ಪಿಕೊಳ್ಳುವುದರಿಂದ ಸವಕಳಿಗೆ ಅವಕಾಶವೇ ಇರುವುದಿಲ್ಲ. ಕಾಗದ ಕಾರ್ಖಾನೆಯನ್ನು ಸ್ಥಾಪಿಸಲು ಹಂಬಲಿಸುವ ಉದ್ದಿಮೆದಾರರು ಅವರಿಗೆ ಸಿಗಬಹುದಾದಕ್ಕಿಂತ ನಾಲ್ಕು ಪಟ್ಟು ಹೆಚ್ಚು ಬಿದಿರು ಲಭ್ಯವಿದೆ ಎಂದು ಸರ್ಕಾರಕ್ಕೆ ಮನವಿ ಮಾಡಿಕೊಂಡರು. ಧನಿಕರ ಬಾಯಿಂದ ಸುಳ್ಳು ಬಾರದೆಂದು ಸರ್ಕಾರ ಅರಣ್ಯ ಇಲಾಖೆಯ ಮುಖಾಂತರ ಇದನ್ನು ಖಚಿತಪಡಿಸುವ ಗೋಜಿಗೆ ಹೋಗದೆ ಕಾರ್ಖಾನೆಯನ್ನು ತೆರೆಯಲು ಒಪ್ಪಿಗೆ ನೀಡಿತು. ಆದರೆ ಆ ರಾಕ್ಷಸನ ಹಸಿವು ನೀಗಲು ಪ್ರತಿವರ್ಷಕ್ಕೆ ಐವತ್ತು ಸಾವಿರ ಟನ್ನಿಗಿಂತ ಹೆಚ್ಚು ಬಿದಿರಿನ ಅವಶ್ಯಕತೆ ಇದ್ದುದರಿಂದ ಬಿದಿರಿನ ಹಿಂಡುಗಳನ್ನು ಸಂಪೂರ್ಣವಾಗಿ ಕಡಿಯಲಾರಂಭಿಸಿದರು. ಇದರಿಂದ ಸುತ್ತಮುತ್ತಲಿನ ಅರಣ್ಯಗಳು ಬರಿದಾದವು. ಬಿದಿರು ಬೆಳೆಯಬೇಕಾದಲ್ಲಿ ಯುಘಿಟೋರಿಯಂನಂತಹ ಕಳೆ ಬೆಳೆಯಲಾರಂಭಿಸಿದವು. ಈ ಕಳೆ ಹಬ್ಬಿಕೊಂಡಲ್ಲಿ ಎಂತಹ ಹುಲ್ಲು ಸಹ ಬೆಳೆಯಲಾರದು, ಬೇಸಿಗೆಯಲ್ಲಿ ಅವು ಒಣಗುವುದರಿಂದ ಕಾಡುಕಿಚ್ಚು ಹಬ್ಬಲು ಅನುಕೂಲ ವಾತಾವಾರಣ ಕಲ್ಪಿಸಿಕೊಟ್ಟಂತೆ ಆಗಿದೆ.

ಸೂಪಾ ಅವಸಾನ

ಸೂಪಾ ಪಟ್ಟಣ ಕೊನೆಯುಸಿರು ಬಿಟ್ಟ ರೀತಿ ಅತ್ಯಂತ ಕರುಣಾಜನಕ. ಅಲ್ಲಿಯ ನಾಗರಿಕರು ಕೃಷಿ, ವ್ಯಾಪಾರಗಳನ್ನು ನಡೆಸಿ ತೀರಾ ನಿರಾಡಂಬರ ಜೀವನ ನಡೆಸುತ್ತಿದ್ದರು. ಸನಿಹದ ಕಾಡುಗಳಲ್ಲಿ ಬೀಡು ಮಾಡಿದ ಹುಲಿ. ಕರಡಿ, ಚಿರತೆ, ಹೆಬ್ಬಾವುಗಳು ಅವರ ಸಹಜೀವಿಗಳಾಗಿದ್ದವು. ಅಲ್ಲಿ ಹರಿಯುವ ಕಾಳಿ ನದಿಯೇ ಅವರ ಜೀವನ ಕ್ರಮ ಅಹುತಿ ತೆಗೆದುಕೊಳ್ಳುಬಹದೆಂದು ಅವರು ಕನಸು ಮನಸಿನಲ್ಲಿ ಎಣಿಸಿರಲಿಲ್ಲ. ಬೆಳಗಾವಿಯ ಅಲ್ಯುಮಿನಿಯಂ ಕಾರ್ಖಾನೆ. ಸೊಂಡೂರಿನ ಉಕ್ಕಿನ ಕಾರ್ಖಾನೆ, ಬಿಣಗದ ಸೋಡಾ ಕಾರ್ಖಾನೆ. ಹರಿಹರದ ಪಾಲಿಫೈಬರ್ ಮುಂತಾದ ಉದ್ದಿಮೆಗಳಿಗೆ ವಿದ್ಯುತ್ ಪೂರೈಕೆಯ ಬಗ್ಗೆ ಸರ್ಕಾರ



ಈ ಜಲಪಾತಕ್ಕ ಇನ್ನೆಷ್ಟು ಆಯುಸ್ಸು




ಬದಿರಿನ ಸ್ಥಾನ ಆಕ್ರಮಿಸಿರುವ ಯಾಪಟೇರಿಯಂ

ಜವಾಬ್ದಾರಿ ಹೊತ್ತಿದ್ದರಿಂದ ಹೊಸ ವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭಿಸುವುದು ಅತ್ಯವಶ್ಯಕವಾಗಿತ್ತು. ಅಂತೆಯೆ ಅಲ್ಲಿಯವರನ್ನೆಲ್ಲ ರಾಮನಗರಕ್ಕೆ ಓಡಿಸಿ ಸೂಪಾ ನಗರವನ್ನು ಜಲಸಮಾಧಿ ಮಾಡಿತು. ಈ ವಿದ್ಯತ್ ಉತ್ಪಾದನಾ ಕೇಂದ್ರದ ಹತ್ತಿರ 'ಗಣೇಶ ಗುಡಿ' ಎಂಬ ಹೊಸ ಪಟ್ಟಣವೇ ತಲೆಎತ್ತಿ ನಿಂತಿದೆ. ಅಲ್ಲಿ ವಾಸಿಸುವವರೆಲ್ಲ ವಿದ್ಯುತ್ ಕೇಂದ್ರದ ಅಧಿಕಾರಿಗಳು ಮತ್ತು ಕಾರ್ಮಿಕರು, ಅಲ್ಲಿಯ ಹೊಸ ನಾಗರಿಕರ ಜೀವನ ಕ್ರಮ, ಪ್ರತಿ ನಿತ್ಯವೂ ದೀಪಾವಳಿ ಯಂತೆ ಜಗಜಗಿಸುವ ದೀಪಗಳನ್ನು ನೋಡಿದಾಗ, ಅಯ್ಯೋ! ಸೂಪಾದವರ ಅದೃಷ್ಟ ಚೆನ್ನಾಗಿರಲಿಲ್ಲವೆಂದು ಅನಿಸದೇ ಇರದು.

ಉಂಡವನಿಗೆ ಹಸಿವು ಹೆಚ್ಚಂತೆ. ಅದರಂತೆ ಹೆಚ್ಚೆಚ್ಚು ಉತ್ಪಾದಿಸಿದಂತೆ ವಿದ್ಯುತ್ ಬರಗಾಲವು ಹೆಚ್ಚಲಾರಂಭಿಸಿದೆ. ಕೇವಲ ಅಂಕಿ ಸಂಖ್ಯೆಗಳಲ್ಲಿ ವಿಶ್ವಾಸವಿಟ್ಟ ಸರ್ಕಾರ ಹಾಗೂ ತಜ್ಞರು ವಿದ್ಯುತ್ ಉತ್ಪಾದನೆಗಾಗಿ ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ವರಾಹಿ, ಬೇಡತಿ. ಅಘನಾಶಿನಿ, ಶರಾವತಿಯ ಟೇಲ್‌ರೇಸ್, ಕಾಳಿನದಿಯ ತೃತೀಯ ಹಂತದ ಯೋಜನೆಗಳನ್ನು ಮುಗಿಸಿದಾಗ ರಾಜ್ಯದಲ್ಲಿ ವಿದ್ಯುತ್ ಕೊರತೆ ಏನೇನೂ ಉಳಿಯಲಾರದೆಂಬ ಆತ್ಮವಿಶ್ವಾಸದಿಂದ ರಾಜಕಾರಣಿಗಳು ಹೊಸ ಹೊಸ ಉದ್ದಿಮೆಗಳನ್ನು ಆಮಂತ್ರಿಸಲು ವಿದೇಶೀ ಯಾತ್ರೆ ಪ್ರಾರಂಭಿಸಿಯೇ ಬಿಟ್ಟಿದ್ದಾರೆ! ಇದ್ದ ಮಕ್ಕಳಿಗೆ ಗಂಜಿಯಿಲ್ಲ ಮತ್ತೊಂದು ಕೊಡು ಸದಾಶಿವ ಅಂದಂತೆ! ನೋಟು ಮತ್ತು 'ಓಟುಗಳಿಂದ ಚುನಾಯಿತರಾಗಿ ಬಂದ ರಾಜಕಾರಣಿಗಳಿಗೆ ಅಧಿಕಾರದ ಕುರ್ಚಿಯಲ್ಲಿ ಇರಬಹುದಾದಂತಹ ಐದು ವರ್ಷಗಳಿಗಿಂತ ಹೆಚ್ಚು ದೂರ ದೃಷ್ಟಿ

ಸೂಪಾ ಜಲಸಮಾಧಿ ಮಾಡಿದ ಆಣೆಕಟ್ಟು



ಹಾಯಿಸುವುದರಲ್ಲಿ ಯಾವ ಲಾಭವೂ ಇಲ್ಲವೆಂದು ಲೆಕ್ಕಾಚಾರ. ಇಲ್ಲದಿದ್ದರೆ ಕೇವಲ ನಾಲ್ಕು ದಶಕಗಳಲ್ಲಿ ಇಷ್ಟೊಂದು ಜಲವಿದ್ಯುತ್ ಯೋಜನೆಗಳನ್ನು ಕಾರ್ಯಗತ ಮಾಡಿ ಇಂದು "460 ಲಕ್ಷ ಯುನಿಟ್‌ಗಳ ಬೇಡಿಕೆ ಇದೆ !" ನಾವು ಕೇವಲ 210 ಲಕ್ಷ ಯುನಿಟ್ ಉತ್ಪಾದಿಸಬಲ್ಲೆವು. ಹೊರ ರಾಜ್ಯಗಳಿಂದ 100 ಲಕ್ಷ ಯುನಿಟ್ ಕೊಂಡರೂ ಪ್ರತಿದಿನವೂ 150 ಲಕ್ಷ ಯುನಿಟ್‌ಗಳ ಕೊರತೆ ಇದ್ದೇ ಇದೆ ಎಂದು ಹೇಳುವ ಪರಿಸ್ಥಿತಿ ಬರುತ್ತಿತ್ತೇ? ಕಳೆದ ನಾಲ್ಕು ವರ್ಷಗಳಿಂದ ಸರಿಯಾದ ಮಳೆ ಬೀಳದೆ ಇರುವುದೇ ಇದಕ್ಕೆ ಕಾರಣವೆಂದು ಹಾರಿಕೆ ಮಾತು ಹೇಳುವುದು ಸುಲಭ. ಆದರೆ ಆತ್ಮವನ್ನು ಶೋಧಿಸಿಕೊಂಡರೆ, ಈ ಶೋಚನೀಯ ಸ್ಥಿತಿಗೆ ರಾಜಕಾರಣಿ, ವಿದ್ಯುತ್ ಖಾತೆ, ಅರಣ್ಯ ಖಾತೆ, ಉದ್ದಿಮೆದಾರರು ಮತ್ತು ಗುತ್ತಿಗೆದಾರರು ಎಂದು ಆತ್ಮವಿಶ್ವಾಸದಿಂದ ಹೇಳಬಹುದು. ಇವರೇ ಅಲ್ಲವೇ ಒಳಸಂಚು ಮಾಡಿ ನಮ್ಮ ಕಾಡು, ಝರಿ, ನದಿಗಳನ್ನು ಹಾಳುಗೆಡವಿದವರು?

ಇದಾಗಲೇ ಅನುಸರಿಸಿದ ತಪ್ಪು ಧೋರಣೆಗಳನ್ನು ಜೀರ್ಣಿಸಿಕೊಳ್ಳುವುದಕ್ಕಾಗಿ ಸಕಲರೂ 'ಸಾಮಾಜಿಕ ಅರಣ್ಯ ಅಗತ್ಯವೆಂದು ಗಂಟಲು ಬಿರಿಯುವಂತೆ ಕೂಗುತ್ತಿದ್ದಾರೆ. ಇದಕ್ಕೆ ತಗಲುವ ಹೆಚ್ಚಿನ ಹಣ ಅಂತರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ, ಜಾಗತಿಕ ಬ್ಯಾಂಕು. ಸ್ವೀಡನ್ ಕೆನಡಾ, ಅಮೇರಿಕೆಗಳಿಂದ ಬರುವುದರಿಂದ, ಹೋಳಿಗೆ ತುಪ್ಪ ತಿನ್ನಬಹುದೆಂದು ಸಕಲರೂ ಗೆಲುವಾಗಿಯೇ ಇದ್ದಾರೆ. ಇಲ್ಲವಾದರೆ ಸಾಗುವಾನಿ (ತೇಗ), ಬೀಟೆ, ಮತ್ತಿ, ಹೊನ್ನೆಗಳಂತಹ ಬೆಲೆ ಬಾಳುವ ವೃಕ್ಷ ಬೆಳೆಯುವಲ್ಲಿ ನೀಲಗಿರಿಯಂತಹ ಮರ ಬೆಳೆಸುವುದರಲ್ಲಿ ಏನರ್ಥ? 15,534,000 ಹೆಕ್ಟೇರುಗಳಲ್ಲಿ ನೀಲಗಿರಿ ಬೆಳೆಸುವುದು ಜನಹಿತಕ್ಕಾಗಿಯೇ ಬೇಸಾಯಕ್ಕೆ ಬಳಸುವ ನೆಲದಲ್ಲಿ 110,000 ಹೆಕ್ಟೇರು ನೀಲಗಿರಿ ಬೆಳೆಸುವದು ತರ್ಕಬದ್ಧವೇ? ಈ ವೃಕ್ಷಗಳಿಂದ ಸೊಪ್ಪು,

ಗೊಬ್ಬರ, ನೆರಳು, ಸೌದೆ, ಸಿಗಲಾರದು, ಇದು ಇನ್ನಿತರ ಗಿಡಮರಗಳಿಗೆ ಅಪಾಯಕಾರಿಯಲ್ಲವೆಂದು ಪ್ರಯೋಗಗಳಿಂದ ಸಿದ್ದಮಾಡುವ ತೊಂದರೆ ಯಾರೂ ತೆಗೆದುಕೊಳ್ಳಲೇ ಇಲ್ಲ. ಈ ಬೆಳೆಯ ಅಧಿಕಾಂಶ ತಿರುಳು. ಕಾಗದ, ರೇಯಾನ್, ಉತ್ಪಾದನಾ ಕಾರ್ಖಾನೆಗಳಿಗೆ 'ಸುಲಭ ಬೆಲೆಗೆ ಪೂರೈಸಲಾಗುತ್ತದೆ ಎಂದು ಬೇರೆ ಹೇಳಬೇಕೇ? ಹರಿಹರದ ಪಾಲಿಫೈಬರ್ ಕಂಪನಿಯೊಂದೇ ಪ್ರತಿವರ್ಷ 59,029 ಟನ್ನುಗಳಷ್ಟು ನೀಲಗಿರಿ ಬಳಸುತ್ತದೆ. ಗೋಮಾಳ. ಸ್ಥಳಗಳಲ್ಲಿ ಬೆಳೆಸಿದ ನೀಲಗಿರಿ, ಸರ್ವೆ ಮರಗಳು, ಯಾರ ಸ್ವತ್ತು ಎಂಬುದರ ಬಗ್ಗೆ ಈಗಾಗಲೇ ಹಳ್ಳಿಗಳಲ್ಲಿ, ಕಾದಾಟ ಬಡಿದಾಟಗಳು ಪ್ರಾರಂಭವಾಗಿವೆ. ಎಷ್ಟೆಂದರೂ ಸಾಮಾಜಿಕ ಅರಣ್ಯಗಳು ಸಮಾಜದ ಉದ್ಧಾರಕ್ಕಾಗಿ ನೋಡಿ!; ವಿದೇಶಿ ಮುದ್ರೆಗಳನ್ನು ಉಳಿಸುವುದಕ್ಕಾಗಿ ಪಾಮೋಲಿನ್ ಎಣ್ಣೆ ಕೊಡುವ ತಾಳೆಗಳನ್ನು ನಮ್ಮ ದೇಶದಲ್ಲೆ ಬೆಳೆಸುವುದು ಸರ್ಕಾರದ ಹೊಸ ಯೋಜನೆ, ಇದಕ್ಕಾಗಿ ಕರ್ನಾಟಕ ಎಲ್ಲರಿಗಿಂತ ಮುಂದು. ಮಲೇಶಿಯಾದಲ್ಲಿ ಬೆಲೆ ಬಾಳುವ ಕಾಡನ್ನು ಕಡಿದು ಈ ತಾಳೆ ವೃಕ್ಷಗಳ ತೋಟ ಮಾಡುವಾಗ ವಿಶ್ವ ಅರಣ್ಯ ಶಾಸ್ತ್ರ ಪಂಡಿತರು ಹಾಗೆ ಮಾಡದಿರಲು ಎಚ್ಚರಿಸಿದ್ದರು. ಈಗ ನಮ್ಮ ರಾಜ್ಯವೇ ಇಂತಹ ತಪ್ಪು ಹೆಜ್ಜೆ ಹಾಕುವುದು ಅತ್ಯಂತ ಶೋಚನೀಯ. ಪಶುಪಕ್ಷಿಗಳು ಇಂತ ಕಡೆಯಲ್ಲಿ ಹೇಗೆ ಬಾಳಿ ಬದುಕಿಯಾವು ? ಹುಲಿ, ಕರಡಿ, ಚಿರತೆ, ನರಿ, ಹಂದಿ ಕಾಡಾನೆಗಳಿಗೆ ಈ ತೋಟಗಳು ಆಶ್ರಯ ನೀಡಬಲ್ಲವೇ?

ಚಿಕ್ಕಮಗಳೂರು ಜಿಲ್ಲೆಯಿಂದ ದಕ್ಷಿಣಕ್ಕೆ ಕೇರಳದವರೆಗೆ, ಕಾಫಿ, ಚಹ, ಯಾಲಕ್ಕಿ, ಬಾಳೆ, ಮೆಣಸಿನ ಕಾಳು, ಗೋಡಂಬಿಗಳ ತೋಟಗಳಿವೆ. ಇವುಗಳಿಂದ ರಾಜ್ಯಕ್ಕೆ ಆದಾಯವೂ, ರಾಷ್ಟ್ರಕ್ಕೆ ವಿದೇಶಿ ಮುದ್ರೆಗಳ ಲಾಭವೂ ಆಗುವುದೇನೋ ನಿಜ. ಆದರೆ ಈ ಕಾರಣದಿಂದ ತೋಟದ ಮಾಲೀಕರಿಗೆ ಸುತ್ತ ಮುತ್ತಲಿನ ಕಾಡನ್ನು ಸವರಿ ತಮ್ಮದನ್ನಾಗಿ ಮಾಡಿಕೊಳ್ಳುವ ಅಧಿಕಾರ ಬರುತ್ತದೆಯೇ? ರಾಜಕಾರಣಿಗಳು 'ಅತಿಕ್ರಮಣ ಮಾಡಿದ್ದೆಲ್ಲ ನಿಮ್ಮ ಹೆಸರಿಗೆ ವರ್ಗಾಯಿಸಿಕೊಡುತ್ತೇವೆ' ಎಂಬ ಆಶ್ವಾಸನೆ ಕಾಡಿನ ಕೊಲೆಗಡುಕರಿಗೆ ಉತ್ತೇಜನಕೊಟ್ಟಂತೆ ಆಗಲಿಲ್ಲವೇ? ಇದರಂತೆ "ದೀನದಲಿತರು, ಹಿಂದುಳಿದವರು, ವಿಶಿಷ್ಟ ಜಾತಿಯ ಹೆಸರಿನಲ್ಲಿ ಅರಣ್ಯ ಭಾಗ ಬೋಳುಮಾಡಿ ತಮ್ಮದನ್ನಾಗಿ ಮಾಡಿಸಿಕೊಂಡವರಿಗೆ ಖಾತೆ ಹಾಕಿಕೊಡಲಾಗುವುದು' ಎಂದು ಹೇಳಿಕೆ ನೀಡಿದಾಗ ನಿರಾತಂಕವಾಗಿ ಕಾಡು ನಿಮ್ಮದನ್ನಾಗಿ ಮಾಡಿಕೊಳ್ಳಿ ಎಂದು ಸಾರಿದಂತಾಗಲಿಲ್ಲವೇ? ಅಂತೆಯೇ ಒಂದು ಕಾಲದಲ್ಲಿ ಯಾವ ಸಂರಕ್ಷಣೆಯೂ ಇಲ್ಲದೆ ಸಮೃದ್ಧವಾಗಿ ಬೆಳೆದ ಅರಣ್ಯ ಇಂದು ಬೋಳಾಗುತ್ತಿದೆ. ಕಾಡು ಕಡಿದ ನಂತರ ತೀವ್ರ ಸವಕಳಿಯಿಂದ ಅದು ಮರುಭೂಮಿಯಾಗಿ ಬೆಳೆಯುತ್ತಿದೆ. ಕಬಿನಿ ಯೋಜನೆಯಿಂದ ನಿರ್ಗತಿಕರಾದವರಿಗೆ ಸರ್ಕಾರ ಭೂಮಿ ಕೊಡಮಾಡಿತು. ಹೊಸ ಮಾಲೀಕರು ಅಲ್ಲಿದ್ದ ಬೆಲೆಬಾಳುವ ಮರಗಳನ್ನು ಕಡಿದು ತಮ್ಮ ಜೇಬು ತುಂಬಿಸಿಕೊಡಿದ್ದರಿಂದ ಭೂಮಿ ಸವಕಳಿಯಿಂದಾಗಿ ಪಾಳು ಬೀಳುವಂತಾಯಿತು.

ಪಶ್ಚಿಮ ಘಟ್ಟದಲ್ಲಿರುವ ತಾಲ್ಲೂಕುಗಳ ಅಭಿವೃದ್ಧಿಗಾಗಿ ರಾಜ್ಯ ಕೇಂದ್ರ ಸರ್ಕಾರಗಳು 1957 ರಿಂದ ಅಧ್ಯಯನ ನಡೆಸಿಯೇ ಇವೆ! ಒಂದು ಕಮಿಟಿ ಸರಿಯಾಗಿಲ್ಲವೆಂದು ಇನ್ನೊಂದು ಮಗದೊಂದು ಅಸ್ತಿತ್ವಕ್ಕೆ ಬಂದು ಕಣ್ಮರೆಯಾಗುತ್ತಿವೆ. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಪಶ್ಚಿಮ ಘಟ್ಟದ ಅಭಿವೃದ್ಧಿಯ ಹೆಸರಿನಲ್ಲಿ 406 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಮೊತ್ತವನ್ನು 1,445 ಲಕ್ಷಕ್ಕೆ ಏರಿಸಲಾಯಿತು. ಸರ್ಕಾರ ಹಣದ ಹೊಳೆ ಹರಿಸಲಿದೆ ಎಂದು ಅರಿವಾದ ಕೂಡಲೇ ಅದನ್ನು ತಮ್ಮದನ್ನಾಗಿ ಮಾಡಿಕೊಳ್ಳುವವರು, ಎಲ್ಲ ಕಡೆಯಲ್ಲೂ ಹುಟ್ಟಿಕೊಳ್ಳುತ್ತಾರೆ. ವಿಜ್ಞಾನಿ ಅನಿಸಿಕೊಂಡವರು ಈ ಸ್ಪರ್ಧೆಯಲ್ಲಿ ಹಿಂದೆ ಬೀಳದೆ ಇರುವುದು ಅತ್ಯಂತ ಶೋಚನೀಯ. ಪಶ್ಚಿಮ ಘಟ್ಟದ ಅಧ್ಯಯನಕ್ಕಾಗಿ ಲಕ್ಷಗಟ್ಟಲೆ ರೂಪಾಯಿಗಳ ಯೋಜನೆಗೆ ಮಂಜೂರಾತಿ ಪಡೆಯಲು ಓಡಾಡುವರು. ಕೀಟಶಾಸ್ತ್ರಜ್ಞ ಎವೆ ಮುಚ್ಚುವುದರಲ್ಲಿ ಪಕ್ಷಿಪರಿಣತನಾಗುವನು! ಸಸ್ಯಶಾಸ್ತ್ರಜ್ಞ ಪರಿಸರ ವಿಜ್ಞಾನಿಯಾಗುತ್ತಾನೆ! ಮಂಜೂರು ಮಾಡಿದ ಹಣ, ಆಫೀಸು, ಸಲಕರಣೆ, ಜೀಪು, ಸಂಬಳ, ಪೆಟ್ರೋಲ್‌ಗಳಿಗೆ ಸಾಕಾಗದಿರುವಾಗ ಸಂಶೋಧನೆ ಮಾಡುವ ಮಾತು ದೂರವೇ ಉಳಿಯಿತು. ಬೆಲೆ ಬಾಳುವ ಸಾರ್ವಜನಿಕರ ಹಣ ಹಾಳು ಮಾಡಿದ್ದರೂ ಒಂದು ಕ್ಷಣವೂ ಅಳುಕದೇ ನಿವೃತ್ತರಾಗುವರು. ಈ ಹಿನ್ನೆಲೆಯಲ್ಲಿ ಜೇನು ಸಾಗಾಣಿಕೆ. ಕತ್ತದ ಕೈಗಾರಿಕೆ. ಮಹಾಪೂರ ನಿಯಂತ್ರಣ ಯೋಜನೆ, ಕಿರಿ ಕೈಗಾರಿಕಾ ಕೇಂದ್ರಗಳು, ಪ್ರವಾಸಿ ಗೃಹಗಳು ಹೇಗೆ ಕೆಲಸ ಮಾಡುತ್ತಿರಬಹುದು? ಎಂದು ಊಹಿಸುವುದೇನೂ ಕಷ್ಟದ ಮಾತಲ್ಲ.

ಹುಟ್ಟಿ, ಬೆಳೆದು, ಕಣ್ಮರೆಯಾಗುವುದು ಪ್ರಕೃತಿಯ ನಿಯಮ. ಇದು ಕಾಡುಗಳಿಗೂ ಅನ್ವಯಿಸುತ್ತದೆ. ಆದ್ದರಿಂದ ಉರುವಲು, ಮೇವು, ಹಣ್ಣು ಹಂಪಲ, ದಿಂಡುಗಳನ್ನು ಪಡೆಯುವುದಕ್ಕಾಗಿ ಸರ್ವಕಾಲಕ್ಕೂ ನಿಸರ್ಗದಲ್ಲಿ ಸಮತೋಲನವಿಡುವ ಸೂತ್ರಗಳನ್ನು ಬಳಸಬೇಕಾಗುತ್ತದೆ. ಅದಿರು ಅಗೆದು ಅರಣ್ಯ ಹಾಳುಗೆಡಹುವದು ಸರಿಯಲ್ಲ. ಅಲ್ಲಿಗೆ ಸೂಸು ಮಣ್ಣು ಸ್ಥಳಾಂತರಿಸಿ ಹೊಸ ಸಸ್ಯಗಳು ಬೆಳೆಯುವಂತೆ ಮಾಡಬೇಕಾಗುವುದು. ಪರಿಸರ ಸಂರಕ್ಷಿಸಿದಾಗ ಮಾತ್ರ ನಾವು ಅದರೊಂದಿಗೆ ಬದುಕಬಹುದು, ಬೆಳೆಯಲೂ ಬಹುದು. ನಾವೆಲ್ಲ ಜೀವನದಲ್ಲಿ ಅತೀವ ಹೆಚ್ಚು ಅಪೇಕ್ಷಿಸದೇ ಸಮಪಾಲು, ಸಮಬಾಳು, ಮಾಡಿಕೊಂಡು ಪರಿಶುದ್ಧ ನೀರು, ಹವೆ, ಆಹಾರ ಸೇವಿಸುತ್ತ ಆರೋಗ್ಯವಂತರಾಗಿ ನೆಮ್ಮದಿಯಿಂದ ಬಾಳಲು ಸಾಧ್ಯವಿದೆ. ಇದು ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಸೂಚಿಸಿದ ದಾರಿ, ನಮಗೆ ಐಷಾರಾಮಗಳೇ ಜೀವನದಲ್ಲಿ ಅತೀ ಮುಖ್ಯವಾಗಿದ್ದರೆ ಜಪಾನಿನ ಮೇಲ್ಪಂಕ್ತಿ ಅನುಸರಿಸಬೇಕು. ಮಿತ ಸಂತಾನಿಗಳಾಗಿ, ಬೆನ್ನು ಮುರಿದು ದುಡಿದು ಕೇವಲ ವೈಜ್ಞಾನಿಕ ತಾಂತ್ರಿಕ ಮುನ್ನಡೆಯಿಂದಲೇ ನಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳಬೇಕು. ಇವೆರಡನ್ನೂ ಬಿಟ್ಟು ಈಗಿನ ಧೋರಣೆಗಳನ್ನೇ ಮುಂದುವರಿಸಿದರೆ ಅತ್ಯಂತ ಶೋಚನಿಯ ಸ್ಥಿತಿ ತಂದುಕೊಳ್ಳುವುದು, ಖಂಡಿತ.

●

೧೫. ದ್ವೀಪಗಳ ರಾಣಿ ಶರಾವತಿ

ಶಿವಮೊಗ್ಗಾ ಜಿಲ್ಲೆಯಲ್ಲಿ ಉಗಮವಾಗಿ, ಜೋಗದಲ್ಲಿ ಜಲಪಾತವನ್ನು ನಿರ್ಮಿಸಿದ ಶರಾವತಿ ನದಿ ಹೊನ್ನಾವರದ ಹತ್ತಿರ ಸರೋವರದಂತೆ ವಿಸ್ತಾರವಾಗಿ ಪಸರಿಸಿಕೊಂಡಿದ್ದಾಳೆ. ಸಮಾರು ಎಂಟು ಕೀಲೋಮೀಟರ್ ಉದ್ದ ಮತ್ತು ಒಂದರಿಂದ ಮೂರು ಕಿಲೋಮೀಟರ್ ಉದ್ದ ಮತ್ತು ಒಂದರಿಂದ ಮೂರು ಕೀಲೋಮೀಟರ್ ಅಗಲವಿರುವ ಈ ಹರವಿನಿಲ್ಲಿ ಮಾವಿನಕುರ್ವೆ, ಪಾವಿನಕುರ್ವೆ, ಮಲ್ಲಿಕುರ್ವೆ ಮುಂತಾದ ನಡುಗಡ್ಡೆ (ಕುರ್ವೆ=ದ್ವೀಪ)ಗಳಿವೆ. ಅಲ್ಲದೇ ಶರಾವತಿ ಸಮುದ್ರರಾಜನನ್ನು ಸೇರಿಕೊಳ್ಳುವಲ್ಲಿ ಬಸವರಾಜದುರ್ಗ ರಾಜಠೀವಿಯಿಂದ ತಲೆಯೆತ್ತಿ ಮೆರೆಯುತ್ತಿದೆ. ಕಾಠೇವಾಡದಿಂದ ಕೊಚಿನ್ ತನಕ ಕಡಲ ಮಾರ್ಗವನ್ನು ನಿಯಂತ್ರಿಸುವ ಈ ಜಲದುರ್ಗವನ್ನು ತಮ್ಮದನ್ನಾಗಿ ಮಾಡಿಕೊಳ್ಳಲು ಕೆಳದಿ ಅರಸರು, ಹೈದರಲಿ, ಟೀಪುಸುಲ್ತಾನ, ಪೊರ್ಚುಗೀಸರು, ಮರಾಠರು, ಬ್ರಿಟಿಶರು ಸೆಣಸಾಟ ನಡೆಸಿದ್ದರಿಂದ, ಕರ್ನಾಟಕ ಕಡಲ ವ್ಯಾಪಾರದ ಚರಿತ್ರೆಯಲ್ಲಿ ಇದು ಅತ್ಯಂತ ಮಹತ್ವದ ಪಾತ್ರ ವಹಿಸಿದೆ.

ಕೆಳದಿಯ ಬಸವಪ್ಪ ನಾಯಕ (1696-1714) ಕಟ್ಟಿಸಿದ, ನೀರಿನಲ್ಲಿ ತೇಲುವಂತೆ ಭಾಸವಾಗುವ ಬಸವರಾಜದುರ್ಗ ಕರಾವಳಿ ತೀರದ ಸಾಹಸಿಗರನ್ನೆಲ್ಲ ಕೈ ಎತ್ತಿ ಕರೆಯುತ್ತಿರುತ್ತದೆ. ಆದರೆ ರಭಸದ ಗಾಳಿ, ಅಬ್ಬರದ ತೆರೆಗಳಿಂದಾಗಿ ಅಲ್ಲಿಗೆ ಮುಟ್ಟುವದು ಸುಲಭಸಾಧ್ಯವಲ್ಲ.



ಸುಣ ಗಾರೆ ಸಿಮೆಂಟ್‌ಗಳಿಲ್ಲದ ಬಸವರಾಜದುರ್ಗ ಕೋಟೆಯ ಗೋಡೆ

ನಾಲ್ಕುದಶಕಗಳವರೆಗೆ ಅದನ್ನೇರುವ ಕನಸುಕಂಡು, ಕೊನೆಗೊಮ್ಮೆ ಅದು ನನಸಾದಾಗ, ಎವರೆಸ್ಟ್ ಶಿಖರವೇರಿದ ತೇನಸಿಂಗನಿಗಾದಷ್ಟು ಸಂತೋಷ-ನೆಮ್ಮದಿಗಳಾದವು. ಸುಮಾರು ಎರಡು ಕಿಲೋಮೀಟರ್ ವ್ಯಾಸವುಳ್ಳ ಈ ನಡುಗಡ್ಡೆ ಕಲ್ಲು ಬಂಡೆಗಳ ಆಗರವೇ ಆಗಿದೆ. ಕೋಟೆಯ ಬಹುಭಾಗವನ್ನು ಇಂದಿಗೂ ಕಾಣಬಹುದಾಗಿದೆ. ನಾಲ್ಕು ಆಳುಗಳಿಂದಲೂ ಎತ್ತಲಾಗದ ಗುಂಡು-ಕಲ್ಲುಗಳನ್ನು, ಸುಣ್ಣ-ಗಚ್ಚು ಸಿಮೆಂಟುಗಳಿಲ್ಲದೇ ಹೇಗೆ ಜೋಡಿಸಿದರೋ ಎಂದು ವಿಸ್ಮಯವಾಗುತ್ತದೆ. ಶತಮಾನಗಳಿಂದ, ರುದ್ರಾವತಾರದಿಂದ ಅಪ್ಪಳಿಸುವ ತೆರೆಗಳು, ಮಳೆ-ಬಿಸಿಲು, ಹಾವಸೆಗಳ ಆಕ್ರೋಶಕ್ಕೆ ಆಹುತಿಯಾದ ಗೋಡೆಗಲ್ಲುಗಳು ಕೆಂಬಣ್ಣ ಕಳೆದುಕೊಂಡು ಕಪ್ಪಾಗಿವೆ. ಹಲವು ಕಲ್ಲುಗಳು ಸ್ವಸ್ಥಾನದಿಂದ ಜಾರಿಬಿದ್ದು ಕಡಲು ಸೇರಿಕೊಂಡಿವೆ. ಹಲವೆಡೆ ಗೋಡೆ ಬಿರುಕು ಬಿಟ್ಟಿವೆ. ಇಷ್ಟಾದರೂ ತೋಪು-ತುಪಾಕಿಗಳನ್ನು ಇಡುವ ಸ್ಥಳ. ವೈರಿಗಳನ್ನು ಗುರುತಿಸಲು ಬಳಸುವ ನಿರೀಕ್ಷಣಾಲಯ ಮೊದಲಾದವುಗಳನ್ನು ಸುಲಭವಾಗಿ ಗುರುತಿಸಬಹುದಾಗಿದೆ.

ವಿಷಸರ್ಪಗಳು ರಾಜ್ಯವಾಳುವದರಿಂದ ಹೋಗುವ ಸಾಹಸ ಮಾಡದಿರುವುದೇ ಮೇಲೆಂದು ಅನೇಕ ಸ್ಥಾನೀಯರು ಸೂಚಿಸಿದ್ದರು. ಯಾವ ಸರ್ಪದ ದರ್ಶನವಾಗದಿದ್ದರೂ ಶತಮಾನಗಳಿಂದ ಯಾರ ನಿಯಂತ್ರಣಕ್ಕೂ ಒಳಗಾಗದೇ ಬೆಳೆದ ಗಿಡಗಂಟಿಗಳು ಆಗಂತುಕರಿಗೆ ಪ್ರವೇಶ ಕೊಡದಂತೆ ದಟ್ಟವಾಗಿ ಬೆಳೆದು ನಿಂತಿದ್ದವು. ಸಾಲದ್ದಕ್ಕೆ ತೀರ ಇಳಿಜಾರಾದ್ದರಿಂದ ಒಂದು ಕಾಲು ಊರಿ, ಇನ್ನೊಂದನ್ನು ಕೀಳುವುದರಲ್ಲಿ ಎರಡೂ ಜಾರಿಬಿಡುವವು. ಮೈತುರಿಕೆ ಏಳಿಸುವ ಕಂಟಿಗಳಿಗಂತೂ ಮಿತಿಯೇ ಇಲ್ಲ. ಕತ್ತಿಯಿಂದ ಗಿಡ-ಗಂಟಿಗಳನ್ನು ಸವರಿ, ಕುಠಾರಿಯಿಂದ ಕಾಲಿಡಲು ಸ್ಥಳ ಮಾಡಬೇಕಾಯಿತು. ಅಲ್ಲಲ್ಲಿ ಹರಡಿಕೊಂಡ, ಕಾಡು ಮೆಣಸಿನಗಿಡ, ಒಂದೆರಡು ಪಪ್ಪಾಯಿ (ಪಂರಗಿ) ಗಿಡಗಳನ್ನು ಬಿಟ್ಟರೆ, ಬೇರಾವ ಫಲ-ಪುಷ್ಪ ಸಸ್ಯಗಳು ಕಣ್ಣಿಗೆ ಬೀಳಲಿಲ್ಲ. ಸಾಹಸಿಗಳ ದಾರಿಯನ್ನು ಅಡ್ಡಗಟ್ಟಿ ನಿಂತ ಪಾಚಿಗಟ್ಟಿದ ಕೆರೆ. ಅಲ್ಲಿ ಎಂದೋ ವೀರಸ್ವರ್ಗ ಪಡೆದ ಕಾಡು ಕೋಳಿಯ ರೆಕ್ಕೆಗಳು ಅದರ ವಂಶಜರು ಅನಾದಿ ಕಾಲದಿಂದ ಅಲ್ಲಿ ವಾಸಿಸುತ್ತ ಬಂದಿವೆ ಎಂದು ಸಾರಿ ಕೇಳಿದವು. ಐದು ಕೆರೆಗಳಿದ್ದರೂ, ಒಂದೂ ಬಾವಿ ಕಾಣದ್ದರಿಂದ, ಮಳೆಯ ನೀರನ್ನೇ ಇವುಗಳಲ್ಲಿ ಸಂಗ್ರಹ ಮಾಡುತ್ತಿದ್ದಿರಬೇಕು ಎನಿಸಿತು. ಪಾಪಿಗಳನ್ನು ಶಿಕ್ಷಿಸಲು ಯಮಧರ್ಮರಾಯನು ಬಳಸಬಹುದಾದಂತಹ ಸಸ್ಯಕೋಟಿಯನ್ನು ದಾಟಿ ಮೇಲಕ್ಕೇರಿದಾಗ, ಸಮವತ್ತಾದ ಬಯಲು ಗೋಚರಿಸಿತು. ಅಲ್ಲಿ ಹುಲುಸಾಗಿ ಬೆಳೆದ ಹುಲ್ಲು ಬಿಟ್ಟರೆ ಬೇರಾವ ಗಿಡ-ಗಂಟಿಗಳೂ ಬೆಳೆದಿರಲಿಲ್ಲ. ಹಸಿವು-ಬಾಯಾರಿಕೆಗಳಿಂದಾಗಿ ನೀರು, ಊಟ, ತಿಂಡಿಗಳನ್ನು ಕಟ್ಟಿಕೊಂಡು ಬಂದಿದ್ದರೆ ಒಳ್ಳೆ ಪಿಕ್‌ನಿಕ್ ಮಾಡಬಹುದಾಗಿತ್ತು ಎಂದು ಅನಿಸದೇ ಇರಲಿಲ್ಲ.

ಬಸವಪ್ಪ ನಾಯಕ ಕೋಟೆಯನ್ನು ಕಟ್ಟುವ ಮೊದಲು 'ಗೇರುಸೊಪ್ಪಾ ನದಿಯ



ದ್ವೀಪರಾಣಿ ಶರಾವತಿ



ವಿಪುಲ ನೀರು ಸೂಸು ಮಣ್ಣಿನಲ್ಲಿ ಯಥೇಚ್ಛವಾಗಿ ಬೆಳೆವ ತೆಂಗು

ಬಂಡೆ'ಯೆಂದು ಇದು ಹೆಸರುವಾಸಿಯಾಗಿತ್ತು. ವಿದೇಶಗಳಿಂದ ಬರುತ್ತಿದ್ದ ಹಡಗುಗಳು ಬಿಣಗಾದ ಹತ್ತಿರ 'ಅಂಜುದೀವ' ದ್ವೀಪಕ್ಕೆ ಬಂದು, ಮಿರ್ಜಾನ ಮಾರ್ಗವಾಗಿ ಈ ನಡುಗಡ್ಡೆಗೆ ಆಗಮಿಸಿ ಲಂಗರು ಹಾಕಿ ತೆರೆಗಳ ಅಬ್ಬರ ಕಡಿಮೆಯಾದಾಗ ಮೆಣಸು ಖರೀದಿಸಲು ಶರಾವತಿ ನದಿಯಲ್ಲಿ ಮುಂದುವರಿಯುತ್ತಿದ್ದವು. ಮುಂದೆ ಹೈದರಾಲಿಯ ವಶದಲ್ಲಿದ್ದ ಜಲದುರ್ಗವನ್ನು ಬ್ರಿಟಿಷರು ಸುಲಭವಾಗಿ ಗೆದ್ದುಕೊಂಡು ಕಿರು ಸೈನ್ಯದಿಂದಲೇ ಇದನ್ನು ನಿಯಂತ್ರಿಸ ಹತ್ತಿದರು. ಜಿಲ್ಲೆಯ ಕರಾವಳಿಯನ್ನು ವಿವರವಾಗಿ ಅಭ್ಯಸಿಸಿದ ಫೋರ್ಬೆಸ್‌ನು ಫೆಬ್ರುವರಿ 1772ರಲ್ಲಿ ಬಸವರಾಜ ದುರ್ಗವನ್ನು ಕಂಡು ತನ್ನ ಅನುಭವವನ್ನು ಬರೆದಿಟ್ಟಿದ್ದಾನೆ. ಡಿಸೆಂಬರ್ 1775ರಲ್ಲಿ ಈ ಕೋಟೆಯ ಆಯಕಟ್ಟಿನ ಸ್ಥಳಗಳಲ್ಲಿ ಸೈನ್ಯವಿತ್ತು, ಎಂದು ಓರ್ವ ಬ್ರಿಟಿಷ್ ಪ್ರವಾಸಿ ವರದಿಮಾಡಿದ್ದಾನೆ. ನೌಕಾ ದಳದವರು ಹೇರಿಕೊಂಡು ಬಂದ ಸಾಮಗ್ರಿಗಳನ್ನು ಕೇವಲ ದಕ್ಷಿಣದ್ವಾರದಿಂದ ಮಾತ್ರ ಸಾಗಿಸಲಾಗುತ್ತಿತ್ತೆಂದೂ ಅಲ್ಲಿ ಎಂಟು ತೋಪುಗಳ ಸೈನ್ಯ ಸದಾ ಸಿದ್ಧವಿರುತ್ತಿತ್ತೆಂದು ನಮೂದಿಸಲಾಗಿದೆ.

ಆಂಗ್ಲ ಕ್ಯಾಪ್ಟನ್ ಟೋರಿಯಾನೊ 23-1-1783ರಂದು ಬಸವರಾಜದುರ್ಗವನ್ನು ಆಕ್ರಮಿಸಿ ಬ್ರಿಟಿಷರ ಸ್ಥಾನವನ್ನು ಭದ್ರಪಡಿಸಿದ. ಆದರೆ ಟೀಪುವಿನ ಸೇನಾಪತಿ ಮಿರ್ಜಾಖಾನನು 4-3-1784ರಲ್ಲಿ ಕಪಟ-ವಂಚನೆಗಳಿಂದ ಈ ದುರ್ಗವನ್ನು ವಶಪಡಿಸಿಕೊಂಡ. ನಂತರ ಟೀಪು ಸುಲ್ತಾನನು ಈ ದ್ವೀಪವನ್ನು ನೌಕಾದಳದ ಕೇಂದ್ರವಾಗಿ ಗುರುತಿಸಿ ಭದ್ರಪಡಿಸಿದ. ಆದರೆ 1792ರಲ್ಲಿ 200 ಬ್ರಿಟಿಷ್ ಸೈನಿಕರು 34 ತೋಪು ಮತ್ತು ಗುಂಡು ಮದ್ದುಗಳ ಸಂಗ್ರಹದೊಡನೆ ಬಂದು ದಾಳಿಮಾಡಿ. 60 ತೋಪುಗಳುಳ್ಳ ಟೀಪುವಿನ ಯುದ್ಧ ನೌಕೆಯನ್ನು ಕಡಲುಪಾಲು ಮಾಡಿ ದುರ್ಗವನ್ನು ಕೈವಶ ಮಾಡಿಕೊಂಡರು. 1801ರಲ್ಲಿ ಈ ಪ್ರದೇಶ ಸಂಚರಿಸಿದ ಬುಕಾನನ್‌ನು. ಬಸವರಾಜದುರ್ಗದ ಪರಿಸರದಲ್ಲಿ ಕಡಲುಗಳ್ಳರು ಪ್ರಬಲರಾಗಿದ್ದಾರೆ ಎಂದಿದ್ದಾನೆ. ಬ್ರಿಟಿಷರ ಕಾಲದಲ್ಲಿ ಈ ಆಯಕಟ್ಟಿನ ಸ್ಥಳವನ್ನು ಬಳಸಿಕೊಳ್ಳುವ ಪ್ರಸಂಗಗಳೇ ಬಾರದ್ದರಿಂದ ಕೋಟೆ ಹಾಳು ಕೊಂಪೆಯಾಗಿ ಮುಂದರಿಯಿತು. ಸ್ವಾತಂತ್ರ್ಯದ ನಂತರ ಲಾಭಬಡುಕರು, ಪ್ರವಾಸಿಗಳನ್ನು ಆಕರ್ಷಿಸಲು ತಂಗುದಾಣ ಮಾಡುವ ನೆವದಿಂದ ನುಂಗಲೆತ್ನಿಸಿದರು. ಆದರೆ ಅಕ್ಕಪಕ್ಕದ ಜನ ಪ್ರತಿಭಟಿಸಿದ್ದರಿಂದ ಇವರ ಆಟ ನಡೆಯಲಿಲ್ಲ. ಈ ಜಲದುರ್ಗದಲ್ಲಿದ್ದ ದೇವಸ್ಥಾನದ ಗಣೇಶನ ಪೂಜಾ ವಿಗ್ರಹವನ್ನು ಇಂದಿಗೂ ಹಳದಿಪುರದ ಅಗ್ರಹಾರದಲ್ಲಿ ಕಾಣಬಹುದಾಗಿದೆ.

ಅಪೂರ್ವ ಅನುಭವ

ಐದು ಕಿಲೋಮೀಟರ್ ಉದ್ದದ ಮಾವಿನ ಕುರ್ವೆ ಉಳಿದ ಎಲ್ಲ ಕುರ್ವೆಗಳಿಗಿಂತ ಕ್ಷೇತ್ರಫಲದಲ್ಲಿ ದೊಡ್ಡದು. ಹೊನ್ನಾವರದ 'ಭಿಕಾಶಿತಾರ'ದ ಬಂದರದಿಂದ ಪ್ರಯಾಣಿಕರನ್ನು ಮಾವಿನ ಕುರ್ವೆಗೆ ಸಾಗಿಸುವ ನಾವೆಗಳು ಸದಾಕಾಲವೂ ಓಡಾಡುತ್ತಿರುತ್ತವೆ. ದಟ್ಟವಾಗಿ ಬೆಳೆದ ತೆಂಗಿನ ತೋಪುಗಳು ನೀರಿನಲ್ಲಿ ಬಗ್ಗಿ ಬಗ್ಗಿ ನೋಡುತ್ತಿರಲು. ದೋಣಿಯಲ್ಲಿ ತೇಲುತ್ತ ಸಾಗುವದೇ ಅಪೂರ್ವ. ಬೆಳದಿಂಗಳ ರಾತ್ರಿಯಲ್ಲಿ ತಂಗಾಳಿಗೆ ಮೈಯೊಡ್ಡಿ ಮಾವಿನಕುರ್ವೆಯಿಂದ


ಹೈಗುಂದಿನ ಬೃಹತ್ ಮೂರ್ತಿ


ಗುಂಡಬಾಳಾವರೆಗಿನ "ಡಿಂಗಿ" ನೌಕಾವಿಹಾರ ಒಂದು ಮಧುರ ಕನಸಿನಂತೆ. ಅದಕ್ಕೆ ಅದೃಷ್ಟ ಬೇಕು. ಇಟಾಲಿಯ ಪ್ರವಾಸಿ ಪಿಟ್ರೊ ಡೆಲ್ಲಾ ವಾಲ್ಲೆ ಅಕ್ಟೋಬರ 31, 1623ರಂದು ಈ ಮಾರ್ಗವಾಗಿ ಹೊನ್ನಾವರದಿಂದ ಗೇರುಸೊಪ್ಪಾಗೆ ಮೂರು ಹರದಾರಿಯ ಜಲಪ್ರಯಾಣ, ಕೈಕೊಂಡ ಅತ್ಯಂತ ಉಲ್ಲಾಸಕಾರಿಯಾಗಿದ್ದು ಇಂಥ ಪ್ರಯಾಣವನ್ನು ತಾನು ಇಡೀ ಜೀವಮಾನದಲ್ಲೇ ಮಾಡಿಲ್ಲವೆಂದೂ, ತಾನು ಕಂಡ ನದಿಗಳಲ್ಲೆಲ್ಲಾ ಗೇರುಸೊಪ್ಪಾ (ಶರಾವತಿ) ನದಿ ಕಟ್ಟಡಗಳ ಕೃತಕ ಸೌಂದರ್ಯ ಅಥವಾ ಮತ್ತಾವ ಕೃತಕತೆಯೂ ಇಲ್ಲದೇ ಪ್ರಾಕೃತಿಕ ಸೌಂದರ್ಯದಿಂದ ಮೆರೆಯುವ ಅತ್ಯಂತ ರಮಣೀಯವಾದ ನದಿ ಎಂದೂ ಬರೆದಿಟ್ಟಿದ್ದಾನೆ.

ಸೂಸುಮಣ್ಣು, ವಿಪುಲವಾದ ನೀರಿನ ಲಾಭ ಪಡೆದು ಮಾವಿನಕುರ್ವೆಯಲ್ಲಿ ಅನೇಕಾನೇಕ ತೆಂಗಿನ ತೋಪುಗಳನ್ನು ಬೆಳೆಸಿದ್ದಾರೆ. ಬೆಳ್ಳಕ್ಕಿಗಳು ಈ ಮರಗಳ ತುದಿಯಲ್ಲಿ ಸಂಸಾರ ಬಿಟ್ಟಿವೆ. ದಿನವೆಲ್ಲ ಸುತ್ತಮುತ್ತಲಿನ ಹೊಳೆ, ಕೆರೆ, ಗದ್ದೆಗಳಲ್ಲಿ ಮೀನುಗಾರಿಕೆ ನಡೆಸಿ ಹೊಟ್ಟೆ ಹೊರೆದುಕೊಂಡು, ಸಂಜೆಯಾದೊಡನೆ ತೆರೆತೆರೆಗಳಲ್ಲಿ ಬಾನಿನಲ್ಲಿ ತೇಲಿಬಂದು ಗೂಡು ಸೇರಿಕೊಳ್ಳುತ್ತವೆ. ರಾತ್ರಿಯೆಲ್ಲಾ ಕರ್ಕಶ ಧ್ವನಿಯಲ್ಲಿ ಕಾದಾಡುತ್ತ, ಜೋಗುಳ ಹಾಡುತ್ತ, ಜನರಿಗೆ ತಾವಿಲ್ಲಿಯೇ ಇದ್ದೇವೆಂದು ಆಶ್ವಾಸನೆ ಕೊಡುತ್ತ, ಬೆಳಗು ಮಾಡುತ್ತವೆ. ಹಲವು ವ್ಯಾಪಾರಿಗಳು, ಕಸುಬುದಾರರು, ಉದರ ಪೋಷಣೆಗೆ ಹೊನ್ನಾವರಲ್ಲಿ ದುಡಿದರೂ, ವಿರಾಮಕ್ಕಾಗಿ ರಾತ್ರಿಗೆ ಇಲ್ಲಿಗೇ ಮರುಳುವರು. ಮಳೆಗಾಲದಲ್ಲಿ ಎಂಥ ಬಿರುಗಾಳಿ ಇದ್ದರೂ ಅವರು ಹಿಂದಿರುಗದೇ ಇರುವುದಿಲ್ಲ. ಮಾವಿನಕುರ್ವೆಯ ಕ್ಷೌರಿಕರು. ತೆಂಗಿನಕಾಯಿ ಕೊಯ್ಯುವ 'ಪಾಡೇಕಾರ'ರು ಖ್ಯಾತಿ ಪಡೆದಿದ್ದಾರೆ. ಅದರಂತೆ, ಅಲ್ಲಿಯ ಆಚಾರಿಗಳು ನಿರ್ಮಿಸಿದ ಮಾವಿನಕುರ್ವೆ ಬೀಗಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿವೆ. ಅಲ್ಲಿರುವ ಕ್ಯಾಥಲಿಕ್ ಕ್ರಿಶ್ಚಿಯನ್ನರಿಗಾಗಿ ಕಿರಿಯ ಚಾಪೆಲ್ ಒಂದಿದ್ದರೆ, ಹಿಂದೂಗಳಿಗಾಗಿ ಎರಡು ದೇವಾಲಯಗಳಿವೆ. ಗೋಪಾಲಕೃಷ್ಣ ದೇವಾಲಯ ಸುಂದರವಾಗಿದ್ದು ಬೇಸಿಗೆಯಲ್ಲಿ ಜಾತ್ರೆ ನಡೆಯುತ್ತದೆ.

ನಡುಗದ್ದೆ

ನದಿ ತಂದ ಸೂಸುಮಣ್ಣು ಮತ್ತು ಕಡಲು ಹೊತ್ತುಹಾಕಿದ ರೇವೆಯಿಂದ ಮಲ್ಲಿಕುರ್ವೆ ಉಂಟಾಗಿದೆ. ಸುಮಾರು ಆರು ದಶಕಗಳ ಹಿಂದೆ ಚಂಚಲ ಶರಾವತಿ ತನ್ನ ಪ್ರವಾಹ

ಬದಲಿಸಿದ್ದರಿಂದ ಹೊನ್ನಾವರ ನಗರದ ಎದುರಿಗೆ ನೆಲೆಸಿದ ಕಾಸರಕೋಡು ಹಳ್ಳಿಯನ್ನು ಕೊಚ್ಚಿಕೊಂಡು, ಅಲ್ಲಿಯ ರೇವೆಯನ್ನು ಮಲ್ಲಿಕುರ್ವೆಗೆ ಸೇರಿಸಲಾರಂಭಿಸಿದ್ದರಿಂದ ಈ ನಡುಗಡ್ಡೆ ಬೆಳೆಯಲಾರಂಭಿಸಿತು. ಈ ಹೊಸನೆಲವನ್ನು ಖಾರ್ವಿ, ದಾರ್ಜಿ, ಮಾಪಿಳ್ಳೆ ಜನಾಂಗದವರು ತಮ್ಮದನ್ನಾಗಿ ಮಾಡಿಕೊಂಡು ಗುಡಿಸಲುಗಳನ್ನು ಕಟ್ಟಿಕೊಂಡು ತೆಂಗು ಬೆಳೆಯಲಾರಂಭಿಸಿದರು. ಮೀನನ್ನು ಒಣಗಿಸಿ ರಫ್ತು ಮಾಡಲು ಇದು ಉತ್ತಮ ತಾಣವಾಯಿತು. ಕಡಲಿನ ಸಾನಿಧ್ಯದಿಂದ ಕಳ್ಳಸಾಗಾಣಿಕೆಯ ವ್ಯಾಪಾರವೂ ಜೋರಾಗಿ ಬೆಳೆಯಿತು. ಆದರೆ ದುರ್ದೈವದಿಂದ ಒಂದು ದಶಕದ ಹಿಂದೆ. ನದಿ ತಿರುಗಿ ತನ್ನ ಗತಿ ಬದಲಿಸಿ ಮಲ್ಲಿಕುರ್ವೆಯನ್ನು ಕೊಚ್ಚಲಾರಂಭಿಸಿ ರೇವೆಯನ್ನು ಕಾಸರಕೋಡ ದಂಡೆಗೆ ಸೇರಿಸಲಾರಂಭಿಸಿತು. ತೆಂಗಿನಮರಗಳು ಒಂದೊಂದಾಗಿ ಬೀಳಲಾರಂಭಿಸಿದವು. ಮನೆಗಳು ಜಲಸಮಾಧಿ ಹೊಂದಿದವು. ಇದರಿಂದ ಅಲ್ಲಿಯ



ಹೈಗುಂದಿಗೆ ಹೊರಟ ನಾವೆ

ನಿರಾಶ್ರಿತರು, ಕಾಸರಕೋಡಿನಲ್ಲಿ ನಿರ್ಮಾಣವಾದ ಹೊಸ ಭೂಮಿಯಲ್ಲಿ ಬೀಡುಬಿಡಬೇಕಾಯಿತು.

ಹೈಗುಂದ ಒಂದು ಕಿರುದ್ವೀಪ. ಹೊನ್ನಾವರದ ಉತ್ತರಕ್ಕಿರುವ ಬೇರಂಕಿ ಹಳ್ಳಿಯಿಂದ ನಾವೆಯಲ್ಲಿ ಅಲ್ಲಿ ಮುಟ್ಟಬೇಕು, ಅಲ್ಲಿ ಬಹುಸಂಖ್ಯಾತರು ಹವ್ಯಕ ಬ್ರಾಹ್ಮಣರು ಮತ್ತು ಅವರ ಒಕ್ಕಲಿಗರು. ಪುರಾತನ ಕಾಲದಿಂದ ಅಲ್ಲಿ ಬ್ರಾಹ್ಮಣರು ಬೀಡುಬಿಟ್ಟು ವೇದಪಠನ. ಹೋಮಹವನಗಳಲ್ಲಿ ನಿರತರಾಗಿದ್ದರು. ಈಗಲೂ ಅಲ್ಲಿ ಉತ್ಖನನ ಮಾಡಿದರೆ ಪ್ರಾಚೀನಕಾಲದ ಯಜ್ಞಕುಂಡಗಳು, ಇಟ್ಟಂಗಿಗಳು, ನೀರುಸರಬರಾಜು ಮಾಡುವ ಕಾಲುವೆಗಳು ಸಿಗುತ್ತವೆ. ಹಿಂದೊಮ್ಮೆ ಈ ಹಳ್ಳಿ ಬೇರಂಕಿಯದೇ ಅಂಗವಾಗಿದ್ದು ಇತರರ ಉಪಟಳ ತಾಳದೇ

ಸ್ಥಾನೀಯರು ಒಂದು ನಾಲೆ ತೋಡಿಸಿಕೊಂಡು ಬೇರೆಯಾದರೆಂದು ಹೇಳಿಕೊಳ್ಳುತ್ತಾರೆ.

ಪಿಟ್ರೊ ಡೆಲ್ಲಾವಾಲ್ಲೆ 1623ರಲ್ಲಿ ಹೊನ್ನಾವರದ ಸಮೀಪವಿದ್ದ 'ಬ್ರಾಹ್ಮಣರ ಅಗ್ರಹಾರ'ಕ್ಕೆ ಭೆಟ್ಟಿ ಕೊಟ್ಟದ್ದನ್ನು ಬರೆದಿಟ್ಟಿದ್ದಾನೆ. ಈ ಅಗ್ರಹಾರ, ಹೈಗುಂದ (ಹವ್ಯಕ ಕುಂಡ?) ಇದ್ದರೂ ಇರಬಹುದು. ಅವನು " ಈ ಊರಿನ ಜನ ಹಸು, ಎಮ್ಮೆಗಳನ್ನು ಸಾಕುತ್ತಾರೆ. ಮತ್ತು ಬೇರೆ ವೃತ್ತಿಗಳಿಂದಲೂ ಜೀವಿಸುತ್ತಾರೆ,. ಊರ ಮಧ್ಯೆ ಚಚ್ಚೌಕವಾದ ಒಂದು ಅಂದವಾದ ಕೊಳವಿದೆ. ಇದರ ಒಂದೊಂದು ದಂಡೆಯೂ ನೂರು ದಾಪು ಉದ್ದವಿದ್ದು ಮಳೆಯ ನೀರು ತುಂಬಿ ವರ್ಷವಿಡೀ ಇಂಗದೇ ಇರುತ್ತದೆ ಎಂದು ವಿವರಿಸಿದ್ದಾನೆ.

ಆಗರ

ಹಿಂದೊಮ್ಮೆ ಹೈಗುಂದ ಬೌದ್ಧ ಧರ್ಮದ ಆಗರವಾಗಿದ್ದಿರಬೇಕೆಂದು ಅಲ್ಲಿಯ ಅವಶೇಷಗಳಿಂದ ಅರಿವಾಗುತ್ತದೆ. ಅವು ಎಲ್ಲಿದ ಬಂದವು ? ಎಂದು ಖಚಿತವಾಗಿ ಹೇಳುವವರಿಲ್ಲ. ಸಿಕ್ಕ ವಿಗ್ರಹಗಳನ್ನು ಬಯಲಿನಲ್ಲಿ ಆಲದ ಮರದ ಆಶ್ರಯದಲ್ಲಿ ದೇವಿಯ ದೇವಸ್ಥಾನದಲ್ಲಿ ಹೊರಾಂಗಣದಲ್ಲಿ ನಿಲ್ಲಿಸಿದ್ದಾರೆ. ಒಂದೇ ಶಿಲೆಯಲ್ಲಿ ನಿರ್ಮಿಸಿದ ಐದು ಆರು ಅಡಿ ಎತ್ತರದ ಈ ವಿಗ್ರಹಗಳನ್ನು ನೋಡಿದಾಗ, ಕಾನ್ಹೇರಿ, ನಾಸಿಕ, ಔರಂಗಾಬಾದ, ಅಜಂತಾ ಗುಹಾಲಯಗಳ ಶಿಲ್ಪಗಳು ನೆನಪಾಗುತ್ತವೆ. ಬಹುಶಃ ಇವು ಅವುಗಳ ಸಮಕಾಲೀನವಿದ್ದರೆ ಆಶ್ಚರ್ಯವಿಲ್ಲ. ಉತ್ಖನನ ಮತ್ತು ಆಳವಾದ ಅಭ್ಯಾಸದಿಂದ ಹೆಚ್ಚಿನ ಮಾಹಿತಿ ಸಂಗ್ರಹಿಸಲು ಸಾಧ್ಯ.

ದ್ವೀಪಗಳ ರಾಣಿ

ಶರಾವತಿಯ ಪ್ರತಿಯೊಂದು ದ್ವೀಪವೂ ತನ್ನದೇ ಆದ ವೈಶಿಷ್ಟ್ಯದಿಂದ ತುಂಬಿ ತುಳುಕುತ್ತದೆ. ಈ'ಕುರ್ವೆ'ಗಳ ಇರುವಿನ ವಿವರಗಳನ್ನು ಅರಿತವರು ತೀರ ಕಡಿಮೆ. ಸಂಯುಕ್ತ ಸಂಸ್ಥಾನದ ನ್ಯೂಯಾರ್ಕ್ ರಾಜ್ಯದ ಸೆಂಟಲಾರೆನ್ಸ್ ನದಿಯಲ್ಲಿಯ ನಡುಗಡ್ಡೆಗಳಿಗೆ ಪ್ರವಾಸಿಗಳನ್ನು ಕರೆದೊಯ್ದು ತೋರಿಸುವುದನ್ನೇ ದೊಡ್ಡ ಉದ್ದಿಮೆಯಾಗಿ ಬೆಳೆಸಿಕೊಂಡಿದ್ದಾರೆ. ಈ ದ್ವೀಪಗಳನ್ನು ಅದೇ ರೀತಿ ಅಭಿವೃದ್ಧಿಗೊಳಿಸಿದರೆ, ಜಲಕ್ರೀಡೆ, ನೌಕಾವಿಹಾರ, ಮತ್ಸ್ಯವಿಹಾರ, ಪಕ್ಷಿ ವೀಕ್ಷಣೆ, ಬೆಟ್ಟ ಹತ್ತುವುದು ಮುಂತಾದವುಗಳಲ್ಲಿ ಆಸಕ್ತರನ್ನು ಬರಮಾಡಿಕೊಳ್ಳುವಂತೆ. ಚರಿತ್ರೆಯಲ್ಲಿ ಆಸಕ್ತಿಯಿರುವ ದೇಶ ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸಬಹುದು.

೧೬. ಶತಮಾನಗಳಿಂದ ಗೋವಾ, ಕರ್ನಾಟಕದ ನಂಟು

ಒಂದು ಸಹಸ್ರ ವರ್ಷಗಳಿಗಿಂತ ಹಿಂದಿನಿಂದಲೂ ಕರ್ನಾಟಕ, ಗೋವಾ, ಅಣ್ಣ-ತಂಗಿಯರಂತೆ ನಡೆದುಕೊಂಡು ಬರುತ್ತಿವೆ ಎಂದು ಇತಿಹಾಸ ಸಾರಿ ಹೇಳುತ್ತಿವೆ. ಉತ್ತರ ಕನ್ನಡ ಜಿಲ್ಲೆಯ ಬನವಾಸಿಯನ್ನು (ಅಂದು 'ವೈಜಯಂತಿ' ಎಂದು ಕರೆಯಲಾಗುತ್ತಿತ್ತು.) ರಾಜಧಾನಿಯನ್ನಾಗಿ ಮಾಡಿಕೊಂಡ ಕದಂಬ ವಂಶದ ಆಳರಸರು ಗೋವೆಯ ಕೆಲ ಪ್ರದೇಶವನ್ನು ವಶಪಡಿಸಿಕೊಂಡರು. ಅನಂತರ ಗೋವೆಯು ಬಾದಾಮಿಯ ಚಾಲುಕ್ಯರ ಕೈವಶವಾಯಿತು. ಕ್ರಿ. ಶ. 757ರಲ್ಲಿ ರಾಷ್ಟ್ರಕೂಟರು ಅದನ್ನು ಗೆದ್ದುಕೊಂಡರು. ಈ ಅವಧಿಯಲ್ಲಿ ಗೋವೆ ಬಂದರಿನಿಂದ ನಡೆಯುವ ವ್ಯಾಪಾರದಲ್ಲಿ ಅಭಿವೃದ್ಧಿಯಾಯಿತು. ಅನಂತರ ಅಧಿಕಾರ ವಹಿಸಿಕೊಂಡ ಕದಂಬರು, ಚಾಂದೂರ (ಅಂದಿನ ಹೆಸರು 'ಚಂದ್ರಪುರ') ನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಗೋವಾ ಕದಂಬರ ವಂಶಾವಳಿಯನ್ನು ಪ್ರಾರಂಭಿಸಿದರು. ಹನ್ನೊಂದನೇ ಶತಮಾನದಲ್ಲಿ ದ್ವಿತೀಯ ಗುಹಿಲದೇವನು ಉತ್ತರದ ಕೊಂಕಣ ಪ್ರದೇಶವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಪರಾಕ್ರಮಿಯಾಗಿದ್ದ ಜಯಕೇಶಿ ರಾಯನು ಹೈವೆ, ಹಲಸಿಗೆ ಕಪಾರ್ಡಿಕ ದ್ವೀಪಗಳನ್ನು ಗೆದ್ದುಕೊಂಡನು. ಇಷ್ಟೇ ಅಲ್ಲದೇ ಕರ್ನಾಟಕದ ಆಳರಸರನ್ನು ಅಳಿಯರನ್ನಾಗಿ ಮಾಡಿಕೊಂಡು ಎರಡೂ ರಾಜ್ಯಗಳಲ್ಲಿ ಗಾಢವಾದ ಮೈತ್ರಿಗೆ ತಳಹದಿ ಹಾಕಿದನು. ವಿದ್ಯೆಗೆ ಅಪಾರ ಮನ್ನಣೆ ಸಿಗಲಾರಂಭಿಸಿದ್ದರಿಂದ ಗೋವೆಯ ಬೀದಿಗಳಲ್ಲಿ ಪಂಡಿತರನ್ನು ಹೊತ್ತು ತರುವ ಪಲ್ಲಕ್ಕಿಗಳು ಎಲ್ಲೆಡೆಯಲ್ಲಿ ಕಾಣಲಾರಂಭಿಸಿದವು. ಮೂಲತಃ ಕದಂಬರು ಬ್ರಾಹ್ಮಣರಿದ್ದರೂ ನಂತರ ಕ್ಷತ್ರಿಯ ಧರ್ಮ ಪಾಲಿಸಲಾರಂಭಿಸಿದ್ದರು. ಅಲ್ಲದೇ ದಾನ, ಧರ್ಮ, ಶಿಕ್ಷಣ, ಸಂಸ್ಕೃತಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಲಾರಂಭಿಸಿದರು. ಕ್ರಿ. ಶ. 1503 ರಲ್ಲಿ ಕಿವುಡರು, ಕುಂಟರು, ಕಣ್ಣಿಲ್ಲದವನು ಅನಾಥರಿಗಾಗಿಯೇ ಒಂದು ಆಶ್ರಮ ಸ್ಥಾಪಿಸಿ ಅದರ ಖರ್ಚಿಗಾಗಿ ವ್ಯಾಪಾರಿಗಳಿಂದ ಕರ ವಸೂಲ ಮಾಡಲು ಪ್ರಾರಂಭಿಸಲಾಯಿತು. ಇಷ್ಟೇ ಅಲ್ಲದೇ ವಾರಸುದಾರರು ಇಲ್ಲದೆ ಸತ್ತವರ ಸಕಲ ಆಸ್ತಿಯೂ ಈ ಕೇಂದ್ರಕ್ಕೆ ಸೇರುವಂತೆ ಕಾನೂನು ಮಾಡಿದರು.

ಕ್ರಿ. ಶ. 1104ರಿಂದ 1148 ರ ವರೆಗೆ ಸುದೀರ್ಘ ರಾಜ್ಯವಾಳಿದ ದ್ವಿತೀಯ ಜಯದೇವನು ಗೋವೆಯ ಸರ್ವ ರೀತಿಯ ಪ್ರಗತಿ ಸಾಧಿಸಿ ಪ್ರಜೆಗಳು ಸುಖ-ಶಾಂತಿಯಿಂದ ಜೀವನ ನಡೆಸಲು ಅನುಕೂಲ ಮಾಡಿಕೊಟ್ಟವನು. ಅನಂತರ ಪಟ್ಟವೇರಿದ ಪೆರ್ಮಾಡಿದೇವಶಿವಚಿತ್ತನ ರಾಣಿ ಕಮಲಾದೇವಿಯು ಅನೇಕಾನೇಕ ದೇವಾಲಯಗಳನ್ನು ನಿರ್ಮಿಸಿ ದಾನಗಳನ್ನು ನೀಡಿದಳು. ಕ್ರಿ. ಶ. 1294ರಲ್ಲಿ ಮಹಮ್ಮದೀಯರು ಗೋವೆಯ ಮೇಲೆ ಸತತ ದಾಳಿ ನಡೆಯಿಸಿ ಹಿಂದೂಗಳನ್ನು ಅತ್ಯಾಚಾರ, ಬಲಾತ್ಕಾರಗಳಿಗೆ ಗುರಿಪಡಿಸಿ,

ಸುಲಿಗೆ ಪ್ರಾರಂಭಿಸಿದರು. ಕ್ರಿ.ಶ.1310ರಲ್ಲಿ ಮಲ್ಲಿಕ್ ಕಾಫರನ ಸೈನಿಕರು ಮೂರ್ತಿಗಳನ್ನು ನಾಶಪಡಿಸುವುದು ಮತ್ತು ದೇವಾಲಯಗಳನ್ನು ಸುಡುವುದನ್ನು ಬೃಹತ್ ಪ್ರಮಾಣದಲ್ಲಿ ಪ್ರಾರಂಭಿಸಿದರು. ಅಂತೆಯೇ ಗೋವೆಯ ಕದಂಬರಿಗೆ ತಮ್ಮ ಕುಲದೇವರಾದ ಸಪ್ತಕೋಟೇಶ್ವರನ ವಿಗ್ರಹವನ್ನು ಹೊಲದಲ್ಲಿ ಹೂಳಿ ಸಂರಕ್ಷಿಸಬೇಕಾಯಿತು! ಅಲ್ಲದೆ ಮುನ್ನೂರಾ ಐವತ್ತು ವರ್ಷಗಳಷ್ಟು ಸುದೀರ್ಘ ಆಳಿಕೆ ನಡೆಯಿಸಿದ ರಾಜ್ಯವನ್ನೇ ತ್ಯಜಿಸಬೇಕಾಯಿತು! ಮುಸಲ್ಮಾನರ ಹಿಂಸಾಚಾರ ಅಸಹನೀಯವಾಗಲಾರಂಭಿಸಿದ್ದರಿಂದ ಕ್ರಿ.ಶ.1335ರಲ್ಲಿ ಹಿಂದೂಗಳು ದಕ್ಷಿಣದ ಕರ್ನಾಟಕ ರಾಜ್ಯಕ್ಕೆ ದೊಡ್ಡ ಪ್ರಮಾಣದಲ್ಲಿ ಗುಳೆಹೋಗಬೇಕಾಯಿತು. ಗೋವೆಯ ಹಿಂದೂಗಳ ಕರುಣಾಜನಕ ಸ್ಥಿತಿಯನ್ನು ಅರಿತ ವಿಜಯನಗರದ ಆಳರಸನು, ಕಾಶ್ಮೀರ ಸಾರಸ್ವತ ಬ್ರಾಹ್ಮಣನಾದ, ಮಹಾದೇವ ಮಂತ್ರಿಯ ನೇತೃತ್ವದಲ್ಲಿ ಗೋವೆಗೆ ದೊಡ್ಡ ದಂಡನ್ನು ಕಳಿಸಿಕೊಟ್ಟನು. ದ್ವಿತೀಯ ಹರಿಹರನ ಸೈನ್ಯವು ಹಿಂದೂಗಳ ವೈರಿಗಳನ್ನು ಸದೆಬಡಿದು ವಿಜಯನಗರದ ಆಡಳಿತೆಗೆ ಅನುವು ಮಾಡಿಕೊಟ್ಟಿತು. ಗೋವೆಯ ಮಹಾನ್ ದಂಡನಾಯಕನು ಕದಂಬರ ಕುಲದೇವರಿಗಾಗಿ ದೇವಾಲಯ ಕಟ್ಟಿಸಿದನು. ಅಲ್ಲದೇ ಹಾಳುಗೆಡವಿದ ಅನೇಕಾನೇಕ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿ, ಪೂಜಾ ವಿಗ್ರಹಗಳನ್ನು ಸ್ಥಾಪಿಸಿದನು. ಅಲ್ಲದೇ ಪ್ರತಿದಿನದ ನೈವೇದ್ಯ, ಪೂಜೆಗಳಿಗಾಗಿ ನೆಲ, ಗದ್ದೆಗಳನ್ನು ಉಂಬಳಿಹಾಕಿಕೊಟ್ಟನು. ಮಹಾದೇವ ಮಂತ್ರಿಯ ಈ ಕೊಡುಗೆಯಿಂದಾಗಿ ಇಂದಿಗೂ ಗೋವಾದ ದೇವಾಲಯಗಳು ಸಿರಿವಂತವಾಗಿರಲು ಅನುಕೂಲವಾಯಿತು. ಅವನ ಹನ್ನೆರಡು ವರ್ಷದ ಉಸ್ತುವಾರಿಯ ನಂತರ ಆಡಳಿತೆ ನಡೆಸುವವರೂ ಇದೇ ಮೇಲ್ ಪಂಕ್ತಿ ನಡೆಸಿಕೊಂಡು ಹೋದದ್ದರಿಂದ ತೊಂಭತ್ತು ವರ್ಷಗಳಷ್ಟು ಸುದೀರ್ಘ ಅವಧಿಯಲ್ಲಿ ನೆಮ್ಮದಿಯಿಂದ ಬಾಳ್ವೆಮಾಡಲು ಸಾಧ್ಯವಾಯಿತು.

ಅದಾಗಲೇ ಗೋವೆಯ ಬಂದರವು ಅಂತರ್ರಾಷ್ಟ್ರೀಯ ಖ್ಯಾತಿ ಪಡೆದಿದ್ದರಿಂದ ವಿಜಯನಗರದ ಅರಸರು ಸಾಮಾನುಗಳ ರಫ್ತು, ಆಮದುಗಳಿಗೆ ಗೋವೆಯ ನೆರವನ್ನು ಪಡೆಯಲಾರಂಭಿಸಿದರು. ಸೈನ್ಯಕ್ಕೆ ಅತ್ಯವಶ್ಯವಾದ ಅರಬಸ್ಥಾನದ ಕುದುರೆಗಳು ಈ ಬಂದರಕ್ಕೆ ಜಲಮಾರ್ಗದಿಂದ ಬಂದು ಅನಂತರ ವಿಜಯನಗರಕ್ಕೆ ಭೂಮಾರ್ಗದಿಂದ ಕಳಿಸಲಾಗುತ್ತಿತ್ತು. ಈ ಸವಲತ್ತು ತನ್ನ ವೈರಿ ರಾಜ್ಯಕ್ಕೆ ಸಿಗದಂತೆ ಮಾಡಲು ಬಹುಮನಿ ಆಳರಸನು ಸೇನಾಪತಿ, ಮಹ್ಮದ ಗವಾನನನ್ನು ಸೈನ್ಯದೊಂದಿಗೆ ಗೋವೆಗೆ ಕಳಿಸಿಕೊಡುತ್ತಾನೆ, ಎರಡು ವರ್ಷಗಳ ಸತತ ಯತ್ನಗಳಿಂದಾಗಿ ಕ್ರಿ.ಶ.1472ರಲ್ಲಿ ಅವನಿಗೆ ಗೋವೆಯನ್ನು ಕೈವಶಮಾಡಿಕೊಳ್ಳಲು ಸಾಧ್ಯವಾಯಿತು. ಆದರೆ ಅದೇ ವರ್ಷ ಬಹುಮನಿ ರಾಜ್ಯ ಮಣ್ಣುಗೂಡಿದ್ದರಿಂದ ಹೊಸದಾಗಿ ಗೆದ್ದ ಪ್ರದೇಶ, ವಿಜಾಪೂರದ ಆದಿಲ್‌ಶಹನ ಆಡಳಿತೆಗೆ ಸೇರಿಕೊಳ್ಳುತ್ತದೆ. ಅನಂತರ ಪೋರ್ಚುಗೀಸರು ಗೋವೆಯ ಬಂದರ ಮತ್ತು ಅದರ ಮೂಲಕ ನಡೆಯುವ ವ್ಯಾಪಾರ ತಮ್ಮ ಕೈಗೆ ತೆಗೆದುಕೊಂಡರು. ಇದಾದನಂತರ ಅವರು ತಮ್ಮ ರಾಜ್ಯ ವಿಸ್ತರಣೆ ಪ್ರಾರಂಭಿಸಿ, ಕ್ರಿ.ಶ.1510ರಲ್ಲಿ ತೀಸವಾಡಿ, ಉತ್ತರದ ಬಾರ್ದೇಝ, ದಕ್ಷಿಣದ ಭಾಗಗಳನ್ನು ಗೆದ್ದುಕೊಂಡರು.

ಆದ್ದರಿಂದ ಕ್ರಿ.ಶ.1543 ರಲ್ಲಿ ಆದಿಲ್‌ಶಹಾನನ್ನು ಪರಾಭವಗೊಳಿಸಿ ಗೋವೆಯಿಂದ ಕಂಬಿ ಕೀಳುವಂತೆ ಮಾಡಲು ಸಾಧ್ಯವಾಯಿತು.

ಪೋರ್ಚುಗೀಜರು, ತಮ್ಮ ಪ್ರಜೆಗಳೆಲ್ಲ ಕ್ರಿಶ್ಚನ್ನರಾಗಿರಲೇಬೇಕೆಂಬ ಸಂಕಲ್ಪ ಮಾಡಿಕೊಂಡು ಹಿಂದೂಗಳನ್ನು ಮತಾಂತರ ಮಾಡುವ ಜವಾಬ್ದಾರಿಯನ್ನು ಧರ್ಮಾಧಿಕಾರಿ ಮತ್ತು ಮಿಶನರಿಗಳಿಗೆ ಒಪ್ಪಿಸಿದರು. ಆದರೆ ಸ್ಥಾನೀಯರು ಅವರ ತತ್ವ ಬೋಧನೆ, ಹೊಲ, ಗದ್ದೆಗಳ ದೇಣಿಗೆಗೆ ಮೋಸಹೋಗದ್ದರಿಂದ ತಮ್ಮ ಧರ್ಮ ಬಿಟ್ಟುಕೊಡಲು ಸಿದ್ಧರಾಗಲೇ ಇಲ್ಲ ! ಅನಂತರ ಕಾನೂನು ಮತ್ತು ಬಲಾತ್ಕಾರದಿಂದ ಮತಾಂತರ ಮಾಡಲಾರಂಭಿಸಿದ್ದರಿಂದ ಹಿಂದೂಗಳು ಕಂಗೆಟ್ಟರು. ಆದ್ದರಿಂದ ಅವರು ಪೋರ್ಚುಗೀಜ ವಸಾಹತುಗಾರರ ರಾಜ್ಯದ ಹೊರಗಿರುವ, ಬಿಜೊಲಿಯಮ್, ಹೊಂಡಾ ಮತ್ತು ಕಾಡಕೋಣಗಳ ಕಾಡಿನಲ್ಲಿ ತಮ್ಮ ಕುಲದೇವರನ್ನು ಸ್ಥಾಪಿಸಿ ಹೊಸ ಜೀವನ ಪ್ರಾರಂಭಿಸಬೇಕಾಯಿತು. ಕೆರಳಿದ ಪೋರ್ಚುಗೀಜರು ತಮ್ಮ ರಾಜ್ಯದಲ್ಲಿದ್ದ ಸಕಲ ದೇವಾಲಯಗಳನ್ನೂ ಕೆಡುಹಿ ಅಲ್ಲಿ ಚರ್ಚುಗಳನ್ನು ಕಟ್ಟಿದರು. ಅವರು ಇಷ್ಟರಿಂದಲೇ ತೃಪ್ತಿಗೊಳ್ಳದೇ, ಕ್ರಿ. ಶ. 1560 ರಲ್ಲಿ ಬೃಹತ್ ಪ್ರಮಾಣದಲ್ಲಿ ಧರ್ಮಾಂತರ ಮಾಡಲು ಪ್ರಾರಂಭಿಸಿದರು. ಕ್ರೈಸ್ತರಾದರೂ ಅವರ ಕೀಟಲೆಗಳಿಗೆ ಗುರಿಯಾಗಲಾರಂಭಿಸಿದ್ದರಿಂದ ಅವರೂ ಹಿಂದೂಗಳೊಂದಿಗೆ ಉತ್ತರ ಕನ್ನಡ ಜಿಲ್ಲೆಗೆ ಬಂದರು. ಅಂದಿನಿಂದ ಗೋವೆಯ ಕೊಂಕಣಿಗರು ಕರ್ನಾಟಕವನ್ನು ತಮ್ಮ ಮಾತೃಭೂಮಿಯಾಗಿ ಮಾಡಿಕೊಂಡರು.

ಕನ್ನಡನಾಡಿಗೆ ಬಂದ ಆಗಂತುಕರಲ್ಲಿ ಸಾರಸ್ವತರು ಜಾಣರಿದ್ದು ವ್ಯವಹಾರ ಕುಶಲರಾಗಿದ್ದರಿಂದ ಆಳರಸರು ಆಡಳಿತೆ ಸುಸೂತ್ರವಾಗಿ ನಡೆಸಲು ಅವರನ್ನು ಹುದ್ದೆಗೆ ನೇಮಿಸಿದರು. ಗೇರಸೊಪ್ಪೆ ಮತ್ತು ಕೆಳದಿಯ ದೊರೆಗಳು ಅವರನ್ನು ತಮ್ಮ ರಾಯಭಾರಿಗಳೆಂದು ಮಂಗಳೂರು ಕೋಚಿನ್ ರಾಜ್ಯಕ್ಕೆ ಕಳಿಸಿದ್ದರಿಂದ ಸಾರಸ್ವತರಿಗೆ ಮಲಬಾರದವರೆಗೆ ಪಸರಿಸಲು ಅನುಕೂಲವೇ ಆಯಿತು. ಕೆಳದಿ ವೆಂಕಟಪ್ಪ ನಾಯ್ಕನು ಕ್ರಿ.ಶ.1623ರಲ್ಲಿ ವಿಠ್ಠಲ ಶೆಣ್ಯೆನನ್ನು ತನ್ನ ರಾಜ್ಯದ ಒಬ್ಬ ಅತ್ಯುನ್ನತ ಅಧಿಕಾರಿಯಾಗಿ ನೇಮಿಸಿಕೊಂಡಿದ್ದರಿಂದ ವಿದೇಶಿ ಪ್ರವಾಸಿ ಮತ್ತು ವಸಾಹತುಗಾರರೊಂದಿಗೆ ಸಂಪರ್ಕ ಸ್ಥಾಪಿಸಲು ನೆರವಾಯಿತು. ಮುಂದೆ ಈತನೇ ಗೋವೆಯ ಪೋರ್ಚುಗೀಜರ ಪ್ರತಿನಿಧಿಯೊಡನೆ, ವಿಶ್ವ ಪ್ರವಾಸಿಯಾದ ಇಟಾಲಿಯ ಪಿಟ್ರೊ ಡೆಲ್ಲಾ ವಾಲೆಯನ್ನು ಕರೆತಂದು ದೊರೆಯ ಭೇಟಿ ಮಾಡಿಸಿದನು. ಈತನು ಬರೆದಿಟ್ಟ ವೃತ್ತಾಂತದಿಂದ ಅನೇಕ ಐತಿಹಾಸಿಕ ಘಟನೆಗಳನ್ನು ಅರಿಯುವಂತಾಯಿತು. ತಾಳೆಗರಿಗಳ ಮೇಲೆ ಬರೆಯುವ ರೀತಿ ಪಿಟ್ರೊ ಡೆಲ್ಲಾನಿಗೆ ಅತ್ಯಂತ ಕುತೂಹಲಕಾರಿ ಅನಿಸಿದ್ದರಿಂದ ವಿಠ್ಠಲ ಶೈಣ್ಯೆ ಅವನಿಗೆ ತಾಳೆಗರಿಯ ಭಗವದ್ ಗೀತೆಯನ್ನು ಕಾಣಿಕೆಯಾಗಿ ಕೊಟ್ಟನು. ಇಂದಿಗೂ ಆ ಪ್ರತಿ ಇಟಾಲಿಯ ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ. ಕ್ರಿ.ಶ. 639ರಲ್ಲಿ ರಾಮಚಂದ್ರ ಶೆಣ್ಯೆನನ್ನು ಕೆಳದಿಯ ರಾಯಭಾರಿಯಾಗಿ ನೇಮಿಸಲಾಯಿತು. ಕ್ರಿ.ಶ.1646ರಲ್ಲಿ ಶಿವಪ್ಪ ನಾಯಕ ರಾಯಭಾರಿಯಾದ ಮಲ್ಲಪ್ಪ ಮಲ್ಯನು ಗೋವೆಯಲ್ಲಿದ್ದ ವಿವಿಧ ದೇಶದ

ರಾಯಭಾರಿಗಳೊಂದಿಗೆ ವಿಚಾರವಿಮರ್ಶೆ ನಡೆಯಿಸಿ ಕೆಳದಿ ರಾಜ್ಯದ ವ್ಯಾಪಾರದಲ್ಲಿ ಅಭಿವೃದ್ಧಿ ಮಾಡಿದನು. ರಾಣಿ ಚೆನ್ನಮ್ಮಾಜಿ, ಶಿವಾಜಿಯೊಡನೆ ಕಾದಾಡುವ ಸ್ಥೈರ್ಯ ತೋರಿಸಿದಾಗ ನಾರಾಯಣಮಲ್ಯನು ಅವಳಿಗೆ ಸರ್ವ ವಿಧದಲ್ಲಿಯೂ ನೆರವು ನೀಡಿದನು. ಕ್ರಿ. ಶ. 1740ರಲ್ಲಿ ಸುಬ್ಬು ಶೆಣ್ಯೆನಿಗೆ ಮಂಗಳೂರಿನ ಕಸ್ಟಮ್ ಅಧಿಕಾರಿ ಎಂದು ನೇಮಿಸಲಾಯಿತು.

ಸಾರಸ್ವತರು, ತಮ್ಮೊಂದಿಗೆ ಗೋವೆಯಿಂದ ಕುಲದೇವರ ವಿಗ್ರಹಗಳನ್ನು, ಕಲೆ, ಮತ್ತು ವಾಸ್ತು ಶೈಲಿಗಳನ್ನು ತಂದದ್ದರಿಂದ, ಅವರ ಕರ್ನಾಟಕದಲ್ಲಿ ಕಟ್ಟಿದ ದೇವಾಲಯಗಳು, ಅವರು ಹಿಂದೆ ಬಿಟ್ಟು ಬಂದ ನಾಗೇಶಿ, ಮಂಗೇಶಿ, ಶಾಂತಾದುರ್ಗಾ ದೇವಾಲಯಗಳನ್ನು ನೆನಪಿಗೆ ತರುತ್ತವೆ. ಇಷ್ಟಾದರೂ ಗೋವೆಯಲ್ಲಿ ಬಿಟ್ಟು ಬಂದ ಕುಲದೇವರ ದರ್ಶನ ಪಡೆದು ಜೀವನ ಪಾವನಗೊಳಿಸಬೇಕೆಂದು ಪ್ರತಿಯೊಬ್ಬ ಸಾರಸ್ವತನ ಕನಸು. ಅಂತೆಯೇ ಹಣ್ಣುಮುದುಕರೂ, ಮೊಮ್ಮಕ್ಕಳ ಮದುವೆ ಮಾಡಿಮುಗಿಸಿದವರೂ, ಕುಲದೇವರ ಸಾನಿಧ್ಯದಲ್ಲಿ ತಮ್ಮ ಹಣ್ಣುಮುದುಕಿಯಾದ "ಮದುಮಗಳೊ"ಡನೆಯೇಮರು ಮದುವೆ ಮಾಡಿಕೊಂಡು ತೃಪ್ತಿಪಡುತ್ತಾರೆ. ವ್ಯಾಪಾರ ಉದ್ಯೋಗಗಳಲ್ಲಿ ಧನಿಕರಾದವರು ಬಿಚ್ಚು ಕೈಯಿಂದ ದಾನ-ಧರ್ಮಗಳನ್ನೂ ಮಾಡಿದ್ದಾರೆ. ಉತ್ತರಕನ್ನಡ ಜಿಲ್ಲೆಯ ಭಟಕಳದ ರಾಣಿಯಾಗಿದ್ದ ಚೆನ್ನಭೈರಾದೇವಿಯನ್ನು ಯುದ್ಧದಲ್ಲಿ ಸೋಲಿಸುವುದು ಪೋರ್ಚುಗೀಜರಿಂದ ಸಾಧ್ಯವಾಗಲಿಲ್ಲ. ಅಂತೆಯೇ ಗೋವೆಯ ವೈಸ್‌ರಾಯನಾಗಿದ್ದ ಮಾರ್ಟಿನ್ ಅಲ್‌ಫಾನ್‌ಝೊ-ಡಿಸೌಝಾನು ಅಲ್ಲಿಯ ಪ್ರಜೆಗಳನ್ನು ಖಡ್ಗದಿಂದ ಆಹುತಿ ತೆಗೆದುಕೊಂಡು, ದೇವಾಲಯಗಳನ್ನೆಲ್ಲ ಸುಟ್ಟು ಬೂದಿಮಾಡಿದನು. ಅನಂತರ ಅನೇಕ ವ್ಯಾಪಾರಿಗಳು ಮುಂದೆ ಬಂದು ಹೊಸ ದೇವಸ್ಥಾನಗಳನ್ನು ಕಟ್ಟಿಸಿದರು. ಅರಬಸ್ತಾನದಿಂದ ಯುದ್ಧದ ಕುದುರೆಗಳನ್ನು ಆಮದು ಮಾಡುತ್ತಿದ್ದ ಸಾಂತಪ್ಪ ನಾಯ್ಕನು ಕ್ರಿ.ಶ.1565ರಲ್ಲಿ ತಿರುಮಲ ದೇವಾಲಯ ಕಟ್ಟಿಸಿದನು. ಅಣ್ಣ ತಮ್ಮಂದಿರಾದ ಬಾಳಾ ಮತ್ತು ನಾರಾಯಣ ಕಿಣಿ ಸೇರಿ ಕ್ರಿ.ಶ.1567ರಲ್ಲಿ ರಘುನಾಥ ದೇವಾಲಯ ರಚಿಸಿದರು. ಅದೇ ವರ್ಷ ಲಕ್ಕರಸ ಕಾಮತನು ಲಕ್ಷ್ಮಿನಾರಾಯಣ ದೇವಸ್ಥಾನ ನಿಲ್ಲಿಸಿದನು. ಖೇತು ಪೈ ಕ್ರಿ.ಶ.1546ರಲ್ಲಿ ಅದ್ವಿತೀಯ ಖೇತಪ್ಪೈಯ ನಾರಾಯಣ ದೇವಾಲಯ ಕಟ್ಟಿಸಿದನು. ಅದರ ಜಗಲಿಯ ಗೋಡೆಗಳನ್ನು ಅಂದಿನ ಸಾಮಾಜಿಕ ಜೀವನ ಪ್ರತಿನಿಧಿಸುವ ಉಬ್ಬು ಶಿಲ್ಪಗಳಿಂದ ಅಲಂಕರಿಸಿದ್ದಾರೆ. ಈ ದೇವಾಲಯಗಳ ಸಮೂಹ ನೋಡಿ ಮೆಚ್ಚಿದ ವಿದೇಶೀ ಪ್ರವಾಸಿ, ಫ್ರಾನ್ಸಿಸ ಬುಕಾನ್‌ನನು ತಾನು ವಿಶ್ವವೆಲ್ಲ ಸುತ್ತಾಡಿ ಬಂದರೂ ಇಂತಹ ಸುಂದರ ರಚನೆಯ ಪಾಷಾಣ ದೇವಾಲಯಗಳನ್ನು ಇನ್ನೆಲ್ಲಿಯೂ ಕಂಡಿಲ್ಲ! ಎಂದು ಉದ್ಗರಿಸಿದನಂತೆ!

ಕರಾವಳಿಯ ಇನ್ನಿತರ ಪ್ರದೇಶಗಳಲ್ಲಿ ಪ್ರಚಲಿತವಿದ್ದಂತೆ, ಗೋವೆಯಲ್ಲಿಯೂ ಸಹ್ಯಾದ್ರಿ ಪರ್ವತಾವಳಿಗಳಲ್ಲಿದ್ದ ಬಂಡೆಗಲ್ಲುಗಳನ್ನು ಕೊರೆದು ಪಡೆಯುವ ಮರಗಲ್ಲುಗಳಿಂದಲೇ ಕಟ್ಟಡಗಳನ್ನು ಕಟ್ಟುತ್ತಾರೆ. ಈ ರೀತಿಯಿಂದ ರಚಿಸಿದ ದೇವಾಲಯಗಳಲ್ಲಿ ಕುಸುರಿ ಕೆಲಸ, ಚಿತ್ರಪಟ್ಟಿಕೆಗಳನ್ನು ಕೊರೆಯುವುದು ತೀರ ಕಷ್ಟದ ಕೆಲಸ. ಅಂತೆಯೇ ತೋರಿಕೆಯ ಕಂಬ, ಕಮಾನು, ಖಿಡಕಿ, ಬಾಗಿಲುಗಳನ್ನು ನಿರ್ಮಿಸಿ ದೇಗುಲಗಳಿಗೆ ಭವ್ಯತೆ ಬರುವಂತೆ

ಮಾಡಲಾಗುತ್ತದೆ. ಜಡಿಮಳೆ, ವಿಪರೀತ ಆರ್ದ್ರಹವೆಗಳಿಂದಾಗಿ ಬಹುವರ್ಣೀಯ ಭಿತ್ತಿಚಿತ್ರಗಳು ಅತ್ಯಲ್ಪ ಅವಧಿಯಲ್ಲಿ ತಮ್ಮತನವನ್ನು ಕಳೆದುಕೊಂಡು ಬಿಡುತ್ತವೆ. ಅಂತೆಯೇ ಶತಮಾನಗಳ ಹಿಂದೆಯೇ ಕೊಂಕಣಿಗರು, ಸ್ಥಾನೀಯವಾಗಿ ಸಿಗುವ 'ಹುರಮುಂಜಿ' (ಕಾವಿಮಣ್ಣು) ಬಳಸಿ ಏಕವರ್ಣ ಕಾವಿಚಿತ್ರಗಳನ್ನು ರಚಿಸುವ ಕಲೆಯನ್ನು ತಮ್ಮದಾಗಿ ಮಾಡಿಕೊಂಡಿದ್ದಾರೆ. ಸರಾಗವಾಗಿ ಓಡುವ ರೇಖಾಲಾಲಿತ್ಯ ಮತ್ತು ರೇಖೆಗಳ ಸಕ್ರಿಯ ಮಿಲನವೇ ಕಾವಿಚಿತ್ರಗಳ ಜೀವಾಳ! ಅಂತೆಯೇ ಅವು ಚಪ್ಪಟೆಯಾಗಿದ್ದರೂ, ಸರಳ, ಸ್ನಿಗ್ಧ, ಸೌಂದರ್ಯದಿಂದ ಶೋಭಿಸುತ್ತವೆ. ಗಿಲಾಯಿಗಾಗಿ ಬಳಸುವ ಗಚ್ಚಿನಲ್ಲಿಯೇ ಕಾವಿ ಹುಡಿ ಮಿಶ್ರಣಮಾಡಿ ಇವುಗಳ ರಚನೆ ಮಾಡುವುದರಿಂದ ಕಟ್ಟಡದೊಂದಿಗೆ ಬಾಳಿ ಬದುಕುವವು. ಕರ್ನಾಟಕಕ್ಕೆ ವಲಸೆ ಬಂದ ಕೊಂಕಣಿಗರು ಈ ಕಲೆಯನ್ನು ತಮ್ಮೊಂದಿಗೆ ತಂದಿದ್ದರಿಂದ ಇಂದಿಗೂ ದಕ್ಷಿಣ, ಉತ್ತರ ಕನ್ನಡ ಜಿಲ್ಲೆಗಳ ದೇವಾಲಯಗಳಲ್ಲಿ ಅದು ಉಳಿದುಕೊಂಡಿದೆ. ಈ ಕೊಡುಗೆಗಾಗಿ ಕನ್ನಡಿಗರು ಗೋವೆಗೆ ಚಿರ ಋಣಿಯಾಗಿರಬೇಕು!

ಗೋವೆಯ ಕಾಣಕೋಣದಲ್ಲಿರುವ ಮಲ್ಲಿಕಾರ್ಜುನ ದೇವರ (ಮೂಲಭಕ್ತರು) ಕುಳಾವಿಗಳಾದ ಕುಳಂಬಿಗಳು ಅಥವಾ ದಕ್ಷಿಣದ ಕರ್ನಾಟಕಕ್ಕೆ ವಲಸೆ ಬಂದು, ಉತ್ತರ ಮತ್ತು ದಕ್ಷಿಣ ಜಿಲ್ಲೆಗಳ ಕಾಡುಗಳಲ್ಲಿ ಗದ್ದೆಗಳನ್ನು ಮಾಡಿಕೊಂಡು ನೆಮ್ಮದಿಯ ಜೀವನ ನಡೆಸುತ್ತ ಬಂದಿದ್ದಾರೆ. ಇವರಿಗೆ ಬೇಟೆಗಾರಿಕೆ ಎಂದರೆ ಪಂಚಪ್ರಾಣ. ಒಂದು ಹಳ್ಳಿಯ ಸಕಲರೂ ಸೇರಿ ಕಾಡು ಹಂದಿಯ ಬೇಟೆಯಾಡಿ ಸಾಮೂಹಿಕವಾಗಿ ಭೋಜನ ಕೂಟ ನಡೆಸುವದು ಇವರ ವೈಶಿಷ್ಟ್ಯ. ಸಂಜೆಗತ್ತಲಿನಲ್ಲಿ ಗಿಡಗಂಟೆಗಳ ಸುತ್ತ ಗೃಹ ರಚಿತ ಬಲೆಗಳನ್ನು ಹರವಿ ಮೊಲಗಳನ್ನು ಹಿಡಿಯುತ್ತಾರೆ. ಸುಗ್ಗಿಯ ಹಬ್ಬವನ್ನು ಹೆಚ್ಚಿನ ಉತ್ಸಾಹದಿಂದ ಆಚರಿಸುತ್ತಾರೆ. ಗೃಹಸ್ಥರು ತಲೆಗೆಸುತ್ತಿಕೊಂಡ ರುಮಾಲಿನ ಮೇಲೆ ಕನಕಾಂಬರ ದಂಡೆಗಳನ್ನು ಮುಡಿದುಕೊಳ್ಳುತ್ತಾರೆ. ಅಲ್ಲದೆ ಹಸಿ ತೆಂಗಿನ ಗರಿಗಳ ತುರಾಯಿಗಳನ್ನೂ ಸಿಕ್ಕಿಸಿಕೊಳ್ಳುತ್ತಾರೆ. ಸಪ್ತವರ್ಣೀಯ ಆಕರ್ಷಕಬಟ್ಟೆಗಳನ್ನು ಧರಿಸಿ, ಸೊಂಟಕ್ಕೆ ಬಿಗಿದುಕೊಂಡ ಮಣ್ಣಿನ ಮಡಕೆಯ ಆಕಾರ ಉಳ್ಳ 'ಗುಮಟೆ' ಚರ್ಮವಾದ್ಯ ನುಡಿಸುತ್ತ, ಹಾಡುತ್ತ ಕುಣಿಯುವರು. ಹಾಡುಗಳೆಲ್ಲ ಕೊಂಕಣಿ ಭಾಷೆಯಲ್ಲಿದ್ದು ಅವು ತಮ್ಮ ಗೋವೆಯ ಕುಲದೇವರ ಕುರಿತದ್ದಾಗಿರುತ್ತದೆ. ಕೋಲಾಟದಲ್ಲಿಯೂ ಅವರದು ಎತ್ತಿದ ಕೈ. ಹೆಂಗಳೆಯರು ದಿನವಿಡೀ ದುಡಿಯುವದರಲ್ಲಿ ಹೆಸರುವಾಸಿಗಳು. ಅಂತೆಯೇ ಸಂಸಾರ ಜೀವನದಲ್ಲಿ ಅವರು ಪುರುಷರು ಸರಿಸಮಾನರು. ಸೋಮಾರಿ, ಸೆರೆಕುಡುಕ ಗಂಡನೊಂದಿಗೆ ವಿವಾಹ ವಿಚ್ಛೇದ ಮಾಡಿಕೊಂಡು ಇನ್ನೊಬ್ಬನನ್ನು ವರಿಸುವಷ್ಟು ಸ್ವತಂತ್ರರು. ಕುಣುಬಿಗಳು ಚಾಚೂ ತಪ್ಪದೇ ತಮ್ಮ ಧರ್ಮ ಪಾಲನೆ ಮಾಡುವರು. ಸಾರಸ್ವತರಲ್ಲದೇ ಇನ್ನಿತರರ ಗೃಹಗಳಲ್ಲಿ ಭೋಜನ ಮಾಡುವಂತೆಯೇ ಇಲ್ಲ. ಪೂಜಾ ವಿಧಿಗಳನ್ನು ನಡೆಸಲು ಕೊಂಕಣಿ ಬ್ರಾಹ್ಮಣರನ್ನೇ ಆಮಂತ್ರಿಸುತ್ತಾರೆ.

ಗೋವೆಯ ಕದಂಬರ ಕಾಲದಲ್ಲಿಯೇ ಅತ್ಯುತ್ತಮ ನಾವಿಕರೆಂದು ಹೆಸರುವಾಸಿಯಾದ ಖಾರ್ವಿಗಳು ಕರ್ನಾಟಕಕ್ಕೆ ವಲಸೆ ಬಂದರೂ ತಮ್ಮ ವೃತ್ತಿ ಕಡೆಗಣಿಸಲಿಲ್ಲ. ಅತೀ ಚಿಕ್ಕದಾದ

'ಪಾತಿ'ಈಜುದೋಣಿಯಿಂದ ಹಿಡಿದು ಕಡಲನ್ನು ಭೇಧಿಸಿ ಓಡುವ 'ಮಚವೆ'ಗಳನ್ನು ಸರಾಗವಾಗಿ ಓಡಿಸಬಲ್ಲರು. ತಮ್ಮೊಂದಿಗೆ ಗೋವೆಯಿಂದ ತಂದ 'ಶಿಗಮೊ' (ಹೋಳಿ) ಹಬ್ಬವನ್ನು ಅತ್ಯಂತ ನಿಷ್ಠೆ ಮತ್ತು ಸಡಗರದಿಂದ ಆಚರಿಸುವರು. ಹಬ್ಬಕ್ಕೆ ಇನ್ನೂ ಎರಡುವಾರಗಳ ಕಾಲಾವಧಿ ಇರುವಾಗಲೇ, ದೇವಾಲಯದ ಜಗಲಿಯ ಮೇಲೆ ಕಲೆತು, 'ಗುಮಟೆ'ಗಳನ್ನು ನುಡಿಸುತ್ತ ಕೊಂಕಣಿಯಲ್ಲಿ ದೇವರ ನಾಮಗಳನ್ನು ಹಾಡುವರು. ಹೋಳಿಯ ದಿನ ಬಣ್ಣ ಬಣ್ಣದ ಬಟ್ಟೆಗಳನ್ನು ಧರಿಸಿ, ಮುಖವಾಡ ಧರಿಸಿ, ಗುಮಟೆ ಬಡಿಯುತ್ತ ಕೊಂಕಣಿಯಲ್ಲಿ ಇಂದಿನಿಂದ ಶಿಗಮೊ ಮುಕ್ತಾಯವಾಯಿತು. ಕಾಸು ಕೊಡಿ ಹೋಕ್ಯಾ ! ಹೋಕ್ಯಾ! ಎಂದು ಹಾಡುತ್ತ ಕುಣಿಯುವರು. ಬಂದು ಹಣದಿಂದ ಸುರಾಪಾನ ಮಾಡಿ ಅಶ್ಲೀಲ ಹಾಡುಗಳನ್ನು ಹಾಡುವ ಪರಿಪಾಠವೂ ಇದೆ.

ಪೋರ್ಚುಗೀಜರ ಆಗಮನದ ಪೂರ್ವದಲ್ಲಿಯೇ ಗೋವೆಯಲ್ಲಿ ಕ್ರೈಸ್ತರು ವಾಸವಾಗಿದ್ದರು. ಎಂದು ಇಬನ್ ಬತೂತನ ವೃತ್ತಾಂತ (ಕ್ರಿ. ಶ. 1343) ದಿಂದ ತಿಳಿದು ಬರುತ್ತದೆ. ಅವರು ಹಿಂದೂಗಳೊಡನೆ ಒಂದಾಗಿ ಸಮತಾ ಭಾವದಿಂದ ನಡೆದುಕೊಳ್ಳುವದು ಪೋರ್ಚುಗೀಜ ಪಾದ್ರಿಗಳಿಗೆ ಒಪ್ಪಿಗೆಯಾಗಲಿಲ್ಲ. ಅದರಂತೆ ಮತಾಂತರ ಹೊಂದಿದವರೂ ಹಿಂದೂ ಧರ್ಮದ ಆಚಾರ, ವಿಚಾರಗಳನ್ನು ಗುಪ್ತವಾಗಿ ಮುಂದುವರಿಸಿದ್ದಾರೆ. ಎಂಬ ಆಪಾದನೆಯ ಮೇಲೆ ಅವರನ್ನೂ ಪೀಡಿಸಲಾರಂಭಿಸಿದರು. ಅಂತೆಯೇ ಹಿಂದೂಗಳೊಡನೆ ಕ್ರೈಸ್ತರೂ ಕರ್ನಾಟಕಕ್ಕೆ ವಲಸೆ ಬಂದರು. ಹೀಗೆ ಬಂದ ರೋಮನ್ ಕೆಥೊಲಿಕರು ಸಣ್ಣ ಊರುಗಳಲ್ಲಿ ತಮ್ಮ ಚರ್ಚುಗಳನ್ನು ಕಟ್ಟಿಕೊಂಡು ನೆಮ್ಮದಿಯ ಜೀವನ ನಡೆಸುತ್ತ ಬಂದಿದ್ದಾರೆ. ಎಂದಾದರೊಂದು ದಿನ ಸಾಕಷ್ಟು ಧನ ಸಂಗ್ರಹವಾದಾಗ ಗೋವಾದಲ್ಲಿ ಬಿಟ್ಟು ಬಂದ ಸೆಂಟ್ ಫ್ರಾನ್ಸಿಸ್ ಝೆವಿಯರನ ಕಳೆವರದ ದರ್ಶನ ಲಾಭ ಪಡೆಯಬೇಕೆಂದು ಕನಸು ಕಾಣುತ್ತಿರುತ್ತಾರೆ.

ಉತ್ತರ ಕನ್ನಡ ಜಿಲ್ಲೆಯ ಕಾಡು, ಮೇಡುಗಳಲ್ಲಿ ಬೀಡುಬಿಟ್ಟ 'ಸಿದ್ದಿ'ಗಳು ಆಫ್ರಿಕಾ ಖಂಡದ ಆದಿವಾಸಿಗಳಾಗಿದ್ದು, ಅವರು ಕರ್ನಾಟಕಕ್ಕೆ ಗೋವೆಯ ಕೊಡುಗೆ. ಪೋರ್ಚುಗೀಜರು ತಮ್ಮ ಕೆಲಸಗಳನ್ನು ಬಿಟ್ಟಿಯಾಗಿ ಮಾಡಿಸುವುದಕ್ಕಾಗಿ ಆಫ್ರಿಕದ ನಿಗ್ರೊ ಗುಲಾಮರನ್ನು ಗೋವೆಗೆ ತಂದರು. ಆದರೆ ಅವರನ್ನು ಅತ್ಯಂತ ಕ್ರೌರ್ಯದ ರೀತಿಯಿಂದ ನಡೆಯಿಸಿಕೊಂಡದ್ದರಿಂದ ಹಲವರು ಓಡಿಹೋಗಿ ಕನ್ನಡನಾಡಿಗೆ ವಲಸೆ ಬಂದು ಅರಣ್ಯವಾಸಿಗಳಾಗಿ ಜೀವಿಸಲಾರಂಭಿಸಿದರು. ಕಾಡಿನ ಸಕಲ ಕೆಲಸಗಳಿಗೂ ಸದಾ ಕಾಲವೂ ಸಿದ್ಧರಾಗಿಯೇ ಇರುತ್ತಾರೆ. ಹುಲಿ, ಕರಡಿಗಳೊಂದಿಗೆ ದ್ವಂದ್ವವಾಡಿ ಗೆದ್ದು ಬಂದವರಿದ್ದಾರೆ. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಬ್ರಿಟೀಷರಿಗೆ ನಡುಕ ಹುಟ್ಟಿಸಿದವರೂ ಇದ್ದಾರೆ. ಹೊಸ ಪೀಳಿಗೆಯವರು ಆಟ-ಪಾಟ, ನಾಟಕ, ಸಿನೇಮಾಗಳಲ್ಲಿ ಭಾಗವಹಿಸಿ 'ಸೈ' ಅನಿಸಿಕೊಂಡಿದ್ದಾರೆ. ಅವರಿಗೆ ಉತ್ತಮವಾದ ಪೋಷಕ ಆಹಾರ, ಒಳ್ಳೆ ತರಬೇತಿಕೊಟ್ಟು ಅಂತರ್ ರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳನ್ನಾಗಿ ಮಾಡುವುದು ಸಾಧ್ಯವಿದೆ. ಇವರು ಸಕಲ ಭಾಷಾ ಪ್ರೇಮಿಗಳು. ಅಂತೆಯೇ ಕೊಂಕಣಿ, ಕನ್ನಡ, ಉರ್ದು ಭಾಷೆಗಳನ್ನು ತಮ್ಮದಾಗಿ ಮಾಡಿಕೊಂಡಿದ್ದಾರೆ. ಅವರ 'ಡಮಾರ'ನೃತ್ಯ ಹೆಸರುವಾಸಿಯಾಗಿದೆ. ಇವರಂತೆ ಕೊಂಕಣಿ

ಮಾತನಾಡುವ ವಾಣಿ, ಸೊನಗಾರರೂ ಗೋವೆಯಿಂದ ಬಂದವರೆ! ಕೊಂಕಣಿ ಸಂಸ್ಕೃತಿಯನ್ನು ಕಾದುಕೊಂಡು ಬಂದವರು.

ಗೋವೆಯಿಂದ ಆಗಮಿಸಿದ ಅಸಂಖ್ಯಾತರು ಕರ್ನಾಟಕದಲ್ಲಿ ಆಶ್ರಯ ಪಡೆದಿದ್ದಾರೆ. ಆದರೆ ಕನ್ನಡನಾಡಿನ ಸೋಂದೆ ಅರಸರು ಗೋವೆಯಲ್ಲಿ ಸಂರಕ್ಷಣೆ ಪಡೆದದ್ದು ಒಂದು ಅಪೂರ್ವ ಐತಿಹಾಸಿಕ ಘಟನೆ. ಸತತವಾದ ಮರಾಠರ ಆಕ್ರಮಣಕ್ಕೆ ತುತ್ತಾದ ಸೋಂದಾ, ಸ್ವಾದಿ ರಾಜ್ಯವು ಅನಂತರ (ಕ್ರಿ. ಶ. 1764) ಮುಸಲ್ಮಾನ ಅರಸರ ದಾಳಿಗಳನ್ನು ಎದುರಿಸಬೇಕಾದ್ದರಿಂದ ಅವರು ಗೋವೆಯ ಆಶ್ರಯ ಪಡೆಯಲೇಬೇಕಾಯಿತು. ಮೊದಲಿಗೆ ಸೆಂಟ್ ರೊಜಾಲಿನಾ ಊರಿನಲ್ಲಿ ತಳ ಊರಿ ನಂತರ ಕ್ರಿ. ಶ. 1774ರಲ್ಲಿ ಪೊಂಡಾ ಜಿಲ್ಲೆಯ ಬಾಂದೇವಾಡಿಯಲ್ಲಿ ತಮ್ಮ ರಾಜವಾಡೆ ಕಟ್ಟಿಕೊಂಡರು. ಈ ಮನೆತನದ ಏಳು ಅರಸರು ಕರ್ನಾಟಕದಲ್ಲಿಯೂ ಇನ್ನೂ ಏಳು ರಾಜರು ಗೋವೆಯಲ್ಲಿಯೂ ರಾಜ್ಯವಾಳಿದರು. ಕ್ರಿ. ಶ. 1791 ರಲ್ಲಿ ಸೋಂದಾ ಆಳರಸನಿಗೆ ತನ್ನ ಅಧೀನದಲ್ಲಿದ್ದ ಪೊಂಡಾ, ಕಾಣಕೋಣ, ಜಾಂಬೂಲಿಯಮ್, ಪಂಚಮಹಾಲ್ ಪ್ರದೇಶಗಳನ್ನು ಪೋರ್ಚುಗೀಜರಿಗೆ ಒಪ್ಪಿಸಬೇಕಾಯಿತು. ಈ ವಂಶದ ಕೊನೆಯ ಅರಸನಾದ ಸವಾಯಿ ಸದಾಶಿವ ರಾಜೇಂದ್ರನು 27-4-1936 ಜನ್ಮವೆತ್ತಿದನು. ಇಂದು ಅವರ ರಾಜ್ಯ ಇಲ್ಲದಿದ್ದರೂ ರಾಜಠೀವಿ ಮಾತ್ರ ಉಳಿದುಕೊಂಡಿದೆ!

ಗೋವೆಯಿಂದ ಬಂದ ಸಾರಸ್ವತರು ತಮ್ಮ ಸಾಕು ಮಾತೆಯಾದ ಕನ್ನಡಾಂಬೆಗೆ ಸಲ್ಲಿಸಿದ, ಸಲ್ಲಿಸುತ್ತಿರುವ ಸೇವೆಗಳಿಗೆ ಕೊನೆ ಮೊದಲುಗಳಿಲ್ಲ. ಸಾಹಿತ್ಯ, ವಿಜ್ಞಾನ, ಚಿತ್ರಕಲೆ, ಶಿಲ್ಪಕಲೆ, ನೃತ್ಯಕಲೆ, ವ್ಯಾಪಾರ, ನಾಟಕ, ಸಂಗೀತ, ಆಟ-ಪಾಟ, ಚಲಚಿತ್ರ, ಬ್ಯಾಂಕ್ ಉದ್ದಿಮೆ, ಹೊಟೇಲ ಉದ್ದಿಮೆ, ಸ್ವಾತಂತ್ರ್ಯ ಚಳುವಳಿ, ಸ್ತ್ರೀ ಮುನ್ನಡೆ, ಸಮಾನತೆ ಮುಂತಾದ ಕ್ಷೇತ್ರಗಳಲ್ಲಿ ತಮ್ಮ ಪರಿಣತಿ ತೋರಿಸಿ ಕೊಟ್ಟಿದ್ದಾರೆ. ಒಂದು ದೃಷ್ಟಿಯಲ್ಲಿ ಗೋವೆಯನ್ನು ಕರ್ನಾಟಕದಲ್ಲಿ ಸೇರ್ಪಡೆ ಮಾಡಬೇಕಾಗಿತ್ತು. ಯಾಕೆಂದರೆ ಗೋವೆಯಲ್ಲಿರುವ ಮೂರು ಪಟ್ಟು ಕೊಂಕಣಿಗರು ಕನ್ನಡ ನಾಡಿನಲ್ಲಿದ್ದಾರೆ!

●

೧೭. ನಮ್ಮ ಪ್ರವಾಸೋದ್ಯಮ

ಪ್ರಯಾಣವೆಂಬುದು ಜೀವನ ಶಿಕ್ಷಣವಿದ್ದಂತೆ ! ಪ್ರತಿ ಪ್ರವಾಸದ ಸಲುವಾಗಿ ಮುಂದಾಲೋಚನೆಯಿಂದ ಸಕಲಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ಪ್ರವಾಸವು ಕಷ್ಟಸಹಿಷ್ಣುತೆಯನ್ನು ಕಲಿಸುತ್ತದೆ. ಹಣ ವೇಳೆಗಳ ಮಿತವ್ಯಯದ ಅರಿವು ಮಾಡಿಕೊಡುತ್ತದೆ. ಕಲಾದರ್ಶನ, ಸೌಂದರ್ಯೋಪಾಸನೆಗಳ ಜೊತೆಗೆ ಜ್ಞಾನಾಭಿವೃದ್ಧಿಯೂ ಆಗದಿರದು. ರಾಜ ಮಹಾರಾಜರಿಗೆ, ರಾಜಕುಮಾರರಿಗೆ, ವಿದ್ಯಾರ್ಥಿಗಳಿಗೆ, ದೇಶ, ವಿದೇಶಗಳ ಪರ್ಯಟನೆ, ಕಡ್ಡಾಯವಾಗಿದ್ದ ಕಾಲವೊಂದಿತ್ತು. ಜನಸಾಮಾನ್ಯರು, ಸಾಧು ಸಂತರು, ಪುಣ್ಯ ಸ್ಥಳಗಳ ಯಾತ್ರೆಗೆಂದು ಕನ್ಯಾಕುಮಾರಿ, ರಾಮೇಶ್ವರಗಳಿಂದ ವಿವಿಧ ಹಂತಗಳಲ್ಲಿ ಕಾಶಿ, ಪ್ರಯಾಗ, ಕೇದಾರ, ಬದರಿಗಳಿಗೆ- ಹೋಗಿ ಬರುತ್ತಿದ್ದರು. ಓಡಾಟದ ಸೌಕರ್ಯಗಳು, ಸಂಪರ್ಕ ಸಾಧನಗಳು, ವಿರಾಮ ಸಾಧನಗಳು, ವಿರಾಮ ತಾಣಗಳು ಹೆಚ್ಚಾದಂತೆ ಪರ್ಯಟನವು ಒಂದು ಮನರಂಜನೆಯ ಸಾಧನವಾಗಿ ಮಾರ್ಪಟ್ಟಿತು. ಸರಕಾರ ಮತ್ತು ಸಾಹುಕಾರರು ನೌಕರದಾರರಿಗೆ ತಿರಾಗಾಟಕ್ಕಾಗಿ ಪ್ರತ್ಯೇಕ ಭತ್ತೆ ಕೊಡಲಾರಂಭಿಸಿದ್ದರಿಂದ ಈ ನವ ಉದ್ದಿಮೆಗೆ ಹೆಚ್ಚಿನ ಚಾಲನೆ ಸಿಕ್ಕಂತಾಯಿತು. ಅಂತೆಯೇ ಕೇಂದ್ರ ಮತ್ತು ರಾಜ್ಯ ಸರಕಾಗಳು ಪ್ರಮಾಸೋದ್ಯಮ ವಿಭಾಗಗಳನ್ನು ಸ್ಥಾಪಿಸಿದವು. ಕರ್ನಾಟಕದ ಪ್ರವಾಸೋದ್ಯಮ ನಿಗಮ 1971 ರಲ್ಲಿ ಅಸ್ತಿತ್ವಕ್ಕೆ ಬಂದಿತು. ಜಾಗತಿಕ ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ಇವೆಲ್ಲವುಗಳು ಸಾಧಿಸಿದ್ದೇನು, ಸಾಧಿಸಬೇಕಾದ್ದೇನು? ಎಂಬುದರ ಚಿಕಿತ್ಸಕ ವಿಶ್ಲೇಷಣೆಯೇ ಈ ಬರವಣಿಗೆಯ ಉದ್ದೇಶ.

ಅಮೇರಿಕೆಯ ನಾಗರಿಕನು ಪ್ರತಿವಾರಾಂತ್ಯದಲ್ಲಿ ಪ್ರವಾಸ ಕೈಕೊಳ್ಳುವಂತೆ ಪ್ರೋತ್ಸಾಹಿಸಲಾಗುತ್ತದೆ. ಇದರಿಂದ ಅವರ ಕಾರ್ಯ ನಿರ್ವಹಣೆಯಲ್ಲಿ ದಕ್ಷತೆ ಹೆಚ್ಚುತ್ತದೆ ಎಂಬುದು ಅನುಭವದ ಮಾತು. ಪ್ರಗತಿಯಿಂದಲೇ ಮುಂದಿನ ಶತಮಾನವನ್ನು ಸ್ವಾಗತಿಸ ಬಯಸುವವರಿಗೆ ಇದು ಅತ್ಯವಶ್ಯ. ಅಂತೆಯೇ ಎಲ್ಲ ರೀತಿಯ ಅಭಿರುಚಿಯುಳ್ಳವರಿಗೂ ಆಕರ್ಷಿಸುವಂತಹ ಸವಲತ್ತುಗಳನ್ನು ಕೊಡಮಾಡಿದ್ದಾರೆ. ವೇಗವಾಗಿ ಓಡುವ ವಾಹನಗಳಿಗೆ ಹಿರಿದಾದ ಹೆದ್ದಾರಿಗಳು, ಪ್ರತಿಯೊಂದು ಪೆಟ್ರೋಲ್ ಬಂಕಿನ ಬಳಿಯೂ ಪುಕ್ಕಟೆ ಸಿಗುವ ಪ್ರದೇಶ ಪರಿಚಯ, ನಕಾಶೆ, ಕೈಪಿಡಿಗಳು ಅಲ್ಲಲ್ಲಿ ತಂಗುದಾಣಗಳು, ಪಂತಿ ಮಾಡುವವರಿಗೆ ಬಾಡಿಗೆಯಿಲ್ಲದೇ ಬಳಸಬಹುದಾದಂತಹ ಟೇಬಲ್ ಕುರ್ಚಿಗಳು, ಅಡಿಗೆ ಮಾಡುವ ಸವಲತ್ತುಗಳು, ಕಾಡನ್ನು ಪ್ರೀತಿಸುವವರಿಗೆ ಡೇರೆ ಹೂಡಿ ಇರುವ ಅನುಕೂಲಗಳು, ಸರೋವರ, ನದಿ, ಸಮುದ್ರಗಳಲ್ಲಿ ಈಜುವವರಿಗೆ ಸಂರಕ್ಷಣೆಗಾಗಿ, ರಕ್ಷಣಪಡೆ, ಪಕ್ಷಿವೀಕ್ಷಕರಿಗಾಗಿ ಅವುಗಳ ಚಲನ. ವಲನದ ವರದಿ, ಮೀನುಹಿಡಿದು ಸಂತೋಷಿಸುವವರಿಗಾಗಿ ಪೋಷಿಸಿದ ಮೀನಗಳು, ಶಿಕಾರಿಯ ಖಯಾಲಿಯವರಿಗೆ ಸಕಾಲದಲ್ಲಿ ಅನುಮತಿ ಸಿಗುವ ವ್ಯವಸ್ಥೆ. ಸ್ಕೇಟಿಂಗ್

ಮಾಡುವವರಿಗಾಗಿ, ಹಿಮಪಾತದ ವಿವರಗಳು ಸೃಷ್ಟಿ ಸೌಂದರ್ಯ ಸವಿಯುವವರಿಗಾಗಿ ದೂರದರ್ಶಕಗಳ ಏರ್ಪಾಡನ್ನು ಮಾಡಿದ್ದಾರೆ. ಜಲಪಾತ, ಸರೋವರಗಳು, ಚಿಕ್ಕ ದೊಡ್ಡ ಉದ್ಯಾನಗಳು, ಹಿಮದ ಜಾರುಗುಂಡಿಗಳು, ಕಲಾಶಾಲೆಗಳು, ವಸ್ತು ಸಂಗ್ರಹಾಲಯಗಳು ಮುಂತಾದ ಅಸಂಖ್ಯಾತ ತಾಣಗಳನ್ನು ನೋಡಿ ಸವಿಯಲು ಮಾನವನ ಒಂದು ಜೀವಮಾನ ಸಾಲದು, ಅನಿಸುತ್ತದೆ. ಸರಕಾರ ಮತ್ತು ಸಾಹುಕಾರರ ಬೊಕ್ಕಸ ತುಂಬಿಸಲು ಈ ಉದ್ದಿಮೆಯನ್ನು ಬೆಳೆಸಲಿಲ್ಲವಾದ್ದರಿಂದ ಜನಸಾಮಾನ್ಯರು ಸಹ ತಮ್ಮ ಅನುಕೂಲತೆಗೆ ಅನುಸಾರವಾಗಿ ಅಲ್ಲಿ ಹೋಗಿ ಆನಂದಿಸಬಹುದಾಗಿದೆ. ಆಗರ್ಭಶ್ರೀಮಂತರು ತಮ್ಮ ಸ್ವಂತ ವಿಮಾನಗಳಲ್ಲಿ, ನ್ಯೂಯಾರ್ಕರಾಜ್ಯದ ಸಹಸ್ರ ನಡುಗಡ್ಡೆಗಳಲ್ಲಿ ಮೋಜುಮಾಡಿ ಇಲ್ಲವೇ ಅರಿಝೋನಾದ ಗ್ರ್ಯಾಂಡ ಕೆನಾನ್‌ದ ಆಳಕ್ಕೆ ಇಳಿದು ಹಿಂದಿರುಗಿ ಬರಬಹುದು. ಇಲ್ಲವೇ ವಾಯುವೇಗದ ವಿಮಾನ ಸಾರಿಗೆ ಬಳಸಬಹುದು. ಮಧ್ಯಮವರ್ಗದವರು ತಮ್ಮ ಕಾರಿಗೆ ಟ್ರೇಲರ್ ಜೋಡಿಸಿ, ಸಕಲ ಸಲಕರಣೆಗಳೊಂದಿಗೆ ಸಂಪೂರ್ಣ ಸಂಸಾರ ಸಮೇತ ಹೊರಟು, ಉಳಿತಾಯ ಮಾಡಬಹುದು. ಇಲ್ಲವೇ ಒಂದು ಊರಿನಲ್ಲಿ ಕಾರನ್ನು ಬಾಡಿಗೆಗೆ ಪಡೆದು ಇನ್ನೊಂದು ಊರಿನ ಕಂಪನಿಗೆ ಹಿಂದಿರುಗಿಸಬಹುದು. ಜೇಬಿನಲ್ಲಿ ಬಿಡಿಕಾಸೂ ಇಲ್ಲದವರೂ, ಕಾರಿನವರಿಗೆ ವಿನಂತಿಸಿಕೊಂಡು ಬೇಕಾದಲ್ಲಿ ಮುಟ್ಟಬಹುದು.

ಅಮೇರಿಕನ್ನರಿಗೆ ತಮ್ಮ ರಾಷ್ಟ್ರ ಎಂಥ ಪ್ರಗತಿ ಸಾಧಿಸಿದೆ? ಎಂಬುದನ್ನು ವಿಶ್ವದ ಜನರೆಲ್ಲ ಬಂದು ನೋಡಬೇಕು, ಎಂಬುದು ಲವಲವಿಕೆ. ಅಂತೆಯೇ ಅಂತರಾಷ್ಟ್ರೀಯ ಪ್ರವಾಸಿಗರಿಗೆ ವಿಶೇಷ ಸವಲತ್ತುಗಳನ್ನು ಮೀಸಲಿಡುತ್ತಾರೆ. ವಿಮಾನ ಕಂಪನಿಯವರು ಕೆಲವಾರಗಳ ಸಲುವಾಗಿ ಬರುವವರಿಗೆ ಟಿಕೇಟಿನ ದರದಲ್ಲಿ ಹೆಚ್ಚಿನ ಕಡಿತ ಕೊಡಮಾಡುತ್ತಾರೆ. ಅವರ ಸ್ವಾತಂತ್ರ್ಯ ದ್ವಿಶತಮಾನೋತ್ಸವದ ಇಡೀವರ್ಷ ಅಂತರ ರಾಷ್ಟ್ರೀಯ ಪ್ರಜೆಗಳಿಗೆ ಕೊಟ್ಟ ನೆರವನ್ನು ಬೇರಾವ ದೇಶದಿಂದಲೂ ಕೊಡಲಾಗದು. ಈ ಸಂದರ್ಭದಲ್ಲಿ ಧೀಮಂತರು, ಬುದ್ಧಿಜೀವಿಗಳನ್ನೆಲ್ಲ ತಮ್ಮ ದೇಶಕ್ಕೆ ಅತಿಥಿಗಳೆಂದು ಬರಮಾಡಿಕೊಂಡದ್ದೂ ಇದೆ. ಜನಸಾಮಾನ್ಯರನ್ನೂ ಸ್ವಾಗತಿಸುವದಕ್ಕಾಗಿ ರಾಷ್ಟ್ರೀಯ ಬಸ್ ಸಾರಿಗೆಯಲ್ಲಿ ಹೆಸರುವಾಸಿಯಾದ ಗ್ರೇಹೌಂಡ್ ಕಂಪನಿಯವರು ದಿನಕ್ಕೊಂದು ಡಾಲರಿನಲ್ಲಿ ತೊಂಬತ್ತೊಂಬತ್ತು ದಿನಗಳವರೆಗೆ ಅಮೇರಿಕೆಯನ್ನು ಸುತ್ತುವ ಅವಕಾಶಮಾಡಿಕೊಡುತ್ತಾರೆ. ಇದರ ಲಾಭ ಪಡೆದು, ಅಮೇರಿಕೆಯ ಮೂವತ್ತು ನಾಲ್ಕು ರಾಜ್ಯಗಳನ್ನು ಸಂದರ್ಶಿಸುವ ಅವಕಾರಶವನ್ನು ಕಲ್ಪಿಸಿಕೊಂಡಿದ್ದೆ. ಅನೇಕಾನೇಕ ಅಮೇರಿಕನ್ನರು ಅಲ್ಪಬಾಡಿಗೆಗೆ ಪ್ರವಾಸಿಗರನ್ನು ಬರಮಾಡಿಕೊಳ್ಳುತ್ತಾರೆ. ಇದರಿಂದ ಹಣದ ಉಳಿತಾಯದ ಜೊತೆಗೆ ಅವರ ಆಚಾರ - ವಿಚಾರಗಳ ಅನ್ಯೋನ್ಯ ಪರಿಚಯವೂ ಆಗುತ್ತದೆ. ಉತ್ತರ ಕೆರೊಲಾಯನಾ ರಾಜ್ಯದ ಎಶ್‌ವಿಲ್‌ದಲ್ಲಿ ಹಿರಿಯಳೊಬ್ಬಳ ಮನೆಯಲ್ಲಿ ಆಶ್ರಯ ಪಡೆದಾಗ, ಅವಳ ಗೆಳತಿ, ವಿಶ್ವದ ಛಾಯಾಗ್ರಹಣದ ಪಿತಾಮಹನೆನಿಸಿಕೊಂಡ ಈಸ್ಟಮನ್ ಕೊಡಕ್‌ರ ಮೊಮ್ಮಗಳು ಎಂದು ಪಂಚಯ ಮಾಡಿಕೊಟ್ಟಾಗ ಅತೀವ ಆನಂದವಾಗಿತ್ತು. ಪರರಾಷ್ಟ್ರಗಳಿಂದ ಬಂದವರಿಗೂ ಅಲ್ಲಿ ಕಾರು ಭಾಡಿಗೆಗೆ ಸಿಗುವದರಿಂದ

ಬ್ರಿಟಿಶ್, ಫ್ರೆಂಚ್ ಮತ್ತು ಬೆಲ್ಜಿಯಂದ ವಿದ್ಯಾರ್ಥಿಗಳೊಂದಿಗೆ ಅಲ್ಪಖರ್ಚಿನಲ್ಲಿ ಗ್ರೆಂಡ್ ಕೆನ್ಯಾನ್‌ದಲ್ಲಿ ಅಲೆದಾಡುವಂತಾಯಿತು. ಇದರಿಂದಾಗಿ ಅಮೇರಿಕೆಯ ಹಲವಾರು ರಾಜ್ಯಗಳ ಪ್ರಜೆ ಮತ್ತು ಪ್ರದೇಶಗಳನ್ನು ಹತ್ತಿರದಿಂದ ಅಭ್ಯಸಿಸುವಂತೆ ಆಯಿತು. ಅಲ್ಲಿ ಅತಿಥಿಯಾಗಿ ಹೋಗಿದ್ದ ಕವಿ ಗೋಪಾಲಕೃಷ್ಣ ಅಡಿಗರು, ಅಮೇರಿಕೆ ಇಷ್ಟೊಂದು ಸೌಂದರ್ಯದ ಬೀಡು ಎಂದು ತಮ್ಮ ಊಹೆಗೂ ನಿಲುಕದ ಮಾತು! ಎಂದು ಉದ್ಗರಿಸಿದ್ದರು.

ಭಾರತದ ಚಕ್ರವರ್ತಿಗಳಾಗಿ ಮೆರೆದ ಬ್ರಿಟಿಶರು, ಪ್ರವಾಸಿಗಳನ್ನು ತಮ್ಮಲ್ಲಿ ಮುಕ್ತ ಮನಸ್ಸಿನಿಂದ ಬರಮಾಡಿಕೊಳ್ಳುತ್ತಾರೆ. ನಿಷೇಧಿಸಿದ ಸಾಮಗ್ರಿಗಳನ್ನು ತಂದಿಲ್ಲವೆಂದು ಸಾರಿದರೆ ಕ್ಷಣಾರ್ಧದಲ್ಲಿ ವಿಮಾನ ನಿಲ್ದಾಣದಿಂದ ಹೊರಹೋಗಗೊಡುವರು. ಲಂಡನ್ನಿನಲ್ಲಿ ಬಸ್ ಸಾರಿಗೆ ಸುಸಜ್ಜಿತವಾಗಿರುವದರಿಂದ ಓಡಾಡಲು ಅನುಕೂಲ. ವೇಗವಾಗಿ ಹೋಗಬೇಕೆಂದರೆ, ಭೂಗರ್ಭದಲ್ಲಿ 'ಟ್ಯೂಬ್' ರೇಲ್ವೆಯ ಆಶ್ರಯ ಪಡೆಯಬಹುದು. ದೂರದ ತಾಣಕ್ಕೆ ಹೋಗಲು ಟ್ರೇನುಗಳು ಸದಾ ಸಿದ್ಧವಿರುತ್ತವೆ. ಭಾರತ ಮತ್ತು ನೆರೆಹೊರೆಯ ರಾಷ್ಟ್ರಗಳಿಂದ ಒಯ್ದ ಕಲಾಕೃತಿಗಳನ್ನು ಲಂಡನ್ ವಸ್ತು ಸಂಗ್ರಹಾಲಯದಲ್ಲಿ ಸುಂದರವಾಗಿ ಜೋಡಿಸಿ ಇಟ್ಟಿದ್ದಾರೆ. ಅಂಬಾಭವಾನಿ, ಶಿವಾಜಿಗೆ ಕೊಡಮಾಡಿದ್ದೆನ್ನಲಾದ ಖಡ್ಗ, ಟಿಪ್ಪುಸುಲ್ತಾನನ ವಜ್ರಖಚಿತ ತಲವಾರಗಳನ್ನು ಇಲ್ಲಿ ಕಾಣಬಹುದು. ಅನೇಕಾನೇಕ ಸುಂದರ ಶಿಲ್ಪಗಳನ್ನು ನೋಡುವದಲ್ಲದೇ ಯಾರ ಅಪ್ಪಣೆ, ಅಡ್ಡಿ, ಆತಂಕಗಳಿಲ್ಲದೇ ಛಾಯಾಗ್ರಹಣವನ್ನೂ ಮಾಡಬಹುದು. ಲಂಡನ್ನಿನ ಮೃಗಾಲಯದಲ್ಲಿ ಪಶು, ಪಕ್ಷಿಗಳಂತೆ ಅಲ್ಲಿಯೇ ಇದ್ದು ಬಿಡೋಣವೆನಿಸುತ್ತದೆ. ವಿಶ್ವಪ್ರಸಿದ್ಧ ಮೇಣದ ಗೊಂಬೆಗಳ ಸಂಗ್ರಹಾಲಯದಲ್ಲಿ ನಮ್ಮ ನಾಯಕರಿಗೂ ಸ್ಥಾನ ಕೊಟ್ಟಾಗ ಅಭಿಮಾನವೆನಿಸದೇ ಇದ್ದೀತೆ? ಹಿಂದುಳಿದ ರಾಷ್ಟ್ರದ ನಾಯಕರಿಗೆ ಬ್ರಿಟಿಶ ಸರಕಾರವನ್ನು ಹೀನಮಾನವಾಗಿ ತೆಗಳುವ ಸ್ವಾತಂತ್ರ್ಯವನ್ನು ಹೈಡ ಪಾಕಿನಲ್ಲಿ ಕೊಟ್ಟಿದ್ದು, ಅವರಿಗೆ ವಾಕ್ ಸ್ವಾತಂತ್ರ್ಯದ ಬಗ್ಗೆ ಇರುವ ಪ್ರೇಮವನ್ನು ಸೂಚಿಸುತ್ತದೆ. ಆಕ್ಸಫರ್ಡಿನ ಸಂಸ್ಕೃತ ಕಾಲೇಜು, ಹೆಮ್ಮೆ ಹುಟ್ಟಿಸುವಂಥಾದ್ದು. ಬ್ರಿಟಿಶ್ ಪೋಲಿಸರಂಥ ದಕ್ಷಪಡೆ ಜಗತ್ತಿನಲ್ಲಿ ಇನ್ನೊಂದಿರಲಿಕ್ಕಿಲ್ಲ. ಬಕಿಂಗಹ್ಯಾಮ ಅರಮನೆಯಿಂದ ಹೊರಬಿದ್ದ ಕುಕ್ಕಟ ಸಂಸಾರಕ್ಕೆ ದಾರಿ ಮಾಡಿಕೊಡುವ ಸಲುವಾಗಿ ವಾಹನ ತಡೆಹಿಡಿಯುವಷ್ಟು ಪ್ರಾಣಿ ಪ್ರೇಮ ಅವರದು. ಪ್ರವಾಸಿಗಳಿಗೆ ಸಹಾಯಮಾಡಲು ಸದಾ ಸಿದ್ಧರು. ವಿಳಾಸ ವಿವರಿಸಿ ಮಾರ್ಗದರ್ಶನ ಮಾಡುವರು. ಸಂಪು ಹೂಡಿದ ಟ್ಯಾಕ್ಸಿಯನ್ನು ನೂಕುವದರಲ್ಲೂ ಹಿಂದೆ ಬೀಳುವದಿಲ್ಲ. ಹೊಸ ಊರುಗಳನ್ನು ನೋಡುವ ತವಕದಲ್ಲಿ ಪ್ರವಾಸಿಗರು ತಮ್ಮ ಕ್ಯಾಮರಾ, ಸೂಟಕೇಸ್, ಕೈಚೀಲಗಳನ್ನು ವಿಮಾನ, ರೇಲು, ಟ್ಯಾಕ್ಸಿಗಳಲ್ಲಿ ಬಿಟ್ಟು ಹೋಗುವದು ತೀರಾ ಸಾಮಾನ್ಯವಲ್ಲವೇ? ಇಂಥವನ್ನು ಕಾರ್ಯಾಲಯದ ಕೆಲಸಗಾತಿ ತಂದು ಕೊಟ್ಟಾಗ ನಂಬುವದೇ ಕಷ್ಟವಾಗಿತ್ತು. ಅಮೇರಿಕೆಯ ಗ್ರೇಹೌಂಡ್ ಬಸ್ಸಿನಲ್ಲಿ, ಬಾಲ್ಟಿ ಮೋರದಲ್ಲಿ ಉಳಿದೇ ಹೋದ ಸಾಮಾನಗಳು ರಾಷ್ಟ್ರದ ರಾಜಧಾನಿ ವಾಷಿಂಗ್ಟನ್ ಸೇರಿದಾಗ ಮಾಲಕನ ದಾರಿ ಕಾಯುತ್ತ ಕುಳಿತಿದ್ದವು! ಜಪಾನೀಯರು,

ಬ್ರಿಟಿಶ್ ಅಮೇರಿಕನ್ನರನ್ನೂ ಅತಿಥ್ಯದಲ್ಲಿ ಮೀರಿಸಿ ಪ್ರಯಾಣಿಕರು ಇಳಿದ ಸ್ಥಳಕ್ಕೇ ಬಿಟ್ಟು ಹೋದ ಸಾಮಾನು ಮುಟ್ಟಿಸುವ ವ್ಯವಸ್ಥೆ ಮಾಡಿದ್ದಾರೆ.

ಯುರೋಪ ಖಂಡದ ಚಿಕ್ಕಪುಟ್ಟ ರಾಷ್ಟ್ರಗಳು, ಸರಕಾರ, ಸಾಹುಕಾರ ಮತ್ತು ಪ್ರವಾಸಿಗರಿಗೆ ಪರಸ್ಪರ ಲಾಭವಾಗುವ ರೀತಿಯಲ್ಲಿ ಪ್ರವಾಸೋದ್ಯಮವನ್ನು ಬೆಳೆಸಿಕೊಂಡಿವೆ. ಜರ್ಮನ್ನರ ಕಾರ್ಯದಕ್ಷತೆ ಲುಫ್ತಾಂಜಾ ವಿಮಾನ ಏರಿದಾಕ್ಷಣ ಅರಿವಾಗಿಬಿಡುತ್ತದೆ"ಬೊನ್" ನಗರದ ಜೊತೆಗೆ ಬರ್ಲಿನ್ ನೋಡುವ ಲವಲವಿಕೆಯಾಗಿದೆ. ಇದೇ ಟಿಕೇಟಿನಲ್ಲಿ ಹೆಚ್ಚಿನ ಹಣಕೊಡದೇ ಅಲ್ಲಿ ಹೋಗಬಹುದೇ"? ಎಂದು ವಿಚಾರಿಸಿದ್ದಕ್ಕೆ ಬಕದಂತೆ ಉದ್ದ ಕಾಲುಳ್ಳ ಗಗನಸಖಿ, ಟಿಕೇಟು ಪಡೆದು, ಇದನ್ನು ತಿದ್ದಿ ನೀವು ಇಳಿದಲ್ಲಿ ಕಳಿಸಿಕೊಡುತ್ತೇನೆ' ಎಂದಾಗ ಅವಳ ಮಾತನ್ನು ನಂಬುವದು ಕಷ್ಟಕ್ಕಿಟ್ಟುಕೊಂಡಿತ್ತು. ಬರ್ಲಿನಿನಲ್ಲಿ ಇಳಿದು ಕೊಂಡ ಮನೆಯ ಒಡತಿ, ಮರುದಿನ ಎಷ್ಟುಗಂಟೆಗೆ ಎಬ್ಬಿಸಬೇಕು? ನಾಶ್ತಾಗೆ ಏನೇನು ಪೂರೈಸಬೇಕು?' ಎಂದು ಹರಕು - ಮುರುಕು ಇಂಗ್ಲಿಷಿನಲ್ಲಿ ವಿಚಾರಿಸಿದಾಗ, ಪ್ರವಾಸಿಗರನ್ನು ಸ್ವಂತದ ಅತಿಥಿಯಂತೆ ನಡೆಸಿಕೊಳ್ಳುವ ಈ ವಿಧಾನಕ್ಕೆ ತಲೆದೂಗಿದೆ. ಜರ್ಮನ್ ಭಾಷೆ ಬರದಿದ್ದರೂ ಅವಳೊಂದಿಗೆ ವಿಚಾರ ವಿಮರ್ಶೆ ನಡೆಸಲು ಏನೂ ಅಡಚಣೆಯಾಗಲಿಲ್ಲ. ಜರ್ಮನ್ ಮಿಶ್ರಿತ ಇಂಗ್ಲಿಷಿನಲ್ಲಿ ಅವಳ ಕುಟುಂಬ, ದ್ವಿತೀಯ ಮಹಾಯುದ್ಧದಲ್ಲಿ ಅನುಭವಿಸಿದ ಕಷ್ಟನಷ್ಟಗಳನ್ನು ವಿವರಿಸಿದಳು. ಬರ್ಲಿನದ ಬೃಹತ್ ಬೀದಿಗಳನ್ನೂ, ವಾಣಿಜ್ಯಕೇಂದ್ರಗಳನ್ನೂ ಮೆಚ್ಚಿಕೊಳ್ಳುತ್ತಿದ್ದಂತೆ ಹತ್ತಿರದಲ್ಲಿ ಮಳಲನ್ನು ಗಾಡಿಗೆ ತುಂಬುತ್ತಿದ್ದ ಕೆಲಸಗಾರನು ಕೈಯೆತ್ತಿ ಅಪರಿಚಿತನಿಗೆ ಗೌರವ ಸೂಚಿಸಿದನು. ಜರ್ಮನ್ ಉಪಕರಣಗಳ ಬಗ್ಗೆ ಹೆಚ್ಚಿನ ವಿಶ್ವಾಸ ಇದ್ದವನಿಗೆ, ಜನತೆಯ ಬಗ್ಗೆಯೂ ಅಭಿಮಾನ ಮೂಡುವಂತೆ ಆಯಿತು.

ಹಾಲಂಡ್ (ನೆದರಲ್ಯಾಂಡ್)ನ ರಾಜಧಾನಿಯಾದ ಆಮಸ್ಟರಡಾಮಿನಲ್ಲಿ ವಿಮಾನದಿಂದ ಇಳಿಯುತ್ತಿದ್ದಂತೆ "ಫಿಲಿಪ್ಸ ಉಪಕರಣಗಳಲ್ಲಿ ಜಗತ್ತೇ ವಿಶ್ವಾಸವಿಡುತ್ತದೆ" ಫಲಕ ಸ್ವಾಗತಿಸಿತು. ಹೀಗೆ ಬರೆಯಲು ಅವರಿಗೆ ತಮ್ಮ ದೇಶದ ಬಗ್ಗೆ ಎಷ್ಟೊಂದು ಅಭಿಮಾನವಿದ್ದಿರಬೇಕು ಅನಿಸಿತು. ಕಟ್ಟಡದಲ್ಲೆಲ್ಲ ವಿನ್ಸೆಂಟ್ ವ್ಯಾನ್ ಗೋನ ತೈಲಚಿತ್ರಗಳ ಪ್ರತಿಕೃತಿಗಳನ್ನು ತೂಗಹಾಕಿದ್ದರು.

ನಗರವು ಸಮುದ್ರ ಪಾತಳಿಗಿಂತ ಕೆಳಗೆ ಇದ್ದುದರಿಂದ ಕಾಲುವೆಗಳನ್ನೇ ರಹದಾರಿಯಾಗಿ ಬಳಸುತ್ತಿದ್ದ ಕಾಲವೊಂದಿತ್ತು. ಕಾಲುವೆಗಳ ಅಂಚಿನಲ್ಲಿ ಇಟ್ಟಂಗಿಗಳನ್ನು ಜೋಡಿಸಿ ಕಿರು ರಸ್ತೆಗಳನ್ನು ರಚಿಸಿದ್ದಾರೆ. ಅವುಗಳ ಮೇಲೆ ಕಾರು -ಮೋಟಾರುಗಳನ್ನು ಓಡಿಸುವದು ಕಷ್ಟಕರವಾದ್ದರಿಂದ ಸಕಲರೂ ಸಾಯಕಲ್‌ನ್ನೇ ಬಳಸುತ್ತಾರೆ. ಪ್ರವಾಸಿಗರನ್ನು ನೌಕಾವಿಹಾರಕ್ಕೆ ಕರೆದೊಯ್ಯುವುದೇ ಅವರ ಮುಖ್ಯವಾದ ಪ್ರವಾಸೋದ್ಯಮ ಅಲ್ಲದೇ ಫುಟ್‌ಬಾಲ್ ಆಕಾರದ ಚೀಜ್ ಮತ್ತು ಕೊರಡಿನ ಬೂಟುಗಳನ್ನು ಖರೀದಿಸಬಹುದು. ವಾತನಿಯಂತ್ರಿಕ ಗಾಜಿನ ಮನೆಗಳಲ್ಲಿ ವರ್ಷದುದ್ದಕ್ಕೂ ವಿವಿಧ ಹೂಗಳನ್ನು ಬೆಳೆಸಿ ವಿಶ್ವದ ಪ್ರಮುಖ ನಗರಗಳಲ್ಲಿ ವಿಮಾನ ಮುಖಾಂತರ ಮುಟ್ಟಿಸುವದು ಇವರ ಇನ್ನೊಂದು ಬೃಹತ್ ಉದ್ದಿಮೆ. ಹೂಗಳಿಂದ

ಅಲಂಕೃತ ಶುಭಾಶಯ ಕಾರ್ಡುಗಳಿಗೆ ಆಯಾಪುಷ್ಪಗಳ ಸುಗಂಧಲೇಪ ಮಾಡುವದು ಈ ನಾವಿಕರ ವೈಶಿಷ್ಟ್ಯ. ಗಡಿಯಾರಗಳಿಗೆ ಹೆಸರಾದ ಇಡೀ ಸ್ವಿಟ್ಝರ್ಲ್ಯಾಂಡ್ ದೇಶವೇ ಒಂದು ದೊಡ್ಡ ಹೂದೋಟದಂತಿದೆ ಎಂದು ನೋಡಿದಾಗಲೇ ತಿಳಿಯಿತು. ಸಾಧ್ಯವಿದ್ದಲ್ಲೆಲ್ಲ ಹೂವು ಬೆಳೆಸುತ್ತಾರೆ. ರೇಲು ಪ್ರವಾಸ ಮಾಡುವಾಗಲೆಲ್ಲ ಹೂಗಳ ರಾಶಿರಾಶಿ ನೋಡಿದರೆ ಪ್ರಯಾಣ, ನೆಮ್ಮದಿ ತಾರದಿದ್ದೀತೇ?

ಫ್ರಾನ್ಸದ ರಾಜಧಾನಿ ಪ್ಯಾರಿಸ್, ಕಡಲ ತೀರದ ರೀವೇರಾ, ಅಲ್ಲಿಯ ಸ್ಥಾನೀಯರಿಗೇ ದುಬಾರಿಯಾದಾಗ, ಪ್ರವಾಸಿಗರು ಅದಕ್ಕಾಗಿ ದೂರಿಕೊಳ್ಳುವಂತಿಲ್ಲ. ಹೆದ್ದಾರಿಗಳ ಇಕ್ಕಲಗಳಲ್ಲಿರುವ ಕೆಫಿಟೇರಿಯಾದಲ್ಲಿ ಕುಳಿತು, ಹೆಣ್ಣಿನೊಂದಿಗೆ ಹೆಂಡ ಹೀರಿದರೆ, ಇಲ್ಲವೇ ಅಲ್ಲಿಯ ಇರುಳ ಜೀವನಕ್ಕೆ ಮರುಳಾದರೆ, ಜೇಬು ಖಾಲಿಯಾಗದೇ ಇದ್ದೀತೆ? ಇದಕ್ಕೆ ಬದಲಾಗಿ ವಿಶ್ವಖ್ಯಾತವಾದ ಫ್ರಂಚ್ ಬ್ರೆಡ್ಡನ್ನು ಜಗಿದು, ಒಂದು ಲಿಟರ್ ತಂಪಾದ ಹಾಲನ್ನು ಹೊಟ್ಟೆಗೆ ಇಳಿಸಿದರೆ, ಕಾಲು ನಡಿಗೆಯಲ್ಲಿಯೇ ಎಫೆಲ್ ಟಾವರ್, ಕಲಾಶಾಲೆ, ನೆಪೋಲಿಯನ್ ಸ್ಮಾರಕ ಸೇನ್ ನದಿದಂಡೆಗಳನ್ನೆಲ್ಲ ಸುತ್ತಾಡಿ ಬರಬಹುದು. ಒಂದೂ ಕಾಸು ಖರ್ಚುಮಾಡದೇ! ಫ್ರೆಂಚ್ ಸುಗಂಧ ದ್ರವ್ಯಗಳನ್ನು ಕೈಗೆ ಸವರಿಸಿಕೊಂಡೂ ಬರಬಹುದೆಂದು ಯತ್ನಿಸಿದಾಗ ತಿಳಿಯುವದು. ಇಟಾಲಿಯ ವಿಮಾನದಲ್ಲಿ ಉಡ್ಡಾಣ ಮಾಡುವಾಗಲೇ, ಅವರು ತಮ್ಮ ರುಚಿಕಟ್ಟಾದ ಅಡಿಗೆಯ ಪರಿಚಯ ಮಾಡಿಸಿಬಿಡುತ್ತಾರೆ. ನಿಲ್ದಾಣದಲ್ಲಿ ತೂಗಹಾಕಿದ ಫಲಕಗಳೇ ಲಭ್ಯವಿರುವ ವಸತಿಗೃಹಗಳನ್ನು ಪರಿಚಯಿಸುತ್ತವೆ. ಪ್ರವಾಸಿಗರ ಅಭಿರುಚಿ ಮತ್ತು ಆರ್ಥಿಕ ಸ್ಥಿತಿ - ಗತಿಗಳಿಗೆ ಅನುಸಾರವಾಗಿ, ನಿವಾಸಾಧಿಕಾರಿಯನ್ನು ಸಂಪರ್ಕಿಸಿ, ಟ್ಯಾಕ್ಸಿ ಗೊತ್ತು ಮಾಡಿ, ರವಾನಿಸುವದು ವಿಮಾನಾಧಿಕಾರಿಯ ಜವಾಬ್ದಾರಿ, ಎಂದರೆ ನಂಬುವದೇ ಕಷ್ಟ. ರೋಮ್‌ನಗರದಲ್ಲಿ ಇಳಿದುಕೊಂಡ ಮನೆಯ ಯಜಮಾನಿ, ಹಿಂದೊಮ್ಮೆ ಆಗರ್ಭ ಶ್ರೀಮಂತನ ಪತ್ನಿಯಾಗಿದ್ದಳೆಂದು ಕಾಲು ಮುರಿದುಕೊಂಡು, ಧೂಳು ತಿನ್ನುತ್ತ ಬಿದ್ದ ಖುರ್ಚಿಸೋಫಾಗಳೇ ಸಾರಿಹೇಳಿದವು. ಪ್ರತಿದಿನವೂ ಕುಡುಕ ಪತಿಯೊಂದಿಗೆ ವಾಗ್ಯುದ್ಧವಾಗುತ್ತಿದ್ದುದರಿಂದ, ವಿವಾಹ ವಿಚ್ಛೇದನವಾಯಿತಂತೆ. ಜೀವನವೇ ಬೇಸರವಾಗಿ ಇವಳು ಮಧು ಪಾನದಲ್ಲಿ ಮನಸ್ಸು ಹಾಕಿದ್ದರಿಂದ ಬರುವ ಅಲ್ಪ ಆದಾಯ ಯಾವುದಕ್ಕೂ ಸಾಲದೇ ಒದ್ದಾಡುತ್ತಿದ್ದಾಳೆ. ನಡುರಾತ್ರಿಯವರೆಗೂ ತನ್ನ ಜೀವನದ ಏರಿಳಿತಗಳನ್ನು ಪರಿಚಯಿಸುತ್ತಲೇ ಇದ್ದಳು.

ಗತವೈಭವವನ್ನೇ ರಾಷ್ಟ್ರೀಯ ಬಂಡವಲು ಆಗಿ ಮಾಡಿಕೊಂಡ ಶ್ರೇಯಸ್ಸು ಗ್ರೀಸ್ ರಾಷ್ಟ್ರಕ್ಕೆ ಸಲ್ಲಬೇಕು. ತಮ್ಮ ಪ್ರಾಚೀನ ಶಿಲ್ಪ, ಕಟ್ಟಡಗಳು, ದೇವಾಲಯ, ಆಟದ ಬಯಲು, ಹೊರಾಂಗಣ ನಾಟಕ ಶಾಲೆಗಳ ಅವಶೇಷಗಳನ್ನು ಅತ್ಯಂತ ದಕ್ಷತೆಯಿಂದ ಸಂರಕ್ಷಿಸಿ, ಪ್ರವಾಸಿಗಳಿಗೆ ದರ್ಶನ ಮಾಡಿಸುತ್ತಾರೆ. ಹಿತ-ಮಿತವಾದ ಖರ್ಚಿನಲ್ಲಿ ದೇಶದ ವಿವಿಧ ಭಾಗಗಳಿಗೆ ಕರೆದೊಯ್ದು ಅತಿಥಿಗಳಂತೆ ನಡೆಯಿಸಿಕೊಳ್ಳುತ್ತಾರೆ. ಈ ಖರ್ಚಿನಲ್ಲಿಯೇ ಸೊಗಸಾದ ಗ್ರೀಕ್ ಊಟದ ಮಾದರಿ ಪರಿಚಯಿಸುತ್ತಾರೆಂದು ಹೇಳಿದರೆ ನಂಬುವದು ಕಷ್ಟ.

ನಾವೆಗಳಲ್ಲಿ ಕರೆದೊಯ್ದು ಸಣ್ಣ ಪುಟ್ಟ ನಡುಗಡ್ಡೆಗಳ ಪರಿಚಯ ಮಾಡಿ ಕೊಡುತ್ತಾರೆ. ಸಹಸ್ರಾರು ವರ್ಷಗಳ ಹಿಂದೆ ನಾಯಿಲ್ ನದಿಯಗುಂಟ ಬೆಳೆದುಕೊಂಡ ಸಂಸ್ಕೃತಿ-ಅವಶೇಷಗಳನ್ನು, ಈಜಿಪ್ತ್ ದೇಶ ತನ್ನ ಪ್ರವಾಸೋದ್ಯಮದ ಮುಖ್ಯ ಅಸಲು ಆಗಿ ಬಳಸಿಕೊಳ್ಳುತ್ತಿದೆ. ಉದ್ದ ನಿಲುವಂಗಿ ತೊಟ್ಟ ಮಾರ್ಗದರ್ಶಿಗಳು ನಾವು ಇಳಿದ ತಾಣಕ್ಕೇ ಬಂದು ನಸುಕಿನಲ್ಲಿಯೇ ಕರೆದೊಯ್ದು 'ಸ್ಫಿಂಕ್ಸ್'ದ ದರ್ಶನ ಮಾಡಿಸುತ್ತಾರೆ, ನಂತರ ಒಂದೊಂದಾಗಿ ಪಿರಾಮಿಡ್ಡುಗಳನ್ನು ತೋರಿಸುತ್ತ ಅವುಗಳ ಒಳರಚನೆ ಪರಿಚಯಿಸುವದಕ್ಕಾಗಿ ಕಗ್ಗತ್ತಲು ತುಂಬಿದ ಒಳಗಿನ ಕಿರುದಾರಿಯಲ್ಲಿ ಅಂಬೆಗಾಲಿಡುತ್ತ ಮುಂದೆ ಸಾಗುತ್ತಾರೆ. ಅವರನ್ನು ಹಿಂಬಾಲಿಸುತ್ತ, ರಾಜ - ರಾಣಿಯರ ಕೋಣೆಗಳನ್ನು ನೋಡುವದರೊಳಗಾಗಿ ಪ್ರವಾಸಿ ಸುಸ್ತಾಗಿ ಬಿಡುತ್ತಾನೆ. ಸೂಚಿಸಿದರೆ, ಅವರ ರಾಷ್ಟ್ರೀಯ ವೇಷ-ಭೂಷಣಗಳಲ್ಲಿ ಛಾಯಾಚಿತ್ರ ತೆಗೆಸುವ ಏರ್ಪಾಡೂ ಮಾಡುತ್ತಾರೆ, ಕಲಾವಸ್ತುಗಳಿಂದ ಕಿಕ್ಕಿರಿದು ತುಂಬಿದ ಸಂಗ್ರಹಾಲಯಕ್ಕೂ ಕರೆದೊಯ್ಯುತ್ತಾರೆ. ಐತಿಹಾಸಿಕ ಘಟನೆಗಳನ್ನೆಲ್ಲ ವಿವರವಾಗಿ ವಿವರಿಸುತ್ತಾರೆ. ಇಷ್ಟೆಲ್ಲ ಸೇವೆಗೆ ಅವರು ಪಡೆಯುವ ಹಣ ಅತ್ಯಲ್ಪವೆಂದೇ ಹೇಳಬೇಕು.

ಉಳಿದೆಲ್ಲ ರಾಷ್ಟ್ರಗಳ ಪ್ರವಾಸಗಳಿಂದ ಮನಸ್ಸಿಗೆ ಪ್ರಫುಲ್ಲತೆ ಎಂದರೆ ಪಾಕಿಸ್ತಾನದಲ್ಲಿ ಕಾಲಿಡುತ್ತಿದ್ದಂತೆ, ಕಿರಿಕಿರಿ ಪ್ರಾರಂಭವಾಗುತ್ತದೆ. ಎಷ್ಟೆಂದರೂ ಅವರೂ ನಮ್ಮ ಬಾಂಧವರಲ್ಲವೇ? ಪಾಸ್ ಪೋರ್ಟ ವೀಸಾಗಳಲ್ಲಿ ಏನಾದರೂ ಕುಂದುಕೊರತೆಗಳು ಸಿಗುತ್ತದೆಯೇ, ಎಂದು ಹುಡುಕುತ್ತಾರೆ. ಸಾಮಾನುಗಳನ್ನೆಲ್ಲಾ ಸಿಕ್ಕಾಪಟ್ಟೆ ಹರವಿ ಅವುಗಳಲ್ಲಿ ಬೆಳ್ಳಿ - ಬಂಗಾರದ ಗಟ್ಟಿಗಳನ್ನು ಅಡಗಿಸಿ ಇಡಲಾಗಿದೆಯೇ ಎಂದು ಶೋಧಿಸುತ್ತಾರೆ. ಏನೂ ಸಿಗದಾಗ ಆಪ್ತರಿಗಾಗಿ ಕೊಂಡ ಪೆನ್ನು ಪೆನ್ಸಿಲ್‌ಗಳನ್ನು ಕಸ್ಟಮ್ಸ ಅಧಿಕಾರಿಗಳು ತಮ್ಮ ಜೇಬಿಗೆ ತುರುಕಿಕೊಂಡರು. ಕರಾಚಿ ವಿಮಾನ ನಿಲ್ದಾಣದಿಂದ ಹೊರಬೀಳುತ್ತಿದ್ದಂತೆ, ಎಲ್ಲೆಡೆ ಅವ್ಯವಸ್ಥೆ ತಾಂಡವವಾಡುತ್ತಿದ್ದುದನ್ನು ಕಾಣುವಂತಾಯಿತು. ಪಠಾಣ ಡ್ರಾಯವರನು ರಸ್ತೆಯೆಲ್ಲ ತನಗೊಬ್ಬನಿಗೇ ಮೀಸಲು ಎಂಬಂತೆ ಟ್ರಕ್ ಓಡಿಸಿದರೆ, ಕತ್ತೆಗಾಡಿಯವನು ತಾನು ಮಹಾನ್ ಕತ್ತೆಯೆಂದು ಸಿದ್ಧಮಾಡಲು ಹೊರಟಂತಿತ್ತು! ಪೋಲಿಸನು ಸೀಟಿಯೂದಿ ಕಿರುಚಿಕೊಂಡರೂ ಕಿವಿಗೊಡುವವರೇ ಇರಲಿಲ್ಲ. ರಸ್ತೆ, ಅಂಚಿನಲ್ಲಿ ಭಿಕ್ಷುಕರು, ಹಸ್ತ ಸಾಮುದ್ರಿಕ, ನೋಡುವವರು, ಚಿಲ್ಲರೆ ಮಾರಾಟಗಾರರಿಂದ ತುಂಬಿ ತುಳುಕುತ್ತಿತ್ತು. ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಿದ ಹರಪ್ಪ ಮೊಹೆಂಜೊದಾರೊಗಳಲ್ಲಿ ದೊರೆತ ಗೊಂಬೆ ಪಿಂಗಾಣಿ, ನಾಣ್ಯಗಳ ಅಡಿಯಲ್ಲಿ ಪಾಕಿಸ್ತಾನದ ಮೂರು ಸಹಸ್ರ ವರ್ಷಗಳ ಸಂಸ್ಕೃತಿ ಫಲಕ ಓದಿ ಕೇವಲ ಮೂವತ್ತು ವರ್ಷಗಳ ಹಿಂದೆ ಉದಯಿಸಿದ ದೇಶದ ಇತಿಹಾಸ (ಅ) ಜ್ಞಾನಕ್ಕೆ ತಲೆದೂಗದೇ ಇರಲಾದೀತೆ?

ಅರ್ಧವಿಶ್ವದ ಪರ್ಯಟನದ ನಂತರ ನಾವು ಹೇಗಿದ್ದೇವೆ ? ಎಂದು ಪರೀಕ್ಷಿಸಲು ದೇಶದ ಉದ್ದಗಲಕ್ಕೆ ವಿಸ್ತಾರವಾಗಿ ಸಂಚರಿಸಿದ್ದಾಯಿತು. ಸಕಲ ಸಾರ್ವಜನಿಕ ಕ್ಷೇತ್ರಗಳಲ್ಲಿಯೂ ಕಂಡುಬರುವ ಅಶಿಸ್ತು, ಅಸಹನೆ, ಅಸಹಕಾರಗಳು ಪ್ರವಾಸೋದ್ಯಮವನ್ನು ಪೂರ್ಣವಾಗಿ ಆವರಿಸಿದ್ದನ್ನು ನೋಡಿ ಜಿಗುಪ್ಸೆಯಾಯಿತು. ವಿದೇಶಿ ವಿನಿಮಯ ಗಳಿಸುವ ಉದ್ದೇಶದಿಂದ

ನ್ಯೂಯರ್ಕ, ಸ್ಯಾನಫ್ರಾನ್ಸಿಸ್ಕೊ, ಲಾಸ್ ಎಂಜೆಲಿಸ್, ಲಂಡನ್, ಪ್ಯಾರಿಸ್, ರೋಮಗಳಂತಹ ಮಹಾನಗರಗಳಲ್ಲಿ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಭಾರತದ ಪ್ರವಾಸಿ ಪ್ರೋತ್ಸಾಹನಾ ಕೇಂದ್ರಗಳನ್ನು ಸ್ಥಾಪಿಸಿಲಾಗಿದೆ. ಇವುಗಳನ್ನು ಅಲಂಕರಿಸುವ ಅಧಿಕಾರ ದಕ್ಕಿಸಿಕೊಳ್ಳಲು, ಕಚ್ಚಾಡಿ ವಶೀಲಿ ಬಳಸಿ ಹೆಂಡತಿ - ಮಕ್ಕಳೊಂದಿಗೆ ಅಲ್ಲಿಗೆ ಸರಕಾರಿ ವೆಚ್ಚದಲ್ಲಿ ಪಯಣ ಬೆಳೆಸುವರೆಂದರೆ ಅದೊಂದು ಮಹಾಸಾಧನೆ ಅಧಿಕಾರ ವರ್ಗಕ್ಕೆ ಕುಟುಂಬದ ಯೋಗಕ್ಷೇಮ, ಮಕ್ಕಳ ವಿದ್ಯಾಭ್ಯಾಸ, ಸಾಂಸ್ಕೃತಿಕ ಚಟುವಟಿಕೆ ಭೋಜನ ಕೂಟಗಳೇ ಅವರಿಗೆ ಮುಖ್ಯ ಆಕರ್ಷಣೆಯಾಗಿರುವಾಗ ಸದಸ್ಯರಿಗೆ ದೇಶ ಪರ್ಯಟನದ ಮಾಹಿತಿ ಕೊಡಲು ವೇಳೆ - ತಾಳ್ಮೆಗಳು ಎಲ್ಲಿರುತ್ತವೆ? ಪುಣ್ಯಕ್ಕೆ ಆಯಾದೇಶಗಳ ಪ್ರವಾಸಿ ದಲ್ಲಾಳಿಗಳು ಭಾರತದ ಬಗ್ಗೆ ಅಕರ್ಷಕ ಮಾಹಿತಿ ಪೂರೈಸುವದರಿಂದ ಅಲ್ಪಪ್ರಮಾಣದಲ್ಲಿಯಾದರೂ ವಿದೇಶೀಯರು ಇಲ್ಲಿ ಬರುವಂತಾಗುತ್ತದೆ. ನಮ್ಮ ರಾಯಭಾರಿ ಕಛೇರಿಗಳು, ಪ್ರಯಾಣದ ಕಾಗದ ಪತ್ರಗಳಿಗೆ ಸಾಕಷ್ಟು ಓಡಾಡಿಸುತ್ತಾರೆ. ಭಾರತೀಯ ವಿಮಾನಗಳಲ್ಲಿ ಪಯಣಿಸಲು ಪ್ರವಾಸಿಗರು ನಿರ್ಧರಿಸಿದರೆ ಅಲ್ಲಿಯೇ ನಮ್ಮ ನಿಜಸ್ವರೂಪದ ದರ್ಶನವಾಗಿ ಬಿಡುತ್ತದೆ. ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಸಂಪು ಹೂಡಿ, ಕೋರ್ಟ ಕಚೇರಿಗಳಿಗೆ ಎಡತಾಕುವ ಗಗನ ಸಖಿಯರು ಅತಿಥಿಗಳನ್ನು ಬರಮಾಡಿಕೊಳ್ಳುವಾಗ ಕಾಟಾಚಾರಕ್ಕೆ ನಗಲು ಯತ್ನಿಸುವರು. ಪೆಪರ ಮಿಂಟು ವಿತರಣೆ ಮಾಡಿ, ಚಹಾಕಾಫಿ ಬೇಕೆ? ಎಂದು ವಿಚಾರಿಸಿದರೆ, ಕ್ಲಪ್ತ ಕಾಲದಲ್ಲಿ ಊಟ - ತಿಂಡಿ ವಿತರಿಸಿದರೆ, ಸಹೋದ್ಯೋಗಿಗಳೊಂದಿಗೆ ಹರಟೆ, ನಗೆಚಾಟಿಕೆಗಳಿಗೆ ಬಿಡುವೇ ಬಿಡುವು. ಆಹಾರವಾದರೋ ಅತ್ತ ಪಾಶ್ಚಾತ್ಯವೂ ಅಲ್ಲ. ಇತ್ತ ಭಾರತೀಯವೂ ಅಲ್ಲವಾದ್ದರಿಂದ ಅಧಿಕ ಪ್ರಮಾಣದಲ್ಲಿ ಚೆಲ್ಲಲ್ಪಡುತ್ತದೆ.

ವಿದೇಶೀಯರು ನಮ್ಮ ಸನಾತನ ಭೂಮಿಯಲ್ಲಿ ಕಾಲಿಟ್ಟರೆಂದರೆ ಸುಲಿಗೆಗೆ ಪ್ರಾರಂಭ. ದುಬಾರಿ ಹೋಟೇಲಿಗೆ ಕರೆದೊಯ್ದು ಟ್ಯಾಕ್ಸಿ ಡ್ರಾಯವರನು ಹೇಳಿದ್ದೇ ಬಾಡಿಗೆ, ಹೋಟೇಲ್ ಮಾಲಿಕನಿಂದ ಕಮಿಷನ್ ಬೇರೆ ಗಿಟ್ಟಿಸುವ ಅವರು ತಂದ ಡಾಲರ್, ಪೌಂಡು, ಮಾರ್ಕುಗಳಿಗೆ ಬದಲಾಗಿ ಅಪಾರ ಭಾರತೀಯ ರೂಪಾಯಗಳು ಕೈಸೇರುವದರಿಂದ, ದರವಾನ, ಕಾವಲುಗಾರ ಸೇವಕರೆಲ್ಲ ಬಿಚ್ಚುಗೈಯಿಂದ ಭಕ್ಷಿಸು ಲಪಟಾಯಿಸುತ್ತಿರುತ್ತಾರೆ. ಅವರು ತಂಗಿದ ತಾಣದಲ್ಲಿ ನಾಟಕೀಯವಾಗಿ ಅಲಂಕರಿಸಿಕೊಂಡ ಹಾವಾಡಿಗರು, ಕೋತಿ ಕುಣಿಸುವವರ ಕರಡಿ ಸಾಕಿದವರು, ಡೊಂಬರಾಟದವರು, ಭಿಕ್ಷುಕರ ಸಂತೆಯೇ ಸೇರಿದಾಗ ಇದೇ ಭಾರತೀಯ ಸಂಸ್ಕೃತಿ ಎಂದು ವಿದೇಶೀಯರು ಭ್ರಮಿಸಿ ಛಾಯಾಚಿತ್ರ - ಚಲಚ್ಚಿತ್ರಗಳಲ್ಲಿ ಈ ಅಪರೂಪದ ಅವತಾರಗಳನ್ನು ಸೆರೆಹಿಡಿಯುತ್ತಾರೆ. ಭಾರತೀಯ ಅನಾರೋಗ್ಯಕರ ಆಹಾರದ ಬಗ್ಗೆ ಮುನ್ನೆಚ್ಚರಿಕೆ ಪಡೆದಿರುವದರಿಂದ ಸಿಕ್ಕಸಿಕ್ಕಲ್ಲಿ ಹಣ್ಣು ಹಂಪಲುಗಳ ರುಚಿ ಕೂಡಾ ನೋಡದೇ, ಪಂಚತಾರಾ ಹೋಟೇಲುಗಳಲ್ಲಿ ಕೊಡಮಾಡುವ ಅತ್ಯಂತ ದುಬಾರಿ ಊಟ-ತಿಂಡಿಗಳನ್ನೇ ಸ್ವೀಕರಿಸುವರು. ಆದರೂ ನೆಗಡಿ, ಕೆಮ್ಮು, ವಾಂತಿ, ಭೇದಿಗಳು ಬೆನ್ನಟ್ಟಿ ಬಾರದಿರುವದಿಲ್ಲ ಇದರಿಂದ ಡಾಕ್ಟರರಿಗೂ ಜೇಬು ತುಂಬಿಸಿಕೊಳ್ಳಲು ಉತ್ತಮ ಅವಕಾಶ ಸಿಕ್ಕಂತಾಗುತ್ತದೆ. ನೆಗಡಿಯ

ಶುಶ್ರೂಷೆಗಾಗಿ ಖಾಸಗಿ ನರ್ಸಿಂಗ್ ಹೋಮಿನಲ್ಲಿ ಅವರನ್ನು ಭರ್ತಿಮಾಡುವ ಭೂಪತಿಗಳೂ ಇಲ್ಲದಿಲ್ಲ!

ನಮ್ಮ ಸಂಸ್ಕೃತಿ, ಇತಿಹಾಸ, ಧರ್ಮಗ್ರಂಥಗಳ ಬಗ್ಗೆ ಅಜ್ಞಾನ, ಅರೆಜ್ಞಾನ ವಿರುವವರೇ ಪ್ರವಾಸೋದ್ಯಮವನ್ನು ನಿಯಂತ್ರಿಸುತ್ತಿರುವದು ಅತ್ಯಂತ ಶೋಚನೀಯ. ವಾತ ನಿಯಂತ್ರಿತ ವಾಹನಗಳಲ್ಲಿ ಸರಿಯಾಗಿ ಇಂಗ್ಲಿಷ್ ಕೂಡ ಮಾತನಾಡಲು ಬಾರದವರು ಮಾರ್ಗದರ್ಶಕರಾಗಿ, ಪ್ರೇಕ್ಷಣೀಯ ಸ್ಥಳಗಳಿಗೆ ಕರೆದೊಯ್ದು ಅತಿಥಿಗಳಿಗೆ ರುಚಿಸುವಂಥ ರೋಚಕ ಕಥೆಗಳನ್ನು ಹೇಳಲಾರಂಭಿಸುತ್ತಾರೆ. ಅಲ್ಲಿಯ ಚೌಕಿದಾರರು ಛಾಯಾಚಿತ್ರ ನಿಷೇಧಿಸಲಾಗಿದೆ ! ಎಂದು ತಮ್ಮ ಕಮಿಷನ್ ಗಿಟ್ಟಿಸದೇ ಇರುವದಿಲ್ಲ. ಸಂಪಿಗೆ ಹೂವಿನ ಹಾರ ಹಾಕಿ, ಆನೆ ಅಂಬಾರಿಯ ಮೇಲೆ ಕೂಡಿಸಿ, ವಾದ್ಯಮೇಳದೊಂದಿಗೆ ಒಂದು ಸುತ್ತುಹಾಕಿಸಿ ಛಾಯಾಚಿತ್ರ ತೆಗೆಸಿದರೆಂದರೆ ಆ ಸ್ಥಳದ ವೀಕ್ಷಣೆ. ಯಶಸ್ವಿಯಾಗಿ ಮುಗಿದಂತೆ. ನೂರುರೂಪಾಯಿಗಳಲ್ಲಿ ನೋಡಬಹುದಾದುದನ್ನು ಸಾವಿರ ರೂಪಾಯಿಗಳಲ್ಲಿ ಮಾಡಿಸಿದೆವೆಂಬ ಅಭಿಮಾನ ನಮ್ಮವರಿಗೆ. ಹೆಚ್ಚಿನ ಸಮಯ ಭಾರತೀಯ ಕೈಗಾರಿಕೆಯ, ಕಲಾಕುಸುರಿನ ಕೃತಿಗಳನ್ನು ಖರೀದಿಸಲು ಮೀಸಲು, ಪ್ರಯಾಣಿಕರು ಹೋಟೇಲು ಸೇರಿದಾಗ, ವಿಮಾನ ನಿಲ್ದಾಣದಲ್ಲಿ ಕಾಯುವಾಗ ತಮಗೆ ಮಾಡಿದ ಮೋಸ ವಂಚನೆಗಳ ಅರಿವಾಗದೇ ಇರದು. ಅಲೆಮಾರಿ ಹಿಪ್ಪಿಗಳು ಹತ್ತು ರೂಪಾಯಿಗೆ ಕೊಂಡುದನ್ನು ಪ್ರಯಾಣಿಕರಿಗೆ ನೂರು ರೂಪಾಯಿಗೆ ಮಾರಿದರೆ ಇದು ಶುದ್ಧ ಟೋಪಿ ಎಂದು ಬೇರೆ ವಿವರಿಸ ಬೇಕಾಗುತ್ತದೆಯೇ? ನಮ್ಮ ದೇಶಕ್ಕೆ ಭೇಟಿಕೊಟ್ಟು ಬಂದ ಅಮೇರಿಕನ್ನರು "ನಿಮ್ಮವರು ಅಷ್ಟೊಂದು ಕಪಟಿ, ಮೋಸಗಾರರೇಕೆ?" ಎಂದು ಪ್ರಶ್ನಿಸಿದ್ದೂ ಇದೆ. ಎಲ್ಲ ಪಾಶ್ಚಾತ್ಯರೂ ಆಗರ್ಭ ಶ್ರೀಮಂತರಲ್ಲ. ವರ್ಷಗಟ್ಟಳೆ ಉಳಿತಾಯ ಮಾಡಿಯೋ ಸಾಲಪಡೆದೋ ಭಾರತಕ್ಕೆ ಬಂದಿರುತ್ತಾರೆ ಎಂಬ ಮಾತನ್ನು ಮರೆಯುವಂತೆ ಇಲ್ಲ. ಈ ಅನುಭವಿಗಳೇ ಸ್ವದೇಶಕ್ಕೆ ಹಿಂದಿರುಗಿದ ನಂತರ ಕಟುಸತ್ಯವನ್ನು ಇನ್ನಿತರರಿಗೆ ವಿವರಿಸಿ ನಮ್ಮ ಪ್ರವಾಸೋದ್ಯಮಕ್ಕೆ ಬಲವಾದ ಕೊಡಲಿಪೆಟ್ಟು ಹಾಕುತ್ತಾರೆಂದು ಯಾರೂ ತಲೆ ಕೆಡಿಸಿ ಕೊಂಡಂತೆ ಇಲ್ಲ. ಮಧ್ಯಮ ವರ್ಗದವರಿಗೂ ನಿಲುಕುವಂತೆ ನಮ್ಮ ಸವಲತ್ತುಗಳನ್ನು ಏರ್ಪಡಿಸಿದರೆ, ನಮ್ಮ ಸಂಸ್ಕೃತಿ - ಪರಂಪರೆಗಳ ಬಗ್ಗೆ ಅವರಿಗೆ ಹೆಚ್ಚು ಅರಿವಾಗುವದಲ್ಲದೇ, ಹೆಚ್ಚಿನ ಮೊತ್ತದಲ್ಲಿ ವಿದೇಶೀವಿನಿಮಯವನ್ನು ಗಳಿಸಬಹುದು. ಅವರು ಖಂಡಿತವಾಗಿಯೂ ಉತ್ತಮ ಹಾಟೇಲು, ಈಜುಕೊಳ, ಕ್ಯಾಬರೆಗಳನ್ನು ನೋಡುವದಕ್ಕೆ ನಮ್ಮಲ್ಲಿ ಬಂದಿರುವದಿಲ್ಲ. ಅವರಲ್ಲಿ ಸುಲಭವಾಗಿಯೇ ಸಿಗುವದನ್ನು ಇಲ್ಲಿ ಬಂದು ಅನುಭವಿಸುವಂತಾದರೆ ಏನು ಸಾಧಿಸಿದಂತಾಯಿತು?

ದೇಶ-ದರ್ಶನ ಮಾಡಿಸುವ ಅನೇಕಾನೇಕ ಸಾಹುಕಾರಿ ಸಂಸ್ಥೆಗಳು ಅಲ್ಲಲ್ಲಿ ತಲೆಯೆತ್ತಿ ನಿಂತಿವೆ. ಹಿಂದೆ ರೇಲ್ವೆ ಅಧಿಕಾರಿಗಳು ಇವುಗಳತ್ತ ಸಾಕಷ್ಟು, ಲಕ್ಷ ಪೂರೈಸದೇ ಇರುತ್ತಿದ್ದರಿಂದ, ನೀರು ವಿದ್ಯುತ್ ಪೂರೈಕೆ ಸರಿಯಾಗಿ ಇಲ್ಲದೇ ಯಾತ್ರಿಕರು ಪಡಬೇಕಾದ ಬವಣೆ ಹೇಳಿತೀರದು. ಇನ್ನಿತರ ಟ್ರೇನುಗಳಿಗೆ ಪ್ರಾಧಾನ್ಯ ಕೊಡುವದರಿಂದ ಅಲ್ಲಸಲ್ಲದ ಸ್ಟೇಷನ್‌ಗಳಲ್ಲಿ ಈ

ಪ್ರಮಾಣಿಕರು ತಂಗಬೇಕು. ಕೆಲವೆಡೆಯಂತೂ ಸಾರ್ವಜನಿಕರಲ್ಲಿ ಸ್ನಾನ ಶೌಚಾಲಯಗಳ ಪ್ಲಾಟಫಾರ್ಮುಗಳೇ ಶಯನಗ್ರಹ, ಕಟ್ಟಿಕೊಂಡ ಬಂದ ಬುತ್ತಿಯೇ ಮಧ್ಯಾನ್ನಭೋಜನವಾಗುತ್ತಿತ್ತು ಇಂದಿನ ದಿನಗಳಲ್ಲಿ ಈ ಟ್ರೇನುಗಳ ಸ್ಥಾನವನ್ನು ಬಸ್ಸುಗಳು ಆಕ್ರಮಿಸಿವೆ. ಇವರ ದಕ್ಷಿಣ ಮತ್ತು ಉತ್ತರ ಭಾರತ ಪ್ರವಾಸಗಳು ಅತ್ಯಂತ ಜನಪ್ರಿಯ. ಪಡೆದ ಹಣದಲ್ಲಿಯೇ ಸಕಲ ಸೌಲತ್ತುಗಳನ್ನು ಕೊಡಮಾಡುತ್ತೇವೆಂದು ಘಂಟಾ ಘೋಷವಾಗಿ ಸಾರಿದರೂ ಪ್ರವಾಸಿಗರಿಗೆ ಮಾತ್ರ ಅವು ಕನಸಿನಮಾತು. ನಾಶ್ತಾ ಊಟಕ್ಕೆ ಪ್ಲೇಟು, ಕಾಫಿಗೆ ಲೋಟ, ವಿಶ್ರಾಂತಿಗೆ ಹಾಸಿಗೆ-ದಿಂಬುಗಳನ್ನು ಹೋದಲ್ಲೆಲ್ಲ ಹೊತ್ತುಕೊಂಡು ಹೋಗುವ ಹಮಾಲಿ ಕೆಲಸ ತಾವೇ ನಿರ್ವಹಿಸಬೇಕು. ಕಾಫಿ-ತಿಂಡಿ ಭೋಜನ ಸಮಯದಲ್ಲಿ ನಿರಾಶ್ರಿತರಂತೆ ಬಸ್-ರೈಲ್ವೆ ನಿಲ್ದಾಣದಲ್ಲಿಯೋ, ದೇವಾಲಯಗಳ ಹೊರಾಂಗಣದಲ್ಲಿಯೋ ಸಾಲಾಗಿ ಕುಳಿತು ಸಾಮೂಹಿಕವಾಗಿ ಸಿದ್ಧಪಡಿಸಿದ ವ್ಯಂಜನಗಳನ್ನೇ ಸ್ವೀಕರಿಸಬೇಕು. ಹೊಂಡ, ಕೆರೆ ನದಿಗಳನ್ನೆ ಸ್ನಾನಕ್ಕೆ ಬಳಸಬೇಕು. ದೇವಸ್ಥಾನದ ಪೌಳಿ, ಧರ್ಮಶಾಲೆಗಳೇ ನಿದ್ರಾಸ್ಥಾನ. ಇಷ್ಟೊಂದು ಅವಮಾನ ಸಾಲದೆಂಬಂತೆ, ಪ್ರವೇಶಧನ, ಪೂಜಾಖರ್ಚು, ಭಕ್ಷಿಸು, ಎಂದು ಕಾಸು ಕಿತ್ತು ಕೊಳ್ಳುತ್ತಲೇ ಇರುತ್ತಾರೆ. ಹಿಂದಿರುಗಿದವರ ಕಾಲ ಊದಿಕೊಳ್ಳುವದು, ಬೊಕ್ಕೆ ಏಳುವದು, ಪಚನದ ತೊಂದರೆಗಳು, ತಲೆಸುತ್ತುವದು ತೀರಸಾಮಾನ್ಯ. ದಣಿವಿನಿಂದ ಮೃತಪಟ್ಟವರು ಇಲ್ಲದಿಲ್ಲ. ಆದರೆ ಇದಕ್ಕೆಲ್ಲ ಕಾರಣರಾದ ಸಾರಿಗೆ ಕಂಪನಿಯವರ ಮೇಲೆ ಮೊಕದ್ದಮೆ ಹೂಡುವ ಪದ್ಧತಿ ನಮ್ಮಲ್ಲಿಲ್ಲ.

ಹಣ ಸೂರೆ ಮಾಡುವವರೇ ಪ್ರವಾಸಿಗಳು! ಎಂದು ಕೇಂದ್ರ ರಾಜ್ಯಸರಕಾರಗಳು ನಂಬಿದಂತಿದೆ. ಅಂತೆಯೇ ಶೇಖರಿಸಿಟ್ಟ ಹಣವನ್ನು ಹೇಗೆ ವ್ಯಯ ಮಾಡುವದು? ಎಂದು ಅರಿಯದ ಆಗರ್ಭ ಶ್ರೀಮಂತರಿಗಾಗಿಯೇ ಗತಕಾಲದಲ್ಲಿ ವೈಭವದಿಂದ ಮೆರೆದ ಮಹಾರಾಜರಿಗೆ ಮೀಸಲಾಗಿಬಹುದಾದ ರೇಲ್ವೆಯನ್ನು ಭಾರತ ಸರಕಾರ ಓಡಿಸುತ್ತದೆ. ವಾತ ನಿಯಂತ್ರಿತ ವಾಹನಗಳನ್ನು ಎಲ್ಲ ಸರಕಾರಗಳೂ ತಮ್ಮವನ್ನಾಗಿ ಮಾಡಿಕೊಂಡಿವೆ. ವಸತಿ -ಊಟ-ಉಪ ಚಾರಗಳನ್ನು ತಾವೇ ನೋಡಿಕೊಳ್ಳುತ್ತೇವೆಂದು ಅವರ ಜಾಹೀರಾತುಗಳು ಸಾರಿದರೂ, ಇವೆಲ್ಲ ಬರಿ ಬೊಗಳೆ ಎಂದು ಅವರೊಂದಿಗೆ ಪ್ರವಾಸಮಾಡಿದಾಗಲೇ ಅರಿವಾಗುವದು. ಪ್ರವಾಸಿಖಾತೆಗಳೂ ಖೋತಾದಲ್ಲಿ ನಡೆಯುತ್ತವೆ ಎಂದು ಬೇರೆ ಹೇಳಬೇಕೇ? ಕಾಶ್ಮೀರ, ಭೂಲೋಕದ ಸ್ವರ್ಗ ಎಂದು ಬಣ್ಣಿಸಿದ ದಿನಗಳಲ್ಲಿ ಅಲ್ಲಿ ಹೋದವರ ಬವಣೆ ಹೇಳಿತೀರದು, ಕಲುಷಿತವಾದ ದಲ್ ಸರೋವರದ ಮೇಲೆ ತೇಲುವ ನಾವೆ-ಗೃಹದಲ್ಲಿ ಪ್ರತಿದಿನದ ಖರ್ಚಿನ ಅಂಕಿ-ಸಂಖ್ಯೆಗಳನ್ನು ಕೇಳಿಯೇ ಹೃದಯದ ಬಡಿತ ನಿಂತಂತೆ ಆಗುತ್ತದೆ. ಶ್ರೀನಗರದಲ್ಲಿ ಸರಕಾರಿ ಬಡ್‌ಶಾಹಾಟೇಲಿನಲ್ಲಿ ಜನ ಸಾಮಾನ್ಯರು ಒಂದು ಕಪ್ಪು ಚಹಾ ಕುಡಿಯದಷ್ಟು ದುಬಾರಿ. ಅಲ್ಲಿ ಮಧ್ಯಮವರ್ಗದವರಿಗೆ ಎಟುಕುವ ಬೆಲೆಯಲ್ಲಿ ತಿಂಡಿ-ತಿನಿಸುಗಳೇ ಸಿಗುತ್ತಿಲ್ಲವೆಂದರೆ ಯಾರೂ ವಿಸ್ಮಯ ಪಡಬೇಕಾಗಿಲ್ಲ. ಪಹಲಗಾಂವ್, ಗುಲ್‌ಮರ್ಗ, ಯುಸ್-ವರ್ಗಗಳಂತಹ ತಾಣಗಳನ್ನು ನೋಡ ಬಯಸುವವರು ಕೈಕಾಲು, ಕಾಸುಗಳಿಂದ ಗಟ್ಟಿ ಮುಟ್ಟಾಗಿರುವದಲ್ಲದೇ ಊಟ-ತಿಂಡಿಗಳ ವ್ಯವಸ್ಥೆ ಮುಂದಾಗಿ ಕಾಯ್ದಿರಿಸಬೇಕು. ನೆರೆಯ

ಹಿಮಾಚಲ ಪ್ರದೇಶದ ಪರಿಸ್ಥಿತಿ ಇದಕ್ಕೂ ಭಿನ್ನವಾಗಿಲ್ಲ. ರಾಜಧಾನಿಯಾದ ಸಿಮ್ಲಾನಗರ, ಪ್ರವಾಸಿಗರಿಂದಲೇ ಪೋಷಿತವಾದದ್ದು. ಜೇಬುಖಾಲಿಯಾದರೂ ಸ್ವಸ್ಥಾನಕ್ಕೆ ಹಿಂದಿರುಗುವಂತಿಲ್ಲ. ಯಾಕೆ ಗೊತ್ತೆ? ಅಲ್ಲಿಯ ಪುಟಾಣಿ ರೇಲು, ಖಟಾರು ಬಸ್ಸು ಸಾರಿಗೆಗಳನ್ನು ಒಂದು ವಾರಕ್ಕಿಂತ ಮೊದಲೇ ಕಾದಿರಿಸಿಕೊಂಡಿರುತ್ತಾರೆ. ಅಂತೆಯೇ ಪರಿಚಿತರಿಂದ ಹಣ ತರಿಸಿಕೊಳ್ಳುವ ತನಕ ಕಡ್ಡಾಯದ ವಿಶ್ರಾಂತಿ ಪಡೆಯಲೇಬೇಕಾಗುತ್ತದೆ!

ರಾಜಸ್ಥಾನ್, ಅದೆಷ್ಟೋ ವಾಸಿ. ಜೈಪುರ್, ಉದಯಪುರ್, ಅಬು, ಚಿತೋಡಗಡಗಳನ್ನು ನೋಡಲು ಹೆಚ್ಚಿನ ಸವಲತ್ತುಗಳು ಇಲ್ಲದಿದ್ದರೂ ಸುಲಿಗೆ ಅಷ್ಟೊಂದಿಲ್ಲ. ರಜಪೂತರ ಪರಂಪರಾಗತ ಔದಾರ್ಯ, ಸಹಾಯತಾ ಭಾವಗಳು ಉಳಿದುಕೊಂಡಿವೆ. ದಿಲ್ಲಿಯಲ್ಲಿ ಮೋಸಹೋಗದೇ ಪ್ರವಾಸಿಗರು ಹಿಂದಿರುಗಿದರೆ ಅವರ ವ್ಯವಹಾರಕುಶಲತೆಯನ್ನು ಗೌರವಿಸಲೇಬೇಕು ಉತ್ತರ ಪ್ರದೇಶದ ಯಾತ್ರಾ ಸ್ಥಳಗಳಿಗೆ ಪುಣ್ಯಗಳಿಸುವದಕ್ಕಾಗಿ ಹೋಗಬೇಕೇ ಹೊರತು ವಿಹಾರಕ್ಕಾಗಿ ಹೋಗಲೇ ಬಾರದು. ಅಲ್ಲಿಯ 'ಪಂಡಾ'ಜನ ರಕ್ತ ಹೀರಿ ಬಿಡುತ್ತಾರೆ. ಬ್ರಿಟಿಶರ ವಿಶ್ರಾಂತಿ ಧಾಮ ಮಸೂರಿ, ಇಂದು ಸಿರಿವಂತ ಕೊಳಚೆ ಪ್ರದೇಶವಾಗಿ ಬಿಟ್ಟಿದೆ ಎಂದರೆ ನಂಬುವದು ಕಷ್ಟ. ಶಿಲೆಯ ಅಗೆತ, ಅರಣ್ಯದ ಕಡಿತಗಳಿಂದ ವನರಾಜಿ ಇಂದು ಕಾಂಕ್ರಿಟ್ ಮರುಭೂಮಿಯಾಗಿದೆ. ಬಿಹಾರಿಗಳು, ಅನ್ನ ಆಚ್ಛಾದನೆಗಳನ್ನು ಹುಡುಕಿಕೊಂಡು ಮುಂಬೈ, ಕಲ್ಕತ್ತಾ, ದಿಲ್ಲಿಗಳಿಗೆ ಗುಳೆ ಹೋಗಿದ್ದರಿಂದ ಕಾರ್ಮಿಕರ ಅಭಾವದಿಂದಾಗಿ ಪ್ರವಾಸಿಗಳಿಗೆ ಚಂಡಿಗಡಗಳಿಗೆ ಗುಳೆ ಹೋಗಿದ್ದರಿಂದ, ಪ್ರವಾಸಿಗಳಿಗೆ ಹೆಚ್ಚಿನ ಸವಲತ್ತುಗಳನ್ನು ಕಲ್ಪಿಸಲೇ ಇಲ್ಲ. ಆ ರಾಜ್ಯಕ್ಕೆ ಹೋಗಲು ಹಂಬಲಿಸುವವರು. ಕಡಲೆ ಹಿಟ್ಟು, ಮೆಣಸಿನಕಾಯಿಗಳ ಊಟ ಜೀರ್ಣಿಸಲು ಮೊದಲು ಕಲಿಯಬೇಕು. ಪಶ್ಚಿಮ ಬಂಗಾಲದ ಪ್ರವಾಸಿ ಜಾಹೀರಾತು ಓದಿ, ತಕ್ಷಣ ಅಲ್ಲಿಗೆ ಧಾವಿಸಿ ಬಿಡೋಣವೆಂದು ಅನಿಸುವದು ಸ್ವಾಭಾವಿಕ. ಸುಂದರಬನದಲ್ಲಿ ಗರ್ಜಿಸುವ ಹುಲಿಗಳ ದರ್ಶನ, ಶ್ರೀರಾಮಕೃಷ್ಣ ಪರಮ ಹಂಸರ ದಕ್ಷಿಣೇಶ್ವರ, ವಿವೇಕಾನಂದರ ಬೇಲೂರಮಠ, ವಿಷ್ಣುಪುರ, ಫರಕ್ಕಾ, ದಾರ್ಜಿಲಿಂಗಗಳಿಗೆ ಭೇಟಿಕೊಡಬೇಕು ಅನಿಸುವದು ತೀರ ಸಹಜ. ಆದರೆ ಅಲ್ಲಿಯ ಜನಜಂಗುಳಿ, ಎಲ್ಲೆಡೆ ತಾಂಡವವಾಡುವ ಹೊಲಸು, ಕೊಳಚೆಗಳನ್ನು ನೋಡಿದಾಕ್ಷಣ ಹಿಂದಿರುಗಿ ಹೋಗಿ ಬಿಡೋಣ ಅನಿಸಿಬಿಡುತ್ತದೆ.

ಮಧ್ಯಪ್ರದೇಶದ ವಿಶ್ವವಿಖ್ಯಾತ ಖಜುರಾಹೋ ನೋಡುವ ಹಂಬಲದಿಂದ ಹೋದರೆ, ಅಲ್ಲಿರುವ ಸುರಸುಂದರಿಯರು (ಶಿಲಾಬಾಲಿಕೆಯರು) ವಸತಿ, ಊಟ, ಉಪಚಾರಗಳೆಲ್ಲ ಶ್ರೀಮಂತರಿಗೇ ಮೀಸಲು ಅನಿಸಿ, ಹತ್ತಿರದ ಊರಾದ ಸಾತ್ನಾದಲ್ಲಿ ತಂಗಬೇಕಾಯಿತು. ರಾಷ್ಟ್ರೀಯ ಉದ್ಯಾನ ಕಾನ್ಹಾವನ್ನು ನೋಡಲು ಹೋಗೋಣವೆಂದರೆ, ಅಲ್ಲಿ ತಂಗುವ ಖರ್ಚು, ಆನೆಯ ಸವಾರಿ, ಛಾಯಾಗ್ರಹಣದ ಫೀಗಳ ಮೊಬಲಗು ಕೇಳಿಯೇ ಆ ಸಾಹಸದಿಂದ ದೂರ ಇರಬೇಕಾಯಿತು. ಅದೇ ಬಹುಸಂಖ್ಯಾತ ಪ್ರವಾಸಿಗಳನ್ನು ಆಕರ್ಷಿಸುವ ಆದಿವಾಸಿಗಳು ಬೀಡು ಬಿಟ್ಟ ತಾಣಗಳಿಗೆ ಹೆಚ್ಚಿನ ಖರ್ಚು ಇಲ್ಲದೇ ವಿಶ್ರಾಂತಿ ಪಡೆದು ಬರಬಹುದು. ದಾನಿಗಳು ಅಲ್ಲಲ್ಲಿ ಧರ್ಮಶಾಲೆಗಳನ್ನು ಕಟ್ಟಿದ್ದಾರೆ. ದಿನಕ್ಕೆ ಒಂದೆರಡು ರೂಪಾಯಿ ಬಾಡಿಗೆ ಕೊಟ್ಟು

ಹಾಯಾಗಿ ಇರಬಹುದು. ಮುಂಬಯಿ ಮಹಾನಗರ, ಕಲಕತ್ತಾದೊಂದಿಗೆ ಸ್ಪರ್ಧಿಸಲಾರಂಭಿಸಿದೆ. ಎಲ್ಲಿ ಹೋದರೂ ದುರ್ಗಂಧ. ಕೊಳಚೆ, ಜನಜಂಗುಳಿ. ಅಜಂತಾ, ಎಲ್ಲೋರಾಗಳಲ್ಲಿಯೂ ಊಟ-ತಿಂಡಿಗಳ ಸರಿಯಾದ ವ್ಯವಸ್ಥೆ ಇಲ್ಲದಿರುವದು ಶೋಚನೀಯ. ಚೌಕಿದಾರನೇ ಮಾಡಿಕೊಡುವ ಒಂದು ಕಪ್ ಚಹ ಅಮೃತ ಸಮಾನ ಇರದು. ನೀರಿಲ್ಲದ ಮದ್ರಾಸ್ ಕೂಡ ನಾರುತ್ತಿರುತ್ತದೆ. ಉದಕಮಂಡಲದ ಸುತ್ತ ಮುತ್ತ ಹರಡಿಕೊಂಡ ನೀಲಗಿರಿ ಪರ್ವತಾವಳಿಗಳು ಬೊಕ್ಕತಲೆ ಪಡೆಯಲಾರಂಭಿಸಿವೆ! ಊರ ಮಧ್ಯದಲ್ಲಿರುವ ಹೂದೋಟದ ಹಿಂಭಾಗದಲ್ಲಿ ಪ್ರವಾಸಿಗರಿಗಾಗಿಯೇ ತೋಡರ ತಂಡ ಬೀಡು ಬಿಟ್ಟಿದೆ. ಅವರ ಏಕ ಮಾತ್ರ ಉದ್ಯೋಗವೆಂದರೆ ಪ್ರವಾಸಿಗರಿಂದ ಹಣಕಿತ್ತುಕೊಳ್ಳುವದು. ಛಾಯಾಚಿತ್ರ ತೆಗೆಯುವವರು, ಚಲನಚಿತ್ರಕ್ಕಾಗಿ ವಿನಂತಿಸುವವರು ಬಂದರಂತೂ ಅವರಿಗೆ ಹೆಚ್ಚಿನ ಹಿಗ್ಗು. ಮಧ್ಯಪ್ರದೇಶದ ಬಸ್ತರ ಜಿಲ್ಲೆಯ ಘುರೇವಾ ಬಂಗಾಲ ಹಳ್ಳಿಯಲ್ಲಿ, ಪ್ರವಾಸಿಕರಿಗಾಗಿ ಮಾರಿಯಾ ಆದಿವಾಸಿಗಳನ್ನು ಸ್ಥಾಪಿಸಲಾಗಿದೆ. ಅಬುಜಮಾರದಲ್ಲಿ ಶತಮಾನಗಳಿಂದ ವಾಸಿಸುವ ನಾರಿಯರಿಗೂ ಇವರಿಗೂ ಯಾವ ಸಾಮ್ಯವೂ ಇಲ್ಲ. ಅಮೇರಿಕೆಯ ಹಲವು ರಾಜ್ಯಗಳಲ್ಲಿ ಪ್ರವಾಸಿಗರಿಗಾಗಿ ರೆಡ್ ಇಂಡಿಯನ್ನರು ತಮ್ಮ ಪೂರ್ವಜರ ವೇಷಭೂಷಣಗಳನ್ನು ಧರಿಸಿ ನೃತ್ಯಪ್ರದರ್ಶನಮಾಡುತ್ತಾರೆ. ಅತಿಥಿಗಳೊಂದಿಗೆ ಛಾಯಾಚಿತ್ರ ತೆಗೆಸಿಕೊಳ್ಳುತ್ತಾರೆ. ಆದರೆ ಇದಕ್ಕಾಗಿ ಒಂದು ಬಿಡಿಗಾಸನ್ನೂ ಅವರು ಸ್ವೀಕರಿಸದೇ ಇರುವದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ನಮ್ಮ ಕರ್ನಾಟಕದ ಪ್ರವಾಸೋದ್ಯಮದ ಸ್ಥಿತಿಗತಿಗಳು ಇನ್ನಿತರ ರಾಜ್ಯದವುಗಳಿಗಿಂತ ಭಿನ್ನವಾಗಿಲ್ಲ. ದೂರದ ಜೈಪುರದಿಂದ ಬಂದ ಡಾ। ಭಟನಾಗರ ಎಂಬ ಸ್ನೇಹಿತನಿಗೆ ಶ್ರವಣ ಬೆಳ್ಗೊಳ, ಬೇಲೂರು ಹಳೇಬೀಡುಗಳನ್ನು ನೋಡಲು ಪ್ರವಾಸಿಗರಿಗಾಗಿಯೇ ಮೀಸಲಿದ್ದ ಸುವಿಹಾರಿ ಬಸ್ ಚೆನ್ನಾಗಿದ್ದು, ಮುಂಜಾನೆ ಕರೆದೊಯ್ದು ರಾತ್ರೆ ಹಿಂದಿಕ್ಕೆ ಕರೆತರುತ್ತಾರೆಂದು ಆ ವ್ಯವಸ್ಥೆ ಮಾಡಿದೆ. ಆತ ಹಿಂದಿರುಗಿ ಬಂದ ನಂತರ ಕೊಟ್ಟ ಪ್ರವಾಸ ವರದಿ ಹೀಗಿತ್ತು. 'ಮಾರ್ಗದರ್ಶಿ ಸಕಾಲಕ್ಕೆ ಬಾರದ್ದರಿಂದ ಬಸ್ಸು ಮುಕ್ಕಾಲು ಗಂಟೆ ತಡವಾಗಿ ಹೊರಟಿತು. ಅವನ ಕಾಫಿ -ತಿಂಡಿಗಾಗಿ ರಸ್ತೆಯಲ್ಲಿ ಹದಿನೈದು ನಿಮಿಷ ನಿಲ್ಲಿಸಲಾಯಿತು. ಬಸ್ ಏದುತ್ತ ತೇಕುತ್ತ ಮುಂದೆ ಓಡಲಾರಂಭಿಸಿದಾಗ ಟಾಯರ್ 'ಠುಸ್' ಎಂದಿತು. ಅರ್ಧಗಂಟೆ ತರುವಾಯ ಅಂತೂ ಹೊರಟು ಯಾರಿಂದ ತಡವಾಯಿತು? ಎಂಬುದರ ಬಗ್ಗೆ ಡ್ರಾಯವರ ಕಂಡಕ್ಟರ್ ಮಾರ್ಗದರ್ಶಿ ಅವರವರಲ್ಲಿಯೇ ಭಿನ್ನಾಭಿಪ್ರಾಯ ತೋರಿದ್ದರಿಂದ ಎಲ್ಲಿ ಅಪಘಾತ ಸಂಭವಿಸುವದೋ! ಎಂದು ಎಲ್ಲ ಪ್ರಯಾಣಿಕರಿಗೂ ಗಾಬರಿ. ಗೋಮಟೇಶ್ವರನ ಬೆಟ್ಟವೇರಲು ಕೊಟ್ಟಿದ್ದು ಕೇವಲ ಅರ್ಧಗಂಟೆ. ಇನ್ನಿತರ ಸ್ಥಳಗಳನ್ನು ನೋಡಲು ಸಮಯದ ಅಭಾವ ಎಂದರಂತೆ. ಇಷ್ಟಾಗಿ ತನಗೆ ಪುಕ್ಕಟೆ ಭೋಜನ ಸಿಕ್ಕುವಲ್ಲಿ ಡ್ರಾಯವರ ಒಂದುಗಂಟೆ ಬಸ್ಸನ್ನು ನಿಲ್ಲಿಸಿದನಂತೆ ಬೇಲೂರಿನ ಶಿಲಾಬಾಲಿಕೆಯ ಸೀರೆ ಕೊಡಹುವ ಶಿಲ್ಪ ತೋರಿಸುತ್ತ ಹೊಯ್ಸಳರ ಕಾಲದಲ್ಲಿಯೂ ಕ್ಯಾಬರೆ, ಸ್ಟ್ರಿಪ್‌ಟೀಜ್ ಕಲಾಕಾರ್ತಿಯರು ಇದ್ದರು ಎಂದು ಸಾಕ್ಷಿ ಇಲ್ಲಿದೆ' ಎಂದನಂತೆ, ಇಷ್ಟಾಗಿ ತನ್ನ ಸರ್ವಿಸ್‌ದ ಬಕ್ಷಿಸ್ ಎಂದು ತಲಾ ಹತ್ತು ರೂಪಾಯಿ ಕಿತ್ತು

ಕೊಳ್ಳಲು ಮಾರ್ಗದರ್ಶಿ ಮರೆಯಲಿಲ್ಲವಂತೆ. ನೌಕರನಾದ ಸರಕಾರಿ ಸೆಂಟನೊಬ್ಬನಿಗೆ ಖಾಸಗಿ ಬಸ್‌ದಲ್ಲಿ ಶ್ರೀರಂಗಪಟ್ಟಣ ಮೈಸೂರು ನೋಡಲೆಂದು ಟಿಕೀಟು ಕಾದಿರಿಸಲಾಯಿತು. ಸುವಿಹಾರಿ ವಿಡಿಯೋ ಕೋಚ್‌ಗೆ ಹತ್ತುರೂಪಾಯಿ ಹೆಚ್ಚು ಕಿತ್ತುಕೊಂಡರು. ಮುಂಜಾನೆ ಆರುಗಂಟೆಗೇ ಬಸ್ ಹೊರಡುವದು ಎಂದು ಒತ್ತಿಹೇಳಿದ್ದರಿಂದ ಅತಿಥಿಯನ್ನು ನಾಲ್ಕು ಗಂಟೇಗೇ ಎಬ್ಬಿಸಿ, ನಾಶ್ತಾಮಾಡಿಸಿ ಆಟೋಹುಡುಕಿ ಕೂರಿಸಿ ಬಸ್ಸು ಹೊರಡುವ ಸ್ಥಳಕ್ಕೆ ಕಳಿಸಿದರೆ ಅಲ್ಲಿ ಒಂದು ನರಹುಳವೂ ಇದ್ದಿರಲಿಲ್ಲ. ಅಕ್ಕ ಪಕ್ಕದಲ್ಲಿ ವಿಚಾರಿಸಿದಾಗ, 'ಆಕಂಪನಿಯ ಇರುವ ಎರಡೇ ಬಸ್ಸುಗಳನ್ನು ಇಡೀ ದಿನ ಓಡಿಸುತ್ತಿರುತ್ತಾರೆ. ಬೆಳಗಾಂವಿಯಿಂದ ಹಿಂದಿರುಗಿದ ಬಸ್ಸು ಮೈಸೂರಿಗೆ ಹೋಗಲಿದೆ' ಎಂದು ವಿವರಣೆ ದೊರೆಯಿತು. ನಂತರ ಬಂದ ಬಸ್ ಎಂಟೂವರೆಗೆ ಮೊದಲು ಹೊರಡಲೇ ಇಲ್ಲ!

ಪ್ರವಾಸಿಮಂದಿರ, ಸರ್ಕಿಟ್ ಹೌಸ್‌ಗಳಂತಹ ಸೌಲಭ್ಯವನ್ನು ಸರಕಾರಿ ಆಫೀಸರ್, ರಾಜಕಾರಣಿ, ರಾಷ್ಟ್ರೀಯ 'ನೇತಾರರು' ಸದಾಕಾಲ ತಮ್ಮವನ್ನಾಗಿ ಮಾಡಿಕೊಳ್ಳುವದರಿಂದ ಇನ್ನಿತರಿಗೆ ಅವು ಲಭ್ಯವಿರುವದೇ ಇಲ್ಲ. ಇದರಂತೆ ಪ್ರವಾಸಿತಾಣಗಳಲ್ಲಿಯೂ ಅವರದೇ ಮೇಲುಗೈ, ಇವುಗಳನ್ನೆಲ್ಲ ಅರಣ್ಯ, ಲೋಕೋಪಯೋಗಿ, ಪ್ರವಾಸ, ಕಂದಾಯ ಖಾತೆಗಳ ನಿಯಂತ್ರಣಕ್ಕೆ ಒಳಪಡಿಸಿದ್ದು ಅವುಗಳಲ್ಲಿ ತಂಗುವ ಅನುಮತಿಗಾಗಿ ನೂರಾರು ಕಿ.ಮಿ. ದೂರದ ಕಚೇರಿಗಳೊಂದಿಗೆ ಸಂಪರ್ಕ ಬೆಳೆಸಬೇಕು. ಇವೆಲ್ಲ ತೊಂದರೆ ವಹಿಸಿ, ಬಂಡಿಪುರ, ನಂದಿಬೆಟ್ಟ, ಕೆಮ್ಮಣ್ಣುಗುಂಡಿ, ಜೋಗ್ ಫಾಲ್ಸ್‌ಗಳಿಗೆ ಸಹಕುಟುಂಬದೊಡನೆ ಹೋಗುವ ಸಾಹಸ ಮಾಡಿದರೂ ಹೆಚ್ಚಿನ ವರ್ಚಸ್ಸು ಇರುವವರು ಬಂದಾಕ್ಷಣ - ನಡುರಾತ್ರೆಯಲ್ಲಿ ಕೂಡ, ಕೂಠಡಿಯನ್ನು ಕೊಡಲೇ ಖಾಲಿ ಮಾಡಬೇಕು!ಪ್ರಧಾನಿ, ರಾಷ್ಟ್ರಪತಿ ಬರುವವರಿದ್ದರಂತೂ ಸುರಕ್ಷತೆಯ ನೆಪದಲ್ಲಿ ಒಂದುವಾರ ಮೊದಲೇ ಯಾರೂ ಅಲ್ಲಿ ಸುಳಿಯುವಂತೆಯೇ ಇಲ್ಲ. ಒಬ್ಬ ರಾಷ್ಟ್ರಪತಿಗಳು ಕಾಡಾನೆ ನೋಡುವ ಅಭಿಲಾಷೆ ವ್ಯಕ್ತಪಡಿಸಿದ್ದರಿಂದ ಜೀಪಿನಿಂದಲೇ ಅವುಗಳ ಹಿಂಡು ಕಾಣುವಂತಾಗಬೇಕು, ಎಂದು ಮೂರು ಲಕ್ಷರೂಪಾಯಿಯ ಕಬ್ಬನ್ನು ಕತ್ತರಿಸಿ ಅವುಗಳಿಗೆ ಲಂಚ ಕೊಟ್ಟು ಹಿಂಡು ಅಲ್ಲಿಯೆ ಇರುವ ವ್ಯವಸ್ಥೆ ಮಾಡಲಾಯಿತು. ಇನ್ನೊಬ್ಬ ರಾಷ್ಟ್ರದ ಮುಖಂಡರಿಗೆ ಜೋಗ್ ಜಲಪಾತ ನಡುವ ತವಕವಾದ್ದರಿಂದ ಕ್ರಶ್ ಗೇಟುಗಳಿಂದ ನೀರು ಬಿಟ್ಟು, ಒಂದು ಲಕ್ಷರೂಪಾಯಿಯ ಮದ್ದುಗುಂಡು ಹಾರಿಸಿದರು. ಆ ಹೊತ್ತಿನಲ್ಲಿ ಈ ಸೌಂದರ್ಯವನ್ನು ಇನ್ನಿತರ ಪ್ರವಾಸಿಗರಿಗೆ ಸವಿಯಲು ಕೊಡದೇ ಇದ್ದದ್ದೇ ಇದರ ವೈಶಿಷ್ಟ!

ಜಾಹೀರಾತುಗಳಿಗೆ ಮರುಳಾಗಿ ಪಶು - ಪಕ್ಷಿ ವೀಕ್ಷಣೆಗಾಗಿ ದೇಶ-ವಿದೇಶಗಳಿಂದ ಪ್ರವಾಸಿಗರು ಬಂಡಿಪುರಕ್ಕೆ ಧಾವಿಸಿ ಬರುತ್ತಾರೆ. ಗಂಟುಮೂಟೆಗಳೊಂದಿಗೆ ಇಳಿಯುತ್ತಿದ್ದಂತೆ, ವಸತಿಗಾಗಿ ಮೈಸೂರು ಆಫೀಸಿನೊಂದಿಗೆ ಸಂಪರ್ಕಿಸ ಬೇಕು! ಎಂದು ಗಂಡುದನಿ ಕಿರುಚುತ್ತದೆ. ಇಷ್ಟುದೂರ ಬಂದದ್ದಕ್ಕೆ ಹುಲಿಯ ದರ್ಶನ ಮಾಡೋಣವೆಂದು ಹಣಕೊಟ್ಟು ಆನೆ ಸವಾರಿಯಲ್ಲಿ ಕಾಡಿಗೆ ಹೋದರೆ ಕಾಣುವದು ಜಿಂಕೆ ಮತ್ತು ಕೋತಿಗಳು ಮಾತ್ರ. ಅದೃಷ್ಟ ಚೆನ್ನಾಗಿದ್ದರೆ ದೂರದಲ್ಲಿ ನವಿಲೊಂದು ಗೋಚರಿಸಬಹುದು. ಹಸಿದ ಹೊಟ್ಟೆ ಮಾತ್ರ ತಂಪಾಗಿಸೋಣವೆಂದರೆ

ಮೊದಲೆ ಆರ್ಡರ್ ಕೊಟ್ಟರೆ ಮಾತ್ರ ಭೋಜನ ಲಭ್ಯವೆಂದು ಕಡ್ಡಿಮುರಿದಂತೆ ಜವಾಬು ಸಿಗುತ್ತದೆ. ಜೋಲುಮುಖ ಹಾಕಿಕೊಂಡು ಮೈಸೂರಿಗೆ ಹಿಂದಿರುಗಬೇಕಾಗುತ್ತದೆ. ರಂಗನ ತಿಟ್ಟು ಪಕ್ಷಿಧಾಮಕ್ಕೆ ಹೋಗೋಣವೆಂದರೆ, ನೇರ ಅಲ್ಲಿಗೆ ಯಾವ ವಾಹನವೂ ತಲುಪುವದಿಲ್ಲ. ಹರವಾರಿ ದೂರದ ಕತ್ರಿಯಲ್ಲಿ ಸರಕಾರಿ ಬಸ್ಸುಗಳನ್ನು ನಿಲ್ಲಿಸುವದಿಲ್ಲ ಕೂಡ. ಅಂತೆಯೇ ಕಾಲಿಡಲೂ ಅವಕಾಶವಿಲ್ಲದ ಖಾಸಗಿ ಗ್ರಾಮಾಂತರ ಬಸ್ಸಿಗೆ ಶರಣು ಹೋಗಬೇಕು. ಕಾಲುನಡಿಗೆಯಲ್ಲಿ ಹೋಗಿ, ಪ್ರವೇಶ ಶುಲ್ಕ ಕೊಟ್ಟು ವಿಹಾರನಾವೆಯ ಟಿಕೇಟುಕೊಂಡರೆ, ಹದಿನೈದು ನಿಮಿಷಗಳಲ್ಲಿ ನೌಕಾ ವಿಹಾರ ಮುಗಿದೇ ಹೋಗುತ್ತದೆ. ಪಕ್ಷಿವೀಕ್ಷಣೆಗಾಗಿ ದೂರದರ್ಶಕ ಕೂಡಾ ಲಭ್ಯವಿಲ್ಲ. ಮದ್ದೂರಿನಿಂದ ಕೊಕ್ಕರೆ ಬೆಳ್ಳೂರಿಗೆ ಹೋಗಲು ನಿಯತಕಾಲಕ್ಕೆ ಬಾರದ ಖಾಸಗಿ ವಾಹನಗಳಿಗೇ ಶರಣು ಹೋಗಬೆಕು. ಅಲ್ಲಿಯ ಬಣ್ಣದ ಕೊಕ್ಕರೆಗಳು ಕಣ್ಣಿಗೆ ಹಬ್ಬ ನೀಡಿದರೂ, ಹಸಿದ ಹೊಟ್ಟೆಗೆ ಏನೂ ಸಿಗುವದಿಲ್ಲ. ಬನ್ನೇರು ಘಟ್ಟದಲ್ಲಿ ಸಿಂಹ-ದರ್ಶನ ವಿಲ್ಲದೇ ಹಿಂದಿರುಗುವದು ಖಂಡಿತ.

ಪ್ರವಾಸಿ ಸವಲತ್ತು ಕೂಡುವ ನೆಪದಲ್ಲಿ ಖಾಸಗಿ ಕಂಪನಿ, ಜಂಗಲ್, ಹೌಸ್‌ಗಳಿಗೆ ಲಾಜ್, ರಿಸಾರ್ಟ್ಸ್, ತಂಗುದಾಣಗಳಿಗೆ ವ್ಯವಸ್ಥೆಯನ್ನು ಸರಕಾರ ಹೇಗೆ ಕೂಡಮಾಡಿದೆ ನೋಡಿ. ಕಾಬಿನಿ ನದಿಯ ದಂಡೆಯಲ್ಲಿ ಡೇರೆ ಹಾಕಿ ಒಂದು ಕ್ಯಾಂಪ್ ಏರ್ಪಡಿಸಲಾಗಿದೆ. ವಿದೇಶಿ ಮುದ್ರೆಯಲ್ಲಿ ಪ್ರತಿದಿನ ಮೂರುಸಾವಿರ ಐದುನೂರು ರೂಪಾಯಿಗಳನ್ನು ಕೊಟ್ಟವರಿಗೆ ಅವರು ನೀಡುವ ಸವಲತ್ತುಗಳು ಯಾವವು ಗೊತ್ತೇ? ಕಬಿನಿಯಲ್ಲಿ ಹರಗೋಲಿನ ವಿಹಾರ ನಾಗರಹೊಳೆಯ ಕಾದಿಟ್ಟ ಅರಣ್ಯದ ಸುತ್ತಾಟ, ಉಳಿದ ತಾಣಕ್ಕೆ ಸ್ವಂತ ಖರ್ಚಿನಲ್ಲಿ ಓಡಾಟ. ಅದೃಷ್ಟ ಚೆನ್ನಾಗಿದ್ದರೆ ಕಾಡಾನೆಯೋ, ಹುಲಿಯೋ ಕಾಣಿಸಿಕೊಳ್ಳಬಹುದು ಇಲ್ಲವಾದರೆ ಕ್ಯಾಂಪಿಗೆ ಮರಳಿ ಸೊಳ್ಳೆಗಳಿಂದ ರಾತ್ರಿಯಿಡೀ ಕಚ್ಚಿಸಿ ಕೊಂಡದ್ದಷ್ಟೇ ಬಂದೀತು!

ಸುಂದರವಾದ ವಾಸ್ತು-ಶಿಲ್ಪ, ಭಿತ್ತಿ ಚಿತ್ರಗಳು, ದೇವಾಲಯಗಳಿಗೆ ಸೀಮಿತವಾಗಿವೆ. ಅಲ್ಲಿ ಬೆಳಿಗ್ಗೆ ಹೋದರೆ ಅರ್ಚಕರು ಎದ್ದಿರುವದಿಲ್ಲ. ಮಧ್ಯಾಹ್ನ ಹೋದರೆ ದೇವರ ವಿಗ್ರಹಗಳು ವಿಶ್ರಾಂತಿ ಪಡೆಯುತ್ತಿರುತ್ತವೆ. ಚಪ್ಪಲಿ ತೆಗೆದಿಡಬೇಕು. ಬರಿಮೈಯಲ್ಲಿ ಬರಬೇಕು. ಹಿಂದೊಮ್ಮೆ ಭಿಕ್ಷುಕರು, ಉತ್ತರ ಕನ್ನಡ ಜಿಲ್ಲೆಯ ಭಟಕಳದ ಕೇತಪ್ಪಯ್ಯ ದೇವಾಲಯವನ್ನು ಧರ್ಮ ಶಾಲೆಯಂತೆ ಬಳಸುತ್ತಿದ್ದರಿಂದ ಶಿಲ್ಪಗಳೆಲ್ಲ ಹೊಗೆಯಿಂದ ಕಪ್ಪಿಟ್ಟಿವೆ. ಹಲವೆಡೆಯಲ್ಲಿ ಸುಣ್ಣ ಬಳಿದು ನಿಜಸ್ವರೂಪ ಕಾಣದಂತೆ ಮಾಡುತ್ತಾರೆ ಹಿರಿಯೂರು, ಸಿರಾ, ಸೀಬಿಗಳಲ್ಲಿರುವ ಭಿತ್ತಿ-ಚಿತ್ರಗಳ ಮೇಲೆ ಸುಣ್ಣ ಸಿಡಿದಿದ್ದರೆ ತುಮಕೂರು, - ಮುಡುಕುತೂರೆಗಳವುಗಳ ಮೇಲೆ ಗೀಚಲಾಗಿದೆ. ಶ್ರವಣ ಬೆಳ್ಗೊಳ, ಶ್ರೀರಂಗಪಟ್ಟಣಗಳ ಭಿತ್ತಿಚಿತ್ರಗಳು ಎತ್ತರದಲ್ಲಿದ್ದುದರಿಂದ ಬರಿಗಣ್ಣಿನಿಂದ ನೋಡಿ ಸವಿಯಲು ಸಾಧ್ಯವಾಗುವದಿಲ್ಲ. ಮೈಸೂರ ಅರಮನೆಯ ಆವಾರದಲ್ಲಿರುವ ಕೆಲ ದೇವಾಲಯಗಳನ್ನು ಅಪರೂಪವಾಗಿ ತೆರೆಯಲಾಗುವದರಿಂದ ಅಲ್ಲಿರುವ ಭಿತ್ತಿ-ಚಿತ್ರಗಳನ್ನು ನೋಡುವವರು ತೀರ ಕಡಿಮೆ. ಮೂಡ ಬಿದುರೆಯ ಧವಳ, ಮಹಾಧವಳಗಳ ಮೇಲಿರುವ ವರ್ಣಚಿತ್ರಗಳನ್ನು ತಮ್ಮವರಿಗೆ ಮಾತ್ರ ತೋರಿಸುತ್ತಾರೆ. ಖಜುರಾಹೋದಲ್ಲಿ

ನೃತ್ಯ - ಸಂಗೀತ ಪ್ರದರ್ಶನದಂಥವನ್ನು ಏರ್ಪಡಿಸುವ ಗೀಳು ನಮ್ಮವರಿಗೂ ಬಾಧಿಸಿದೆ. ಖಜುರಾಹೋ ಕಚೇರಿಗಳಿಗಾಗಿ ಬಹಳಷ್ಟು ಜಾಹೀರಾತು ಕೊಟ್ಟರೂ ಅಪಾರ ಹಣ ವೆಚ್ಚಮಾಡಿದರೂ ಅಲ್ಲಿ ನಾಲ್ಕು ವಿದೇಶೀಯರೂ ಇಲ್ಲದ್ದರಿಂದ ದೇಶೀಯರಿಗೆ ಒತ್ತಾಯದಿಂದ ಹಿಡಿದು ತಂದು ಸಭಾಂಗಣದಲ್ಲಿ ಕೂರಿಸುವ ದೀನ ಅವಸ್ಥೆ ಕಣ್ಣಿಗೆ ಕಟ್ಟಿದಂತಾಯಿತು. ಹಂಪೆ ಸೋಮನಾಥಪುರ, ಪಟ್ಟದಕಲ್ಲು, ಬೇಲೂರು ದೇವಾಲಯಗಳಲ್ಲಿ ಕಲಾಮೇಳಗಳಿವೆ ಎಂದು ದಿನ, ವಾರ ಪತ್ರಿಕೆಗಳಲ್ಲಿ ಜಾಹೀರಾತು ಕೊಡಮಾಡುವದರಿಂದ ಅಲ್ಲಿ ಏನೋ ವಿಶೇಷವಿರಬೇಕೆಂದು ಧಾವಿಸಿದರೆ, ಅಲ್ಲಿ ಅಧಿಕಾರಿವರ್ಗದವರ ಕುಟುಂಬದವರು, ಕಾಸು ಕೊಡದೇ ಮೋಜು ಮಾಡುವವರು, ಮೊದಲಾದವರ ತಂಡವೇ ನೆರೆದಿರುತ್ತದೆ. ಇಂಥ "ರಾಷ್ಟ್ರೀಯ" ಪ್ರದರ್ಶನಗಳಲ್ಲಿ ಭಾಗವಹಿಸುವ ಕಾಲಾಕಾರರಲ್ಲಿ ಎಳೆಯರು, ಉದಯೋನ್ಮುಖರು, ಆನಂತರ ಹೇಳ ಹೆಸರಿಲ್ಲದವರೇ ಬಹುಸಂಖ್ಯಾಕರೆಂದು ಬೇರೆ ಹೇಳಬೇಕೇ?

ಮೂರು ಕಿಲೊ ಮಿಟರ ದೂರದಿಂದಲೆ ಛಾಯಗ್ರಹಣ ಮಾಡಲು ಅನುಕೂಲವಿರುವ ಕಲಕತ್ತಾದ ರವೀಂದ್ರ ಸೇತುವೆಯ 'ಛಾಯಾಗ್ರಹಣ ನಿಷಿದ್ಧ'! ಫಲಕ ನಗು ತಂದಿತು. ಇದರಂತೆ ಜೋಗದ ವಿದ್ಯುದಾಗರ, ಲಿಂಗನಮಕ್ಕಿ ಆಣೆಕಟ್ಟು, ನಾಗರಝರಿ ವಿದ್ಯುತ್ ಕೇಂದ್ರ, ಗಣೇಶ ಗುಡಿಯಲ್ಲಿ ಕಾಳಿನದಿಯ ಆಣೆಕಟ್ಟು ಮುಂತಾದೆಡೆಯಲ್ಲಿ ಛಾಯಾಗ್ರಹಣ ತ್ಯಾಜ್ಯವೆಂದು ಅಗ್ರವಾಗಿ ಬರೆಯಲಾಗಿದೆಯಲ್ಲದೇ ಕ್ಯಾಮರಾ ಸಹ ಒಯ್ಯಲು ಬಿಡುವದಿಲ್ಲ ಹೀಗೇಕೆ ಎಂದು ವಿಚಾರಿಸಿದಾಗ, "ಯುದ್ಧಕಾಲದಲ್ಲಿ ಈ ಚಿತ್ರಗಳನ್ನೇ ಬಳಸಿ ವೈರಿಗಳು ಇದನ್ನು ನಾಶಮಾಡುವದಿಲ್ಲವೇ?" ಎಂಬ ಮರು ಪ್ರಶ್ನೆ ಸೋಜಿಗವುಂಟು ಮಾಡಿತು. ಏಕೆಂದರೆ ಇಂದಿನ ದಿನಗಳಲ್ಲಿ ಸೆಟೆಲೈಟ್ ಕ್ಯಾಮರಾಗಳು ಕೈಯಲ್ಲಿ ಹಿಡಿದ ಬೆಂಕಿಪೊಟ್ಟಣದ ಛಾಯಾಚಿತ್ರಗಳನ್ನು ಕೂಡಾ ಅದ್ಭುತವಾಗಿ ಹಿಡಿಯಬಲ್ಲವು, ಎಂಬ ಮಾತು ಈ ಬಡಪಾಯಿಗಳಿಗೆ ತಿಳಿದಂತಿಲ್ಲ!


ಪಾಶ್ಚಾತ್ಯದೇಶಗಳಲ್ಲಿ ಯಾವ ಅಡ್ಡಿ - ಆತಂಕಗಳೂ ಇಲ್ಲದೇ ಬೇಕೆಂದ ಛಾಯಾ ಚಿತ್ರಣ ಮಾಡಬಹುದು. ಅಮೇರಿಕದಲ್ಲಿಯಂತೂ ಸಕಲ ಸವಲತ್ತುಗಳನ್ನು ಅಧಿಕಾರಿಗಳೇ ಪೂರೈಸುತ್ತಾರೆ. ನಮ್ಮಲ್ಲಿ ಮಾತ್ರ ವಿಗ್ರಹಗಳ, ಮೂರ್ತಿಗಳ ಕಳ್ಳತನಕ್ಕಿಂತ ಛಾಯಾಚಿತ್ರಗ್ರಹಣ ಹೆಚ್ಚಿನ ಅಪರಾಧವೆಂದು ಏಕೆ ಪರಿಗಣಿಸುತ್ತಾರೆಂದು ತಿಳಿಯಲಿಲ್ಲ. ಬಳ್ಳಿಗಾವಿಯ ಚೌಕಿದಾರ, ಛಾಯಾಗ್ರಹಣಕ್ಕೆ ಆಕ್ಷೇಪಿಸಿದಾಗ, ಕಾರಣ ಕೇಳಿದೆ. "ವಿಗ್ರಹಗಳ ಛಾಯಾಚಿತ್ರಗಳನ್ನು ಸಿರಿವಂತ ಗಿರಾಕಿಗಳಿಗೆ ತೋರಿಸಿ, ಆರ್ಡರ್ ಪಡೆದು ನಂತರ ಕದ್ದೊಯ್ಯುತ್ತಾರೆ" ಎಂಬ ಉತ್ತರ ದೊರೆಯಿತು. ನ್ಯೂಯಾರ್ಕ, ವಾಷಿಂಗಟನ್, ಲಂಡನ್, ಮ್ಯುಝಿಯಂಗಳಲ್ಲಿ ನೋಡಿದ ಭಾರತೀಯ ಕಲಾಕೃತಿಗಳೆಲ್ಲ ಛಾಯಾಗ್ರಹಣ ಮಾಡದೆಯೇ ಅಲ್ಲಿಗೆ ಹೋಗಿ ಮುಟ್ಟಿದವು ಎಂದು ಜ್ಞಾಪಿಸಿಕೊಂಡೆ. ಬಾದಾಮಿ-ಗುಹೆಗಳಲ್ಲಿ ಸ್ಟ್ಯಾಂಡ್, ಫ್ಲ್ಯಾಶ್ ಬಳಸದೇ ಚಿತ್ರತೆಗೆಯ ಬಹುದೆಂದ. ಕೈ ಕಾಲು ಬಡಿಯದೇ ಈಜಲು ಅನುಮತಿ ಕೊಟ್ಟಂತೆ! ಅಂದುಕೊಂಡೆ. ಎಲ್ಲೆಲ್ಲೂ ಮೇಲಧಿಕಾರಿಗಳ ಪರವಾನಗಿ ಅತ್ಯವಶ್ಯ ಎಲ್ಲ ಪ್ರೇಕ್ಷಣೀಯ ಸ್ಥಳಗಳು ಒಂದೇ ಅಧಿಕಾರಿಕ್ಕೆ


ಒಳ ಪಟ್ಟಿರುವದಿಲ್ಲ. ಕೆಲವು ಕೇಂದ್ರಾಡಳಿತಕ್ಕೆ, ಉಳಿದವು, ರಾಜ್ಯ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿವೆ. ಈ ಅಧಿಕಾರಿಗಳೆಲ್ಲ ಔರಂಗಾಬಾದ, ಮದ್ರಾಸ, ಮೈಸೂರು, ಬೆಂಗಳೂರು, ಧಾರವಾಡಗಳಲ್ಲಿ ಹಂಚಿ ಹೋಳಾಗಿದ್ದಾರೆ. ಇವರಿಂದ ಅಪ್ಪಣೆ ತರಿಸಿ ಛಾಯಾಗ್ರಹಣ ಮಾಡುವದು ಅಸಾಧ್ಯವಾದ ಮಾತು, ಎಂದು ಯತ್ನಿಸಿದಾಗಲೇ ತಿಳಿಯಬೇಕು. ಬೃಂದಾವನದ ಉದ್ಯಾನ, ಮೈಸೂರು ಪ್ರಾಣಿ ಸಂಗ್ರಹಾಲಯದಲ್ಲಿ, ಛಾಯಾಗ್ರಹಣ ಮಾಡುವದಕ್ಕೆ ನಿಗದಿಯಾದ ಫೀ ವಿವರ ಓದಿಯೇ ಕ್ಯಾಮರಾವನ್ನು ಚೀಲಕ್ಕೆ ಸೇರಿಸಬೇಕಾಯ್ತು. ಸೋಮನಾಥ ಪುರ ದೇವಾಲಯದ ಹೊರಾಂಗಣದಲ್ಲಿ ಚಿತ್ರಿತವಾಗಿದ್ದ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಶಿಲ್ಪಗಳ ಛಾಯಾಗ್ರಹಣ ಮಾಡುವಾಗ ಮೇಲಧಿಕಾರಿ ಬಂದ "ಏಕ ಪ್ರಕಾರವಾಗಿ ಪೋಟೊ ಹಿಡಿಯುತ್ತೀರಲ್ಲ! ವ್ಯಾಪಾರ ಮಾಡುತ್ತೀರಾ?" ಎಂಬ ಪ್ರಶ್ನೆಗೆ ರೇಗಿದ್ದೆ. ಕೆಲವೇವಾರಗಳ ಹಿಂದೆ ಕೆಳದಿಗೆ ಹೋದಾಗ ಅಲ್ಲಿಯ ವಸ್ತುಸಂಗ್ರಹಾಲಯ ನೋಡಬೇಕು ಅನ್ನಿಸಿತು ಅದೊಂದು ಅತಿ ಅಪೂರ್ವ ಸಂಗ್ರಹವೆಂದು ಹಲವಾರು ವೃತ್ತ ಪತ್ರಿಕೆಗಳಲ್ಲಿ, ಅದರ ಸ್ಥಾಪಕರು ತುತ್ತೂರಿ ಊದುತ್ತಲೇ ಇದ್ದಾರೆ. ಇನ್ನೂ ಅಸ್ತವ್ಯಸ್ತವಾಗಿ ಬಿದ್ದಿರುವ 'ಕಲಾಕೃತಿ'ಗಳ ಸಂಗ್ರಹ ನೋಡಲು ಯಾರೂ ಬರದ್ದರಿಂದ ಬಂದ ಒಂಟಿ ಪ್ರವಾಸಿಯನ್ನು ಕಂಡು ಚೌಕಿದಾರನು ಧಾವಿಸಿಬಂದು, ಇದ್ದವುಗಳನ್ನೇ ತೋರಿಸಿ ಸಂದರ್ಶಕ ಪುಸ್ತಕದಲ್ಲಿ ಹೆಸರು ವಿಳಾಸ ಬರೆದುಕೊಂಡ. ಮಹಾಸತಿ ಕಲ್ಲುಗಳ ಬಗ್ಗೆ ಲೇಖವೊಂದನ್ನು ಬರೆಯಬೇಕೆಂಬ ಯತ್ನದಲ್ಲಿ ಇದ್ದುದರಿಂದ ಕಟ್ಟಡದ ಹೊರಗಡೆ ನಿಲ್ಲಿಸಿದ ಸ್ಮಾರಕಗಳ ಛಾಯಾಗ್ರಹಣ ಮಾಡಬಹುದೇ ಎಂದು ಆತನನ್ನು ವಿಚಾರಿಸಿದಾಗ "ಖುಷಿಯಿಂದ ಮಾಡಿ' ಎಂದ. ಒಂದನ್ನು ಕ್ಲಿಕ್ಕಿಸುವದರಲ್ಲಿ, ಕುಳಿತು ಕೆಲಸವಿಲ್ಲದೇ ಬೇಸತ್ತು, ಗಾಳಿ ಸೇವನೆಗೆಂದು ಅಧಿಕಾರಿ ಹೊರಗೆ ಬಂದ' ಛಾಯಾಗ್ರಹಣ ಮಾಡಕೂಡದು' ಎಂದು ಗುಡುಗಿದ. ಹಾಗೆ ಎಲ್ಲೂ ಬರೆದಿಲ್ಲವಲ್ಲ?' ಎಂದಾಗ 'ನಾನು ಹೇಳುತ್ತಿದ್ದೇನೆ' ಎಂದು ಅಧಿಕಾರ ಪ್ರದರ್ಶಿಸಿದ. "ಚೇಂಬರಿನ ಬದಲಾಗಿ ತಾವುಗಳು ಗೇಟಿನ ಬಳಿಯೇ ಅಲಂಕೃತರಾದರೆ, ಅರಿಯದ ಆಗಂತುಕರು ಅಪ್ಪಣೆ ಪಡೆಯದ ಛಾಯಾಗ್ರಹಣ ಮಾಡುವದು ತಪ್ಪುತ್ತದೆ' ಎಂದು ಕಟುವಾಗಿಯೇ ಹೇಳಿ ಬರಿಗೈಯಲ್ಲಿ ಹಿಂದಿರುಗಬೇಕಾಯಿತು.

ಪ್ರವಾಸಿ ಇಲಾಖೆಯವರು ಕಟ್ಟಿಸಿದ ವಸತಿ ಗೃಹಗಳ ಬಗ್ಗೆ ಬರೆದಷ್ಟೂ ಕಡಿಮೆ ಮಾಗೋಡು ಜಲಪಾತದ ಪರಿಸರದಲ್ಲಿ ಒಂದುಕಟ್ಟಡ ನಿಲ್ಲಿಸಲಾಗಿದೆ. ಅಲ್ಲಿ ಕಾವಲುಗಾರನು ಕೂಡ ಇಲ್ಲದಾಗ, ಊಟ-ತಿಂಡಿಯ ಮಾತು ದೂರವೇ. ಪೋಲಿಗಳು ಗೋಡೆಗಳ ಮೇಲೆ ಲೈಂಗಿಕ ಚಿತ್ರಗಳನ್ನು ಬಿಡಿಸಿದರೆ, ಕಳ್ಳರು ಕಿಡಕಿ, ಬಾಗಿಲುಗಳನ್ನು ಒಯ್ದಿದ್ದಾರೆ! ಮೈಸೂರು, ಬೆಂಗಳೂರುಗಳಲ್ಲಿ ಬೇಕಷ್ಟು ಹೋಟೇಲಗಳು ಇರಬೇಕಾದರೆ ಪ್ರವಾಸ ಖಾತೆಯವರು ತಮ್ಮದೊಂದು ಹೊಟೆಲ್ ತೆರೆಯುವ ದಡ್ಡತನ ತೋರಿಸಿಯಾರೇ ? ವಿಶ್ವಖ್ಯಾತಿ ಪಡೆದ ಉಡುಪಿ ಹೊಟೇಲಿನವರ ತವರುಮನೆಯಲ್ಲಿ ಒಳ್ಳೆ ಹೊಟೇಲಿಲ್ಲ. ಮಲ್ಪೆಯಲ್ಲಿ ವಸತಿ ಸವಲತ್ತು ಕಲ್ಪಿಸಿದ್ದಾರೆ. ಬಿಜಾಪುರ, ಸೋಮನಾಥಪುರಗಳಲ್ಲಿಯವು ಮಧ್ಯಮರ್ಗದವರಿಗೆ ಎಟುಕದಷ್ಟು ದುಬಾರಿ, ಆದ್ದರಿಂದ ಇದ್ದ ಸವಲತ್ತುಗಳನ್ನು ಬಳಸದ ವರೇ ಜಾಸ್ತಿ. ನಂದಿ

ಬೆಟ್ಟದಲ್ಲಿರುವ ರೆಸ್ಟುರಾಂಟ್, ಬಾರ್, ಒಳಸಭಾಂಗಣಗಳ ಲಾಭ ಪಡೆಯುವವರು ಬೆಂಗಳೂರಿನ ರಾಜಕಾರಣಿಗಳೆಂದು ಬೇರೆ ಹೇಳಬೇಕೇ? ಸ್ವಲ್ಪದರಲ್ಲಿ ಹೇಳಬೇಕಾದರೆ ಸಂಚಾರಿ ಖಾತೆಯವರು ಕೈಕೊಂಡ ಹೆಚ್ಚಿನ ಯೋಜನೆಗಳಲ್ಲಿ ಮುಂದಾಲೋಚನೆ, ಮಾನವೀಯತೆ, ಲೋಕ ಕಲ್ಯಾಣಗಳಿರುವದಿಲ್ಲ. ಸಾಹುಕಾರರಿಗಾದರೋ ಪ್ರವಾಸಿಗಳನ್ನು ದೋಚಿ ಬಂದಷ್ಟೇ ಲಾಭ ಎಂಬ ಮನೋವೃತ್ತಿ.

ಕರ್ನಾಟಕ ಸರಕಾರ, ವರ್ಷೆ ವರ್ಷೆ ಕೋಟಿಗಟ್ಲೆ ಹಣವನ್ನು ಪ್ರವಾಸೋದ್ಯಮಕ್ಕೆ ವ್ಯಯಿಸುತ್ತಿದ್ದೆ. ಈ ಹಣದಿಂದ ಹೆದ್ದಾರಿ, ವಸತಿಗೃಹಗಳ ದುರುಸ್ತಿ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವದಂತೆ! ಇವೆಲ್ಲ ಸರ್ಕಸ್ಸಿನಿಂದ ಪ್ರವಾಸಿಗರ ಮೇಲೆ ಹೆಚ್ಚಿನ ಪರಿಣಾಮ ಆಗಲಾರದು. ಅದರ ಬದಲಾಗಿ ಸಮರ್ಪಕ ವೆಚ್ಚದಲ್ಲಿ ಅವರಿಗೆ ಹತ್ತು ದಿನಗಳ ಕರ್ನಾಟಕ ದರ್ಶನ, ಹದಿನೈದು-ಇಪ್ಪತ್ತು ಸಹಸ್ರರೂಪಾಯಿಗಳಲ್ಲಿ ಭಾರತ ದರ್ಶನ ಮೊದಲಾದವನ್ನು ಮಾಡುವ ಸವಲತ್ತು ಕೊಟ್ಟರೆ ಹೆಚ್ಚಿನ ಸಂಖ್ಯೆಯಲ್ಲಿ ಭಾರತಯಾತ್ರಿಗಳು ದೊರೆಯುವದು ಖಂಡಿತ. ಜೊತೆಗೆ ಅಲೆಮಾರಿಗಳಂತೆ ಬೇಕಾದಲ್ಲಿ ಪ್ರವಾಸಮಾಡಲು ಅಖಿಲಭಾರತ ಬಸ್ ಮತ್ತು ರೇಲ್ವೆ ಪಾಸುಗಳನ್ನು, ತಿಂಡಿ, ಕಾಫಿಗಳ ಏರ್ಪಾಡು ಮಾಡಿದರೆ ಹೊಸ ಅಧ್ಯಾಯವನ್ನೇ ಪ್ರಾರಂಭಿಸಿದಂತಾಗುವದು. ಸಿರಿವಂತರಿಗಿಂತ ಮಧ್ಯಮವರ್ಗದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುವದರಿಂದ ಅವರಿಂದಲೇ ಹೆಚ್ಚಿನ ಲಾಭ ಪಡೆದುಕೊಳ್ಳಬಹುದು ಎಂಬುದು ಇನ್ನಿತರ ರಾಷ್ಟ್ರಗಳ ಅನುಭವ. ಸಾಲಮೇಳಗಳು, ಪಡೆದ ಸಾಲ, ಕೈ ಬಿಡುವ ಔದಾರ್ಯ ಮತ್ತು ರೈತರಿಗೆ ಪುಕ್ಕಟೆ ವಿದ್ಯುತ್ತು ಪೂರೈಸುವ ದೇಶದಲ್ಲಿ ಯಾತ್ರಿಗಳಿಗೆ, ಪ್ರವಾಸದ ಮೂಲಕ ಭಾವೈಕ್ಯತೆ ಮೂಡಿಸುವ ಪ್ರಯತ್ನಕ್ಕೆ ನೆರವಾಗುವದು ದೊಡ್ಡಮಾತೇನಲ್ಲ.


ಇಂದು ಉರವಲ ಕಟ್ಟಿಗೆಗೂ ಬರ ಬಂದಿದೆ


ಅಂದ ಗಿಡ ಮರಗಳ ಸುಂದರ ತಾಣ

ರಾಜ್ಯ ಮತ್ತು ದೇಶದ ಪ್ರವಾಸೋದ್ಯಮ ಬೆಳೆಯಬೇಕಾದರೆ, ನಮ್ಮೆಲ್ಲರ ದೃಷ್ಟಿಕೋನದಲ್ಲಿ ಬದಲಾವಣೆಬೇಕು. ಸರಕಾರ ಮತ್ತು ಸಾಹುಕಾರರ ಬೊಕ್ಕಸ ತುಂಬಿಸಲು ಯಾರೂ ಪ್ರವಾಸ ಮಾಡುವದಿಲ್ಲ. ಪ್ರವಾಸಿಗಳು ವ್ಯಯಿಸಿದ ಹಣಕ್ಕ ಪ್ರತಿಯಾಗಿ ವಿರಾಮ, ಆರಾಮ, ಜ್ಞಾನಾರ್ಜನೆ, ಮನೋರಂಜನೆಗಳು ದೊರೆಯಲೇಬೇಕು. ಅಂತೆಯೇ ವಿವಿಧ ಜನರಿಗೆ ಎಟಕುವ ಬೆಲೆಯಲ್ಲಿ ಸಕಲ ಸವಲತ್ತುಗಳು ಲಭ್ಯವಿರುವಂತೆ ಏರ್ಪಾಡು ಮಾಡಿದರೆ, ಜಾಹೀರಾತು ಇಲ್ಲದೇ, ಪ್ರವಾಸಿಗರೇ ಬನ್ನಿ! ಬನ್ನಿ! ಎಂದು ಡಂಗುರ ಬಡಿಯದೇ ಇದ್ದರೂ ಅವರು ತಾವಾಗಿಯೇ ಬರುತ್ತಾರೆ. ಬರುವವರೆಲ್ಲ ನಮ್ಮ ಅತಿಥಿಗಳು ಎಂದು ಪರಿಗಣಿಸಿ ಮುಖ್ಯತಃ ನಮ್ಮ ಕಲೆ, ಸಂಸ್ಕೃತಿ, ಆಟಪಾಠ, ಜೀವನ ರೀತಿಗಳ ಬಗ್ಗೆ ತಿಳಿಯ ಪಡಿಸುವ ಏರ್ಪಾಡು ಮಾಡಿದರೆ ದೇಶ ವಿದೇಶಗಳಲ್ಲಿ ನಮ್ಮವರ ಬಗ್ಗೆ ಹೆಚ್ಚಿನ ಅರಿವು ಮೂಡುವದರಲ್ಲಿ ಸಂದೇಹವೇ ಇಲ್ಲ. ಪ್ರವಾಹರೂಪದಲ್ಲಿ ಪ್ರವಾಸಿಗಳು ಬರಲಾರಂಭಿಸಿದರೆ ಉದ್ದಿಮೆಗೂ ಲಾಭವಾಗದೇ ಇದ್ದೀತೇ?

●


೧೮. ಪ್ರಗತಿಯ ಮಾಯಾಮೃಗ

ಏನು ಚೆಲುವಿನ ನಾಡು!ಚೆಲುವು ಚೆಲ್ಲುವ ನಾಡು! ಕನ್ನಡದ ನಾಡು' ಆದರಿಂದು ಅದೇ ಕರ್ನಾಟಕ ದೂಳು ಉಗುಳುವ ನಾಡು. ಕಪ್ಪು ಕನ್ನಡ ನಾಡು. ಒಂದೆಡೆ ದೂಳು ಎರಚುವ ಸಿಮೆಂಟ್ ಕಾರ್ಖಾನೆ. ಇನ್ನೊಂದೆಡೆ ಹೊಗೆಯುಗುಳುವ ಸಕ್ಕರೆ ಕಾರ್ಖಾನೆ. ಈ ವಿಜ್ಞಾನದ ಪ್ರಗತಿ ಎಲ್ಲ ಚೆಲುವಿಗೆ ದೂಳಿನ ಮುಸುಗು ಮುಚ್ಚಿದೆ. ಅದು ಬೇಲೂರಿನ ದೇವಸ್ಥಾನವಿರಬಹುದು ಇಲ್ಲಾ ಕಾಳ ಮುದ್ದನ ದೊಡ್ಡಿಯ ಪ್ರೌಢಶಾಲೆ ಇರಬಹುದು. ಎಲ್ಲೆಲ್ಲೂ ಹೊಗೆಯುಗುಳಿನ ಅಭಿಷೇಕ. ಕೈಬೀಸಿ ಕರೆವ ತುಮಕೂರಿನ ತೆಂಗುಗಳು ಕಾರ್ಖಾನೆಯ ಧೂಳಿಗೆ ಕಮರಿವೆ. ಕುಡಿವ ನೀರು, ತಿನ್ನುವ ಅನ್ನ, ಉಸಿರಾಡುವ ಗಾಳಿಯೂ ಇಂದು ವಿಷಮಯ. ಈ ಪ್ರಗತಿಯ ಅಧೋಗತಿಯಿಂದ ಜನ, ಜಾನುವಾರು ರೋಗದ ಗೊಡು. 'ದೂಳು ತಂದ ಈ ಗೋಳಿ'ಗೆ ನಗರೀಕರಣ, ಗ್ರಾಮೀಣ ಬದುಕಿನ ಎಲ್ಲ ಚೆಲುವಿನ ಕೊಲೆ ಮಾಡಿದೆ. ಮಾನವ ಬದುಕಿನ ಏಳ್ಗೆಗಿದು ಅಗತ್ಯವೆ?

ಕಾಶ್ಮೀರಕೆ ಹೋದಾಗ, ಸ್ವಿಝರ್‌ಲಂಡ್ ನೋಡಿದಾಗ, ಸುಂದರವನದಂತಿದ್ದ ಅಪಲಾಂಚಿಯನ್ ಕಣಿವೆಯನ್ನು ಗಗನದಿಂದ ವೀಕ್ಷಿಸಿದಾಗ, ಉತ್ತರ ಕನ್ನಡ ಜಿಲ್ಲೆಯ ನಮ್ಮೂರೇ ಹೆಚ್ಚು ಸುಂದರ ಅನಿಸಿತ್ತು. ಗಗನ ಮಂಡಲ ಆವರಿಸಿದ ನೀಲಮೋಡಗಳು, ಅಬ್ಬರದ ಕಡಲು, ತಿಳಿನೀರಿನ ನದಿ, ಸಾಲಾಗಿ ತಲೆ ಎತ್ತಿ ನಿಂತ ಪರ್ವತಶ್ರೇಣಿ, ಹಚ್ಚ ಹಸಿರಾದ ಬತ್ತದ ಹೊಲಗಳು, ವಿವಿಧ ಆಕೃತಿ, ಎತ್ತರಗಳಿಂದ ಬಾಗಿ, ನಲಿಯುವ ತೆಂಗು, ಮಾವು, ಹಲಸು, ಬಾಳೆ, ಗೋಡಂಬಿಯ ತೋಪುಗಳು, ಶುದ್ಧ, ಶುಭ್ರವಾದ ಪರಿಸರದಲ್ಲಿ ಸರಳ ಜೀವನ ನಡೆಸುತ್ತಿರುವ ಜನ; ನಂದನವನ ಬೇರೆ ಇರಲಾರದು ಎಂದು ಅನಿಸದೇ ಇರುತ್ತಿರಲಿಲ್ಲ.

ಸ್ವಂತದ ಊರಿನಿಂದ ಹೆಚ್ಚೆಚ್ಚು ಕಾಲ ದೂರವಿದ್ದಂತೆ ಅದರ ಆಕರ್ಷಣೆಯೂ ಹೆಚ್ಚುತ್ತದೆ. ಅಂತಹ ಉತ್ಕಟ ವ್ಯಾಮೋಹದಿಂದ ಊರಿಗೆ ಬಂದು ಆಪ್ತರೊಬ್ಬರಲ್ಲಿ ಹೋದಾಗ ಮನೆಯವರು ತಿಳಿಬೆಲ್ಲ ಹೇರಳ ಹಸಿಕೊಬ್ಬರಿ ಹಾಕಿದ ಅಕ್ಕಿಯ ತೆಳುದೋಸೆ ಮತ್ತು ಕೊತಂಬರಿ ಕಷಾಯ (ಗಾಂಧಿ ಕಾಫಿ) ಸೇವಿಸುತ್ತಾ ಇದ್ದರು. ಇಂತಹ ತಿಂಡಿ ಸೇವಿಸದೇ ಎಷ್ಟು ಯುಗ ಕಳೆದವೋ ಎಂಬ ಬಾಯಿ ಚಪ್ಪರಿಸುತ್ತಿದ್ದಾಗ, ಈ ನಗರವಾಸಿಗೆ ವಿಶೇಷ ತಿಂಡಿ ತಯಾರಿ ನಡೆದಾಗ ಘೋರ ನಿರಾಶೆಯಾಯಿತು. ಮಕ್ಕಳನ್ನು ಊರಿನ ನಾಲ್ಕು ಮೂಲೆಗೆ ಓಡಿಸಿ, ಮಲಬಾರಿಯ ಅಂಗಡಿಯಿಂದ ತಂದ ತಂಗಳ ಬ್ರೆಡ್ಡಿನ ಟೋಸ್ಟ್, ಪಾಸ್ಕಲನ ಅಂಗಡಿಯಿಂದ ಬಂದ ಮೊಟ್ಟೆಯ ಆಮಲ್ಲೆಟ್, ಆಕರ್ಷಕ ಬಣ್ಣವಾಗಲಿ, ರುಚಿಯಾಗಲಿ ಇಲ್ಲದ ಕಾಫಿ ಆಯಾ ಹೆಸರಿಗೆ ಅವಮಾನ ಮಾಡುವಂತೆ ಎದುರಿಗೆ ಕುಳಿತ್ತಿದ್ದವು. ಮನೆಯ ಯಜಮಾನರು

ಅಂದಿನ ಲೀಲಾಜಾಲವಾಗಿ ಓಡುವ ನಾವೆ



ಹೆಚ್ಚಿನ ಅಭಿಮಾನದಿಂದ "ಈಗ ನಮ್ಮೂರು ಸರ್ವತೋಮುಖವಾಗಿ ಬೆಳೆದಿದೆ. ರಾಜಧಾನಿಯ ಎಲ್ಲಾ ಸಾಮಾನುಗಳು ಇಲ್ಲಿ ದೊರೆಯುತ್ತವೆ. ಕಾಲೇಜೂ ಆಗಿದೆ. ನೀವು ಸ್ವಲ್ಪ ವಶೀಲಿ ಹಚ್ಚಿ ಯತ್ನಿಸಿದರೆ ನಮ್ಮ ಕಾಲೇಜಿನಲ್ಲಿ ಪ್ರಿನ್ಸಿಪಾಲ ಅಲ್ಲದಿದ್ದರೂ ಪ್ರೊಫೆಸರ್ ಆಗಬಹುದು......." ಎನ್ನುತ್ತಿದ್ದಾಗ ಆ ಹುದ್ದೆಗೆ ಬರುವ ಸಂಬಳ ಎಷ್ಟು? ಎಂದು ನಡುವೆಯೇ ಕೇಳಿದ ಪ್ರಶ್ನೆಗೆ ಬಂದ ಉತ್ತರದಿಂದ ನಡುಕ ಬಂದಂತಾಗಿ ಕುಂಟುತ್ತಿದ್ದ ಸ್ಟೂಲು ಅಲ್ಲಾಡಿ ಕಾಫಿ ನೆಲಕ್ಕುರುಳಿತು. ಔಷಧದಂತಿದ್ದ ದ್ರವ್ಯ ಕುಡಿಯುವ ಪ್ರಮೇಯ ತಪ್ಪಿತೆಂದು ನೆಮ್ಮದಿಯಾಯಿತು.

ಕಲ್ಲು ಮಣ್ಣು ರಾಶಿ

ಶಾಲಾ ದಿನಗಳಲ್ಲಿ ತಿನ್ನಲು ಹಣ್ಣು, ಆಡಲು ಬೀಜ, ಮರೆಯಲ್ಲಿ ಕುಳಿತು ಆನಂದಿಸಲು ಆಸನವಾಗುತ್ತಿದ್ದ ಗೋಡಂಬಿ ಮರವನ್ನು ಹುಡುಕಿಕೊಂಡು ವಡಗೇರಿಗೆ ಹೋದಾಗ ಆ ಸ್ಥಳದಲ್ಲಿ ಕಟ್ಟಡಕ್ಕಾಗಿ ಕಲ್ಲು ಕೊರೆದು ತೆಗೆಯುವ ಕೆಲಸ ರಭಸದಿಂದ ಸಾಗಿತ್ತು. ಹಣ್ಣಿನ ತೋಟವಾಗಿದ್ದ ವಡಗೇರಿ ಈಗ ಕಲ್ಲು-ಮಣ್ಣುಗಳ ರಾಶಿಯಿಂದ ತುಂಬಿತ್ತು. ನೋಡಿ ಕಸಿವಿಸಿಯಾಯಿತು. ಹತ್ತಿರದ ಕಿರಿ ಬಂಡೆಯೊಂದರ ಮೇಲೆ ಅನ್ಯಮನಸ್ಕನಾಗಿ ಕುಳಿತಾಗ ಹಿಂದಿನ ದಿನಗಳೆಲ್ಲ ಚಿತ್ರರೂಪದಲ್ಲಿ ಮೂಡಿ ಮಾಯವಾಗತೊಡಗಿದವು.

ಇದೊಂದು ಸುಂದರ ತಾಣವಾಗಿತ್ತು. ಶಾಂತ ಪರಿಸರದಲ್ಲಿ ಮರವೇರಿ ಕುಳಿತಾಗ, ನಿಸರ್ಗದ ಸಾಕ್ಷಾತ್ಕಾರ, ತಂತಾನೇ ಆಗುತ್ತಿತ್ತು. ಎಲ್ಲಿಂದಲೋ ಗಿಳಿ ಹಿಂಡೊಂದು ಹಾರಿ ಬಂದು ಮಿಸುಕಾಡದೇ ಕುಳಿತವನನ್ನು ಗಣನೆಗೆ-ತೆಗೆದುಕೊಳ್ಳದೇ, ಗೇರು ಹಣ್ಣನ್ನು ಚುಂಚಿನಿಂದ ಕುಕ್ಕಿ, ಇನ್ನೂ ಹಣ್ಣಾಗಿಲ್ಲವೆಂದು ಗೊಣಗುತ್ತ ಇನ್ನೊಂದು ಮರಕ್ಕೆ ಧಾವಿಸಿತು. ಗಂಡು ಪಾರಿವಾಳ ಕುಟ್ರಕೂऽ ಕೂऽऽ ಎಂದು ನಲ್ಲೆಯನ್ನು ಕರೆಯಿಸಿಕೊಂಡು, ಅವಳಷ್ಟು ಸುಂದರಿಯನ್ನು ತಾನೆಲ್ಲೂ ಕಂಡಿಲ್ಲವೆಂದು ಉಬ್ಬಿಸಿ, ಮುದ್ದಿಸಲಾರಂಭಿಸಿತು. ಹಾವೊಂದು ನೀರಿನಲ್ಲಿ ಲೀಲಾಜಾಲವಾಗಿ ಈಸಾಡಿ. ಮೃಷ್ಟಾನ್ನ ಭೋಜನಕ್ಕಾಗಿ ಕಪ್ಪೆಯೊಂದನ್ನು ಬಳಸುವ ಹವಣಿಕೆಯಲ್ಲಿ ಇತ್ತು. ಈ ಇಂಗಿತವರಿತ ಮಂಡೂಕ ರಾಜ, ಕೆಸರಿನಲ್ಲಿ ಅವಿತು, ಹಾವಿನ



ಅಂದು ಬಡವನಿಗೂ ಪೌಷ್ಟಿಕ ಆಹಾರ ದೊರಕುತ್ತಿತ್ತು

ಕಣ್ಣಲ್ಲಿ ಮಣ್ಣೆರಚಿತು. ಹುತ್ತದಲ್ಲಿ ಬೇಸಿಗೆಯ ಸೆಕೆ ಸಹಿಸಲಾಗದೆ ನಾಗನಾಗಿಣಿಯರ ಜೋಡಿ ನಿಸ್ಸಂಚಾರವಾದ ಮೈದಾನಿನ ಪಕ್ಕದಲ್ಲೇ ಹುರಿಹಾಕಿದ ಹಗ್ಗದಂತೆ ಒಂದನ್ನೊಂದು ಸುತ್ತಿಕೊಂಡು ಕಾಮಚೇಷ್ಟೆ ನಡೆಸಿದ್ದವು. ಜಗತ್ತೇ ಹೆದರುವ ಸರ್ಪಜಾತಿಗೆ ಮುಕ್ತ ಅಂಗಣ ನೃತ್ಯ ರುಚಿಸುವ ಬಗೆ ನೋಡಿ ತಮಾಷೆಯೆನಿಸಿತು. ಕತ್ತಲಾಗುವ ತನಕ ಕಾದಿರಲಾರದ ಹಸಿದ ನರಿಯೊಂದು ಪೊದೆಯಿಂದ ಹೊರಬಿದ್ದು, ಬೇಟೆಗಾಗಿ ಹಲುಬುತ್ತ ಹೊರಟಿತ್ತು. ತಾಯಿಯಿಂದ ತಪ್ಪಿಸಿಕೊಂಡ ಮರಿ ಮೊಲವೊಂದು ನರಿಯಾಕ್ರಮಣದಿಂದ ತಪ್ಪಿಸಿಕೊಳ್ಳಲು ಮುಳ್ಳಿನ ಕಂಟಿಯ ಹಿಂದೆ ಅಡಗಿಕೊಂಡಿತು, ಬೆಳ್ಳಕ್ಕಿಗಳು ಕಿರು ಮೋಡಗಳಂತೆ ಗುಂಪು ಕಟ್ಟಿ ತಮ್ಮ ವಿಶ್ರಾಂತಿ ಧಾಮಕ್ಕೆ ಮರಳಿದವು. ಟಿವ್ ಟಿವ್ ಹಕ್ಕಿ ಕತ್ತಲಾದರೂ ಮರಿಯೊಂದು ಹಿಂದಿರುಗದ್ದರಿಂದ ಆತಂಕದಿಂದ ಚೀರುತ್ತ ಹುಡುಕಲಾರಂಭಿಸಿತು.... ಈ ಜೀವ ವ್ಯಾಪಾರ ನೋಡುತ್ತ ಕುಳಿತಾಗ ಕಗ್ಗತ್ತಲಾದರೂ ಮರದಿಂದ ಕೆಳಗೆ ಇಳಿಯಲು ಮನಸ್ಸಾಗುತ್ತಿರಲಿಲ್ಲ. ಆಗಿನ್ನೂ ಹುಲಿರಾಯ ಆಗಾಗ ದರ್ಶನ ಕೊಡುತ್ತಿದ್ದ ಕಾಲ. ದಾರಿ ಹೋಕರೆಲ್ಲ ದೊಣ್ಣೆಗಳನ್ನು ಬಡಿಯುತ್ತ ದೊಡ್ಡ ಧ್ವನಿಯಲ್ಲಿ ಮಾತನಾಡುತ್ತ ಗುಂಪಾಗಿಯೇ ತಿರುಗಾಡುತ್ತಿದ್ದರಿಂದ ಒಬ್ಬಂಟಿಗನಾಗಿರುವದು ಸುರಕ್ಷಿತವಲ್ಲವೆಂದು ಮುಂಜಾಗ್ರತೆ ಗೃಹಾಭಿಮುಖನಾಗುವಂತೆ ಮಾಡುತ್ತಿತ್ತು.

ಜಿಗುಪ್ಸೆ

ಈಗ ಆ ಎಲ್ಲ ಪರಿಸರವನ್ನು ತನ್ನ ಗುದ್ದಲಿ, ಪಿಕಾಸುಗಳಿದ ನಾಶಮಾಡಿದ ಮಾನವನ ಸ್ವಾರ್ಥವನ್ನು ನೆನೆದು ಜಿಗುಪ್ಸೆ ಮೂಡಿತು. ಅನತಿ ದೂರದಲ್ಲಿ ಗೇರು, ಹಲಸು, ಮಾವು, ಕವಳಿ, ನೇರಲ, ಮುರುಗಲ, ಮುಳ್ಳಣ್ಣು ಮೊದಲಾದ ಹಣ್ಣುಗಳನ್ನು ಕೊಡುವ ಮರ, ಗಿಡ-ಗಂಟಿಗಳನ್ನು ಕಡಿದು ಹೊಲಗಳನ್ನಾಗಿ ಪರಿವರ್ತಿಸಿದ್ದರು. ಆ ಪರಿಸರದಲ್ಲಿ ನಳ-ನಳಿಸಿ ಜೀವಿಸುವ ಪ್ರಾಣಿ - ಪಕ್ಷಿಗಳು ಹೇಳ ಹೆಸರಿಲ್ಲದೆ ಮಾಯವಾಗಿಬಿಟ್ಟಿದ್ದರಿಂದ ಮಾನವನ ನಿತ್ಯಸಂಗಾತಿಗಳಾದ ಕಾಗೆ-ಗುಬ್ಬಿ, ಹೆಗ್ಗಣ-ಹಸುಗಳೇ ಅಲ್ಲಿ ರಾಜ್ಯವಾಳುತ್ತಿದ್ದವು. ಸಸ್ಯ ಸಂಪತ್ತು ನಾಶವಾಗಿದ್ದರಿಂದ ಸವಕಳಿಯಿಂದ ಭೂಮಿ ಬಾಯಿಬಿಟ್ಟಿತ್ತು, ನಿಸ್ಸತ್ವವಾಗಿತ್ತು, ಅಂತೆಯೇ ರಾಸಾಯನಿಕ ಗೊಬ್ಬರ, ಕೀಟನಾಶಕಗಳಿಲ್ಲದೇ ಬೆಳೆ ಬೆಳಸುವದು ಅಸಾಧ್ಯವಾಗಿತ್ತು.



"ಮಗನಿಗೆ ಒಳ್ಳೆ ಬುದ್ಧಿ ಬಂದ್ರೆ ತುಪ್ಪದ ದೀಪ ಹಚ್ತೇನಿ ಅಂತ ಅಂದ್ಕೊರಿತಿದ್ದೆ. ಅವನು ತುಪ್ಪ ಎಲ್ಲಾ ಮುಗಿಸಿದ್ದಾನೆ"

ಕೃಷಿಕನೋರ್ವನು, ಕಬ್ಬಿನ ಬೆಳೆಸುವದು ಅಸಾಧ್ಯವಾಗಿತ್ತು. ಕೃಷಿಕನೋರ್ವನು, ಕಬ್ಬಿನ ಬೆಳೆಯುನ್ನು ಕೀಟಗಳಿಂದ ಸಂರಕ್ಷಿಸುವದಕ್ಕಾಗಿ ಅತ್ಯಂತ ವಿಷಕಾರಿ ಕೀಟನಾಶಕವನ್ನು ಬರಿಗೈಯಿಂದ ಸಿಂಪಡಿಸುತ್ತಿರುವದನ್ನು ನೋಡಿ ಹೌಹಾರುವಂತಾಯಿತು. ಅವನತ್ತ ಧಾವಿಸಿ 'ಅಮೇರಿಕೆಯಂಥ' ಮುಂದುವರಿದ ದೇಶ ಕೂಡ, ಈ ಕೀಟನಾಶಕಗಳು ಮಾನವನ ಆರೋಗ್ಯಕ್ಕೆ ಗಂಡಾಂತರಕಾರಿಯೆಂದು ಮನಗಂಡು ನಿರ್ಬಂಧಿಸಿದೆ. ಬಳಸುವದೇ ಆದರೆ, ಕೈಯ ರಕ್ಷಣೆಗೆ ಚೀಲ, ಮೂಗಿಗೆ ಶ್ವಾಸೋಚ್ಛ್ವಾಸ ಶುದ್ಧಗೊಳಿಸುವ ಮುಖವಾಡ ಧರಿಸಲೇ ಬೇಕು ಎಂದು ತಿಳಿಪಡಿಸಲು ಯತ್ನಿಸುತ್ತಿದ್ದಂತೆ ಕೃಷಿಕನು "ರಾಯರೇ, ಇದ ಅಪ್ಪಟ ವಿದೇಶಿ ಮಾಲು ಅಲ್ಲ ಸ್ವದೇಶಿ ಆದ್ದರಿಂದ ರೊಟ್ಟಿ ಹಿಟ್ಟಿನಂತೆ ಇದರಲ್ಲಿ ತೀಕ್ಷ್ಣತೆಯೇ ಇಲ್ಲ, ಕಡಿಮೆ ಹಾಕಿದರೆ ಹುಳು ಸಾಯುವದೇ ಇಲ್ಲ" ಎಂದು ಹೆಚ್ಚಿನ ವಿಶ್ವಾಸದಿಂದ ನುಡಿದು ತನ್ನ ಕೆಲಸ ಮುಂದುವರಿಸಿದ. (ನಾಲ್ಕು ವರ್ಷಗಳ ಕಾಲ ಕೀಟನಾಶಕಗಳ ಆಗುಹೋಗುಗಳನ್ನು ಅಭ್ಯಸಿಸಿದವನ ಸೂಚನೆಯನ್ನು ಮನ್ನಿಸಿದರೆ ಆ ಕೃಷಿಕ ಇಂದಿಗೂ ಬದುಕಿರುತ್ತಿದ್ದನೋ ಏನೋ. ಆದರೆ ಹಾಗಾಗಲಿಲ್ಲ. ಅವನು ಅದೇ ಕೈಯಿಂದ ಗೇರು ಹಣ್ಣುಗಳನ್ನು ದಿನವೂ ಕಿತ್ತು ತಿನ್ನುತ್ತಿದ್ದರಿಂದ ತಲೆಸುತ್ತಿ ಕೊನೆಗೊಂದು ದಿನ ನೆಲಕ್ಕುರುಳಿದ. ಡಾಕ್ಟರರು ಎಷ್ಟು ಪ್ರಯತ್ನೆಪಟ್ಟರೂ ಅವನನ್ನು ಬದುಕಿಸಿಕೊಳ್ಳಲಾಗಲಿಲ್ಲ. ಕೀಟನಾಶಕ ಅವನ ಆಹುತಿ ತೆಗೆದುಕೊಂಡಿತ್ತು. ಆದರೆ ಆಗದವರ ಮಾಟ ಮೋಡಿಗಳಿಂದ ಆತ ಸತ್ತನೆಂದು ಅವನ ಆಪ್ತರು ಇಂದಿಗೂ ನಂಬುತ್ತಾರೆ.)

ಪರಿಚಿತರಲ್ಲಿ ವಿವಾಹ ಸಮಾರಂಭಕ್ಕೆ ಹೋದಾಗ ದಪ್ಪ ಕೂದಲಿದ್ದ ಮದುಮಗಳು ಹೇನುಗಳನ್ನು ಯಮಸದನಕ್ಕೆ ಕಳಿಸಲೆಂದು ತಲೆಗೆ ಕೀಟನಾಶಕವನ್ನು ಎಣ್ಣೆಯೊಂದಿಗೆ ಸೇರಿಸಿ, ತಲೆಗೆ ಹಚ್ಚಿಕೊಂಡು ಕಣ್ಣು ಕೆಂಪಗೆ ಮಾಡಿಕೊಂಡು ಮುಖ ಊದಿಸಿಕೊಂಡು ಕುಳಿತದ್ದು ನೋಡಿ ಕನಿಕರವಾಯಿತು. ಕೂಡಲೇ ನಿವಾರಣೋಪಾಯ ಕೈಕೊಂಡಿದ್ದರಿಂದ ಮನೆ ಗೆಲುವಾಯಿತು. ಮದುವೆ ಮನೆಯ ಕಾಳು-ಕಡ್ಡಿ, ತಿಂಡಿ-ತಿನಸುಗಳನ್ನು ಇರುವೆಗಳಿಂದ ರಕ್ಷಿಸಲು ಸುತ್ತಲೂ ಕೀಟನಾಶಕಗಳನ್ನು ಧಾರಾಳವಾಗಿ ಹರವಿದ್ದರು. ಕಾಳು ಕಡ್ಡಿಗಳನ್ನು ತೊಳೆದು ಬೇಯಿಸಿ

ಸೇವಿಸುವದರಿಂದ ಯಾವ ಹಾನಿಯೂ ಇಲ್ಲ! ಎಂಬ ಮನೆಯವರ ವಾದದಲ್ಲಿ ಹುರುಳಿರಲಿಲ್ಲ. ರಾಸಾಯನಿಕ ಹೆಚ್ಚಾಗಿ ತಟ್ಟಿದ ಕಾಳು ಕಡ್ಡಿ ಹುಗಿಯಬೇಕು ಇಲ್ಲವೇ ಸುಟ್ಟು ಹಾಕಬೇಕು ಎಂದು ಸೂಚಿಸಿದರೂ, ಕೆಲಸದಾಕೆ ಹಾಗೆ ಮಾಡಲು ಇಷ್ಟಪಡದೇ ಅರ್ಧ ಬುಟ್ಟಿ ಅಕ್ಕಿಯನ್ನು ತನ್ನ ಕುಕ್ಕುಟ ಸಂಸಾರಕ್ಕೆ ತೆಗೆದುಕೊಂಡು ಹೋದಳು. ಮರುದಿನವೇ ಅರ್ಧ ಸಂಸಾರ ಸಾವಿಗೆ ಈಡಾಯಿತು. ವೈಜ್ಞಾನಿಕ ತಿಳಿವಳಿಕೆ ನೀಡದೇ ಕೀಟನಾಶಕಗಳನ್ನು ಕೈಗಿತ್ತರೆ ಆಗುವ ದುಷ್ಪರಿಣಾಮಗಳನ್ನು ಪ್ರತ್ಯಕ್ಷ ಕಂಡು ಹೌಹಾರುವಂತಾಯಿತು.

ಬೆಳಿಗ್ಗೆಯೇ ಕಡಲಿಗೆ ಹೋದ ಯಂತ್ರಚಾಲಿತ ಪರ್ಸಿಯನ್ ಮತ್ಸ್ಯನಾವೆಗಳು ಒಂದೊಂದಾಗಿ ಬಂದರಕ್ಕೆ ಹಿಂದಿರುಗಲಾರಂಭಿಸಿದವು. ವ್ಯಾಪಾರಿಗಳು, ದಲ್ಲಾಳಿಗಳು, ಮೀನಿನ ದರ್ಶನದಿಂದಲೇ ಸಂತಸಪಟ್ಟು ಮುತ್ತಿದರು, ವಿದೇಶಿ ವಿನಿಮಯಗಳಿಸುವ ಷಟ್ಲೆ (ಪ್ರಾನ್ಸ್) ಮೀನಿನ ರಾಶಿಯನ್ನು ಭಾರೀ ಕುಳಗಳು ಖರೀದಿಸಿದರು. ಹುಬ್ಬಳ್ಳಿ - ಧಾರವಾಡ, ಬೆಳಗಾಂವಗಳಿಗೆ ಮೀನು ಕಳಿಸುವ ಏಜಂಟರು ಟ್ರಕ್ ತುಂಬುವಷ್ಟು ಖರೀದಿಸಿದರು. ಉಳಿದದ್ದನ್ನು ಸೆರೆ ಅಂಗಡಿಯವರು, ಹೊಟೇಲಿನವರು, ಧನಿಕರು. ಸ್ಪರ್ಧೆಯಿಂದ ತಮ್ಮದನ್ನಾಗಿ ಮಾಡಿಕೊಂಡರು. ಮಧ್ಯಮವರ್ಗದವರು ಮರಿಮೀನುಗಳಿಂದಲೇ ತೃಪ್ತಿಪಟ್ಟರೆ ಬಡವರಪಾಲಿಗೆ ಉಳಿದದ್ದು ನಾರುವ ಕೊಳೆತ ಮೀನು ಮಾತ್ರ. ಊರ ಸಾಹುಕಾರರು ಬ್ಯಾಂಕಿನಿಂದ, ಸರಕಾರದಿಂದ ಸಾಲ, ಸಹಾಯ ಪಡೆದು, ಈ ನಾವೆಗಳ ಅಧಿಪತಿಗಳಾಗಿದ್ದಾರೆ. ಕೆಲಸಗಾರರಲ್ಲಿ ಹೆಚ್ಚಿನವರು ನೆರೆನಾಡುಗಳಿಂದ ಬಂದವರು. ಇದರಿಂದಾಗಿ ಸಾಂಪ್ರದಾಯಿಕವಾಗಿ ತಲೆಮಾರುಗಳಿಂದ ಮೀನುಗಾರಿಕೆಯಲ್ಲಿ ತೊಡಗಿದ ಸ್ಥಳೀಯ ಖಾರ್ವಿ, ಅಂಬಿಗರಿಗೆ ಬರಿ ಹೊಟ್ಟೆ. ಶತಕಗಳಿಂದ ತೀರ ಅಗ್ಗ ಬೆಲೆಯಲ್ಲಿ ಅಭ್ಯವಿದ್ದ ಒಳ್ಳೇ ಪೌಷ್ಟಿಕವಾಗಿದ್ದ ಮತ್ಸ್ಯಾಹಾರ ಸೇವಿಸುತ್ತ ಬಂದ ಕರಾವಳಿಯ ಜನಕ್ಕೆ ಇಂದು ಮೀನೂ ಇಲ್ಲ. ಪೌಷ್ಟಿಕಾಂಶವೂ ಇಲ್ಲವಾಗಿದೆ. ಅಲ್ಲದೇ ಈ ನವ್ಯ ನಾವಿಕರು ಭಾರಿ ಭಾರಿ ನಾಯಲೊನ್ ಬಲೆಗಳನ್ನು ಬೀಸಿ ಬೀಸಿ. ಕಡಲಿನ ಕಿರಿಯಾಳದ ಒಡಲನ್ನು ಬರಿದು ಮಾಡುವದರಿಂದ ಮತ್ಸ್ಯ ಸಂತತಿ -ಉತ್ಪತ್ತಿಗಳಲ್ಲಿ ಮಹಾ ಕೋಲಾಹಲ ಉಂಟಾಗಿದೆ. ಯಾವ ತಾರತಮ್ಯವಿಲ್ಲದೇ ಮೊಟ್ಟೆ-ಮರಿ, ಮೀನುಗಳೆಲ್ಲ ಅವುಗಳ ಆಹಾರದೊಂದಿಗೆ ನಾಶಮಾಡುತ್ತ ಹೊರಟರೆ ಮುಂಬರುವ ವರ್ಷಗಳಲ್ಲಿ ಮೀನಿನ ಬರ ಕಾಯಂ ಅಗಲಿಕ್ಕಿಲ್ಲವೇ ಎಂದು ವಿಚಾರಿಸಿದಾಗ, ನಾವು ಈ ವರ್ಷ ಬದುಕಿ ಉಳಿಯುವದು ಮುಖ್ಯ. ನಾವೆಗೆ ಹಾಕಿದ ಎಣ್ಣೆ (ಡೀಸೆಲ್)ಯ ಖರ್ಚಾದರೂ ಹುಟ್ಟಬೇಡವೇ? ಎಂದು ವ್ಯಾವಹಾರಿಕ (ಹಾರಿಕೆ) ಉತ್ತರ ಕೊಟ್ಟು ನೌಕೆಯ ಮಾಲಿಕ ಜಾರಿಕೊಂಡ. ಮುಂದಾಲೋಚನೆಯಿಲ್ಲದ ಈ ಸುಧಾರಿತ ಮೀನುಗಾರಿಕೆ ಕಂಡು ಮರುಗುವಂತಾಯಿತು.

ಐದೇ ನಿಮಿಷ

ಕೊರಡು ಕೊರೆಯುವ ಕಾರಖಾನೆಗಳಲ್ಲಿ ವಿದ್ಯುತ್ ಚಾಲಿತ ರಾಕ್ಷಸಾಕಾರದ ಗರಗಸಗಳು ಕ್ಷಣಾರ್ಧದಲ್ಲಿ ದೊಡ್ಡ ದೊಡ್ಡ ನಾಟುಗಳನ್ನು ಸೀಳಿ ಇಡುತ್ತಿದ್ದವು. ಪ್ರತಿ ನಾಟನ್ನು ನೀಡುವ

ಗಿಡವನ್ನು ಹುಟ್ಟಿಸಿ, ಮರವಾಗಿ ಬೆಳೆಯಿಸಿ ಪಕ್ವ ಮಾಡಲು ಭೂಮಾತೆಗೆ ನೂರರಿಂದ ನೂರಾ ಐವತ್ತು ವರ್ಷಗಳ ದೀರ್ಘಾವಧಿಯ ಕಾಲಾವಕಾಶಬೇಕು. ಮಾನವ ನಿರ್ಮಿತ ಗರಗಸಕ್ಕೆ ಅದನ್ನು ನುಚ್ಚುನೂರು ಮಾಡಲು ಐದೇ ನಿಮಿಷ ಸಾಕು. ಮೂರ್ಖ ಮಾನವ ತನ್ನ ಈ ಅಸಾಮಾನ್ಯ ಸಾಮರ್ಥ್ಯವನ್ನು ನೋಡಿ ನೋಡಿ ಹಿಗ್ಗುತ್ತಿದ್ದಿರಬೇಕು. ಆದರೆ ಭೂಮಾತೆ ಇಷ್ಟರಲ್ಲಿ ಮಾನವ ಜಾತಿಗೆ ಒಳ್ಳೇ ಬುದ್ಧಿ ಕಲಿಸಲಿದ್ದಾಳೆ! ಕಾಡನ್ನು ಒಂದೇ ಸಮ ಕಡಿದ ಒಂದೆರಡು ದಶಕಗಳಲ್ಲಿ ಅದೆಲ್ಲ ಬರಿದೋ ಬರಿದು ಆಗಿ ಮರಭೂಮಿಯಾಗಿ ಪರಿವರ್ತನೆಗೊಳ್ಳುವದಿಲ್ಲವೇ? ಹಿಂದೆ ಆಚಾರಿಗಳು ಕೈಕರಗಸದಿಂದ ಎರಡು ದಿನಕ್ಕೊಂದು ನಾಟು ಸೀಳಿದರೆ ಅದೇ ಮಹಾ ಸಾಧನೆಯಾಗುತ್ತಿತ್ತು. ಅವನ ಉದರ ನಿರ್ವಹಣೆಯೂ ಸಾಗುತ್ತಿತ್ತು. ಕಾಡು ಬೆಳೆಯುವ ಮತ್ತು ನಾಟು ಕೊರೆಯುವ ಸಮತೋಲ ಕಾಯುವಂತಾಗುತ್ತಿತ್ತು. ಆದರೆ ಇಂದು... ಸಕ್ಕರೆ, ಸೀಮೆಎಣ್ಣೆಗಳಂತೆ ಉರುವಲ ಕಟ್ಟಿಗೆಯನ್ನು ರೇಶನ್ ಕಾರ್ಡ್ ಮೇಲೆ ವಿತರಣೆ ಮಾಡುವ ಪರಿಸ್ಥಿತಿ ರಾಜ್ಯದ ಅರಣ್ಯ ಜಿಲ್ಲೆಗೆ ಒದಗಿದೆ. ಬಡಬಗ್ಗರಂತೂ ಉರಿಯ ಬಹುದಾದ ಪ್ರತಿಯೊಂದು ಗಿಡ-ಗಂಟೆ, ಕೊಂಬೆರೆಂಬೆ ಮರಗಳನ್ನು ಕಡಿದೊಯ್ಯುವದರಿಂದ ಫಲವತ್ತಾದ ಭೂಮಿ, ಉರಿಬಿಸಿಲು, ಜಡಿಮಳೆ, ಹರಿಯುವ ನೀರಿಗೆ ಆಹುತಿಯಾಗಿ ಭರದಿಂದ ನಿಸ್ಸತ್ವವಾಗಿ ಪರಿಣಮಿಸುತ್ತಿದೆ.

ಹಂಚಿನ ಕಾರಖಾನೆಯ ಅವಾರದಲ್ಲಿ ಉರುವಲ ಕಟ್ಟಿಗೆಯ ಬೆಟ್ಟವೇ ಎದ್ದಿತ್ತು. ಹಂಚಿನ ಭಟ್ಟಿಗಳಿಗೆ ವಿಪುಲವಾದ ಕಟ್ಟಿಗೆ ಬೇಕಾಗುವದರಿಂದ ಮತ್ತು ಅದರ ಪೂರೈಕೆ, ಅರಣ್ಯಾಧಿಕಾರಿಗಳ ಮರ್ಜಿಯನ್ನು ಅವಲಂಬಿಸಿರುವದರಿಂದ ಅವರು ಪ್ರಸನ್ನರಾದಾಗೊಮ್ಮೆ ಅದಷ್ಟು ಹೆಚ್ಚಿಗೆ ದಾಸ್ತಾನು ಮಾಡಿದರೆ ಕಾರಖಾನೆಗಳು ನಿರಾತಂಕವಾಗಿ ನಡೆಯಲು ಸಾಧ್ಯವೆಂದು ಕಾರಖಾನೆಯ ಅಧಿಕಾರಿಗಳು ವಿವರಿಸಿದರು. ಕೊರಡನ್ನು ಉರಿಸಿ ಕೆಲವರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಟ್ಟರೂ, ಅದರೊಂದಿಗೆ ಆರೋಗ್ಯ ಕೆಡಿಸುವ ಸಂಚಕಾರ, ತಾನಾಗಿ ನಿರ್ಮಿತವಾಗುವದೆಂಬುದನ್ನು ಬಹಳ ಜನ ತಿಳಿದು ಕೊಂಡಂತೆ ಇಲ್ಲ. ಸದಾಕಾಲವೂ ಕಾರಖಾನೆ ಹೊಗೆ ಕಾರುತ್ತಲೇ ಇರುವದರಿಂದ ಶುಭ್ರವಾದ ಪರಿಸರ ಕಲುಷಿತವಾಗಿದೆ. ಇದರ ಜೊತೆಗೆ ಕೊಳಚೆ ನೀರನ್ನು ನೇರವಾಗಿ ನದಿಯಲ್ಲಿ ಹರಿಬಿಟ್ಟಿದ್ದರಿಂದ ಅಲ್ಲಿಯ ಜಲ ಜೀವಿಗಳು ಹರಿದಾರಿ ದೂರ ಪ್ರಯಾಣ ಮಾಡಿದವು. ನೀರಿನಲ್ಲಿ ಹೆಚ್ಚೆಚ್ಚು ಪ್ರಮಾಣದ ರಾಸಾಯನಿಕಗಳು ಸೇರಿಕೊಂಡಂತೆ ಜಲಜೀವಿಗಳ ಸಂಖ್ಯೆ ಕಡಿಮೆಯಾಗುವದು ಸರ್ವವಿದಿತ. ಆದರೂ ಮಾನವ ಜನಾಂಗದ ಸರ್ವತೋಮುಖ ಏಳ್ಗೆಗೆ ಇವೆಲ್ಲ ಮಾಡದೇ ಬೇರೆ ಮಾರ್ಗವಿಲ್ಲವೆಂಬ ತತ್ವಜ್ಞಾನ ಅಲ್ಲಿ-ಇಲ್ಲಿ ಕೇಳಬರುತ್ತದೆ.

ಕಲಿಯದ ಪಾಠ

ನಮ್ಮೂರಿನ ನದಿಯ ಮೇಲುಗಡೆ ವಿದ್ಯುತ್ ಉತ್ಪಾದನೆಗೆ ಭಾರೀ ಅಣೆಕಟ್ಟೊಂದನ್ನು ಕಟ್ಟಿದ್ದರಿಂದ ನೀರಿನ ಪ್ರವಾಹ ಕಡಿಮೆಯಾಗಿ ಕಡಲಿನಲ್ಲಿ ಸೇರುವ ಮರಳು ನದಿಯ ತಳಕ್ಕೇ

ಸಂಚಯವಾಗುತ್ತಿದೆ. ಇದರಿಂದ ನದಿಯ ಆಳ ಕಡಿಮೆಯಾಗಿ ಹತ್ತಾರು ನಡುಗಡ್ಡೆಗಳು ತಲೆ ಎತ್ತಿ ನಿಂತಿವೆ. ಮುಂಬಯಿಯನ್ನು ಮಂಗಳೂರಿಗೆ ಜೋಡಿಸುವದಕ್ಕೆ ನದಿಗೆ ಭಾರೀ ಸೇತುವೆಯೊಂದನ್ನು ಕಟ್ಟಿದ್ದರಿಂದ ಅದನ್ನು ಹೊತ್ತು ನಿಂತ ಕಂಬಗಳೂ ಮಳಲಿನ ಸಂಚಯಕ್ಕೆ ಸಹಾಯ ಮಾಡಿವೆ. ಇವೆಲ್ಲದರ ಪರಿಣಾಮವಾಗಿ ಭಾರಿ ಮಳೆ ಬಿದ್ದಾಗ ಇಲ್ಲವೇ ಆಣೆಕಟ್ಟಿನಿಂದ ನೀರು ಬಿಟ್ಟಾಗ, ಅದು ನೇರ ಕಡಲನ್ನು ಸೇರುವದರ ಬದಲಾಗಿ ಇಕ್ಕೆಲದ ಹಳ್ಳಿಗಳನ್ನು ಕೊಚ್ಚಿಕೊಂಡು ಹೋಗಿ ಬಿಡುತ್ತದೆ. ಎರಡು ವರ್ಷಗಳ ಹಿಂದೆ ಇಂಥ ಅನಾಹುತ ಜರುಗಿದರೂ ಇದರಿಂದ ಜನರಾಗಲೀ ಸರಕಾರವಾಗಲೀ ಯಾವ ಪಾಠವನ್ನು ಕಲಿತಂತೆ ಇಲ್ಲ. ಆದರೆ ಇದನ್ನೇ ನೆಪಮಾಡಿ ಅಧಿಕಾರಿಗಳು, ರಾಜ ಕಾರಣಿಗಳು ತಮ್ಮ ಜೇಬು ತುಂಬಿಕೊಳ್ಳಲು ಮರೆಯಲಿಲ್ಲ. ಮುಂಬರುವ ದಿನಗಳಲ್ಲಿ ಇಂಥ ಅನಾಹುತಗಳು ಮೇಲಿಂದ ಮೇಲೆ ಸಂಭವಿಸಿದರೆ ಯಾರೂ ಸೋಜಿಗ ಪಡಬೇಕಾದ್ದಿಲ್ಲ.

ಹದಿನೇಳನೇ ಶತಮಾನದಲ್ಲಿ ನಮ್ಮೂರಿಗೆ ಬಂದ ಇಟಾಲಿಯ ಪ್ರವಾಸಿ ಪೆಟ್ರೊ ಡೆಲ್ಲಾವಾಲೆ ಈ ನದಿ ಗುಂಟ ನಾವೆಯಲ್ಲಿ ತೇಲಿದ ಪ್ರವಾಸ ಅತ್ಯಂತ ಆಹ್ಲಾದ ಕರವಾಗಿತ್ತು ಎಂದು ಬರೆದಿಟ್ಟಿದ್ದಾನೆ. ಕೇವಲ ಮೂರು ದಶಕಗಳ ಹಿಂದೆ ಈ ನದಿಯ ಸೌಂದರ್ಯ ಅದೇ ರೀತಿ ಅಚ್ಚಳಿಯದೇ ಉಳಿದಿತ್ತು. ಆದರೆ ಇಂದು? .... ತೆರೆಗಳ ಮೇಲೆ ಲೀಲಾಜಾಲವಾಗಿ ತೇಲುವ ನಾವೆಗಳಾಗಲಿ, ಅವನ್ನು ತೇಲಿಸುವ ನಾವಿಕರಾಗಲಿ ಹೇಳ ಹೆಸರಿಲ್ಲದೇ ಮಾಯವಾಗಿದ್ದಾರೆ. ನದಿ ತೀರದ ಊರುಗಳಿಗೆಲ್ಲ ನಾವೆಗಳ ಬದಲಾಗಿ ಬಸ್-ಸಾರಿಗೆ ಏರ್ಪಡಿಸಲಾಗಿದೆ, ಎಂದು ಊರಿನ ಪ್ರಗತಿಯಲ್ಲಿ ಹೆಮ್ಮೆ ಪಡುತ್ತಿದ್ದ ಪೌರಮುಖ್ಯ ವಿವರಿಸಿದ. ಅಂತಹ ವಾಹನವೊಂದನ್ನು ಏರಿದಾಗ ಹೊರಡದಿದ್ದರೇ ಚೆನ್ನಾಗಿರುತಿತ್ತು ಅನಿಸಿತು. ಏರು ಬಂದಾಗ ಬಸ್ಸಿಗೆ ಏದುಸಿರು ಪ್ರಾರಂಭವಾಗುತ್ತಿತ್ತಾದ್ದರಿಂದ ಪ್ರವಾಸಿಗರು ಇಳಿದು, ಇಳಿಜಾರು ಬರುವಲ್ಲಿಗೆ ನಡೆದು ಹೋಗುತ್ತಿದ್ದರು. ತೀರ ಇಳಿಜಾರಿನಲ್ಲಿ ವಾಹನದ ತಡೆಯಂತ್ರ ನಿಯಂತ್ರಣದ ಹೊರಗೆ ಹೋಗಿ ಅಪಘಾತ ಸಂಭವಿಸುವ ಸಾಧ್ಯತೆ ಇದ್ದುದರಿಂದ, ಆಗಲೂ ಪ್ರಯಾಣಿಕರು ಇಳಿಯಬೇಕಂತೆ, ಸಾಲದ್ದಕ್ಕೆ ಹೊರರಸ್ತೆ ರಚಿಸಿದಲ್ಲೆಲ್ಲ ರಾಜಕೀಯ ವರ್ಚಸ್ಸು ಇದ್ದವರು ಹಣ್ಣು ಹಂಪಲು, ಹೂದೋಟ, ಕಾಯಿಪಲ್ಯ, ಔಷಧಿ-ಸಸ್ಯಗಳನ್ನು ಬೆಳೆಸುವ ನೆಪದಲ್ಲಿ ಸರಕಾರದಿಂದ ಭೂಮಿಯನ್ನು ಪಡೆದು ಮಾಡಿದ ಏಕಮೇವ ಕೆಲಸವೆಂದರೆ ಬೆಲೆಬಾಳುವ ಮರಗಳನ್ನು ಕಡಿದು ಜೇಬು ತುಂಬಿಸಿಕೊಂಡಿದ್ದು, ಇನ್ನೂ ಕೆಲವರು ತಾವು ಹಿಂದುಳಿದವರೆಂಬ ತಳಹದಿಯ ಮೇಲೆಯೇ ಅರಣ್ಯ ಖಾತೆಯ ಭೂಮಿಯನ್ನು ಆಕ್ರಮಿಸಿ ಕಟ್ಟಡಗಳನ್ನು ಕಟ್ಟಿದರೂ, ಅವರ ವಿರುದ್ಧ ಸರಕಾರ, ಯಾವ ಕ್ರಮವನ್ನೂ ಕೈಕೊಳ್ಳದ್ದರಿಂದ, ಇನ್ನೂ ಹೆಚ್ಚೆಚ್ಚು ಅತಿಕ್ರಮಣಕ್ಕೆ ಅವಕಾಶವಾಗಿದೆ. ಕೇವಲ ಓಟುಗಳಿಗಾಗಿ ಈ ರೀತಿ ಅರಣ್ಯ ಧ್ವಂಸ ನಡೆಯ ಗೊಡಬಹುದೇ?

ಕಳವಳ

ವಿವಿಧ ಅಭಿವೃದ್ಧಿ ಚಟುವಟಿಕೆಗಳಿಂದ ಜನರ ಆದಾಯ ಹೆಚ್ಚಾಗಿದ್ದರಿಂದ, ಅವರು ತಿಂದುಂಡು ಸುಖವಾಗಿರುವ ಬದಲಾಗಿ ಅಧೋಗತಿಗೆ ಇಳಿದದ್ದನ್ನು ಕಣ್ಣಾರೆ ಕಂಡಾಗ ತೀವ್ರ ಕಳವಳವಾಯಿತು. ಹಿಂದೆ ಹೊಟೇಲಿಗೆ ಹೋಗುವದು ಹಿತವಲ್ಲ ಎಂದು ನಂಬಿಗೆಯಿದ್ದ ಊರಿನಲ್ಲಿ ಇಂದು ಹತ್ತಾರು ಸೆರೆ - ಸೇಂದಿಗಳ ಅಂಗಡಿಗಳು ಊರ್ಜಿತಾವಸ್ಥೆಯಲ್ಲಿ ನಡೆಯುತ್ತಿವೆ. ಚಹಾ ಕಾಫಿಗಳೇ ಮಾದಕ ಪೇಯಗಳೆಂದು ನಂಬಿ ಕಷಾಯ ಸೇವಿಸಿ ಬೆಳೆದವರ ಮಕ್ಕಳೇ ಬಿಯರ್-ಬ್ರಾಂದಿಗಳು ಸಾಮಾನ್ಯ ಪೇಯಗಳೆಂದು ಸೇವಿಸುತ್ತಿದ್ದಾರೆ. ಹಿಂದೆ ಊರಿನಲ್ಲಿ ಮರ್ಯಾದೆಯಿಂದ ಬಾಳಿದ ಕಲಾವಂತ ಜನರಿಗೆ ಉದರ ನಿರ್ವಹಣೆ ಕಷ್ಟವಾಗಿ ಮುಂಬೈ ಸೇರುವಂತೆ ಆದರೆ ಇಂದು ಆಧುನಿಕ ವೇಶ್ಯಾವಾಟಿಕೆಗಳು ಊರಲ್ಲೇ ರಾಜಾರೋಷ ನಡೆಯುತ್ತಿವೆ. ಕೃಷಿ, ತೋಟಗಾರಿಕೆ ನಡೆಸಿ ನೆಮ್ಮದಿಯ ಬಾಳ್ವೆ ಮಾಡುತ್ತಿದ್ದ ಹಳ್ಳಿಗರು, ಆಧುನಿಕತೆಗೆ ಮಾರುಹೋಗಿ, ಸಮೀಪದ ನಗರಗಳಿಗೆ ಆಗಾಗ ಹೋಗಿ ಹಣ ಖಾಲಿಮಾಡಿಕೊಂಡು, ಕೃಷಿಯನ್ನು ಅಲಕ್ಷಿಸುವಷ್ಟು ಪ್ರಗತಿಪಥದಲ್ಲಿದ್ದಾರೆ!

ಇಂದಿನ ನಮ್ಮೂರನ್ನು ಅಂದಿನದಕ್ಕೆ ಹೆಚ್ಚು ಹೆಚ್ಚು ಹೋಲಿಸಿದಾಗ, ಪ್ರಗತಿ ಸಾಧಿಸ ಹೋಗಿ ಅಧೋಗತಿಯನ್ನು ಆಹ್ವಾನಿಸಿದ್ದಾರೆಂದು ಅರಿತು ತೀವ್ರ ಕಳವಳವಾಯಿತು. ಒಂದೆರಡು ತಿಂಗಳು ನಿಸರ್ಗಮಡಿಲಲ್ಲಿ ಹಾಯಾಗಿ ಇರಬಯಸಿದವನು ಇದನ್ನೆಲ್ಲ ಸಹಿಸಲಿಕ್ಕಾಗದೇ ಒಂದೇ ವಾರದಲ್ಲಿ ಹಿಂದಿರುಗಿ ಹೊರಟಾಗ, "ಬೆಂಗಳೂರಿನ ಸಾಹೇಬರಿಗೆ ಇಲ್ಲಿಯ ಬಾರುಗಳು, ರಂಭೆಯರು ತೀರಾ ಸಪ್ಪಗೆ ಅನಿಸಿರಬೇಕು, ಬೇಗ ಕಂಬಿ ಕೀಳುತ್ತಿದ್ದಾರೆ......" ಎಂದು ಎಲ್ಲರಿಗೂ ಕೇಳುವಂತೆ ಕೊಂಕು ನುಡಿಯಾಡಿ ಯುವಕನೊಬ್ಬ ನಾಲಿಗೆ ತೀಟೆ ತೀರಿಸಿಕೊಂಡ.

●

೧೯. ದೂರದ ಪ್ರಯಾಣ

ನಾಲ್ಕು ದಿನಗಳ ದೂರದ ಪ್ರವಾಸವಾದ್ದರಿಂದ ಒಂದು ವಾರದಿಂದಲೇ ಅದರ ಬಗ್ಗೆ ಯೋಚಿಸಬೇಕಾಯಿತು. ಹೆಂಗೆಳೆಯರು, ಹುಡುಗರು, ಹೊರೆ ಸಾಮಾನುಗಳು, ಮೂರರ ಯೋಚನೆಯೂ ನನಗಿರಲಿಲ್ಲ. ಸ್ವತಃ ಹೊರಬಹುದಾದಷ್ಟು ಸಾಮಾನುಗಳನ್ನು ಕಟ್ಟಿದೆ. ಅದರಲ್ಲಿ ಟೈಪರಾಯಿಟರ ಸೇರ್ಪಡೆಯಾದ್ದರಿಂದ ಬಟ್ಟೆಬರೆಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಸೇರಿಸಬೇಕಾಯಿತು. ಹೊನ್ನಾವರದಿಂದ ನಸುಕಿನ ಐದು ಗಂಟೆಗೆ ಹುಬ್ಬಳ್ಳಿ ಮೋಟಾರು ಹತ್ತಿದೆ. ಮೊದಲು ಕ್ಲೀನರನಾಗಿ ಈಗ ಡ್ರಾಯವರನಾದವ, ತನ್ನ ಸಾಹಸಗಳ ಬಗ್ಗೆ ಹೇಳುತ್ತಿರುವಾಗ ಹಳದೀಪುರ ಬಂದಿತು. ಮದುವೆಗೆ ಹೊರಟ ದೊಡ್ಡ ಗುಂಪೊಂದು ಬಸ್ಸು ಏರಿತು. ಎಲ್ಲ ಮಕ್ಕಳ ಲೆಕ್ಕ ಹತ್ತದ ತಂದೆಯೊಬ್ಬ "ಲಕ್ಷ್ಮಿ ಕಾಣುತ್ತಿಲ್ಲ. ಈಶ್ವರ ಎಲ್ಲಿ?" ಎಂದು ಕೂಗುತ್ತ ತಡ ಮಾಡುತ್ತಿದ್ದುದರಿಂದ ಡ್ರಾಯವರನು "ಈಶ್ವರನು ಪಾರ್ವತಿಯನ್ನು ಹುಡುಕಿಕೊಂಡು ಹೋಗಿರಬೇಕು" ಎಂದ. ಸರಿ, ಪಂಗಡದವರು ವಾಗ್ಯುದ್ಧಕ್ಕೆ ಇಳಿದರು. ಬಸ್ಸು ಅರ್ಧಗಂಟೆ ತಡವಾಗಿಯೇ ಕುಮಟಾ ಸೇರಿತು. ಅಲ್ಲಿನ ಎರಡೆರಡು ಬಸ್ ಸ್ಟ್ಯಾಂಡುಗಳ ಮೇಲೆ ಅರ್ಧರ್ಧ ಗಂಟೆ ಕಳೆಯಿತು. ಸ್ಟ್ಯಾಂಡಿನ ಮೇಲೆ ಹುಡುಗನೊಬ್ಬ ಸೋಡಾ ಶರಬತ್ ಬೇಕೇ ಎಂದು ವಿಚಾರಿಸಿದ. ಈ ಮುಂಜಾವಿನಲ್ಲಿ ತಂಪಾದ ಪಾನೀಯ ಕುಡಿಯುತ್ತಾರೆಯೇ ಎಂದು ಕೇಳಿದಾಗ ನಕ್ಕು ಚಹಾ-ಕಾಫಿ ತರಲೇ ಎಂದು ವಿಚಾರಿಸಿ ಭಟ್ಟರ ಹಾಟೇಲಿನಿಂದ ಚಹಾ ತಂದುಕೊಟ್ಟು ಹತ್ತುಪೈಸೆ ಗಿಟ್ಟಿಸಿಯೇ ಬಿಟ್ಟ. ಅಲ್ಲದೇ "ನನ್ನ ತಮ್ಮ ಸಿರ್ಸಿ ಬಸ್‌ಸ್ಟ್ಯಾಂಡಿನಲ್ಲಿ ಮುಸುಂಬಿ ಮಾರುತ್ತಾನೆ. ಅವನಿಗೆ ಕೂಡಲೇ ನೂರು ಲಿಂಬೇಹಣ್ಣು ಕಳಿಸಲು ಹೇಳಿದ್ದೇನೆ ಎಂದು ಹೇಳಿ" ಎಂದು ತಂತಿಯ ರೊಕ್ಕವನ್ನು ಉಳಿಸಿಕೊಂಡ. ಯಾವುದೊ ಪುಸ್ತಕದ ವ್ಯಾಪಾರಿ, ಹುಬ್ಬಳ್ಳಿಗೆ ಕಳಿಸುವ ಚೀಟಿಯನ್ನು ಡ್ರಾಯವರನಿಗಿತ್ತ. ಮುದಿಯನೊಬ್ಬ ಮಗಳಿಗೆ ಮುಟ್ಟಿಸೆಂದು ಹುರಿದ ಮಿನಿನ ಪೊಟ್ಟಣವನ್ನೂ ನಾಲ್ಕಾಣೆಯನ್ನೂ ಡ್ರಾಯವರನ ಕೈಯಲ್ಲಿ ಹಾಕಿದ. ಕೊನೆಗೊಮ್ಮೆ ಮೋಟಾರು ಹೊರಟು ಸ್ವಲ್ಪ ಓಡುವುದ ರೊಳಗೆ ಮಣಕಿ ತಾರಿ ಬಂದಿತು. ಪ್ರಯಾಣಿಕರೆಲ್ಲ ಇಳಿದು, ಬಸ್ಸು 'ಜಂಗಲ್' ಹತ್ತುವದರಲ್ಲಿದ್ದಾಗ ನಾವಿಕನು ಕುಹೂಽಽ ಹಾಕಿ "ಡ್ರಾಯವರ ಸಾಬ್ರೆ, ಭಾರೀ ಇಳಿತ, ನೀರೇ ಇಲ್ಲ. ಮಿರ್ಜಾನ ಮೇಲಿಂದ ಹೋಗಿ" ಎಂದು ಬಿಟ್ಟ. ತಿರುಗಿ ಮೋಟಾರು ಏರಿ ಮಿರ್ಜಾನ ಮಾರ್ಗವಾಗಿ ಹೊರಟೆವು. ದಾರಿಯಲ್ಲಿ ಅರ್ಧಕ್ಕೆ ನಿಂತ ಕೆನರಾ ಕಾಲೇಜಿನ ಕಟ್ಟಡ ತನ್ನ ಅಸಹಾಯ ಸ್ಥಿತಿಯನ್ನು ನಿವೇದಿಸಿಕೊಳ್ಳುತ್ತಿದ್ದಂತೆ ಭಾಸವಾಯಿತು. ಹೆಗಡೆಯ ಇಕ್ಕಟ್ಟಾದ ರಸ್ತೆಯಲ್ಲಿ ವಾಹನ ಓಡುವಾಗ ಹಳ್ಳಿಗರು ಅತ್ತಿತ್ತ ಓಡಿದರು. ಪ್ರಮಾಣಿಕರು ಇಳಿದಾಗ ಎಳೆನೀರು ಮಾರುವವರು, ಬಾಳೆಹಣ್ಣಿನವರು ಕೈತುಂಬ ಸಂಪಾದಿಸಿದರು. ಘಟ್ಟದ ಮೇಲಿನ ಪ್ರಯಾಣಿಕನೊಬ್ಬ ಆಗತಾನೇ ಖರೀದಿಸಿದ ಮೀನನ್ನು ಸೀಟಿನ ಕೆಳಗೆ ತಂದಿಟ್ಟ.

ಮೋಟಾರು ಮತ್ತೆ ಜಂಗಲ್ (ಎರಡು ನಾವೆಗಳ ಮೇಲೆ ಹಲಗೆ ಜೋಡಿಸಿದ್ದು) ಏರಿತು. ಗುತ್ತಿಗೆದಾರ, ಪ್ರತಿಯೊಬ್ಬ ಪ್ರಯಾಣಿಕನಿಂದ ಮೂರ ಪೈಸೆ ವಸೂಲ ಮಾಡಿ ಸೀಟಿ ಬಾರಿಸಿದಾಗಲೇ ಜಂಗಲಿನ ಹಗ್ಗ ಬಿಚ್ಚಿ ನದಿಯಲ್ಲಿ ತೇಲಿಸಿದರು, ತಲೆಗೊಂದು ಮಾಸಿದ ರುಮಾಲು, ಸೊಂಟಕ್ಕೊಂದು ಅಡ್ಡಕಚ್ಚೆ ಉಟ್ಟ ನಾಲ್ಕು ನಾವಿಕರು "ಓ ಬೇಲೇಸೋ, ಓ ಮಾಲಿ ಲೇಸೋ"SS ಹಾಡುತ್ತ ಬಿದಿರಿನ ಉದ್ದ ಜಲ್ಲು ಹಾಕಿದಾಗ ಜಂಗಲ್ ಮೇಲೆ ನಿಂತ ನಾವೆಲ್ಲ ನಿಧಾನವಾಗಿ ಮುಂದುವರಿಯುತ್ತಿದ್ದೆವು. ಪೂರ್ವ ದಿಕ್ಕಿನಲ್ಲಿ ಸೂರ್ಯನು ಸಹ್ಯಾದ್ರಿ ಶ್ರೇಣಿಗಳನ್ನು ಏರಿ ಮೇಲಕ್ಕೆ ಬರುತ್ತಿದ್ದ. ಎರಡೂ ದಂಡೆಗಳಲ್ಲಿ ಹುಲುಸಾಗಿ ಬೆಳೆದು ನಿಂತ ತೆಂಗುಗಳು ನದಿಯಲ್ಲಿ ತಮ್ಮ ನೆಳಲು ನೋಡಿಕೊಂಡು ನಾಚುತ್ತ ನಿಂತಿದ್ದವು. ಸಣ್ಣ ನಾವೆಗಳಲ್ಲಿ ಮಿನುಗಾರರು ಕುಳಿತು ಮಿನು ಹಿಡಿಯುತ್ತಿದ್ದರು. ಒಂದು ನಾವೆಯಿಂದ ಮಂಗಳೂರು ಹಂಚು ಇಳಿಸಿದರೆ ಇನ್ನೊಂದರಿಂದ ತೆಂಗಿನಕಾಯಿ ಇಳಿಸುತ್ತಿದ್ದರು. ತೆಂಗಿನಕಾಯ ಸಿಪ್ಪೆಗಳಿಂದ ಕತ್ತ ಮಾಡುವ ಸಲುವಾಗಿ ಒಂದಡೆ ಅವನ್ನು ಹೂಳಿಟ್ಟಿದ್ದರಿಂದ ದುರ್ಗಂಧವಾಗಿತ್ತು. ಆಚೆಯ ದಡ ಬೇಗ ಬಂದಂತೆ ಅನಿಸಿತು. ಜಂಗಲಿನಿಂದ ಇಳಿಯುತ್ತಿದ್ದಂತೆ "ಚಾ ಕುಡುಕೆ ಏನಾರು ಕಾಸುಕೊಡ್ರಿ" ಎಂದು ನಾವಿಕರು ತಲಾ ಐದೈದು ಪೈಸೆ ವಸೂಲು ಮಾಡಿಯೇಬಿಟ್ಟರು.

ಹುಬ್ಬಳ್ಳಿ ಗಾಡಿ ಮಿರ್ಜಾನಕ್ಕೆ ಬಂದದ್ದರಿಂದ ಹಳ್ಳಿಗರು ಸೋಜಿಗದಿಂದ ನೋಡಿದರು. ದೀವಗಿ ತಾರಿಯಲ್ಲಿ ನೀರು ಇರಲಿಕ್ಕಿವೆಂದುಕೊಂಡರು. ಎಡದಿಕ್ಕಿನಲ್ಲಿ ಎತ್ತರವಾಗಿ ಪಾಳುಬಿದ್ದ ಮಿರ್ಜಾನ ಕೋಟೆ ಇತಿಹಾಸವನ್ನು ನೆನಪಿಗೆ ತಂದುಕೊಟ್ಟಿತು. ಸ್ವಲ್ಪದೂರ ಹೋದನಂತರ ಒಳದಾರಿಯಿಂದ ಸಿರ್ಸಿಯ ಹೆದ್ದಾರಿಯನ್ನು ಸೇರಿ ಕೊಂಡಿತು. ಸಹ್ಯಾದ್ರಿಯ ಗಿರಿಕಂದರಗಳು ಕಣ್ಣಿಗೆ ಹಬ್ಬವನ್ನುಂಟುಮಾಡಿದರೂ ಘಟ್ಟದ ಏರು ಏರಲಾರದೇ ಬಸ್ಸು ಒದ್ದಾಡುತ್ತ ಹೊರಟಿತ್ತು. ವಿಪುಲ ಮಳೆ, ಆರ್ದ್ರ ಹವೆಗಳಿಂದ ಗಿಡಮರಗಳು ಸೊಕ್ಕಿನಿಂದ ಬೆಳೆದಿದ್ದವು. ಎಲ್ಲಿ ಕಣ್ಣು ಹಾಯಿಸಿದರೂ ಮೈಲುಗಟ್ಟಲೆ ಚಾಚಿದ ದಟ್ಟ ಕಾಡು. ಈ ಮರಗಳಲ್ಲಿ ಉಪಯೋಗದ್ದು ಒಂದು ಇದ್ದರೆ ಉಪಯೋಗವಿಲ್ಲದವು ಹತ್ತು ಇದ್ದವು. ನಿಸರ್ಗಮಾತೆ ನಮ್ಮ ಜಿಲ್ಲೆ, ರಾಜ್ಯ, ದೇಶಗಳಿಗೆ ಇಷ್ಟೆಲ್ಲ ಬನಸಿರಿಯನ್ನು ಮುಕ್ತಹಸ್ತದಿಂದ ಕೊಟ್ಟಿದ್ದಾಳೆ. ಆದರೆ ನಾವು ಇದನ್ನು ಬೆಳೆಸುವುದರ ಸಲುವಾಗಿ, ಉಳಿಸುವುದರ ಸಲುವಾಗಿ ಏನು ಮಾಡಿದ್ದೇವೆ? ಅರಣ್ಯಗಳನ್ನು ಧನಿಕ ಕಂಟ್ರಾಕ್ಟರುಗಳಿಗೆ ಕೊಟ್ಟು ಸರಕಾರ ಬೊಕ್ಕಸ ತುಂಬಿಕೊಳ್ಳುವುದರಲ್ಲಿದ್ದರೆ, ಅರಣ್ಯದ ಅಧಿಕಾರಿಗಳು ಈ ಧನಿಕರಿಂದ ತಾವೆಷ್ಟು ಸೆಳೆದುಕೊಳ್ಳಬಹುದೆಂಬ ಹವಣಿಕೆಯಲ್ಲಿದ್ದಾರೆ. ದೇಶದ ಸಂಪತ್ತು ತೀವ್ರ ನಾಶವಾಗಹತ್ತಿದೆ. ಜಿಲ್ಲೆಯಲ್ಲಿ ಈಗಿದ್ದ ವಸತಿಗಿಂತ ಮೂರು ಪಟ್ಟು ಜನರಿಗೆ ಅನ್ನ, ಆಚ್ಛಾದನ. ಉದ್ಯೋಗ ಒದಗಿಸುವಷ್ಟು ಅವಕಾಶ ಇಲ್ಲಿಯ ಅರಣ್ಯ ಪ್ರದೇಶದಲ್ಲಿದೆ. ಇಷ್ಟೆಲ್ಲ ಅರಣ್ಯ ಸಂಪತ್ತು ಇದ್ದೂ ಅಮೇರಿಕೆಯ ಹೆಸರುವಾಸಿಯಾದ ಅರಣ್ಯಶಾಸ್ತ್ರದ ಕಾಲೇಜಿನಲ್ಲಿ ಉಚ್ಚ ತರಬೇತಿ ಮತ್ತು ಡಿಗ್ರಿಗಳನ್ನು ಪಡೆದ ಒಬ್ಬನನ್ನು ಸಾಕುವ, ಅವನ ತರಬೇತಿಯ ಲಾಭ ಪಡೆಯುವ ಅವಕಾಶ ನಮ್ಮ ಜಿಲ್ಲೆಗೆ ಇಲ್ಲದೇ ಹೋಯಿತೆ? ನಮ್ಮ ಜನ ಹಾಗೂ ಸರಕಾರ ಎಂದಿಗೆ ಕಣ್ಣು ತೆರೆದಾರು?

ಎಂದು ಬಿಸಿಯುಸಿರು ಬಿಡುವಂತಾಯಿತು. ಈ ಅರಣ್ಯಶಾಸ್ತ್ರ ತರಬೇತಿಯನ್ನು ರಾಜಸ್ಥಾನದ ಮರುಭೂಮಿಯಲ್ಲಿ ಮರೆಯುವಂತಾಗಲು ಭಾರತ ಸರಕಾರ ಉದಯಪುರಕ್ಕೆ ನನ್ನನ್ನು ಕಳಿಸಿತ್ತು!

ರಾಗಿ ಹೊಸಾಳಿಯ ಚಹದ ಅಂಗಡಿಯೆದುರು ಮೋಟಾರು ನಿಂತಿತು. ನಾವು ಪ್ರಯಾಣ ಮಾಡಿದ್ದು ಇಪ್ಪತ್ತೇ ಮೈಲುಗಳಾದರೂ ಇನ್ನೂರು ಮೈಲು ಓಡಿ ಬಂದವರಷ್ಟು ದಣಿವಾಗಿತ್ತು. ಎಲ್ಲರೂ ಇಳಿದು ಅಕ್ಕಿಯ ದೋಸೆ, ಅವಲಕ್ಕಿಗಳನ್ನು ಜಗಿದು, ಚಹಾ, ಕಷಾಯಗಳನ್ನು ಕುಡಿದು, ನಮ್ಮ ಜಾಗಾಕ್ಕೆ ಮರಳಿದೆವು. ನೀರಿನ ಒರತೆಯಿದ್ದಲ್ಲಿ, ಪರ್ವತಗಳ ಆಶ್ರಯದಲ್ಲಿ, ಅಲ್ಲಲ್ಲಿ ಹೆಗ್ಡೆಯವರ ಅಡಿಕೆ ತೋಟಗಳು ಕಂಡುಬರುತ್ತಿದ್ದವು. ಜಾನಮನೆಯ ಹತ್ತಿರ ಯಾವುದೋ ಜಾತ್ರೆಯಿರಬೇಕು. ಹಳ್ಳಿಗರು ಬಣ್ಣ ಬಣ್ಣದ ಬಟ್ಟೆ ಧರಿಸಿ, ಹೆಂಗಸರು ತಲೆತುಂಬ ಹೂಮುಡಿದು ಜಾತ್ರೆಗೆ ಹೊರಟಿದ್ದರು. ಅಡಿಕೆ, ಬಾಳೆಕಾಯಿ, ಅಕ್ಕಿಗಳನ್ನು ತುಂಬಿಕೊಂಡು, ಚಕ್ಕಡಿ, ಲಾರಿಗಳು ಸಿರ್ಸಿಯ ಸಂತೆಗೆ ಹೊರಟಿದ್ದವು. ಸಿರ್ಸಿ ನಿಲ್ದಾಣದಲ್ಲಿ "ಕಿಸೆ ಕಳ್ಳರಿದ್ದಾರೆ, ಎಚ್ಚರಿಕೆ" ಎಂಬ ಬೋರ್ಡಿನೆದುರಿಗೇ ಅಡಿಕೆ ಮಾರಿ ಬಂದ ನೂರಾರು ರೂಪಾಯಿ ಕಳೆದುಕೊಂಡ ಒಬ್ಬ ಹೆಗಡೆರು ಬೊಬ್ಬೆಯಿಡಲಾರಂಭಿಸಿದರು!

ಸಿರ್ಸಿಯ ನಂತರ ಗುಡ್ಡಗಳ ಸಾಲು ಅಷ್ಟಾಗಿ ಇಲ್ಲದ್ದರಿಂದ ಬಸ್ಸಿನ ವೇಗ ತುಸು ಹೆಚ್ಚಿತು. ಮುಂಡಗೋಡದಲ್ಲಿ ಚಹಾಕ್ಕೆ ಮತ್ತೆ ಬಸ್ಸು ನಿಂತಿತು. ಇಲ್ಲಿ ಕಾರವಾರಿ ಸಂಕ್ರರು ಮತ್ತು ಘಟ್ಟದ ಬಸಲಿಂಗರ ಸಮ್ಮಿಶ್ರ ಜನವಸತಿ ನೋಡಬಹುದು. ಹಾಲು ಮಾರುವ ಮರಾಠಿಗರ ಚಿತ್ರವಿಚಿತ್ರ ಉಡಿಗೆ, ಚಿತ್ರಕಾರನಿಗೆ ಆಹ್ವಾನವಾಗಿತ್ತು. ಗಂಡಸರು ಕಚ್ಚೆಯುಟ್ಟು ನಾಲ್ಕಾರು ಜೇಬುಗಳ ಜಾಕೀಟು ಧರಿಸಿ ಕಿವಿಗೆ ಬಂಗಾರದ ಉಂಗುರಗಳನ್ನೂ ಕೈಗೆ ಬಳೆಗಳನ್ನೂ ಧರಿಸಿ ತಲೆಗೆ ಬಣ್ಣದ ರುಮಾಲು ಧರಿಸಿದರೆ, ಹೆಂಗಳೆಯರು ,ಹೆಚ್ಚಾಗಿ ಎಣ್ಣೆ ಹಾಕಿದ ತಲೆಕೂದಲ ಮುಡಿಕಟ್ಟಿ, ಕೆಂಬಣ್ಣದ ಹೂ ಮುಡಿದು, ಕಿವಿ, ಕುತ್ತಿಗೆ, ಕೈಗಳಿಗೆ ತುಂಬ ಆಭರಣ ತೊಟ್ಟು, ಕಿರಿದಾದ ಕುಪ್ಪುಸ ಧರಿಸಿ, ತೊಡೆ ಕಾಣುವಂತೆ ಬಣ್ಣದ ಸೀರೆಯನ್ನು ಕಚ್ಚೆಹಾಕಿ ಉಟ್ಟುಕೊಂಡಿದ್ದರು. ಹಣ್ಣು ಮಾರಲು ಬಂದ ಲಮಾಣಿಯಳು ಗಾಜು, ನಾಣ್ಯಗಳನ್ನು ಜೋಡಿಸಿದ ವರ್ಣಮಯ ಬಟ್ಟೆಗಳಿಂದ ಕಣ್ಣಿಗೆ ಹಬ್ಬವನ್ನು ಉಂಟುಮಾಡಿದಳು. ಕೆಮರಾ ಕೈಯಲ್ಲಿ ಇಲ್ಲದ್ದಕ್ಕೆ ಕಸಿವಿಸಿಗೊಳ್ಳುತ್ತಿರುವಾಗಲೇ ಬಸ್ಸು ಬಿಟ್ಟಿತು.

ಉತ್ತರ ಕನ್ನಡ ಜಿಲ್ಲೆಯ ಗಡಿಯನ್ನು ದಾಟುತ್ತಿದಂತೆ ಮರಗಳ ಗಾತ್ರ ಸಣ್ಣದಾಗುತ್ತ ಹೋಗಿ ಕೊನೆಗೆ ಗಿಡಗಂಟಿಗಳೇ ಕಾಣಲಾರಂಭಿಸಿದವು. ತಡಸ ಬಂದುಹೋಯಿತು. ಇನ್ನೂ ಹತ್ತು ಹನ್ನೆರಡು ಮೈಲು ಸಾಗಿ ಬಸ್ಸು ಪೂನಾ - ಬೆಂಗಳೂರು ಹೆದ್ದಾರಿಯನ್ನು ಸೇರಿಕೊಂಡಾಗ ಡ್ರಾಯವರನಿಗೆ ಹುರುಪು ಬಂದು ವೇಗವನ್ನು ಹೆಚ್ಚಿಸಿದ. ಬಯಲು ಸೀಮೆಯ ಹಳ್ಳಿಗರು ಯಾವ ಮೋಟಾರು ಎಲ್ಲಿಗೆ ಹೋಗುತ್ತದೆಂದು ತಿಳಿದುಕೊಳ್ಳುವ ಗೋಜಿಗೆ ಹೋಗದೇ ರಸ್ತೆಯಲ್ಲಿ ಓಡುವ ಎಲ್ಲ ಬಸ್ಸುಗಳಿಗೂ ಕೈತೋರಿಸುತ್ತ ನಿಂತಿದ್ದರು. ಕರಿಮಣ್ಣಿನ ಹೊಲಗಳಲ್ಲಿ ಬಸಲಿಂಗನು ಮೈಮುರಿದ ದುಡಿಯುವಾಗ ಅವನ ಹೆಂಡತಿ ಭಕ್ರಿ-ಬ್ಯಾಳಿ-ಹಿಂಡಿಗಳ ಬುತ್ತಿ ಹೊತ್ತು ಹೊಲದತ್ತ ನಡೆದಿದ್ದಳು. ಚಕ್ಕಡಿಗಳಲ್ಲಿ ಎಷ್ಟೋ ಕುಟುಂಬಗಳು ಹುಬ್ಬಳ್ಳಿಯತ್ತ

ಸಾಗಿದ್ದವು. ಹಿಂದಿನ ರಾತ್ರಿ ಸರದಾರಜಿಯ ಲಾರಿಗೆ ಡಿಕ್ಕಿಹೊಡೆದು ಚೂರಾಗಿ ಬಿದ್ದ ಕಾರನ್ನು ನೋಡಲು, ಕಣ್ಣು ಮುಚ್ಚಿಯೇ ವಾಹನಗಳನ್ನು ನಡೆಸುತ್ತಾರೆಂದು ನಮ್ಮ ಡ್ರಾಯವರ ತೀರ್ಪು ಕೊಟ್ಟ.

ಹಳೆಹುಬ್ಬಳ್ಳಿಯ ತಿಪ್ಪೆ, ಕೊಳಚೆಗಳನ್ನು ದಾಟಿ ಮೋಟಾರು ನಗರದತ್ತ ಓಡಿತು. ಊಟದ ಶಾಸ್ತ್ರ ಮುಗಿಸಿ ರೇಲ್ವೆ ನಿಲ್ದಾಣಕ್ಕೆ ಧಾವಿಸಿದರೆ ಅಲ್ಲ ವಿಪರೀತ ಗದ್ದಲ. ಟಿಕೇಟನ್ನು ಪಡೆಯಲಿಕ್ಕೇ ಒಂದು ತಾಸು ಕಳೆದರೆ ಟ್ರೇನಿನಲ್ಲಿ ಸ್ಥಳವೇ ದೊರೆಯಲಿಲ್ಲ. ಕಿಡಕಿಯ ಹತ್ತಿರ ಸಾಮಾನು ಇಟ್ಟು ಅಲ್ಲಿಯೇ ನಿಂತು ಪ್ರಯಾಣ ಬೆಳೆಸಿದೆ. ಪರಿಚಯದ ರೇಲು ರಸ್ತೆ, ಹೊಲ, ಹೊಂಡು, ಕೆರೆಗಳನ್ನು ನೋಡುವದರಲ್ಲಿ ನೆಮ್ಮದಿಯೆನಿಸಿತು. ವಿದ್ಯಾರ್ಥಿಯಾಗಿದ್ದಾಗ ಮನದಣಿಯವಷ್ಟು ಪೇರಲಹಣ್ಣುಗಳನ್ನು ತಿಂದ ನವಿಲೂರನ್ನು ಬೀಳ್ಕೊಂಡೆ. ಜೀವನದ ಮಹತ್ವದ ಆರು ವರ್ಷಗಳನ್ನು ಕಳೆದ ಕರ್ನಾಟಕ ಕಾಲೇಜಿನ ದರ್ಶನವಾದಾಗ ಕಸಿವಿಸಿಯಾಯಿತು. ದೂರದಿಂದಲೇ ಅದು ಹರಸಿದಂತೆ ಭಾಸವಾಯಿತು. ಧಾರವಾಡದ ದಾಟುತ್ತಿದ್ದಂತೆ ಕರ್ನಾಟಕ ವಿಶ್ವವಿದ್ಯಾಲಯದ ಕಟ್ಟಡಗಳು "ನಮ್ಮ ವಿಶ್ವವಿದ್ಯಾಲಯ ಸೇರುವ ಯೋಗ್ಯತೆ ನಿನಗಿಲ್ಲ, ರಾಜಸ್ಥಾನವೇ ಗತಿ" ಎಂದು ಕಹಕದಿಂದ ನಕ್ಕಂತೆ ತೋರಿತು. ಧಾರವಾಡ ಹಳೆಯ ಸಂಬಂಧಗಳನ್ನು ಕಳೆದುಕೊಳ್ಳುವುದರಲ್ಲಿದ್ದಾಗ ಹೊಸ ಸಂಬಂಧ ಬೆಳೆಯುವ ಲಕ್ಷಣ ಕಂಡಿತ್ತು! (ಅಲ್ಲಿಯ ಕನ್ಯೆಯನ್ನು ಜೀವನದ ಸಂಗಾತಿಯನ್ನಾಗಿ ಮಾಡಿಕೊಳ್ಳಲು ಒಪ್ಪಿಕೊಂಡೆ!) ವಿದ್ಯಾರ್ಥಿಯಾಗಿದ್ದಾಗ ಕೀಟ ಸಂಗ್ರಹಕ್ಕೆ ಹೋಗುತ್ತಿದ್ದ ಮುಗದ, ನಾಗರಗಾಳಿಗಳೂ ಹಿಂದೆ ಸರಿದವು. ಲೋಂಡಾದಲ್ಲಿ ಲೋಟಾ ಕಾಫಿ ಸುರಿದುಕೊಂಡೆ. ಬೆಳಗಾಂವ ಬಂದಾಗ ಸಂಜೆಯಾಗುತ್ತಲಿತ್ತು. ಟಿಳಕವಾಡಿ ದಾಟುತ್ತಿದ್ದಂತೆ ಇಲ್ಲಿಂದಲೇ ಮಹಾರಾಷ್ಟ್ರ ಪ್ರಾರಂಭವಾಯಿತೇ ಎಂಬ ಕಲ್ಪನೆ ಬರುವಂತೆ ಜನರು ಒಂದಕ್ಷರ ಕನ್ನಡ ಕಲಿಯದಂತೆ ಎಚ್ಚರವಹಿಸಿದ್ದರು. ಅದೆಷ್ಟೋ ಜನ ಪೂನಾ, ಕೊಲ್ಹಾಪುರ, ಮಿರಜಗಳಿಂದ ಪೆನ್‌ಶನ್ ಪಡೆದು, ಅಗ್ಗದ ಜೀವನ ಸಾಧ್ಯವಿದ್ದ ಬೆಳಗಾಂವಿಯಲ್ಲಿ ನೆಲಸಿ ಈಗ ಇಡೀ ನಗರವೇ ಮಹಾರಾಷ್ಟ್ರಕ್ಕೆ ಸೇರಬೇಕೆನ್ನುವದು ಕೃತಘ್ನತೆಯಲ್ಲವೇ? ಎನಿಸಿತು.

ಮಿರಜಿಯಲ್ಲಿ ರಾತ್ರೆಯೂಟವಾಯಿತು. ತೂಕಡಿಸುತ್ತಿರುವಾಗಲೇ ಬೆಳಗಾಗಿ ಪೂನಾಬಂದಿತು. ಸ್ಟೇಶನ್ನಿನ ಮೇಲೆ ಮಾರುವ ಇಡ್ಲಿ ವಡಾ ಕಾಫಿಗಳಿಗೆ ಕರ್ನಾಟಕದ ರುಚಿಯಿಲ್ಲವೆಂದು ತಿಳಿದಿದ್ದರೂ ಅದನ್ನೇ ಸೇವಿಸಿ ಮುಂಬೈ ಟ್ರೇನಿಗೆ ಧಾವಿಸಿದೆ. ದಕ್ಷಿಣ ರೇಲ್ವೆಯ ಪ್ರವಾಸಿಕರನ್ನು ಸುಲಿದು ತಿನ್ನುವ ಇಲ್ಲಿಯ ಹಮಾಲರು ನನ್ನ ಹತ್ತಿರ ಬಂದಾಗ ನಿರಾಶೆಯನ್ನೇ ಎದುರಿಸಬೇಕಾಯಿತು. ಮುಂದಿನ ಪ್ರಯಾಣ ವಿದ್ಯುತ್ ರೇಲಿನಿಂದ ಇದ್ದುದರಿಂದ ಸ್ಥಳಕ್ಕಾಗಿ ತೊಂದರೆಪಟ್ಟುಕೊಳ್ಳಲಿಲ್ಲ. ಪ್ರತಿದಿನ ಮುಂಬೈಗೆ ಹೋಗುವವರು, ಆಗಲೇ ಸ್ಥಳವನ್ನು ವ್ಯಾಪಿಸಿದ್ದರು. ಉಳಿದವರು ನಿಂತೇ ಹೋಗ ಬೇಕಾಯಿತು. ರೇಲು ಒಂದೊಂದೇ ಸ್ಟೇಶನ್ ಹಿಂದೆ ಹಾಕಿ ವೇಗದಿಂದ ಸಾಗಿತ್ತು. ಮಗನಲಾಲ ಚಿಕ್ಕಿ, ದಿವಾಡಕರ ಚೂಡ, ಬಿಸಿ ಬಟಾಟವಡೆಗಳ ವ್ಯಾಪಾರ ಎಡಬಿಡದೇ ಸಾಗಿತ್ತು. ಓಡುವ ಟ್ರೇನಿನಲ್ಲಿ ಲೋನಾವಳಾ ಬಂದಿತು.

ರೇಲು ಇನ್ನೊಂದು ಎಂಜಿನು ಹಚ್ಚಿಕೊಂಡು ಖಂಡಾಳಾ ಘಾಟ ಇಳಿಯಲು ಸಿದ್ಧವಾಯಿತು. ಎತ್ತರವಾದ ಗುಡ್ಡಗಳು, ಆಳವಾದ ಕಂದರಗಳು; ಮಾನವ ನಿರ್ಮಿತ ಗುಹೆಯೊಳಗಿಂದ ಟ್ರೇನು ಓಡುವಾಗ ಆಟಿಗೆಯ ಟ್ರೇನಿನಂತೆ ಭಾಸವಾಗುತ್ತಿತ್ತು. ಅಲ್ಲಿ, ಇಲ್ಲಿ ನೀರಿನ ಅನುಕೂಲವಿದ್ದಲ್ಲಿ ಮರಗಳು ಬೆಳೆದು ಕಪಿಸೈನೆಗಳಿಗೆ ಆಶ್ರಯವಾಗಿದ್ದವು. ಕೆಲವು ಕಡೆಯಲ್ಲಿ ಬೃಹದಾಕಾರದ ಶಿಲೆಯ ತಂದಿಗೆ ಒಂದೆರಡು ಗಿಡಗಳೆದ್ದಿದ್ದವು. ಮುಂಬೈ ಮಹಾನಗರಕ್ಕೆ ವಿದ್ಯುತ್ ಉತ್ಪಾದನೆಗಾಗಿ ಲೋನಾವಳಾದ ಸಂಗ್ರಹದಿಂದ ನೀರು ಒಯ್ಯುತ್ತಿದ್ದ ಬೃಹತ್ತರ ಪಾಯಿಪಗಳು ರೇಲು ಹಳಿಗಳ ಕೆಳಗಿನಿಂದ ನುಸುಳಿಕೊಂಡು ಕಪೋಲಿಯತ್ತು ಸಾಗಿದ್ದವು. ಟ್ರೇನಿನಿಂದ ಕಪೋಲಿ ಊರು ಪಾತಾಳನಗರಿಯಂತೆ ತೋರುತ್ತಿತ್ತು.

ಕಲ್ಯಾಣ ದಾಟಿದೊಡನೆ ಮುಂಬೈ ಹತ್ತಿರ ಬಂದ ಭಾಸವಾಯಿತು. ದಾದರದಲ್ಲಿ ಆತ್ಮೀಯನೊಬ್ಬ ನನಗಾಗಿ ಕಾದಿದ್ದ. ಅವನಲ್ಲಿ ಸ್ನಾನ, ಊಟ ಮುಗಿಸಿ ಗಾಢವಾದ ನಿದ್ರೆ ತೆಗೆದು ಮುಂದಿನ ಪ್ರಯಾಣಕ್ಕಾಗಿ ಸಿದ್ಧನಾದೆ. ಬಾಂಬೆ ಸೆಂಟ್ರಲಿನಲ್ಲಿ ಅಹ್ಮದಾಬಾದಕ್ಕೆ ಹೋಗುವ ಟ್ರೇನಿನಲ್ಲಿ ಗುಜರಾಥಿಗಳು ಕಿಕ್ಕಿರಿದು ತುಂಬಿದ್ದರು. ಮಧ್ಯಾಹ್ನ ಮಲಗಿದ್ದರಿಂದ ನಿದ್ದೆಯ ಯೋಚನೆಯಿರಲಿಲ್ಲ. ಕಿಡಕಿಯ ಹತ್ತಿರ ಸಾಮಾನು ಇಟ್ಟು, ಅದರ ಮೇಲೆಯೆ ಕುಳಿತೆ. ದಾದರದಲ್ಲಿ ಇನ್ನಷ್ಟು ಪ್ರಯಾಣಿಕರು ತುಂಬಿದರು. ಲೋಕಲ್ ಟ್ರೇನುಗಳು ನಮ್ಮ ಟ್ರೇನನ್ನು ಹಿಂದೆ ಹಾಕಿದಾಗ ಅದರಲ್ಲಿಯ ಪ್ರಯಾಣಿಕರಿಗೆ ಎಲ್ಲಿಲ್ಲದ ಆನಂದ. ಮುಂದಿನ ಸ್ಟೇಶನ್ನಿನಲ್ಲಿ ಅದು ನಿಂತಾಗ ನಮ್ಮ ಟ್ರೇನು ಮುಂದಕ್ಕೆ ಓಡುತ್ತಿತ್ತು. ಗೋರೇಗಾಂವದ ಎಮ್ಮೆಗಳನ್ನೂ ಸಾಂತಾಕ್ರುಝದ ವಿಮಾನಗಳನ್ನೂ ಹಿಂದೆ ಹಾಕಿ ರೇಲು ಉತ್ತರಕ್ಕೆ ಓಡಿತು. ಸುರತ ಬಂದಾಗ ತುಂಬ ರಾತ್ರಿಯಾಗಿದ್ದರೂ ಮಿಠಾಯಿ, ಚಹ ಮಾರುವವರು ನೆಂಟರಿಗಾಗಿ ಕಾಯುವಂತೆ ನಮಗಾಗಿ ಕಾದಿದ್ದರು. ಜನ ಬರ್ಫಿ, ಪೇಡಾ, ಫೇಣೇಗಳನ್ನು ಕೊಂಡು ತಿಂದರು. ಕೆಲವರು ಮನೆಗೆ ಒಯ್ಯುವದಕ್ಕಾಗಿ ಕಟ್ಟಿಸಿಕೊಂಡರು.

ರಾತ್ರಿಯೆಲ್ಲ ಎಚ್ಚರವಾಗಿದ್ದರೂ ಕೂತಲ್ಲಿಯೇ ತೂಕಡಿಸಿದೆ. ಬೆಳಕು ಹರಿಯುವಾಗಲೇ ಅಹ್ಮದಾಬಾದ ಬಂದುದರಿಂದ ಸಾಮಾನು ಸಹಿತ ಇಳಿದೆ. ಮುಂದಿನ ಟ್ರೇನಿಗೆ ಬಹಳ ಕಾಲಾವಕಾಶವಿತ್ತು. ಹೀಗಾಗಿ ಮುಖಮಾರ್ಜನ ಮುಗಿಸಿ ಸ್ಟೇಶನ್ನಿನ ಕೆಟ್ಟ ಚಹಾ ಕುಡಿಯುವುದಕ್ಕಿಂತ ಪಟ್ಟಣದಲ್ಲಿಯೇ ಕುಡಿದರಾಯಿತು, ಎಂದು ನಿಲ್ದಾಣದಿಂದ ಹೊರಗೆ ಬಂದು ಪಟ್ಟಣದತ್ತ ಸಾಗಿದೆ.

೨೦. ನನ್ನ ನಾ, ಕಂಡಂತೆ

(ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ನಡೆದ ಉತ್ತರ ಕನ್ನಡ ಜಿಲ್ಲೆಯ ೯ನೆಯ ಸಾಹಿತ್ಯ ಸಮ್ಮೇಳನಕ್ಕೆ ಕಾಮತರು ಮಾಡಬೇಕಾಗಿದ್ದ ಅಧ್ಯಕ್ಷ ಭಾಷಣ)

ಸನ್ಮಾನ್ಯ ಹಿರಿಯರೇ ಸಾಹಿತ್ಯಾಭಿಮಾನಿಗಳೇ ಹಾಗೂ ಕಿರಿಯ ಮಿತ್ರರೇ, ಹೊನ್ನಾವರದ ಆತ್ಮೀಯರೇ,

ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಅನೇಕರು ಅಸೆಪಡುವಾಗ ಆ ಕುರಿತು ಎಂದೂ ಯೋಚಿಸದೇ ತೆಪ್ಪಗಿದ್ದ ನನ್ನನ್ನು ಸರ್ವಾನುಮತದಿಂದ ಆರಿಸಿದ್ದೇಕೆ?ಎಂಬುದು ಈ ವಿಚಾರ ತಿಳಿದಾಗಿನಿಂದಲೂ, ಸಮಸ್ಯೆಯಾಗಿಯೇ ಉಳಿದಿವೆ!ಆದರೆ ಇದೊಂದು ಸದವಕಾಶ. ಈ ಅವಕಾಶವನ್ನು ಹುಟ್ಟಿನಿಂದ ಲಕ್ಷ್ಮೀಪುತ್ರನೆಸಿಕೊಂಡು, ನಂತರ ಸರಸ್ವತಿಯ ದತ್ತಕ ಪುತ್ರನಾಗಲು ಕಳೆದ ಅರ್ಧಶತಮಾನ ನಡೆಸಿದ ಹೋರಾಟದ ಬಗೆಯ ಅಲ್ಪ ಪರಿಚಯವನ್ನು ತಮಗೆಲ್ಲ ಮಾಡಿಕೊಡಲು ಬಳಸಬೇಕೆಂದಿದ್ದೇನೆ.

ಆ ಕಾಲದಲ್ಲಿ, ಏಳು ವರ್ಷ ತುಂಬಿದ ಬಳಿಕವೇ ಶಾಲೆಗೆ ಪ್ರವೇಶವಿತ್ತು. ಬಡವರ ಮಕ್ಕಳು, ಸಾಹುಕಾರರ ಮಕ್ಕಳು, ಯಾರಿಗೂ ಚಡ್ಡಿ ಹೊಲಿಸುವ ಪರಿಪಾಠವಿರಲಿಲ್ಲ! ಉದ್ದನೆಯ ಮೊಳಕಾಲಿನ ತನಕ ಬರುವ ಅಂಗಿಯೇ ಎಲ್ಲ ಮಕ್ಕಳ ಒಂದೇ ಉಡುಪು. ಅದರಲ್ಲಿ ಊರೆಲ್ಲ ಸುತ್ತಲು ಯಾರ ಆಕ್ಷೇಪವೂ ಇರಲಿಲ್ಲ. ಆ ಎಳೆಪ್ರಾಯದಲ್ಲೆ ಕಾವಿಚಿತ್ರಗಳನ್ನು ರಚಿಸುವ ಗಾರೆಯವರು, ಶ್ರೀಗಂಧ ಕೊರೆಯುವ ಗುಡಿಗಾರರು, ಮಣ್ಣಿನಿಂದ ಗಣೇಶನನ್ನು ನಿರ್ಮಿಸುವ ಮಾಟಗಾರರು, ಪೂಜಾಸಾಮಗ್ರಿ ಮಾಡುವ ಕಂಚುಗಾರರು, ಹಗ್ಗ ಹೆಣೆಯುವ ಖಾರ್ವಿಗಳು, ಹಡಗು-ಕಟ್ಟುವ ಖಾಂಡೇ ಖಾರ್ವಿಗಳ ಬಗೆ ಬಗೆಯ ಕೈಚಳಕ ನೋಡುವದರಲ್ಲಿ ತನ್ಮಯನಾಗಿ ಬಿಡುತ್ತಿದ್ದೆ. ದರ್ಜಿಗಳ ಹೊಲಿಗೆ ಯಂತ್ರ ತಿರುಗಿಸುವದು, ತಾಮಟ್‌ಕಾರ (ತಾಮ್ರದ ಪಾತ್ರೆ ಪಡಗ ಮಾಡುವವರು) ರ ಕುಲುಮೆ ಹೊತ್ತಿಸುವದು, ನನಗೆ ಎಲ್ಲಿಲ್ಲದ ಸಂತೋಷ ಕೊಡುತ್ತಿದ್ದವು. ಮನೆಯಲ್ಲೇ ಮೊಳೆ ಬಡಿಯುವದು, ಕಿತ್ತು ತೆಗೆಯುವದು, ಮತ್ತೆ ಬಡಿಯುವ ಸಪ್ಪಳ ಕೇಳಿಸಿಕೊಳ್ಳುತ್ತ "ಎಲ್ಲೋ ಆಚಾರಿಕುಟುಂಬದಲ್ಲಿ ಹುಟ್ಟುವವನಿದ್ದು, ಜವಳಿ ವ್ಯಾಪಾರಿಗಳಲ್ಲಿ ಬಂದಿದ್ದಾನೆ" ಎಂದು ತಾಯಿಯ ಕೌತುಕದ ಉದ್ಗಾರವನ್ನು ಕೇಳಬೇಕಾಗುತ್ತಿತ್ತು.

ಹೊನ್ನಾವರ ಕಸಬಾ ಗಂಡು ಮಕ್ಕಳ ಶಾಲೆಯಲ್ಲಿ ಧೂಳೆತ್ತ, ಬಿನ್, ಪ್ರಾಥಮಿಕ ಶಿಕ್ಷಣ ಮುಗಿಸಿ ಮಾಧ್ಯಮಿಕ ಶಿಕ್ಷಣಕ್ಕಾಗಿ ನ್ಯೂ ಇಂಗ್ಲಿಷ್ ಸ್ಕೂಲ್ ಸೇರಿದ್ದಾಯ್ತು. ಇದು ನಿಜಕ್ಕೂ ಅನ್ವರ್ಥಕ ನಾಮಕ್ಕೆ ಸರಿ ಹೋಗುವಂತೆ ಅಲ್ಲಿ ಪ್ರತಿ ತಿಂಗಳಿಗೊಬ್ಬರು ಹೊಸ ಶಿಕ್ಷಕರು ಬಂದು ಸೇರುತ್ತಿದ್ದಂತೆ, ರಾಜೀನಾಮೆ ಕೊಟ್ಟು ಹೋಗಿಬಿಡುತ್ತಿದ್ದರು! ಮುಂದೆ

ಹಾಯ್ ಕೋರ್ಟ್ ನ್ಯಾಯಾಧಿಶರಾದ ಜಿ.ಎನ್.ಸಭಾಹಿತ, ವರಕವಿಗಳಾದ ವಿ.ಜಿ.ಭಟ್ಟರು ಖ್ಯಾತ, ಜಾನಪದ ಸಂಶೋಧಕ - ಲೇಖಕ ಡಾ। ಎಲ್.ಆರ್.ಹೆಗ್ಡೆ ಮುಂತಾದವರು, ಮೊದಲಲ್ಲಿ ಮೇಷ್ಟು ಆಗಿದ್ದು ನಮ್ಮ ಶಾಲೆಯಲ್ಲಿಯೇ! ಮುಂದೆ ಉಚ್ಚ ಶಿಕ್ಷಣಕ್ಕಾಗಿ ಕುಮಟೆಯ ಕ್ಯಾನರಾ ಕಾಲೇಜು ಸೇರಿದಾಗ, ಪ್ರೊ. ಗೋಪಾಲಕೃಷ್ಣ ಅಡಿಗರು ಡಾ. ಜಿ.ಎಸ್. ಆಮೂರರಂಥ ಮೇಧಾವಿ ಉಪನ್ಯಾಸಕರಿದ್ದರು, ಮುಂದಿನ ಶಿಕ್ಷಣಕ್ಕಾಗಿ ಧಾರವಾಡದ ಕರ್ನಾಟಕ ಕಾಲೇಜು ಸೇರಿ. ಪದವಿ ಹಾಗೂ ಅಲ್ಲಿಯೇ ವಿಶ್ವವಿದ್ಯಾಲಯ ಸ್ನಾತಕೋತ್ತರ ಪದವಿ ಪಡೆದೆ. ಆ ಬಳಿಕ ಎರಡು ವರ್ಷ ಕರ್ನಾಟಕದ ಕಾಲೇಜಿನಲ್ಲಿ ಶಿಕ್ಷಕನಾಗಿ, ಶಿಷ್ಯವೇತನ ಪಡೆದು ನ್ಯೂಯಾರ್ಕ್ ವಿಶ್ವವಿದ್ಯಾಲಯ ಸೇರಿಕೊಂಡಾಗ, ಅದು ಅಂತರಾಷ್ಟ್ರೀಯ ಖ್ಯಾತಿಯ ಪರಿಸರ ವಿಜ್ಞಾನ ಮತ್ತು ಅರಣ್ಯಶಾಸ್ತ್ರಗಳ ಅಧ್ಯಯನ ಕೇಂದ್ರವೆಂಬ ಅರಿವು ಮೂಡಿತು! ಹೆಚ್ಚಿನ ಪರಿಶ್ರಮದಿಂದ ನಾಲ್ಕು ವರ್ಷ ದುಡಿದು ಡಾಕ್ಟರೇಟು ಪಡೆದೆ. ಅಂದಿನ ದಿನಗಳಲ್ಲಿ ಈ ಕ್ಷೇತ್ರದ ಕಠಿಣ ಶ್ರಮದಿಂದಾಗಿ ಅಮೇರಿಕನ್ ವಿದ್ಯಾರ್ಥಿಗಳೇ ಹೆಚ್ಚಾಗಿ ಸೇರಿಕೊಳ್ಳುತ್ತಿರಲಿಲ್ಲ. ಕೈತುಂಬ ಸಂಬಳ ತರುವ ವೃತ್ತಿಯೊಂದನ್ನು ಸುಲಭದಲ್ಲಿ ಅಲ್ಲಿಯೇ ಕೈಕೊಳ್ಳಬಹುದಾಗಿತ್ತು. ಆದರೆ ನನ್ನ ಈ ನೆಲ-ಜಲ ಕೈಬೀಸಿ ಕರೆಯುತ್ತಿತ್ತು. ಬೇರೊಂದು ದೇಶದಲ್ಲಿ ಪರಕೀಯನಾಗಿ ಬಾಳಲು ಮನಸ್ಸುಬಾರದೇ ಸ್ವದೇಶಕ್ಕೆ ಮರಳಿದೆ, ಅರಣ್ಯಶಾಸ್ತ್ರದ ಡಾಕ್ಟರೇಟು, ವಿಶೇಷ ತರಬೇತಿಗಳ ಪ್ರಯೋಜನ ನನ್ನ ನಾಡಿಗೆ, ಜಿಲ್ಲೆಗೆ ಆಗಲಿ ಎಂಬುದು ಆಗಿನ ಕನಸಾಗಿತ್ತು.

ಶೇಕಡಾ ಎಂಬತ್ತರಷ್ಟು ಅರಣ್ಯವಿದ್ದ ಉತ್ತರ ಕನ್ನಡ ಜಿಲ್ಲೆಯಲ್ಲಿ ನನ್ನ ಪರಿಣತಿ ಬಳಸಲಾಗಲಿಲ್ಲವಾದ್ದರಿಂದ ಭಾರತ ಸರಕಾರ ನನ್ನ ಸೇವೆಯನ್ನು ಕಾಡೇ ಇಲ್ಲದ ಮರಭೂಮಿಯ ರಾಜಸ್ಥಾನಕ್ಕೆ ಎರವಲುಕೊಟ್ಟಿತ್ತು. ಉದಯಪುರ ಕೃಷಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮೂರುವರ್ಷ ಪಾಠ ಹೇಳಿದರೂ, ಸೇವೆಯ ಲಾಭವನ್ನು ಪಡೆದ ಸಂಸ್ಥೆಯು ನನ್ನನ್ನು ಸಿಬ್ಬಂದಿಯಲ್ಲಿ ಸೇರಿಸಿಕೊಳ್ಳಲು ಒಪ್ಪದಿದ್ದರಿಂದ ಕಬ್ಬಿನ ಕೀಟ ನಿಯಂತ್ರಣ ಕೈಕೊಂಡಿದ್ದ ಕಾಮನ್ ವೆಲ್ತ್ ಸಂಸ್ಥೆ ನಡೆಸುತ್ತಿದ್ದ ಪಶ್ಚಿಮಬಂಗಾಲದ ಇತಿಹಾಸ ಪ್ರಸಿದ್ಧ ಪ್ಲಾಸಿಗೆ ಧಾವಿಸಿದೆ. ಅಲ್ಲಿ ಅದಾಗಲೇ ರಕ್ತಪಾತದಲ್ಲಿ ತೊಡಗಿದ ನಕ್ಸಲೀಯರಿಂದ ಸಂರಕ್ಷಿಸಿಕೊಳ್ಳಲು ಎರಡೇ ವರ್ಷಗಳಲ್ಲಿ ಕಂಬಿ ಕಿತ್ತ ಬೇಕಾಯಿತು. ನೌಕರಿ ಸಿಗದಿದ್ದರೂ ಶಿಕ್ಷಣ ಸಂಶೋಧನೆಗಳ ಸಾಮಿಪ್ಯವಿರಲಿ ಎಂದು ಬೆಂಗಳೂರಿನ ಮಲ್ಲೇಶ್ವರಂದಲ್ಲಿ "ವೈಜ್ಞಾನಿಕ ಛಾಯಾಗ್ರಹಣ ಲ್ಯಾಬೋರೇಟರಿ"ಯನ್ನು ಪ್ರಾರಂಭಿಸಿದೆ. ಆದರೆ ಇದಕ್ಕೆ ಬೇಕಾಗಿದ್ದ ಪೂರ್ವ ತರಬೇತಿ ನನಗಿರಲಿಲ್ಲ. ಸ್ವಾಧ್ಯಾಯದಲ್ಲಿದ್ದ ಅಚಲ ವಿಶ್ವಾಸದಿಂದಾಗಿ ಸ್ವಯಂ ಪರಿಣತಿ ಪಡೆದೆ. ಕಳೆದ ಕಾಲುಶತಕದಲ್ಲಿ ರಾಷ್ಟ್ರೀಯ ಅಂತರಾಷ್ಟ್ರೀಯ ಸ್ನಾತಕೋತ್ತರ ಸಂಶೋಧನಾ ಸಂಸ್ಥೆಗಳ ಪ್ರಾಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಛಾಯಾಗ್ರಹಣದ ನೆರವು ನೀಡುವಂತಾಗಿದೆ. ಬೆಂಗಳೂರಿನ ಆಸುಪಾಸಿನ ಇಂಡಿಯ್ ಇನ್‌ಸ್ಟಿಟೂಟ್ ಅಫ್ "ಇಂಡಿ

ಸೈನ್ಸ್ ಡೈರಿ ಇನ್‌ಸ್ಟಿಟ್ಯೂಟ್ ಮುಂತಾದ ಸಂಸ್ಥೆಗಳ ಬಗೆಬಗೆಯ ವೈಜ್ಞಾನಿಕ ಛಾಯಾಗ್ರಹಣ ಕೈಕೊಂಡು ಬೆನ್ನು ತಟ್ಟಿಸಿಕೊಂಡಿದ್ದೇನೆ. ಆಗೊಮ್ಮೆ ಈಗೊಮ್ಮೆ ಮೈಸೂರಿನ ಸಿ.ಎಫ್.ಟಿ.ಆರ್.ಆಯ್, ತಿರುಪತಿ, ಮುಂಬೈ ವಿಶ್ವವಿದ್ಯಾಲಯಗಳು, ಅಂಚೆಯಿಂದ ಸಾಮಗ್ರಿ ಕಳಿಸಿ, ಛಾಯಾಚಿತ್ರಗಳಿಗೆ ವಿನಂತಿಸಿಕೊಂಡಿದ್ದೂ ಇದೆ. ಈ ಎಲ್ಲ ಸಂಸ್ಥೆಗಳಿಗೆ ಅವರದೇ ಪ್ರಯೋಗಶಾಲೆಗಳಿದ್ದು ಛಾಯಾಗ್ರಹಣದ ವ್ಯವಸ್ಥೆ ಇದೆಯೆಂದು ಬೇರೆ ಹೇಳಬೇಕಾಗಿಲ್ಲ. ಆದರೂ ಕೇಳಿಕೊಂಡು ಬರುವರು. ಈ ಕ್ಷೇತ್ರದಲ್ಲಿ ಈವರೆಗೆ ಪ್ರತಿಸ್ಪರ್ಧಿಗಳೇ ಇಲ್ಲದಿರುವದು ವಿಸ್ಮಯದ ಮಾತು.

ಬಾಲ್ಯದಲ್ಲಿಯೇ ಶರಾವತಿ ನದಿ, ತೆಂಗಿನ ತೋಪುಗಳು ನಿತ್ಯಹರಿತ್ ಪರಿಸರ, ನನ್ನಲ್ಲಿ ಹುದುಗಿಕೊಂಡಿದ್ದ ಚಿತ್ರಕಲೆಯನ್ನು ಅರಳುವಂತೆ ಮಾಡಿದ್ದವು. ಪ್ರೌಢಶಾಲೆಯಲ್ಲಿದ್ದಾಗ ದೊರೆತ ಅಲ್ಪ ತರಬೇತಿಯಿಂದಾಗಿ ಅದು ಹೆಮ್ಮರವಾಗಿ ಬೆಳೆಯಲು ಅನುಕೂಲವಾಯಿತು. ಸಾಹಿತ್ಯ ಅಕಾಡೆಮಿಯ ಫೆಲೊ ಆಗಿ, ಒಂದು ವರ್ಷ ಕಾಲ ಮಧ್ಯಪ್ರದೇಶದ ಆದಿವಾಸಿಗಳನ್ನು ಅಭ್ಯಸಿಸುವ ಅವಕಾಶ ದೊರೆತಾಗ ಅಸಂಖ್ಯಾತ ರೇಖಾಚಿತ್ರಗಳನ್ನು ಮಾಡಿ ಇಟ್ಟಿದ್ದೇನೆ. ಪತ್ನಿಯ ಹಾಸ್ಯಲೇಖ ಸಂಗ್ರಹಗಳಿಗೆ ವ್ಯಂಗ್ಯ ಚಿತ್ರಗಳನ್ನು ಸಿದ್ಧಪಡಿಸಿದೆ. ಅವಳ ಮಧ್ಯಯುಗದ ಕನ್ನಡಿಗರ ಜನಜೀವನದ ಸಂಪ್ರಬಂಧ ಗ್ರಂಥಕ್ಕೆ ಬಹಳಷ್ಟು ರೇಖಾಚಿತ್ರಗಳನ್ನು ಮಾಡಿಕೊಟ್ಟೆ. ಇಂದು, ನನ್ನ ಕನ್ನಡ ಬರವಣಿಗೆ, ಛಾಯಾಚಿತ್ರ, ರೇಖಾಚಿತ್ರಗಳು ವಿದೇಶಕ್ಕೆ ಹೊರಟಿವೆ. ಅಮೇರಿಕೆಯಲ್ಲಿ ಕಂಪ್ಯೂಟರ್ ಇಂಜಿನಿಯರ್ ಆಗಿರುವ ಏಕಮಾತ್ರ ಪುತ್ರ ವಿಕಾಸನು,ಕಾಮತ ಪೌಪುರಿ 'ಮಲ್ಟಿಮೀಡಿಯ' ಕಾರ್ಯಕ್ರಮಕ್ಕೆ ಈ ರೂಪಾಂತರವನ್ನು ಬಳಸಿಕೊಳ್ಳಲಾರಂಭಿಸಿದ್ದಾನೆ. ಅದಕ್ಕೆ ಚಿತ್ರಸಂಪತ್ತು ಪೂರೈಸಿದ್ದೇನೆ. ಈಗ ಮಡದಿಯು "ಕನ್ನಡಿಗರ ರಸಿಕ ಪರಂಪರೆ" ಕುರಿತು ಗ್ರಂಥರಚನೆಯಲ್ಲಿ ತೊಡಗಿದ್ದಾಳೆ. ಅದನ್ನು ಪ್ರಕಟಿಸಲು ಪ್ರಕಾಶಕರೂ ಮುಂದೆ ಬಂದಿದ್ದಾರೆ. ಕಳೆದ ಮೂರು ದಶಕಗಳಲ್ಲಿ ಕರ್ನಾಟಕದ ಉದ್ದಗಲದ ಕಾಡು ಮೇಡುಗಳಲ್ಲಿ ಅಲೆದಾಡಿ ಸಂಗ್ರಹಿಸಿದ ಶಿಲ್ಪಗಳ, ವೀರಗಲ್ಲು, ಮಾಸ್ತಿಕಲ್ಲು, ನಿಸಿದಿ, ತಾಳೆಗರಿ ಗ್ರಂಥಗಳ, ಪುರಾತನ ಹಸ್ತಪ್ರತಿಗಳ ಸಾವಿರಾರು ಚಿತ್ರಗಳ ಭಂಡಾರವೇ ಇದ್ದು ಮುಂಬರುವ ಗ್ರಂಥಕ್ಕಾಗಿ ಸುಮಾರು ಒಂದು ಸಹಸ್ರ ರೇಖಾಚಿತ್ರಗಳನ್ನು ರಚಿಸುವ ಕೆಲಸ ಪ್ರಾರಂಭವಾಗಿಬಿಟ್ಟಿದೆ.

ಉತ್ತರ ಕನ್ನಡಜಿಲ್ಲೆಯಲ್ಲಿ, ಅದೂ ಹೊನ್ನಾವರದಲ್ಲಿ ಹುಟ್ಟಿ, ಬೆಳೆದು ರಮ್ಯವಾದ ನಿಸರ್ಗದ ಆಕರ್ಷಣೆಯಲ್ಲಿ ಒಳಗಾಗದೇ ಇರುವದು ಹೇಗೆ ಸಾಧ್ಯ? ಎಳೆತನದಲ್ಲಿ ನೀಲಕೋಡಕ್ಕೆ ಎತ್ತಿನಗಾಡಿಯಲ್ಲಿ ಹೊರಟಾಗ ದಾರಿಯುದ್ದಕ್ಕೂ ಸವಿದ ಸೃಷ್ಟಿಸೌಂದರ್ಯ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಗಾಳಿಗೋಡುವ ನಾವೆಯಲ್ಲಿ 'ಕುರ್ವೆಗೆ' ಕೊಟ್ಟ ಬೆಳದಿಂಗಳ ಭೇಟಿ, ಒಂದು ಅಪೂರ್ವದ ಅನುಭವ. ವಾಹನ ಸೌಕರ್ಯವಿಲ್ಲದ ದಿನಗಳಲ್ಲಿ ಕಾಲುನಡಿಗೆಯಲ್ಲಿ ಜೋಗ ಜಲಪಾತದ ದರ್ಶನ ಪಡೆದದ್ದುಂಟು. ಕುಮಟೆಯಿಂದ ಹೊನ್ನಾವರಕ್ಕೆ ಮಳೆಗಾಲದ ಕಗ್ಗತ್ತಲಿನ ರಾತ್ರಿಯಲ್ಲಿ ಗಾಡಿ ಪ್ರಯಾಣಮಾಡಿದ್ದು ಒಂದು

ಅಪರೂಪದ ಅನುಭವವಾಗಿ ಉಳಿದಿದೆ. ಉಳುವರೆ ತಾರಿಯಿಂದ ಅತಿ ಹಗುರಾಗಿ ತೇಲುತ್ತಿದ್ದ ಪಾತಿ ದೋಣಿಯಲ್ಲಿ ಕುದ್ರಿಗೆ ಗ್ರಾಮಕ್ಕೆ ಸೇರಲು ಹೆಚ್ಚಿನ ಎದೆಗಾರಿಕೆ ಬೇಕಿತ್ತು. ಗೇರಸೊಪ್ಪಾದ ನಿಕಟವಾದ ಪರಿಚಯ ಮಾಡಿಕೊಳ್ಳುವಂತಾಯಿತು. ನಮ್ಮ ಊರು ವಿಶಿಷ್ಟವಾದದ್ದು. ಅಪೂರ್ವವಾದದ್ದು. ಅದಕ್ಕೆ ಸುದೀರ್ಘವಾದ ಇತಿಹಾಸವೂ ಇದೆ. ಹದಿನಾಲ್ಕನೆಯ ಶತಮಾನದಲ್ಲಿ ನಮ್ಮೂರಿಗೆ ಭೇಟಿ ಇತ್ತ ಮೊರಾಕ್ಕೊದ ಪ್ರವಾಸಿ ಇಬ್ನ್-ಎ-ಬತೂತನು (ಕ್ರಿ.ಶ.೧೩೦೪-೬೯) ತನ್ನ ಬರವಣಿಗೆಯಲ್ಲಿ ಇದಕ್ಕೆ 'ಹೆನಾವರ್' ಎಂಬ ಶಬ್ದ ಬಳಸಿದ್ದಾನೆ. ಹದಿನೈದನೆಯ ಶತಮಾನದಲ್ಲಿ ಬಂದ ಪರ್ಶಿಯದ ಪ್ರವಾಸಿ ಅಬ್ದುಲ್ ರಝಾಕ್‌ನು (ಕ್ರಿ.ಶ. ೧೪೧೩-೮೨) 'ಮನೋರ್' ಎಂದು ಕರೆದಿದ್ದಾನೆ. ಕ್ರಿ.ಶ. ೧೫೨೦ ರಲ್ಲಿ ಭೇಟಿಕೊಟ್ಟ ಪೋರ್ಚುಗೀಸ್ ಪ್ರವಾಸಿ ಡೊಮಿಂಗ್ ಪೈಸ್‌ನು 'ಪೊನ್ನೊರ್' ಎಂದು ನಾಮಕರಣ ಮಾಡಿದ. ಪೋರ್ಚುಗೀಸ್ ಗೋವಾದ ವೈಸ್ ರಾಯ್ ಆಗಿದ್ದ ಡೊಮ್-ಡು-ಆರ್ತ ಮೆನೆಝಸ್‌ನು ಕ್ರಿ.ಶ. ೧೫೮೪ ರಲ್ಲಿ 'ಒನೋರ್' ಎಂದು ಗುರುತಿಸಿದ.

ವಿಶ್ವದ ಅನೇಕ ದೇಶಗಳಲ್ಲಿ ಸಂಚರಿಸಿದ ಇಟಾಲಿಯನ್ ಪ್ರವಾಸಿ, ಪಿಯೆತ್ರೊ ಡೆಲಾ ವಾಲೆ, ೪-೧೦-೧೬೨೨ ರಂದು ಹೊನ್ನಾವರಕ್ಕೆ ಬಂದು ಇಳಿದ. ಹೊನ್ನಾವರದಿಂದ ಗೇರಸೊಪ್ಪೆಗೆ ಅವನು ಮಚವೆಯಲ್ಲಿ ಮಾಡಿದ ಪಯಣದ ವರ್ಣನೆ ಅತಿರಮ್ಯವಾಗಿದೆ. "ಒನೋರ್' (ಹೊನ್ನಾವರ)ದಿಂದ ಇಲ್ಲಿಗೆ (ಗೇರಸೊಪ್ಪೆ) ಮಾಡಿದ ಮೂರು ಹರದಾರಿಯ ಪ್ರವಾಸದಂತಹ ಅನಂದದಾಯಕ ಪ್ರಯಾಣವನ್ನು ನಾನು ನನ್ನ ಇಡೀ ಜೀವಮಾನದಲ್ಲಿ ಮಾಡಿಲ್ಲ. ನದಿಯ ಇಕ್ಕೆಲ, ಬಲು ರಮಣೀಯವಾಗಿದೆ. ಎತ್ತರ ಬೆಟ್ಟಗಳಲ್ಲಿ ಕತ್ತಲೆಯ ಕಣಿವೆಗಳಲ್ಲಿ ಎಲ್ಲೆಲ್ಲೂ ಹಚ್ಚ ಹಸಿರು, ಕಣ್ಣಿಗೆ ಹಬ್ಬ. ಒತ್ತಾಗಿ ಮತ್ತು ಎತ್ತರವಾಗಿ ಬೆಳೆದ ಗಿಡಮರಗಳು. ಅನೇಕ ಕಡೆ ತೆಂಗಿನ ತೋಪುಗಳು, ಮಾವಿನ ಮರಗಳು, ಜುಳುಜುಳು ನಾದ ಮಾಡುವ. ಥಳಥಳ ಹೊಳೆಯುವ ತಿಳಿನೀರಿನ ಝರಿಗಳು, ನದಿಯ ಆಕಡೆ, ಈಕಡೆ, ಮರಗಳ ಪಡಿನೆರಳು. ಗೊಂಚಲು ಗೊಂಚಲು ಹೂಗಳ ದಿಬ್ಬಣ. ವಿವಿಧ ನಾರು-ಬೇರುಗಳು. ಎತ್ತರಕ್ಕೆ ಬೆಳೆದ ಮರ ಮತ್ತು ಕೊಂಬೆಗಳ ಮೇಲೆ ಹಬ್ಬಿದ ತರಗುಲ್ಮಲತೆಗಳು, ಕಾಡಿಗೆ ಶೋಭೆಯನ್ನುಂಟುಮಾಡುತ್ತಿದ್ದವು. ಇಷ್ಟೆಲ್ಲಾ ಸೌಂದರ್ಯದ ಮಧ್ಯೆ (ಶರಾವತಿ) ನದಿಯ ಅಕ್ಕ ಪಕ್ಕದ ಗುಡ್ಡಗಳಿಂದ ನೂರಾರು ಝರಿಗಳು ಹರಿದು ಬಂದು, ಕೆಳಗೆ ಧುಮುಕಿ ಮುಂದೆ ಸಾಗಿ ಸಮುದ್ರ ಸೇರುವಾಗ ಒಂದಾಗಿ ಕೂಡುತ್ತವೆ."

ಅಂದಿನ ಹೊನ್ನಾವರದ ಬಗ್ಗೆ ಪಿಯೆತ್ರೊಡೆಲ್ಲಾ ವಾಲೆ ಹೇಳಿದ್ದು ಹೀಗೆ: "ಹಿಂದೆಯೇ ಕಟ್ಟಿದ ಕೋಟೆಯೊಳಗೆ ಪೋರ್ಚುಗೀಸ್ ಅಧಿಕಾರಿಗಳು ಗೃಹನಿರ್ಮಾಣ ಮಾಡಿಕೊಂಡು ವಾಸವಾಗಿದ್ದಾರೆ. ಬಾವಿತೋಡಿ ತೋಟಗಳನ್ನು ಬೆಳೆಸಿದ್ದಾರೆ. ಬೀದಿಗಳು ದೊಡ್ಡದಾಗಿ ಸುವ್ಯವಸ್ಥೆಯಲ್ಲಿವೆ. ಸೇಂಟ್ ಕ್ಯಾಥರೀನ್ ಮತ್ತು ಸೇಟ್ ಆಂತೋನಿ ಹೆಸರಿನ ಎರಡು ಇಗರ್ಜಿಗಳಿವೆ. ಒತ್ತಾಗಿ ಬೆಳೆದ ತೆಂಗಿನ ತೋಪುಗಳಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ. ಊರಿನಿಂದ ಒಂದು ಮೈಲಿ ದೂರದಲ್ಲಿ ಬಿಸಿನೀರಿನ ಬುಗ್ಗೆಯೊಂದಿದೆ. ಸ್ಥಾನೀಯರು ಅದನ್ನು

'ರಾಮತೀರ್ಥ'ಎಂದು ಗುರುತಿಸಿದರೂ ಪೋರ್ಚುಗೀಸರು 'ಓ-ಟ್ಯಾಂಕ್ ದೆ ಪಾದ್ರೆ (O-Tank de Padre) ಅಂದರೆ 'ಪಾದ್ರಿಯ ಕೆರೆ' ಎಂದು ನಾಮಕರಣ ಮಾಡಿದ್ದಾರೆ. ಗಿಡ ಮರಗಳ ಮಧ್ಯೆ ಇರುವ ಈ ಸ್ಥಳ ತಂಪು ಸೊಂಪಾಗಿ ವಿಹಾರಕ್ಕೆ ಯೋಗ್ಯವಾಗಿದೆ. ನೀರು ಬಂದು ತೊಟ್ಟಿಯೊಳಗೆ ಬೀಳುವದರಿಂದ ಊರವರು ಅಲ್ಲಿಗೆ ಹೋಗಿ ಸ್ನಾನ ಮಾಡುತ್ತಾರೆ. ಇಲ್ಲಿ ಹರಿಯುವ ನದಿಗೆ ಎರಡು ಮುಖ್ಯ ಶಾಖೆಗಳು ಇದ್ದು ಒಂದಕ್ಕೆ 'ಅಂಬು'ನದಿ ಎಂದು ಇನ್ನೊಂದಕ್ಕೆ 'ಶರಾ ನದಿ' ಎಂದು ಊರವರು ಕರೆಯುತ್ತಾರೆ. ಈ ನದಿ ಸಮುದ್ರಕ್ಕೆ ಸೇರುವಲ್ಲಿ ಬಹುದೊಡ್ಡ 'ಒನೋರ್ ಬಂಡೆ (Rock Onore) ಇದೆ.'

ಪಿಯೆತ್ರೊ ಡೆಲ್ಲಾವಾಲೆ ವರ್ಣಿಸಿದ ಹೊನ್ನಾವರ ಮುಂದಿನ ಮೂರು ಶತಮಾನದವರೆಗೂ ಹಾಗೆಯೇ ಮುಂದುವರಿದು ಬಂದಿತ್ತು. ನನ್ನ ಬಾಲ್ಯದಲ್ಲಿ ಅಂದರೆ ಐವತ್ತು ವರ್ಷದ ಹಿಂದೆ ಕೂಡ ನಮ್ಮೂರು ಎಷ್ಟು ಸುಂದರವಾಗಿತ್ತು ಎಂದು ವರ್ಣಿಸುವದೇ ಕಷ್ಟದ್ದು! ಸೂರ್ಯೋದಯಕ್ಕೆ ಮೊದಲೇ ಶರಾವತಿಯ ತೀರ ತಲುಪಿದರೆ ನಮ್ಮ ಕಣ್ಣೆದುರು ನಿಸರ್ಗ ಮಾತೆಯ ಒಂದೊಂದೇ ರಹಸ್ಯ ಬಯಲಾಗಲಾರಂಭಿಸುತ್ತದೆ. ಗಗನವನ್ನು ಆಳೆಯಲು ಹೊರಟ ಸಹ್ಯಾದ್ರಿ ಶಿಖರಗಳು ನಯನ ಮನೋಹರವಾದಿ ಮೆರೆಯುತ್ತವೆ. ಗಗನ ಮಂಡಲವೆಲ್ಲ ಹೊಂಬಣ್ಣದಿಂದ ಹೊಳೆಯುತ್ತದೆ. ನದಿಯ ದಡದಲ್ಲಿ ಬೆಳೆದುನಿಂತ ತೆಂಗಿನ ಮರಗಳು ನಾಚುತ್ತ ಸೂರ್ಯದೇವನನ್ನು ಬರಮಾಡಿಕೊಳ್ಳಲು ಚಾಮರ ಬೀಸುವ ಸಿದ್ಧತೆಯಲ್ಲಿರುತ್ತವೆ. ಸಣ್ಣ ದೊಡ್ಡ ನಾವೆಗಳು ನೀರಿನಲ್ಲಿ ತೇಲುತ್ತ. ಗಾಳಿಗೆ ಓಡುತ್ತ ತರಂಗ ಮಾಲೆಯೆಬ್ಬಿಸುತ್ತ ನದಿಯ ಸೊಬಗನ್ನು ಹೆಚ್ಚಿಸುತ್ತವೆ. ಕ್ಷಣ ಕ್ಷಣಕ್ಕೆ ಬಣ್ಣ ಬದಲಿಸುತ್ತಿರುವ ಆಕಾಶದಲ್ಲಿ ಮಂದಹಾಸ ಬೀರುತ್ತ, ಗುಡ್ಡಬೆಟ್ಟಗಳನ್ನು ಏರುತ್ತ, ಉದಯಿಸುವ ಸೂರ್ಯದೇವನ ವೈಭವ ಅತ್ಯಾಕರ್ಷಕ. ಬೆಳಕು ಹರಿಯುವದನ್ನೇ ಕಾಯುತ್ತಾ, ಹಸಿದೇ ರಾತ್ರಿಯಿಡೀ ಕಳೆದ ಹಕ್ಕಿಗಳು, ಚಿಲಿಪಿಲಿಗುಟ್ಟುತ್ತ. ಬಂಧು ಬಾಂಧವರನ್ನೆಲ್ಲ ಬಡಿದೆಬ್ಬಿಸುತ್ತ, ಹಾಡುತ್ತ ಹವೆಯಲ್ಲಿ ಹಾರಲಾರಂಭಿಸಿದವು. ನೋಡ ನೋಡುತ್ತಿದ್ದಂತೆ ಕತ್ತಲು ಮಾಯವಾಗಿ ಬಣ್ಣಗಳು ಕಣ್ಮರೆಯಾಗಿ, ಬಿಸಲು ತನ್ನ ಪ್ರತಾಪದ ಪ್ರದರ್ಶನ ಮಾಡಲಾರಂಭಿಸುತು.

ಹೊನ್ನಾವರದ ಬಂದರನ್ನು ಬಂದು ಸೇರುತ್ತಿದ್ದಂತೆ ಹಳ್ಳಿಗಾಡಿನಲ್ಲಿ ಬೆಳೆದ ಸರಕುಗಳನ್ನು ಹೊತ್ತು ತಂದ ನಾವೆಗಳು ಹಾಯಿಗಳನ್ನು ಮಡಿಚಿ ಲಂಗರ ಹಾಕಿದವು. ಸಾಮಾನು ಕೊಳ್ಳಲು ಊರವ್ಯಾಪಾರಿಗಳು ಕಿಕ್ಕಿರಿದು ತುಂಬಿದರು. ಕೃಷಿ ಉತ್ಪಾದನೆಗಳು ರಾಶಿ ಬಿದ್ದಿವೆ, ಶಿಯಾಳ (ಎಳನೀರು) ತೆಂಗಿನಕಾಯಿ, ಬಾಳೆಕಾಯಿ, ಬಾಳೆಹಣ್ಣಿನ ಗೊನೆಗಳು, ಕರಿಕಬ್ಬು, ಮೊಗ್ಗೆಕಾಯಿ, ಸೋರೆಕಾಯಿ, ಹಲಸಿನ ಹಣ್ಣು, ಕಲ್ಲಂಗಡಿ ಹಣ್ಣು, ಇಬ್ಬಳ್ಳಿ ಹಣ್ಣು, ಸುವರ್ಣಗಡ್ಡೆ, ಕೆಸುವಿನ ಗಡ್ಡೆ, ತಿಳಿಬೆಲ್ಲದ ಮಡಕೆಗಳು, ತಂಗಿನ ಕತ್ತದಿಂದ ಮಾಡಿದ ದಿನಬಳಕೆಯ ಗೃಹೋಪಯೋಗಿ ಸಾಮಗ್ರಿಗಳು, ದನಕರುಗಳನ್ನು ಕಟ್ಟಿಹಾಕುವ 'ದಾವೇ', ನೀರು ಸೇದುವ ಹುರಿ ಹಾಕಿದ ದಪ್ಪ ಹಗ್ಗ, ಮೊಸರು, ಬೆಣ್ಣೆ, ಖಾದ್ಯಪದಾರ್ಥಗಳು, ಬೆಕ್ಕಿಗೆ ಸಿಗದಂತೆ ತೂಗಹಾಕುವ ನೆಲುವುಗಳು, ಗಡಿಗೆ, ಮಡಕೆಗಳನ್ನು ಇಡುವ ಕತ್ತದ ದಿಂಬು,

ಚಿಕ್ಕ ದೊಡ್ಡ ಹುರಿಗಳು, ಬಗೆ ಬಗೆಯ ಸುತ್ತುಗಳಲ್ಲಿ ಕಾದುಕೊಂಡಿದ್ದವು. ಅನತಿ ದೂರದಲ್ಲಿ ರಾತ್ರಿಯೆಲ್ಲ ಕಷ್ಟಪಟ್ಟು ಹಿಡಿದ ಮಿನುಗಳನ್ನು ಮಾರಲು ತುರುಸಿನ ಸ್ಪರ್ಧೆ ನಡೆಯುತ್ತಿತ್ತು. ಪ್ರೋಟೀನು ಭರಿತ ಪೌಷ್ಟಿಕ ಆಹಾರ ಅತ್ಯಲ್ಪ ಬೆಲೆಗೆ ಮೀನಿನ ರೂಪದಲ್ಲಿ ಲಭ್ಯವಿದ್ದರೂ ಗಿರಾಕಿಗಳು ದುಡ್ಡಿಗೆ ಪಂಚೇರು ಬೇಕೆನ್ನುತ್ತಿದ್ದರು.

ಊರ ದಕ್ಷಿಣಕ್ಕೆ ಹರಿಯುವ ಶರಾವತಿ, ಪಶ್ಚಿಮಕ್ಕೆ ಇದ್ದ ಅರಬೀ ಸಮುದ್ರಕ್ಕೆ ಸೇರಿಕೊಳ್ಳುತ್ತದೆ. ಉತ್ತರಕ್ಕೆ ವಿಸ್ತಾರವಾಗಿ ಚಾಚಿಕೊಂಡ 'ವಡಗೇರಿ' ಎಂದು ಹೆಸರು ಪಡೆದ ಉಪವನ. ಅಲ್ಲಿ ಬೆಳೆದ ನೇರಳೆ, ಗೇರು ಹಣ್ಣು, ಮಾವು, ಮುರುಗಲ, ಕವಳಿ ಹಣ್ಣು, ಜಂಬೆಹಣ್ಣು, ಚಾಂಪೇಡ, ಮುಳ್ಳುಹಣ್ಣುಗಳನ್ನು ಯಾರ ಹಂಗೂ ಇಲ್ಲದೇ ತಿಂದು ತೇಗಬಹುದಿತ್ತು. ಅದೊಂದು ಪಕ್ಷಿಧಾಮವೂ ಆಗಿತ್ತು. ಕಾಡು ಪಾರಿವಾಳಗಳು ಪ್ರಿಯತಮನನ್ನು ಆಮಂತ್ರಿಸುವ 'ಗುಟುರ್ ಗುಟುರ್ss' ಕರೆ ನೀಡಿದರೆ ಗುಟ್ರಗುಮ್ಮ (barbet) ಟೊಂಗೆಯ ತುತ್ತ ತುದಿಯಲ್ಲಿ ಕುಟುಕ್! ಕುಟ್ರುಕ್! ಕರೆ ನೀಡುತ್ತಿತ್ತು ಕಾದಲಳಿಗೆ. ಕಪ್ಪು ಬಿಳಿ ರೆಕ್ಕೆಗಳ ಸೆಪಿಲೆಯ ತೀವ್ರ ಸಿಳ್ಳನ್ನು ಅನುಕರಿಸುವದು ಎಷ್ಟು ಕಷ್ಟದ್ದೆಂದು ಯತ್ನಿಸಿದಾಗಲೇ ತಿಳಿಯಬೇಕು. ಜೇನ್ನೊಣ- ಕ್ಷಣಾರ್ಧದಲ್ಲಿ ಗಗನ ವಿಹಾರಿಯಾಗ, ಹುಳ, ಹುಪ್ಪಡಿಗಳನ್ನು ಕೊಕ್ಕಿನಲ್ಲಿ ಬಂಧಿಸಿ ಸ್ವಸ್ಥಾನಕ್ಕೆ ಮರಳುವ ನೋಟ ರಮ್ಯವಾದದ್ದು, ಬುಲ್ ಬುಲ್ ಹಕ್ಕಿ. ಗಿಡಗಳ ಪೊದೆಗಳಲ್ಲಿ, ಹಗುರಾದ ಗೂಡುಮಾಡಿ, ಮರಿಮಾಡುವಲ್ಲಿ ಮೈಮರೆತಿರುತ್ತದೆ. ತನ್ನ ಶಕ್ತಿ ಸಾಮರ್ಥ್ಯದಲ್ಲಿ ಅಪಾರ ನಂಬಿಕೆಯಿದ್ದ ಮರಕುಟಿಗ ಎತ್ತರ ಮರವನ್ನೇರಿ ತನ್ನ ಸಂತಾನೋತ್ಪತ್ತಿಗೆ ಸಕಲ ಏರ್ಪಾಡು ಮಾಡಲಾರಂಭಿಸುತ್ತದೆ. ಗೊರವಂಕ, ವಿಶ್ರಮಿಸುವಾಗ ನಾಶಿಪುಡಿ ವರ್ಣದ್ದಾಗಿ ಕಂಡರೆ. ರೆಕ್ಕೆ ಬಿಚ್ಚಿ ಹಾರಾಡುವಾಗ ಬಿಳಿಬಣ್ಣ ತಾಳಿ, ಇದೊಂದು ಬೇರೆ ಹಕ್ಕಿಯೇ? ಎಂದು ಭ್ರಮೆ ಹುಟ್ಟಿಸುತ್ತದೆ. ಪಿಕಳಾರ ಹಕ್ಕಿಯು, ಪತ್ನಿಯೊಂದಿಗೆ ಟೊಂಗೆಯಿಂದ ಟೊಂಗೆಗೆ ಹಾರಿದರೂ ಹೆಚ್ಚಿನ ವೇಳೆಯನ್ನು ಕಾಮಚೇಷ್ಟೆಯಲ್ಲಿ ಕಳೆಯುತ್ತದೆ.

ಮುಳ್ಳು ಗಿಡಗಂಟಿಗಳ ಪೊದೆಯಲ್ಲಿ ತಾಯಿ ಮೊಲ, ಮರಿಗಳೊಂದಿಗೆ ಅವಿತಿದ್ದು, ವೈರಿಗಳಿಂದ ಸಂರಕ್ಷಿಸಿಕೊಳ್ಳುತ್ತದೆ. ಕಪ್ಪು ಮೂತಿಯ ಕೋತಿಗಳು, ಇಂದಿಗೆ ಇಷ್ಟು ಚೇಷ್ಟೆ ಸಾಕು! ಎಂದು ಎತ್ತರದ ಮರವೇರಿ ರಾತ್ರಿಯ ವ್ಯವಸ್ಥೆ ಮಾಡಿಕೊಂಡವು. ಕತ್ತಲನ್ನು ಸ್ವಾಗತಿಸುವ ಹಸಿದ ನರಿಗಳು ತಾವು ಅವಿತುಕೊಂಡು ಸ್ಥಳದಿಂದ ಹೊರಹೊರಟು 'ಹುಯ್ಯೋ! ಹುಯ್ಯೋ!' ಎಂದು ಕೂಗಿ ತನ್ನವರನ್ನು ಕರೆದು ಆಹಾರದ ಅನ್ವೇಷಣೆಗೆ ಹೊರಟವು. ಕಳ್ಳ ಬೇಟೆಗೆ ಹೆಸರಾದ ಕತ್ತೆ ಕಿರುಬ ಹೊರಬಿದ್ದು ಅಲೆಯಲಾರಂಭಿಸುವದು. ಅದೃಷ್ಟ ಚೆನ್ನಾಗಿದ್ದರೆ ಹಸಿದ ಹುಲಿರಾಯನೂ, ಕತ್ತಲಲ್ಲಿ ಕಣ್ಣಿನ ಟಾರ್ಚ ಬಿಡುತ್ತ, ಹೆಜ್ಜೆಯ ಸಪ್ಪಳವಾಗದಂತೆ ಅಲೆಯುವದು ಕಂಡೀತು.! ಇಷ್ಟೆಲ್ಲ ವನಸಿರಿ, ಖಗಸಿರಿ ಇದ್ದರೂ ಅದನ್ನು ಹಾಳುಗೆಡವಲು ಯಾರೊಬ್ಬರೂ ಯತ್ನಿಸುತ್ತಿರಲಿಲ್ಲ. ಈ ವಡಗೇರಿಯ ಒಂದು ಅಂಚಿಗೆ ಊರವರ ಸ್ನಾನದ ಹೊಂಡ 'ರಾಮತೀರ್ಥ' ಇದ್ದರೆ ಇನ್ನೊಂದು ಅಂಚಿಗೆ ಆಕಾಶವನ್ನೆ ಮಾರು ಹಾಕಿ ಅಳೆಯಲು ಹೊರಟ ಹಾಗೆ ತೋರುವ "ಕರ್ನಲ್ ಹಿಲ್"ನ ಸ್ಮಾರಕ ಸ್ತಂಭ ನಿಂತಿದೆ. ಅಲ್ಲಿ ನಿಂತು ಊರನ್ನು

ವೀಕ್ಷಿಸಿದರೆ, ತೆಂಗಿನ ತೋಪಿನಡಿ ಕಂಡೂ ಕಾಣದಂತಿದ್ದ ಹೊನ್ನಾವರ ನಗರವು 'ಹಿರೇಹಳ್ಳಿ'ಯಂತೇ ಭಾಸವಾಗುತ್ತಿತ್ತು.!

ಭಾರವಾದ ವಾಹನಗಳಿಗೆ ಶರಾವತಿ ನದಿಯನ್ನು ದಾಟಿಸುವ ಸೌಕರ್ಯ ಇರಲಿಲ್ಲವಾದ್ದರಿಂದ ಉತ್ತರದಿಂದ ಆಗಮಿಸಿದ ಬಸ್-ಲಾರಿಗಳಿಗೆ ಹೊನ್ನಾವರದ ನದಿ ದಡ, ಕೊನೆಯ ನಿಲ್ದಾಣವಾಗಿತ್ತು. ಹುಬ್ಬಳ್ಳಿಯಿಂದ ನಸುಕಿನಲ್ಲಿ ಹೊರಟ ಮೋಟಾರುಗಾಡಿ ಕತ್ತಲಾಗುವ ಹೊತ್ತಿಗೆ ಹೊನ್ನಾವರ ಸೇರಿಕೊಂಡಿತೆಂದರೆ ಆದಿನ ಹೆಚ್ಚಿನ ಚಟುವಟಿಕೆಗಳೆಲ್ಲ ಮುಗಿದಂತೆಯೇ! ಮುಂಜಾನೆ ಕೋಳಿ ಕೂಗಿದಾಗಲೋ ಬ್ರದರ್ ಶಾಲೆಯ ಮೊದಲ ಕರೆ ಗಂಟೆ ಬಾರಿಸಿದಾಗಲೋ ಜನ ಎಚ್ಚತ್ತು ಪ್ರಾತರ್ವಿಧಿ, ಅಲ್ಪೋಪಹಾರಗಳನ್ನು ತೀರಿಸಿ ದೈನಂದಿನ ಚಟುವಟಿಕೆಗಳಲ್ಲಿ ಮೈಮರೆಯುತ್ತಿದ್ದರು. ಸೂರ್ಯಾಸ್ತದೊಂದಿಗೆ ಊರವರ ಚಟುವಟಿಕೆಗಳೆಲ್ಲ ಮುಗಿದಂತೆ! ಹೊನ್ನೆಣ್ಣೆಯ ದೀಪದ ಮಂದ ಬೆಳಕಿನಲ್ಲಿ ಓದು, ಪಠನ, ಪಾರಾಯಣ, ಭಜನೆಗಳು ನಡೆದು, ಊಟಮುಗಿಸಿ ಮಲಗಿದೊಡನೆ ಇನ್ನೊಂದು ನೆಮ್ಮದಿಯ ದಿನ ಕಳೆದಂತೆ. ಜನವಸತಿ ಕಡಿಮೆ ಇದ್ದುದರಿಂದ ಊರಲ್ಲಿ ಪ್ರತಿಯೊಬ್ಬರ ಪರಿಚಯ ಇನ್ನೊಬ್ಬರಿಗೆ ಇರುತ್ತಿತ್ತು.

ಲಿಂಗನಮಕ್ಕಿ ವಿದ್ಯುತ್ ಉತ್ಪಾದನೆಯ ಕೇಂದ್ರದ ಸ್ಥಾಪನೆಯಾಗಿ ಶರಾವತಿಯ ಹರಿಯುವ ನೀರಿನ ರಭಸ ಕಡಿಮೆಯಾಗಿ ಸ್ವಚ್ಛವಾಗಿದ್ದ ಜಲಪರಿಸರದಲ್ಲಿ ಹೂಳು, ತುಂಬಲಾರಂಭಿಸಿತು. ಹಂಚಿನ ಕಾರಖಾನೆಗಳು ಕಾಣಿಸಿಕೊಂಡು ಒಂದೇ ಸಮನೆ ಸೂಸುಮಣ್ಣು, ಉರವಲ ನುಂಗಲಾರಂಭಿಸಿದವು, ಕಟ್ಟಿಗೆ ಕೊರೆಯುವ ವಿದ್ಯುತ್ ಚಾಲಿತ ಯಂತ್ರಗಳು ಭರದಿಂದ ಕಾಡನ್ನು ಬರಿದುಮಾಡುಲಾರಂಭಿಸಿದವು. ಶರಾವತಿ, ಸೇತುವೆ, ವೇಗದ ವಾಹನಗಳಿಗೆ ಅನುವು ಮಾಡಿಕೊಟ್ಟು. ಸಾರಿಗೆ, ದಿನ-ರಾತ್ರಿ ನಡೆಯಲಾರಂಭಿಸಿತು. ವಿದೇಶೀ ವಿನಿಮಯಗಳಿಕೆಯ ನೆಪದಲ್ಲಿ ಮತ್ಸ್ಯ ಗ್ರಹಣ, ಸಂಗ್ರಹ, ಶೀತ ಭಂಡಾರಗಳು ಕಾಣಿಸಿಕೊಂಡವು. ಇವುಗಳಿಂದಾಗಿ ಆವರೆಗೆ ಅಲ್ಪತೃಪ್ತರಾಗಿದ್ದ ಜನರ ಜೀವನಾವಶ್ಯಕತೆಗಳೂ ಬೆಳೆಯಲಾರಂಭಿಸಿದವು. ಅಪಘಾತ, ಅಪಹರಣಗಳು ಹೆಚ್ಚಾಗಿ, ಕಳ್ಳತನ, ಕೊಲೆ, ಸುಲಿಗೆಗಳು ದೈನಂದಿನ ಘಟನೆಗಳಾದವು; ಊರು ಬೆಳೆದಂತೆ ಕೊಳಚೆ ಎಲ್ಲೆಡೆ ತಾಂಡವವಾಡಲಾರಂಭಿಸಿತು. 'ಕೊಂಕಣ ರೇಲ್ವೆ' ಓಡಲಾರಂಭಿಸಿತು. 'ಶರಾವತಿ ಟೇಲ್ ರೇಸ್' ವಿದ್ಯುದಾಗರ ಪೂರ್ತಿಗೊಂಡಾಗ ಈ 'ಹೊನ್ನಿನೂರಿನ' ರೂಪ ಹೇಗಾಗಬಹುದು? ಎಂದು ಊಹಿಸುವದು ಕಷ್ಟ! ನಮ್ಮ ಜಿಲ್ಲೆಯ ಇನ್ನಿತರ ಎಡೆಗಳ ಸ್ಥಿತಿಗತಿ ಇದಕ್ಕಿಂತ ತೀರ ಭಿನ್ನವಾಗಿಲ್ಲ. ಬ್ರಿಟಿಶ್ ಸರಕಾರ, ತನ್ನ ಆಡಳಿತವನ್ನು ಸುಭದ್ರವಾಗಿಸುವ ಉದ್ದೇಶದಿಂದ ಜನಜೀವನವನ್ನು ಆಳವಾಗಿ ಅಭ್ಯಸಿಸಿ, ವರದಿ ಒಪ್ಪಿಸಲು ಫ್ರಾನ್ಸಿಸ್ ಬುಕ್ಯಾನನ್ ಎಂಬಾತನನ್ನು ನೇಮಿಸಿತ್ತು (ಕ್ರಿ.ಶ. ೧೮೦೦). ಆತನು ಆ ಪ್ರಕಾರ ಅಧಿಕೃತ ವರದಿ ಒಪ್ಪಿಸಿದ. ೧೮೮೩ ರಲ್ಲಿ ಬಂದ ಉತ್ತರ ಕನ್ನಡ ಜಿಲ್ಲಾ ಗ್ಯಾಝೆಟೀಯರ್‌ದಲ್ಲಿ ಅಂದಿನವರ ಜೀವನದ ಕೂಲಂಕಷ ವಿವರಗಳಿವೆ. ನನ್ನ ವಿದ್ಯಾರ್ಥಿಜೀವನದ ಉತ್ತರ ಕನ್ನಡ (೧೯೫೩-೫೭)ಈ ಎರಡು ವರದಿಗಳ ಹಿನ್ನೆಲೆಯಲ್ಲಿ ತೀರ ಭಿನ್ನವಾಗಿರಲಿಲ್ಲ. ಮೊದಲ ಗೆಝೆಟಿಯರ್ ಬಂದ ಒಂದು ಶತಮಾನದ ನಂತರ (ಕ್ರಿ. ಶ. ೧೯೮೫) ನಮ್ಮವರ

ಛಾಯಾಚಿತ್ರಕಾರನಾಗಿ ಜಿಲ್ಲೆಯ ಮೂಲೆ ಮೂಲೆ ಅಲೆದಾಡಿದಾಗ ಆದ, ಆಗುತ್ತಿರುವ, ಬದಲಾವಣೆಗಳಿಂದ ಹೌಹಾರಿಹೋಗುವತಾಯ್ತು!

ಡಾಂಡೇಲಿಯ ಹತ್ತಿರದ 'ಸ್ಟಾಕ್ ಪ್ಯಾಂಟ್' ನಲ್ಲಿ ನಿಂತು ಕೆಳಗೆ ನೋಡಿದರೆ ಕಣಿವೆಯಲ್ಲಿ ಹರಿಯುವ ಕಾಳಿ ನದಿಯಲ್ಲಿ ಬಾಯಾರಿಕೆ ನೀಗಿಸಲು ಬರುವ ಹುಲಿರಾಯನ ದರ್ಶನ ಪಡೆಯಬಹುದಾದ ಕಾಲವೊಂದಿತ್ತು ಇಂದು ಅಲ್ಲಿ ಗೋಚರಿಸುವದು, ನಾಗಝರಿ ವಿದ್ಯುದಾಗರದ ಭವ್ಯ ಕಟ್ಟಡದ ನೋಟ ಮಾತ್ರ! ಸುಪಾ, ಒಮ್ಮೆ ಸುಂದರ ಊರಾಗಿತ್ತು. ಇಂದು ಅದರ ಜಲಸಮಾಧಿಯಾಗಿವೆ. ಅಲ್ಲಿಯ ಜನವಸತಿಯನ್ನು ರಾಮನಗರಕ್ಕೆ ಹೊಡೆದೋಡಿಸಲಾಗಿದೆ. ಅಲ್ಲಿಯ ಹೊಸಭೂಮಿಯ ಸರಿಯಾದ ಪರಿಶೀಲನೆಯಾಗದೇ ಮಾಡಿದ ಕೃಷಿಯ ಹೆಚ್ಚಿನ ಪಾಲನ್ನು ಗೆದ್ದಲು ನುಂಗಿ ನಾಶಮಾಡುತ್ತವಂತೆ! ಜೊಯ್ಡಾ ತಾಲೂಕನ್ನು ಹೊಸದಾಗಿ ಅಸ್ತಿತ್ವಕ್ಕೆ ತರಲಾಗಿದೆ, ಎಂದು ಅರಿತವರು ತೀರ ಕೆಲವರು. ಇಂದಿನ ದಿನಗಳಲ್ಲಿ ಕೈಗಾ ಅಣುಶಕ್ತಿ ವಿದ್ಯುದಾಗರ, ಸುತ್ತ ಮುತ್ತಲ ಅತ್ಯಮೂಲ್ಯ ಪರಿಸರವನ್ನು ಕಬಳಿಸುತ್ತಿದ್ದರೆ, ಕಾರವಾರದ 'ಸೀಬರ್ಡ್', ನೌಕಾಪಡೆ ಯೋಜನೆ, ಬಿಣಗಾದಿಂದ ಅಂಕೋಲೆಯವರೆಗೆ, ಕರಾವಳಿ ಗುಂಟ ಹಬ್ಬಿದ ಫಲವತ್ತಾದ ಕೃಷಿಭೂಮಿಯನ್ನು ಪೂರ್ತಿಯಾಗಿ ನುಂಗಲಿದೆ. ಹೀಗೆ ಔದ್ಯೋಗೀಕರಣ, ಸುಧಾರಣೆ, ಆದಾಯದಲ್ಲಿ ಹೆಚ್ಚಳ ಮುಂತಾದವುಗಳ ಹೆಸರಿನಲ್ಲಿ ಪರಿಸರವನ್ನೆಲ್ಲ ಹಾಳುಗೆಡವಲು ನಾವೆಲ್ಲ ಟೊಂಕಕಟ್ಟಿ ನಿಂತಂತೆ ಭಾಸವಾಗುತ್ತದೆ! ನಮ್ಮ ಆಸೆ-ಆಕಾಂಕ್ಷೆಗಳಿಗೆ ಮಿತಿಯೆಂಬುದಿಲ್ಲ. ಒಂದೆಡೆ ಜನಸಂಖ್ಯೆಯ ಭರದಿಂದ ಏರಿಕೆ, ಇನ್ನೊಂದೆಡೆ, ಸಂಪನ್ಮೂಲಗಳಿಲ್ಲದೇ ಸುಖಸಮೃದ್ಧಿಗಳ ಬೇಡಿಕೆ. ಇವು ಬೆಳೆಯುತ್ತಲೇ ಇರುವಾಗ, ಪೂರೈಕೆಯು ಎಲ್ಲಿಂದ ಆಗಬೇಕೆಂದು ನಾವಾರೂ ಯೋಚಿಸಿದಂತೆ ಕಾಣುವದಿಲ್ಲ.

ನಮಗೆ ತಾಂತ್ರಿಕ ಪ್ರಗತಿ ಬೇಕಾಗಿಯೇ ಇಲ್ಲ! ಎನ್ನುವ ಸಾಹಸ ಯಾರೂ ಮಾಡಲಾರರು! ಆದರೆ ಜೀವನದ ಸೌಲಭ್ಯಗಳನ್ನು ನಿರ್ಮಿಸಿಕೊಳ್ಳುವಾಗ, ಪರಿಸರವೂ ಸುರಕ್ಷಿತವಾಗಿರುವಂತೆ ಹೆಚ್ಚಿನ ಕಾಳಜಿ ವಹಿಸುವದು ಅತ್ಯವಶ್ಯ. ಸೀಮೆಯೆಣ್ಣೆ ಪೆಟ್ರೋಲಗಳ ಮೇಲೆ ಶಾಶ್ವತವಾಗಿ ಪರಾವಲಂಬಿಗಳಾದ ನಾವು ಯಾಕೆ ಗಂಭೀರವಾಗಿ ಯೋಚಿಸುತ್ತಿಲ್ಲ? ಅದರಿಂದ ಸ್ವಾವಲಂಬಿ ಗ್ರಾಮ-ಜೀವನಕ್ಕೆ ಎಷ್ಟೋ ಅನುಕೂಲವಾಗುತ್ತಿತ್ತು. ಪ್ರಚಲಿತವಿದ್ದ ಗೃಹೋದ್ಯೋಗ ಕೈಗಾರಿಕೆಗಳಿಗೇ ಪ್ರಚೋದನೆ ಸಿಗುತ್ತಿದ್ದರೆ ಇಂದಿನ ನಿರುದ್ಯೋಗ ಸಮಸ್ಯೆ ಪೆಡಂಭೂತವಾಗಿ ಕಾಡಲು ಅವಕಾಶವಾಗುತ್ತಿರಲಿಲ್ಲ. ಮುಂದುವರಿದ ಜಪಾನೀಯರು, ತಮ್ಮ ಪೂರ್ವಕಾಲೀನ ಕೈಗಾರಿಕೆಗಳನ್ನು ಸುರಕ್ಷಿತವಾಗಿ ಕಾಯ್ದುಕೊಂಡೇ ಕ್ರಮವಾಗಿ ಬೃಹತ್ ಔದ್ಯೋಗಿಕರಣಕ್ಕೆ ದಾರಿ ಮಾಡಿಕೊಂಡರು, ಎಂದು ಇಲ್ಲಿ ಸ್ಮರಿಸಿಕೊಳ್ಳಬಹುದು. ಅಮೇರಿಕೆಯಂಥ ಧನಾಢ್ಯ ರಾಷ್ಟ್ರವೂ ತಮ್ಮ ಪೂರ್ವಜರು ಪರಿಸರಕ್ಕೆ ಮಾಡಿದ ಅಪಚಾರಕ್ಕೆ ಮರುಗಿ, ಆದ ಅನ್ಯಾಯವನ್ನು ಈಗಾದರೂ ಸರಿಪಡಿಕೊಳ್ಳಲು ಯತ್ನಿಸುತ್ತಿರುವಾಗ, ನಾವು ಪಾಠ ಕಲಿಯಬಾರದೇ?

'ನಮ್ಮ ಸಕಲ ಆವಶ್ಯಕತೆಗಳಿಗಾಗಿ ಭೂಮಾತೆಯನ್ನೇ ಅವಲಂಬಿಸಿದ್ದೇವೆ' ಎಂಬ ಸಾರ್ವಕಾಲಿಕ ಸತ್ಯವನ್ನು ಮರೆಯುವಂತಿಲ್ಲ. ಈ ದಿಕ್ಕಿನಲ್ಲಿ ಪರಿಸರದ ಸ್ಪಂದನವನ್ನು ನಾವು ಗಿಡಮರಗಳಿಂದ, ಪಶು-ಪಕ್ಷಿಗಳಿಂದ ಕಲಿಯುವದು ಅಪಾರವಾಗಿದೆ.

ಶತಶತಮಾನಗಳಿಂದ ವೃಕ್ಷಗಳು ನೀರು ಪೌಷ್ಟಿಕತೆಗಳನ್ನು ನೆಲದಿಂದ ಹೀರಿಕೊಳ್ಳುತ್ತ ಸುತ್ತಲ ಪರಿಸರಕ್ಕೆ ನೆರಳು, ಪ್ರಾಣವಾಯು, ಆರ್ದ್ರತೆಗಳನ್ನು ನೀಡುತ್ತ ಬಂದಿವೆ. ಶತಮಾನಗಳಿಂದ ಗೇರಸೊಪ್ಪಾ ಕಾಡುಗಳಲ್ಲಿ ಕಂಡುಬರುವ ಕಾಡಾನೆಗಳು, ಶಕ್ತಿ - ಸಾಮರ್ಥ್ಯ, ಬುದ್ಧಿವಂತಿಕೆಗಳಿಗೆ ಹೆಸರಾದರೂ, ತಮ್ಮ ಪಾಡಿಗೆ ತಾವು ಪ್ರಕೃತಿಯೊಂದಿಗೆ ಹಾಸುಹೊಕ್ಕಾಗಿ ಜೀವಿಸುತ್ತಿವೆ. ಕಾಡಿನಲ್ಲಿ ಹೇರಳವಾಗಿ ಲಭ್ಯವಿರುವ ಸೊಪ್ಪು ದಂಟುಗಳೇ ಅವಕ್ಕೆ ಮೃಷ್ಟಾನ್ನ. ಮಾಂಸಾಹಾರಕ್ಕೆ ಆಸೆಪಡದ ಕಾಡಾನೆ, ವರ್ಷದುದ್ದಕ್ಕೂ ತನ್ನ ಬಳಗಕ್ಕೆ ಆಹಾರ ಒದಗುವಂತೆ ಮುನ್ನೆಚ್ಚರಿಕೆ ವಹಿಸುತ್ತದೆ. ಒಂದೆಡೆ ಸ್ಥಾಯಿಯಾಗಿ ನೆಲೆಸಿ ಅಲ್ಲಿಯ ಕಾಡನ್ನು ಮೆದ್ದು ಬರಿದು ಮಾಡುವ ಬದಲು, ಆಗಾಗ ನೂರಾರು ಕಿಲೋ ಮೀಟರ ದೂರದ ಕಾಡುಗಳಲ್ಲಿ ಸಂಚರಿಸುತ್ತ ಉದರ ನಿರ್ವಹಣೆ ಮಾಡುವ ಜಾಣತನ ತೋರುತ್ತದೆ. ಇದರಿಂದಾಗಿ ಮೊದಲು ಮೇವು ಪೂರೈಸಿ ಬರಿದಾದ ವನರಾಜಿ ತಿರುಗಿ ಚಿಗಿತು ಆಹಾರ ಪೂರೈಸುತ್ತದೆ. ಆನೆ ಮಿತಸಂತಾನಿ ಬೇರೆ! ಇಷ್ಟಾದರೂ ಹುಟ್ಟಿದ ಮರಿಗಳೆಲ್ಲ ಬದುಕಿ ಬಾಳುವಂತಾಗಿದ್ದರೆ, ಅವೆಲ್ಲವುಗಳ ಆಹಾರ ಪೂರೈಕೆಗೆ ಅಸ್ತಿತ್ವದಲ್ಲಿರುವ ಸಕಲ ಕಾಡೂ, ವಾಸಕ್ಕಾಗಿ ಇಡೀ ಭೂಮಂಡಲವೂ ಸಾಲುತ್ತಿರಲಿಲ್ಲ! ಆನೆಯ ಬಳಗ, ಹುಟ್ಟು-ಸಾವುಗಳನ್ನು ಸಮತೋಲ ದೃಷ್ಟಿಯಿಂದ ಸ್ವಾಗತಿಸುತ್ತದೆ. ಗಂಡು-ಹೆಣ್ಣು ಮರಿಗಳಲ್ಲಿ ತಾರತಮ್ಯ ಮಾಡದೇ ಪ್ರೀತಿಯಿಂದ ರಕ್ಷಿಸಿ ಬೆಳೆಸುತ್ತದೆ. ಆದರೆ ಅದರ ಕೋರೆಗಳಿಗಾಗಿ ನಡೆದ ಹತ್ಯಾಕಾಂಡದಿಂದಾಗಿ ಸದ್ಯಕ್ಕೆ ಬದುಕುಳಿದ ಹೆಣ್ಣಾನೆಗಳಿಗೆ ಗಂಡಾನೆಯ ಸಹವಾಸ ದೊರೆಯದೇ ಉಂಟಾದ ದಾರುಣಸ್ಥಿತಿಯ ನಿರ್ಮಾಣದ ಯಶಸ್ಸು ದಂತಚೋರ ಮಾನವನಿಗೆ ಸಲ್ಲುತ್ತದೆ.

ದಟ್ಟಕಾಡು, ಸತತವಾದ ನೀರಿನ ಪೂರೈಕೆ, ವಿಪುಲ ವನ್ಯ ಆಹಾರವಿರುವಲ್ಲಿ ಹುಲಿಗಳು, ಬೀಡು ಬಿಟ್ಟಿರುತ್ತಿದ್ದವು. ಕ್ರೌರ್ಯಕ್ಕೆ ಹೆಸರಾದ ಹೆಬ್ಬುಲಿಯೂ ಮಾನವನಿಗೆ ಹೋಲಿಸಿದರೆ - ಅತಿ ಸೌಮ್ಯ ಜೀವಿ, ಎನಿಸದೇ ಇರದು. ಕೇವಲ ಉದರ ನಿಮಿತ್ತವಾಗಿ ಅದು ಇತರ ಜೀವಿಗಳ ಬೇಟೆ ಆಡುತ್ತದೆ. ತನ್ನ ಶಕ್ತಿಸಾಮರ್ಥ್ಯ ಪ್ರದರ್ಶನಕ್ಕಾಗಿ, ಇಲ್ಲವೇ ವಿನೋದಕ್ಕಾಗಿ ಎಂದೂ ಶಿಕಾರಿಮಾಡುವದಿಲ್ಲ. ತನ್ನ ವಾಸಸ್ಥಳವನ್ನು ಕೊಂದ ಚಿಗರೆಯ ಕೊಂಬು, ಕಾಡೆಮ್ಮೆಗಳ ಶಿರಗಳಿಂದ ಅಲಂಕರಿಸಿ ಬೀಗುವದಿಲ್ಲ. ಹಸಿದಾಗೊಮ್ಮೆ ಮನಸ್ವೀ ಭೋಜನ ಮುಗಿಯಿತೆಂದರೆ. ಎದುರಿನಲ್ಲೇ ಹುಲ್ಲೆ ಮೇಯುತ್ತಿದ್ದರೂ, ಅದರ ಗೋಜಿಗೆ ಹೋಗುವದಿಲ್ಲ. ಅಷ್ಟೇ ಅಲ್ಲ. ತಾನಾಡಿದ ಬೇಟೆಯ ಮೇಲೆ ನರಿ, ಕಾಡುನಾಯಿ, ತೋಳ, ಹದ್ದುಗಳು ಯಥೇಷ್ಟ ಭೋಜನ ನಡೆಸಿದರೂ ಆಕ್ಷೇಪವೆತ್ತುವದಿಲ್ಲ! ಮಾನವನಿಗೆ ಇಂಥ ಹೃದಯವಂತಿಕೆ ಎಂದಿದ್ದರೂ ಸಾಧ್ಯವೇ?

ಆಗೊಮ್ಮೆ, ಈಗೊಮ್ಮೆ ತಿಮಿಂಗಿಲವೊಂದು ಜಿಲ್ಲೆಯ ಕಡಲ ದಂಡೆಗೆ ಬಂದು

ಸಾವನ್ನಪ್ಪುವದು ಸಾಮಾನ್ಯ. ಇದು ಬಲು ಭಾರದ ಕಡಲ ಜೀವಿಯಾಗಿದ್ದರೂ ನೀರಿನಲ್ಲಿ ತೇಲುವ ಅತಿ ಸೂಕ್ಷ್ಮವಾದ ಸಸ್ಯಗಳನ್ನು, ಪ್ರಾಣಿಗಳನ್ನು, ಬೇರ್ಪಡಿಸಿ ಅವುಗಳನ್ನೆ ಆಹಾರವಾಗಿ ಬಳಸುತ್ತದೆ. ಇದರಿಂದಾಗಿ ಅದು ತನ್ನ ಹೊಟ್ಟೆಯನ್ನು ಹೊರಕೊಳ್ಳುವ ಜೊತೆಗೆ ಪರಿಸರ ನೈರ್ಮಲ್ಯವನ್ನು ಕಾಪಾಡಿಕೊಳ್ಳುತ್ತದೆ. ಇದರಿಂದಾಗಿ ತಿಮಿಂಗಿಲಗಳ ಸಮಾಜದಲ್ಲಿ ಕಸಕಡ್ಡಿಗಳ ತೊಟ್ಟಿಗಳು, ಪೌರಕಾರ್ಮಿಕರ ಅವಶ್ಯಕತೆಯೇ ಇಲ್ಲ! ಇವು ತುಂಬ ಸಾಧು ಪ್ರಾಣಿಗಳಾಗಿದ್ದರಿಂದ, ವಿವಿಧ ಪ್ರಭೇಗಳಿಗೂ ಸೇರಿದ ಅಸಂಖ್ಯ ಮಿನುಗಳು ಅವುಗಳನ್ನು ಹಿಂಬಾಲಿಸುತ್ತ ಸಹ ಭೋಜನ ನಡೆಸುತ್ತವೆ. ತನ್ನೊಂದಿಗೆ ಇನ್ನಿತರ ಜಲಜೀವಿಗಳಿಗೂ ಬದುಕುವ ಅನುಕೂಲತೆ ಕಲ್ಪಿಸಿಕೊಡುವ ಶ್ರೇಯಸ್ಸು ತಿಮಿಂಗಲು ವರ್ಗಕ್ಕೆ ಸಲ್ಲುತ್ತದೆ.

ಕರ್ಣಕರ್ಕಶವೆಂದು ಅಪಖ್ಯಾತಿ ಪಡೆದರೂ ಕಾಕ-ಸಮಾಜಕ್ಕೆ, ಮೊಟ್ಟ ಮೊದಲ 'ಪಂಚಾಯತ್ ರಾಜ್ಯ' ಆಚರಣೆಗೆ ತಂದ ಕೀರ್ತಿ ಸೇರಬೇಕು. ಸ್ಥಳೀಯವಾಗಿ ಏನಾದರೂ ಅಕ್ರಮ, ಅತ್ಯಾಚ್ಯಾರ ನಡೆದರೆ, ಕಾಕ ತಂಡದ ಮುಖ್ಯಸ್ಥನು ಕಹಳೆಯೂದಿ, ಪಂಚರನ್ನು ಆಮಂತ್ರಿಸಿ, ಬೃಹತ್ ಕಾಕ ಸಭೆಯನ್ನು ಸೇರಿಸಿಯೇ ಬಿಡುತ್ತಾನೆ. ಅತಿಕ್ರಮ ಮಾಡಿದವರು, ವಂಚನೆ, ಮೋಸ ಕೈಕೊಂಡವರು, ತಮ್ಮ ತಪ್ಪನ್ನು ಒಪ್ಪಿಕೊಂಡಾಗ, ಮುಂದಾಳುಗಳು ಅವನ್ನು ಕುಕ್ಕಿ ಒಂದೆರಡು ಗರಿ ಕಿತ್ತಿಹಾಕಿ ಶಿಕ್ಷಿಸುತ್ತವೆ. ತಪ್ಪಿಸ್ಥರು ಜೈಲು ಸೇರಿ ಕೊಳೆಯಬೇಕಾಗಿಲ್ಲ. ಕೊಲೆ, ಸುಲಿಗೆಯಂಥ ಮಹಾಪರಾಧಗಳೇ ಇಲ್ಲದ್ದರಿಂದ ಮರಣದಂಡನೆಯಂಥ ಶಿಕ್ಷೆಯ ಅವಶ್ಯಕತೆಯಿಲ್ಲ. ಮಾನವನು ಕಾಗೆಯಷ್ಟಾದರೂ ಸತ್ಯವಂತನಾಗಿ ಬದುಕುವಂತೆ ಆಗಿದ್ದರೆ ತನ್ನ ಜೀವನಕ್ಕೊಂದು ಅರ್ಥ ಕಲ್ಪಿಸಬಹುದಿತ್ತು!

ಅತಿಮಂದಮತಿಯಾದ ಮಂಡೂಕರಾಯನಿಗೂ, ನಿಂತ ಮಳೆಯ ನೀರಿನಲ್ಲಿ ಮೊಟ್ಟೆಗಳನ್ನಿಟ್ಟು ಮರಿಮಾಡಬೇಕೆಂಬುದು ಗೊತ್ತು. ಸಂತತಿ ಮಿತಿಮೀರಿದರೆ ತಮ್ಮ ಇಡೀವರ್ಗವೇ ಹಸಿವಿನಿಂದ ಸಾಯುವದು ಖಚಿತವೆಂದರಿತ ಪಶು ಪಕ್ಷಿಗಳೂ ಮಿತಸಂತಾನದ ಸೂತ್ರಗಳನ್ನು ಚಾಚೂ ತಪ್ಪದೇ ಪಾಲಿಸುತ್ತವೆ. ಕಷ್ಟಪಟ್ಟು ಗಿಡ ಗಂಟೆಗಳಲ್ಲಿ ಗೂಡು ಕಟ್ಟುವ ಸೂರಕ್ಕಿ, ನಾಲ್ಕು ಮೊಟ್ಟೆಯಿಟ್ಟು, ಕಾವು ಕೊಡುವಾಗ, ಮರಿಬೆಳೆಯುವಾಗ, ಬೀಸುಗಾಳಿಯಿಂದಾಗಿ, ಕಾಗೆ -ಹಾವುಗಳಂಥ ಕಡುವೈರಿಗಳಿಂದಾಗಿ, ಒಂದೆರಡು ಮರಿಗಳು ಮೃತಪಟ್ಟರೂ, ತಿರುಗಿ ಮರಿಮಾಡುವದರಲ್ಲಿ ಮನಸ್ಸು ಹಾಕುವದಿಲ್ಲ. ಸರ್ವ, ಸಂತಾನದ ನಾಶವಾದಾಗ ಮಾತ್ರ ತಿರುಗಿ ಗೂಡುಕಟ್ಟಿ, ಮೊಟ್ಟೆಗಳನ್ನಿಟ್ಟು ಮರಿಮಾಡುತ್ತದೆ. ಸಂತತಿ ನಿಯಂತ್ರಣದ ಯಾವತ್ತೂ ಸಾಧನಗಳು ಲಭ್ಯವಿದ್ದರೂ ಜನಸಂಖ್ಯೆ ಏರಿಸುತ್ತಲೇ ಹೊರಟಿರುವ ಮೂರ್ಖ ಮಾನವನು ಈ ಪುಟ್ಟ ಹಕ್ಕಿಯಿಂದಲಾದರೂ ಮಿತಿ ಸಂತಾನದ ಪಾಠ ಕಲಿಯಬಾರದೇ?

ದೈಹಿಕ ಶ್ರಮದ ಆವಶ್ಯಕತೆಯ ಬಗ್ಗೆ ಜೇನ್ನೊಣಗಳಿದ ಪಾಠಕಲಿಯಬೇಕು. ಗಂಡು ನೊಣಗಳು, ಪುಷ್ಪವತಿಯರಾದ ಹೆಣ್ಣು ನೊಣಗಳನ್ನು ಫಲವತಿಯನ್ನಾಗಿಸುವದು ಮಾತ್ರ ತಮ್ಮ ಕರ್ತವ್ಯವೆಂದು ನಂಬಿ ಕೆಲಸಗಾತಿ ನೊಣಗಳು ಬಲುಕಷ್ಟಪಟ್ಟು ಸಂಚಯಿಸಿದ

ಮಧುವನ್ನು ನೆಕ್ಕಿ ಮೋಜಾಗಿರಬಯಸುತ್ತವೆ. ಆದರೆ ಗೂಡಿನಲ್ಲಿ ಆಹಾರದ ಕೊರತೆಯಾದಾಗ ಇವೇ ಕೆಲಸಗಾತಿಯರು ಸೋಮಾರಿ ಗಂಡುಗಳನ್ನು ಗೂಡಿನಿಂದ ಹೊರಹಾಕಿಬಿಡುವವು. ರಾಣಿಯ ಆಶ್ರಯತಪ್ಪಿದ ಈ ಅನಾಥ ಗಂಡುಗಳಿಗೆ ಮೃತ್ಯುವನ್ನು ಸ್ವಾಗತಿಸಿ ವೀರಸ್ವರ್ಗ ಸೇರುವದೊಂದೇ ಮಾರ್ಗ! ಇರುವೆಗಳೂ ಗಂಡುಗಳಿಗೆ ಪುಕ್ಕಟೆ ಉಣಬಡಿಸಲು ಒಪ್ಪದೇ ದುಡಿದು ದಣಿಯುವಂತೆ ಮಾಡುತ್ತವೆ. ಮಾನವನ ಸಮಾಜದಲ್ಲೂ ಈ ಕಾನೂನು ಕಡ್ಡಾಯವಾಗಿ ಜಾರಿಗೆ ಬಂದಿದ್ದರೆ. ಅದೆಷ್ಟು ಚೆನ್ನಾಗಿರುತ್ತಿತ್ತು.!

ವಲಸೆಹೋಗುವ ಮೀನು, ಪಾತರಗಿತ್ತಿ, ಪಶು-ಪಕ್ಷಿಗಳು ಅನ್ನ ನೀರು ಇಲ್ಲದೇ ಹಗಲೂ-ರಾತ್ರಿಗಳನ್ನು ಲೆಕ್ಕಿಸದೆ ಸಹಸ್ರಾರು ಕಿಲೋಮೀಟರ ದೂರದ ಪಯಣ ಕೈಕೊಳ್ಳುತ್ತವೆ. ಅದೇ ಮಾನವನು ಎರಡು ಮೂರು ಕಿ.ಲೋ.ಮೀಟರ ದೂರದ ದಾರಿ ಕ್ರಮಿಸಲು ದ್ವಿಚಕ್ರ ವಾಹನಗಳನ್ನು ಬಯಸುತ್ತಾನೆ. ಕಾರು-ಹೆಲಿಕಾಪ್ಟರ್‌ಗಳಲ್ಲಿ ಪಯಣಿಸುವವನು ಅದೃಷ್ಟವಂತನೆನಿಸಿಕೊಳ್ಳುವವ, ಕಾಲುನಡಿಗೆಯಿಂದಲೇ ಯಾವ ಮೂಲೆಯನ್ನಾದರೂ ತಲುಪಬಹುದಾದ ಹೊನ್ನಾವರ ಒಂದರಲ್ಲೇ ಅದೆಷ್ಟು ಮೊಪೆಡ್, ಸ್ಕೂಟರ್, ಆಟೋ, ಟ್ಯಾಕ್ಸಿಗಳು! ಇವನ್ನು ಓಡಾಡಿಸಲು ಬೇಕಾಗುವ ಪೆಟ್ರೋಲ್ ಪಡೆಯಲು ನಮ್ಮ ಬಡದೇಶ ಅತ್ಯಮೂಲ್ಯ ವಿದೇಶಿ ವಿನಿಮಯ ಮೊತ್ತ ಸುರಿಯಬೇಕಾಗುವದೆಂದು ಈ ವಾಹನಗಳನ್ನು ಬಳಸುವವರು ಅರಿತುಕೊಳ್ಳುವ ಗೋಜಿಗೆ ಹೋದಂತಿಲ್ಲ. ಪರಿಸರ ಕಲುಷಿತಗೊಳಿಸುವ ಜೊತೆಗೆ ಭೂಮಾತೆಯು ಕೋಟಿಗಟ್ಲೆ ವರ್ಷಗಳಿಂದ ಕೂಡಿ ಹಾಕಿದ ಪೆಟ್ರೋಲನ್ನು ಮುಂಬರುವ ಮೂರು ದಶಕಗಳಲ್ಲೇ ಬರಿದು ಮಾಡಿ ಬಿಡುವ ಶ್ರೇಯಸ್ಸು ನಮ್ಮದಾಗುವದರಲ್ಲಿ ಶಂಕೆಯೇ ಇಲ್ಲ.

ಕೀಟಬಾಧೆ ಮಾನವನಂತೆ ಇನ್ನಿತರ ಪ್ರಾಣಿಗಳಿಗೂ ತಪ್ಪಿದ್ದಲ್ಲ. ಆದರೆ ಅವು ನಮ್ಮಂತೆ ಅತ್ಯಂತ ವಿಷಕಾರಿ ರಸಾಯನಗಳನ್ನು ಸಿಂಪಡಿಸಿ ಪರಿಸರವನ್ನು ಕಲುಷಿತಗೊಳಿಸುವದಿಲ್ಲ. ಬದಲಿಗೆ ಕೆಲವು ನಿರುಪದ್ರವಿ ಕ್ರಮಗಳನ್ನು ತಮ್ಮದಾಗಿಸಿವೆ. ಗುಬ್ಬಿಗಳಿಗೆ ಮೈತುಂಬ ಹೇನುಗಳಾದರೆ ಧೂಳಿನಲ್ಲಿ ಹೊರಳಾಡಿ, ಅವುಗಳ ಬಾಧೆಯಿಂದ ಮುಕ್ತಿ ಪಡೆಯುತ್ತವೆ. ಕುಕ್ಕುಟಗಳು, ಕಾಲಿನ ಪಂಜುಗಳಿಂದ ಝಾಡಿಸಿಕೊಳ್ಳುತ್ತವೆ. ಕಾಗೆಗಳು ಕೊಕ್ಕಿನಿಂದ ಹೆಕ್ಕಿ ಉದರಕ್ಕಿಳಿಸುತ್ತವೆ. ಕೋತಿಗಳು ಪರಸ್ಪರ ಹೇನು ಹೆಕ್ಕಿ ನುಂಗುವದು ಸಾಮಾನ್ಯ. ದನಕರುಗಳು ಉಣ್ಣೆಯ ಬಾಧೆಯಿಂದ ರಕ್ಷಿಸಿಕೊಳ್ಳಲು ಬೆಳ್ಳಕ್ಕಿಗಳ ನೆರವು ಪಡೆಯುತ್ತವೆ. ಆನೆಗಳು ತಮ್ಮ ಚರ್ಮಕ್ಕಾದ ಗಾಯಕ್ಕೆ ಕೀಟ ಬಾಧೆಯಾದಾಗ ಹೋಗಲಾಡಿಸಲು ಇದೇ ತಂತ್ರ ಬಳಸುವದುಂಟು ಖಡ್ಗಮೃಗದ ಸುತ್ತ ಸಣ್ಣ ಸಣ್ಣ ಹಕ್ಕಿಗಳು ಸುತ್ತುವರಿದು ತಮ್ಮ ಬಲಾಢ್ಯ ಸ್ನೇಹಿತನ ಕೀಟಬಾಧೆ ಕಡಿಮೆ ಮಾಡುತ್ತವೆ. ಹುಲುಮನುಜನಿಗೆ ಇಂಥ ನೈಸರ್ಗಿಕ ತಂತ್ರಗಳಲ್ಲಿ ವಿಶ್ವಾಸವಿದ್ದಿದ್ದರೆ ಪರಿಸರದ ಪರಿಶುದ್ಧತೆಯನ್ನು ಸುಲಭವಾಗಿ ಕಾಯ್ದುಕೊಂಡು ಹೋಗಬಹುದಾಗಿತ್ತು. ಆದರೆ ದುರ್ದೈವದಿಂದ ಆತನಿಗೆ ತನಗಾಗದವರನ್ನು ಸದೆಬಡಿಯಲು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ

ಬಿಡುವದರಲ್ಲಿ ಹೆಚ್ಚಿನ ವಿಶ್ವಾಸ.

ಪ್ರಾಣಿಗಳಲ್ಲಿ ವಿವಿಧ ಕಾರಣಗಳಿಗಾಗಿ ಕಾದಾಡುವದು ತೀರ ಸಾಮಾನ್ಯ. ಹುಲಿಗಳು ಪರಚಿಕೊಂಡರೆ, ನಾಯಿಗಳು, ಕಚ್ಚಿಕೊಳ್ಳುವವು. ಗೋವುಗಳು ಕೋಡುಗಳಿಂದ ಹಣಿದುಕೊಂಡರೆ, ಆನೆಗಳು ಸೊಂಡಿಲಿನಿಂದ ಸದೆ ಬಡಿಯಲು ಯತ್ನಿಸುವವು. ಕೋಳಿಗಳು ಪ್ರತಿಸ್ಪರ್ಧಿಗಳ ಗೋಣು ಮುರಿಯಲು ಯತ್ನಿಸಿದರೆ ಹೆಬ್ಬಾವು ವೈರಿಯನ್ನು ನುಂಗಿಬಿಡಬಹುದು. ಆದರೆ ತನ್ನವರನ್ನೇ ಕೊಂದು ಗೆಲ್ಲಲು ಬಯಸುವ, ಹಣಕ್ಕಾಗಿ ಕೊಲ್ಲುವ ಮಾನವನಷ್ಟು ಕ್ರೂರ ಪ್ರಾಣಿ ಇನ್ನಾವುದೂ ಇಲ್ಲ. ಇದೇ ಧೋರಣೆ ಮುಂದುವರಿದರೆ ತಾನೂ ಪೆಡಂಭೂತಗಳಂತೆ ನಶಿಸಿ ಹೋದರೆ ಏನೂ ಆಶ್ಚರ್ಯವಿಲ್ಲ! ಇನ್ನಿತರ ಪಶು -ಪಕ್ಷಿಗಳು ಪರಿಸರದೊಂದಿಗೆ ಒಂದಾಗಿ ತಮ್ಮ ಸಮಸ್ಯೆಗಳಿಗೆಲ್ಲ ತಾವೇ ಪರಿಹಾರ ಕಂಡುಕೊಂಡಿವೆ, ಎಂಬುದನ್ನು ಅರಿತು, ಅವಿವೇಕದ ದುಡುಕುತನವನ್ನು ಕೈಬಿಟ್ಟರೆ ಸಕಲ ಜೀವಿಗಳೊಂದಿಗೆ ಒಂದಾಗಿ ಬಾಳುವದು ಸಾಧ್ಯವಾಗಬಹುದು.

ಆರ್. ಎನ್. ನಾಯ್ಕ ಮಾಸ್ತರರು ಸಾಹಿತ್ಯದಲ್ಲಿ ಪದವೀಧರರಾಗಿ, ಸದಾಕಾಲ ನವನವೀನ ಶಿಕ್ಷಕರನ್ನು ಬರಮಾಡಿಕೊಳ್ಳುತ್ತಿದ್ದ ನ್ಯೂ ಇಂಗ್ಲಿಷ್ ಸ್ಕೂಲ್‌ನಲ್ಲಿ ಸೇರಿದ ಹೊಸದರಲ್ಲಿ ನಮ್ಮ ವರ್ಗಕ್ಕೆ 'ಸಾಹಿತ್ಯವೆಲ್ಲರಿಗಿಲ್ಲ'! ಎಂಬ ಪ್ರಬಂಧವನ್ನು ಬರೆಯಲು ಕೊಟ್ಟಿದ್ದರು. ಆ ಕುರಿತು ಏನು ಬರೆಯಬೇಕು ಎಂದು ಗೊತ್ತಾಗದೇ ನನಗೂ ಸಾಹಿತ್ಯಕ್ಕೂ ಎಣ್ಣೆ ಸೀಗೆಕಾಯಿ ನಂಟು ಎಂದು ಮನವರಿಕೆಯಾಗಿಬಿಟ್ಟಿತ್ತು. ಅಂತೆಯೇ ವಿದ್ಯಾರ್ಥಿ ಜೀವನದ ಉದ್ದಕ್ಕೂ ಕತೆ, ಕವನ, ಪ್ರಬಂಧ ಇತ್ಯಾದಿ ಯಾವುದನ್ನೂ ಬರೆಯುವ ಸಾಹಸಕ್ಕೆ ಹೋಗಿರಲಿಲ್ಲ. ಆದರೆ ಸಾಹಿತ್ಯ ಓದಿದವರ ಬಗ್ಗೆ, ಸಾಹಿತಿಗಳ ಬಗ್ಗೆ ಅಪಾರ ಗೌರವವಿತ್ತು. ಶಾಲಾಕಾಲೇಜು ದಿನಗಳಲ್ಲಿ ಡಾ। ಎಲ್. ಆರ್. ಹೆಗ್ಡೆ, ಡಾ।ಜಿ.ಎಸ್. ಆಮೂರರ ಪ್ರಭಾವಕ್ಕೆ ಒಳಗಾಗಿದ್ದೆ. ೧೯೫೪ರಲ್ಲಿ ಕುಮಟಾದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಯಾದರೋ ಕ್ಯಾಮರಾ ಎರವಲು ತಂದು ಕೂಡಿಟ್ಟಿದ್ದ ಪುಡಿಗಾಸಿನಿಂದ ಫಿಲ್ಮ ತಂದು ಕನ್ನಡ ಸಾಹಿತಿಗಳ ಛಾಯಾಗ್ರಹಣ ಮಾಡಿದ್ದೆ. ಆಗ ಸೆರೆಹಿಡಿದ ವಿ.ಸೀ.ಬೇಂದ್ರೆ, ಕಾರಂತ, ಎ.ಎನ್.ಮೂರ್ತಿರಾವ್, ತೀ.ನಂ.ಶ್ರೀ. ತರಾಸು ಅಡಿಗರು, ರಾಮಚಂದ್ರ ಶರ್ಮ, ಬಿ.ಎಚ್. ಶ್ರೀಧರ್ ಮುಂತಾದವರ ಭಾವಚಿತ್ರಗಳು ನನ್ನ ಭಂಡಾರದ ಅಪೂರ್ವನಿಧಿಯಾಗಿ ಉಳಿದಿವೆ!

ಅಮೇರಿಕೆಯ ಡಾಕ್ಟರೇಟು ಪಡೆದು, ಮರಳಿ ಬಂದು, ವಿವಾಹಿತನಾಗಿ, ಅಮೇರಿಕ ನೋಡದ ಪತ್ನಿಗೆ ಅಲ್ಲಿಯ ಅನುಭವಗಳನ್ನೆಲ್ಲ ರಂಗು ರಂಗಾಗಿ ವರ್ಣಿಸುತ್ತಿದ್ದೆ. ಅವನ್ನೆಲ್ಲ ಒಂದು ರೂಪದಲ್ಲಿ ತರಲು ಬರೆಯುವಂತೆ ಆಗ್ರಹ ಮಾಡಲಾರಂಭಿಸಿದಳು. "ಅ, ಆ ಬರೆಯಲು ಕಲಿತೊಡನೆ ಸಾಹಿತಿಗಳಾಗಲುಸಾಧ್ಯವೇ?" ಎಂದೆಲ್ಲ ಶಾಲಾದಿನಗಳ ಅನುಭವ ಹೇಳಿದೆ. ಆಕೆ ಒಪ್ಪಲೇ ಇಲ್ಲ. "ನಿಮ್ಮ ಹತ್ತಿರ ಅಪೂರ್ವ ಅನುಭವಗಳಿವೆ. ಬರೆಯುವ ಶೈಲಿಯಿದೆ, ಬರೀರಿ!" ಎಂದು ಪಟ್ಟು ಹಿಡಿದಳು. ಉಪಾಯವಿಲ್ಲದೇ ವಿರಾಮದ ವೇಳೆಯಲ್ಲಿ ಕಂಡದ್ದನ್ನು ಕ್ರಮವಾಗಿ ಬರೆಯಲಾರಂಭಿಸಿದೆ. "ತೀರ ಸಂಕ್ಷಿಪ್ತ ಬರಹ! ತಂತಿಸಮಾಚಾರದ ಭಾಷೆಯ

ಬರವಣಿಗೆ, ಎಂದು ಆಕ್ಷೇಪಿಸಿದಳು. ಬರವಣಿಗೆ ಕೆಲ ಕಾಲ ಸ್ಥಗಿತವಾಯಿತು. ಆದರೆ ಕೊನೆಗೆ ಅರ್ಧಾಂಗಿನಿಯೇ ಸೋತು ಬರೆದದ್ದನ್ನು ಒಪ್ಪಿಕೊಂಡಾಗ, ಬರವಣಿಗೆಯನ್ನು ಮುಂದುವರಿಸಿದ್ದಾಯಿತು. ಸಿದ್ಧವಾದ ಹಸ್ತಪ್ರತಿಯನ್ನು ಧಾರವಾಡದ ಮನೋಹರ ಗ್ರಂಥಮಾಲೆಯ ಸಂಪಾದಕರಾದ ಶ್ರೀ ಜಿ.ಬಿ.ಜೋಶಿ ಅವರಿಗೆ ಕಳಿಸಿದಾಗ ಅವರು ಅದನ್ನು ರಾತ್ರಿಯೆಲ್ಲ ಓದಿ ಮುಗಿಸಿ, ಮೆಚ್ಚಿಕೊಂಡು ಪ್ರಕಾಶನಕ್ಕೆ ಒಪ್ಪಿಕೊಂಡುಬಿಟ್ಟರು. ರಾತ್ರಿ ಬೆಳಗಾಗುವದರಲ್ಲಿ ನಾನೊಬ್ಬ ಬರಹಗಾರ, ಸಾಹಿತಿ ಆಗಿ ಬಿಟ್ಟಿದ್ದೆ!

ಆಗ ಹೊರನಾಡಿನಲ್ಲಿದ್ದ ಹೊಸಬನೊಬ್ಬನನ್ನು ಸಾಹಿತಿಗಳ ಬಳಗಕ್ಕೆ ಸೇರಿಸಲು ಮನಸ್ಸಿಲ್ಲದ ವಿಮರ್ಶಕರೊಬ್ಬರು ಇದು 'ನೇತಿ' ಸಾಹಿತ್ಯವೆಂದರು; ಇನ್ನೊಬ್ಬ ಲೇಖಕರು ಪ್ರವಾಸಕಥನ, ಸೃಜನಶೀಲ ಸಾಹಿತ್ಯವಲ್ಲವೆಂದರು. ಮಗುದೊಬ್ಬರು, ಇದು ಮಾಹಿತಿಯ ವರದಿಯೇ ಹೊರತು ಬರಹವಾಗದೆಂದರು. ಆದರೆ ಓದುಗರಿಂದ ಬಂದ ಪ್ರತಿಕ್ರಿಯೆ ಅತ್ಯಂತ ವಿಸ್ಮಯಕಾರಿ. ಮುಕ್ತ ಮನಸ್ಸಿನಿಂದ ಸಾಹಿತಿಯೆಂದೇ ಒಪ್ಪಿಕೊಂಡರು, ಮೆಚ್ಚಿಗೆಯನ್ನು ಬರೆದು ತಿಳಿಸುವ ಹೃದಯವಂತಿಕೆ ತೋರಿದರು. ತೀರ್ಥಹಳ್ಳಿಯ ಓರ್ವ ಓದುಗ "ಬಾಲ್ಯದಲ್ಲಿ ಚಂದಮಾಮ, ಯೌವನದಲ್ಲಿ ಎಸ್. ಎಲ್.ಭೈರಪ್ಪನರ ಕಾದಂಬರಿಗಳನ್ನು ಓದುವಾಗ ಸಿಗುತ್ತಿದ್ದ ಸಂತೋಷ ನಿಮ್ಮ ಪ್ರವಾಸ ಕಥನ ಓದಿದಾಗ ನನ್ನದಾಯಿತು!" ಎಂದು ಬರೆದದ್ದು ನೆನಪಾಗುತ್ತದೆ. ಜಿ.ಬಿ.ಜೋಶಿಯವರು, ತಾವು ಪ್ರಕಟಿಸಿದ ಕೃತಿಗಳಲ್ಲಿ ಎಂಟೇ ತಿಂಗಳಲ್ಲಿ ಪ್ರತಿಗಳೆಲ್ಲ ಮುಗಿದು ಎರಡನೇ ಮುದ್ರಣ ಹಾಕುವ ಯೋಗ ಬಂದದ್ದು ಎರಡೇ ಕೃತಿಗಳಿಗೆ, ಎಮ್.ಕೆ.ಇಂದಿರಾ ಅವರ 'ತುಂಗ ಭದ್ರ' ಹಾಗೂ 'ನಾನೂ ಅಮೇರಿಕೆಗೆ ಹೋಗಿದ್ದೆ' ಕೃತಿಗೆ ಎಂದಾಗ ಪಟ್ಟ ಶ್ರಮ ಸಾರ್ಥಕವೆನಿಸಿತು. ಕಾದಂಬರಿಯಷ್ಟೆ ಪ್ರವಾಸಗ್ರಂಥ' ಜನಪ್ರಿಯವಾಯಿತೆಂದಾಗ ಸಂತೋಷವಾಗದೇ ಇದ್ದೀತೇ?

ಈ ಪುಸ್ತಕ, ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ೧೯೬೯ರ ಶ್ರೇಷ್ಠ ಪ್ರವಾಸ ಕಥನವೆಂದು ಪುರಸ್ಕರಿಸಲ್ಪಟ್ಟಿತು. ಬೆಂಗಳೂರು, ಕರ್ನಾಟಕ ವಿಶ್ವವಿದ್ಯಾಲಯಗಳು ಪದವೀ ವರ್ಗದ ಪ್ರಥಮ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವಾಗಿ ಸ್ವೀಕರಿಸಿದವು. ಮಹಾರಾಷ್ಟ್ರ ಸರಕಾರವು ಉಚ್ಚ ಮಾಧ್ಯಮಿಕ ಶಾಲೆಯ ಪಠ್ಯ ಪುಸ್ತಕದಲ್ಲಿ ಒಂದು ಅಧ್ಯಾಯವನ್ನು ಸೇರ್ಪಡೆ ಮಾಡಿತು. ಕೆನಡಾ, ಉತ್ತರ ಅಮೇರಿಕೆಗಳಲ್ಲಿ ನೆಲೆಸಿದ ಕನ್ನಡಿಗರು ಹಲವರು, ತಮ್ಮಿಂದ ಹೇಳಲಾಗದ್ದನ್ನು ಬರೆದು ಪ್ರಕಟಿಸಿದ್ದಕ್ಕಾಗಿ ಅಭಿನಂದಿಸಿದರು. ಮನೋಹರ ಗ್ರಂಥಮಾಲೆಯು ಐವತ್ತು ವರ್ಷಗಳ ಸಾಹಿತ್ಯ-ಪ್ರಕಾಶನ ಸಾಹಸದ ಸಂದರ್ಭದಲ್ಲಿ. ತನ್ನ ಉತ್ತಮ ಕೃತಿಗಳ ಮರುಮುದ್ರಣ ತಂದಿತು. 'ಪುಟಬಂಗಾರ'ದ ನಾಲ್ಕನೆಯ ಸಂಪುಟದಲ್ಲಿ ಈ ಪುಸ್ತಕವನ್ನು ಪುನಃ ಸೇರಿಸಲಾಗಿದೆ. ಮಗ ವಿಕಾಸನು, ಅಮೇರಿಕೆಗೆ ಹೊರಟಾಗ, ಈ ಕೃತಿಯನ್ನು ಓದಿರಲಿಲ್ಲ. ಆದರೆ ಪ್ರತಿಯನ್ನು ಒಯ್ದಿದ್ದ. 'ಕಾಲು ಶತಮಾನದಲ್ಲಿ ಅಮೇರಿಕೆ ಹಾಗೇ ಇರುತ್ತದೆಯೇ? ಎಷ್ಟೊಂದು ಬದಲಾಗಿರುತ್ತದೆ! ಎಂದು ಟೀಕೆ ಮಾಡಲು ಮರೆತಿರಲಿಲ್ಲ. ಅಲ್ಲಿ ಕೆಲ ಕಾಲದ ವಾಸದ ನಂತರ ಅಮೇರಿಕನ್ನರ ಒಲವು ನಿಲುವುಗಳು ಬದಲಾಗಿಲ್ಲ! ಬಾಪ್ಪಾರು ಬರೆದದ್ದೆಲ್ಲ ಅಕ್ಷರಶಃ

ನಿಜವಾಗಿದೆ!" ಎಂದು ಒಪ್ಪಿಕೊಂಡ. ನಂತರ ಪತ್ನಿಯು ಅಮೇರಿಕೆಗೆ ಹೋದಾಗ 'ಲೇಖನಿಯ ಸ್ನೇಹಿತೆ' ಜೀನ್ ರೊಥ್‌ಳ ಕುಟುಂಬದೊಡನೆ ಒಂದು ವಾರ ಕಳೆದಳಲ್ಲದೇ ಅವರ ಕುರಿತಾಗಿ ಬರೆದ ಅಧ್ಯಾಯವನ್ನು ಇಂಗ್ಲೀಷಿಗೆ ಅನುವಾದಿಸಿ ಅವರಿಗಿತ್ತಳು. ಈ ಕೃತಿಯು ಆರು ಮುದ್ರಣ ಕಂಡಿತು. ಮೊದಲ ಕೃತಿಯೇ ಇಷ್ಟು ಜನಪ್ರಿಯವಾದದ್ದು, ಜನಪ್ರಿಯವಾಗುವದು ಕನ್ನಡದಲ್ಲಿ ತೀರ ಅಪರೂಪವಿದ್ದಿರಬೇಕು. ನಂತರ ಸಂಪಾದಕರು, ಪ್ರಕಾಶಕರು ಹಸ್ತಪ್ರತಿಗಳಿಗೆ. ವಿನಂತಿಸಿಕೊಳ್ಳಲಾರಂಭಿಸಿದರು. ವೈಜ್ಞಾನಿಕ ಬರವಣಿಗೆಗೂ ಬೇಡಿಕೆ ಬರಲಾರಂಭಿಸಿತು. ಪರಿಸರ ಕುರಿತಾದ ಎರಡು ಗ್ರಂಥಗಳನ್ನು ಬರೆದು ಕೊಡುವದಾಗಿ ಇದಾಗಲೇ ವಾಗ್ದಾನ ಮಾಡಿದ್ದೇನೆ.

ಕನ್ನಡದ ಎಲ್ಲ ಪತ್ರಿಕೆಗಳೂ, ನನ್ನ ಲೇಖನಗಳನ್ನು ಪ್ರಕಟಿಸಿವೆ. 'ಸಾಕ್ಷಿ' ವೈಚಾರಿಕ ಬರವಣಿಗೆಯನ್ನು, ಸುಧಾ, ವೈಜ್ಞಾನಿಕವಾದ, ಕರ್ಮವೀರವು ಜನಜೀವನ ಕುರಿತಾದ 'ತರಂಗವು' ಕಲೆಯ ಕುರಿತಾದ ಲೇಖಗಳನ್ನು ಪ್ರಕಟಿಸಿವೆ. 'ಕಸ್ತೂರಿ'ಯು ಪುಸ್ತಕ ವಿಭಾಗದಲ್ಲಿ ಮೂರು ಗ್ರಂಥಗಳ ಸಂಗ್ರಹ ರೂಪ ಹಾಕಿತು. 'ಪ್ರಜಾವಾಣಿ', 'ಕರ್ಮವೀರ'ಗಳು ವಿಶೇಷಾಂಕಗಳಲ್ಲಿ ಆಹ್ವಾನಿತ ಲೇಖಗಳನ್ನು ಪ್ರಕಟಿಸಿವೆ. ಇವಗಳಲ್ಲಿ ಹೆಚ್ಚಿನವು ಸಚಿತ್ರ ಲೇಖಗಳು. ಖ್ಯಾತ ಸಾಹಿತಿಗಳ, ಛಾಯಾಚಿತ್ರಗಳ ಭಂಡಾರ ನನ್ನೊಂದಿಗಿದೆ. ಈಗಿನ ದಿನಗಳಲ್ಲಿ ಸಂಭಾವನಾ ಹಾಗೂ ಗೌರವಗ್ರಂಥ ಸಂಪುಟಗಳಿಗೆ ಲೇಖನಗಳಿಗೆ ಬೇಡಿಕೆ ಬರಲಾರಂಭಿಸಿದೆ. ಈ ಲೇಖನಗಳು, ವೈವಿಧ್ಯದ ದೃಷ್ಟಿಯಿಂದ ಉಲ್ಲೇಖನೀಯ. ಕರ್ನಾಟಕದ ಲಲಿತಕಲಾ ಆಕಾಡೆಮಿಯ ವಿಶೇಷ ಸಂಪುಟಗಳಾದ "ಚಿತ್ರಕಲಾ ಪ್ರಪಂಚ" 'ಶಿಲ್ಪ ಕಲಾ ಪ್ರಪಂಚಗಳಲ್ಲೂ ವಿಶೇಷ ಆಮಂತ್ರಿತ ಲೇಖನಗಳು ಪ್ರಕಟವಾಗಿವೆ.

ಶಾಲಾಗುರುಗಳಾದ ಮುಗ್ವೆಯ ಶ್ರೀ ವಿ.ಎಮ್. ಕಾಮತರು, ಗಣಿತ ಜ್ಞಾನದ ಜೊತೆಗೆ ಸೈನಿಕ ಶಿಸ್ತಿನ ತರಬೇತಿ ನೀಡಿದ್ದಾರೆ. ಒಮ್ಮೆ ಅವರು ಭೇಟಿಯಾದಾಗ. 'ನೀನು ಶ್ರಮಪಟ್ಟು ಕಲಿತು. ಅಮೇರಿಕೆಗೆ ಹೋಗಿ ಡಾಕ್ಟರೇಟು ಪದವಿ ಪಡೆದದ್ದು ಅಚ್ಚರಿಯ ಮಾತಲ್ಲ. ಆದರೆ ಸಾಹಿತಿ ಹೇಗಾದಿ?" ಎಂದು ಪ್ರಶ್ನಿಸಿದಾಗ ಸಮ ರ್ಪಕ ಉತ್ತರ ಕೊಡಲಾಗಲಿಲ್ಲ! ಕುಮಟಾದ ಕೆನರಾ ಕಾಲೇಜಿನಲ್ಲಿ ಇಂಗ್ಲಿಷ್ ಪಾಠ ಮಾಡಿದ ಹೆಸರಾಂತ ವಿಮರ್ಶಕ, ಡಾ। ಜಿ.ಎಸ್. ಅಮೂರರು, "ವಿದ್ಯಾರ್ಥಿಯಿದ್ದಾಗ ನಿನಗೆ ಸಾಹಿತ್ಯಿಕ ಒಲವೂ ಇದೆ ಎಂದು ಅನಿಸಿರಲೇ ಇಲ್ಲ! ಕೆಲವು ಕಲೆಗಳು ಮಾನವನಲ್ಲಿ ಆಳವಾಗಿ ಹುದುಗಿಕೊಂಡಿರುವಂತೆ ತೋರುತ್ತದೆ, ಕಾಲಕೂಡಿಬಂದಾಗ ಅವು ಪ್ರತ್ಯಕ್ಷವಾಗುತ್ತಿರಬೇಕು!" ಎಂದು ಮೆಚ್ಚಿಗೆ ಸೂಸಿದ್ದರು. ನಮ್ಮ ಜಿಲ್ಲೆಯ ಶ್ರೇಷ್ಠ ಕವಿಗಳಲ್ಲಿ ಒಬ್ಬರಾದ ವಿ.ಜಿ.ಭಟ್ಟರು, ನನಗೆ ತೀರ ಆತ್ಮೀಯರಾಗಿದ್ದು, ಅವರ ಜೀವನದ ಕೊನೆಯ ವರ್ಷಗಳಲ್ಲಿ, ನಿಕಟವಾಗಿದ್ದರು. ಮಧ್ಯಪ್ರದೇಶದ ಪ್ರವಾಸಕಥನಗಳನ್ನು ತುಂಬ ಮೆಚ್ಚಿಕೊಂಡು, "ನೀನು ಕರ್ನಾಟಕದ ವೆರಿಯರ್ ಎಲ್ವಿನ್. ಇಂಥ ಬರವಣಿಗೆ ಪ್ರಕಟಿಸಲು, ಪ್ರಕಾಶಕರು, ಮುಂದೆ ಬಾರದಿದ್ದರೆ. ನೀನೇ ಪ್ರಕಟಿಸಬೇಕು. ನನ್ನ ಅನೇಕ ಸಾಹಿತಿ- ಮಿತ್ರರು ಗೃಹಬಂಧಿತರು, ನಗರ ಬಂಧಿತರು! ಹೀಗಾಗಿ ಅವರ

ಬರೆಹದಲ್ಲಿ 'ಕಿಡಿ' (ಸ್ಪಾರ್ಕ್) ಇರುವದೇ ಇಲ್ಲ!" ಎಂದು ಹೇಳಿ ಬೆನ್ನು ಚಪ್ಪರಿಸಿದ್ದರು. ಪ್ರೊ. ಎ.ಎನ್. ಮೂರ್ತಿರಾಯರು, ನಿರಂಜನರು ಅಮೇರಿಕೆಯ ಪ್ರವಾಸಕಥನ ಓದಿ, ಪಿ.ವನ್. ಬರವಣಿಗೆ! ಎಂದು ಪತ್ರಮುಖೇನ ತಿಳಿಸಿದರು. ಈ ಹಿರಿಯ ಸಾಹಿತಿಗಳ ಮೆಚ್ಚಿಗೆ, ಪತ್ರಗಳು ನನ್ನ ಸಾಹಿತ್ಯ ಸಾಧನೆಗೆ ದೊರೆತ ದೊಡ್ಡ ಪ್ರಶಸ್ತಿಗಳು.

ವಿಜ್ಞಾನಿ, ಕಲಾಕಾರ, ಸಾಹಿತಿ, ಚಿತ್ರಕಾರನೆಂಬ ಹಣೆಪಟ್ಟಿ ಹಚ್ಚಿಕೊಂಡು ಮೆರೆದಾಡುವದರಲ್ಲಿ ವಿಶ್ವಾಸವಿಲ್ಲದ್ದರಿಂದ ಸಕಲ ಕೆಲಸಗಳನ್ನು ಶ್ರದ್ಧೆಯಿಂದ ಮಾಡುವದು ಬಾಲ್ಯದಿಂದ ಬೆಳೆಸಿಕೊಂಡು ಬಂದ ಪದ್ಧತಿ. ಪತ್ನಿಗೆ ಉಳ್ಳಾಗಡ್ಡಿ ಹೆಚ್ಚಿ ಕೊಡುವದರಿಂದ ಬರವಣಿಗೆಯವರೆಗಿನ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವದು ನನ್ನ ರೀತಿ. ಹೊಗಳಿಕೆಗಿಂತ ತೆಗಳಿಕೆ ಮಾಡುವವರು ಹತ್ತಿರದವರು. ಮುನ್ನೂರು ಪುಟದ ನನ್ನ ಗ್ರಂಥದ ಕೇವಲ ಮೂರುಪುಟಗಳನ್ನು ಓದಿ 'ಖ್ಯಾತ' ವಿಮರ್ಶಕರೊಬ್ಬರು ದೈನಿಕವೊಂದರಲ್ಲಿ ಬರೆದ ವಿಮರ್ಶೆ ನೋಡಿ ಪತ್ನಿಯು ಸಿಡಿಮಿಡಿಗೊಂಡಾಗ, "ನನಗೆ ಸರಿಕಂಡದ್ದನ್ನು ಬರೆಯುವ ಸಂಪೂರ್ಣ ಅಧಿಕಾರ ನನಗಿರುವಂತೆ ಅವರ ಅನಿಸಿಕೆ ಬರೆಯಲು ಸ್ವತಂತ್ರರಲ್ಲವೇ?" ಎಂದು ಸಮಾಧಾನ ಮಾಡಬೇಕಾಯಿತು, ಆಸಕ್ತಿವಹಿಸಿದ ಕೆಲಸದಿಂದ ಇತರರು ಆಕರ್ಷಿತರಾಗದೇ ಇರರು. ಪ್ರತಿಷ್ಠೆ, ಪ್ರಸಿದ್ಧಿ, ಹಣಕ್ಕಾಗಿ ಸೃಜನಶೀಲಕಾರ್ಯ ಸಾಧಿಸದು. ನನಗಿರುವ ಕಲವು ಆಸಕ್ತಿಗಳನ್ನು ಸಾಹಿತ್ಯರಚನೆಯಲ್ಲಿ ದುಡಿಸಿಕೊಳ್ಳುವ ಪ್ರಯತ್ನ ನಡೆದೇ ಇದೆ! ರೇಖಾಚಿತ್ರಬಿಡಿಸುತ್ತೇನೆ, ಛಾಯಚಿತ್ರಗಳನ್ನು ಮುದ್ರಿಸುತ್ತೇನೆ. ಕನ್ನಡ - ಇಂಗ್ಲೀಷ್, ಜೊತೆಗೆ ಇಲೆಕ್ಟ್ರಾನಿಕ್ ಟೈಪ್ ರೈಟರ್ ಬಳಸುತ್ತೇನೆ. ನನ್ನ ಬಹುಶಃ ಎಲ್ಲ ಪುಸ್ತಕಗಳಿಗೆ ಮುಖಪುಟ ರಚನೆ ನನ್ನದೇ. ವರ್ಣಚಿತ್ರ, ಕಪ್ಪು ಬಿಳುಪು ಛಾಯಾಚಿತ್ರಗಳು, ವರ್ಣ ಪಾರದರ್ಶಕಗಳ ಪೂರೈಕೆ ಇದ್ದೇ ಇರುತ್ತದೆ. ಇವೆಲ್ಲ ಕೆಲಸಗಳನ್ನು ಮಾಡಿಮುಗಿಸಲಿಕ್ಕೆ ದಿನದ ಇಪ್ಪತ್ನಾಲ್ಕು ಗಂಟೆಗಳ ಅವಧಿ ಕಡಿಮೆ ಎಂದು ಒಮ್ಮೊಮ್ಮೆ ಅನಿಸುವದು ಸ್ವಾಭಾವಿಕ! ಕೆಲಸದ ಒತ್ತಡ ಇದ್ದಾಗ ಮುಂಜಾನೆಯ ಮೂರುಗಂಟೆಗೆ, ಒಮ್ಮೊಮ್ಮೆ ಅದಕ್ಕೂ ಮೊದಲೇ ಎದ್ದು ಕಾರ್ಯೋನ್ಮುಖಿಯಾಗಿಬಿಡುತ್ತೇನೆ. ಹರಟೆ, ಸ್ನೇಹ ಕೂಟ, ಮನರಂಜನೆಗಳಿಗೆ ನನ್ನ ಬಳಿ, ಸಮಯದ ಅಭಾವವಿದೆ. ತಿರುಗಿ ಹರೆಯ ಬರುವಂತಾದರೆ ಇನ್ನಷ್ಟು ಪ್ರವಾಸಗಳನ್ನು ಕೈಕೊಂಡು, ಇನ್ನಷ್ಟು ಬರವಣಿಗೆ - ಛಾಯಾಚಿತ್ರಮಾಡಬಹುದಿತ್ತು. "ಒಂದೇ ಬಾಲ್ಯ. ಒಂದೇ ಹರೆಯ ನಮಗದಷ್ಟೇ ಏತಕೆ ?" ಎಂದ ವರಕವಿಯ ಉದ್ಗಾರಕ್ಕೆ ನನ್ನ ಹಂಬಲದುಸಿರು ಸೇರುವದೂ ಉಂಟು!

ಕಲಾವಿದರಂತೆ, ಬರಹಗಾರರೂ ವಿಶ್ವ ಕುಟುಂಬಿಯಾಗಬೇಕು. 'ದಿಲ್ಲಿ ಕನ್ನಡಿಗ' ಹೊರನಾಡ ಕನ್ನಡಿಗ' 'ಅಮೇರಿಕನ್ನಡಿಗ' ಎಂಬ ವಿಭಜನೆ ಕೃತ್ರಿಮವಾದದ್ದು. ಕನ್ನಡಿಗನು ಎಲ್ಲೇ ಇರಲಿ. ಅವನಿಗೆ ಇನ್ನಿತರ ಭಾಷೆಗಳ ಕುರಿತಾಗಿ ಮತ್ಸರ- ತುಚ್ಛಭಾವನೆಗಳು ಇರಬಾರದು. ಅವಕಾಶ ದೊರೆತಾಗ, ಇತರ ಭಾಷೆಗಳನ್ನು ಏಕೆ ಕಲಿಯಬಾರದು? ಈ ಮನೋಭಾವ ಬೆಳೆಸಿಕೊಂಡಾಗ, ರಾಷ್ಟ್ರೀಯ, ಅಂತರಾಷ್ಟ್ರೀಯ ಭಾಷೆಗಳನ್ನು ನಮ್ಮವನ್ನಾಗಿ ಮಾಡಿಕೊಳ್ಳಲು

ಸಾಧ್ಯ. ರಾಜಸ್ಥಾನದಲ್ಲಿರಲಿ, ಬಂಗಾಲದಲ್ಲಿ ಬೀಡು ಮಾಡಲಿ, ಮಧ್ಯಪ್ರದೇಶದಲ್ಲಿ ಅಲೆಯಲಿ, ಭಾಷೆಯ ಅಡ್ಡಿ ಎಂದೂ ಕಾಡಲಿಲ್ಲ. ಇತರ ಭಾಷೆಗಳಲ್ಲೂ ಬರೆಯುವ ಪ್ರಯತ್ನ ಮಾಡಿದ್ದಾಗಿದೆ. ಕೊಂಕಣಿಯಂತೆ ಇಂಗ್ಲೀಷಿನಲ್ಲೂ ಕೆಲವು ಲೇಖಗಳು ಪ್ರಕಟವಾಗಿವೆ. ಇಂದಿನ ದಿನಗಳಲ್ಲಿ 'ಬಸ್ತರ್ ಪ್ರವಾಸ', ಅಮೇರಿಕೆಯ ಪ್ರೇಕ್ಷಕರಿಗಾಗಿ ಇಂಗ್ಲಿಷಿಗೆ ಪರಿವರ್ತಿತವಾಗುತ್ತಿದೆ.

ಉತ್ತರ ಕನ್ನಡ ಜಿಲ್ಲೆ, ಪ್ರಾಚೀನಕಾಲದಿಂದಲೂ ಉನ್ನತ ಸಾಹಿತ್ಯಕ್ಕೆ ಪ್ರಚೋದನೆ ನೀಡಿದ ನೆಲ. ಬನವಾಸಿ ದೇಶ, ಆದಿ ಕವಿ ಪಂಪನನ್ನೇ ಮರುಳುಮಾಡಿ, ಆತನ ಕಾವ್ಯದಲ್ಲಿ ಶಾಶ್ವತ ಸ್ಥಾನ ಗಿಟ್ಟಿಸಿತು. ನಂತರವೂ ಕಾವ್ಯ - ವ್ಯಾಕರಣ ಕ್ಷೇತ್ರದಲ್ಲಿ ಅಪೂರ್ವ ಕೊಡುಗೆ ಇತ್ತಿತ್ತು. ಮೊದಲ ಆಧುನಿಕ ಕನ್ನಡ ನಾಟಕವಿತ್ತ ಕೀರ್ತಿಗೆ ಭಾಜನವಾಯಿತು. ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು ಅಸಂಖ್ಯಾತರು; ಅವರಲ್ಲಿ ಇತ್ತೀಚಿನ ಕೆಲವು ಹಿರಿಯರನ್ನು ಹೆಸರಿಸಬಹುದು. ಸಮಾಜಸುಧಾರಕ, ಶಿಕ್ಷಣ ಪ್ರಸಾರಕ, ರಾಜಕಾರಣಿ, ದಿವಂಗತ ದಿನಕರ ದೇಸಾಯಿ ಚೌಪದಿಗಳ ಖಣಿಯನ್ನೆ ಬಿಟ್ಟುಹೋಗಿದ್ದಾರೆ. ಅವರ ಚರಿತ್ರೆಯ ಸಂಶೋಧನಾ ಗ್ರಂಥ ಮೌಲಿಕವಿದ್ದಂತೆ ಅವರ ಲೇಖನಿ ಗುರುತಿಸದ ವಿಷಯವಿಲ್ಲ! ಆಡು ಮುಟ್ಟದ ಗಿಡವಿಲ್ಲವಂತೆ, ಡಾ. ಗೌರೀಶ ಕಾಯಕಿಣಿಯವರ ಲೇಖನಿ ತಟ್ಟದ ವಿಷಯ ಇಲ್ಲ. ಬಹುಮುಖಿ ಸಾಹಿತ್ಯ ರಚನೆಯಂತೆ, ಜಿಲ್ಲೆಯ ಸಾಹಿತ್ಯಕ್ಷೇತ್ರದಲ್ಲಿ ಹೊಸ ಮುಖಗಳು ಕಾಣಿಸಿಕೊಳ್ಳುತ್ತಲೇ ಇರಲು ಈ ಹಿರಿಯ ಸಾಹಿತಿಯ ಪ್ರೋತ್ಸಾಹ ಬಲುದೊಡ್ಡದು. ಗಂಗಾಧರ ಚಿತ್ತಾಲರು ಅಪರೂಪದ ಕವಿಯಾಗಿ, ಸ್ಥಿರವಾದ ಸ್ಥಾನವನ್ನು ಸ್ಥಾಪಿಸಿಯೇ ಕಣ್ಮರೆಯಾದರು. ವಿ.ಜಿ.ಭಟ್ಟರು, ಉದ್ದಾಮ ಪಾಂಡಿತ್ಯದಿಂದಾಗಿ ಗದ್ಯ-ಪದ್ಯ ಪ್ರಕಾರಗಳಲ್ಲಿ ಪರಿಣತಿ ಪಡೆದವರು. ಮನಸ್ಸು ಮಾಡಿದ್ದರೆ, ಇನ್ನೂ ಹೆಚ್ಚಿನ ಸಾಹಿತ್ಯ ಸೃಷ್ಟಿಸುವ ದೈತ್ಯ ಪ್ರತಿಭೆ ಅವರದಾಗಿತ್ತು. ಯಶವಂತ ಚಿತ್ತಾಲರ ಸಾಹಿತ್ಯ ಸೃಷ್ಟಿ ಮಿಗಿಲಾದದ್ದು. ಹನೇ ಹಳ್ಳಿಯ ಹಿನ್ನೆಲೆಯನ್ನು ಮಾನವನ ಚಡಪಡಿಕೆಯ ಅಸಂಖ್ಯ ಆಯಾಮಗಳನ್ನು, ಚಿತ್ರಿಸಲು ಸಮರ್ಥವಾಗಿ ಬಳಸಿಕೊಂಡವರು, ಅವರು. ಶಾಂತಿನಾಥ ದೇಸಾಯಿ. ಕಥೆಗಾರರಾಗಿ, ಕಾದಂಬರಿಕಾರರಾಗಿ ವಿಶಿಷ್ಟ ಕೃತಿಗಳನ್ನು, ಅರವಿಂದ ನಾಡಕರ್ಣಿ ಅವರು ಕವಿಗಳಾಗಿ ಕೊಡುಗೆ ಇತ್ತವರು. ಸು.ರಂ. ಎಕ್ಕುಂಡಿಯವರ ಉತ್ಕೃಷ್ಟ ಕಾವ್ಯ ರಚನೆಗೆ ಬಂಕಿ ಕೊಡ್ಲವು ಹಿನ್ನೆಲೆ ಒದಗಿಸಿದ್ದು ಮರೆಯುವಂತಿಲ್ಲ. ಗಣಪತಿ ಪಾಂಡೇಶ್ವರ ಅವರು ನಿರ್ಭೀತಿಯ ಗಟ್ಟಿ ಸಾಹಿತ್ಯರಚನೆಗೆ ನೆಲೆಗಟ್ಟು ಹಾಕಿದವರು. ಇಂದಿನ ದಿನಗಳಲ್ಲಿ ಸಾಹಿತ್ಯ-ಸೃಷ್ಟಿಯಲ್ಲಿ ಜಯಂತ ಕಾಯಕಿಣಿ ಹಾಗೂ ಇತರ ನವಪೀಳಿಗೆಯವರು, ತೊಡಗಿಕೊಂಡು ಹುಲುಸಾದ ವಿವಿಧ ಪ್ರಕಾರಗಳಲ್ಲಿ ಹೊರಬರುತ್ತಿರುವದು ನೆಮ್ಮದಿಯ ವಿಚಾರ, ಅವರೆಲ್ಲರ ಹೆಸರುಗಳನ್ನು ಹೇಳುತ್ತ ಹೋದರೆ ಏನೂ ಸಾಧಿಸಿದಂತೆ ಆಗುವದಿಲ್ಲ. ಅವರಲ್ಲಿ ಕೆಲವಾದರೂ ಶಿವರಾಮ ಕಾರಂತರ, ಪ್ರಯೋಗ ಶೀಲತೆಯ ವೈವಿಧ್ಯಮಯ ಬರವಣಿಗೆಯ ಪ್ರಕಾರಗಳನ್ನು ರಚಿಸಲು ಕಾಯಾ, ವಾಚಾ, ಮನಸಾ ಯತ್ನಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ವಿಜಯನಗರ ಸಾಮ್ರಾಜ್ಯದ ಕಾಲದಿಂದಲೂ ಭಟ್ಕಳ್ ಬಂದರವು ಅಂತರಾಷ್ಟ್ರೀಯ ವಾಣಿಜ್ಯ-ವ್ಯಾಪಾರಗಳ ಕೇಂದ್ರವಾಗಿ ಬೆಳೆದಿತ್ತು. ಕುದುರೆಗಳು, ತೋಪುಗಳು, ಮದ್ದುಗುಂಡು, ಗಾಜಿನ ಸಾಮಾನು, ರೇಷ್ಮೆ, ಕೇಸರಿಗಳು ದೊಡ್ಡ ಪ್ರಮಾಣದಲ್ಲಿ ಆಯಾತವಾಗುತ್ತಿದ್ದರೆ, ಆ ಯುಗದಲ್ಲಿ ವಿಶೇಷ ಬೇಡಿಕೆ ಇದ್ದ ಕರಿಮೆಣಸು, ಇನ್ನಿತರ ಸಂಭಾರ ಪದಾರ್ಥಗಳು, ಅಕ್ಕಿ ಔಷಧಾದಿಗಳು ಇಲ್ಲಿಂದ ಪಾಶ್ಚಾತ್ಯ ದೇಶಗಳಿಗೆ ನಿರ್ಯಾತವಾಗುತ್ತಿದ್ದವು. ಕ್ರಿ.ಶ. ೧೮೬೧ ತನಕ, ಬ್ರಿಟಿಷರು ಉತ್ತರ ದಕ್ಷಿಣ ಜಿಲ್ಲೆಗಳೆಂದು ವಿಭಾಗಿಸುವ ತನಕ, ಈ ಪ್ರದೇಶ ಭೌಗೋಲಿಕವಾಗಿ, ಸಾಂಸ್ಕೃತಿಕವಾಗಿ ಒಂದೇ ಕನ್ನಡ ಪ್ರದೇಶವಾಗಿ ಮೆರೆದಿದ್ದಿತು. ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಕ್ಷೇತ್ರಗಳಲ್ಲಿ ಹೆಚ್ಚು ಕಡಿಮೆ, ಏಕರೂಪ ಪಡೆದಿತ್ತು. ಆದರೆ ವಿಭಜನೆಯಾಗಿ ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸು ಮತ್ತು ಉತ್ತರ ಕನ್ನಡ ಜಿಲ್ಲೆ ಮುಂಬೈ ಪ್ರಾಂತಗಳಿಗೆ ಸೇರಿಹೋದ ಬಳಿಕ ಪ್ರಗತಿಯಲ್ಲಿ ಕಂಡುಬಂದ ಅಂತರ, ಬೃಹದಾಕಾರವಾದದ್ದು! ದೇಶದಲ್ಲಿ ಹೆಸರಾಂತ ರಾಷ್ಟ್ರೀಕೃತ ಬ್ಯಾಂಕುಗಳು, ಕ್ಯಾನರಾ, ಸಿಂಡಿಕೇಟ್, ಕಾರ್ಪೋರೇಷನ್ ಹಾಗೂ ವಿಜಯಬ್ಯಾಂಕುಗಳು ದಕ್ಷಿಣ ಕನ್ನಡದಲ್ಲಿ ಜನ್ಮ ತಾಳಿ, ಹೆಮ್ಮರವಾಗಿ ಬೆಳೆದರೂ ನಮ್ಮಲ್ಲಿ ಒಂದಾದರೂ ರೂಪಗೊಂಡಿತೇ? ಬಡವರದೇ ಬಂಡವಲಿನಲ್ಲಿ ದೊಡ್ಡ ಪಾಲುಹೊಂದಿದ್ದ ರೂರಲ್ ಬ್ಯಾಂಕ್ ಹುಟ್ಟಿಕೊಂಡಿತ್ತು. ಕೆಲವೇ ವರ್ಷಗಳಲ್ಲಿ ಅದು ಮಣ್ಣು ಮುಕ್ಕಿದಾಗ ತತ್ತರಿಸಿ ಇನ್ನಷ್ಟು ಬಡವಾದ ಕುಟುಂಬಗಳು ಅದೆಷ್ಟೋ! ದಕ್ಷಿಣ ಕನ್ನಡಜಿಲ್ಲೆಯಲ್ಲಿ ಸ್ಥಳೀಯರ ಪ್ರಯತ್ನದಿಂದಲೇ ವೈದ್ಯಕೀಯ ಎಂಜಿನಿಯರಿಂಗ್ ಸಂಸ್ಥೆಗಳು ಕಾಣಿಸಿಕೊಂಡವು. ಅಲ್ಲಿ ಆರ್ಥಿಕ, ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಲೇ ಇರುವದನ್ನು ಮರೆಯುವಂತಿಲ್ಲ. ಸಾಂಸ್ಕೃತಿಕ ಸಂಘಟನೆಗಳಲ್ಲಿ ದಕ್ಷಿಣ ಕನ್ನಡಿಗರು, ರಾಜಕೀಯ ಪಕ್ಷ ಪಂಗಡಗಳ ಭೇದ ಮರೆತು, ಒಂದಾಗಿ ಜಿಲ್ಲೆಯ ಏಳ್ಗೆಗಾಗಿ ದುಡಿಯುತ್ತಾರೆ. ನಮ್ಮಲ್ಲಿ ಸಂಘಟಿತ ಪ್ರಯತ್ನದ ಅಭಾವ ಎದ್ದು ಕಾಣಿಸುವಂತಹದು.


ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮದರ್ಶಿಗಳಾದ ವೀರೇಂದ್ರ ಹೆಗ್ಗಡೆ ಅವರು, ಉತ್ತರ -ದಕ್ಷಿಣವೆಂಬ ಭೇದ ಮಾಡದೇ ಜನ ಸೇವೆಗೆಟೊಂಕಕಟ್ಟಿ ನಿಂತವರು. ಹೊನ್ನಾವರದ ಎರಡು ಕಾಲೇಜುಗಳು ಅವರ ಮೇಲ್ವಿಚಾರಣೆಯಲ್ಲಿಯೇ ಮುನ್ನಡೆದಿವೆ. ಬಡವರ ಸಾಮೂಹಿಕ ವಿವಾಹಗಳು, ಬಡಗ್ರಾಮಗಳ ಉದ್ಧಾರ, ಗ್ರಾಮಾಭಿವೃದ್ಧಿಗಳತ್ತಲೂ ಲಕ್ಷ್ಯಪೂರೈಸಿ ತಮ್ಮ ಜಿಲ್ಲೆಯನ್ನು ಆದರ್ಶ ಪ್ರಾಯವಾಗಿಸಲು ಹೆಣಗಿದ್ದಾರೆ. ನಮ್ಮಲ್ಲಿ ಗೋಕರ್ಣದ ಮಹಾಬಲೇಶ್ವರ, ಇಡಗುಂಜಿಯ ಮಹಾಗಣಪತಿ, ಶಿರ್ಸಿಯ ಮಾರಿಕಾಂಬೆಯ ತಾಣಗಳು ಪ್ರಸಿದ್ಧ ಕ್ಷೇತ್ರಗಳಾಗಿ ಮೆರೆದರೂ, ಸಮಾಜದ ಏಳ್ಗೆಯಲ್ಲಿ ಅವುಗಳ ಪಾತ್ರವನ್ನು ಅವಲೋಕಿಸಿದಾಗ ಅತ್ಯಂತ ಶೋಚನೀಯವೆಂದೇ ಹೇಳಬೇಕಾಗುತ್ತದೆ! ನಮ್ಮ ಜಿಲ್ಲೆ ಸೃಷ್ಟಿಸೌಂದರ್ಯದ ಬೀಡು, ಅಬ್ಬರಿಸುವ ತಡಸಲು, ಭೋರ್ಗರೆಯುವ ಕಡಲು, ಜುಳುಜುಳು ಹರಿಯುವ ನದಿಗಳು, ಸೈನಿಕ ಶಿಸ್ತಿನಿಂದ ನಿಂದ ಬೆಟ್ಟಗಳು, ಗಾಢವಾದ ಗಿರಿಕಂದರಗಳು, ಹಚ್ಚಹಸುರಾದ ಕಾಡುಗಳು, ಅಪರೂಪದ ಖಗ ಹಾಗೂ ಮೃಗ ಸಂಪತ್ತು ಏನುಂಟು? ಏನಿಲ್ಲ?

ಕುವೆಂಪು. ಬೇಂದ್ರೆ ಅವರಂಥ ಮಹಾಕವಿಗಳು ನಮ್ಮಲ್ಲಿ ಹುಟ್ಟಲಿಲ್ಲ. ನಮ್ಮವರ ಜನಾಂಗೀಯ ವೈವಿಧ್ಯ ದುಂಗುಪಡಿಸುವಂತಹದು. ಅತಿಥ್ಯಕ್ಕೆ ಹೆಸರಾದ, ಯಕ್ಷಗಾನ, ಸಂಗೀತಗಳಲ್ಲಿ ಮೆರೆಯುತ್ತಿರುವ ಹವ್ಯಕರು, ವ್ಯಾಪಾರ ಕುಶಲತೆಯ ಕೊಂಕಣಿಗರು, ಹಾಲಕ್ಕಿಗಳು, ಖ್ಯಾತನಾವಿಕರಾದ ಖಾರ್ವಿಗಳು, ದಾರ್ಜಿಗಳು, ಶತಶತಮಾನಗಳ ಕಾಲ ಅವಕಾಶಗಳಿಂದ ವಂಚಿತರಾದರೂ, ಸ್ವಂತಿಕೆಯ ಸಂಸ್ಕೃತಿ ಕಾಪಾಡಿಕೊಂಡು ಬಂದ ಸಿದ್ದಿ, ಕುಣಬಿ, ಗ್ರಾಮೊಕ್ಕಲ, ಆಗೇರರಂಥ ವಿಶಿಷ್ಟ ಜನಸಮೂಹಗಳನ್ನು ಈ ಜಿಲ್ಲೆ ಹೊಂದಿದೆ. ಆದರೆ ಅವರ ವರ್ಣಮಯವಾದ ಬಾಳುವಿಕೆಯ ನೋವು, ನಲಿವುಗಳನ್ನು ಮೂಡಿಸುವ ಸಾಹಿತ್ಯ ಬಂದಿಲ್ಲ. ಹೋಗಲಿ, ಇಂಥವರ, ಜನಾಂಗೀಯ ಸತ್ಯ ನಿಷ್ಠುರ, ಅಧ್ಯಯನಗಳೂ ಕಾಣಿಸಿಕೊಂಡಿಲ್ಲ. ಇತರ ಕನ್ನಡಿಗರಿಗೆ, ನಮ್ಮವರ ವೈವಿಧ್ಯಮಯ ಜೀವನದ ಸಾಹಿತ್ಯರೂಪದ ಪರಿಚಯವೇ ಆಗಿಲ್ಲವೆಂದು ತುಂಬ ನೋವಿನಿಂದ ಈ ಪ್ರಸಂಗದಲ್ಲಿ ನೆನಪಿಸಿಕೊಳ್ಳುವಂತೆ ಆಗಿವೆ, ಶಿವರಾಮ ಕಾರಂತರಂಥ ಸಾಹಿತಿಗಳು ನಮ್ಮಲ್ಲೇಕೆ ಕಾಣಿಸಿಕೊಂಡಿಲ್ಲವೆಂದು ಆತ್ಮಶೋಧವನ್ನು ಮಾಡಿಕೊಳ್ಳಬೇಕಾಗಿದೆ.

ನಮ್ಮದು ಅರಣ್ಯಪ್ರಧಾನ ಜಿಲ್ಲೆಯಾಗಿದ್ದಿತು. ಅರಣ್ಯಸಂಪತ್ತನ್ನು ಕೃಷಿಯಂತೆಯೇ ಕೈಕೊಂಡು, ಸರ್ವರೀತಿಯಲ್ಲಿ ಸ್ಥಳೀಯರ ಹೆಚ್ಚಿನ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಿದೆ, ಎಂದು ಪ್ರಾಯೋಗಿಕವಾಗಿ ಕೈಕೊಂಡು ಯಶಸ್ವಿಯಾದ ಅಮೆರಿಕೆಯಲ್ಲಿ ಅಂಥ ಅಧ್ಯಯನವನ್ನು ಕೈಕೊಂಡು, ಸಾಧನೆಯನ್ನೂ ಕಣ್ಣಾರೆ ಕಂಡು ಬಂದ ದಿನಗಳ ಮಾತಿದು. ನಮ್ಮ ಜಿಲ್ಲೆಯಲ್ಲೇ ಪರಿಸರ ವಿಜ್ಞಾನದ ನನ್ನ ತರಬೇತಿ ಉಪಯೋಗವಾಗುವ ಕಾರ್ಯಕ್ಷೇತ್ರ ರೂಪಗೊಳ್ಳಬೇಕೆಂದು ಕನಸು ಕಂಡ ದಿನಗಳಲ್ಲಿಯ ಘಟನೆ. ಆಗ ಪ್ರಸಿದ್ಧ ಸಮಾಜ ಸೇವಕರು, ಶಿಕ್ಷಣವೇತ್ತರು, ನಮಗೆಲ್ಲರಿಗೂ ಪ್ರಾತಃ ಸ್ಮರಣೀಯರಾದ ಕವಿ, ದಿನಕರ ದೇಸಾಯಿ ಅವರು ಪಾರ್ಲಿಮೆಂಟಿನ ಸದಸ್ಯರಾಗಿದ್ದರು. ಹಲವಾರು ಶೈಕ್ಷಣಿಕ ಕೇಂದ್ರಗಳನ್ನು ಸ್ಥಾಪಿಸಿದ ಅವರಿಗೆ ಅರಣ್ಯಶಾಸ್ತ್ರದಲ್ಲಿ ತರಬೇತಿ ನೀಡುವ ಕೇಂದ್ರವೊಂದನ್ನು ಪ್ರಾರಂಭಿಸುವ ಸಾಧ್ಯಾಸಾಧ್ಯತೆ ಬಗ್ಗೆ ಗಮನಕ್ಕೆ ತಂದಾಗ ಅವರು ಬರೆದು ತಿಳಿಸಿದ ತಮ್ಮ ಕಟು ಅನುಭವ ಓದಿದಾಗ ಹೌಹಾರುವಂತೆ ಆಗಿತ್ತು! ಅವರೂ ವೃತ್ತಿಮೂಲ ಶಿಕ್ಷಣ ಕೊಡುವದರಲ್ಲಿ ಹಂಬಲ ತಾಳಿದ್ದರು. ಪ್ರೌಢಶಾಲೆಯ ನಂತರದ ಹಂತದಲ್ಲಿ ಹೊಲಿಗೆ, ಮುದ್ರಣ, ಬಡಿಗತನ, ಬೆರಳಚ್ಚುಗಳಲ್ಲಿ ವ್ಯಾವಹಾರಿಕ ಶಿಕ್ಷಣಕೊಡಿಸಬೇಕೆಂದು ಯಂತ್ರೋಪಕರಣಗಳನ್ನೂ ಹೊಂದಿಸಿದ್ದರು. ಆದರೆ ಯಾವ ವಿದ್ಯಾರ್ಥಿಯೂ ಇವುಗಳಲ್ಲಿ ಆಸ್ಥೆ ತಾಳಲಿಲ್ಲವಂತೆ. ಬದಲಾಗಿ ಶ್ರಮವಿಲ್ಲದೆ ಸಂಬಳತರುವ, ಸುಭದ್ರವಾದ ಸರಕಾರಿ ನೌಕರಿಗೇ ಹಂಬಲಿಸುತ್ತ ಸ್ಪರ್ಧೆ ನಡೆಸಿದ್ದು ಕಂಡು ಬಂದಿತಂತೆ. ಇದೇ ಹೊನ್ನಾವರದಲ್ಲಿ ಹಿಂದೊಮ್ಮೆ ಕಲ್ಲಾಪುರ ವಕೀಲರು ಉದ್ಯೋಗ ಶಾಲೆಯೊಂದನ್ನು ಸ್ಥಾಪಿಸಿ ಸ್ಥಳೀಯ ಉತ್ಪನ್ನಗಳಾದ ಕತ್ತ, ಕೋಡು, ಕಾಷ್ಠ ಕೆಲಸದ ತರಬೇತಿಯನ್ನು ಎಳಿಯರಿಗೆ ಕೊಡಮಾಡಲು ಹೆಣಗಿ ಸೋತ ವಿಚಾರವನ್ನು ನೆನೆದು ವಿಷಾದಿಸುವಂತೆ ಆಯಿತು. ನಮ್ಮ ಜೀವನದ ಆದ್ಯತೆ - ದೃಷ್ಟಿಕೋನಗಳನ್ನು ಸರಿಯಾಗಿ ಗುರುತಿಸಿಕೊಳ್ಳಲು, ಜಿಲ್ಲೆಯವರು

ಸಕ್ರಿಯವಾಗಿ ಯತ್ನಿಸದಿದ್ದರೆ, ಸಾಹಿತ್ಯವೂ ಸೇರಿದಂತೆ ಅಭಿವೃದ್ಧಿಯು ಸರ್ವತೋಮುಖವಾಗಲು ಸಾಧ್ಯವಿಲ್ಲ.

ನಮ್ಮಲ್ಲಿ ಧೀಮಂತರಿಗೂ ಕೊರತೆಯಿಲ್ಲ. ಮುಂಬಯಿ, ಬೆಂಗಳೂರು, ದಿಲ್ಲಿಗಳಲ್ಲಿ ಕೋರ್ಟು, ಕಚೇರಿ, ನಾಟಕ, ಬ್ಯಾಂಕ್ ಉದ್ದಿಮೆಗಳಲ್ಲಿ ಯಶಸ್ವಿಯಾದವರು ಅನೇಕರು. ಉಚ್ಚ ಅಧಿಕಾರಿಗಳಾದವರು ಹಲವರು. ಕಲಾವಿದರು, ಚಿತ್ರಕರು, ನಾಟಕ, ಯಕ್ಷಗಾನ ಸಂಗೀತ ಕ್ಷೇತ್ರದಲ್ಲಿ ಚಲನಚಿತ್ರ ಕ್ಷೇತ್ರದಲ್ಲಿ ಹೆಸರಾಂತರಾದವರು ಸಾಕಷ್ಟು ಜನ. ಆದರೆ ಈ ಬುದ್ಧಿವಂತಿಕೆಯ ಉಪಯೋಗ ಅವರ ಜನ್ಮಭೂಮಿಗೆ ಆಗಲಿಲ್ಲ. ತಾವಿರುವಲ್ಲಿ ಅವಕಾಶಗಳನ್ನು ಕಲ್ಪಿಸಿಕೊಳ್ಳದೇ ಹಸಿರು ಹುಲ್ಲು ಇರುವಲ್ಲಿ ಮೇಯುತ್ತ ಹೋಗುವದು ನಮ್ಮವರ ವೈಶಿಷ್ಟ್ಯ! ಹೀಗಾಗಿ ಅವರ ಧೀಮಂತಿಕೆಯ, ಬುದ್ಧಿಚಾತುರ್ಯದ ಧನ, ಸಂಪತ್ತುಗಳ ಲಾಭ ಹುಟ್ಟೂರಿಗೆ ಆಗುವದು ಅಪರೂಪ. ಬ್ರಿಟಿಷರ ಕಾಲದಲ್ಲಿ ಜಿಲ್ಲೆಯಲ್ಲಿ ಅವಕಾಶಗಳು ಅತ್ಯಲ್ಪವಾಗಿದ್ದು ವಲಸೆ ಹೋಗುವದು ಅನಿವಾರ್ಯವಾಗಿತ್ತು. ಆದರೆ ವಾತಾವರಣ ಬದಲಾದರೂ ಆ ಪ್ರವೃತ್ತಿ ಮುಂದುವರೆಯಿತು. ಈ ವಿಷಯದಲ್ಲೂ ದಕ್ಷಿಣ ಕನ್ನಡಿಗರ ಸಾಧನೆಯನ್ನು ನೆನೆಪಿಸಿಕೊಳ್ಳಬೇಕಾದ್ದೇ. ಸಾಹಿತ್ಯದಲ್ಲಿ ಡಾ| ಶಿವರಾಮ ಕಾರಂತರ ಸಾಧನೆ ರಾಷ್ಟ್ರಮಟ್ಟದ್ದೇ ಆದರೂ, ಅವರ ಸಾಧನಾಕ್ಷೇತ್ರ, ಹುಟ್ಟೂರಿಗೆ ಸಮೀಪವಾದ ಗ್ರಾಮವೇ! ಅವರ ಸಾಹಿತ್ಯ ಕೃಷಿಗೆ, ಧನಸಂಪದನೆಯೆಂದೂ ಸಹಾಯವಾಗಲಿಲ್ಲ. ಕಷ್ಟಕಾರ್ಪಣ್ಯಗಳನ್ನು ಎದುರಿಸುವ ದಿಟ್ಟತನ, ಅನುಭವಗಳ ಸಾಂದ್ರತೆ, ಬದುಕನ್ನು ಅರಿಯುವ, ಪ್ರೀತಿಸುವ



ಸ್ತ್ರೀಸಾಧನೆ ಲಲಿದ ಕಲೆಯಲ್ಲಿ



ಶಿಲ್ಪದಲ್ಲಿ ಕೋಲಾಟದ ಮಾದರಿಗಳ

ದೈನಂದಿನ ಜೀವನ

ಪತ್ನಿಯ ಸಹಯೋಗ






೧. ಓಲೆಗಳನ್ನು ಜೋಡಿಸಿಕೊಡುವಲ್ಲಿ

೨. ಸಹ ಅಧ್ಯಯನದಲ್ಲಿ

ಬರವಣಿಗೆಯಲ್ಲಿ ಕಲೆ



73



7



72

ಸ್ತ್ರೀಶಿಕ್ಷಣದ ಮಾದರಿಗಳು




1. ಸಂಗೀತ ತರಬೇತಿ
2. ನೃತ್ಯ ರತಬೇತಿ

(೧೮ನೇ ಶತಮಾನದ ಕಲ್ಲಚ್ಚಿನ ಗ್ರಂಥದಿಂದ)

ಸ್ತ್ರೀಸಾಧನೆ ಶಿಕ್ಷಣದಲ್ಲಿ

ವಾಚನದಲ್ಲಿ ತರಬೇತಿ.





ಸ್ವಾಧ್ಯಾಯ




ವೀಣೆಯ ರಿಯಾಝ್

ಸ್ತ್ರೀ ಸಾಧನೆ ಶಿಕ್ಷಣದಲ್ಲಿ

1. ಶಾಲಾಬಾಲಿಕೆಯ ಎಬೆಯುವ ಭಂಗಿ ಪಟ್ಟದಕಲ್ಲು





2. ಹುಡುಗಿಯರಿಗೆ ಕಲಿಸುತ್ತಿರುವ ಶಿಕ್ಷಕ

(ಶ್ರವಣ ಬೆಳ್ಗೊಳ ಜೈನಮಠದ ಭಿತ್ತಿ ಚಿತ್ರ)

ಸಾಮರ್ಥ್ಯ, ನಿರಂತರ ಜಿಜ್ಞಾಸೆ, ಇವುಗಳೇ ಬರಹಗಾರನಿಗೆ ಪರಿಕರಗಳು. ಕೇವಲ ಸಾಹಿತ್ಯದ ಪ್ರೀತಿ ಅಥವಾ ಓದುವ ಚಟವೊಂದೇ ಹೆಚ್ಚಿನ ಸಹಾಯ ಮಾಡಲಾರದು! ಬದುಕಿನ ವಿವಿಧ ಆಯಾಮಗಳನ್ನು ಅರಿಯುವ ರೀತಿಗಳನ್ನು ಆತ ಬೆಳೆಸಿಕೊಳ್ಳಬೇಕಾಗುತ್ತದೆ.

ಸಾಧನೆಯಲ್ಲಿ ವಿಶ್ವಾಸವಿಟ್ಟವನೇ ಹೊರತು ಅದರ ಪ್ರದರ್ಶನಕ್ಕೆ ಯತ್ನಿಸಿದವ ನಾನಲ್ಲ. ಕಳೆದ ಮೂರು ದಶಕಗಳಿಂದ ನನ್ನ ಹಲವು ಆಸಕ್ತಿಗಳತ್ತ ಮನಸ್ಸು ಹಾಕಿ, ಪ್ರಕಾಶಕರು ವೈಯಕ್ತಿಕವಾಗಿ ವಿನಂತಿಸಿಕೊಂಡಾಗ, ಅವರಿಗೆ ಬೇಕಾದ ಗ್ರಂಥ ಲೇಖನಗಳನ್ನು ಬರೆದು ಕೊಡುತ್ತಿದ್ದೆ. ಯಾವುದೇ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿಲ್ಲ. ಆದರೆ ೧೯೯೫ರಲ್ಲಿ ಶ್ರೀ ಗೌರೀಶ ಕಾಯಕಿಣಿ ಪ್ರತಿಷ್ಠಾನದವರು ಪ್ರಶಸ್ತಿ ನೀಡಿ ಗೌರವಿಸಿದಾಗ, ನಮ್ಮ ಜಿಲ್ಲೆಯ ಅನೇಕ ಸಾಹಿತಿಗಳು, ಸಾಹಿತ್ಯಾಸಕ್ತರ ಸಂಪರ್ಕ ಒದಗಿತು. ಅವರಲ್ಲಿ ಕೆಲವರು ನನ್ನ ಬರವಣಿಗೆಯಲ್ಲಿ ವಿಶೇಷ ಅಭಿಮಾನ ತಾಳಿದವರು. ಇದರಿಂದಾಗಿಯೇ ಈ ಉತ್ತರ ಕನ್ನಡ ಜಿಲ್ಲಾ ೯ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗುವ ಸುಯೋಗ ಒದಗಿರಬೇಕು. ಜೊತೆಗೆ ನನ್ನ ಇತರ ಹವ್ಯಾಸಗಳಾಗಿ ಛಾಯಾಚಿತ್ರ, ಚಿತ್ರಕಲೆ, ವಿಜ್ಞಾನ, ರೇಖಾಚಿತ್ರಗಳಾದಿಗಳ ಪರಿಚಯವೂ ಜಿಲ್ಲೆಯ ಬಾಂಧವರಿಗೆ ಆಗಲಿ, ಎಂದು ಆಗ್ರಹಪಡಿಸಿದವರಿದ್ದಾರೆ. ಹೀಗಾಗಿ ನನ್ನ ಗ್ರಂಥ, ಲೇಖನ, ಛಾಯಾಚಿತ್ರ, ರೇಖಾಚಿತ್ರಗಳ ಪ್ರದರ್ಶನಕ್ಕೆ ಒಪ್ಪಿಕೊಂಡೆ. ನಾನೂ, ನನ್ನ ಅರ್ಧಾಂಗಿನಿಯೂ ಜೊತೆಗೇ ಪಾಲುಗೊಂಡ ಕಾರ್ಯಕ್ರಮಗಳು ಅತಿ ವಿರಳ! ಆದರೆ ನಮ್ಮ ಹಿತಚಿಂತಕರು ನನ್ನವಳನ್ನು ಈಗ ಹಿಂಬಾಲಿಸುವಂತೆ ಹುರಿದುಂಬಿಸಿದರು. ಏಕೆ ಗೊತ್ತೇ? ಕಾಮತ್‌ರಿಗಷ್ಟೇ ಹೋಗಲು ಬಿಟ್ಟರೆ, ಅವರು ಅರ್ಧದಾರಿಯಲ್ಲೇ ಕ್ಯಾಮರಾದೊಂದಿಗೆ ಬಸ್ಸಿನಿಂದ ಇಳಿದು, ಕಾಡಾನೆಯನ್ನೋ, ಕರಡಿಯನ್ನೋ ಶೂಟ್ ಮಾಡಲು ಹೋಗಿ, ಸಮ್ಮೇಳನವನ್ನೇ ಮರೆತುಬಿಟ್ಟಾರು! ಆದ್ದರಿಂದ, ಸಮ್ಮೇಳನ ಮುಗಿಯುವವರೆಗೆ ಅವರಿಗೆ ಬೆಂಗಾವಲಾಗಿದ್ದು, ಎಲ್ಲವೂ ಸುಸೂತ್ರವಾಗಿ ಮುಗಿದ ನಂತರವೇ ಕ್ಯಾಮರಾವನ್ನು ಕೈಗಿಡು ಎಂದು ಎಚ್ಚರಿಸಿಯೇ ಕಳಿಸಿದ್ದಾರೆ! ಇಂಥ ವ್ಯಕ್ತಿ ನಿಮ್ಮೊಂದಿಗಿರುವ!

ಕಗ್ಗತ್ತಲಿನ ಕೋಣೆಯಲ್ಲಿ ಛಾಯಾಗ್ರಹಣ ಮಾಡುವವನನ್ನು ಎಳೆದು ಕರೆತಂದು ಸಾರ್ವಜನಿಕರೆದುರು ವೇದಿಕೆಯ ಮೇಲೆ ಹತ್ತಿಸಿದ ಶ್ರೇಯಸ್ಸು ಉತ್ತರ ಕನ್ನಡದ ಸಾಹಿತ್ಯ ಪ್ರೇಮಿಗಳಿಗೆ, ಅಭಿಮಾನಿಗಳಿಗೆ ಸಲ್ಲಬೇಕು. ನಾನೆಂದೂ ಇಂಥ ಸಮ್ಮೇಳನಗಳಲ್ಲಿ. ಪ್ರಬಂಧ ಮಂಡಿಸಿಲ್ಲ. ಗೋಷ್ಠಿಗಳಲ್ಲಿ ಪಾಲ್ಗೊಂಡಿಲ್ಲ. ಚರ್ಚೆಗಳಲ್ಲಿ ಭಾಗವಹಿಸಿಲ್ಲ. ಶಾಲಾಕಾಲೇಜು ವಾರ್ಷಿಕೋತ್ಸವಗಳಲ್ಲಿ ಪತಾಕೆ ಹಚ್ಚುವದು, ಅಲಂಕಾರ ಮಾಡುವದು, ಛಾಯಾಗ್ರಹಣ ಇವಿಷ್ಟೇ ನನ್ನ ಪಾಲಿಗೆ ಮೀಸಲಿಡುತ್ತಿದ್ದರು...... ಈಗಲೂ ಈ ಭಾಷಣದ ಬದಲು ಇಲ್ಲಿ ಬಂದ ಗೌರವಾನ್ವಿತರ, ಸಾಹಿತ್ಯಾಸಕ್ತರ, ಛಾಯಾಚಿತ್ರ ಗ್ರಹಣ ಮಾಡುವಂತೆ ಆಗಿದ್ದರೆ....... ರೆ ....! ಎಂದು ಅನಿಸದೇ ಇರಲಿಲ್ಲ. ಈ ಗೌರವದ ಸ್ಥಾನ ಕೊಡಮಾಡಿ ಕೆಲ ಅನಿಸಿಕೆಗಳನ್ನು ಅಧ್ಯಕ್ಷ ಪದದಿಂದ ನಿಮ್ಮೆಲ್ಲರೊಡನೆ ಹಂಚಿಕೊಳ್ಳುವಂತೆ ಏರ್ಪಾಡು ಮಾಡಿದ, ಶ್ರಮಿಸಿದ ಸಕಲರಿಗೂ ಅತ್ಯಂತ ಕೃತಜ್ಞನಾಗಿದ್ದೇನೆ.

ಕೈಗನ್ನಡಿಯಲ್ಲಿ ಕನ್ನಡಿತಿ ಪುಸ್ತಕದ ಕೆಲವು ಆಧಾರ ಗ್ರಂಥಗಳು

Basham A. L. The wonder that New Delhi 1983 was India - A surey of the culture of Indian Subcontl nent betore the coming of the Muslims London 1954

BOOKS REFERRED

1. Altekar A.S : Education in Ancient India 3rd Ed. Benares, 1948
2. Das, Santosh Kumar : The Educational System of Ancient Hindus. Calcutta, 1933
3. Das - Gupta : Jain System of Education, Calcutta, Devendra Chandra 1942
4. Dharmapal : The Beautiful Tree, Indian Education in the Eighteenth Century. Delhi, 1981
5. Desai P.B : Jainism South India and Some Jain Inscriptions. Solapur, 1985
6. Dutt, Sukumar : Buddhist Monks and Monasteries of India (Their History and their contribution to Indian Culture.) London, 1962
7. Fergusson, James : Architecture of Bijapoor, London, 1893
8. Grey, Edward : Travels of Petro Della Valle, Vol. I & II London, 1888
9. Gurumurthy S : Education in South India, (Ancient and Modern Periods). Madras, 1979
10. Halappa, G.S(Ed) : Studies in Education and Culture

(Dr. D.C. Pavate Felicitation Volume). Dharwad, 1960

11. Handiqui, K.K. : Yashastilaka and Indian Culture, Sholapur, 1949

12. Husain, Mahadi : The Rehla of Ibn Batuta, Vadodara, (Ed) 1953

13. Kamat Suryanath : Social Life in Medieval Karnataka, Sholapur, 1949

14. Kamat Suryanath : Karnataka State Gazeteer, Vol II Bangalore, 1983

15. K. Sam Patgiri Rao (Ed) : Karnataka through the Ages. Bangalore, 1968

16. Keay F. F. : A History of Education in India and Pakistan, 3rded Oxford, 1959.

17. Keay F.F : Ancient Indian Education. An Inquiry into the origin, Development and Ineals. Oxford, 1918

18. Law Narendranath : Promotion of learning in India during Muhammedan Ruie by Muhammedans. London, 1916

19. Leela Shanta : The Agraharas in Karnataka, 400-1300
Kumari s : A. Madras, 1986

20. Manmathanatha : Prose English Translation of Agni
Dutt, S : Puranam Vol, II Varanasi 1967

21. Nilakanta Sastri S : A History of South India. 3rd Ed. Oxford, 1966

22. Nurulla, Syed and : A Student's History of Education in Naik J. P. India (1800-1984). Bombay, 1945

23.	Parulekar, K.V.	:	Literacy in India of Pre-British Days. Bombay, 1940
24.	Saletore B.A.	:	Ancient Karnataka, History fo Tuluva poona, 1936
25.	Sacho Edward C (Ed)	:	Alberuni's India, Vols I & II London, 1914
26.	Sewell, Robert A	:	A Forgotten Empire of Vijayanagar, 2nd End. 1970
27.	Sherwani, H.K. and Joshi, P.M.	:	History of Medieval Deccan, Vols, I & II Hyderabad, 1974
28.	Upadhya, K.N.	:	Pravachanasara of Kundakundacharya (Trans), Bombay, 1947
29.	Yazdani G.	:	Bidar, Its History and Monuments. Parts I & II London, 1960
30.	Yazdane G.	:	The Ealy History of the Deccan, Parts I & II London, 1960
31.	Zuhuddin Ahmed	:	Pressent Day Problems of Indian Education. Bombay, 1935
32.	Majumdar R. C.	:	The Veclic Age (IV impression Bombay 196)
33.	Maumdar R.C.	:	The Age of Imperial Unity Bombay 1951
34.	Maumdar R.C	:	The Classical Age III edition Bombay
35.	Maumdar R.C	:	The Age of Imperial Karaj Bombay 1964
36.	Thomus P.	:	Indian women through the ags 3rd

bay 1964

ಆಧಾರ ಗ್ರಂಥಗಳು

ಶಾಸನ ಸಂಪುಟಗಳು

1. ಆಂಧ್ರ ಪ್ರದೇಶ : ಗವರ್ನಮೆಂಟೊ ಆರ್ಕಿಯಾಲಾಜಿಕಲ್ ಸೀರೀಸ್
2. ಆನ್ಯುಅಲ್ ರಿಪೋರ್ಟ್ಸ್ ಆಫ್ ದಿ ಆರ್ಕಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ, 1887 ರಿಂದ ----
3. ಅನ್ಯುಅಲ್ ರಿಪೋರ್ಟ್ ಆಪ್ ಇಂಡಿಯನ್ ಎಪಿಗ್ರಾಫಿ, 1946 ರಿಂದ......
4. ಅನ್ಯುಅಲ್ ರಿಪೋರ್ಟ್ ಆಫ್ ಸೌಥ್ ಇಂಡಿಯನ್ ಎಪಿಗ್ರಾಫಿ 1847 ರಿಂದ 1945
5. ಎಪಿಗ್ರಾಫಿಯಾ ಕರ್ನಾಟಿಕಾ : ಸಂಪುಟ 1-16 ಬೆಂಗಳೂರು, 1898 ರಿಂದ ......
6. ಎಪಿಗ್ರಾಫಿಯಾ ಇಂಡಿಕಾ, 1892 ರಿಂದ ......
7. ಹೈದರಾಬಾದ ಆರ್ಕಿಯಾಲಾಜಿಕಲ್ ಸೀರೀಜ್ : ಸಂಪುಟ VIII. 1916
8. ರಿತ್ತಿ, ಶ್ರೀನಿವಾಸ ಮತ್ತು ಶೇಳ್ಕೆ, ಜಿ.ಸಿ. : (ಸಂ) ಇನ್‌ಸ್ಕ್ರಿಪ್ಶನ್ಸ್ ಫ್ರಾಮ್ ನಾಂದೇಡ್ ಡಿಸ್ಟ್ರಿಕ್ಟ್ ನಾಂದೇಡ, 1968
9. ಕರ್ನಾಟಕ ಇನ್‌ಸ್ಕ್ರಿಪ್ಶನ್

ಸಂಪುಟ	I ರಿಂದ III	ಸಂ. ಆರ್. ಎಸ್. ಪಂಚಮುಖಿ
ಸಂಪುಟ	IV	ಸಂ. ವಿ. ಎಂ. ಅಣ್ಣಿಗೇರಿ

ಸಂಪುಟ V ಸಂ.ಬಿ. ಆರ್ ಗೋಪಾಲ 1941-69

10. ಸೌಥ್ ಇಂಡಿಯನ್ ಇನ್ಸ್‌ಕ್ರಿಪ್ಶನ್ಸ್ I ರಿಂದ XX, ಮದ್ರಾಸ, 1890 ರಿಂದ ......

11. ಶಾಸನ ಸಾಹಿತ್ಯ ಸಂಚಯ : ಸಂಪಾದಕರು : ಸಂಪಾದಕರು : ಅಣ್ಣಿಗೇರಿ ಎ. ಎಂ. ಮತ್ತು ಮೇವುಂಡಿ ಮಲ್ಲಾರಿ. ಧಾರವಾಡ, 1961

ಪ್ರಾಕೃತ ಮತ್ತು ಸಂಸ್ಕೃತಿ ಆಧಾರ ಗ್ರಂಥಗಳು

1. ಉಪಾಧ್ಯೆ, ಆ. ನೇ. (ಸಂ) : ಉದ್ಯೋತನ ಸೂರಿಕೃತ : ಕುವಲಯ ಮಾಲಾ : ಮುಂಬಯಿ, 1969

2. ಕಾಳೆ, ಎಂ. ಆರ್ : ದಂಡಿಯ ದಶಕುಮಾರ ಚರಿತ : ಮುಂಬಯಿ, 1926

3. ಘಾರಪುರೆ ಜೆ. ಆರ್. : ಸಂಪುಟ 28 ಸ್ಮೃತಿಚಂದ್ರಿಕೆಯ ಅಹ್ನಿಕಾಖಂಡ : ಮುಂಬಯಿ, 1946

4. ಜಿನವಿಜಯ (ಸಂ) : ರಾಜಶೇಖರ ಸೂರಿಕೃತ ಪ್ರಬಂಧಕೋಶ ಶಾಂತಿನಿಕೇತನ, 1935

5. ದಲಾಲ ಸಿ.ಡಿ. ಮತ್ತು ಆರ್. ಎ. ಶಾಸ್ತ್ರಿ (ಸಂ) : ರಾಜಶೇಖರನ ಕಾವ್ಯ ಮಿಮಾಂಸಾ : ಬಡೋದೆ, 1934

6. ನಾರಾಯಣಸ್ವಾಮಿ ಶಾಸ್ತ್ರಿ ಸು. ಮತ್ತು ರಾಮಶಾಸ್ತ್ರಿ ಆರ್. (ಸಂ) : ಕೆಳದಿ ಬಸವರಾಜ ವಿರಚಿತ ಶಿವತತ್ವರತ್ನಾಕರ ಸಂಪುಟ I ಮತ್ತು II ಮೈಸೂರು, 1965, 1969

7. ಶಾಸ್ತ್ರಿ, ಮಂಗಲದೇವ (ಸಂ) : ಬಿಲ್ಹಣನ ವಿಕ್ರಮಾಂಕದೇವಚರಿತ ಮಹಾಕಾವ್ಯ, ಬನಾರಸ, 1945

8. ಶಿವೇಶ್ವರ, ಲೀಲಾ (ಸಂ) : ಚೌರಪಂಚಶಿಖಾ : ಬಿಲ್ಹಣ ಕೃತ. ನವದೆಹಲಿ, 1967

9. ಶ್ರೀ ಗೋಂದೇಕರ ಜಿ. ಕೆ. (ಸಂ) :ಸೋಮೇಶ್ವರನ ಮಾನಸೋಲ್ಲಾಸ (ಭಾಗ I - II- III) ಬಡೋದೆ, 1925, 1939, 1961

10. ಯಾಜ್ಞವಲ್ಕ್ಯಸ್ಮೃತಿ (ಸಂ. ನಾಗೇಶ ರಂಗೋ ಕುಲಕರ್ಣಿ) ಧಾರವಾಡ 1980.

ಕನ್ನಡ ವಾಙ್ಮಯ ಸೂಚಿ

1. ಅಣ್ಣಿಗೇರಿ ಏ. ಎಂ. ಮತ್ತು ಮೇವುಂಡಿ ಮುಲ್ಲಾರಿ : ಶಾಸನ ಸಾಹಿತ್ಯ ಸಂಚಯ : ಧಾರವಾಡ : 1961

2. ಕಲಬುರ್ಗಿ, ಎಂ. ಎಂ. ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರ : ಧಾರವಾಡ 1972

3. ಕುಮಾರವ್ಯಾಸ : ಕರ್ನಾಟಕ ಭಾರತ ಕಥಾಮಂಜರಿ : ಕ. ವಿ. ಸಂ. ಪ್ರಕಟಣೆ : ಬೆಂಗಳೂರು : 1985

4. ಕಾಮತ ಜ್ಯೋತ್ಸ್ನಾ : ಕರ್ನಾಟಕದ ಶಿಕ್ಷಣ ಪರಂಪರೆ ಮುಂಬೆ 1988

5. ಕಾಮತ ಜ್ಯೋತ್ಸ್ನಾ : ಮಹಿಳೆ ಒಂದು ಅಧ್ಯಯನ ಬೆಂಗಳೂರು 1999

6. ಕಾಮತ ಜ್ಯೋತ್ಸ್ನಾ : ಮಹಿಳೆ ಅಂದು ಇಂದು ಬೆಂಗಳೂರು - 2001

7. ಕರ್ನಾಟಕ ಭಾರತಿ : (ಡಾ। ಫ.ಗು. ಹಳಕಟ್ಟಿ, ಜನ್ಮಶತಮಾನೋತ್ಸವ ವಿಶೇಷಾಂಕ) ಕ.ವಿ.ಧಾರವಾಡ : (ಸಂ) : ಅಗಷ್ಟ - ನವ್ಹಂಬರ 1983

8. ಕೃಷ್ಣಭಟ್ಟ, ಅಡ್ಯನಡ್ಕ : (ಸಂ) "ಸುದರ್ಶನ" : ಡಾ। ತೊನ್ಸೆ ಮಾಧವ ಅನಂತ ಪೈ ಅಭಿನಂದನ ಗ್ರಂಥ : ಮೂಲ್ಕಿ 1977

9. ಕೃಷ್ಣರಾವ, ವ್ಹಿ. ಎಸ್. ಮತ್ತ ಚಂದ್ರಭಾಗಾದೇವಿ : ಆಧುನಿಕ ಭಾರತದಲ್ಲಿ ನೃತ್ಯ ಕಲೆ, ಮೈಸೂರು : 1956

10. ಗೋವಿಂದವೈದ್ಯ : ಪ್ರಭುಲಿಂಗಲೀಲೆ : ಕನ್ನಡ ಸಂಸ್ಕೃತಿ ನಿರ್ದೇಶನಾಲಯ : ಬೆಂಗಳೂರು : 1985

11. ಚಿದಾನಂಕ ಮೂರ್ತಿ ಎಂ. : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಪ್ರಸಾರಾಂಗ, ಮೈಸೂರು : 1972 (ಎರಡನೇ ಆವೃತ್ತಿ)

12. ಜಾಗೀರದಾರ ಸೀತಾರಾಮ : ಗ್ರಂಥ ಸಂಪಾದನಾಶಾಸ್ತ್ರ : ಕನ್ನಡ ಸಾಹಿತ್ಯ ಸಂಘ : ಸುರಪುರ : 1978

13. ದೀಕ್ಷಿತ, ಜಿ. ಎಸ್. : ಪ್ರಾಚೀನ ಕರ್ನಾಟಕದ ಶಿಕ್ಷಣಕ್ರಮ : ಧಾರವಾಡ : 1970

14. ದೇವೀರಪ್ಪ, ಎಚ್. : ನಂಜುಂಡಕವಿಯ ರಾಮನಾಥ ಚರಿತ : ಭಾಗ 2 : ಮತ್ತು 3 : ಮೈಸೂರು : 1959

15. ದೇವೀರಪ್ಪ, ಎಚ್. ಮತ್ತು ಬಸಪ್ಪ ಎಸ್. : (ಸಂ) : ಲಕ್ಕಣ್ಣ ದಂಡೇಶವಿರಚಿತ ಶಿವತತ್ವ ಚಿಂತಾಮಣಿ : ಮೈಸೂರು : 1960

16. ಧರ್ಮಾಮೃತಂ : ಗದ್ಯಾನುವಾದ : ಕೆ. ವೆಂಕಟರಾಮಪ್ಪ : ಬೆಂಗಳೂರು : 1977

17. ನರಸಿಂಹಾಚಾರ್, ಡಿ. ಎಲ್. : ಕನ್ನಡ ಗ್ರಂಥ ಸಂಪಾದನೆ : ಮೈಸೂರು : 1970

18. ನಾಗರಾಜ್ಯ, ಹಂ. ಪ. : ಕನ್ನಡ ಗ್ರಂಥ ಸಂಪಾದನೆ : ಮೈಸೂರು : 1970

19. ನಾಗರಾಜಯ್ಯ, ಹಂ. ಪ. : ತಿರುಮಲಾಚಾರ್ಯನ ಚಿಕ್ಕದೇವರಾಯ ವಂಶಾವಳಿ : ಬೆಂಗಳೂರು 1977

20. ನಾಗೇಗೌಡ, ಎಚ್. ಎಲ್. : ಪ್ರವಾಸಿ ಕಂಡ ಇಂಡಿಯ : ಸಂಪುಟಗಳು, 1 ರಿಂದ 8 ಮೈಸೂರು : 1959 ರಿಂದ 1982, 1998

21. ಚಂಪಾಬಾಯಿ ಡಿ. (ಸಂ) ಹೊನ್ನಮ್ಮನ ಹದಿಬದೆಯಧರ್ಮ ಮೈಸೂರು 1956

22. ಪಂಪ : ಪಂಪಭಾರತ ಅಥವಾ ವಿಕ್ರಮಾರ್ಜುನವಿಜಯಂ : ಮೈಸೂರು : 1977

23. ಪಂಪ : ಆದಿಪುರಾಣಂ : ಗದ್ಯಾನುವಾದ : ಕೆ. ಎಲ್. ನರಸಿಂಹಶಾಸ್ತ್ರಿ : ಕನ್ನಡ ಸಾಹಿತ್ಯ ಪರಿಷತ್ತು : ಬೆಂಗಳೂರು : 1977

24. ಪುರಾಣಿಕ, ಸಿದ್ದಯ್ಯ : ಮಣಿಹ : ಫ. ಗು. ಹಳಕಟ್ಟಿ ಸಂಸ್ಮರಣ ಸಂಪುಟ : ಬೆಂಗಳೂರು : 1982

25. ಪುರಾಣಿಕ ಸಿದ್ಧಯ್ಯ : ಶರಣ ಚರಿತಾಮೃತ (3 ನೇ ಮುದ್ರಣ) ಮೈಸೂರು 1964

26. ಬಸವರಾಜು ಎಲ್. : ತಿರುಮಲಾರ್ಯ ಮತ್ತು ಚಿಕ್ಕದೇವರಾಜ ಒಡೆಯರು ಧಾರವಾಡ 1972

27. ವೀರಪ್ಪ, ಎನ್. ಎಸ್. ಭಾರತೀಯ ಶಿಕ್ಷಣದ ಇತಿಹಾಸ : ಕ್ರಿ. ಪೂ. 800 ರಿಂದ ಕ್ರಿ.ಶ.1984 : ಪ್ರಸಾರಾಂಗ : ಮೈಸೂರು : 1985

28. ಶಂಕರನಾರಾಯಣರಾವ್, ಎಚ್.ಎಂ. : ಶ್ರೀ ಹರಿಹರ ದೇವಾಲಯ : ಮೈಸೂರು : 1985

29. ಶರ್ಮಾ, ತಿ. ತಾ. : (ಸಂ) : ಚಾರಿತ್ರಿಕ ದಾಖಲೆಗಳು : ಬೆಂಗಳೂರು : 1971

30. ಶಿವಕೋಟ್ಯಾಚಾರ್ಯ : ವಡ್ಡಾರಾಧನೆ : (ಸಂ) : ಡಿ. ಎಲ್. ನರಸಿಂಹಾಚಾರ್ : ಮೈಸೂರು : 1970

31. ಶೆಟ್ಟಿ : ರಘುಚಂದ್ರ ಟಿ. : (ಸಂ) : ಮಹಾಕವಿ ಪಾಯಣವರ್ಣಿರಚಿತ ಜ್ಞಾನಚಂದ್ರ ಚರಿತೆ : ಜಯಮುದ್ರಣ ಪ್ರಕಟನ : ಪ್ರಕಟನ : ಮೂಡಬಿದ್ರಿ

32. ಶ್ರೀಕಂಠಶಾಸ್ತ್ರೀ, ಎಸ್. : ಭಾರತೀಯ ಸಂಸ್ಕೃತಿ : ಮೈಸೂರು : 1956

33. ಶ್ರೀನಾವಾಸ ಮೂರ್ತಿ ಎಮ್. ಆರ್. ವಚನಧಮಸಾರ

34. ಶ್ರೀಕಂಠಶಾಸ್ತ್ರಿ ಎಸ್. :ಭಾರತೀಯ ಸಂಸ್ಕೃತಿ ಮೈಸೂರು 1956

35. ಸಣ್ಣಯ್ಯ, ಬಿ. ಎಸ್. : ಹರಿಹರ ಕವಿಯ ಗಿರಿಜಾಕಲ್ಯಾಣ ಮಹಾಪ್ರಬಂಧಂ ಗದ್ಯಾನುವಾದ : ಬೆಂದಳೂರು : 1976

36. ಸೋಮೇಶ್ವರಶತಕ : ಕನ್ನಡ ಸಂಸ್ಕೃತಿ ನಿರ್ದೇಶನಾಲಯ : ಬೆಂಗಳೂರು : 1985

37. ಹಳಕಟ್ಟಿ, ಫ.ಗು. : ಶಿವಶರಣರ ಚರಿತ್ರೆಗಳು : ಭಾಗಗಳು 1-2-3 : ಬಿಜಾಪುರ : 1951

38. ಹಿರೇಮಠ, ಆರ್. ಸಿ. : (ಸಂ) : ಪದ್ಮಣಾಂಕನ ಪದ್ಮರಾಜ ಪುರಾಣ, ಧಾರವಾಡ : 1971

39. ಹಿರೇಮಠ, ಆರ್. ಸಿ. : (ಸಂ). : ಭೀಮಕವಿಯ ಬಸವಪುರಾಣ. ಧಾರವಾಡ : 1971

40. ಹಿರೇಮಠ, ಆರ್. ಸಿ. : ಮತ್ತು ಸುಕಾಪುರ ಎಂ. ಎಸ್. (ಸಂ) ರಾಘವಾಂಕನ ಸೋಮನಾಥ ಚಾರಿತ್ರ -ಧಾರವಾಡ : 1967

ಅನುಬಂಧ

ಉಳಿದುಕೊಂಡು ಬಂದ ದೇವದಾಸಿ ಪದ್ಧತಿ : ಶಾಸನಗಳ ಉಲ್ಲೇಖ, ಕಾವ್ಯಗಳ ವರ್ಣನೆ ಹಾಗೂ ವಿದೇಶೀಯರ ವೃತ್ತಾಂತಗಳಿಂದ ದೇವದಾಸಿ ಪದ್ಧತಿ ನಾಡಿನ ಜನಜೀವನದ ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿತ್ತು, ಎಂದು ನೋಡಿದ್ದಾಗಿದೆ. ಆದರೂ ವೇಶ್ಯೆಯರು ಹಾಗೂ ದೇವದಾಸಿಯರ ನಡುವಣ ಅಂತರವನ್ನು ಗುರುತಿಸುವದು 18 ನೇ ಶತಮಾನದ ನಂತರ ಕಷ್ಟದ್ದಾಗಿ ಬಿಟ್ಟಿತು. ವೇಶ್ಯೆಯರು ದೇವದಾಸಿಯರಲ್ಲಿ. ದೇವದಾಸಿಯರೆಲ್ಲರೂ ವೇಶ್ಯೆಯರಲ್ಲ, ಎಂದು ಅರಿತುಕೊಂಡ ವರ್ಗ, ಬ್ರಿಟಿಶರ ಕಾಲಕ್ಕೆ ಕ್ಷೀಣಿಸುತ್ತ ಬಂದಿತ್ತು. ರಾಜರು, ಮಾಂಡಲಿಕರು, ಸಿರಿವಂತರು ಮೊದಲಾದವರ ಆಶ್ರಮ ಈ ವರ್ಗಕ್ಕೆ ತಪ್ಪಿ ಹೋಯಿತು. ದೊಡ್ಡ ದೇವಾಲಯಗಳ ಉಂಬಳಿ ನಿಂತು ಹೋಯಿತು. ಇಂಥಲ್ಲಿ ಸಂಗೀತ ನೃತ್ಯ ಸೇವೆಗಳಿಂದಲೇ ಬದುಕುತ್ತಿದ್ದ ವರ್ಗ, ವೇಶ್ಯಾವೃತ್ತಿಗೆ ಇಳಿದರೆ ಆಶ್ಚರ್ಯಪಡಬೇಕಾಗಿಲ್ಲ.

ಮೊದಮೊದಲಿಗೆ ವಿದೇಶೀ ಅಧಿಕಾರಿಗಳ ಮನೋರಂಜನೆಗೆ ಏರ್ಪಾಡಾಗುತ್ತಿದ್ದ "ನಾಚ್" ಕಾರ್ಯಕ್ರಮಗಳು ಬಳಿಕ ಅಶ್ಲೀಲವೆಂದು ಪರಿಗಣಿಸಲ್ಪಟ್ಟವು. ಬ್ರಿಟಿಶರ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತಿದ್ದ ಮಿಶನರಿಗಳು ಮತ್ತು ಇಂಗ್ಲಿಷ್ ವಿದ್ಯಾಭ್ಯಾಸ ಪಡೆದು ಪುರೋಗಾಮಿಯಾಗಲು ಪ್ರಯತ್ನಿಸುತ್ತಿದ್ದ ಭಾರತೀಯರು ಸರಕಾರದ ಮೇಲೆ ಇಂಥ ಕಾರ್ಯಕ್ರಮಗಳ ಮೇಲೆ ಪ್ರತಿ ಬಂಧ ತರಲು ಒತ್ತಾಯಿಸಲಾರಂಭಿಸಿದರು. ಹೆಣ್ಣಿನ ಶೋಷಣೆ ತಡೆಗಟ್ಟುವದಕ್ಕಿಂತ "ಶೀಲಶಿಕ್ಷಣ" ಅವರ ಉದ್ದೇಶವಾಗಿತ್ತು.

ಮೊದಲ ಬಾರಿಗೆ ದಕ್ಷಿಣ ಭಾರತದಲ್ಲಿ ದೇವದಾಸಿ ಪದ್ಧತಿಯ ಪ್ರತಿ ಬಂಧ ಕಾಯ್ದೆಯನ್ನು ಜಾರಿಗೆ ತಂದ ಯಶಸ್ಸು ಮೈಸೂರು ಸಂಸ್ಥಾನಕ್ಕೆ ಸಲ್ಲುತ್ತದೆ. 1892-97 ರಷ್ಟು ಹಿಂದೆಯೇ ಅಂದಿನ ಸಂಸ್ಥಾನದ ವ್ಯಾಪ್ತಿಯಲ್ಲಿ ಬರುತ್ತಿದ್ದ ಪ್ರಸಿದ್ಧ ದೇವಾಲಯಗಳಲ್ಲಿ ನರ್ತಕಿಯರು ನೇಮಕಾತಿ ರದ್ದಾಯಿತು. ಬರುಕಿರುವವರೆಗೆ ಅಲ್ಲಿಯ ನರ್ತಕಿಯರಿಗೆ ವೇತನ ಕೊಡಬೇಕು. ಬಳಿಕ ಆ ಹುದ್ದೆಗಳನ್ನು ತುಂಬಬಾರದು ಎಂದು ಆದೇಶ ಹೊರಟಿತು. 1910 ರಲ್ಲಿ ಮೈಸೂರು ಸರಕಾರ ಕಟ್ಟುನಿಟ್ಟಾಗಿ ದೇವದಾಸಿ ಪದ್ಧತಿಯನ್ನು ಬಹಿಷ್ಕರಿಸಿದ ಶಾಸನ ಜಾರಿಗೆ ತಂದಿತು. ತಮಿಳುನಾಡು, ಆಂಧ್ರ, ಕೇರಳಗಳಲ್ಲಿಯ ದೇಶಿ ಸಂಸ್ಥಾನಿಕರೂ, ಮೈಸೂರನ್ನು ಅನುಸರಿಸಿದರು.

ಆದರೆ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ, ದೇವದಾಸಿ ಪದ್ಧತಿ ಆಳವಾಗಿ ಬೇರೂರಿದ

ಪ್ರದೇಶದಲ್ಲಿ ಅದನ್ನು ತಡೆಗಟ್ಟಲು ಯಾವ ಸಂಘಟಿತ ಪ್ರಯತ್ನವೂ ನಡೆಯಲಿಲ್ಲ. ಕರ್ನಾಟಕ ಸರಕಾರವಾದರೂ 1982ರವರೆಗೆ, ದೇವದಾಸಿ ಸಮರ್ಪಣಾ ನಿಷೇಧವನ್ನು ಜಾರಿಗೆ ತರಲಿಲ್ಲ! ಎಂಬುದನ್ನು ವಿಷಾದದಿಂದ ನೆನಪಿಸಿಕೊಳ್ಳ ಬೇಕಾಗುತ್ತದೆ. ಕಲೆ, ತಾಂತ್ರಿಕ ತರಬೇತಿ, ಶಿಕ್ಷಣ, ಉದ್ಯೋಗಾವಕಾಶಗಳೆಲ್ಲ ಭಾರತದ ಇನ್ನಿತರ ಎಷ್ಟೋ ರಾಜ್ಯಗಳಿಗಿಂತ ಕರ್ನಾಟಕದ ಮಹಿಳೆಯರಿಗೆ ಲಭ್ಯವಿದ್ದು ಪ್ರಗತಿ ಸಾಧ್ಯವಾಗಿದೆ. ಜೊತೆಗೆ ದೇವದಾಸಿ ಪದ್ಧತಿ ಜೀವಂತವಾಗಿದ್ದು ದೇವರು, ಧರ್ಮದ ಹೆಸರಿನಲ್ಲಿ ವೇಶ್ಯಾವೃತ್ತಿಯ ಬೆಳವಣಿಗೆಯಲ್ಲೂ ಕರ್ನಾಟಕ, ಅಗ್ರಗಣ್ಯವಾಗದೆ! ಎಂಬುದನ್ನು ಮರೆಯುವಂತೆ ಇಲ್ಲ.

ಈ ಅನಾರೋಗ್ಯಕಾರಿ ಉಳಿವಿಗೆ ಹಲವು ಕಾರಣಗಳಿವೆ. ಪ್ರಾಚೀನಕಾಲದಿಂದಲೂ ದೇವಾಲಯಗಳಿಗೆ ಹೆಣ್ಣುಗಳನ್ನು ಕೊಡಮಾಡುವ ಪದ್ಧತಿಯ ಅನುಕರಣೆ ಗ್ರಾಮ ಪ್ರದೇಶದಲ್ಲಿ ಗ್ರಾಮ ದೇವತೆಗಳಿಗೆ ಸಿಗಲು ಪ್ರಾರಂಭವಾಗಿತ್ತು. ಇವರಲ್ಲಿ ಎಲ್ಲಮ್ಮ ಪ್ರಧಾನ ದೇವತೆಯಾಗಿದ್ದಳು. ಯಾವ ಪ್ರತಿಬಂಧವಾಗಲಿ, ಆ ಕುರಿತಾದ ದೊಡ್ಡ ಚಳುವಳಿಗಳಾಗಲಿ ಕಂಡುಬರದ ಪ್ರದೇಶಗಳಲ್ಲಿ ದೇವಾಲಯಗಳಿಗೆ ಬಸವಿಯರಾಗಿ ಹೆಣ್ಣು ಮಕ್ಕಳನ್ನು ಬಿಡುವ ಪದ್ಧತಿ ಜೋರಾಗಿಯೇ ಬೆಳೆದು ಎಂದಿತು ಸಂಕಟ ಸಮಯದಲ್ಲಿ ದೇವಿಗೆ ಹರಕೆ ಹೊರುವದು ತೀರ ಸಹಜ! ಹೊಟ್ಟೆಯಲ್ಲಿ ಹುಟ್ಟಿದ ಮಗುವನ್ನೇ ದೇವಿಗೆ ಕೊಟ್ಟು ಆಕೆಯನ್ನು ಸುಪ್ರೀತಳನ್ನಾಗಿಸಲು, ತಾನು ದೊಡ್ಡ 'ತ್ಯಾಗ' ಮಾಡುವವರಿಗೂ ಕಡಿಮೆ ಇರಲಿಲ್ಲ. ಡಾ। ಕಮಲಾ ಹೆಮ್ಮಿಗೆ ಅವರ ಡಾಕ್ಟರೇಟ ಅಧ್ಯಯನವಾದ 'ಸವದತ್ತಿ ಎಲ್ಲಮ್ಮ ಹಾಗೂ ದೇವದಾಸಿ ಪದ್ಧತಿ (ಒಂದು ಸಾಂಸ್ಕೃತಿಕ ಅಧ್ಯಯನ), ಗ್ರಂಥ ಎಳೆ, ಎಳೆಯಾಗಿ ಈ ದುಷ್ಟ ಪದ್ಧತಿ ಬೆಳೆದು ಬಂದ ಪದ್ಧತಿಯನ್ನು ವಿಶ್ಲೇಷಿಸುತ್ತದೆ ದೇವದಾಸಿ ಬಿಡುವ ಈ ಪದ್ಧತಿ ಕರ್ನಾಟಕದ ಬೆಳಗಾವಿ, ಬಿಜಾಪುರ, ಗುಲಬರ್ಗಾ, ಬೀದರ ರಾಯಚೂರು, ಬಳ್ಳಾರಿ, ಧಾರವಾಡ, ಶಿವಮೊಗ್ಗ ಜಿಲ್ಲೆಗಳಲ್ಲೆಲ್ಲ ಪ್ರಚಲಿತವಿತ್ತು. ಈಗಲೂ ಇದೆ. ಇದಕ್ಕೆ ಕಾರಣಗಳು :

1) ಬರಗಾಲ
2) ಸಂತಾನವಿಲ್ಲದ ಕುಟುಂಬ ಕೊನೆಗೂ ಮಕ್ಕಳಾಗಿ ಮೊದಲ ಮಗು ಹೆಣ್ಣಾದರೆ ಆ ಮಗುವನ್ನು ದೇವಾಲಯಕ್ಕೆ ಕೊಡುವ ಹರಕೆ, ಈಗಾಗಲೇ ಉದ್ಧರಿತ ಅಜ್ಞಾತ ಡಚ್ ಪ್ರವಾಸಿಯ ಪತ್ರವು ಈ ಪದ್ಧತಿಯ ಪ್ರಾಚೀನತೆ ಸಾರುತ್ತದೆ.
3) ಕೆಟ್ಟ ಗಳಿಗೆಯಲ್ಲಿ ಹುಟ್ಟಿದ ಹೆಣ್ಣುಮಗು, ಎಲ್ಲಮ್ಮನ ಪಾಲಿಗೆ ಹೋಗುತ್ತಿದ್ದಳು.
4) ಐದನೆಯ ಮಗುವೂ ಹೆಣ್ಣಾದರೆ ಆಕೆಯನ್ನು ದೇವದಾಸಿಯನ್ನಾಗಿಸುತ್ತಿದ್ದರು.
5) ಗುಣವಾಗದ ಕಾಯಿಲೆಯಿಂದ ನರಳುತ್ತಿದ್ದ ಮಗುವನ್ನು ದೇವಿಗೇ ಒಪ್ಪಿಸುವ ಹರಕೆ ಸಾಮಾನ್ಯವಾಗಿತ್ತು.
6) ತೀರದ ಬಡತನ

7) ಇನ್ನಷ್ಟು ಮೂಢ ನಂಬಿಕೆಗಳು - i) ಹಣೆ ಬರಹ ii) ದೈವ ಶಾಪ iii) ಕರ್ಮಸಿದ್ಧಾಂತ iv) ಅನಕ್ಷರತೆ
8) ಆಮಿಷಗಳು
9) ಜಾಗೃತಿಯ ಅಭಾವ
10) ಕೆಳವರ್ಗಗಳಲ್ಲಿರುವ ಅಸಂಘಟಿತ ಜೀವನ ಹಾಗೂ ದಾಸ್ಯಮನೋಭಾವ.

ದೇವದಾಸಿಯರೆಲ್ಲ 'ಕೆಳಜಾತಿ' ಎನಿಸಿಕೊಂಡವರಾದ ದಾಸರು, ತಳವಾರರು, ಅಗಸರು, ಹೊಲೆಯರು, ಅವರಲ್ಲಿ ಪ್ರಮುಖರಾಗಿದ್ದಾರೆ. ಇತರ ಜಾತಿಯವರೂ ಇದ್ದಾರೆ. ದೇವದಾಸಿತನ ಒಂದು ವೃತ್ತಿ. ಜಾತಿಯಲ್ಲಿ ಕೆಲವು ಜನಾಂಗಗಳಲ್ಲಿ ಮೊದಲ ಮಗುವನ್ನು ಎಲ್ಲಮ್ಮನಿಗೆ ಅರ್ಪಿಸುವ ಪದ್ಧತಿ ಇದ್ದರೆ ದೇವದಾಸಿಗೆ ಹುಟ್ಟಿದ ಮಕ್ಕಳು ದೇವದಾಸಿಯರೇ ಆಗಬೇಕೆಂಬ ಅಲಿಖಿತ ನಿಯಮವನ್ನು ಎಲ್ಲರೂ ಪಾಲಿಸುತ್ತಿದ್ದರು. ಹೀಗಾಗಿ ಅವರ ಸಂಖ್ಯೆ ಬೆಳೆಯುತ್ತ ಹೋಯಿತು. ಒಂದು ಅಧ್ಯಯನದ ಪ್ರಕಾರ ಇಡೀ ಕರ್ನಾಟಕದಲ್ಲಿ ಹೋದ ಶತಮಾನದ ಕೊನೆಯ ದಶಕದಲ್ಲಿ 7,871 ದೇವದಾಸಿಯರಿದ್ದು ಈ ಮೊದಲು ಕಾಣಿಸಿದ ಜಿಲ್ಲೆಗಳಲ್ಲಿ ಕಂಡುಬರುತ್ತಿದ್ದರು. ಇನ್ನು, ಮುಂಬೈಯ ಫೊರಾಸ್ ರಸ್ತೆ (ಈಗಿನ ಪಟ್ಟೆ ಬಾಬುರಾವ್ ರಸ್ತೆ) ಹಾಗೂ ಪುಣೆಯ ಬುಧವಾರ ಪೇಟೆಯ ಸುಪ್ರಸಿದ್ಧಿ ವೇಶ್ಯಾವಾಟಿಕೆಗಳಲ್ಲಿ ಹೆಚ್ಚಿನವರು ಕರ್ನಾಟಕದವರೇ ಇರುವಂತೆ ಆದದ್ದು ಕನ್ನಡಿಗರೆಲ್ಲ ತಲೆತಗ್ಗಿಸುವ ವಿಚಾರವಾಗಿದೆ. ಬಹಿರಂಗವಾಗಿ ಎಲ್ಲಮ್ಮನ ಜಾತ್ರೆಯಲ್ಲಿ ಬಸವಿಬಿಡುವ ಪದ್ಧತಿ ನಿಂತಿದೆಯಾದರೂ ಕದ್ದು ಮುಚ್ಚಿ ಆ ಹರಕೆ ಮುಟ್ಟಿಸುವದು ನಡೆದೇ ಇದೆ.

೧೯೮೨ ರ ದೇವದಾಸಿ ಪದ್ಧತಿ ನಿಷೇಧ ಕಾನೂನಿನ ಅರಿವು ಹಳ್ಳಿಗರಿಗೆ ಮಾಡಿಕೊಡುವ ಸಕ್ರಿಯ ಪ್ರಯತ್ನ ಸಾಕಷ್ಟು ನಡೆದಿಲ್ಲ. ದೇವದಾಸಿಯರ ಪುನರ್ವಸತಿಗಾಗಿ ಸರಕಾರಿ ಧನ ಸಹಾಯ ಒದಗುತ್ತಿದ್ದರೂ ಅದರ ಯೋಗ್ಯ ವಿಲೇವಾರಿ ಆಗುತ್ತಿಲ್ಲ. ಸ್ವಯಂ ಸೇವಾ ಸಂಸ್ಥೆಗಳಲ್ಲಿ ಕೆಲವರು ನಿಷ್ಠಾವಂತರೂ ಇದ್ದಾರೆ. ಅವರಿಗೆ ಬೇಕಾದ ಖಾಸಗಿ ಧನಸಹಾಯ ಬರುತ್ತಿಲ್ಲ. ಸರಿಯಾದ ಶಿಕ್ಷಣ ಗ್ರಾಮಿಣ ಉದ್ಯೋಗಾವಕಾಶಗಳು ಹಾಗೂ ಅಂಧ: ಶ್ರದ್ಧೆಗಳ ಕುರಿತು ಸರಿಯಾದ ತಿಳುವಳಿಕೆ ನೀಡಬಲ್ಲ ನಿಸ್ವಾರ್ಥಿ ಸ್ವಯಂ ಸೇವಕರು ಕೆಲವರಾದರೂ ಮುಂದೆ ಬಂದರೆ, ಇವೆಲ್ಲ ಬಂದೆಡೆ ಸೇರಿದಾಗ ಮಾತ್ರ ದೇವದಾಸಿ ಪದ್ಧತಿಯ ಈಗಿನ ವಿಕೃತಿರೂಪ ತಡೆಯುಲು ಸಾಧ್ಯ.



ದಿ. ಕೃಷ್ಣಾನಂದ ಕಾಮತ್ (೧೯೩೪ - ೨೦೦೨)

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಜವಳಿ ವ್ಯಾಪಾರಿಗಳ ಕುಟುಂಬದಲ್ಲಿ ಜನ್ಮವೆತ್ತಿದ ಕೃಷ್ಣಾನಂದ ಕಾಮತರು ಕನ್ನಡನಾಡು ಕಂಡ ಬಹುಮುಖ ಪ್ರತಿಭಾವಂತರಲ್ಲಿ ಒಬ್ಬರು. 'ನಾನೂ ಅಮೇರಿಕೆಗೆ ಹೋಗಿದ್ದೆ' ಎಂಬ ಮೊದಲ ಕೃತಿಯಿಂದಲೇ ಜನಪ್ರಿಯ ಸಾಹಿತಿಯಾಗಿ ಗುರುತಿಸಲ್ಪಟ್ಟರು. ಬಳಿಕ ವಿಜ್ಞಾನ, ಪ್ರವಾಸ, ಕಲೆ, ಪರಿಸರ ಪ್ರಜ್ಞೆ, ಪತ್ರ ಸಾಹಿತ್ಯ, ಲಲಿತ ಪ್ರಬಂಧಗಳು, ಜನಾಂಗೀಯ ಅಧ್ಯಯನ, ಮುಂತಾದ ವಿವಿಧ ವಿಷಯಗಳ ಮೇಲೆ ೨೩ ಗ್ರಂಥಗಳನ್ನು ಬರೆದರು. ಛಾಯಾಗ್ರಹಣದ ಹವ್ಯಾಸ ಬೆಳೆಸಿಕೊಂಡ ಇವರು ಸುಮಾರು ೨ ಲಕ್ಷ ಚಿತ್ರಗಳನ್ನು ಅಸಂಖ್ಯ ವಸ್ತುಗಳನ್ನು ಕುರಿತು ಕ್ಲಿಕ್ಕಿಸಿದ್ದಾರೆ. ಅವುಗಳಲ್ಲಿ ೧೮ ಸಾವಿರ ಚಿತ್ರಗಳು ಕಾಮತ್ ಕುಟುಂಬದ ವೆಬ್‌ಸೈಟಾದ www.kamat.com / Kamat Potpourri ಯಲ್ಲಿ ಪ್ರಸಾರವಾಗಿವೆ, ಆಗುತ್ತಲೇ ಇವೆ. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಮೂರುಬಾರಿಗೆ ಆಯಾ ವರ್ಷದ ಪ್ರವಾಸ, ವಿಜ್ಞಾನ, ಪ್ರದೇಶ ಅಧ್ಯಯನದ ಉತ್ತಮ ಕೃತಿಗಾಗಿ ಪ್ರಶಸ್ತಿ ಸಂದಿದೆ.

ಈ ಸಂಕಲನದಲ್ಲಿಯ ಇಪ್ಪತ್ತು ಪ್ರಬಂಧಗಳು ಕಾಲಕಾಲಕ್ಕೆ ಕನ್ನಡ ಪತ್ರಿಕೆಗಳು ಕಾಮತರಿಗೆ ವಿನಂತಿಸಿ, ಬರೆಯಿಸಿ ಪ್ರಕಟವಾದವುಗಳು. ಮೊದಲ ವಿಭಾಗದ ೧೦ ಪ್ರಬಂಧಗಳು ಕರ್ನಾಟಕದ ಕಲಾ ಪ್ರಪಂಚಕ್ಕೆ ಸಂಬಂಧಿಸಿದವುಗಳು. ಎರಡನೆಯ ವಿಭಾಗದ ೧೦ ಪ್ರಬಂಧಗಳು ಕರ್ನಾಟಕದ ಜನಜೀವನಕ್ಕೆ ಸಂಬಂಧಿಸಿವೆ. ಇವೆಲ್ಲ ಕಾಲು ಶತಮಾನಕ್ಕೂ ಹಿಂದೆ ಬರೆದವುಗಳು. ಈ ಅವಧಿಯಲ್ಲಿ ಜನಜೀವನ ಭರದಿಂದ ಬದಲಾಗಿದೆ. ಮುಖ್ಯವಾಗಿ ಮಲೆನಾಡಿನ ಕರಾವಳಿಯ ಜೀವನ, ಗುರುತು ಹಿಡಿಯಲಾಗದಷ್ಟು ಮಾರ್ಪಟ್ಟಿದೆ. ಈ ಪ್ರದೇಶದ ಪರಿಸರ ವಿನಾಶದ ಕುರಿತು ಕಾಮತರು ತುಂಬ ಹಿಂದಿನಿಂದಲೂ ಬರೆಯುತ್ತ ಬಂದಿದ್ದರು. ಎಚ್ಚರಿಸಿದ್ದರು. ನಾವೇ ನಮ್ಮ ಸಂಸ್ಕೃತಿ ಪರಿಸರಗಳ ನಾಶಕ್ಕೆ ಕಾರಣರಾದ ಈ ದಿನಗಳಲ್ಲಿ ಕಾಮತರ ೨೦ ಲೇಖನಗಳು ಹಿಂದೆಂದಿಗಿಂತಲೂ ಪ್ರಸ್ತುತವಾಗಿವೆ. ಈಗಾಗಲೇ ಇತಿಹಾಸಕ್ಕೆ ಸೇರಿ ಹೋಗಿರುವ ಕಲಾ ಪ್ರಕಾರ, ಜನಜೀವನಗಳಿಂದಾಗಿ ಮುಂಬರುವ ಪೀಳಿಗೆಯ ಆಸಕ್ತರಿಗೂ ಅವನ್ನು